ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಪ್ರಕಟಣೆ - ೭

ಸಾಹಿತ್ಯಮಾಲೆ - ೬

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

# ಅನಾಥಪಕ್ಷಿ

# ಅನಾಥಪಕ್ಷಿ

ತೆಲುಗು ಮೂಲ

ವಿಶ್ವನಾಥ ಸತ್ಯನಾರಾಯಣ

ಅನುವಾದ

ವೀರಭದ್ರ

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು

**ANATHA PAKSHI by Vishwanatha Satyanarayana ;** Kannada Translation by **Veerabhadra** ; Editor-in-Chief : **Dr. Pradhan Gurudatta**; Published by **Registrar, Karnataka Anuvada Sahitya Academy**; Kannada Bhavana, J.C. Road, Bangalore - 560 002, 2007; Pp - xii + 198, Price : Rs. 85/-

ಈ ಆವೃತ್ತಿಯ ಹಕ್ಕುಗಳು : ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಮುದ್ರಣ : ೨೦೦೭
ಪುಟಗಳು : xii+ ೧೯೮
ಬೆಲೆ : ರೂ. ೮೫/–
ಪ್ರತಿಗಳು : ೩೨೦೦

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು
ದೂ : ೨೨೧೦೭೭೭೦

ಸಹಕಾರ :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಬೆಂಗಳೂರು

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಶ್ರೀಪಾದ್**

**ISBN : 978-81-904579-6-5**

ಮುದ್ರಕರು :
**ಮೆ॥ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್‌ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

**ಹೆಚ್.ಡಿ. ಕುಮಾರಸ್ವಾಮಿ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ದಿನಾಂಕ : ೧೫.೦೩.೨೦೦೭

# ಮುನ್ನುಡಿ

ಕರ್ನಾಟಕ ರಾಜ್ಯ ಪುನರ್ ಘಟನೆಯ ಐವತ್ತು ವರ್ಷಗಳ ನೆನಪಿಗಾಗಿ ಕರ್ನಾಟಕ ಸರ್ಕಾರ 'ಸುವರ್ಣ ಕರ್ನಾಟಕ'ದ ಸಂಭ್ರಮಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಿರ್ಧರಿಸಿತು. ಈ ಹೊತ್ತಿಗೆ ಸರಿಯಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯ ಮೂಲಕ ಕರ್ನಾಟಕ ಸರ್ಕಾರ ಇನ್ನೊಂದು ಹೊಸ ಹೆಜ್ಜೆಯನ್ನೂ ಇಟ್ಟಿತ್ತು. ಭಾರತೀಯ ಭಾಷೆಗಳ ನಡುವಣ ಪಾರಸ್ಪರಿಕ ಅರಿವನ್ನು ಹೆಚ್ಚಿಸುವುದರ ಜೊತೆಗೆ, ನಮ್ಮ ನಾಡು–ನುಡಿಗಳ ಹಿರಿಮೆಯನ್ನು ಇತರ ಭಾಷಾ–ಬಾಂಧವರಿಗೆ ಹಾಗೂ ಜಾಗತಿಕ ನೆಲೆಯಲ್ಲಿ ಪರಿಚಯಿಸಿ ಕೊಡುವುದು ಮತ್ತು ಜಗತ್ತಿನ ಇತರ ಭಾಷೆಗಳ ಶ್ರೇಷ್ಠ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುವುದು ಇದರ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಅನುವಾದ ಸಾಹಿತ್ಯ ಈ ಹೊತ್ತು ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲದಿರುವುದರಿಂದ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ಕ್ಷೇತ್ರಗಳನ್ನು ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದೂ ಇದರಲ್ಲಿ ಸೇರಿದೆ. ಇದರಿಂದ ಐತಿಹಾಸಿಕ ಹಿರಿಮೆಯ ಜೊತೆಗೆ, ಕನ್ನಡದ ಸಾಮರ್ಥ್ಯ, ವೈಶಿಷ್ಟ್ಯ, ಹಿರಿಮೆಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಕಂಗೊಳಿಸುವಂತಾಗುತ್ತದೆ.

'ಸುವರ್ಣ ಕರ್ನಾಟಕ' ಸಂಭ್ರಮದ ಸಂದರ್ಭದಲ್ಲಿ, ಈ ಹಿಂದೆ ನಾಡು ನುಡಿಗೆ ಸೇವೆಯನ್ನು ಸಲ್ಲಿಸಿರುವ ಹಿರಿಯ ಚೇತನಗಳು ಸ್ವಪ್ರೇರಣೆಯಿಂದ ಕನ್ನಡಕ್ಕೆ ತಂದುಕೊಟ್ಟಿರುವ ಶ್ರೇಷ್ಠ ಕೃತಿಗಳಲ್ಲಿ ಆಯ್ದ ಗ್ರಂಥಗಳನ್ನು 'ಸುವರ್ಣ ಅನುವಾದ ಮಾಲೆಯ' ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹಾಗೂ ವಿಶ್ವದಲ್ಲಿನ ಶ್ರೇಷ್ಠ ಕೃತಿಗಳನ್ನೂ ಪರಿಚಯಿಸಿ ಕೊಡಲಾಗುತ್ತಿದೆ. ಇವು ಕನ್ನಡಿಗರಿಗೆ ಪ್ರಿಯವಾಗುತ್ತವೆಂದು ನಂಬಿದ್ದೇನೆ. ಈ ಕೃತಿಗಳನ್ನು ಸಹೃದಯತೆಯಿಂದ ಸ್ವಾಗತಿಸುವ ಮೂಲಕ, ಅನುವಾದ ಸಾಹಿತ್ಯ ಅಕಾಡೆಮಿಯ ಇಂಥ ಕೆಲಸಗಳಿಗೆ ಕನ್ನಡ ನಾಡಿನ ಜನತೆ ಪ್ರೋತ್ಸಾಹ ನೀಡುತ್ತದೆ ಎಂದು ಭಾವಿಸಿದ್ದೇನೆ.

**(ಹೆಚ್.ಡಿ. ಕುಮಾರಸ್ವಾಮಿ)**

ಕರ್ನಾಟಕ ಸರ್ಕಾರ

**ಹೆಚ್.ಎಸ್. ಮಹದೇವ ಪ್ರಸಾದ್**
ಕನ್ನಡ ಮತ್ತು ಸಂಸ್ಕೃತಿ ಸಚಿವರು

ನಂ. ೩೩೦, ೩ನೇ ಮಹಡಿ,
ವಿಧಾನಸೌಧ
ಬೆಂಗಳೂರು – ೫೬೦ ೦೦೧

ದಿನಾಂಕ : ೦೮–೦೨–೨೦೦೭

## ಶುಭಾಕಾಂಕ್ಷೆ

ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದಿರುವ ಅನುವಾದ ಸಾಹಿತ್ಯ ಅಕಾಡೆಮಿ, ರಾಷ್ಟ್ರದಲ್ಲಿಯೇ ಇಂಥ ಆದ್ಯ ಸಂಸ್ಥೆಯಾಗಿದ್ದು ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡು, ಕನ್ನಡ ಸಾಹಿತ್ಯ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಕ್ಕೆ ಅರ್ಥಪೂರ್ಣವಾದ ಕೊಡುಗೆಗಳನ್ನು ನೀಡುವ ಹಂಬಲವನ್ನು ಹೊಂದಿದೆ. ಇದರ ಸ್ಥಾಪನೆಯ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಸುವರ್ಣ ಸಂಭ್ರಮದ ಉತ್ಸವವೂ ಕೂಡಿಬಂದಿರುವ ಕಾರಣದಿಂದಾಗಿ, ಅನುವಾದ ಸಾಹಿತ್ಯ ಅಕಾಡೆಮಿ ಗಾಂಧೀಜಿ, ನೆಹರೂ ಇಂಥ ಶ್ರೇಷ್ಠ ವ್ಯಕ್ತಿಗಳನ್ನು ಕುರಿತ ಮಹತ್ವದ ಕೃತಿಗಳನ್ನೇ ಅಲ್ಲದೆ, ವಿವಿಧ ಭಾಷೆಗಳಲ್ಲಿನ ಅತ್ಯುತ್ತಮ ಸಾಹಿತ್ಯ ಗ್ರಂಥಗಳನ್ನು ಮತ್ತು ಇತರ ಕೃತಿಗಳನ್ನು ಕನ್ನಡಿಗರಿಗೆ ಒದಗಿಸುವ ಕಾರ್ಯವನ್ನು ಹಮ್ಮಿಕೊಂಡಿರುವುದು ನನಗೆ ತುಂಬಾ ಸಂತೋಷವನ್ನು ಉಂಟುಮಾಡಿದೆ. ಇದರಲ್ಲಿ ದೇಶ–ವಿದೇಶಗಳ ಕಥೆ–ಕಾದಂಬರಿಗಳೂ, ನಾಟಕಗಳೂ, ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳ ಕೃತಿಗಳೂ ಸೇರಿದ್ದು, ಕನ್ನಡಿಗರಿಗೆ ವೈವಿಧ್ಯಮಯ ಅನುಭವವನ್ನು ತಂದುಕೊಡುವಲ್ಲಿ ನೆರವಾಗುತ್ತವೆ ಎಂದು ನಂಬಿದ್ದೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಮುಂದಿನ ದಿನಗಳಲ್ಲಿ ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ನನಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿದೆ. ಇದೇ ರೀತಿ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾರತೀಯ ಭಾಷೆಗಳಿಗೆ ಹಾಗೂ ವಿದೇಶೀ ಭಾಷೆಗಳಿಗೆ ಅನುವಾದಿಸಿ ಕೊಡುವ ಕಾರ್ಯಗಳೂ ಸಾಕಷ್ಟು ಪ್ರಮಾಣದಲ್ಲಿ ನಡೆದು ಕನ್ನಡಿಗರ ಸಾಧನೆ ಜಗತ್ತಿಗೆ ಚೆನ್ನಾಗಿ ತಿಳಿದು ಬರುವಂಥ ಸಾರ್ಥಕ ಪ್ರಯತ್ನಗಳು ನಡೆಯಲಿ ಎಂದು ಹಾರೈಸುತ್ತೇನೆ.

ಈಗ ಹೊರಬರುತ್ತಿರುವ ಕೃತಿಗಳಿಗೆ ಕನ್ನಡ ವಾಚಕಲೋಕದ ಸಹೃದಯಪೂರ್ಣ ಸ್ವಾಗತ ದೊರೆಯುತ್ತದೆಂದು ನಂಬಿದ್ದೇನೆ. ಇಂಥ ಸ್ವಾಗತ ಮತ್ತು ಪ್ರೋತ್ಸಾಹಗಳು ಅಕಾಡೆಮಿಯ ಮುಂದಿನ ಕಾರ್ಯಚಟುವಟಿಕೆಗಳಿಗೆ ಪ್ರೇರಣೆಯನ್ನೊದಗಿಸಲಿ ಎಂದು ಹಾರೈಸುತ್ತೇನೆ.

**(ಹೆಚ್.ಎಸ್. ಮಹದೇವ ಪ್ರಸಾದ್)**

ಕರ್ನಾಟಕ ಸರ್ಕಾರ

ಕಛೇರಿ : ೨೨೨೫೫೪೮೨
೨೨೦೩೪೦೦೭

ಐ.ಎಂ. ವಿಠ್ಠಲಮೂರ್ತಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ
ಹಾಗೂ ಪ್ರವಾಸೋದ್ಯಮ ಇಲಾಖೆ


ಕರ್ನಾಟಕ ಸರ್ಕಾರದ ಸಚಿವಾಲಯ
ಕೊ.ನಂ.೫, ನೆಲಮಹಡಿ, ವಿಕಾಸಸೌಧ,
ಬೆಂಗಳೂರು–೫೬೦ ೦೦೧

## ಹೊಸ ಹೆಜ್ಜೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿಸಲಾಗುತ್ತಿರುವ 'ಶ್ರೀ ಕುವೆಂಪು ಭಾಷಾಭಾರತೀ' ಎಂಬ ರಾಷ್ಟ್ರೀಯ ಸಂಸ್ಥೆಯ ಒಂದು ಸ್ವತಂತ್ರ ವಿಭಾಗವಾಗಿ ಕರ್ನಾಟಕ ಸರ್ಕಾರ 'ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ'ಯನ್ನು ಈಗಾಗಲೇ (೨೦೦೬ರಲ್ಲಿ) ಅಸ್ತಿತ್ವಕ್ಕೆ ತಂದಿದೆ. ಇಂಥ ಉಪಕ್ರಮವನ್ನು ಮೆರೆಯುವಲ್ಲಿ ಕರ್ನಾಟಕವೇ ಮೊದಲನೆಯ ರಾಜ್ಯವಾಗಿದೆ ಎಂಬುದು ಹೆಮ್ಮೆಯ ಸಂಗತಿಯೇ ಆಗಿದೆ. ಈ ಅನುವಾದ ಅಕಾಡೆಮಿ, ಪ್ರಾರಂಭಗೊಂಡ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಪುನರ್–ರಚನೆಯ ಸುವರ್ಣ ಮಹೋತ್ಸವದ ಸಂದರ್ಭ ಕೂಡಿ ಬಂದದ್ದು ಒಂದು ವಿಶಿಷ್ಟ ಯೋಗಾಯೋಗವೇ ಆಗಿದೆ. ಈ ಸುವರ್ಣ ಮಹೋತ್ಸವದ ಸಂದರ್ಭದ ಆಚರಣೆಯ ಅಂಗವಾಗಿ ಅನುವಾದ ಅಕಾಡೆಮಿ ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡಿದೆ. ಈ ಮೊದಲೇ ವಿಭಿನ್ನ ಭಾಷೆಗಳಲ್ಲಿನ ಹಲವು ಶ್ರೇಷ್ಠ ಲೇಖಕರ ಹಲವಾರು ಶ್ರೇಷ್ಠ ಕೃತಿಗಳು ನಮ್ಮ ಸಾಹಿತಿಗಳ ಗಮನವನ್ನು ಸೆಳೆದಿದ್ದು, ಅವುಗಳ ಯಥಾವತ್ತಾದ, ಸಂಗ್ರಹರೂಪವಾದ, ಅಳವಡಿಕೆಯಂತಿರುವ ಅನುವಾದಗಳನ್ನು ಅವರು ನಮಗೆ ಕೊಡಮಾಡಿದ್ದಾರೆ. 'ಒಬ್ಬನೇ ಉಂಡ ಊಟ ಹಬ್ಬವಲ್ಲ; ಒಬ್ಬನೇ ಸವಿದ ರುಚಿ ರುಚಿಯಲ್ಲ' ಎಂಬ ಗಾದೆ ಮಾತನ್ನು ಸಾರ್ಥಕಗೊಳಿಸುವಂತೆ, ಅವರು ಈ ಕೆಲಸವನ್ನು ಮಾಡಿದ್ದಾರೆ. ಇಂಥ ಪ್ರಸಿದ್ಧ, ಜನಪ್ರಿಯ, ಅಲಭ್ಯ ಕೃತಿಗಳನ್ನು 'ಸುವರ್ಣ ಕರ್ನಾಟಕ' ಯೋಜನೆಯ ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹೊಸ ಶ್ರೇಷ್ಠ ಗ್ರಂಥಗಳನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ಹೀಗೆ, ದೇಶ–ವಿದೇಶಗಳ ಉತ್ಕೃಷ್ಟ ಕೃತಿಗಳಿಂದ ಕನ್ನಡ ಭಾಷೆ–ಸಾಹಿತ್ಯಗಳನ್ನು ಸಮೃದ್ಧಗೊಳಿಸುವ ದಿಕ್ಕಿನಲ್ಲಿ ಅನುವಾದ ಅಕಾಡೆಮಿ ಮಹತ್ತರವಾದ ಪಾತ್ರವನ್ನು ನಿರ್ವಹಿಸಬೇಕಾಗಿದೆ.

ಅನುವಾದ ಇಂದು ತನ್ನ ಆಯಾಮವನ್ನು ಬಹುವಾಗಿ ವಿಸ್ತರಿಸಿಕೊಂಡು ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಗಳನ್ನು ತನ್ನ ತೆಕ್ಕೆಗೆ ಒಳಪಡಿಸಿಕೊಂಡಿದೆ. ಹೀಗಾಗಿ. ಈ ದಿಕ್ಕಿನಲ್ಲಿಯೂ ಕನ್ನಡವನ್ನು ಸಮೃದ್ಧಗೊಳಿಸುವತ್ತ ನಮ್ಮ ಗಮನ ಹರಿಯಬೇಕಾಗಿದೆ. ಅಕಾಡೆಮಿ ಈ ದಿಕ್ಕಿನಲ್ಲಿಯೂ

ಕಾರ್ಯೋನ್ಮುಖವಾಗಿರುವುದು ಸಂತೋಷದ ವಿಚಾರವೇ ಆಗಿದೆ. ಈ ಬಗೆಯ ಬಹುಮುಖೀ ಕಾರ್ಯಚಟುವಟಿಕೆಗಳಿಂದ ಭಾರತೀಯ ಭಾಷೆಗಳಲ್ಲಿ ಈಗಾಗಲೇ ತನ್ನದೇ ಆದ ಹಿರಿಮೆಯನ್ನು ಮೆರೆದಿರುವ, ಮೆರೆಯುತ್ತಿರುವ ಕನ್ನಡ ಭಾಷೆ–ಸಾಹಿತ್ಯ ಮತ್ತಷ್ಟು ಕಂಗೊಳಿಸುವಂತಾಗುತ್ತದೆ. ಅನೇಕ ಮಹತ್ವದ ಗ್ರಂಥಗಳು ದೊರೆಯುವಂತಾಗುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷವನ್ನು ಉಂಟುಮಾಡುತ್ತಿದೆ. ಇಂಥ ಕಾರ್ಯಗಳಿಗೆ ಸರ್ಕಾರದ ಬೆಂಬಲದ ಜೊತೆಗೆ, ಜನತೆಯ ಹೃತ್ಪೂರ್ವಕ ಪ್ರೋತ್ಸಾಹವೂ ಅಗತ್ಯವಾಗುತ್ತದೆ. ವಿವೇಚನಾಶೀಲರೂ, ಸಹೃದಯರೂ ಆದ ಕನ್ನಡಿಗರು ಇಂಥ ಪ್ರೋತ್ಸಾಹ ನೀಡುವಲ್ಲಿ ಮುಂದಾಗುತ್ತಾರೆ ಎಂದು ನಂಬಿದ್ದೇನೆ. ಅಕಾಡೆಮಿಯ ಕಾರ್ಯಚಟುವಟಿಕೆಗಳು ಇತೋಪ್ಯತಿಶಯವಾಗಿ ಮುಂದುವರಿಯಲಿ ; ಕರ್ನಾಟಕದ ಜನತೆಗೆ ಹೊಸ ಅನುಭವಗಳ ಲೋಕವನ್ನು ತೆರೆದು ತೋರುವ ಕಾರ್ಯಗಳು ಅವಿಚ್ಛಿನ್ನವಾಗಿ ನಡೆಯಲಿ ಎಂದು ಈ ಸಂದರ್ಭದಲ್ಲಿ ಹಾರೈಸಬಯಸುತ್ತೇನೆ.



**(ಐ.ಎಂ. ವಿಠ್ಠಲಮೂರ್ತಿ)**

# ಪ್ರಸ್ತಾವನೆ

ಭಾರತದಲ್ಲಿ ಯಾವುದೇ ರಾಜ್ಯವೊಂದರಲ್ಲಿ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಮೊಟ್ಟಮೊದಲ ಬಾರಿಗೆ ಸ್ಥಾಪಿಸಿದ ಹಿರಿಮೆ ಕರ್ನಾಟಕ ಸರ್ಕಾರದ್ದಾಗಿದೆ. ಜನವರಿ ೬, ೨೦೦೬ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಧರ್ಮಸಿಂಗ್ ಅವರು ವಿಧ್ಯುಕ್ತವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಉದ್ಘಾಟಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳೂ ಹಾಗೂ ಭಾಷಾಂತರವನ್ನು ವಿಶ್ವವಿದ್ಯಾಲಯದ ಹಂತದಲ್ಲಿ ಶಿಕ್ಷಣ ವಿಷಯವಾಗಿ ಅಳವಡಿಸಿದ ಭಾಷಾಂತರ ಕ್ಷೇತ್ರದ ಭೀಷ್ಮಾಚಾರ್ಯರೂ ಆದ ಪ್ರೊ|ದೇ. ಜವರೇಗೌಡ ಅವರೂ, ಹಿರಿಯ ವಿದ್ವಾಂಸರಾದ ಪ್ರೊ| ಎಲ್.ಎಸ್. ಶೇಷಗಿರಿರಾವ್ ಅವರೂ ಅಕಾಡೆಮಿಯ ಕಾರ್ಯಚಟುವಟಿಕೆಗಳ ದಿಕ್ಕು–ದೆಸೆಗಳನ್ನು ನಿರ್ದೇಶಿಸಿದರು.

ನಮ್ಮ ನಾಡಿನಲ್ಲಿರುವ ವಿಚಿತ್ರ ಪರಿಸ್ಥಿತಿ ಎಂದರೆ ವಿದೇಶೀಯ ಭಾಷಾಸಾಹಿತ್ಯಗಳ ಅಷ್ಟಿಷ್ಟು ಪರಿಚಯವಾದರೂ ಇರುವ ನಮಗೆ ನಮ್ಮ ನಾಡಿನ ನೆರೆಹೊರೆಯ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯದ, ಶ್ರೇಷ್ಠ ಸಾಹಿತಿಗಳ ಪರಿಚಯ ಬಹುಮಂದಿಗೆ ಇಲ್ಲವೇ ಇಲ್ಲದಂತಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಇತರ ಕೆಲವು ರಾಷ್ಟ್ರೀಯ ಸಂಸ್ಥೆಗಳು ತಮ್ಮ ಕಾರ್ಯಚಟುವಟಿಕೆಗಳಲ್ಲಿ ಅನುವಾದಗಳನ್ನು ಹೊರತರುವ ಕೆಲವು ಯೋಜನೆಗಳನ್ನು ಕೈಗೊಳ್ಳುತ್ತಿರುವುದುಂಟು. ಆದರೆ, ಈ ಕಾರ್ಯಗಳು ಅಪೇಕ್ಷಣೀಯ ಪ್ರಮಾಣದಲ್ಲಿ ಹಾಗೂ ಪರಸ್ಪರ ಪೂರಕವಾಗುವ ರೀತಿಯಲ್ಲಿ ಆಗುತ್ತಿಲ್ಲ. ಮೇಲಾಗಿ ಈ ಕಾರ್ಯಕ್ರಮಗಳು ಬಹುಮಟ್ಟಿಗೆ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರವೇ ಸೀಮಿತವಾಗಿವೆ. ಹೀಗಾಗಿ, ಪರಸ್ಪರ ಕೊಳು–ಕೊಡೆಯ ಕಾರ್ಯಕ್ರಮಗಳು ಹೆಚ್ಚು–ಹೆಚ್ಚಾಗಿ ಹಾಗೂ ವೈವಿಧ್ಯಮಯವಾಗಿ ಆಗಬೇಕಾದ ಅಗತ್ಯವೂ ಇದೆ.

ಭಾರತೀಯ ಭಾಷಾಸಾಹಿತ್ಯಗಳು ಸಮೃದ್ಧವಾಗಿ ಬೆಳೆಯಬೇಕಾದರೆ, ಎರಡು ಮುಖಗಳಲ್ಲಿ ಕಾರ್ಯಗಳು ಆಗಬೇಕಾಗಿದೆ: (೧) ರಾಷ್ಟ್ರೀಯ ಮಟ್ಟದಲ್ಲಿ; (೨) ಅಂತಾರಾಷ್ಟ್ರೀಯ ಮಟ್ಟದಲ್ಲಿ. ರಾಷ್ಟ್ರೀಯ ಸ್ತರದಲ್ಲಿ ನಮ್ಮ ಭಾಷಾ ಸಾಹಿತ್ಯವನ್ನು ಬಿಂಬಿಸುವ ಕೆಲಸ ಎಷ್ಟು ಮುಖ್ಯವೋ, ಇತರ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಅಷ್ಟೇ ಮುಖ್ಯ. ರಾಷ್ಟ್ರೀಯ ಅಂತಾರಾಷ್ಟ್ರೀಯ ಮಹತ್ವದ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಹಾಗೂ ಕನ್ನಡ ಸಾಹಿತ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಿಂಬಿಸುವುದೂ ಅಷ್ಟೇ ಮುಖ್ಯ. ಈ ದೃಷ್ಟಿಯಿಂದ ನೊಬೆಲ್ ಪ್ರಶಸ್ತಿ, ಬೂಕರ್ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಮೊದಲಾದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿರುವ ಲೇಖಕರ ಮಹತ್ವದ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುವ ಯೋಜನೆಗಳನ್ನು ಅನುವಾದ ಸಾಹಿತ್ಯ ಅಕಾಡೆಮಿ

ತಮ್ಮ ಮುಂದಿರಿಸಿಕೊಂಡಿದೆ. ಅಷ್ಟೇ ಅಲ್ಲದೆ, ವಿಜ್ಞಾನ–ತಂತ್ರಜ್ಞಾನ, ವೈದ್ಯಕೀಯ, ಮಾನವಿಕ ಮೊದಲಾದ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡದಲ್ಲಿ ತರುವ ಯೋಜನೆಗಳೂ ಅಕಾಡೆಮಿಯ ಮುಂದಿವೆ. ಇತರ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ, ಅಂತೆಯೇ, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ವಿಭಾಗ, ಕೇಂದ್ರೀಯ ಹಿಂದೀ ನಿರ್ದೇಶನಾಲಯ, ವೈಜ್ಞಾನಿಕ ಮತ್ತು ತಾಂತ್ರಿಕ ಪಾರಿಭಾಷಿಕ ಪದಾವಲಿ ಆಯೋಗ ಇತ್ಯಾದಿ ಸಂಸ್ಥೆಗಳೊಂದಿಗೆ ಸಂಪರ್ಕಿಸಿ ಈ ದಿಕ್ಕಿನಲ್ಲಿ ಸಹಕಾರವನ್ನು ಪಡೆದುಕೊಳ್ಳುವ ಆಲೋಚನೆಯನ್ನೂ ಅಕಾಡೆಮಿ ಇರಿಸಿಕೊಂಡಿದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಕಾರ್ಯಶಿಬಿರಗಳನ್ನು ಆಯೋಜಿಸಿ, ಅನುವಾದದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವ, ಸಮರ್ಥ ಭಾಷಾಂತರಕಾರರನ್ನು ಗುರುತಿಸುವ ಪ್ರಯತ್ನಗಳನ್ನು ಅಕಾಡೆಮಿ ಮಾಡುತ್ತಿದೆ. ಈಗಾಗಲೇ ಕನ್ನಡ–ತೆಲುಗು, ಕನ್ನಡ–ಹಿಂದೀ, ಯಂತ್ರಾನುವಾದ, ವಿಜ್ಞಾನ ಸಾಹಿತ್ಯ ಅನುವಾದ ಇವುಗಳಿಗೆ ಸಂಬಂಧಿಸಿದಂತೆ ರಾಜ್ಯದ ಬೇರೆ–ಬೇರೆ ಕೇಂದ್ರಗಳಲ್ಲಿ ಹಾಗೂ ಹೊರ ರಾಜ್ಯಗಳಲ್ಲಿ ಕಾರ್ಯಶಿಬಿರಗಳನ್ನೂ, ವಿಚಾರಗೋಷ್ಠಿಗಳನ್ನೂ ನಡೆಸಲಾಗಿದೆ. ಉರ್ದೂ ಮತ್ತು ತಮಿಳು ಭಾಷೆಗಳ ಕಾರ್ಯಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

ಭಾಷಾಂತರ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಗಮನಕ್ಕೆ ತೆಗೆದುಕೊಂಡು ಆ ದಿಕ್ಕಿನಲ್ಲಿ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವ ಆಲೋಚನೆಯೂ ಇದೆ. ಇತ್ತೀಚೆಗೆ ಸ್ಯಾಮ್ ಪಿಟ್ರೋಡಾ ಅವರು 'ರಾಷ್ಟ್ರೀಯ ಅನುವಾದ ಮಿಷನ್' (National Translation Mission) ಅನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಯೋಜನೆಯೊಂದನ್ನು ಸಲ್ಲಿಸಿದ್ದು, ಕೇಂದ್ರ ಸರ್ಕಾರ ಆ ಯೋಜನೆಯನ್ನು ಒಪ್ಪಿಕೊಂಡಿರುವ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಯೋಜನೆ ಕಾರ್ಯರೂಪಕ್ಕೆ ಬಂದಲ್ಲಿ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳು ಜನಸಾಮಾನ್ಯರವರೆಗೂ ಯಶಸ್ವಿಯಾಗಿ ಮುಟ್ಟುವುದು ಸಾಧ್ಯವಾಗುತ್ತದೆ ಹಾಗೂ ರಾಷ್ಟ್ರದ ಪ್ರಗತಿಯೂ ಅಭೂತಪೂರ್ವ ರೀತಿಯಲ್ಲಿ ಆಗುತ್ತದೆ ಎಂದು ಆಶಿಸಲಾಗಿದೆ. ಈ ಯೋಜನೆ ಉದ್ಯೋಗಸೃಷ್ಟಿಯ ಮಹತ್ತರ ಯೋಜನೆಯೂ ಆಗಲಿದೆ. ಇಂಥ ಸಂದರ್ಭದಲ್ಲಿ ಅಗತ್ಯವಾಗುವ ಲಕ್ಷಾಂತರ ಮಂದಿ ಅನುವಾದಕರ ಪಡೆಯನ್ನು ಸಿದ್ಧಪಡಿಸುವುದು ಇಂಥ ಸಂಸ್ಥೆಗಳ ಮತ್ತು ವಿಶ್ವವಿದ್ಯಾನಿಲಯಗಳ ಹೊಣೆಯೇ ಆಗಿರುತ್ತದೆ. ರಾಜ್ಯದ ಹಾಗೂ ಹೊರಗಿನ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಭಾಷಾಂತರ ವಿಭಾಗಗಳು ಸ್ಥಾಪಿತವಾಗಿದ್ದು, ಅವು ಕಾರ್ಯಶೀಲವಾಗುತ್ತಿರುವುದು ಶುಭಸೂಚಕವಾಗಿದೆ.

ಇದುವರೆಗೆ ವಿದ್ವಾಂಸರ ವೈಯಕ್ತಿಕ ಪಾಂಡಿತ್ಯ, ವ್ಯುತ್ಪತ್ತಿ ಮತ್ತು ಒಲವನ್ನು ಆಧರಿಸಿ ಅನುವಾದ ಕಾರ್ಯಗಳು ನಡೆಯುತ್ತಾ ಬಂದಿವೆ. ಆದರೆ ಇಂಥ ಕಾರ್ಯಗಳು ವ್ಯವಸ್ಥಿತವಾಗಿ ಹಾಗೂ ಉತ್ತಮ ಗುಣಮಟ್ಟದೊಂದಿಗೆ ನಡೆಯಬೇಕಾದ್ದು ಅಪೇಕ್ಷಣೀಯವಾಗಿರುವ ಹಿನ್ನೆಲೆಯಲ್ಲಿ, ಭಾಷಾಂತರ ಸಂಬಂಧವಾದ ಶಿಕ್ಷಣ–ಕ್ರಮಗಳನ್ನು ರೂಪಿಸುವುದು ಹಾಗೂ ದ್ವಿಭಾಷಾ ಮತ್ತು ಬಹುಭಾಷಾ ನಿಘಂಟುಗಳನ್ನು, ನುಡಿಗಟ್ಟುಗಳ ಮತ್ತು ಗಾದೆಗಳ ಕೋಶಗಳು, ಸಮಾನಾರ್ಥಕ ಮತ್ತು ಭಿನ್ನಾರ್ಥಕ ಕೋಶಗಳು ಹಾಗೂ ವಾಕ್ಯರಚನಾ ಕೈಪಿಡಿಗಳನ್ನು ಹೊರತರುವುದು –

ಇವೇ ಮೊದಲಾದ ಕಾರ್ಯಗಳು ಆದ್ಯತೆಯ ಮೇರೆಗೆ ನಡೆಯಬೇಕಾಗಿವೆ. ಅನುವಾದ ಅಕಾಡೆಮಿ ಸ್ಥಾಪಿತವಾದ ಅತ್ಯಲ್ಪ ಅವಧಿಯಲ್ಲಿಯೇ ಇತರ ಸಂಘ–ಸಂಸ್ಥೆಗಳ ಗಮನವನ್ನು ಸೆಳೆದಿದ್ದು, ಅಂತರರಾಷ್ಟ್ರೀಯ ಕನಕದಾಸ ಮಿಷನ್‌ನಂತಹ ಸಂಸ್ಥೆ ಅನುವಾದ ಅಕಾಡೆಮಿಯೊಂದಿಗೆ ಸಹಕರಿಸಲು ಮುಂದೆ ಬಂದಿರುವುದು ಗಮನಾರ್ಹವಾದ ವಿಚಾರವೇ ಆಗಿದೆ. ಅಂತೆಯೇ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಇಂಜಿನಿಯರಿಂಗ್ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಕನ್ನಡದಲ್ಲಿ ಹೊರತರುವ ಬಗ್ಗೆಯೂ ಆಲೋಚನೆ ಮಾಡಲಾಗುತ್ತಿದೆ. ಹೀಗೆ ಅನುವಾದ ಅಕಾಡೆಮಿ ಅನೇಕ ದಿಕ್ಕುಗಳಲ್ಲಿ ಮುಂದುವರಿದು ಸಾಧನೆ ಮಾಡಬೇಕಾಗಿದೆ.

ಕರ್ನಾಟಕ ಸರ್ಕಾರ ಅನುವಾದ ಅಕಾಡೆಮಿಯ ವಿಷಯದಲ್ಲಿ ವಿಶೇಷವಾದ ಆಸಕ್ತಿಯನ್ನು ತೋರಿ ಅಗತ್ಯವಾದ ನೆರವನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ವಿಶೇಷ ಸಂತೋಷದ ವಿಚಾರವೇ ಆಗಿದೆ. ಅದರಲ್ಲಿಯೂ ಈ ಬಾರಿ ಸುವರ್ಣ ಕರ್ನಾಟಕ ಕಾರ್ಯಕ್ರಮಗಳ ಅಂಗವಾಗಿ ವಿಶೇಷ ಧನಸಹಾಯ ನೀಡಿರುವುದರಿಂದ ಪ್ರಸಿದ್ಧ/ಅಲಭ್ಯ ಅನುವಾದಗಳ ಮರುಪ್ರಕಟಣೆ ಕಾರ್ಯವನ್ನು ಕೈಗೊಳ್ಳುವುದು, ಮತ್ತಿತರ ಮಹತ್ವದ ಪ್ರಕಟಣೆಗಳನ್ನು ಕೈಗೊಳ್ಳುವುದು ಸಾಧ್ಯವಾಗಿದೆ. ಈ ದಿಕ್ಕಿನಲ್ಲಿ ನಾಡಿನ ವಿದ್ವಾಂಸರು ವಿಶೇಷವಾದ ಸಹಾಯ–ಸಹಕಾರಗಳನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ಗೌರವದ, ಸಂತೋಷದ ಹಾಗೂ ಹೆಮ್ಮೆಯ ವಿಚಾರವೇ ಆಗಿದೆ. ಈ ಸಂದರ್ಭದಲ್ಲಿ ವಿಲ್ ಡ್ಯೂರಾಂಟ್ ಅವರ ಜಗತ್–ಪ್ರಸಿದ್ಧವಾಗಿರುವ ಹಾಗೂ ಭಾರತದ ಬೇರಾವ ಭಾಷೆಯಲ್ಲೂ ಇನ್ನೂ ಬೆಳಕು ಕಾಣದಿರುವ 'ದಿ ಸ್ಟೋರಿ ಆಫ್ ಸಿವಿಲಿಜೇಷನ್' ಸಂಪುಟಗಳ ಕನ್ನಡ ಅನುವಾದವನ್ನು ಹೊರತರುವಲ್ಲಿ ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಅವರೂ, ಬಹಳ ಹಿಂದೆಯೇ ಇಂಗ್ಲಿಷ್‌ನಲ್ಲಿ ೧೦ ಸಂಪುಟಗಳಲ್ಲಿ ಪ್ರಕಟಣೆಗೊಂಡಿರುವ ಸಂಸ್ಕೃತ ಸಾಹಿತ್ಯದ ವಿಶಿಷ್ಟ ಕೃತಿಯಾದ ಸೋಮದೇವನ 'ಕಥಾಸರಿತ್ಸಾಗರ'ದ ಕನ್ನಡ ಅನುವಾದವನ್ನು ನೇರವಾಗಿ ಸಂಸ್ಕೃತದಿಂದ ಅನುವಾದಿಸಿ ಹೊರತರುವಲ್ಲಿ ಡಾ॥ಪಿ.ಎಸ್.ರಾಮಾನುಜಮ್ ಅವರೂ ನೆರವು ನೀಡುತ್ತಿರುವುದು ವಿಶೇಷವಾಗಿ ಸ್ಮರಣೀಯವಾಗಿದೆ. ಕನ್ನಡ ಸಹೃದಯ ಲೋಕ ಅಕಾಡೆಮಿಯ ಈ ಕಾರ್ಯಚಟುವಟಿಕೆಗಳ ವಿಷಯದಲ್ಲಿ ತನ್ನ ಸಹೃದಯತೆಯನ್ನು ಮೆರೆಯುತ್ತದೆ ಎಂದು ಆಶಿಸಿದ್ದೇನೆ.

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಗೆ ಕಾರಣರಾದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರಿಗೂ, ಅಕಾಡೆಮಿಯ ಕಾರ್ಯಚಟುವಟಿಕೆಗಳ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ತೋರಿ, ಎಲ್ಲ ನೆರವನ್ನು ನೀಡುತ್ತಿರುವ ಇಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಅವರಿಗೂ, ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀ ಮಹದೇವ ಪ್ರಸಾದ್ ಅವರಿಗೂ ಅಕಾಡೆಮಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ. ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಬಗೆಯ ಸಹಾಯ–ಸಹಕಾರ–ಮಾರ್ಗದರ್ಶನ ನೀಡುತ್ತಾ ಬಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ

ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀಮತಿ ಉಷಾ ಗಣೇಶ್ ಅವರಿಗೂ, ಚೈತನ್ಯಶೀಲರೂ, ದೂರಗಾಮಿ ದೃಷ್ಟಿಯನ್ನುಳ್ಳವರೂ ಆದ ಇಂದಿನ ಕಾರ್ಯದರ್ಶಿಗಳಾದ ಶ್ರೀ ಐ.ಎಂ.ವಿಠ್ಠಲಮೂರ್ತಿ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿಂದಿನ ಆಯುಕ್ತರುಗಳಾಗಿದ್ದ ಶ್ರೀ ಕೆಆರ್.ನಿರಂಜನ್ ಮತ್ತು ಶ್ರೀ ಎಸ್.ಎಫ್. ಯೋಗಪ್ಪನವರ್ ಅವರಿಗೂ, ನಿರ್ದೇಶಕರಾಗಿರುವ ಶ್ರೀ ಕಾ.ತ. ಚಿಕ್ಕಣ್ಣ ಅವರಿಗೂ ಅಕಾಡೆಮಿ ವಿಶೇಷ ವಂದನೆಗಳನ್ನು ಸೂಚಿಸಬಯಸುತ್ತದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಸಹಾಯ ಸಹಕಾರ ಮತ್ತು ಮಾರ್ಗದರ್ಶನ ಮಾಡುತ್ತಿರುವ ಅಕಾಡೆಮಿಯ ಎಲ್ಲ ಗೌರವಾನ್ವಿತ ಸದಸ್ಯರಿಗೂ ನಮ್ಮ ವಂದನೆಗಳು ಸಲ್ಲುತ್ತವೆ

ಶ್ರೀ ವಿಶ್ವನಾಥ ಸತ್ಯನಾರಾಯಣ ಅವರು ಆಧುನಿಕ ತೆಲುಗು ಸಾಹಿತ್ಯದ ಮಹಾನ್ ಲೇಖಕರಲ್ಲಿ ಒಬ್ಬರು. ತಮ್ಮ 'ಶ್ರೀ ರಾಮಾಯಣ ಕಲ್ಪವೃಕ್ಷಮು' ಮಹಾಕಾವ್ಯದಿಂದ ಚಿರಸ್ಮರಣೀಯರಾಗಿರುವ ಅವರು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೂ ಆಗಿದ್ದಾರೆ. ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಕೆಲಸಮಾಡಿರುವ ಅವರು ತೆಲುಗಿನ ಸುಪ್ರಸಿದ್ಧ ಕಾದಂಬರಿಕಾರರೂ ಆಗಿದ್ದಾರೆ. ಅವರ ಜನಪ್ರಿಯ ಕಾದಂಬರಿಗಳಲ್ಲಿ ಒಂದಾದ 'ಮಾ ಬಾಬು' ವನ್ನು ಶ್ರೀ ವೀರಭದ್ರ ಅವರು ಹೃದ್ಯವಾಗಿ ಕನ್ನಡಕ್ಕೆ ತಂದಿದ್ದಾರೆ. ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ವತಿಯಿಂದ ಗೌರವ ಪುರಸ್ಕೃತರೂ ಆಗಿದ್ದಾರೆ. ಈ ಜನಪ್ರಿಯ ಕಾದಂಬರಿಯನ್ನು ಸುವರ್ಣ ಕರ್ನಾಟಕ ಮಾಲೆಯಲ್ಲಿ ಅಳವಡಿಸಿಕೊಳ್ಳಲು ನೆರವಾಗಿರುವ ಎಲ್ಲ ಮಹನೀಯರಿಗೂ ಅನುವಾದ ಅಕಾಡೆಮಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅನುವಾದ ಅಕಾಡೆಮಿಯ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಅಕಾಡೆಮಿಯ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ತಮ್ಮ ಅನೇಕ ಕಾರ್ಯಗಳ ನಡುವೆಯೂ ಬಿಡುವು ಮಾಡಿಕೊಂಡು ತಾಳ್ಮೆಯಿಂದ ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ಡಾ. ಎಸ್.ಆರ್. ಲೀಲಾ ಅವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ. ಮಯೂರ್ ಪ್ರಿಂಟ್ ಆ್ಯಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ

ಭಾಗ ಒಂದು

# ಪೂರ್ವಾರ್ಧ

# ಅನಾಥಪಕ್ಷಿ

## ೧

ನಾನು ಹುಟ್ಟುವುದಕ್ಕಿಂತ ಮುಂಚೆಯೇ ನನ್ನ ತಂದೆ ತಾಯಿಗಳು ಸತ್ತುಹೋಗಿದ್ದರು. ಹುಟ್ಟುವುದಕ್ಕಿಂತ ಮುಂಚೆಯೇ ತಾಯಿ ಕೂಡಾ ಹೇಗೆ ಸಾಯುತ್ತಾಳೆಂದು ಕೆಲವರಿಗೆ ಅನುಮಾನ ತಟ್ಟಬಹುದು. ಆಕೆಯನ್ನು ಮದರಾಸು ಜನರಲ್ ಆಸ್ಪತ್ರೆಯಲ್ಲಿ ಸೇರಿಸಿದ್ದರಂತೆ. ಆಗ ಆಕೆ ತುಂಬು ಗರ್ಭಿಣಿ. ಒಂಬತ್ತು ತಿಂಗಳೂ ತುಂಬಿದ್ದುವು. ಹೆರಿಗೆಗೆಂದೇ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರಂತೆ.

ಆಕೆಗೆ ಜ್ವರ ಬಂದು ಸನ್ನಿ ಹುಟ್ಟಿ ಸತ್ತುಹೋದಳು. ಸತ್ತುಹೋದ ನಿಮಿಷಕ್ಕೆಲ್ಲಾ ಆಪರೇಷನ್ ನಡೆಸಿ ನನ್ನನ್ನು ಹೊರಗೆ ತೆಗೆದರಂತೆ. ಇನ್ನಾವ ನಿಮಿಷಕ್ಕಾದರೂ ನಾನು ಸಾಯಬೇಕಾಗಿತ್ತು. ಆದರೂ ನಾನಿಷ್ಟು ಕಷ್ಟಗಳನ್ನನುಭವಿಸಬೇಕೆಂದು ಭಗವಂತ ನನ್ನ ಹಣೆಯಲ್ಲಿ ಬರೆದಿರುವಾಗ ಹಾಗೇಕೆ ನಡೆಯುತ್ತದೆ?

ನನ್ನ ತಂದೆತಾಯಿಗಳಿಗೇನೂ ಆಸ್ತಿಯಿರಲಿಲ್ಲ. ಅಷ್ಟರವರೆಗೆ ಚೆನ್ನಾಗಿಯೇ ಬಾಳಿ ಬದುಕಿದವರಾದರೂ, ನನ್ನ ತಂದೆಯವರು ಇಸ್ಪೀಟು ಆಟವಾಡಿ ಮನೆಯನ್ನು ಮಸೀದಿ ಮಾಡಿಬಿಟ್ಟರಂತೆ. ಅನಂತರ ನನ್ನ ತಾಯಿ ನಾನಾ ಕಷ್ಟಗಳಿಗೊಳಗಾದಳಂತೆ. ಆಕೆ ತನ್ನ ನಾಲಗೆಯ ಒಳ್ಳೆಯತನದಿಂದಾಗಿ ಐದಾರು ತಿಂಗಳುಗಳನ್ನು ಹೇಗೋ ನೂಕಿಕೊಂಡು ಬಂದಳಂತೆ. ಅಷ್ಟರಲ್ಲಿ ಆಕೆಗೆ ತಿಂಗಳು ತುಂಬಿ 'ದಿನ'ದಲ್ಲಿ ಬಿತ್ತು. ನೋಡುವ ದಿಕ್ಕಿಲ್ಲವೆಂದು ಆಕೆಯೇ ಹೋಗಿ, ಅವರಿವರ ಸಹಾಯದಿಂದ ಜನರಲ್ ಆಸ್ಪತ್ರೆಯಲ್ಲಿ ಸೇರಿಕೊಂಡಳಂತೆ.

ಇದು ಹದಿನೆಂಟು ವರ್ಷಗಳ ಹಿಂದಿನ ಮಾತು.

* * * *

ಮೂಲತಃ ನಮ್ಮದು ಗುಂಟೂರು ಜಿಲ್ಲೆ. ನನ್ನ ತಂದೆ ಆಸ್ತಿಯನ್ನೆಲ್ಲಾ ಹಾಳು ಮಾಡಿದ ಬಳಿಕ, ದಳ್ಳಾಳಿಯಾಗಿದ್ದು ಮದರಾಸು ಸೇರಿಕೊಂಡ. ಅಲ್ಲಿ ಅದೂ ಇದೂ ಸಂಪಾದಿಸುತ್ತಿದ್ದನಂತೆ. ಆಗಲೇ ಇಸ್ಪೀಟಿನ ಗೀಳು ಹಿಡಿದು ಕೈಯಲ್ಲಿರುವುದನ್ನೆಲ್ಲಾ ಖರ್ಚು ಮಾಡಿ ಮನೆಗೆ ಖಾಲಿ ಕೈಯಲ್ಲಿ ಹಿಂತಿರುಗುತ್ತಿದ್ದನಂತೆ.

ಸರಿ. ಆ ವಿಷಯವೆಲ್ಲಾ ಈಗೇಕೆ? ನನ್ನನ್ನು ಯಾರಿಗೆ ಒಪ್ಪಿಸಬೇಕೋ ಆಸ್ಪತ್ರೆಯವರಿಗೆ ತಿಳಿಯದಾಯಿತಂತೆ. ನಮ್ಮ ಬಂಧುಗಳ ಪೈಕಿ ಯಾರಿದ್ದಾರೆಂದು ಪತ್ತೆ ಹಚ್ಚಲಾಗಿ ನನ್ನ

ಸೋದರಮಾವನಿದ್ದಾನೆಂಬುದಾಗಿ ತಿಳಿದುಬಂದು ಆತನಿಗೆ ಟೆಲಿಗ್ರಾಂ ಕೊಟ್ಟರು. ಆತ ನನ್ನನ್ನು ಪುನಃ ಗುಂಟೂರು ಜಿಲ್ಲೆಗೆ ಸೇರಿಸಿದ.

ನಾನು ನನ್ನ ತಾಯಿಯ ಗರ್ಭದಲ್ಲಿ ರೂಪುಗೊಂಡ ನಕ್ಷತ್ರದ ರೀತ್ಯಾ ನನ್ನ ತಂದೆಯವರು ಸತ್ತರು. ಹುಟ್ಟುವ ನಕ್ಷತ್ರದ ಮೇರೆಗೆ ನನ್ನ ತಾಯಿ ಸತ್ತಳು. ಹುಟ್ಟಿದ ನಕ್ಷತ್ರದ ಪ್ರಕಾರ ನನ್ನ ಸೋದರಮಾವನೂ ಸತ್ತ! ಎಳ್ಳುಕಾಳಿನಷ್ಟು ಪ್ರಾಣ ಉಳಿದುಕೊಳ್ಳಬೇಕಾದ ದಿನಗಳಿದ್ದುವೆಂದೇ, ನನ್ನ ಸೋದರಮಾವ ಸತ್ತಮೇಲೆ ಆತನ 'ದಿವಸ' ಕರ್ಮಗಳಿಗೆ ಬಂದ ನನ್ನ ಚಿಕ್ಕಮ್ಮ ನನ್ನನ್ನು ಕರೆದೊಯ್ದಳು.

ನಾನು ನನ್ನ ಚಿಕ್ಕಮ್ಮನ ಮನೆಯಲ್ಲಿ ಬೆಳೆದೆ. ನನ್ನ ಚಿಕ್ಕಮ್ಮನಿಗೆ ಇಬ್ಬರು ಭಾವಂದಿರು, ಇಬ್ಬರು ಮೈದುನರು. ಅವರದು ಸಮಷ್ಟಿ ಕುಟುಂಬ. ಆಗ್ಗೆ ಆಕೆಯ ಅತ್ತೆ ಮಾವಂದಿರು ಗಟ್ಟಿಮುಟ್ಟಾಗಿದ್ದರು. ಭಾವನವರಿಗೂ, ಮೈದುನರಿಗೂ ಮಕ್ಕಳಿದ್ದರು. ನನ್ನ ಚಿಕ್ಕಮ್ಮನಿಗೇ ಇರಲಿಲ್ಲ. "ಈ ಶನೇಶ್ವರನನ್ನು ಮನೆಗೆ ಹೊಗಿಸಿದರು. ಇವನು ತಂದೆಯನ್ನೂ ತಾಯಿಯನ್ನೂ ಸೋದರಮಾವನನ್ನೂ ನುಂಗಿ ನೀರು ಕುಡಿದೋನು. ಈ ಬಾಲಗ್ರಹ ನಮ್ಮಲ್ಲೇಕೆ?"–ಎಂದು ನನ್ನ ಚಿಕ್ಕಮ್ಮನ ಅತ್ತೆ ಗೊಣಗುವುದಕ್ಕೆ ಪ್ರಾರಂಭಿಸಿದಳಂತೆ. ಆ ಮನೆಯಲ್ಲಿ ನನ್ನ ಚಿಕ್ಕಮ್ಮನಿಗೆ ಯಾವ ಹಿರಿತನವೂ ಇರಲಿಲ್ಲ. ಆಕೆಯ ಗಂಡನನ್ನು ಕೇಳುವವರು ಮೊದಲೇ ಇರಲಿಲ್ಲ. ಆತ ಕೊಂಚ ಪೂರ್ವಕಾಲದ ಮನುಷ್ಯ.

'ನೀರು ಹಾಕಿದ ಗಿಡ ನಿರ್ಮೂಲವಾಯಿತು, ತಿಪ್ಪೆ ಮೇಲಿನ ಗಿಡ ನಿಗುರಿ ನಿಂತಿತು' ಎನ್ನುತ್ತಾರೆ. ಆ ಮನೆಯಲ್ಲಿರುವ ಮಕ್ಕಳಿಗೆಲ್ಲಾ ಕೆಮ್ಮೋ, ನೆಗಡಿಯೋ, ದೃಷ್ಟಿ ತಗುಲುವುದೋ ಯಾವಾಗಲೂ ಇದ್ದೇ ಇರುತ್ತಿದ್ದುವಂತೆ. ನಾನು ಮಾತ್ರ ಗುಂಡುಕಲ್ಲಿನಂತೆ ಬದುಕುತ್ತಾ ಬಂದೆನಂತೆ. ನನಗೆ ಹಾಲುಣ್ಣಿಸುವರು ದಿಕ್ಕಿಲ್ಲ. ದಿನವೂ ನೀರೆರೆಯುವ ದಾತರಿಲ್ಲ. ವಾರಕ್ಕೊಮ್ಮೆ ಯಾವಾಗಲಾದರೂ ನನ್ನ ಚಿಕ್ಕಮ್ಮ ಯಾರಿಗೂ ಕಾಣಿಸದ ಹಾಗೆ ಒಂದಿಷ್ಟು ನೀರು ಕಾಯಿಸಿ ತಲೆಗೆ ಹುಯ್ಯುತ್ತಿದ್ದಳಂತೆ. ನನಗೆ ಕೈಯೆಣ್ಣೆ ಇಲ್ಲವಲ್ಲಾ ಎಂದು ನನ್ನ ಚಿಕ್ಕಮ್ಮ ಎಂದೂ ಅನ್ನುತ್ತಿರಲಿಲ್ಲ. ಹಾಗೇನಾದರೂ ಬಾಯಿ ಬಿಟ್ಟು ನುಡಿದರೆ ತೀರಿತು–ಇನ್ನಿಲ್ಲದ ಸಿಡಿಮಿಡಿ ಮಾತುಗಳು ಎಲ್ಲ ಕಡೆಯಿಂದಲೂ ಸಿಡಿಯುತ್ತಿದ್ದುವು. ನನಗೆ ಹಾಲಿರಲಿಲ್ಲ. ಜೇಡರ ರಾಮಕ್ಕ (ಆ ಊರಿನಲ್ಲಿ ಅವಳನ್ನು 'ರಾಮಿ' ಎನ್ನುತ್ತಾರೆ) ನನಗೆ ಬೆಳಗ್ಗೆ ಮತ್ತು ಸಾಯಂಕಾಲಕ್ಕೆ ಹಾಲೂಡಿಸಿ ಹೋಗುತ್ತಿದ್ದಳಂತೆ. ಅವಳ ಹೊಟ್ಟೆಯ ಪುಣ್ಯಕ್ಕೆ ತನ್ನ ಮಕ್ಕಳಿಗೂ ನನಗೂ ಸಾಕಾಗುವಷ್ಟು ಹಾಲನ್ನು ಭಗವಂತ ಅವಳಿಗೆ ಕರುಣಿಸಿದ್ದ. ಹಾಗೆಯೇ ನಾನು, ಬೇವಿನ ಕಾಯಿಯ ಹಾಗೆ ನನಗೆ ಎರಡು ವರ್ಷಗಳಾಗುವ ತನಕ ಬದುಕಿದೆ. ಎಂದೂ ನನಗೆ ರೋಗರುಜಿನ ಬಂದಿರಲಿಲ್ಲ....ನನಗೆ ಹದಿನೆಂಟು ವರ್ಷ ವಯಸ್ಸಾಯಿತು. 'ಛೀ ಚೀ....' ಎಂದು ಸೀನಿದ್ದು ನಾನರಿಯೆ.

ಕೆಲವರಿಗೆ ತಮ್ಮ ಚಿಕ್ಕಂದಿನ ವಿಷಯಗಳಾವುವೂ ಜ್ಞಾಪಕವಿರುವುದಿಲ್ಲ. ನನಗೆ ಎಲ್ಲಾ ಜ್ಞಾಪಕದಲ್ಲಿವೆ. ನನಗೆ ಚಿಕ್ಕಂದಿನಲ್ಲಿಯೇ ಅಪಾರವಾದ ಹಸಿವಿತ್ತು. ದರಿದ್ರನಿಗೆ ಹೊಟ್ಟೆ

ಹೆಚ್ಚೆಂಬುದಾಗಿ ಗಾದೆ ಮಾತೇ ಇದೆಯಲ್ಲಾ! ನನ್ನ ಚಿಕ್ಕಮ್ಮನ ಅತ್ತೆ–ಬೆಳಗಾಗುತ್ತಲೇ ಮಕ್ಕಳಿಗೆಲ್ಲಾ ತಂಗಳನ್ನಿಡುತ್ತಿದ್ದಳು. ಆದರೆ ನನ್ನನ್ನು ಕರೆಯುತ್ತಲೇ ಇರಲಿಲ್ಲ. ನಾನೇ ಹೋಗಿ ತಟ್ಟೆಯನ್ನಿಟ್ಟುಕೊಳ್ಳುತ್ತಿದ್ದೆ. ನನ್ನ ಚಿಕ್ಕಮ್ಮನ ಭಾವನವರ ಮಗನೊಬ್ಬನಿದ್ದ. ಈಗಲೂ ಇದ್ದಾನೆ. ಅವನಿಗೆ–ನಾನು ಯಾವ ತಟ್ಟೆ ಇಟ್ಟುಕೊಂಡರೆ ಆ ತಟ್ಟೆಯೇ ಬೇಕು; ಯಾವ ಚೆಂಬು ಇಟ್ಟುಕೊಂಡರೆ ಆ ಚೆಂಬೇ ಬೇಕು. ಈ ತಗಾದೆಯಿಂದಾಗಿ ಒಮ್ಮೊಮ್ಮೆ ನಾನು ಕುಂಬಳದೆಲೆಯಲ್ಲಿಯೂ, ಸೋರೇ ಎಲೆಯಲ್ಲಿಯೂ ಅನ್ನವನ್ನುಣ್ಣಬೇಕಾಗುತ್ತಿತ್ತು.

ನನಗೆ ಐದು ವರ್ಷದ ವಯಸ್ಸಿನಿಂದಲೂ ಚೆನ್ನಾಗಿ ಜ್ಞಾಪಕವಿದೆ. ನನ್ನ ಅಸಲು ಹೆಸರು ಯಾರಿಗೂ ತಿಳಿಯದು. ನನಗೂ ತಿಳಿಯದು. ಮನೆಯಲ್ಲಿ ತಲೆಗೊಬ್ಬರು ಒಂದೊಂದು ಹೆಸರಿನಿಂದ ನನ್ನನ್ನು ಕರೆಯುತ್ತಿದ್ದರು. ನನ್ನ ಕಿವಿಗಳು ದೊಡ್ಡವು. ಮನೆಯಲ್ಲಿ ಎಲ್ಲರೂ 'ಆನೆ ಕಿವಿಯೋನೇ'– ಎನ್ನುತ್ತಿದ್ದರು.

ಕಿವಿಗಳು ದೊಡ್ಡದಾಗಿದ್ದರೆ ಅದೃಷ್ಟವೆನ್ನುತ್ತಾರೆ. ನನ್ನ ವಿಷಯದಲ್ಲಿ ಮಾತ್ರ ಅಲ್ಲವೆಂದು ಕಾಣುತ್ತದೆ. ಗಾಂಧೀಜಿಯವರಿಗೆ ಕಿವಿಗಳು ದೊಡ್ಡವು. ಬುದ್ಧನ ಯಾವ ವಿಗ್ರಹವನ್ನು ನೋಡಿದರೂ ಕಿವಿಗಳು ದೊಡ್ಡದಾಗಿಯೇ ಇರುತ್ತವೆ. ಒಮ್ಮೊಮ್ಮೆ ನನ್ನ ಕಿವಿಗಳ ಮೇಲೆ ನನಗೆ ತುಂಬ ಕೋಪ ಬರುತ್ತಿತ್ತು. ಮನೆಯಲ್ಲಿ ಪ್ರತಿಯೊಬ್ಬರೂ ನನ್ನನ್ನು 'ಮೊರದ ಕಿವಿಯೋನೇ–ಆನೆ ಕಿವಿಯೋನೇ'– ಎಂದು ಕರೆಯುತ್ತಿದ್ದುದರಿಂದ ಒಮ್ಮೆ ನನಗೆ ಅಳು ಬಂದು ಚಾಕಿನಿಂದ ನನ್ನ ಕಿವಿಯನ್ನು ಕುಯ್ದುಕೊಂಡೆ. ನನ್ನ ಚಿಕ್ಕಮ್ಮ, ಮನೆಮಂದಿಯ ಮೇಲಿನ ಕೋಪದಿಂದ ನನಗೆ ನಾಲ್ಕು ಏಟು ಕೊಟ್ಟು, ಕಿವಿಗಿಷ್ಟು ಸುಣ್ಣ ಹಚ್ಚಿದಳು. ಆಕೆಯ ಭಾವನ ಮಗ ಆ ಕಿವಿಯನ್ನು ಹಿಡಿದೆಳೆಯುತ್ತ ಹಿಂಡುತ್ತ ಆ ಗಾಯ ಎರಡು ತಿಂಗಳು ದಿನಮಾನ ಮಾಯಲು ಬಿಡಲಿಲ್ಲ. ಚಿಕ್ಕಮ್ಮನ ಅತ್ತೆ "ಏನೋ ಭಡವಾ! ನಿನಗೂ ರೋಷವೇನೋ!" ಎಂದು ನಡುನೆತ್ತಿಯ ಮೇಲೆಯೇ 'ಟೊಂಗ್' ಎಂದು ಕುಕ್ಕುತ್ತಿದ್ದಳು.

ಚಿಕ್ಕಂದಿನಲ್ಲಿ ನನ್ನ ತಲೆಗೆ ಎಣ್ಣೆ ಹಚ್ಚುವವರು ದಿಕ್ಕಿರಲಿಲ್ಲ. ಆದ್ದರಿಂದ ನನ್ನ ತಲೆಗೂದಲು ಅಸ್ತವ್ಯಸ್ತವಾಗಿರುತ್ತಿತ್ತು. ಪುಟ್ಟದೊಂದು ಗೋಸಿ ಕಟ್ಟಿಕೊಂಡು ತಿರುಗುತ್ತಿದ್ದೆ. ಮೈಯೆಲ್ಲಾ ಧೂಳು ತಿಂದು ಕೊಳಕು ಕೊಳಕಾಗಿರುತ್ತಿತ್ತು. ಊರಿನಲ್ಲಿ ಹಲವರು ನನ್ನನ್ನು 'ಮಣ್ಣ ಹೆಂಟೆ' ಎಂದು ಕರೆಯುತ್ತಿದ್ದರು. ಮತ್ತೆ ಕೆಲವರು 'ಕರಡೀ ತಲೆ'–ಎಂದು ಕರೆಯುತ್ತಿದ್ದರು. ಒಂದು ದಿನ ನಾನೇ ತಲೆ ಬೋಳಿಸಿಕೊಳ್ಳೋಣವೆಂದುಕೊಂಡೆ. ಆ ಊರಿನಲ್ಲಿ ನಾಯಿಂದನಿರಲಿಲ್ಲ. ಅವನು ಅಲ್ಲಿಗೆ ಎರಡು ಮೈಲುಗಳ ದೂರದಿಂದ ಬರುತ್ತಿದ್ದ. ಆ ಊರಿನಲ್ಲಿನ ದೊಡ್ಡ ದೊಡ್ಡ ವ್ಯಕ್ತಿಗಳು ಕರೆದರೇನೇ 'ಚಕ್ಕರ್' ಕೊಡುತ್ತಿದ್ದ. ಅಂದಮೇಲೆ ನನಗೆ ತಾನೇ ಹೇಗೆ 'ತಲೆ' ಮಾಡುತ್ತಾನೆ?

ಇದು ಹೀಗಿರಬೇಕಾದರೆ–ತಲೆಯಲ್ಲೆಲ್ಲಾ ಹೇನುಗಳು ಬಿದ್ದುವು; ಮೈಯೆಲ್ಲಾ ಕೆರೆತ, ನವೆ; ಹೊತ್ತು ಮುಳುಗುತ್ತಲೇ ಯಾವುದಾದರೂ ದನಗಳ ಕೊಟ್ಟಿಗೆಯಲ್ಲಿ ಮಲಗಿ ನಿದ್ರೆ ಹೋಗಿಬಿಡುತ್ತಿದ್ದೆ. ಒಂದು ವೇಳೆ ಅಪ್ಪಿ ತಪ್ಪಿ ಯಾವುದಾದರೂ ಮಂಚದ ಮೇಲೆ ಮಲಗಿ

ನಿದ್ರಿಸುವುದು ಸಂಭವಿಸಿದರೆ, ಮನೆಯಲ್ಲಿ ಯಾರೆಂದರವರು ಹೊಡೆಯುತ್ತಲೂ, ಬೈಯುತ್ತಲೂ ಕೆಳಗೆಳೆದು ಹಾಕುತ್ತಿದ್ದರು ನನ್ನನ್ನು.

ಮನೆಯಲ್ಲಿನ ಕೆಲಸವನ್ನೆಲ್ಲಾ ಮಾಡಿ, ನನ್ನ ಚಿಕ್ಕಮ್ಮ ರಾತ್ರಿ ಯಾವಾಗಲೋ ಎರಡನೇ ಜಾವದಲ್ಲಿ–ನಾನೆಲ್ಲಿ ಮಲಗಿರುವೆನೋ ಹುಡುಕಿ, ಒಂದಿಷ್ಟು ಅನ್ನ ತಿನ್ನಿಸಿ, ಜಗುಲಿಯ ಚಾಪೆಯ ಮೇಲೆ ನನ್ನನ್ನು ಮಲಗಿಸಿ ತನ್ನ ಹಳೆಯ ಸೀರೆಯೊಂದನ್ನು ಹೊದಿಸುತ್ತಿದ್ದಳು.

ನನಗೆ ಏಳು ವರ್ಷ ತುಂಬಿತು. ಆಗಿನ ನನ್ನ ಸ್ಥಿತಿ ಇದು. ಅವರ ಮನೆಯಲ್ಲಿದ್ದ ಕೆಲಸದ ಆಳನ್ನು ತೆಗೆದುಹಾಕಿಬಿಟ್ಟರು. ದನಗಳನ್ನು ನಾನೇ ಕಟ್ಟಿಹಾಕಬೇಕು. ಬೆಳಗಿನ ಜಾವದಲ್ಲಿಯೇ ಎದ್ದು, ಅಂಗಳ ಹಿತ್ತಲುಗಳನ್ನು ಗುಡಿಸಬೇಕು. ಬೇವಿನ ಮರ ಹತ್ತಿ ಎಲ್ಲರಿಗೂ ಹಲ್ಲುಜ್ಜುವ ಸಲುವಾಗಿ ಬೇವಿನ ರೆಂಬೆಗಳನ್ನು ಮುರಿದು ಕೊಡಬೇಕು.

ಅವರ ಮನೆಯಂಗಳದಲ್ಲಿ ಒಂದೇ ಒಂದು ಬೇವಿನ ಮರವಿದೆ. ಅದಕ್ಕೆ ಸರಿಯಾದ ರೆಂಬೆಗಳಿಲ್ಲ. ಮರ ಹತ್ತಲು ಕೈಗೆಟಕುವಂತೆ ಕವಲುಗಳಿಲ್ಲ. ಯಾವಾಗ ಎಂದರೆ ಆವಾಗ ಮುರಿಯುತ್ತದೇನೋ ಎಂಬಂತಿರುವ ಒಂದು ಏಣಿ ಇದೆ. ಅದನ್ನು ಹತ್ತುತ್ತಿದ್ದರೆ ಯಾವಾಗಲೆಂದರೆ ಆವಾಗ ಬಿದ್ದು ಬಿಡುತ್ತೇನೇನೋ ಎಂಬ ಭಯ.

ನನ್ನ ಚಿಕ್ಕಮ್ಮನ ಭಾವನ ಮಗ ನನಗಿಂತಲೂ ಮೂರು ವರ್ಷ ದೊಡ್ಡವನು. ಅವನಿಗೆ ತುಟ್ಟತುದಿಯ ಕೊಂಬೆಯ ರೆಂಬೆಯಲ್ಲದೆ ನಡೆಯುವಂತಿಲ್ಲ. ನಾನು ಆ ಕೊಂಬೆಯವರೆಗೆ ಹೋಗಲು ಭಯಪಡುತ್ತಿದ್ದರೆ "ಸಾಯೊಲ್ಲ ಬಿಡೋ"–ಎನ್ನುತ್ತಿದ್ದ. "ಬಿದ್ದುಬಿಡುತ್ತೇನೇನೋ!"–ಎಂದು ನಾನೇ ಬಾಯಿಬಿಟ್ಟು ಆಡಿದರೆ–"ಪೀಡೆ ತೊಲಗುತ್ತೆ"–ಎನ್ನುತ್ತಿದ್ದ.

ತಲೆ ಬೋಳಿಸಿಕೊಳ್ಳಬೇಕೆಂದು ಎಷ್ಟು ಪ್ರಯತ್ನಿಸಿದರೂ ನನಗೆ ಎಂಟು ವರ್ಷಗಳಾಗುವ ತನಕ ಕಾಲ ಕೂಡಿ ಬರಲಿಲ್ಲ. ಹೊತ್ತೇರುವವರೆಗೆ ಮನೆಯಲ್ಲಿ ದುಡಿಯಬೇಕು. ಮೂರು ಮಾರು ಹೊತ್ತೇರಿತೆಂದ ಬಳಿಕ, ಅವರಿಗೆ ದಯೆ ಬಂದು ಸಿಡಿಮಿಡಿಗುಟ್ಟುತ್ತ ನಾಲ್ಕು ತುತ್ತು ಹಾಕಿದರೆ ಹಾಕಿದರು, ಇಲ್ಲದಿದ್ದರೆ ಇಲ್ಲ. ದನಗಳನ್ನು ಹೊಲದ ಬಯಲಿಗೆ ಹೊಡೆದುಕೊಂಡು ಹೋಗಬೇಕು.

ಮಾನವರಿಗೊಂದಿಷ್ಟು ದಯೆಯಿಲ್ಲದೇ ಹೋದರೂ, ಗಿಡಗಂಟೆಗಳಿಗೆ ನನ್ನ ಮೇಲೆ ತುಂಬ ದಯೆ. ಹೊಲಗಳಲ್ಲಿ 'ಸೀಮೆ ಹುಣಿಸೇಕಾಯಿ,' ಈಚಲಹಣ್ಣು, ಬೋರೆಹಣ್ಣು, ತಾಳೆಹಣ್ಣು ಮುಂತಾದವುಗಳನ್ನು ತಿಂದು ಕೆರೆಯಲ್ಲಿ ನೀರು ಕುಡಿಯುತ್ತಿದ್ದೆ.

* * * *

ಕ್ಷೌರ ಮಾಡಿಸಿಕೊಳ್ಳುವುದು ನನಗೆ ದಿನದಿನಕ್ಕೆ ಅತ್ಯಗತ್ಯವೆಂದೆನ್ನಿಸತೊಡಗಿತು. ನಾನು ಕೆರೆಯಲ್ಲಿ ನಿತ್ಯವೂ ಈಜುವುದರಿಂದ ನನ್ನ ತಲೆ ಜಟೆಗಟ್ಟಿತ್ತು. ತಿಂಗಳಿಗೊಮ್ಮೆಯಾದರೂ ನನ್ನ ಚಿಕ್ಕಮ್ಮ ಮೊದಮೊದಲು ತೈಲ ಸಂಸ್ಕಾರ ಮಾಡುತ್ತಿದ್ದಳು. ಈಗೀಗ ಅದು ಆಕೆಗೇನೇ ಸಾಧ್ಯವಾಗುತ್ತಿಲ್ಲ. ತಲೆಯಲ್ಲಿ ಹೇನಿನ ಸಂತಾನ ಹೆಚ್ಚಿಕೊಂಡು, ತಲೆ ಸಾಕಾಗದೆ ಮೈಮೇಲೂ

ಸಹ ವಲಸೆ ಬರಲಾರಂಭಿಸಿದ್ದುವು. ನಮ್ಮ ತಾತನ ಮೈಯಾಗಿದ್ದಲ್ಲಿ, ಆತನ ಚರ್ಮವೆಲ್ಲಾ ಸುಕ್ಕುಗೊಂಡಿತ್ತಾದ್ದರಿಂದ ವಲಸೆ ರಾಜ್ಯಗಳನ್ನು ನಿರ್ಮಿಸಿಕೊಂಡುಬಿಡುತ್ತಿದ್ದುವಾಗಲೀ, ನನ್ನ ಮೈಮೇಲೆ ಅವಕ್ಕೆ ಎಲ್ಲಿಯೂ ಒಂದಿಷ್ಟು ನೆಲೆ ನಿಲ್ಲಲು ತಾವಿಲ್ಲದಾಯಿತು. ಮೇಲಾಗಿ ಅವುಗಳನ್ನು ಕುಕ್ಕಿ ಕುಕ್ಕಿ ಸಾಯಿಸಿಬಿಡುತ್ತಿದ್ದೆ. ಆದರೆ ಈಗ ನನಗೆ ಒಮ್ಮೊಮ್ಮೆ–'ಅಯ್ಯೋ! ನನ್ನ ಹಾಗೇನೇ ಅವೂ ಸಹ ನಿರಾಶ್ರಯ ಜೀವಿಗಳಲ್ಲವೇ? ಅವುಗಳಂತೆಯೇ ಇದ್ದ ನಾನು ಅವನ್ನೇಕೆ ಕೊಂದೆನೋ?' ಎಂದೆನ್ನಿಸುತ್ತದೆ.

ನನ್ನ ಚಿಕ್ಕಮ್ಮನೊಂದಿಗೆ ನನ್ನ ತಲೆ ಬೋಳಿಸಿಬಿಡಲು ಕೇಳಬೇಕೆಂದು ದಿನವೂ ಅಂದುಕೊಳ್ಳುತ್ತಿದ್ದೆ. ಕೋಳಿ ಕೂಗುತ್ತಲೇ, ನನ್ನ ಚಿಕ್ಕಮ್ಮನ ಅತ್ತೆ ನನ್ನನ್ನು ಎಬ್ಬಿಸಿ, ಕಸ ಗುಡಿಸಲು ಮೊದಲಿಡು ಎನ್ನುತ್ತಿದ್ದಳು. ನನಗೆ ನಿದ್ರೆ ಸಾಲುತ್ತಿರಲಿಲ್ಲ. ಅವರ ಮನೆಯಲ್ಲಿ ಹುಡುಗರೆಲ್ಲಾ ಹೊತ್ತೇರಿ ಏಳುತ್ತಿದ್ದರು. ನಸುಕಿನಲ್ಲಿಯೇ ಯಾವ ಹುಡುಗನಾದರೂ ಏಳತೊಡಗಿದರೆ–'ಬೆಳೆಯೋ ಕಾಲ, ಏಳಬೇಡ್ರೋ'–ಎನ್ನುತ್ತಿದ್ದರು. ನಾನು ಬೆಳೆಯಬೇಕಾಗಿರಲಿಲ್ಲವೇನೋ! ಅವರೇ ಬೆಳೆಯಬೇಕಿತ್ತೇನೋ!

ಸಾಯಂಕಾಲ ದನಗಳನ್ನು ಮನೆಗೆ ಹೊಡೆದುಕೊಂಡು ಬರುತ್ತಲೇ ಮುಂದಿನ ಕೆಲಸ ಬುಡ್ಡಿಗಳಿಗೆ ಎಣ್ಣೆ ಹುಯ್ಯುವುದು, ಸಂಜೆಯ ಕಸ ಗುಡಿಸುವುದು, ಎಲ್ಲರಿಗೂ ಹಾಸಿಗೆಗಳನ್ನು ಹಾಸಿಡುವುದು–ಈ ಕೆಲಸಗಳನ್ನು ಮಾಡುವುದರಲ್ಲಿ ನನಗೆ ಪುರುಸೊತ್ತಿಲ್ಲದಂತಾಗಿಬಿಡುತ್ತಿತ್ತು. ಅಷ್ಟರಲ್ಲಿಯೇ ನನಗೆ ನಿದ್ರೆ ಬಂದುಬಿಡುತ್ತಿತ್ತು. ಮಲಗಿಕೊಂಡುಬಿಡುತ್ತಿದ್ದೆ. ಆದ್ದರಿಂದಲೇ ನನ್ನ ಚಿಕ್ಕಮ್ಮನೊಂದಿಗೆ ಹೇಳಿಕೊಳ್ಳಲಾಗುತ್ತಿರಲಿಲ್ಲ.

ಈ ತಲೆ 'ಕೆತ್ತಿಸಿ'ಕೊಳ್ಳುವುದು ನನಗೆ ತೀರ ಅತ್ಯವಸರವಾಗಿಬಿಟ್ಟಿತು. ಭಗವಂತ ನನಗೊಂದು ಮಾರ್ಗ ತೋರಿಸಿದ. ನಮ್ಮೂರಿನ ದನ ಜಂಗುಳಿಯೂ, ನಮ್ಮೂರಿಗೆ ಬರುವ ನಾಯಿಂದನ ಊರಿನ ದನ ಜಂಗುಳಿಯೂ–ಒಂದು ದಿನ ಆ ಎರಡು ಊರುಗಳ ಮಧ್ಯದ ಹೊಲೆ ಮೇರೆಯಲ್ಲಿ ಸಂಧಿಸಿದುವು. ಆ ದನ ಜಂಗುಳಿಯನ್ನು ಹೊಡೆದುಕೊಂಡು ಬಂದ ಹುಡುಗನೂ, ನಾನೂ ಆ ದಿನ ಭೇಟಿಯಾದೆವು. ಅವನನ್ನು ಅದೇಕೋ ನಾನು–"ನೀವು ಯಾವ ಜನವೋ?"–ಎಂದು ಕೇಳಿದೆ. "ನಾಯಿಂದರು" ಎಂದ. "ನಿನಗೆ ಕ್ಷೌರ ಮಾಡಲು ಬರುತ್ತಾ?" ಎಂದು ಕೇಳಿದೆ. ಬರುತ್ತೆ ಎಂದ. "ಹಾಗಾದರೆ ನನಗೆ ಕ್ಷೌರ ಮಾಡುತ್ತೀಯಾ?" ಎಂದೆ. "ನಮ್ಮಪ್ಪ ಹಸಿಬೆಯನ್ನು ನನಗೆ ಸಿಕ್ಕದಂತೆ ಬಚ್ಚಿಟ್ಟುಬಿಡ್ತಾನೆ. ನಾಳೆ ನಾನು ಹೇಗಾರಾ ಮಾಡಿ ಕತ್ತಿ ಲಪಟಾಯಿಸಿಕೊಂಡು ಬಂದ್ಬಿಡ್ತೀನಿ" ಎಂದ. ನನಗೆ ಬ್ರಹ್ಮಾನಂದವಾಯಿತು.

ಆ ದಿನ ಸಾಯಂಕಾಲ ನಾನು ಸಂಭ್ರಮದಿಂದಿರುವುದನ್ನು ಕಂಡು ಮನೆಯಲ್ಲಿ ಎಲ್ಲರೂ ಎಲ್ಲ ರೀತಿಯಿಂದಲೂ ಅಂದಾಡತೊಡಗಿದರು–

"ಲೋ ಭಡವಾ! ನಗುತ್ತೀಯೇಕೋ?"–ಎಂದೊಬ್ಬರು, "ಆನೆ ಕಿವಿಯೋನೇ! ಮುಖವೇಕೋ ಮೊರದಷ್ಟಾಗಿದೆಯಲ್ಲೋ!"–ಎಂದೊಬ್ಬರು, "ಈ ಮುಕ್ಕನಿಗೆ ನಾಳೆಯೇ ರಾಜ್ಯ ಬರೋ ಹಂಗಿದೆ!"–ಎಂದೊಬ್ಬರು, ಹೀಗೆ ಎಲ್ಲರೂ ವಿಧವಿಧವಾಗಿ ಆಡಿಕೊಂಡರು.

ಆ ಮರುದಿನ ಮಧ್ಯಾಹ್ನ ದನಗಳನ್ನೆಲ್ಲಾ ಗೋಮಾಳಕ್ಕೆ ಹೊಡೆದು, ಕ್ಷೌರ ಮಾಡಿಸಿಕೊಳ್ಳುವುದಕ್ಕಾಗಿ ಅನುವಾದೆ. ಆ ನಾಯಿಂದನ ಹುಡುಗನನ್ನು "ಕತ್ತಿ ತಂದಿದೀಯೇನೋ?"–ಎಂದು ಕೇಳಿದೆ. ಅವನೊಂದು ಕಥೆ ಹೇಳಿದ–

"ನಮ್ಮಪ್ಪ ಹಸಿಬೇನ ಈ ದಿನ ಗ್ವಾಡೆ ಮ್ಯಾಕ ಇಟ್ಟಿದ್ದ. ನಮ್ಮನೇಲಿರೋ ಡೋಲನ್ನು ಅಡ್ಡಲಾಗಿಟ್ಟು ಅದುರ ಮ್ಯಾಕೆ ಹತ್ತಿ ಹಸಿಬೇನ ಎತ್ಕೊಂಡೆ. ಅದರೊಳಗಿಂದ ಕತ್ತಿ ಲಪಟಾಯಿಸಿದೆ. ಮತ್ತೆ ಹಸಿಬೇನ ಮ್ಯಾಕೆ ಯಥಾರೀತಿ ಇಡೋವಾಗ ಡೋಲು ಹೊರಳಿ ಕೆಳಕ್ಕೆ ಬಿದ್ಬುಟ್ಟೆ. ನಮ್ಮಪ್ಪಯ್ಯ ಮನೇಲಿರ್ಲಿಲ್ಲಾಂತ್ಲೇ ಸರಿಹೋಯ್ತು. ನಮ್ಮಮ್ಮ ಬಂದು 'ಹಸಿಬೇ ಕೂಡ ನಿಂಗೇನೋ ಕೆಲಸಾ ಮರಿ?'–ಅಂತ ನಾಲ್ಕು ಬಾರಿಸಿದಳು. ಆಕೆಗೆ ಕತ್ತಿಗಳು ಎಷ್ಟಿವೆ ಎಂಬ ಲೆಕ್ಕ ಗೊತ್ತಿಲ್ಲಾಂತ್ಲೇ ಕತ್ತಿ ನನ್ನ ಕೈಗೆ ಸಿಕ್ತು!"–ಎಂದು ಕತ್ತಿಯನ್ನು ಹೊರತೆಗೆದು ತೋರಿಸಿದ. ತಲೆಗೆ ನೀರು ಚಿಮುಕಿಸಿಕೊಳ್ಳುವುದು ಅಗತ್ಯ ತಾನೇ! ಕೆರೆಗೆ ಹೋಗಿ ಸ್ನಾನ ಮಾಡಿ, ತೊಯ್ದ ತಲೆಯಿಂದಲೇ ಬಂದು ಅವನ ಮುಂದೆ ಕುಳಿತೆ.

ಅವನದುವರೆವಿಗೂ ಯಾರಿಗೂ ಕ್ಷೌರ ಮಾಡಿ ಬಲ್ಲವನಲ್ಲ. ಆ ಕತ್ತಿಯನ್ನು ಬಾಗಿಸಿ ತಲೆಯನ್ನು ಕೆತ್ತಬೇಕೋ, ಅಲಗನ್ನು ನೀಟಾಗಿಸಿ ಹಿಡಿದುಕೊಳ್ಳಬೇಕೋ, ಮತ್ತೆ ಹೇಗೆ ಹಿಡಿದುಕೊಳ್ಳಬೇಕೋ ಅವನಿಗೆ ತಿಳಿಯದು. ಕ್ಷೌರ ಮಾಡಲು ಮೊದಲಿಡುತ್ತಲೇ ತಲೆಯ ಮೇಲೆ ಎರಡು ದೊಡ್ಡ ಕಾಟು ಹಾಕಿದ. ಹತ್ತು ಹನ್ನೆರಡು ಅಲಗಿನ ಕಾಟುಗಳು ಬಿದ್ದುವಾಗಲೀ ಒಂದು ಬೆರಳಷ್ಟಾದರೂ ಕೂದಲನ್ನು ಬೋಳಿಸುವುದು ಅವನ ಕೈಲಾಗಲಿಲ್ಲ. ರಕ್ತ ಸುರಿಯುತ್ತಿತ್ತು. ಏನು ಮಾಡಲಿ? ಅವನು ಇನ್ನೂ ಕಾಟುಗಳನ್ನು ಹಾಕುವುದರಲ್ಲಿಯೇ ಇದ್ದ. ನಾನು–"ಬೇಡ ಬಿಡೋ, ಜಟೆ ಕಟ್ಟಿದ ಕೂದಲನ್ನು ಮಾತ್ರ ಕತ್ತರಿಸಿಬಿಡು"– ಎಂದೆ. ಅವುಗಳನ್ನು ಕತ್ತರಿಸಲು ಹೋಗಿ ಅವನು ತನ್ನ ಕೈಗೆ ಬಲವಾದ ಗಾಯವನ್ನು ಮಾಡಿಕೊಂಡುಬಿಟ್ಟ. ಕೊನೆಗೆ ನಾನು, 'ನಿನ್ನ ಕೈಲಾಗೊಲ್ಲ, ಹೋಗಲಿ ಬಿಡು–ನಾಳೆ ಕತ್ತರಿ ತಗೊಂಡು ಬಾ'–ಎಂದು ತಿಳಿಸಿ, ಕೆರೆಗೆ ಹೋಗಿ, ಗಾಯಗಳಿಗಿಷ್ಟು ಕೆಸರನ್ನು ಮೆತ್ತಿಕೊಂಡೆ. ಆದರೆ ನನ್ನ ಕೆನ್ನೆ, ನನ್ನ ಗಲ್ಲಗಳೆಲ್ಲಾ ರಕ್ತದ ಕಲೆಗಳಿಂದ ತುಂಬಿಬಿಟ್ಟಿದ್ದವು.

ಇನ್ನೂ ಹೊತ್ತಿರುವಾಗಲೇ ಮನೆಗೆ ಮರಳಿದರೆ ಯಾರಾದರೂ ನೋಡಿ ಬಿಡುತ್ತಾರೇನೋ ಎಂದು ಬಗೆದು, ಕತ್ತಲಾವರಿಸಿದ ಮೇಲೆ ದನಗಳನ್ನು ಮನೆಗೆ ಹೊಡೆದುಕೊಂಡು ಹೋದೆ. ನನ್ನ ಚಿಕ್ಕಮ್ಮನ ಭಾವನ ಮಗ ಚುಟುಕಿನಂತಿರುವ ಸೆಳೆಬೆತ್ತದಿಂದ "ಕತ್ತೆ! ಇಷ್ಟೊತ್ತಿನ್ ತನ್ಕಾ ಏನ್ಮಾಡ್ತಾ ಇದ್ಯೋ?"–ಎಂದು ನನ್ನ ತೊಡೆಯ ಮೇಲೆ ಖಂಡ ಬಯಲಿಗೆ ಬೀಳುವಂತೆ ಬಾರಿಸಿದ.

ಅವನ ಮೇಲೆ ನಾಲ್ಕು ವರ್ಷಗಳಿಂದಲೂ ನನ್ನಲ್ಲಿದ್ದ ಸೇಡು ಹಿಡಿಸಲಾರದಷ್ಟು ಕೋಪವಾಗಿ ಉಕ್ಕಿ ಬಂದುಬಿಟ್ಟಿತು. ನನಗಿಂತಲೂ ಅವನು ಮೂರು ವರ್ಷ ದೊಡ್ಡವನಾಗಿದ್ದಾಗ್ಯೂ, ನಾನೇನಾದರೂ ಮನಸ್ಸು ಮಾಡಿದರೆ ಅವನು ನನಗೆ ಈಡಲ್ಲ. ಅವನ ಕೈಯಲ್ಲಿನ ಬೆತ್ತವನ್ನು ಕಿತ್ತುಕೊಂಡು ಅವನನ್ನು ಕೆಳಕ್ಕೆ ಹಾಕಿ, ಎದೆಯ ಮೇಲೆ ಕುಕ್ಕರಿಸಿ,

ಛೀ಼್ ಛೀ಼್ ಎಂದು ಅವನ ಕಪಾಳಕ್ಕೆ ಬಾರಿಸಿದೆ. ಅಷ್ಟರಲ್ಲಿಯೇ ಅವರಮ್ಮ ಬಂದುಬಿಟ್ಟಳು. ನನ್ನನ್ನು ಮನೆಮಂದಿಯೆಲ್ಲಾ ಹಿಡಿದುಕೊಂಡು ಹಿಗ್ಗಾಮುಗ್ಗಾ, ಎಳೆದಾಡಿ ನುಗ್ಗುಮುಗ್ಗಾಗುವಂತೆ ಒದ್ದು, ಗುದ್ದಿ, ಹೊಡೆದು ಬಡೆದು, ಸತ್ತು ಸುಣ್ಣವಾಗುವಂತೆ ಮಾಡಿಬಿಟ್ಟರು. ಎಂದೂ ಬಾಯೆತ್ತದ ನನ್ನ ಚಿಕ್ಕಮ್ಮ ಅಂದು ಎಲ್ಲರೊಂದಿಗೆ ಕಾದಾಡಿದಳು. ಆಕೆಯ ಮಾವ ಆಕೆಯನ್ನು ಹೊಡೆಯ ಹೋದ. ಆ ದಿನ ರಾತ್ರಿ ಆಕೆಗೂ ಅನ್ನವಿಲ್ಲ, ನನಗೂ ಅನ್ನವಿಲ್ಲ. ಆಕೆಯ ರೋಗಿ–ಮೈದುನ ಯಾವ ಪುಣ್ಯವಿಶೇಷದಿಂದಲೋ ಏನೋ ಕಾಲು ಹಿಸುಕೆಂದು ನನ್ನನ್ನು ಎಬ್ಬಿಸಲಿಲ್ಲ. ಆಕೆಯ ಅತ್ತೆ ನಸುಕಿನಲ್ಲಿಯೇ ಕಸ ಗುಡಿಸುವ ಸಲುವಾಗಿ ನನ್ನನ್ನು ಎಚ್ಚರುಗೊಳಿಸಲಿಲ್ಲ. ಸೋತು ಸೊರಗಿ ಒರಗಿದ್ದ ನಾನೇ, ಒಂದು ಮಾರು ಹೊತ್ತೇರಿದ ಮೇಲೆ, ನಿದ್ರೆ ತಿಳಿದೆದ್ದು, ದನಗಳ ಕೊರಳ ಕಣ್ಣಿ ಬಿಚ್ಚಿ, ಗೋಮಾಳಕ್ಕೆ ಹೊಡೆದುಕೊಂಡು ಹೋದೆ.

ಹಸಿವಾಗುತ್ತಿದೆ. ಹೊಟ್ಟೆ ಗುಡುಗುಡಿಸುತ್ತಿದೆ. ಏನು ಮಾಡಬೇಕೋ ತಿಳಿಯದಾಯಿತು. ಅಷ್ಟರಲ್ಲಿಯೇ ನಾಯಿಂದನ ಹೈದ ಕತ್ತರಿ ತಂದಿದೇನೆ ಎಂದು ನನ್ನ ಹತ್ತಿರ ಬಂದು ತಿಳಿಸಿದ. ಆ ಹಸಿವಿನಲ್ಲಿಯೇ ಅವನ ಮುಂದೆ ಕುಳಿತು ಜಟೆಗಳನ್ನೆಲ್ಲಾ ಕತ್ತರಿಸಿಕೊಂಡೆ. ಕತ್ತರಿಯನ್ನೆಲ್ಲಾ ಹಿಡಿದುಕೊಳ್ಳಲು ಅವನ ಪುಟ್ಟ ಕೈಗಳಿಗೆ ಅಸಾಧ್ಯವಾದುದರಿಂದ, ಕೂದಲನ್ನು ಹೆಚ್ಚು–ಕಡಿಮೆ ಕತ್ತರಿಸಿದ. ಏನಾದರೇನು–ಪೀಡೆ ತೊಲಗಿಬಿಟ್ಟಿತು. ಹೊಲವೆಲ್ಲಾ ಜಾಲಾಡಿಸಿ ಒಂದಿಷ್ಟು ಕಹಿಯಾದ ಸೌತೆ ಕಾಯಿಗಳನ್ನು ಕುಯ್ದುಕೊಂಡು ಹೇಗೋ ಮಾಡಿ ತಿಂದು, ಜೋಳದ ತೆನೆಗಳನ್ನು ಪಕ್ಕದ ಹೊಲದಿಂದ ಕದ್ದು, ಜೊಳ್ಳಿನೊಂದಿಗೆ 'ಬೆಳಸೆ'ಯನ್ನು ತಿಂದು, ಕೆರೆಯಲ್ಲಿ ನೀರು ಕುಡಿದು, ಜಾಲಿ ಮರದ ಕೆಳಗೆ ಮಲಗಿಕೊಂಡು ನಿದ್ರೆಹೋದೆ.

ಎಚ್ಚರವಾದಾಗ ಹೊತ್ತು ಕಂತಿತ್ತು. ದನಗಳು, ನಾನು ಹೊಡೆದುಕೊಂಡು ಹೋಗುವ ಅಗತ್ಯವಿಲ್ಲದೆಯೇ ಮನೆಗೆ ಹೊರಟುಹೋಗಿಬಿಟ್ಟಿದ್ದುವು. ನಾನು ಮನೆಗೆ ಹೋಗಬೇಕೋ, ಬಿಡಬೇಕೋ ತಿಳಿಯದಾಯಿತು. ಕತ್ತಲಾಗಿಬಿಟ್ಟಿತು. ನಾನಿನ್ನೂ ಹಾಗೆಯೇ ಕುಳಿತಿದ್ದೆ.

೨

ಅಲ್ಲಿಂದೆದ್ದು ಮನೆಗೆ ಹೋಗಬೇಕೋ, ಬೇಡವೋ ಎಂಬ ಸಂಶಯ ತಲೆ ಎತ್ತಿತು. ಕತ್ತಲು ಹೆಚ್ಚಿದ ಹಾಗೆಲ್ಲಾ ಭಯವಾಗತೊಡಗಿತು. ನಾನು ಸಾಮಾನ್ಯವಾಗಿ ನಿರ್ಭಯವಾಗಿ ತಿರುಗುವವನಾದರೂ, ರಾತ್ರಿಯ ಹೊತ್ತು ಹೊಲದಲ್ಲಿದ್ದು ಅರಿಯೆ. ಪಕ್ಕದಲ್ಲಿಂದ ಯಾವುದೋ ಧ್ವನಿ ಕೇಳಿಸುತ್ತಿತ್ತು. ಸಮೀಪದಲ್ಲಿ ಏನೋ ಹರಿದಾಡಿದಂತಾಗುತ್ತಿತ್ತು. ಪ್ರತಿ ನಿಮಿಷ ನನ್ನ ಎದೆ ಹೊಡೆದುಕೊಳ್ಳುತ್ತಿತ್ತು. ಇದ್ದ ಸ್ಥಳದಿಂದ ಏಳಬೇಕೆಂದರೂ ಭಯವೇ, ಅಲ್ಲಿರಲೂ ಭಯವೇ. ದೂರದಲ್ಲಿ ಚಿತ್ರವಿಚಿತ್ರವಾಗಿ ಏನೇನೋ ಕಂಡುಬರುತ್ತಿದ್ದುವು. ಒಂದು ಕಡೆ ದೀಪದ ಹಾಗೆಯೇ ಕಾಣಿಸಿ ಮತ್ತೆ ಆರಿ ಹೋಗುತ್ತಿತ್ತು.

ನನ್ನವರು ನನ್ನನ್ನು ಹುಡುಕಿಕೊಂಡು ಬರುತ್ತಾರೆ; ಕರೆದೊಯ್ಯುತ್ತಾರೆ–ಎಂಬ ಆಸೆ. ನನ್ನವರಾರಿದ್ದಾರೆ ! ನನ್ನ ಚಿಕ್ಕಮ್ಮ ಕತ್ತಲಲ್ಲಿ ಒಬ್ಬಳೇ ನನ್ನನ್ನು ಹುಡುಕಿಕೊಂಡು ಬರುತ್ತಾಳೆಯೇ? ಬಂದರೆ ತಾನೇ? ಮಿಕ್ಕವರು ಬರಗೊಡುತ್ತಾರೆಯೇ? ಛಿ! ಇನ್ನು ಅವರ ಮನೆಗೆ ಹೋಗಬಾರದೆಂದು ಮನಸ್ಸಿನಲ್ಲಿ ಅಂದುಕೊಂಡೆ. ಹಾಗಾದರೆ ಮತ್ತೆಲ್ಲಿಗೆ ಹೋಗಲಿ? ದೈವ ನನ್ನನ್ನೇಕೆ ಹುಟ್ಟಿಸಿತು? ನಮ್ಮಮ್ಮನ ಹೊಟ್ಟೆಯಲ್ಲಿಯೇ ನಾನು ಸಾಯಬಾರದಾಗಿತ್ತೇ? ಈಗ ತಾನೇ ಏನು ಕೊಳ್ಳೆಹೋಗಿದೆ? ನಾನೀಗ ಸತ್ತುಹೋಗಬಾರದೇಕೆ?....ಕೆರೆಯಲ್ಲಿ ಮುಳುಗಿ ಸಾಯೋಣವೆನ್ನಿಸಿತು.

ಅಲ್ಲಿಂದೆದ್ದು ಹೊರಟೆ. ಸ್ವಲ್ಪ ದೂರ ಹೋದ ಬಳಿಕವೇ ನಾನು ಕೆರೆಯತ್ತ ಹೋಗುತ್ತಲಿಲ್ಲವೆಂದು ಅರಿವಾಯಿತು. ನಾನೆಲ್ಲಿರುವೆನೋ ನನಗೆ ತಿಳಿಯದಾಯಿತು. ನನ್ನ ಎದೆ ಢಢಢಿಸತೊಡಗಿತು. ನಾನಲ್ಲದೆ ಮತ್ತೊಬ್ಬನಾಗಿದ್ದ ಪಕ್ಷಕ್ಕೆ ಆಗ ಕಿಟಾರನೆ ಕಿರಿಚಿ, ದಿಂಡುಗೆಡೆದು ಬಿದ್ದು ಸತ್ತೇಹೋಗುತ್ತಿದ್ದ. ಆದರೆ ನಾನು ಶತಮೊಂಡ, ಸಹಸ್ರಮೊಂಡ. ಸ್ವಲ್ಪ ಹೊತ್ತು ಹೃದಯವನ್ನು ಸಂಬಾಳಿಸಿಕೊಂಡು ಮತ್ತೆ ಹೆಜ್ಜೆ ಹಾಕತೊಡಗಿದೆ. ಎತ್ತ ಕಡೆಗೆ? ಭಗವಂತ ಕಾಲುಗಳನ್ನು ಮುಂದಕ್ಕೆ ನಡೆಯುವ ಹಾಗೆ ಇರಿಸಿರುವನಲ್ಲಾ.

ಆ ಮುಂದಕ್ಕೆ ಎನ್ನುವುದು ಯಾವುದಾದರೆ ಅದೇ. ದೂರದಲ್ಲೊಂದಿಷ್ಟು ಬೆಳಕು ಕಾಣಿಸಿತು. ಅಲ್ಲಿ ಮನುಷ್ಯರಿರುತ್ತಾರೆಂದು, ಅದಕ್ಕೆ ಮುಖ ಮಾಡಿಕೊಂಡು ನೇರವಾಗಿ ನಡೆಯತೊಡಗಿದೆ. ಹತ್ತು ಹೆಜ್ಜೆಗಳಷ್ಟು ಹೋಗುತ್ತಲೇ ಒಂದು ಗುಣಿಯಲ್ಲಿ ಬಿದ್ದುಬಿಟ್ಟೆ. ಬೀಳುತ್ತಲೇ ನನಗೆ ದೊಡ್ಡದಾಗಿ ಅಳು ಬಂದುಬಿಟ್ಟಿತು. ಅಳುವುದಕ್ಕೂ ನನಗೆ ಭಯವಾಯಿತು. ಹತ್ತಿರದಲ್ಲೆಲ್ಲಾದರೂ ಇರುವ ದೆವ್ವಗಳು ಕೇಳಿಸಿಕೊಂಡು ಬಂದುಬಿಡುತ್ತವೇನೋ! ನರಿ ತೋಳ ಮುಂತಾದ ಮೃಗಗಳೇನಾದರೂ ಬಂದು ಹಿಡಿದುಬಿಡುತ್ತವೇನೋ! ಅಳುವನ್ನು ನುಂಗಿಕೊಂಡು ಗುಣಿಯಿಂದೆದ್ದು ಮತ್ತೆ ಮುಂದುವರಿಯಲಾರಂಭಿಸಿದೆ.

ಒಂದು ಪುಟಗೋಸಿ ಹಾಗೂ ನಾನು! ಚಳಿಯಾಗತೊಡಗಿತು. ನನ್ನ ಕಣ್ಣುಗಳಿಂದ ಕಣ್ಣೀರು ಸುರಿಯುತ್ತಿದೆ. ತೊಡೆದುಕೊಳ್ಳಬೇಕೆಂದು ತೋಚಲಿಲ್ಲ. ಹಾಗೆಯೇ ಹೆಜ್ಜೆ ಹಾಕುತ್ತಿರುವೆ. ಸ್ವಲ್ಪ ದೂರ ನಡೆದ ಬಳಿಕ ಕಾಲ ಕೆಳಗೆ ಏನೋ ತಾಕಿತು. ಏನೋ ರಾಚಿಕೊಂಡಂತಾಯಿತು. ‘ಅಮ್ಮೋ’ ಎಂದು ಗಟ್ಟಿಯಾಗಿ ಕೂಗಿ ಕುಸಿದು ಕುಳಿತೆ. ಕುಳಿತುಕೊಳ್ಳುವಾಗ ಅದು ಮತ್ತೆ ನನ್ನ ಕಾಲಿಗೆ ತಾಕಿತು. ಅದು ಗಟ್ಟಿಯಾಗಿಯೂ, ಉದ್ದನಾಗಿಯೂ ಇತ್ತು. ಹಾವಾದರೆ ಅಷ್ಟು ಗಟ್ಟಿಯಾಗಿರುತ್ತದೆಯೇ? ನಿಧಾನವಾಗಿ ಅದನ್ನು ಕಾಲಿನಿಂದ ತಾಕಿದೆ. ಅದೊಂದು ಕಟ್ಟಿಗೆ. ಅದಕ್ಕೆ ಅಲ್ಲಲ್ಲಿ ಮುಳ್ಳುಗಳಿದ್ದವು. ‘ಬದುಕಿದೆಯಾ ಬಡ ಜೀವವೇ’ ಎಂದುಕೊಂಡು ಕೋಲಿನಂತಿರುವ ಆ ಕಟ್ಟಿಗೆಯನ್ನು ಕೈಗೆತ್ತಿಕೊಂಡು ಅಲ್ಲಿಂದ ಮುಂದಕ್ಕೆ ಸಾಗಿದೆ. ನರಿ ನಾಯಿಗಳೇನಾದರೂ ಬಂದರೆ ಅದರಿಂದ ಹೊಡೆಯಬಹುದೆಂದು ಧೈರ್ಯ ಬಂದಿತು.

ಮತ್ತೆ ಹತ್ತು ಹೆಜ್ಜೆಗಳಷ್ಟು ದೂರ ಹೋಗುವಷ್ಟರಲ್ಲಿಯೇ ದೂರದಲ್ಲಿ ಕಾಣಿಸುತ್ತಿದ್ದ ಆ ಬೆಳಕು ಮಾಯವಾಯಿತು. ಅದು ಕೊಳ್ಳಿದೆವ್ವ– ನನ್ನನ್ನು ಸೆಳೆದೊಯ್ದುಬಿಡುತ್ತದೆಂಬ ಭಯವಾಯಿತು. ಏನಾದರೂ ಆಗಲಿ, ಬೆಳಕು ಹರಿಯುವ ತನಕ ಇಲ್ಲಿಯೇ ಕುಳಿತುಕೊಂಡುಬಿಡೋಣವೆಂಬ ಆಲೋಚನೆ ತಟ್ಟಿತು. ಪುನಃ ಸ್ವಲ್ಪ ದೂರದಲ್ಲಿ ಮತ್ತೊಂದು ಬೆಳಕು ಕಾಣಿಸಿಕೊಂಡಿತು. ಅದನ್ನು ಹಿಂಬಾಲಿಸಿಕೊಂಡು ಹೊರಟೆ. ಆ ಬೆಳಕು ಮಾಯವಾಗಲಿಲ್ಲ.

ತುಂಬ ಹೊತ್ತು ನಡೆದೂ ನಡೆದೂ ದಾರಿ ಸವೆಸಲಾಗಿ ಆ ಬೆಳಕಿಗೆ ಅಷ್ಟಿಷ್ಟು ಸಮೀಪವಾದೆ. ಉರಿಯೊಂದು ಉರಿಯುತ್ತಿತ್ತು. ಅದರ ಬಳಿಯೇ ಕೂದಲು ಕೆದರಿದ ಒಂದು ದೆವ್ವ ಕುಳಿತುಕೊಂಡಿತ್ತು. ನನ್ನ ಎದೆ ಜವ್ವನೆ ಹಾರಿಬಿಟ್ಟಿತು. ಹಿಂತಿರುಗಿ ಹೋಗಿಬಿಡೋಣವೆಂದರೆ ಕಾಲಾಡುತ್ತಿಲ್ಲ. ಮುಂದೆ ಹೋಗೋಣವೆಂದರೆ ಕಾಲುಗಳು ಸಾಗುತ್ತಿಲ್ಲ. ನನ್ನ ಪಕ್ಕದಿಂದ ಒಂದು ಹಾವು ಸರಸರನೆ ಹಾದು ಹೋಯಿತು. ದೆವ್ವಕ್ಕೆ ಭಯಪಡಲೆ? ಹಾವಿಗೆ ಭಯಪಡಲೆ? ಹಾಗೆಯೇ ನಿಂತುಬಿಟ್ಟೆ ಹಾವಿನ ಸರಸರದ ಹರಿದಾಟದ ಸದ್ದಿಗೋ ಏನೋ ಆ ದೆವ್ವ ತಲೆ ಎತ್ತಿ ನೋಡಿಬಿಟ್ಟಿತು. ನಾನು ಚಿಟಾರನೆ ಚೀರಿ ಕೆಳಗುರುಳಿಬಿಟ್ಟೆ

ನಾನು ಮತ್ತೆ ಕಣ್ಣುಬಿಟ್ಟಾಗ, ಒಂದು ಕೊಳ್ಳಿಯನ್ನು ಕೈಯಲ್ಲಿ ಹಿಡಿದುಕೊಂಡು ಆ ದೆವ್ವ ನನ್ನ ಹತ್ತಿರವೇ ನಿಂತುಕೊಂಡಿರುವುದು ಕಂಡು ಬಂದಿತು. ನಾನು ತಟಕ್ಕನೆ ಮತ್ತೆ ಕಣ್ಣುಗಳನ್ನು ಮುಚ್ಚಿಕೊಂಡೆ. ಸ್ವಲ್ಪ ಹೊತ್ತಿಗೆ, ನನಗೆ ಯಾವುವೋ ಮಾತುಗಳು ಕೇಳಿಸಿದುವು. "ಭಯಪಡಬೇಡ ಕಣ್ಲಾ! ಯಾರ ಹುಡುಗ?"–ಎಂಬ ಮಾತುಗಳು. ಕಣ್ಣು ತೆರೆದು ನಿಧಾನವಾಗಿ ಎದ್ದು ಕುಳಿತುಕೊಂಡೆ. ನೀನಾರು ಎಂದೆ. ಆಕೆ 'ಮಾಲ' ಜಾತಿಗೆ ಸೇರಿದ ಮುದುಕಿ. ಹೊಲ ಕಾಯುತ್ತಿದ್ದಳು. ನನಗೆ ಹಸಿವಾಗುತ್ತಿದೆ, ಏನಾದರೂ ಕೊಡು ಎಂದೆ. ಆ ಮುದುಕಿ ಜೋಳದ ತೆನೆಗಳನ್ನೂ, ಸೌತೇಕಾಯಿಗಳನ್ನೂ ತಂದುಕೊಟ್ಟಳು. ಅವನ್ನು ತಿಂದೆ. ನೀರಡಿಕೆಯಾಗುತ್ತಿತ್ತು. ಆಕೆಯದು 'ಮಾಲ'ಜಾತಿ. ಆಕೆ ಕೊಟ್ಟ ನೀರನ್ನು ನಾನು ಕುಡಿಯಕೂಡದು. ಇಲ್ಲಿಗೆ ಕೆರೆ ಎಷ್ಟು ದೂರದಲ್ಲಿದೆ ಎಂದು ಕೇಳಿದೆ. "ಕೆರೆ ಶಾನೆ ದೂರ....ನೀ ಹೋಗಲಾರೆ. ಹೆಂಗೋ ಹಂಗ ಮಾಡಿ, ಇಲ್ಲೇ ಮಲಕ್ಕೋ. ನಸುಕಿನಾಗೆದ್ದು ನಿಮ್ಮೂರಿಗೆ ಹೋಗ್ಬೋದು"–ಎಂದಳು. ಹಾಗೆಯೇ ಮಲಗಿಕೊಂಡೆ.

ನಾಲಗೆಯ ತೇವ ಆರಿಹೋಗುತ್ತಿತ್ತು. ಮುದುಕಿಯೂ ಸಹ ನಿದ್ರಿಸುತ್ತಿದ್ದಳು. ನಾನು ಮೆಲ್ಲಗೆ ಎದ್ದು ಕೆರೆಯನ್ನರಸಿಕೊಂಡು ಹೊರಟುಬಿಟ್ಟೆ. ಕೆರೆ ಯಾವ ದಿಕ್ಕಿಗಿದೆಯೋ ತಿಳಿಯದು. ಆದಾಗ್ಯೂ ನಡೆಯುತ್ತಿದ್ದೆ. ಮುದುಕಿಯೇನಾದರೂ ಎದ್ದು ನನಗಾಗಿ ಹುಡುಕುತ್ತಿದೆಯೋ ಏನೋ ಎಂದು ಅನೇಕ ಸಾರಿ ಹಿಂತಿರುಗಿ ನೋಡಿದೆ. ಆ ಮುದುಕಿ ಬಾಯಿ ಬಿಟ್ಟುಕೊಂಡು ನಿದ್ರಿಸುತ್ತಿದ್ದಳು.

ಆಕೆ ನನ್ನ ಹತ್ತಿರ ಮಾತನಾಡುತ್ತಿದ್ದಷ್ಟು ಹೊತ್ತೂ ಮನುಷ್ಯಳ ಹಾಗೆಯೂ, ಸುಮ್ಮನೆ ಇದ್ದಾಗ ದೆವ್ವದ ಹಾಗೆಯೂ ಕಂಡುಬಂದಳು. ನನ್ನ ಮನಸ್ಸಿನಲ್ಲಿ ದೆವ್ವದ ಕಥೆಗಳೂ, ದೆವ್ವಗಳೂ

ಕಾಣಿಸಿಕೊಂಡವು. ಅದು ತಲೆ ಬಿರಿಹುಯ್ದುಕೊಂಡ ದೆವ್ವದ ಹಾಗೆ ಕಂಡುಬಂದಿತು. ಅದರಿಂದ ನಾನು ವೇಗವೇಗವಾಗಿ ನಡೆಯಲಾರಂಭಿಸಿದೆ. ಅದು ನನ್ನನ್ನು ಹಿಂಬಾಲಿಸಿಕೊಂಡು ಬರುತ್ತಿರುವಂತೆ ಭಾಸವಾಗುತ್ತಿತ್ತು.

ಆಗ ರಾತ್ರಿ ಎರಡು ಜಾವಗಳಾಗಿರಬಹುದು. ನನಗೆ ಮತ್ತೆ ಸಾಯುವ ಮನಸ್ಸಾಯಿತು. ಆ ದೆವ್ವದ ಹತ್ತಿರಕ್ಕೆ ಹೋಗೋಣ, ಅದು ನನ್ನನ್ನು ಹರಿದು ತಿನ್ನುತ್ತದೆ–ಎಂದು ಅದರ ಕಡೆಗೇ ನಡೆಯತೊಡಗಿದೆ. ಅದರ ಹತ್ತಿರಕ್ಕೆ ಹೋಗುತ್ತಿರುವ ಹಾಗೆಲ್ಲಾ ನನಗೆ ಭಯವಾಗಿ, ಕಣ್ಣು ಮುಚ್ಚಿಕೊಂಡು ನಡೆಯತೊಡಗಿದೆ. ಅದಕ್ಕೆ ತೀರ ಸಮೀಪವಾದ ಬಳಿಕ ಕಣ್ಣು ತೆರೆಯೋಣವೆಂಬ ಆಲೋಚನೆ. ಅಷ್ಟರಲ್ಲಿಯೇ ನನಗೇನೋ ಬಡಿಯಿತು. ಕಣ್ಣು ಬಿಟ್ಟೆ ಅದು ಈಚಲ ಮರ. ಅದರಿಂದಾಗಿ ಭಯ ಅರ್ಧ ಹೋಗಿಬಿಟ್ಟಿತು–ಹೀಗೆ ದೆವ್ವಗಳ ಹಾಗೆ ಕಾಣಿಸಿದ್ದೆಲ್ಲವೂ ಈಚಲ ಮರಗಳೋ, ತಾಳೆ ಮರಗಳೋ ಆಗಿರುತ್ತಿದ್ದುವಾಗಲೀ ದೆವ್ವಗಳಲ್ಲ.

ಮತ್ತಿನ್ನಷ್ಟು ದೂರ ಹೋದ ಮೇಲೆ ದೂರದಲ್ಲೆಲ್ಲೋ ನಾಯಿಗಳು ಬೊಗಳುತ್ತಿರುವುದು ಕೇಳಿಸಿತು. ಅದು ಯಾವುದೋ ಊರಾಗಿರಬೇಕೆಂದು ಬಗೆದು ಆ ಮುಖವಾಗಿ ಸಾಗಿದೆ. ಅತ್ತಕಡೆ ಹೋಗಲಾಗಿ ಒಂದು ಮುಳ್ಳಿನ ಬೇಲಿ ಅಡ್ಡ ಬಂದಿತು. ಅದರಲ್ಲಿ ಬಿದ್ದುಬಿಟ್ಟೆ ಕೈಕಾಲುಗಳಿಗೆಲ್ಲಾ ಮುಳ್ಳು ಮುರಿದುಕೊಂಡವು. ಮುರಿದ ಮುಳ್ಳುಗಳನ್ನು ಕಿತ್ತೆಸೆದೆ. ಮೈಯೆಲ್ಲಾ ನೋಯಲಾರಂಭಿಸಿತು. ಈ ಸಂಕಷ್ಟದಿಂದ ನೀರಡಿಕೆಯಾಗುತ್ತಿರುವ ವಿಷಯವನ್ನು ಮರೆತುಬಿಟ್ಟೆ ಒಮ್ಮೊಮ್ಮೆ ಮುಳ್ಳು ಮುರಿದ ಬಾಧೆ ಹೆಚ್ಚಿ ನೋವು ಸೆಳೆಯುತ್ತಿತ್ತು. ಅಷ್ಟರಲ್ಲಿಯೇ ಹೇಳಲಾರದ ದುಃಸ್ಥಿತಿಯೊಂದು ಒದಗಿತು. ನಾನು ಆ ಮುಳ್ಳಬೇಲಿಯ ಪಕ್ಕದಲ್ಲಿಯೇ ನಡೆದು ಹೋಗುತ್ತಿರುವಾಗ–ಅಲ್ಲೊಂದು ದೊಡ್ಡ ಗುಣಿಯಿತ್ತು; ಅದರಲ್ಲಿ ಹೊಲಸು ನಾರುವ ನೀರಿತ್ತು; ಅದರಲ್ಲಿ ಮುಂಡಿ ಗಿಡದ ಕಾಂಡಗಳನ್ನು ನೆನೆ ಹಾಕಿದ್ದರು–ದಡಕ್ಕೆ ಕಾಲು ಬೀಳುತ್ತಲೇ, ದಡ ಕತ್ತರಿಸಿಹೋಗಿ, ನಾನು ಅದರಲ್ಲಿ ಬಿದ್ದುಬಿಟ್ಟೆ. ಮೂಗು ಮುರಿಯಿತು; ನೀರೆಲ್ಲಾ ರಾಡಿಯಾಯಿತು. ಇನ್ನೇನು ಮಾಡಲಿ? ದಡ ಹತ್ತೋಣವೆಂದು ಒಂದೆರಡು ಕಡೆ ದಡ ಹಿಡಿದುಕೊಂಡೆ. ಆ ದಡ ಮುರಿದುಕೊಂಡು ಬೀಳತೊಡಗಿತು. ಹೇಗೋ ಮಾಡಿ ಮೇಲಕ್ಕೆ ಹತ್ತಿದೆ. ಮೈಯೆಲ್ಲಾ ಒದ್ದೆಯಾಗಿತ್ತು. ದುರ್ವಾಸನೆ ಬಡಿಯುತ್ತಿತ್ತು. ಚಳಿಯಿಂದಾಗಿ ಗಡಗಡ ನಡುಗುತ್ತಿರುವೆ. ನಾಲಗೆ ಕೊರಡಾಗುತ್ತಿದೆ. ಮುಳ್ಳುಗಳ ಬಾಧೆ ವಿಪರೀತವಾಗಿದೆ. ದೇವರೇ! ಇದಕ್ಕಿಂತಲೂ ಸಾವು ನಯವಲ್ಲವೇ? ನನ್ನನ್ನೇಕೆ ಒಂದು ಹಾವು ಕಚ್ಚಹೂಡದು? ಎಂದು ಹಾಗೆಯೇ ನಡೆಯತೊಡಗಿದೆ.

ಕೊನೆಗೊಮ್ಮೆ ರಸ್ತೆ ಸಿಕ್ಕಿತು. ಅದು ದೊಡ್ಡ ರಸ್ತೆ. ಸ್ವಲ್ಪ ಹೊತ್ತಿಗೆ ನಾನೊಂದು ಊರಿನೊಳಗೆ ಪ್ರವೇಶಿಸಿದೆ. ಮೆಲುಕು ಹಾಕುತ್ತಿರುವ ದನಗಳ ಕೊರಳ ಗಂಟೆಗಳ ಟಿಂಟಿಣಿ; ಮಲಗಿ ನಿದ್ರಿಸುತ್ತಿರುವ ಹಸುಗಳ ಬುಸುಗರೆತವಲ್ಲದೆ ಊರೆಲ್ಲಾ ನಿಶ್ಶಬ್ದವಾಗಿತ್ತು. ಅಷ್ಟರಲ್ಲಿಯೇ ಮೂರು ನಾಲ್ಕು ನಾಯಿಗಳು ಬೊವ್....ಬೊವ್....ಎನ್ನುತ್ತ ನನ್ನ ಮೇಲೆ ಬೀಳಲು ಬಂದುವು. ಊರೊಳಗೆ ಬಂದರೂ ನನಗೆ ವಿಪತ್ತು ತಪ್ಪಲಿಲ್ಲವಲ್ಲಾ ಎಂದು ನನಗೆ

ಭಯವಾಯಿತು. ಅದರಲ್ಲೂ ಆ ನಾಯಿಗಳು ಕಟ್ಟುಮಸ್ತಾಗಿದ್ದವು. ಅವುಗಳನ್ನು ನೋಡಿ ಇನ್ನೂ ಹತ್ತಾರು ನಾಯಿಗಳು ಕೂಡಿಕೊಂಡವು. ಕೆಲವು ಸಣಕಲು ನಾಯಿಗಳು, ಕೆಲವು ಮರಿ ನಾಯಿಗಳು ದೂರದೂರವಾಗಿಯೇ ಇದ್ದು, ಕೆಲವು ಬೊಗಳುವುದಕ್ಕೆ, ಕೆಲವು ಕೆಟ್ಟ ಧ್ವನಿಯಿಂದ ಅಳುವುದಕ್ಕೆ ಮೊದಲಿಟ್ಟುವು. ನನ್ನ ಕೈಯಲ್ಲಿ ಕಟ್ಟಿಗೆಯಿತ್ತು. ಹೊಡೆದರೆ ಮೇಲೆರಗಿ ಕಚ್ಚುತ್ತವೇನೋ ಎಂಬ ಭಯ. ಅವು ತೀರ ಹತ್ತಿರಕ್ಕೆ ಬಾರದ ಹಾಗೆ ಕಟ್ಟಿಗೆಯನ್ನು ತಿರುಗಿಸತೊಡಗಿದೆ. ಆಗ ನನಗೊಂದು ಉಪಾಯ ತಟ್ಟಿತು. ನಮ್ಮ ಪಕ್ಕದ ಮನೆಯ ಹುಡುಗ 'ನಾಯಿಗಳು ಕಚ್ಚಲು ಬಂದರೆ ಕೂತ್ಕೊಂಡುಬಿಡಬೇಕು. ನಾವು ಕೂತ್ಕೊಂಡು ಬಿಟ್ರೆ ಅವಕ್ಕೆ ಹಲ್ಲು ಹುಳಿಯೇರಿ ಹೊರಟುಹೋಗಿಬಿಡುತ್ತವೆ'—ಎಂದು ಹೇಳಿದ್ದ.

ನನಗಾಗ ಆ ಮಾತುಗಳು ನೆನಪಾಗಿ ಕುಳಿತುಕೊಂಡುಬಿಟ್ಟೆ ಕುಳಿತ ಮೇಲೆ ನಾಯಿಗಳು ದೂರದೂರದಲ್ಲುಳಿದು ಬೊಗಳುವುದಕ್ಕಾರಂಭಿಸಿದರೂ ಮೇಲೆ ಬೀಳಲು ಮುಂಬರಲಿಲ್ಲ. ಸ್ವಲ್ಪ ಹೊತ್ತು ಕುಳಿತಿದ್ದು ಮತ್ತೆ ಮುಂದುವರಿದೆ. ಪುನಃ ಅವು ಮೇಲೆರಗಲು ಮುಂದೆ ಬಂದುವು. ನಾನು ಕುಳಿತುಕೊಳ್ಳುವುದು, ಹತ್ತು ಹೆಜ್ಜೆ ನಡೆಯುವುದು; ಮತ್ತೆ ಕೂರುವುದು, ಹೀಗೆ ಸ್ವಲ್ಪ ದೂರ ಸಾಗುವಷ್ಟರಲ್ಲಿ, ಯಾರೋ ಕಳ್ಳ ಕಳ್ಳ—ಎಂದು ಕೂಗಿಕೊಂಡರು. ನಾನು ಕಳ್ಳನಲ್ಲವೆಂದು ತಿಳಿಸಬಹುದಾಗಿತ್ತಾದರೂ ನನಗೆ ಭಯವಾಗಿ ಓಡಲಾರಂಭಿಸಿದೆ. ನಾಯಿಗಳೂ, ಅವುಗಳ ಹಿಂದೆ ಕೆಲವು ಜನರೂ ನನ್ನನ್ನು ಬೆನ್ನಟ್ಟಿ ಬಂದರು. ನಾನೊಂದು ಫರ್ಲಾಂಗ್ ದೂರ ಓಡಿ, ಮುಂದೆ ಓಡಲಾಗದೆ ಬಿದ್ದುಬಿಟ್ಟೆ ಅವರಲ್ಲಿ ಕೆಲವರು ಓಡಿ ಬಂದು ನನ್ನನ್ನು ಹಿಡಿದುಕೊಂಡರು. ನನ್ನ ಸುತ್ತಲೂ ಹತ್ತಾರು ಜನ ಸೇರಿದರು. ಅವರಲ್ಲೊಬ್ಬ ನನ್ನನ್ನು ಬಯ್ದು, ಯಾರೋ ನೀನು—ಎಂದು ಕೈಕೋಲಿನಿಂದ ಒಂದು ಪೆಟ್ಟುಕೊಟ್ಟ. ನಾನು ಕೆಳಕ್ಕೆ ಬಿದ್ದುಬಿಟ್ಟೆ ನನ್ನ ಹೃದಯ ಬೇಸರಗೊಂಡಿದ್ದು ಅವರೆಷ್ಟು ಪ್ರಶ್ನೆಗಳನ್ನು ಹಾಕಿದರೂ ಸಮಾಧಾನ ಹೇಳುವುದು ನನ್ನ ಕೈಲಾಗದಾಯಿತು. ಅವರಲ್ಲಿದ್ದ—ಏರುಪ್ರಾಯದಲ್ಲಿದ್ದವರೆಲ್ಲರೂ ನನ್ನನ್ನು ಬೈದ ಬೈಗುಳಗಳು ಬೈಗುಳಗಳಲ್ಲ! ಎಷ್ಟೋ ಪ್ರಶ್ನೆಗಳನ್ನು ಹಾಕಿದರು—"ಯಾರು ನೀನು? ವಡ್ಡರವನೇ? ಕೊರಚರವನೇ? ನಿನ್ನೊಂದಿಗೆ ಬಂದ ದೊಡ್ಡವರೆಲ್ಲಾ ಏನಾದರು? ಯಾರು ನೀವು? ಹಾವಾಡಿಗರೇ? ಡೊಂಬರೇ? ನೀವು ಗುಡಿಸಲುಗಳನ್ನೆಲ್ಲಿ ಹಾಕ್ಕೊಂಡಿದೀರಿ?" ಯಾವ ಪ್ರಶ್ನೆಗೂ ನನಗೆ ಸಮಾಧಾನ ತೋಚಲಿಲ್ಲ. ಕೆಲವರು ಅದೇ ಕೆಲಸವಾಗಿ ನನ್ನನ್ನು ಹೊಡೆಯುತ್ತಿದ್ದರೆ, ಕೆಲವು ಜನ ಮುದುಕರು—"ಹುಡುಗುಮುಂಡೇದು ಎಲ್ಲಾರ ಸತ್ತುಹೋದಾತು."—ಎಂದು ಬಿಡಿಸಿದರು.

ಅವರ ಹೊಡೆತಗಳಿಂದಾಗಿ ಮೈಯೆಲ್ಲಾ ಊದಿಕೊಂಡಿತ್ತು. ಕೆಲವು ಕಡೆಯಲ್ಲಿ ರಕ್ತ ಒಸರುತ್ತಿತ್ತು. ಕಿವಿಯ ಮೇಲ್ಭಾಗ ಒಡೆದು ರಕ್ತ ಸುರಿಯುತ್ತಿತ್ತು. ನಾನು ಬಾಧೆ ತಾಳಲಾರದೆ ಕೆಳಗುರುಳಿ ಬಿದ್ದೆ. ಅವರಲ್ಲಿಯೇ ಯಾರೋ ಒಂದಿಷ್ಟು ನೀರು ತಂದು ನನ್ನ ಗಂಟಲಲ್ಲಿ ಸುರಿದರೂ ಅಂತ ಕಾಣುತ್ತದೆ. ನನಗೆ ಎಚ್ಚರವಾದಾಗ ಬೆಳಕು ಹರಿಯುತ್ತಾ ಇತ್ತು. ಹೆಡೆಮುರಿಗೆ ಕಟ್ಟಿ ನನ್ನನ್ನೊಂದು ಮನೆಯಲ್ಲಿ ಕಂಬಕ್ಕೆ ಬಿಗಿದಿದ್ದರು. ನೀರು ತರಲು ಹೋಗುತ್ತಿದ್ದ ಹೆಂಗಸರೂ,

ತಮ್ಮ ತಮ್ಮ ಕೆಲಸಗಳ ಮೇಲೆ ಹೋಗುತ್ತಿದ್ದ ಗಂಡಸರೂ, ನನ್ನ ಬಳಿಗೆ ಬರುವುದು, ನನ್ನನ್ನು ನೋಡುವುದು!

ಅವರಲ್ಲೊಬ್ಬ ಪುಣ್ಯಾತ್ಮ ಬಂದ. ನೀರ ಕಾವಿ ಪಂಚೆ ಕಟ್ಟಿಕೊಂಡಿದ್ದ. ಕೆಂಚನೆಯ ವ್ಯಕ್ತಿ, ಆಜಾನುಬಾಹು, ಸೊಗಸಾದ ಮೀಸೆಯಿತ್ತು. ಸಣ್ಣ ಕುಂಬಳಕಾಯಿಯಷ್ಟು ಹೊಟ್ಟೆಯಿತ್ತು. ಬೆಳ್ಳನೆಯ ಜರತಾರಿ ಶಾಲನ್ನು ಹೆಗಲ ಮೇಲೆ ಹಾಕಿಕೊಂಡಿದ್ದ. ಅರವತ್ತು ವರ್ಷಗಳು ದಾಟಿರಬೇಕು. ಚುಟ್ಟಾ ಸೇದುತ್ತಾ ನನ್ನ ಬಳಿ ಬಂದು, ಸುತ್ತಮುತ್ತಲಿರುವವರನ್ನೆಲ್ಲಾ ನೋಡಿ, 'ಇವನೇ ಏನ್ರೋ ಕಳ್ಳ? ಈ ಎಂಟು ವರ್ಷದ ಹುಡುಗುಮುಂಡೇದೇನ್ರೋ?! ನಿಮ್ಮ ಮನೆಗೆ ಕನ್ನಾ ಹಾಕಲು ಬಂದನೇ? ಹುಡುಗನನ್ನು ಕೊಂದುಬಿಟ್ಟಿರಲ್ರೋ!' ಎಂದು ಕಟ್ಟುಗಳನ್ನು ಬಿಚ್ಚಿ 'ಮಗೂ, ನಿಮ್ಮದಾವೂರಪ್ಪಾ?' ಎಂದು ಕೇಳಿದ.

ಹಿಡಿಸಲಾರದಷ್ಟು ಅಳು ಬಂದುಬಿಟ್ಟಿತು. ನಾನು ಗಟ್ಟಿಯಾಗಿ ಅತ್ತೆ. ಆತನ ಹೃದಯ ಕರಗಿ ನೀರಾಗಿಬಿಟ್ಟಿತು. ಅಲ್ಲಿ ನಿಂತಿದ್ದ ಕೆಲವು ಜನ ಹೆಂಗಸರೂ ಸಹ, 'ಅಯ್ಯೋ ಪಾಪ! ಹಸುಗಂದ! ಇವನೆಂಥ ಕಳ್ಳ?' ಇವನನ್ನು ಸಾಯಿಸಿಬಿಟ್ರು!' ಎಂದರು. ಆ ದೊಡ್ಡ ಮನುಷ್ಯ, 'ಭಯವಿಲ್ಲ ಮಗೂ; ಯಾವೂರು ನಿನ್ನದು?' ಎಂದು ಕೇಳಿದ. ನಾನು ಅಳುತ್ತಾ, ಮಧ್ಯೆ ಮಧ್ಯೆ ನನ್ನ ಕಥೆಯನ್ನೆಲ್ಲಾ ಹೇಳಿದೆ. ಆತ ನನ್ನನ್ನು ತಮ್ಮ ಮನೆಗೆ ಕರೆದೊಯ್ದ.

ಆತನ ಹೆಂಡತಿ ನನಗೆ ಬಿಸಿ ನೀರು ಕಾಯಿಸಿ ಹಾಕಿದಳು. ನನ್ನ ಮೈಯೆಲ್ಲಾ ಕಾಯಿಕಾತಿತ್ತು. ಮುಳ್ಳುಗಳನ್ನೆಲ್ಲಾ ಅವರ ಜೀತದಾಳು ಚಿಮ್ಮಟಿಕೆಯಿಂದ ಹೊರತೆಗೆದು ಹಾಕಿದ. ಆಗ ಸುಮಾರು ಹೊತ್ತೇರಿತ್ತು. ನನ್ನ ಜೀವನದಲ್ಲಿ ಮೊಟ್ಟ ಮೊದಲನೆಯ ಬಾರಿಗೆ–ದಿವ್ಯವಾದ ಊಟವೆಂಬುದು ನನಗೆ ಆ ದಿನವೇ ಗೊತ್ತಾದದ್ದು. ಪುಂಡಿ ಪಲ್ಯ, ಬೆಣ್ಣೆ ಹಾಕಿ ಅನ್ನವಿಟ್ಟರು. ಸಾಂಬಾರು ಕೂಡಾ ಬಡಿಸಿದರು. ಸಾಂಬಾರೆಂದರೆ ತಮಿಳರ ಸಾಂಬಾರಲ್ಲ. ತೆಲುಗು ನಾಡಿನಲ್ಲಿ ಕಮ್ಮ ಜನರೂ, ಒಕ್ಕಲಿಗರೂ ಸಾಂಬಾರು ಕಾರವೆಂಬುದನ್ನು ಕುಟ್ಟಿರುತ್ತಾರೆ. ಮೆಣಸಿನಕಾಯಿ, ಸಾಸಿವೆ, ಧನಿಯಾ, ಉಪ್ಪು, ಬೆಳ್ಳುಳ್ಳಿ, ಕಡಲೇಬೇಳೆ, ಉದ್ದು ಮುಂತಾದವುಗಳನ್ನೆಲ್ಲಾ ಪ್ರತ್ಯೇಕ, ಪ್ರತ್ಯೇಕವಾಗಿ ಹೆಂಚಿನಮೇಲೆ ಹುರಿದು, ಅವನ್ನೆಲ್ಲಾ ಕಲೆಸಿ, ಕುಟ್ಟುತ್ತಾರೆ. ಅದನ್ನು ಕುಟ್ಟುತ್ತಿರುವಾಗಲೇನೇ ಅದರ ವಾಸನೆ ತಾಕಿತೆಂದರೆ ಸಾಕು, ಘ್ರಾಣೇಂದ್ರಿಯ ತೃಪ್ತಿಗೊಂಡುಬಿಡುತ್ತದೆ. ಅದನ್ನು ಅನ್ನದೊಡನೆ ಸೇರಿಸಿಕೊಂಡು ಉಂಡರೆ ಎಷ್ಟು ರುಚಿಯಾಗಿರುತ್ತೋ ಆ ಬ್ರಹ್ಮನಿಗೇ ಗೊತ್ತು! ಆ ದಿನ ನನಗೆ ಗೊತ್ತು ! ನನ್ನ ಚಿಕ್ಕಮ್ಮನ ಅತ್ತೆ ಆ ಸಾಂಬಾರು ಕಾರವನ್ನು ನನಗೆಂದೂ ಹಾಕುತ್ತಿರಲಿಲ್ಲ. ಆ ದಿನ ಆ ದೊರೆಯ ಮನೆಯಲ್ಲಿ ತಿಂದೆ. ಗಡ್ಡೆಯಂತೆ ಗಟ್ಟಿಯಾಗಿರುವ ಮೊಸರು ಹಾಕಿದರು. ಊಟ ಮಾಡಿ ಎದ್ದು ಬಂದೆ. ಆತ ಉತ್ತರೀಯವೊಂದನ್ನು ಹೊದೆಯಲೆಂದು ಕೊಟ್ಟ. ಅಷ್ಟರಲ್ಲಿ ನನಗೆ ನಿದ್ರೆ ಬಂದಿತು. ನಮ್ಮೂರಿಗೂ ಆ ಊರಿಗೂ ಮೂರು ಹರದಾರಿಗಳಿವೆಯಂತೆ. ನಾನಷ್ಟು ದೂರವನ್ನು ಆ ರಾತ್ರಿ ಹೇಗೆ ನಡೆದೆನೋ ನಾನರಿಯೆ. ನನ್ನ ಚಿಕ್ಕಮ್ಮನ ಗಂಡ, ಅವರೆಲ್ಲಾ ಸಾಮಾನ್ಯ ರೈತರಾದ್ದರಿಂದ ಆ ಊರಿನಲ್ಲಿ ಯಾರಿಗೂ ನಮ್ಮವರಿದ್ದಾರೆಂಬುದೇ ತಿಳಿಯದು. ನಾನು,

'ನಮ್ಮೂರಿನಲ್ಲಿ ನಮ್ಮವರ ಮನೆ ಇಂಥಾ ಸ್ಥಳದಲ್ಲಿದೆ' ಎಂದು ಹೇಳಿದರೆ– 'ಓಹೋ! ಅಲ್ಲೋ!' ಎಂದೊಬ್ಬರು, 'ಅವರೇ! ಹೌದೌದು!' ಎಂದು ಮತ್ತೊಬ್ಬರೆನ್ನುವುದಾಗಲೀ ಸರಿಯಾಗಿ ಗೊತ್ತಿರುವವರು ಯಾರೂ ಇರಲಿಲ್ಲ. ಅಷ್ಟರಲ್ಲಿಯೇ ಒಬ್ಬ ಪಂಚಮರವನು ಬಂದ. ಅವನು ಹತ್ತು ತಿಂಗಳ ಹಿಂದೆ ನಮ್ಮ ತಾತನವರ ಎಮ್ಮೆಯನ್ನು ಕೊಂಡಿದ್ದ. ಆಗ ಅವನು ನನ್ನನ್ನು ನೋಡಿದ್ದ. ನಾನೇ ಅವನಿಗೆ ಎಮ್ಮೆಯ ಕಣ್ಣಿಯನ್ನು ಬಿಚ್ಚಿ ಹೊಡೆದು ಕಳಿಸಿದ್ದೆ. ನಾನು ಅವನಿಗೆ ಗುರುತುಗಳನ್ನೆಲ್ಲಾ ತಿಳಿಸಿದೆ. ನನಗಾಗ ತಲೆಗೂದಲಿತ್ತೆಂದು ಹೇಳಿದೆ. ಆಗ ಅವನು ನನ್ನನ್ನು ಗುರುತು ಹಿಡಿದ. "ಹೌದಯ್ಯಾ, ನೀನವರ ಜೀತದಾಳಲ್ಲಾ"– ಎಂದ. ನಾನು, 'ಅಲ್ಲ. ಆತನಿಗೆ ಐದು ಜನ ಗಂಡು ಮಕ್ಕಳಿದ್ದಾರಲ್ಲಾ; ಆ ಮೂರನೇಯಾತನ ಹೆಂಡತಿ ನಮ್ಮ ತಾಯಿಯ ತಂಗಿ' ಎಂದು ಹೇಳಿದೆ. ಅವನು, 'ನಾನು ಜೀತದಾಳು ಅಂದ್ಕೊಂಡಿದ್ದೆ' ಎಂದ

ನನಗೆ ನಿದ್ರೆ ಬರುತ್ತಿತ್ತು. ಅವರ ಜಗುಲಿಯ ಮೇಲೆಯೇ ಆ ವಸ್ತ್ರವನ್ನು ಹೊದೆದುಕೊಂಡು ಮಲಗಿಕೊಂಡೆ. ಮತ್ತೆ ನನಗೆ ಎಚ್ಚರವಾದಾಗ ಹೊತ್ತು ಮುಳುಗಿತ್ತು. ಕಾಗೆಗಳು ಕೂಗುತ್ತಿದ್ದುವು. ಕತ್ತಲು ಹರಡಿಕೊಳ್ಳುತ್ತಾಯಿತ್ತು. ನಿನ್ನೆ ಸಂಜೆ ಈ ಹೊತ್ತಿನಲ್ಲಿ ಹೊಲದಲ್ಲಿ ಮಲಗಿ ಯೋಚಿಸುತ್ತಿದ್ದೆ. ಈ ದಿನ ಸಂಜೆ ಈ ಹೊತ್ತಿಗೆ ಕಷ್ಟಗಳು ಬಗೆಹರಿದುವೆಂಬಂತೆ, ಮುಂದಿನ ವಿಷಯ ಏನೇ ಆದರೂ, ಸುಖವಾಗಿ ಕುಳಿತುಕೊಂಡಿರುವೆ. ಆ ತಾಯಿ ತನ್ನ ಮಕ್ಕಳಿಗೆ ಅನ್ನ ಬಡಿಸುತ್ತಾ, ನನ್ನನ್ನೂ ಸಹ ಕರೆದು ಊಟಕ್ಕಿಕ್ಕಿದಳು. ನಾನು ಕೇವಲ ಸಾಂಬಾರು ಕಾರದೊಡನೆಯೇ ಅನ್ನವನ್ನುಂಡೆ. ಆ ತಾಯಿ ನನಗೆ ಹಾಲು ಹಾಕಿದಳು. ನಾನು ಬಂಧುವಾದರೂ ನನ್ನ ಚಿಕ್ಕಮ್ಮನವರ ಮನೆಯಲ್ಲಿ ಒಂದಿಷ್ಟು ಮಜ್ಜಿಗೆಯನ್ನೂ ಊಟ ಮಾಡಿ ಅರಿಯೆ. ಇವರಿಗೂ ನನಗೂ ಸಂಬಂಧವಿಲ್ಲ. ಇವರು ನನಗೆ ಹಾಲು, ಮೊಸರು ಹಾಕಿ ಅನ್ನವಿಟ್ಟರು. ಊಟಮಾಡಿ ಮತ್ತೆ ಜಗುಲಿಯ ಮೇಲೆ ಮಲಗಿಕೊಂಡೆ. ಮತ್ತೆ ನಿದ್ರೆ ಬಂದಿತು. ನಿದ್ದೆಯಲ್ಲಿ ತಲೆಗೂದಲು ಬಿರಿಹುಯ್ದುಕೊಂಡ ದೆವ್ವಗಳು ಕಾಣಿಸುವುದೂ, ಕೊಚ್ಚೆ–ಕೊಳಚೆ ನೀರು ತುಂಬಿದ ಗುಣಿಗಳಲ್ಲಿ ಮುಗ್ಗರಿಸಿ ಬೀಳುವುದೂ, ನಾಯಿಗಳು ಕಚ್ಚಲು ಬರುವುದೂ, ಕಳ್ಳನೆಂದು ಕೆಲವರು ಹಿಡಿದುಕೊಳ್ಳುವುದೂ, ನನ್ನನ್ನು ಎಲ್ಲರೂ ತಲಾ ಒಂದು ಪೆಟ್ಟು ಕೊಡುವುದೂ–ಇವೇ ಕನಸುಗಳು, ರಾತ್ರಿ ಎರಡನೆಯ ಜಾಮದಲ್ಲಿ, 'ಅಮ್ಮಾ....' ಎಂದೆದ್ದು ಅಳುತ್ತಾ ಕುಳಿತೆನಂತೆ. ನನ್ನ ಪಕ್ಕದಲ್ಲಿಯೇ ಅವರ ಜೀತದಾಳು ಗೊಲ್ಲರವನು ಮಲಗಿದ್ದ. ಅವನು ಎದ್ದು, 'ಭಯವಿಲ್ಲೇಳು' ಎಂದು ಬೆನ್ನು ತಟ್ಟಿ ಜೋಹಾಕುತ್ತಾ ಮಲಗಿಸಿಕೊಂಡ. ನಾನು ಅವನ ಪಕ್ಕದಲ್ಲಿ ಸೇರಿ ಮುದುಡಿ ಮಲಗಿಕೊಂಡೆ. ಬೆಳಗಾಯಿತು.

೩

ಆ ಬೆಳಗ್ಗೆಯೇ ಎದ್ದು ನಾನು ದನಗಳ ಕಣ್ಣಿ ಬಿಚ್ಚಿ ಗೋಮಾಳಕ್ಕೆ ಹೊಡೆದುಕೊಂಡು ಹೋಗಲೆಂದು ಯತ್ನಿಸಿದೆ. ಆ ರೈತನ ಹೆಂಡತಿ, "ಮಗೂ, ಒಂದಿಷ್ಟು ಅನ್ನ ತಿಂದು ಹೋಗುವಿಯಂತೆ ಬಾ" ಎಂದು ಕರೆದು ಅನ್ನವಿಕ್ಕಿದಳು. ಅವರ ದನಗಳನ್ನು ಕಾಯುವ

ಹೈದನಿದ್ದನು. ಅಷ್ಟರಲ್ಲಿಯೇ ಅವನು ಬಂದು ದನಗಳನ್ನು ಹೊಡೆದುಕೊಂಡು ಹೋದ. ನಾನೇನು ಮಾಡಬೇಕು? ಮಾರುದ್ದ ಹೊತ್ತೇರುತ್ತಲೇ ಆತ ಬಂದ. ಬಂದು, ಕಾಲು ತೊಳೆದುಕೊಂಡು, ಊಟಮಾಡಿ, ಚುಟ್ಟಾ ಅಂಟಿಸಿಕೊಳ್ಳುತ್ತಾ ನನ್ನನ್ನು ಮಾತನಾಡಿಸಿದ. ನಮ್ಮೂರಿಗೆ ಯಾರೋ ಹೋಗುತ್ತಿದ್ದರೆ, ಅವರನ್ನು ಕರೆದು 'ಈ ಮಗೂನ ಆ ಊರಿನಲ್ಲಿ ಬಿಟ್ಟು ಬನ್ನಿ' ಎಂದ.

ನಾನೇನೆನ್ನಲಿ? ಆಗಲಿ ಎಂದು ಹೊರಡಲೆ? ಇಲ್ಲಿಯೇ ಇದ್ದುಬಿಡುತ್ತೇನೆಂದು ಉಳಿದುಬಿಡಲೇ? ಆದರೆ ಅವರು ನನ್ನ ಬಗ್ಗೆ ತೋರಿದ ದಯೆಯಿಂದಾಗಿ ನನ್ನಲ್ಲೊಂದು ತೆರನಾದ ಧೈರ್ಯ ಬಂದು, 'ನಾನಾವೂರಿಗೆ ಹೋಗಲ್ಲಾರೀ, ನಿಮ್ಮನೇಲೆ ಇರ್ತೇನೆ. ನಿಮ್ಮ ದನಾ ಕಾಯ್ತೇನೆ. ನಿಮ್ಮನೆಯ ಕೆಲಸಗಳನ್ನೆಲ್ಲಾ ಮಾಡ್ತೇನೆ. ನನಗೊಂದಿಷ್ಟು ಅನ್ನ ಹಾಕಿ, ಸಾಕು' ಎಂದೆ.

ಆತ, 'ನಿನಗಾಗಿ ನಿಮ್ಮೋರೆಲ್ಲಾ ಹುಡುಕೋಲ್ಲವೇ?' ಎಂದ. ನಾನು, "ಹುಡುಕೋಲ್ಲಾರೀ. ನಾನು ಬರ್ಲಿಲ್ಲಾಂತ ಅಲ್ಲಿ ಒದ್ಕೊಳ್ಳೋರು ಯಾರೂ ಇಲ್ಲ. ನನ್ನ ಚಿಕ್ಕಮ್ಮ ಒಬ್ಬಳು ಮಾತ್ರವೇ ಒಂದಿಷ್ಟು ಒದ್ಕೋತಾಳೇನೋ! ಎಲ್ಲಿಗೋ ಹೋಗ್ಬಿಟ್ಟಿದಾನೆ ಅಂತ ಸುಮ್ಮನಾಗಿಬಿಡ್ತಾಳೆ. ನನಗಲ್ಲಿ ಸರಿಯಾಗಿ ಅನ್ನಾ ಹಾಕೋಲ್ಲ. ನನ್ನನ್ನು ಹೊಡೆಯುತ್ತಾರೆ" ಎಂದು ನುಡಿದೆ.

ಆತ, 'ಸರಿ ಬಿಡು' ಎಂದು ಸುಮ್ಮನಾದ. ನಾನು, 'ನಿಮ್ಮ ದನ ಕಾಯೋ ಆಳನ್ನು ತೆಗೆದುಹಾಕ್ಬಿಡಿ, ನಾನೇ ಕಾಯ್ತೇನೆ' ಎಂದೆ. ನಾನವರ ಎಲ್ಲ ಮನೆಗೆಲಸಗಳನ್ನೂ ಮಾಡಲು ನನ್ನಷ್ಟಕ್ಕೆ ನಾನೇ ಮೊದಲಿಟ್ಟೆ ನಮ್ಮ ತಾತನವರ ಮನೆಯಲ್ಲಿ ಯಾವ ಯಾವ ಕೆಲಸಗಳನ್ನು ಮಾಡುತ್ತಿದ್ದೆನೋ ಅವೆಲ್ಲವನ್ನೂ ಇಲ್ಲಿಯೂ ಮಾಡುತ್ತಿರುವೆ. ಅಲ್ಲಿಗೂ ಇಲ್ಲಿಗೂ ಒಂದೇ ವ್ಯತ್ಯಾಸ. ಅಲ್ಲಿ ನನಗೆ ಪಾಲನೆ–ಪೋಷಣೆಗಳಿರಲಿಲ್ಲ. ಅಲ್ಲಿ ನಾನೆಷ್ಟು ದುಡಿದರೂ ಮೆಚ್ಚಿಗೆ ಎಂಬುದೇ ಇರುತ್ತಿರಲಿಲ್ಲ. ಮೇಲಾಗಿ ಹೊಡೆತ–ಬಡಿತಗಳು. ಇಲ್ಲಾದರೋ? ಆ ರೈತನ ಹೆಂಡತಿ ತನ್ನ ಮಕ್ಕಳೊಂದಿಗೆ ನನಗೂ ಊಟಕ್ಕಿಡುತ್ತಿದ್ದಳು. ಆಕೆಗೆ ಇಬ್ಬರು ಗಂಡು ಮಕ್ಕಳು, ಅವರಿಬ್ಬರೂ ನನಗಿಂತಲೂ ಚಿಕ್ಕವರು. ಒಂದು ಹೆಣ್ಣು ಹುಡುಗಿ. ಆಕೆ ನನಗಿಂತ ದೊಡ್ಡವಳು. ಆದರೆ ಆ ಹುಡುಗಿಗೆ ಸ್ವಲ್ಪ ಹುಚ್ಚು. ಯಾವಾಗಲೂ ತಲೆ ಬಿರಿಹುಯ್ದುಕೊಂಡು ಊರಲ್ಲಿ ತಿರುಗಾಡುತ್ತಿದ್ದಳು. ತಾಯಿ ನೂರಕ್ಕೋ, ಕೋಟಿಗೋ ಕರೆದು ತಲೆ ಬಾಚುತ್ತಿದ್ದಳು. ಆ ಹುಡುಗಿಯ ವಿಷಯವನ್ನು ಆಮೇಲೆ ಹೇಳುತ್ತೇನೆ.

ಇಷ್ಟಕ್ಕೂ ಆ ರೈತನ ಹೆಂಡತಿಗೆ ಮನೆಗೆಲಸಗಳಲ್ಲಿ ಕೈಯಾಸರೆ ಇರಲಿಲ್ಲ. ನಾನು, ಮನೆ, ಮನೆಯಂಗಳವನ್ನು ಗುಡಿಸುತ್ತಿದ್ದೆ. ದೀಪದ ಬುಡ್ಡಿಗಳಿಗೆ ಎಣ್ಣೆ ಹಾಕುತ್ತಿದ್ದೆ. ಹಾಸಿಗೆಗಳನ್ನು ಹಾಸುತ್ತಿದ್ದೆ. ಸೆಗಣಿ ತುಳಿದು ಬೆರಣಿಗಳನ್ನು ತಟ್ಟುತ್ತಿದ್ದೆ. ಕೋಮಟಿಗನ ಮನೆಯಿಂದ ಏನು ತರಬೇಕಾಗಿ ಬಂದರೂ ಹೋಗಿ ತರುತ್ತಿದ್ದೆ. ಈ ಕೆಲಸವೆಲ್ಲಾ ನನಗೆ ಇಷ್ಟ ಮಾಡಿದೆನೆಂದು ಮೆಚ್ಚಿಕೊಳ್ಳುವವರಿದ್ದರಾಗಲೀ ಮಾಡಲಿಲ್ಲವೆಂದು ಗೊಣಗುವವರಿಲ್ಲ. ಅಷ್ಟರಲ್ಲಿ ಅವರ

ಜೀತದಾಳು ಬಿಟ್ಟುಬಿಟ್ಟ. ನನ್ನ ಜೀವನದಲ್ಲಿ ಜೀವ ಬಂದಂತಾಯಿತು. ನಾನೇ ದನಗಳನ್ನು ಕಾಯಲು ಮೊದಲಿಟ್ಟೆ

ನಾನು ಬಂದು ಹದಿನೈದು ದಿನಗಳಾದುವು. ಒಂದು ದಿನ ನಮ್ಮೂರಿನಿಂದ ಒಬ್ಬ ಗೊಲ್ಲರವನು ಬಂದ. ಅವನು ನನ್ನನ್ನು ಮೊದಲು ಗುರುತು ಹಿಡಿಯಲಿಲ್ಲ. ನಾನು ತಲೆ ನುಣ್ಣಗೆ ಬೋಳಿಸಿಕೊಂಡಿದ್ದುದರಿಂದ ಅವನು ನನ್ನನ್ನು ಮೇಲೆ ಕೆಳಗೆ ನೋಡಿ, ಆಮೇಲೆ ಗುರುತು ಹಿಡಿದು, "ಏನಯ್ಯಾ! ನಿನ್ನ ಚಿಕ್ಕಮ್ಮ ಭೋ ಪೇಚಾಡ್ತಾ ಅವ್ಳೆ ನೀನು ಸತ್ತೋಗಿಬುಟ್ಟೆ ಅಂತ ಅಂದ್ಕೊಂಡವ್ರೆ ಆಯಮ್ಮ. ಆ ಊರಿಗೆ ಹೋಗೋರ್ನ, ಈ ಊರಿಗೆ ಹೋಗೋರ್ನ ಕರ್ದು ನಮ್ಮಗಾ ಅಲ್ಲೆಲ್ಲಾರ ಐತೇನೋ ಹುಡ್ಕೊಂಬನ್ರಣ್ಣ, ಅಂತ ಗೋಗರಿತಾ ಅವ್ಳೆ ನನ್ ಕೈಲೂ, ನಮ್ಮುಡುಗನ್ನೇನಾರ ಹುಡ್ಕೊಂಬಂದ್ಯೋ ನಿನಗೊಂದು ಮೊರಾ ಜೋಳಾ ಕೊಡ್ತೀನಿ ಅಂತ ಹೇಳ್ಕೊಂಡ್ಳು. ಬಾ, ನಮ್ಮೂರಿಗೆ ಹೊರಟೋಗೋಣ" ಎಂದ. 'ನಾನು, ಬರಾಕಿಲ್ಲ, ನಾನು ಚೆಂದಾಗಿವ್ನಿ ಅಂತ ನಮ್ಮ ಚಿಕ್ಕಮ್ಮನಿಗೆ ಹೇಳ್ಬಿಡು' ಎಂದೆ. ಅವನು ಹೊರಟುಹೋದ.

ನಾನು ಇನ್ನೊಂದು ವಿಷಯವನ್ನು ಹೇಳಲು ಮರೆತುಬಿಟ್ಟೆ. ಆ ಮನೆಯಲ್ಲಿ ನನಗೆ ಹಾಸಿಗೆಯನ್ನೊದಗಿಸಿದರು. ಒಂದು ಕಂಬಳಿ, ಒಂದು ಹೊದಿಕೆ, ಉಟ್ಟುಕೊಳ್ಳುವುದಕ್ಕೆ ಎರಡು ಉತ್ತರೀಯಗಳನ್ನೂ ಕೊಟ್ಟರು. ನನ್ನ ಬಟ್ಟೆಗಳನ್ನೂ ಸಹ ಅಗಸರವನು ಒಗೆದುಕೊಂಡು ಬರತೊಡಗಿದನು. ಅವರ ಜಗುಲಿಯ ಮೇಲೆ ಮಲಗಿಕೊಳ್ಳಲು ನನಗಾಗಿ ಒಂದು ಪ್ರತ್ಯೇಕ ಸ್ಥಳವಿತ್ತು. ಅದಕ್ಕೆ ನನ್ನ ಸ್ಥಳವೆಂದು ಹೆಸರು. ಆ ರೈತನ ಹೆಂಡತಿ ಎಷ್ಟೋ ಸಲ ನನ್ನನ್ನು ಮನೆಯ ಒಳಗೇ ಮಲಗಿಕೋ ಎಂದಳು. "ಚಿಕ್ಕಮ್ಮಾ, ನನಗೇನೂ ಭಯವಿಲ್ಲ" ಎನ್ನುತ್ತ ನಾನೇ ಜಗುಲಿಯ ಮೇಲೆ ಮಲಗಿಕೊಳ್ಳುತ್ತಿದ್ದೆ.

ಒಂದು ದಿನ ಸಾಯಂಕಾಲ ನಾನು ಗೋಮಾಳದಿಂದ ಮನೆಗೆ ಬರಲು ತಡವಾದ್ದರಿಂದ, ಆ ತಾಯಿಯೇ ಹಾಸಿಗೆಗಳನ್ನೆಲ್ಲಾ ಹಾಸಿದ್ದಳು. ನಾನು ಆ ತಾಯಿಯನ್ನು ಮೊದಲ ದಿನದಿಂದ ಚಿಕ್ಕಮ್ಮಾ ಎಂದು ಕರೆಯಲಾರಂಭಿಸಿದ್ದೆ. ಆಕೆ ನನ್ನ ಹಾಸಿಗೆ ಹಾಸುತ್ತಿರುವಾಗ, "ಚಿಕ್ಕಮ್ಮಾ! ನನ್ನ ಹಾಸಿಗೆಯನ್ನು ಹಾಸಬೇಡಿ." ಎಂದೆ. ಆಕೆ, "ಪರವಾಗಿಲ್ಲ ಮಗೂ" ಎಂದಳು. ಸುಖವೆಂದರೆ, ಆನಂದವೆಂದರೆ ನನಗೆ ಕೊಂಚಕೊಂಚ ರುಚಿ ತಿಳಿದುಬರಲು ಪ್ರಾರಂಭವಾಯಿತು. ನನಗೇ ಆಶ್ಚರ್ಯವಾಯಿತು; ನಾನು ಆ ಸುಖವನ್ನೂ, ಆ ಆನಂದವನ್ನೂ ಅನುಭವಿಸಲಾರೆನೇನೋ ಎಂದೆನ್ನಿಸಿತು.

ಮರುದಿನ ಇನ್ನೊಂದು ವಿಷಯ ನಡೆಯಿತು. ಆ ದಿನ ಬೆಳಗ್ಗೆಯೇ ಆ ರೈತ ಹಲ್ಲುಜ್ಜಲು ಬೇವಿನಕಡ್ಡಿ ಬೇಕೆಂದು ಗೊಲ್ಲರ ಹುಡುಗನಿಗೆ ಮುರಿದು ತರಲು ಹೇಳಿದ. ನಾನಾಗ ಮನೆಯಂಗಳವನ್ನು ಗುಡಿಸುತ್ತಾ ಇದ್ದೆ. ಆ ಗೊಲ್ಲರವನು ನನ್ನನ್ನು ಮರ ಹತ್ತಿ ಮುರಿದುಕೊಡು ಎಂದ. ಆ ರೈತ ಅವನನ್ನು ಬೈಯ್ದು, "ಆ ಹಸುಳೆ ಮರ ಹತ್ತಬಲ್ಲನೇನೋ? ಮೂರ್ಖಾ! ನೀನೇ ಹತ್ತು" ಎಂದ. ನನಗೆ ಅಳು ಬಂದಿತು. ನಾನು ಅತ್ತುಬಿಟ್ಟೆ ಆತ ನನ್ನನ್ನು 'ಏಕೆ ಅಳುತ್ತೀಯೆ?' ಎಂದು ಕೇಳಿದ. ನಾನು ಏನೂ ಇಲ್ಲ ಎಂದೆ.

ನನಗೆ ಅಳುವೇ ಸಹಜ. ನನಗೆ ಆನಂದ ಉಂಟಾಗಿ ಅಳು ಬಂದಿತ್ತು ಅದು ನನಗೆ ಮೊದಲು ಗೊತ್ತಾಗಲಿಲ್ಲ.

ಆ ದಿನ ಮಧ್ಯಾಹ್ನ ಆ ರೈತನ ಹೆಂಡತಿ, 'ಆಗ ಯಾಕೆ ಅತ್ತೆ?' ಎಂದು ಕೇಳಿದಳು. ನನ್ನ ಚಿಕ್ಕಮ್ಮನ ಊರಿನಲ್ಲಿ ನಾನು ಬೇವಿನ ಕಡ್ಡಿಗಳನ್ನು ಮುರಿಯಲು ಮರ ಹತ್ತುತ್ತಿದ್ದುದೂ, ನನ್ನ ಚಿಕ್ಕಮ್ಮನ ಭಾವನ ಮಗ ಆಡುತ್ತಿದ್ದ ಮಾತುಗಳನ್ನೂ ಹೇಳಿದೆ. ಆಕೆ, "ಅವನ ಮುಖಾ ಸುಡ್ತು ಬಿಡು. ನೀನು ಮರ ಹತ್ತೋದೇನೂ ಬೇಡ" ಎಂದಳು. ಆ ದಿನ ರಾತ್ರಿ ನನಗೆ ಅನ್ನದಲ್ಲಿ ಕೆನೆ ಹಾಕಿದಳು.

ಅವರದು 'ಇದ್ದ' ಸಂಸಾರ. ಒಕ್ಕಲಿಗರಾದರೂ 'ಬುಡ ಭದ್ರ'ವಾಗಿರುವವರಾದ್ದರಿಂದ ಅವರ ಮನೆಯಲ್ಲಿ ಆಚಾರಗಳೂ, ಮರ್ಯಾದೆಗಳೂ ಕೊಂಚ ಹೆಚ್ಚುಗಟ್ಟಲೆಯಾಗಿಯೇ ನಡೆಯುತ್ತಿದ್ದವು. ಸಾಮಾನ್ಯವಾಗಿ, ಒಕ್ಕಲಿಗ, ಕಮ್ಮಾ, ರೆಡ್ಡಿ ಹೆಂಗಸರು ಹಾಲು, ಮೊಸರು, ಬೆಣ್ಣೆಗಳನ್ನು ಮಾರುತ್ತಾರೆ. ಆಕೆಯೂ ಸಹ ಮಾರುತ್ತಾರೆ; ಆದರೆ ಮನೆಯಲ್ಲಿ ಸುಖವಾಗಿ ಉಂಡ ಬಳಿಕ ಉಳಿದುದನ್ನು ಮಾರುತ್ತಾಳಷ್ಟೇ.

ಆತ ಕೆಂಚಗೆ, ಠೀವಿಯಾಗಿ, ದೊಡ್ಡ ಕುಳದ ಹಾಗೆ, ಬ್ರಾಹ್ಮಣನಂತೆ ಕಂಡುಬರುತ್ತಿದ್ದ. ಆಕೆ ಅಂದವಾಗಿಯೇನೂ ಇರಲಿಲ್ಲ. ಆಕೆಗೆ ಉಬ್ಬು ಹಲ್ಲು. ತುಂಬ ಕಪ್ಪಾಗಿದ್ದಳು. ಅನಾಗರಿಕವಾಗಿದ್ದಳು. ಆಕೆಯೆಂದರೆ ಆತನಿಗೆ ಪಂಚಪ್ರಾಣ; ಬಿದ್ದು ಸಾಯ್ತಾ ಇದ್ದ. ಆಕೆಯ ಅಂದವನ್ನು ನೋಡಿಯಲ್ಲ; ಆಕೆಯ ಭಾಗ್ಯ ನೋಡಿ. ಆಕೆ ಮನೆಗೆ 'ನಡೆಯಲು' ಬಂದಂದಿನಿಂದ ಮೊದಲುಗೊಂಡು ಸಂಸಾರಕ್ಕೆ 'ಶುಕ್ರದೆಸೆ' ತಗುಲಿತ್ತಂತೆ. ಆಕೆಯ ಮನಸ್ಸಿನ ಮುಂದೆ ಆಕೆ ಕರೆಯುವ ಹಾಲೂ ಬೆಣ್ಣೆ ಯಾವ ಲೆಕ್ಕಕ್ಕೆ ಅನ್ನಿಸುತ್ತದೆ! ಇವೆಲ್ಲಾ ನನಗೆ ಆಗ ತೋಚಿದ ಆಲೋಚನೆಗಳಲ್ಲ. ಆಗ ನನಗೇ ಆಲೋಚನೆಗಳು ಲೀಲಾಮಾತ್ರವಾಗಿದ್ದುವು. ಈಗ ಅವು ಚೆನ್ನಾಗಿ ದೃಢಪಟ್ಟಿವೆ.

ಆ ಊರಿನಲ್ಲಿ ನನ್ನ ವಿಷಯದ ಕುರಿತು ಕೊಂಚ ಹೇಳುತ್ತೇನೆ. ನಮ್ಮ ತಾತನವರ ಊರಿನಲ್ಲಿ ನನಗಿದ್ದ ಹೆಸರುಗಳನ್ನು ಹೇಳಿರುವೆ ತಾನೇ! ಕರಡಿ ತಲೆ, ಆನೆ ಕಿವಿಯೋನೇ ಎಂದು. ಇಲ್ಲಿಗೆ ಬಂದ ಮೇಲೆ ಈ ಊರಿನವರು ನನಗೊಂದು ಹೆಸರಿಟ್ಟರು, ಕಳ್ಳ ಎಂದು. ಕರಡಿ ತಲೆ ಎಂಬ ಹೆಸರು ಹೊರಟುಹೋಗಲೆಂದೂ, ಅದರಿಂದುಂಟಾಗುತ್ತಿದ್ದ ಬಾಧೆಯನ್ನು ನೀಗಿಕೊಳ್ಳಲೆಂದೂ ನಾನು ಪಟ್ಟ ಪಾಡುಗಳನ್ನೆಲ್ಲಾ ನಿಮಗೆ ತಿಳಿಸಿಯೇ ಇರುವೆನಲ್ಲಾ! ಈ ಕಳ್ಳನೆಂಬ ಹೆಸರು ಹೇಗೆ ಹೋಗುತ್ತದೆ? ಶರೀರದಲ್ಲಿನ ಯಾವ ಭಾಗವನ್ನು ಕತ್ತರಿಸಿಕೊಂಡರೆ ಹೋದೀತು? ಸತ್ತರೆ ಮಾತ್ರ ಹೋದೀತೇನೋ! ನಾನು ಸಾಯುತ್ತೇನೆಂಬುದು ಇರಲಾರದು. ಆ ದಿನ ರಾತ್ರಿಯೇ ಸಾಯದ ನಾನು ಮತ್ತೆ ಸಾಯಲು ಸಾಧ್ಯವಾಗುತ್ತದೆಯೇ? ನಾನು ಸಾಯುವುದು ಆ ಭಗವಂತನಿಗೇನೇ ಇಷ್ಟವಿಲ್ಲ. ಆದರೆ ನನಗೆ ಊರಿನೊಂದಿಗೇನು ಕೆಲಸ? ಕಳ್ಳ ಎಂಬ ಮಾತು ನೂರಕ್ಕೋ ಕೋಟಿಗೋ ಕೇಳಿಸುತ್ತಿತ್ತು. ಆದರೆ ಆ ರೈತ ನನ್ನನ್ನು ಆದರಿಸಿದ್ದರಿಂದ ಊರಿನವರು ನಾನೆಂದರೆ ಕೊಂಚ ಮರ್ಯಾದೆ ಏರ್ಪಟ್ಟಿತು. ಆ ಮುಂಚೆ

ನ್ನನ್ನು ಕಳ್ಳನೆಂದು ಹೊಡೆದ ಹೊಡೆತಗಳಿಗೆ, ನಡೆಸಿದ ಗಲಾಟೆಗೆ, ಊರಿನಲ್ಲಿ ಬಹಳ ಜನ ದಯೆಯನ್ನು ವ್ಯಕ್ತಪಡಿಸುತ್ತಿದ್ದರು. ನನ್ನನ್ನು ಕಂಡಾಗಲೆಲ್ಲ ಬಹಳ ಜನ 'ಪಾಪ! ವೃಥಾ ತುಂಬ ಹೊಡೆತಗಳನ್ನು ತಿಂದ' ಎನ್ನುತ್ತಿದ್ದರು. ಇದೊಂದು ತೆರನ ದಯೆ.

ನಿಜಕ್ಕೂ ನಾನು ಅವರ ಮನೆಯಲ್ಲಿ, ನಮ್ಮ ತಾತನವರ ಮನೆಯಲ್ಲಿ ಗೇಯುತ್ತಿದ್ದುದಕ್ಕಿಂತಲೂ ಹೆಚ್ಚಿಗೆ ಗೇಯುತ್ತಿದ್ದೆ. ಆಕೆಗೆ ಇಬ್ಬರು ಗಂಡು ಮಕ್ಕಳೆಂದು ಹೇಳಿರುವೆನಲ್ಲಾ. ಎರಡನೆಯವನು ಮೂರು ವರ್ಷದವನು. ಆ ರೈತನಿಗೆ ಸಂತಾನ ತಡವಾಗಿ ಆಯಿತಂತೆ. ಮದುವೆಯೇ ತಡವಾಗಿ ಆಯಿತಂತೆ. ಆ ಮೂರು ವರ್ಷದ ಮಗುವನ್ನು ನಾನು ಯವಾಗಲೂ ಎತ್ತಿಕೊಂಡು ತಿರುಗಾಡುತ್ತಿದ್ದೆ. ಆಕೆ ನಾನು ಯಾವ ಕೆಲಸವನ್ನು ಮಾಡುತ್ತಿದ್ದರೂ 'ಬೇಡ ಬಿಡು ಮಗಾ' ಎನ್ನುತ್ತಿದ್ದಾಕೆ, ಆ ಮಗುವನ್ನು ಎಷ್ಟು ಹೊತ್ತು ಎತ್ತಿಕೊಂಡಿದ್ದರೂ ಬೇಡವೆನ್ನುತ್ತಿರಲಿಲ್ಲ. ಆಕೆಯ ಮಗಳಿಗೆ ಕೊಂಚ ಹುಚ್ಚು ಎಂದು ಹೇಳಿದೆನಲ್ಲವೇ? ಆ ಹುಡುಗಿ ಅತ್ತ ಇತ್ತ ಹೋಗದಂತೆ ನೋಡಿಕೊಳ್ಳಬೇಕಾದ ಕೆಲಸವೊಂದಿತ್ತು ಅವರ ಮನೆಯಲ್ಲಿ ಆ ಹುಡುಗಿಯೊಮ್ಮೆ ಆ ಊರ ಕೊನೆಯಲ್ಲಿರುವ ಬಾವಿಯಲ್ಲಿ ಬಿದ್ದುಬಿಡುವವಳಾಗಿದ್ದಳು. ನಾನು ಆ ಹುಡುಗಿಯನ್ನು ಬೀಳದಂತೆ ಹಿಡಿದುಕೊಂಡೆ. ಅಂದಿನಿಂದಲೂ ನಾನೆಂದರೆ ಅವರಿಗೆ ಮತ್ತಿನ್ನಷ್ಟು ದಯೆ ಏರ್ಪಟ್ಟಿತು. ಆ ರೈತ, ಆ ರೈತನ ಮಡದಿ ನನ್ನನ್ನು, 'ಮಗೂ' ಎಂದು ಕರೆಯುತ್ತಿದ್ದರು. ಒಂದು ತಿಂಗಳು ದಿನಮಾನವಾಗುತ್ತಲೇ ನಾನು ಅವರ ಮಗನೋ, ದಿಕ್ಕುದೆಸೆಯಿಲ್ಲದೆ ಅವರ ಮನೆ ಸೇರಿದ ಭಿಕಾರಿಯೋ ನನಗೇ ತಿಳಿಯದಾಯಿತು.

ಹೀಗೆಯೇ ಎರಡು ವರ್ಷಗಳು ಕಳೆದುಹೋದುವು.

ನನ್ನ ಅಸಲು ಕಥೆ ಈ ಎರಡೂ ವರ್ಷಗಳು ಕಳೆದ ಮೇಲೆಯೇ ಪ್ರಾರಂಭವಾಗುತ್ತದೆ. ಈ ಎರಡು ವರ್ಷಗಳಲ್ಲಿ ನಾನು ಪಟ್ಟಿರುವುದು ಸುಖವನ್ನೇ. ಆ ಮನೆಗೆ ನಾನು ಹಿರಿಯ ಮಗನಾದೆ. ಈ ವಿಷಯವನ್ನು ಹೇಳುವ ಮೊದಲು, ಮತ್ತೆರಡು ವಿಷಯಗಳನ್ನು ಹೇಳಬೇಕಾಗಿದೆ. ಮೊದಲನೆಯದು ನನ್ನ ಚಿಕ್ಕಮ್ಮನ ವಿಷಯ–ಆ ಗೊಲ್ಲರವನು ಇಲ್ಲಿಂದ ಹೋಗಿ, ನಾನು ಈ ಊರಿನಲ್ಲಿದ್ದೇನೆ ಎಂದು ತಿಳಿಸಿದ ಮೇಲೆ, ನನ್ನ ಚಿಕ್ಕಮ್ಮ ನನಗಾಗಿ ಮತ್ತೆರಡು ಸಾರಿ ಕರೆ ಕಳಿಸಿದಳು. ನಾನು ಹೋಗಲಿಲ್ಲ. ಹೋಗಿ ನನ್ನ ಚಿಕ್ಕಮ್ಮನನ್ನು ನೋಡಿಕೊಂಡು ಬರೋಣವೆಂಬ ಮನಸ್ಸಿದ್ದಾಗಲೀ ನಾನೊಮ್ಮೆ ಅಲ್ಲಿಗೆ ಹೋದರೆ, ಈ ರೈತ ನನ್ನನ್ನು ಕೈ ಬಿಟ್ಟುಬಿಡುತ್ತಾನೇನೋ ಎಂದು ಒಳಗೊಳಗೇ ಭಯವಿತ್ತು. ತೀರಾ ಅಲ್ಲಿಗೆ ಹೋದ ಮೇಲೆ, ಅವರು ನನ್ನನ್ನು ಬಲವಂತದಿಂದ ನಿಲ್ಲಿಸಿಕೊಂಡುಬಿಡುತ್ತಾರೇನೋ ಎಂಬ ಭಯ ಬೇರೆ. ಆಮೇಲೆ, ಒಂದು ತಿಂಗಳು ಕಳೆದ ಮೇಲೆ, ಒಬ್ಬ ಗೊಲ್ಲರವನನ್ನು ಹಿಂದಿಟ್ಟುಕೊಂಡು, ನನ್ನ ಚಿಕ್ಕಮ್ಮನೇ ನಾನಿರುವಲ್ಲಿಗೆ ಬಂದಳು.

ಆ ದಿನ ನನ್ನ ಚಿಕ್ಕಮ್ಮಗೆ ಆನಂದವುಂಟಾಗುವ ವಿಷಯವೊಂದು ನಡೆಯಿತು. ಆ ಮನೆಯಲ್ಲಿ ನಾನು ದೊಡ್ಡ ಮಗನಾತಿರುವೆನೆಂದು ಹೇಳಿದೆನಲ್ಲವೇ. ದೊಡ್ಡ ಮಗನೆಂದರೆ

ಆ ಗಂಡಹೆಂಡತಿಯರಿಬ್ಬರೂ ನನ್ನನ್ನು ಪ್ರೇಮದಿಂದ ನೋಡಿಕೊಳ್ಳುವುದರಲ್ಲೊಂದರಲ್ಲಿಯೇ ಅಲ್ಲ; ಆ ಜೇಷ್ಠಪುತ್ರತ್ವ ನನ್ನಲ್ಲಿಯೇ ಬಲಿತಿತ್ತು; ಒಮ್ಮೊಮ್ಮೆ ಆಕೆ ಯಾವುದಾದರೂ ಕೆಲಸ ಹೇಳಿದರೆ ಮಾಡದಂತಿದ್ದುಬಿಡುವುದು; ಕೋಪ ಮಾಡಿಕೊಂಡು ಊಟ ಮಾಡದೆ ಮಲಗಿಕೊಂಡುಬಿಡುವುದು; ಆಗ ಆಕೆಯಾಗಲೀ, ಆತನಾಗಲೀ ಬಂದು ನನ್ನನ್ನು ಗೋಗರೆಯುವುದು– ಇಲ್ಲಿಗೆ ಬಂದಿತ್ತು ನನ್ನ ಸ್ಥಿತಿ. ನಾನು ಇಂಥವುಗಳನ್ನು ಎಷ್ಟೋ ಸಲ ಮಾಡಲಿಲ್ಲ. ತರುವಾಯ ನನಗೆ ನಾನೇ ಯೋಚಿಸಿಕೊಂಡೆ, 'ಹೊಟ್ಟೆಗಿಲ್ಲದೆ ಇವರ ಮನೆ ಸೇರಿದೆ. ಇವರು ಒಳ್ಳೆಯವರಾದ್ದರಿಂದ ಸರಿಹೋಯಿತು. ನಮ್ಮ ತಾತನವರ ಮನೆಯಲ್ಲಿ ಹೊಡೆತಗಳು ತಪ್ಪಿದ್ದು ಸಾಲದೆ, ನನ್ನ ಈ ಬಾಳ್ವೆಗೆ ಈ 'ಆಟ'ಗಳು ಬೇರೆಯೋ? ಏನಿದು?' ಎಂದುಕೊಂಡೆ.

ಮೊದಲ ನಾಲ್ಕು ತಿಂಗಳಲ್ಲಿ ಇಂಥವು ಎರಡು ಮೂರು ಸಲ ನಡೆದುವು. ಅನಂತರ ನಾನೇ ಬಿಟ್ಟುಬಿಟ್ಟೆ ಹೀಗೆ ನಡೆಯಲು ಕಾರಣವಿದೆ. ಅವರ ಹಿರಿಯ ಮಗ ತುಂಬ ಬಲಹೀನ. ಏಳು ವರ್ಷದವನಾದರೂ ಐದು ವರ್ಷದವನ ಹಾಗೆಯೇ ಕಾಣುತ್ತಿದ್ದ. ಹೆಚ್ಚಿನ ಬುದ್ಧಿವಂತಿಕೆ, ತಿಳಿವಳಿಕೆಗಳಿದ್ದವನಲ್ಲ. ನಾನು ಆತನನ್ನು ಚಿಕ್ಕಪ್ಪಾ ಎನ್ನುವುದು, ಆಕೆಯನ್ನು ಚಿಕ್ಕಮ್ಮಾ ಎನ್ನುವುದು, ಮಕ್ಕಳು ಮೂವರನ್ನೂ ಪ್ರೇಮದಿಂದ ನೋಡಿಕೊಳ್ಳುವುದು, ಮುಖ್ಯವಾಗಿ ಅವರ ಒಳ್ಳೆಯತನ–ಇವೆಲ್ಲಾ ನನ್ನ ಸಲಿಗೆಗೆ ಕಾರಣಗಳಾದುವು.

ಆ ದಿನ ನನ್ನ ಚಿಕ್ಕಮ್ಮನಿಗೆ ಆನಂದವುಂಟಾಗುವ ವಿಷಯವೊಂದು ನಡೆಯಿತು ಎಂದೆನಲ್ಲಾ, ಆ ದಿನ ನಡೆದದ್ದು ಏನೆಂದರೆ–ನಮ್ಮ ಚಿಕ್ಕಮ್ಮ ಅವರ ಮನೆಗೆ ಬಂದಾಗ– ನನಗೆ ಕೋಪ ಬಂದು, ನಾನು ಮುಸುಕಿಟ್ಟು ಮಲಗಿಕೊಂಡಿದ್ದೂ, ಈ ರೈತನ ಹೆಂಡತಿ ನನ್ನನ್ನು ಪ್ರೀತಿಯಿಂದ ಗೋಗರೆಯುತ್ತಿದ್ದುದೂ ನಡೆದಿತ್ತು. ನನ್ನ ಚಿಕ್ಕಮ್ಮನಿಗೆ ಇದನ್ನು ಕಂಡು ಅಚ್ಚರಿಯಾಯಿತು. ಅವರು ನನ್ನ ಚಿಕ್ಕಮ್ಮನನ್ನು ತುಂಬ ಗೌರವ ಆದರದಿಂದ ಕಂಡರು. ಆಕೆ ಒಂದು ತಾಸು ಇದ್ದು ಹೊರಡುವಾಗ ನನ್ನನ್ನು ಅಪ್ಪಿಕೊಂಡು ಅತ್ತುಬಿಟ್ಟಳು.

'ಮಗೂ, ಈ ಪ್ರಪಂಚದಲ್ಲಿ ಎಲ್ರೂ ಒಳ್ಳೇರು ಇರೋಲ್ಲ. ಎಲ್ರೂ ಕೆಟ್ಟೋರಿರೋಲ್ಲ. ನಿನ್ನ ಅದೃಷ್ಟದಿಂದಾಗಿ ಆ ಪರಮಾತ್ಮ ನಿನ್ನನ್ನೀ ಮನೆಗೆ ಸೇರಿಸಿದ್ದಾನೆ. ನಿಮ್ಮ ತಾಯಿಯ ಹೊಟ್ಟೆಯಲ್ಲಿ ನೀನೊಬ್ಬನೇ ಹುಟ್ಟಿದೆ. ನೀನೆಲ್ಲಿಯಾದ್ರೂ ಒಂದು ಕಡೆ ಗುಂಡುಕಲ್ಲಿನಂತೆ ಬದುಕಿದ್ದರಷ್ಟೇ ಸಾಕು' ಎಂದು ನುಡಿದಳು. ನನಗಾಗಿ ನನ್ನ ಚಿಕ್ಕಮ್ಮ ಹೊಲಿಸಿ ತಂದ ಅಂಗಿಯನ್ನು ನನಗೆ ತೊಡಿಸಿ ಹೊರಟುಹೋದಳು. ನಾನು ಆಕೆಯನ್ನು ಊರ ಮೇರೆಯವರೆಗೆ ಹೋಗಿ ಬೀಳ್ಕೊಟ್ಟು ಬಂದೆ.

ಮತ್ತೊಮ್ಮೆ ನಾನು ನನ್ನ ಚಿಕ್ಕಮ್ಮನ ಊರಿಗೆ ಹೋಗಿ ಆಕೆಯನ್ನು ಕಂಡು ಬಂದೆ– ಒಂದೂವರೆ ವರ್ಷಗಳ ತರುವಾಯ. ಅದರ ಬಗ್ಗೆ ಆಮೇಲೆ ತಿಳಿಸುತ್ತೇನೆ. ಮುಖ್ಯವಾಗಿ ತಿಳಿಸಬೇಕಾದ ವಿಷಯಗಳು, ಎರಡು ಇವೆ. ಒಂದು–ನಾನು ಓದು, ಬರೆಹ ಕಲಿಯಲು ಪ್ರಾರಂಭಿಸಿದ್ದು. ಆ ಊರಿನಲ್ಲಿ ಒಬ್ಬ ಉಪಾಧ್ಯಾಯರಿದ್ದರು. ನಾನು ಬಿಡುವಾಗಿದ್ದಾಗ

ಯಾವಾಗಲಾದರೂ ನನ್ನ ತಮ್ಮನನ್ನು–ಅಂದರೆ, ಆ ರೈತನ ಎರಡನೆಯ ಮಗನನ್ನು ಕಂಕುಳಲ್ಲೆತ್ತಿಕೊಂಡು ಆ ಶಾಲೆಗೆ ಹೋಗುತ್ತಿದ್ದೆ. ಆ ಉಪಾಧ್ಯಾಯರು ಹುಡುಗರನ್ನು ಸಾಲಾಗಿ ನಿಲ್ಲಿಸಿ ಅವರಿಗೆ ಬಾಯಿಲೆಕ್ಕಗಳನ್ನು ಹೇಳಿಕೊಡುತ್ತಿದ್ದರು; ಗುಣಾಕಾರದ ಬಗ್ಗೆ ಪ್ರಶ್ನಿಸುತ್ತಿದ್ದರು.

ಒಂದು ದಿನ ಹದಿನಾಲ್ಕಾರಲ ಎಷ್ಟು ಎಂದು ಒಬ್ಬ ಹುಡುಗನನ್ನು ಪ್ರಶ್ನಿಸಿದರು. ಅವನಿಗೆ ಹೇಳಲಾಗಲಿಲ್ಲ. ಏಕೋ ಏನೋ ಉಪಾಧ್ಯಾಯರು ನನ್ನನ್ನು ಪ್ರಶ್ನಿಸಿದರು. ನಾನು ತಟಕ್ಕನೆ ಎಂಬತ್ತನಾಲ್ಕೆಂದು ಹೇಳಿಬಿಟ್ಟೆ ಅವರು ಚಕಿತರಾದರು. ಹೇಗೆ ಉತ್ತರ ಹೇಳಿದೆನೋ ಎಂದು ನನಗೂ ಆಶ್ಚರ್ಯವಾಯಿತು. ನಾನು ಅಲ್ಲಿಗೆ ಹೋದಾಗಲೆಲ್ಲಾ ಹುಡುಗರು ಮಗ್ಗಿ ಹೇಳುತ್ತಿದ್ದುದನ್ನು ನಾನು ಕೇಳುತ್ತಾ ಇದ್ದೆ. ನಿತ್ಯ ಕೇಳಿ ಕೇಳಿ, ಅವು ನನ್ನ ಮನಸ್ಸಿನಲ್ಲಿ ಉಳಿದುಕೊಂಡುಬಿಟ್ಟಿದ್ದವೆಂದು, ನಾನು ಕೊಂಚ ದೊಡ್ಡವನಾದ ಮೇಲೆ ಸಮನ್ವಯಿಸಿಕೊಂಡೆ ಬಾಯಿಪಾಠಗಳನ್ನು ಕೂಡ ಆ ಹುಡುಗರು ತಪ್ಪು ನುಡಿದಾಗ ನಾನು ಸರಿಯಾಗಿ ಒಪ್ಪಿಸುತ್ತಿದ್ದೆ. ಸಣ್ಣಪುಟ್ಟ ಲೆಕ್ಕಗಳನ್ನು ನಾನು ಬಾಯಿಂದಲೇ ಹೇಳಿಬಿಡುತ್ತಿದ್ದೆ. ಆ ಉಪಾಧ್ಯಾಯರಿಗೆ ನನ್ನ ಮೇಲೆ ಮಮತೆ ಹುಟ್ಟಿತು. ನನಗೆ ಅಭ್ಯಾಸ ಮಾಡಿಸಿದರು. ನಾನು ಒಂದು ದಿನದಲ್ಲಿಯೇ ವರ್ಣಮಾಲೆಯನ್ನೂ, ಗುಣಾಕಾರವನ್ನೂ ಕಲಿತುಬಿಟ್ಟೆ ನಾಲ್ಕಾರು ತಿಂಗಳುಗಳಲ್ಲಿಯೇ ವಿದ್ಯಾರ್ಥಿಗಳು ಗಟ್ಟಿಯಾಗಿ, ಗುಂಪಾಗಿ ಓದುವಾಗ ಕೇಳಿದ್ದರಿಂದಾಗಿ ಸುಮತೀ ಶತಕ, ಶ್ರೀಕೃಷ್ಣಶತಕ, ದಾಶರಥೀಶತಕ, ನೃಸಿಂಹಶತಕ–ಈ ಎಲ್ಲ ಶತಕಗಳ ಪದ್ಯಗಳು ಸುಮಾರು ಒಂದು ನೂರರವರೆಗೆ ಬಾಯಿಪಾಠವಾದಂತಾಗಿಬಿಟ್ಟವು. ನನ್ನ ಸಾಕು ತಂದೆ, ರಾತ್ರಿ ಹೊತ್ತಿನಲ್ಲಿ ಆ ಪದ್ಯಗಳನ್ನೆಲ್ಲಾ ನನ್ನ ಕೈಲಿ ಹೇಳಿಸುತ್ತಿದ್ದ. ನನಗೆ ಬಾಯಿಪಾಠ ಬಾರದ ಪದ್ಯಗಳನ್ನು ಪುಸ್ತಕ ನೋಡಿಕೊಂಡು ಓದುತ್ತಿದ್ದೆ.

ಆರು ತಿಂಗಳುಗಳಲ್ಲಿಯೇ ನನ್ನ ಜಾತಕ ಬದಲಾಯಿಸಿಬಿಟ್ಟಿತು. ಆ ರೈತ ನನ್ನನ್ನು ಶಾಲೆಗೆ ಸೇರಿಸಿದ. ಬಡ್ಡಿ ಲೆಕ್ಕಗಳು, ಭಾರತ–ಭಾಗವತಗಳನ್ನು ಓದಲು ಪ್ರಾರಂಭಿಸಿದೆ.

ಇದು ಮೊದಲನೆಯ ವಿಷಯ. ಈ ವಿಷಯದ ಕುರಿತು ಇನ್ನೊಂದಿಷ್ಟು ಆಮೇಲೆ ತಿಳಿಸುತ್ತೇನೆ. ಎರಡನೆಯ ವಿಷಯ–ಇದುವೆ ಮುಖ್ಯ ವಿಷಯ. ಹೇಳಬೇಕಾದದ್ದು. ಇದೇ ಪ್ರಧಾನ ವಿಷಯಗಳಲ್ಲಿ ಪ್ರಧಾನ ವಿಷಯ!

ನನ್ನ ಈ ಪುಸ್ತಕವನ್ನು ಜೀವನಚರಿತ್ರೆ ಎನ್ನುತ್ತೀರೋ, ಕಾದಂಬರಿ ಎನ್ನುತ್ತೀರೋ, ಒಬ್ಬ ನತದೃಷ್ಟನ ಕಥೆ ಎನ್ನುತ್ತೀರೋ ನಾನರಿಯೆ. ಈ ಪುಸ್ತಕದಲ್ಲಿ ನಾನೇ ಕಥಾನಾಯಕನೆಂದುಕೊಳ್ಳುತ್ತಾರೆ ಅನೇಕರು. ಲೋಕದ ಜನ ಹಾಗೆಂದುಕೊಂಡರೆ ನಾನೇನೂ ಮಾಡುವಂತಿಲ್ಲವಾದರೂ ನನ್ನ ಮಟ್ಟಿಗೆ ಕಥಾನಾಯಕ ನಾನಲ್ಲವೆಂದುಕೊಂಡಿರುವೆ. ಆ ಕಥಾನಾಯಕನ ಕುರಿತೇ ಈಗ ತಿಳಿಸುತ್ತೇನೆ.

ಆತ ಕಪ್ಪಗೆ, ಇದ್ದಲಿನ ಮೈಬಣ್ಣದಾತ. ನನ್ನೊಡೆಯ ಎಷ್ಟು ಕೆಂಚಗಿದ್ದನೋ ಆತ ಅಷ್ಟು ಕಪ್ಪಗಿದ್ದ. ನನ್ನ ಸ್ವಾಮಿ ಎಷ್ಟು ದೊಡ್ಡ ಮನುಷ್ಯನೋ ಆತ ಅಷ್ಟು ಕುತ್ಸಿತ ವ್ಯಕ್ತಿ. ನನ್ನ ದಣಿ ಎಷ್ಟು ಎತ್ತರದ ವ್ಯಕ್ತಿಯೋ ಆತ ಅಷ್ಟು ಕುಳ್ಳನೆಯ ವ್ಯಕ್ತಿ. ನನ್ನ ಸಾಕುತಂದೆಯ

ಕಣ್ಣುಗಳಾದರೋ ರಾಜಮಾರ್ಗದಲ್ಲಿಯೇ ಪಯಣಿಸುತ್ತಿರುವಂತೆ ತೋರುತ್ತವೆ. ಆತನ ಕಣ್ಣುಗಳನ್ನು ನೋಡಿದರೆ–ಕೊಲೆ ನಡೆಯುವ ಸಂದುಗೊಂದುಗಳಲ್ಲಿ ಚಲಿಸುತ್ತಿರುವಂತೆ ಭಾಸವಾಗುತ್ತದೆ. ನನ್ನ ಆ ತಂದೆ ಎಂದೂ ಕೊಳೆಯಾದ ಬಟ್ಟೆಯನ್ನು ತೊಟ್ಟಿಲ್ಲ. ಆತ ಅವು ಬಿಟ್ಟು ಮತ್ತೊಂದು ತೊಡುವುದೇ ಇಲ್ಲ. ನನ್ನ ಚಿಕ್ಕಪ್ಪನ ಹೃದಯ ಬೆಣ್ಣೆ ಆತನ ಹೃದಯ ಕಬ್ಬಿಣ. ನಾನು ಈಗಾಗಲೇ ಬಹಳಷ್ಟು ಹೇಳಿದೆನೇನೋ! ನಾನು ರಾಜನಂಥ ಆ ರೈತನ ಉಪ್ಪು ತಿಂದವನಾದ್ದರಿಂದ ನನಗೆ ಆತನ ಹೆಸರು ಕೇಳಿಸಿದರೇನೇ ನನ್ನ ಹೃದಯವೆಲ್ಲ ಅರಳಿಬಿಡುತ್ತದೆ. ತನ್ಮೂಲವಾಗಿ ಯಾರಿಗಾದರೂ ಕೋಪ ಬಂದರೆ ಕ್ಷಮಿಸಬೇಕು. ಆತ ನನ್ನ ಸಾಕುತಂದೆಯ ಭಾವ ಮೈದುನ. ಭಾವಮೈದುನನೆಂದರೆ–ನನ್ನ ಸಾಕುತಾಯಿಯೂ, ಆತನೂ ಚಿಕ್ಕಮ್ಮ ದೊಡ್ಡಮ್ಮನ ಮಕ್ಕಳು. ನನ್ನ ಸಾಕುತಾಯಿ ಬೆಳೆದು ದೊಡ್ಡವಳಾದದ್ದು ಅವರ ಮನೆಯಲ್ಲಿಯೇ ಅಂತೆ. ಅವರೇ ಆಕೆಯನ್ನು ಸಾಕಿದರಂತೆ. ಆದ್ದರಿಂದ ಆತನೇ ನನ್ನ ತಮ್ಮಂದಿರಿಗೆ ಸೋದರಮಾವ. ನನ್ನ ಸಾಕು ತಾಯಿಗೆ ಆತ ತಮ್ಮ, ನನ್ನ ಸಾಕು ತಂದೆಗೆ ಭಾವಮೈದುನ.

ನಾನು ಅವರ ಮನೆ ಸೇರಿಕೊಂಡ ಆರು ತಿಂಗಳಿಗೆ ಆತನನ್ನು ಮೊಟ್ಟ ಮೊದಲ ಬಾರಿಗೆ ಕಂಡಿದ್ದು. ಆತ ನಾಲ್ಕೈದು ದಿನಗಳವರೆಗಿದ್ದ. ಮೊದಲೆರಡು ದಿನಗಳಲ್ಲಿ ನನ್ನ ಕಥೆಯನ್ನೆಲ್ಲಾ ಕೇಳಿದ. ಮೂರನೆಯ ದಿನದಿಂದಲೇ ನನ್ನ ಮೇಲೆ ಅಧಿಕಾರ ಚಲಾಯಿಸಲಾರಂಭಿಸಿದ. ನನ್ನ ಸಾಕು ತಂದೆ–ತಾಯಿಯರು ಸಹ ನನ್ನನ್ನು 'ಲೋ' ಎಂದು ಕರೆಯುವುದಿಲ್ಲ. ಆತ 'ಏನಲೋ' ಎಂದು ಕರೆಯುವುದೂ; ಆ ಊರಿನವರು ಮೊದ ಮೊದಲು ನನ್ನನ್ನು 'ಕಳ್ಳಾ! ಕಳ್ಳಾ!' ಎಂದೇ ಕರೆಯುತ್ತಿದ್ದರೆಂಬುದು ಆತನಿಗೆ ತಿಳಿದಿರಬೇಕೆಂದು ಕಾಣುತ್ತದೆ–ಆತ ಆ ಊರಿನಲ್ಲಿದ್ದ ಇನ್ನುಳಿದ ಎರಡು ದಿನಗಳವರೆವಿಗೂ ಆತ ನನ್ನನ್ನು 'ಕಳ್ಳಾ! ಕಳ್ಳಾ' ಎಂದೇ ಕರೆದ. ಆ ಎರಡು ದಿನಗಳೂ, ಆತನ ಪ್ರತಿಯೊಂದು ಕೆಲಸವನ್ನೂ ನಾನೇ ಮಾಡಿ ಪೂರೈಸಬೇಕಾಯಿತು. ಒಂದು ಸಲ ನನ್ನನ್ನು ಹೀನಾಯವಾಗಿ ಬಯ್ದ. ಕಾಲು ಹಿಸುಕು ಎಂದು ಹೇಳಿದ. ನನ್ನ ಸಾಕುತಂದೆ ಇದನ್ನು ನೋಡಿಯೂ ಸುಮ್ಮನಿದ್ದುಬಿಟ್ಟ. ಏನೋ ಚಿಕ್ಕವನು ಹಿಸುಕಿದರೇನು ತಪ್ಪು ಎಂದು ಸುಮ್ಮನಿದ್ದುಬಿಟ್ಟಿರಬಹುದೆಂದುಕೊಂಡೆ.

ಆತ ಉಳಿದುಕೊಂಡ ಆ ನಾಲ್ಕು ದಿನಗಳೂ ನಮ್ಮ ತಾತನವರ ಆ ಮನೆಯನ್ನು ನಾನು ಮರೆಯದಂತೆ ಮಾಡಿಬಿಟ್ಟ ಆತ ಹೊರಟುಹೋಗುವ ದಿನದಂದು–ನನ್ನನ್ನು ತನ್ನೊಂದಿಗೆ ಕರೆದೊಯ್ಯುತ್ತೇನೆ ಎಂದ. ನಾನು ಬರೋಲ್ಲ ಎಂದೆ. ಆತ ತನ್ನ ದಾರಿ ತಾನು ಹಿಡಿದು ಹೋಗಿಬಿಟ್ಟ. ಹೊರಡುವ ಮುಂಚೆ ನನ್ನ ಎದೆಗೆ ನಾಟುವಂಥ ಒಂದು ಮಾತನ್ನೂ ಆಡಿ ಹೋದ–ನನ್ನ ಓದಿಗಾಗಿ ಆ ಉಪಾಧ್ಯಾಯರಿಗೆ ವರ್ಷಕ್ಕೆ ಎರಡು ಚೀಲ ಜೋಳ ಕೊಡುತ್ತೇನೆ–ಎಂದಿದ್ದ ನನ್ನ ಸಾಕು ತಂದೆ; 'ಯಾವನೋ ದಿಕ್ಕಿಲ್ಲದ ಬೇವಾರ್ಸಿ, ಮನೆಯ ಕೂಳಿಗೆ ಆಳಿನಂತೆ ಬಿದ್ದಿದ್ರೆ ಅಂಥಾ ಮುಟ್ಠಾಳನ ಓದಿಗೆ ಎರಡು ಚೀಲ ಜೋಳ

ಬೇರೆ ದಂಡಾ?' ಎಂದ. ಚಿಕ್ಕಮ್ಮ, ಚಿಕ್ಕಪ್ಪ ಇಬ್ಬರೂ ಏನೂ ಮಾತಾಡಲಿಲ್ಲ. ಆತನೆಂದರೆ ಅವರಿಬ್ಬರಿಗೂ ಭಯವೋ, ಅವರ ಉದ್ದೇಶವೂ ಸಹ ಅಷ್ಟೇಯೋ ಏನೋ ನನಗೇನೂ ತಿಳಿಯದಾಯಿತು. ಆಮೇಲೆ–ಹತ್ತು ದಿನಗಳಿಂದಲೂ ನಾನು ಶಾಲೆಗೆ ಹೋಗುತ್ತಿಲ್ಲವೆಂಬುದನ್ನು ತಿಳಿದುಕೊಂಡು ನನ್ನ ಚಿಕ್ಕಪ್ಪ ನನ್ನನ್ನು ತನ್ನೊಂದಿಗೆ ಕರೆದೊಯ್ದು ಮತ್ತೆ ಶಾಲೆಗೆ ಸೇರಿಸಿ ಬಂದ.

ಉಪಾಧ್ಯಾಯರು ಈ ಹತ್ತು ದಿನಗಳಿಂದ ಏಕೆ ಬರಲಿಲ್ಲವೆಂದು ಕೇಳಿದರು. ಅವರು ಮೇಲಿಂದ ಮೇಲೆ ಒತ್ತಾಯಪೂರ್ವಕವಾಗಿ ಕೇಳಿದ್ದರಿಂದ ನಾನು ನಿರ್ವಾಹವಿಲ್ಲದೆ ನಡೆದದ್ದನ್ನೆಲ್ಲಾ ಹೇಳಬೇಕಾಯಿತು. ಉಪಾಧ್ಯಾಯರು ಸಾಯಂಕಾಲ ನಮ್ಮ ಮನೆಗೆ ಬಂದು, ನನ್ನ ಸಾಕು ತಂದೆಯೊಂದಿಗೆ–"ನೀವು ಎರಡು ಚೀಲ ಜೋಳ ಕೊಡೋದು ಬೇಡ. ಅಂಥ ಬುದ್ಧಿವಂತ ಹುಡುಗನಿಗೆ ವಿದ್ಯೆ ಬರುವುದೇ ಮುಖ್ಯ. ನಾನು ಅವನಿಗೆ ಪುಕ್ಕಟೆಯಾಗಿಯೇ ಹೇಳಿಕೊಡುತ್ತೇನೆ" ಎಂದರು. ನನ್ನ ಚಿಕ್ಕಪ್ಪ ತನ್ನ ಭಾವಮೈದುನನನ್ನು ಮನಸಾರೆ ಬೈಯ್ದು– "ಆ ಮುಟ್ಠಾಳನದೇನಿದೆ ಇದರಲ್ಲಿ? ನನ್ನ ಮಗನಿಗೆ ನಾನು ಓದು ಕಲಿಸಲು ಆ ಬಡ್ಡೀಮಗನದೇನಿದೆ ಆಜ್ಞೆ?" ಎಂದ. ನನ್ನ ಮನಸ್ಸಿನಲ್ಲಿ ಉಳಿದಿದ್ದ ಆ ಕೊಂಚ ಕಲ್ಮಷವೂ ಹೊರಟುಹೋಯಿತು.

ನಾನು ಈ ಮನೆಗೆ ಬಂದು ಒಂದು ವರ್ಷ ಉರುಳಿತು. ಎಂಟು ತಿಂಗಳು ಓದಿಕೊಂಡೆ. ನಾನು ಬಡ್ಡಿ ಲೆಕ್ಕಗಳನ್ನು ಮಾಡುವಂತಾದವ ಭಾರತ–ಭಾಗವತಗಳನ್ನು ಸರಸರನೆ ಓದುವಂತಾದೆ. ಎಷ್ಟು ದೊಡ್ಡ ಲೆಕ್ಕವಾದರೂ ಬಾಯಲ್ಲಿಯೇ ಗುಣಿಸಿ ಹೇಳಬಲ್ಲವನಾದೆ. ಈ ರೀತಿಯಾಗಿ ಅವರ ದೊಡ್ಡ ಮಗನೆನ್ನಿಸಿಕೊಳ್ಳುವುದಕ್ಕೆ ಅರ್ಹನಾದೆ.

೪

ಒಂದು ವರ್ಷ ಕಳೆಯುವಷ್ಟರಲ್ಲಿ, ಆ ಮನೆಯಲ್ಲಿ ನನಗೊಂದು ಯಾಜಮಾನ್ಯ ಲಭಿಸಿತು. ಇದಕ್ಕೆ ಎರಡು ಕಾರಣಗಳುಂಟು: ಒಂದು–ನನ್ನ ಸಾಕುತಂದೆಯ ದೇಹದಲ್ಲಿ ಯಾವುದೋ ರೋಗ ಮನೆಮಾಡಿಕೊಂಡಿದ್ದರಿಂದ ಆತ ಸರಿಯಾಗಿ ತಿರುಗಾಡಲಾರದಾದ. ಎರಡನೆಯದು–ನನ್ನ ಚಿಕ್ಕಮ್ಮನಿಗೆ ಮೊದಲಿನಿಂದಲೂ ಹಣದ ವಹಿವಾಟೇ ತಿಳಿಯದು. ಆದುದರಿಂದಾಗಿ ನನ್ನ ಚಿಕ್ಕಪ್ಪ ಹಲವಾರು ವಿಷಯಗಳನ್ನು ನನಗೆ ತಿಳಿಸುತ್ತಾ ಬಂದ. ಹಣವನ್ನು ಬಚ್ಚಿಡಲು ನನ್ನ ಕೈಗೆ ಕೊಡುತ್ತಾ ಬಂದ. ಹಣದ ಲೆಕ್ಕ ನನ್ನನ್ನು ಕೇಳುತ್ತಾ ಇದ್ದ. ಒಮ್ಮೆ ಹೊರ ಅಂಗಳದ ಜಗುಲಿಯ ಮೇಲೆ ನನ್ನ ಚಿಕ್ಕಪ್ಪ ಆರಾಮಾಗಿ ಕುಳಿತುಕೊಂಡಿರುವಾಗ, ಯಾರೋ ಹಣ ಬೇಕೆಂದು ಕೇಳಿದರೆ, 'ನಮ್ಮ ಮಗನನ್ನು ಕೇಳಿ ಈಸಿಕೊಳ್ಳಬೇಕು' ಎಂದನಂತೆ. 'ನಿಮ್ಮ ಮಗ ಯಾರು?' ಎಂದು ಕೇಳಿದರೆ 'ನಮ್ಮ ಸಾಕುಮಗ. ಈಗ ಅವನದು ತಾನೆ ಮನೆಯ ಜವಾಬ್ದಾರಿಯೆಲ್ಲಾ'–ಎಂದು ಮುಗುಳುನಗೆ ನಕ್ಕನಂತೆ.

ಊರಿನಲ್ಲಿ ನನ್ನನ್ನು ಈಗ ಯಾರೂ ಕಳ್ಳ ಎನ್ನುವುದಿಲ್ಲ. ನೆರೆಮನೆಯವರಿಗೆ ಎತ್ತು ಬೇಕಾದರೂ, ಗಾಡಿ ಬೇಕಾದರೂ ನನ್ನ ಚಿಕ್ಕಪ್ಪನನ್ನೇ ಕೇಳುತ್ತಾರೇನೋ ನಿಜ; ಆದರೆ ನಾನು ಕೊಡಲು ಆಗಲ್ಲ ಎಂದರೆ ಕೊಂಡೊಯ್ಯಲು ಸಾಧ್ಯವಿಲ್ಲ. ಮೂರು ಜನ ಜೀತದಾಳುಗಳೂ ನಾನು ಹೇಳಿದಂತೆ ಕೇಳಬೇಕಾದದ್ದೇ. ಆ ಹೊಲಗಳಿಗೆ ಗೊಬ್ಬರ ಹೊಡೆಯಬೇಕೆಂದರೂ, ಕಣ ಮಾಡಬೇಕೆಂದರೂ, ಮತ್ತೊಂದು ಹೊಲವನ್ನು ಉಳಬೇಕೆಂದರೂ ನಾನು ನಿಂತೇ ಮಾಡಿಸತಕ್ಕದ್ದು. ಈ ಎಲ್ಲ ಕಾರ್ಯಗಳ ಒತ್ತಡದಿಂದಾಗಿ, ಓದು ಕೊನೆಗಾಣಲಿಲ್ಲವಾದರೂ, ಕೆಲಸ ಕಾರ್ಯಗಳು ಹೆಚ್ಚಿದುವು. ನನ್ನ ಚಿಕ್ಕಮ್ಮ ನಾನೆಷ್ಟು ಹೇಳಿದರೆ ಅಷ್ಟು. ಮಕ್ಕಳೆಲ್ಲ ನನ್ನನ್ನು ಅಣ್ಣ ಎಂದು ಬೆನ್ನಂಟಿಯೇ ಇರುತ್ತಿದ್ದರು. ಆ ಹುಡುಗಿ ಹಾಗೆಯೇ ಬೆಳೆಯುತ್ತಿದ್ದಳು. ಅವಳಿಗೆ ಹನ್ನೊಂದು ವರ್ಷಗಳಲ್ಲಿ ಬಿತ್ತು. ಇನ್ನು ಅವಳನ್ನು ಇನ್ನಷ್ಟು ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾದದ್ದೇ.

ನನ್ನ ತಮ್ಮಂದಿರ ಸೋದರಮಾವ ಆಮೇಲೆಯೂ ಒಂದೆರಡು ಸಲ ಬಂದಿದ್ದ. ಆತ ಮಾತನಾಡಿಸಿದರೂ ನಾನು ಆ ಕೆಲಸ, ಈ ಕೆಲಸ ಮಾಡುತ್ತಿದ್ದು ಸುಮ್ಮನೆ ಇದ್ದುಬಿಡುತ್ತಿದ್ದೆ. ಆತ ನನ್ನ ಕಡೆಗೆ ದುರುದುರನೆ ನೋಡುತ್ತಿದ್ದ. ಆ ಮನೆಯ ಸರ್ವಸ್ವವೂ ನನಗೆ ಗೊತ್ತಿತ್ತು. ಯಾರಿಗೆ ಎಷ್ಟು ಕೊಡಬೇಕಾಗಿದೆಯೋ, ಜನರಿಂದ ಎಷ್ಟು ಬರಬೇಕಾಗಿದೆಯೋ, ಕೆಲವರಿಗೆ ಎಷ್ಟು ಹೊಲಗಳಿವೆಯೋ, ಆಳುಗಳಿಗೆ ಎಷ್ಟು ಅಳೆಯಬೇಕೋ ಎಲ್ಲವು ನನಗೆ ಗೊತ್ತಾಗಿಬಿಟ್ಟಿದ್ದಿತು. ನನಗೆ ಹತ್ತು ವರ್ಷ, ನೋಡಲು ಹದಿಮೂರು ಹದಿನಾಲ್ಕು ವರ್ಷದವರ ಹಾಗೆ ಕಂಡುಬರುತ್ತಿದ್ದೆ.

ನಮ್ಮ ಉಪಾಧ್ಯಾಯರಿಗೆ ಗಣಿತ ಹೇಳಿಕೊಡುವುದು, ಭಾರತ–ಭಾಗವತಗಳನ್ನು ಕಲಿಸುವಷ್ಟಲ್ಲದೆ ಮತ್ತಿನ್ನೇನೂ ಬರುತ್ತಿರಲಿಲ್ಲ. ಆದ್ದರಿಂದ ನನ್ನ ಓದು ಅಷ್ಟಕ್ಕೇ ನಿಂತುಬಿಟ್ಟಿತು.

ಜನ ಊರಿನಲ್ಲಿ ವಿಧವಿಧವಾಗಿ ಮಾತನಾಡಿಕೊಳ್ಳತೊಡಗಿದರು. ಆ ರೈತ–ನನ್ನ ಸಾಕುತಂದೆ, ತನ್ನ ಸ್ವಂತ ಮಕ್ಕಳೊಂದಿಗೆ ನನಗೂ ಸಮವಾಗಿ ಆಸ್ತಿ ಪಾಲುಮಾಡಿ ಕೊಡುತ್ತಾನೆಂತಲೂ, ಏನಿಲ್ಲೆಂದಲೂ ಕನಿಷ್ಠಪಕ್ಷ ಎರಡು ಎಕರೆಗಳನ್ನಾದರೂ ಬರೆಯುತ್ತಾನೆಂತಲೂ ಕೆಲವರು; ಮತ್ತೆ ಕೆಲವರು ತಮತಮಗೆ ತೋಚಿದಂತೆ ಮಾತನಾಡಿಕೊಳ್ಳಲಾರಂಭಿಸಿದರು. ಆ ಪ್ರಸಂಗವನ್ನು ಯಾರಾದರೂ ಎತ್ತಿದರೆ, ನಾನು ಮೆಲ್ಲಗೆ ಅಲ್ಲಿಂದ ಜಾರಿಕೊಂಡುಬಿಡುತ್ತಿದ್ದೆ.

ಒಂದು ದಿನ ನನ್ನ ರಕ್ತಸಂಬಂಧಿಯಾದ ಚಿಕ್ಕಮ್ಮನ ಭಾವನ ಮಗ ಆ ಊರಿಗೆ ಬಂದು ನನ್ನ ಚಿಕ್ಕಮ್ಮನಿಗೆ ಸಕತ್ ಕಾಯಿಲೆ ಎಂತಲೂ, ನನ್ನನ್ನೊಮ್ಮೆ ನೋಡಬೇಕೆಂದಿರುವಳೆಂತಲೂ ತಿಳಿಸಿದ. ಅವನು ನನ್ನೊಂದಿಗೆ ತುಂಬ ಗೌರವದಿಂದ ಮಾತನಾಡಿದ. ಅವನಿಗೀಗ ಹದಿನೆಂಟು ವರ್ಷಗಳು. ನಮ್ಮ ಮನೆಯಲ್ಲಿ ಅವನು ಒಪ್ಪೊತ್ತು ಉಳಿದುಕೊಂಡ. ನನ್ನ ಸ್ಥಿತಿಗತಿಗಳನ್ನೆಲ್ಲಾ ಮನವರಿಕೆ ಮಾಡಿಕೊಂಡ. ಏನೆಂದುಕೊಂಡನೋ?

ನಾನು ಮರುದಿನ ಬರುತ್ತೇನೆಂದೆ. ಅವನು ಹೊರಡುತ್ತಾ, 'ತಮ್ಮಯ್ಯಾ, ತಪ್ಪದೆ ಬಾ. ಚಿಕ್ಕಮ್ಮ ನಿನ್ನನ್ನು ನೋಡ್ಬೇಕು ಅಂತ ತುಂಬ ಪರದಾಡ್ತಾ ಅವ್ಳೆ' ಎಂದ. 'ತಮ್ಮಾ' ಎಂದು ಕರೆದದ್ದು ನನಗೆ ಆಶ್ಚರ್ಯವಾಯಿತು. ಪ್ರಪಂಚದಲ್ಲಿ ನೀನು ಬೇರೆಯವರದೇನೂ ತಿನ್ನದೆ ಇದ್ದರೆ ಸರಿ, ನೀನೆಂದರೆ ಅವರಿಗೆ ಗೌರವ!

ಮರುದಿನ ನಾನು ನಮ್ಮ ತಾತನವರ ಊರಿಗೆ ಹೋದೆ. ಕಾಲು ತೊಳೆಯುವುದಕ್ಕೆ ನನಗೆ ನೀರು ತಂದಿತ್ತು. ಮನೆಯಲ್ಲಿ ಪ್ರತಿಯೊಬ್ಬರೂ–"ಏನು ಕಣೋ, ಸಂದಾಕಿದೀಯಾ?" ಎಂದು ಗೌರವಿಸಿದವರೇ! ನಾನು ನನ್ನ ಚಿಕ್ಕಮ್ಮನ ಬಳಿಗೆ ಹೋದೆ. ಆಕೆ ಮಂಚದ ಮೇಲೆ ಮಲಗಿಕೊಂಡಿದ್ದಳು. ನನ್ನನ್ನು ನೋಡಿದಳೇ ವಿನಾ ಗುರುತು ಹಿಡಿಯಲಿಲ್ಲ. ನಾನು ಹಾಗೆಯೇ ಸ್ವಲ್ಪ ಹೊತ್ತು ಕುಳಿತುಕೊಂಡಿದ್ದೆ. ಆಕೆಗೆ ತಾಸು ಹೊತ್ತಿನ ಮೇಲೆ ಎಚ್ಚರ ಬಂದಿತು. ನನ್ನನ್ನು ನೋಡಿ, ಸಮೀಪಕ್ಕೆ ಕರೆದುಕೊಂಡು, ಕಣ್ಣೀರು ಹಾಕಿದಳು.

'ಅಪ್ಪಾ ಮಗೂ! ನನಗೂ ನೀನೇ ಪಿಂಡಾ ಹಾಕಬೇಕು ಕಣೋ' ಎಂದಳು. 'ಅದೇನು ಮಾತು ಬಿಡು ಚಿಕ್ಕಮ್ಮ, ಬಿಡ್ತು ಅನ್ನು' ಎಂದೆ 'ಇನ್ನು ನಾನು ಬದುಕಲ್ಲ ಕಣೋ. ನೀನು ನಿಮ್ಮಮ್ಮ, ಅಪ್ಪಯ್ಯನವರಿಗೆ ಪಿಂಡ ಇಡುವಾಗ ನನಗೂ ಒಂದಿಷ್ಟು ನೀರು ಬಿಡ್ತಾ ಇರು' ಎಂದಳು. 'ಪರವಾಗಿಲ್ಲ ಬಿಡು ಚಿಕ್ಕಮ್ಮಾ. ನೀನೇನೂ ಅಧೈರ್ಯಪಡಬೇಡ' ಎಂದೆ.

ನನಗೆ –ಶೈಶವ ಹೋಗಿ ಬಾಲ್ಯವೇ ಇಲ್ಲದೆ–ಒಮ್ಮೆಗೇ ಯೌವನ ಬಂದಂತಿದೆ. ಈಗೀಗ ನಾನು ಮಾತನಾಡುವ ಮಾತುಗಳೆಲ್ಲಾ ದೊಡ್ಡ ವಯಸ್ಸಿನವರು ಆಡುವ ಹಾಗಿರುತ್ತವೆ; ವಯಸ್ಸಿಗೆ ಮಿಂಚಿದ ಮಾತುಗಳಂತಿರುತ್ತವೆ. ನನ್ನ ಮಾತುಗಳನ್ನು ಕೇಳಿ ಕೆಲವರು ನಗುತ್ತಿದ್ದರು; ಕೆಲವರು ಬುದ್ಧಿವಂತನಾದನೆಂದು ಮೆಚ್ಚಿಕೊಳ್ಳುತ್ತಿದ್ದರು.

ನನ್ನ ತಾತನ ಮನೆಯವರು ನನ್ನನ್ನು ನಾಲ್ಕಾರು ದಿನ ಇರು ಎಂದರು. 'ಇರೋಕಾಗೊಲ್ಲ. ಮತ್ತೆ ಯಾವಾಗಲಾದರೂ ಬರ್ತೇನೆ' ಎಂದು ತಿಳಿಸಿ ಹೊರಟು ಬಂದೆ.

ಆಮೇಲೆ, ನಾಲ್ಕು ದಿನಗಳಾದ ಮೇಲೆ, ನನ್ನ ಚಿಕ್ಕಮ್ಮ ಸತ್ತಳೆಂಬ ಸುದ್ದಿ ಬಂತು. ಪುನಃ ಹೋಗಿ ನೋಡಿದೆ. ಸ್ವಲ್ಪ ಹೊತ್ತು ಅತ್ತೆ. ಅಗ್ನಿ ಸಂಸ್ಕಾರಕ್ಕೆ ಸ್ಮಶಾನಕ್ಕೆ ಹೋದೆ. ಹೆಣ ಸುಡುವುದನ್ನು ನಾನು ಅದುವರೆವಿಗೂ ನೋಡಿಯೇ ಇರಲಿಲ್ಲ. ಅದೇ ಮೊದಲ ಸಲ. ನನಗೆ ತುಂಬ ಭಯವಾಯಿತು. ನಾನು ಅಲ್ಲಿಂದ ಹಾಗೆಯೇ ನನ್ನ ಸಾಕುತಂದೆಯ ಊರಿಗೆ ಹೊರಟುಬಿಟ್ಟೆ

ನನಗೆ ಎರಡು ದಿನಗಳವರೆಗೆ ಜ್ವರ ಬಂದಿತು. ಹದಿನೈದನೆಯ ದಿನ ನನ್ನ ಚಿಕ್ಕಮ್ಮನ 'ದಿವಸ'ಕ್ಕೆ ಸಹ ಹೋಗಿ ಬಂದೆ. ಇನ್ನು ಅಲ್ಲಿಗೆ ನಮ್ಮ ತಾತನ ಊರಿಗೂ ನನಗೂ ಋಣ ಹರಿಯಿತು. ತರುವಾಯ ಎಂಟು ವರ್ಷಗಳಿಗಲ್ಲದೆ ಮತ್ತೆ ಅವರೊಂದಿಗೆ ಸಂಬಂಧವುಂಟಾಗಲಿಲ್ಲ. ನಾನೂ ಮನಸ್ಸಿನಲ್ಲಿ ಅವರನ್ನು ಕ್ಷಮಿಸಿದೆ.

ಚಿಕ್ಕಂದಿನಲ್ಲಿ ಅವರೇನೋ ಮಾಡಿದರು. ಗತಿಯಿಲ್ಲದೆ ಮತ್ತೊಬ್ಬರ ಹಂಗಿನಲ್ಲಿ ಬಿದ್ದು ಬಾಳುತ್ತಿದ್ದರೆ ಯಾರಾದರೂ ಹಾಗೆಯೇ ಮಾಡುತ್ತಾರೇನೋ! ನನ್ನ ಸಾಕುತಂದೆಯ

ವಿಷಯವ್ರೋ? ಎಂದರೆ ಅಂಥವರು ಭೂಮಿಯ ಮೇಲೆ ಹುಟ್ಟುವುದಿಲ್ಲ. ಹುಟ್ಟಿದರೆ ದಾರಿ ತಪ್ಪಿ, ಅಪ್ಪಿತಪ್ಪಿ ಹುಟ್ಟುತ್ತಾರಷ್ಟೆ

ನಾನು ಆ ದಯಾಳುವಿನ ಆಶ್ರಯಕ್ಕೆ ಬಂದು ಎರಡು ವರ್ಷಗಳು ಪೂರ್ಣಗೊಳ್ಳುತ್ತಿವೆ. ನನ್ನ ಒಳ್ಳೆಯ ದಸೆಗೆ ದಿನಗಳು ಒಂದೊಂದಾಗಿ ಹಿಂದಕ್ಕಾಗುತ್ತಿವೆ. ನನ್ನ ಚಿಕ್ಕಪ್ಪನವರ ಕಾಯಿಲೆ ಉಲ್ಬಣಿಸಿತು. ಇನ್ನು ಬದುಕಲಾರೆ ಎಂದುಕೊಳ್ಳುತ್ತಿರುವರು. ಬಂಧುಗಳೆಲ್ಲಾ ಬಂದು ನೋಡಿಕೊಂಡು ಹೋಗುತ್ತಿದ್ದಾರೆ.

ನನ್ನ ಚಿಕ್ಕಪ್ಪನ ಭಾವಮೈದುನ ಬಂದು ಮನೆಯಲ್ಲಿ ತಳವೂರಿದ. ಆತ ಒಂದು ತಿಂಗಳು ದಿನಮಾನ ಉಳಿದುಕೊಂಡ. ಆ ಒಂದು ತಿಂಗಳು ಪೂರ್ತಿಗೊಳ್ಳುವುದರಲ್ಲಿಯೇ ಆ ಮನೆಯಲ್ಲಿ ನನ್ನ ಯಾಜಮಾನ್ಯ ಏನೇನೂ ಉಳಿಯಲಿಲ್ಲ.

ಊರಿನಲ್ಲಿ ಶಾನುಭೋಗರು, ಬ್ರಾಹ್ಮಣರು, ದೊಡ್ಡದೊಡ್ಡ ಕುಳಗಳು ಬಹಳ ಜನ ಸೇರಿದರು. ಯಾವುದೋ ಉಯಿಲು ಬರೆದರು. ಒಂದಿಷ್ಟು ಸ್ಮೃತಿ ಬಂದಾಗ ನನ್ನ ಚಿಕ್ಕಪ್ಪನ ಕೈಯಲ್ಲಿ ಸಹಿ ಮಾಡಿಸಿಕೊಂಡು ಏನೋ ಮಸಲತ್ತು ಜರುಗಿತು. ನನ್ನ ತಮ್ಮಂದಿರ ಸೋದರಮಾವ ನನ್ನನ್ನು ಆ ಕಡೆಗೇ ಸುಳಿಯದಂತೆ ಮಾಡಿಬಿಟ್ಟ

ನನ್ನ ಚಿಕ್ಕಪ್ಪ ನಾಳೆ ಸಾಯುತ್ತಾನೆನ್ನುವಾಗ ಆ ದಿನ ರಾತ್ರಿ ಆತನಿಗೆ ಮೈಮೇಲೆ ಚೆನ್ನಾಗಿ ಪ್ರಜ್ಞೆ ಬಂದಿತು. ಮಕ್ಕಳನ್ನು ಹತ್ತಿರಕ್ಕೆ ಸೆಳೆದುಕೊಂಡು ಕಣ್ಣೀರು ಹಾಕಿದ. ನನ್ನ ಚಿಕ್ಕಮ್ಮನನ್ನು ಹತ್ತಿರದಲ್ಲಿಯೇ ಕುಳ್ಳಿರಿಸಿಕೊಂಡ. ಸ್ವಲ್ಪ ಹೊತ್ತಾದ ಮೇಲೆ, ಕ್ಷೀಣ ಸ್ವರದಿಂದ, 'ಹಿರೀ ಮಗಾ ಎಲ್ಲಿ?' ಎಂದು ಕೇಳಿದ. ನನ್ನ ಚಿಕ್ಕಪ್ಪನ ಭಾವಮೈದುನ ನನ್ನ ದೊಡ್ಡ ತಮ್ಮನನ್ನು ತೋರಿಸಿದ. ಆಗ ನನ್ನ ಚಿಕ್ಕಪ್ಪ 'ಇವನಲ್ಲ, ಅವನು' ಎಂದು ನನ್ನ ಕಡೆಗೆ ತೋರಿಸಿದ. ನನಗೆ ಅಳು ಒತ್ತರಿಸಿಕೊಂಡು ಬಂದು ಗಟ್ಟಿಯಾಗಿ ಅತ್ತುಬಿಟ್ಟೆ

ಆತ ನನ್ನನ್ನು ಹತ್ತಿರಕ್ಕೆ ಕರೆದುಕೊಂಡು, 'ಮಗಾ, ನಿನ್ನ ತಮ್ಮಂದಿರು ಜೋಕೆ. ಅಕ್ಕ ಹುಚ್ಚಿ. ಅವಳನ್ನೇನು ಮಾಡ್ತೀಯೋ...?' ಎಂದ.

ನಾನೂ, ಚಿಕ್ಕಮ್ಮನೂ, ದೊಡ್ಡ ತಮ್ಮನೂ ಒಮ್ಮೆಗೇ ಗಟ್ಟಿಯಾಗಿ ಅತ್ತೆವು. ಸ್ವಲ್ಪ ಹೊತ್ತಿನಲ್ಲಿಯೇ ನನ್ನ ಚಿಕ್ಕಪ್ಪನಿಗೆ ಎಚ್ಚರ ತಪ್ಪಿತು. ಊರ ಪೂಜಾರಿ ಬಂದು–ಸಿಂಹ ಪ್ರತಿಪಾಲವೆಂದೂ, ಗರಳವೆಂದೂ ಉಸುರಿದ. ಬೆಳಕು ಹರಿಯುತ್ತಿರುವಾಗ ನನ್ನ ಚಿಕ್ಕಪ್ಪ ಕಣ್ಣು ಮುಚ್ಚಿದ. ಎಲ್ಲರೂ ಗೊಳೋ ಎಂದು ಅಳತೊಡಗಿದರು. ಸ್ವಲ್ಪ ಹೊತ್ತಿನತನಕ, ನಾನು ಬಾಗಿಲ ಹತ್ತಿರ ಹೋಗಿ ಕುಳಿತೆ. ಪುನಃ ಒಳ ಬಂದು ನನ್ನ ಸಾಕುತಂದೆಯ ಮೇಲೆ ಬಿದ್ದು ಗೋಳಾಡುವುದಕ್ಕಾರಂಭಿಸಿದೆ. ನನ್ನ ಸಾಕುತಂದೆಯ ಭಾವಮೈದುನ ನನ್ನ ಕೈ ಹಿಡಿದೆಳೆದು, 'ಯಾವನೋ ನೀನು? ಆತನನ್ನು ತಾಕುತ್ತೀಯಲ್ಲಾ!?' ಎಂದು ಕೊಸರಿ ಹಾಕಿದ. ನಾನು ಬಾಗಿಲಾಚೆ ಹೋಗಿ ಕುಳಿತುಕೊಂಡೆ. ಒಂದು ತಾಸಿನ ಬಳಿಕ ಅದಾರೋ ನನ್ನ ಚಿಕ್ಕಮ್ಮ ಬಾವಿಗೆ ಹಾರಿಕೊಂಡಳೆಂದರು. ಆ ಬಾವಿ ತುಂಬ ದೊಡ್ಡದು. ಆಕೆಯನ್ನು ಹೊರ ತೆಗೆದರು. ಆದರೆ ಒಂದು ತಾಸಿನಲ್ಲಿಯೇ ಆಕೆಯ ಪ್ರಾಣ ಹೋಗಿಬಿಟ್ಟಿತು.

ಆ ದಿನ, ರಾತ್ರಿ ಕಳೆಯುವವರೆವಿಗೂ ನಾನು ದನಗಳ ಕೊಟ್ಟಿಗೆಯಲ್ಲಿಯೇ ಮಲಗಿಕೊಂಡು ಕಣ್ಣೀರು ಸುರಿಸುತ್ತಿದ್ದೆ. ನನ್ನನ್ನ ಸತ್ತಿದ್ದೀಯಾ, ಬದುಕಿದೀಯಾ ಎಂದು ಕೇಳಿದವರಿಲ್ಲ. ನನ್ನ ಚಿಕ್ಕಮ್ಮ–ಚಿಕ್ಕಪ್ಪನವರಿಗೆ ಆ ರಾತ್ರಿಯೇ ದಹನಕ್ರಿಯೆ ನಡೆಯಿತು. ನಾನು ಸ್ಮಶಾನದ ಬಳಿಗೂ ಹೋಗಲಿಲ್ಲ. ರಾತ್ರಿ ಎರಡು ಜಾವ ಕಳೆದ ಮೇಲೆ, ಸ್ಮಶಾನದಿಂದ ಎಲ್ಲರೂ ಹಿಂತಿರುಗಿ ಬಂದರು. ನನ್ನ ತಮ್ಮಂದಿರ ಸೋದರಮಾವನೇ ಆ ಕರ್ಮಕಾಂಡ ನೆರವೇರಿಸಿದ್ದು.

ಆತ ಒದ್ದೆ ಬಟ್ಟೆಗಳಲ್ಲಿ ಬರುತ್ತಾ ಇದ್ದ. ಆತನನ್ನು ಕಂಡ ಕೂಡಲೇ ನನಗೆ ದುಃಖ ಉಮ್ಮಳಿಸಿ ಬಂದಿತು. ಗಟ್ಟಿಯಾಗಿ ರೋದಿಸುತ್ತಾ ಹೋಗಿ ಆತನನ್ನು ಅಪ್ಪಿಕೊಂಡೆ. ಆತ ನನ್ನನ್ನು ಅಸಹ್ಯಿಸಿಕೊಂಡು ಪಕ್ಕಕ್ಕೆ ತಳ್ಳುತ್ತ "ಸುವರ್ಣಗಡ್ಡೆಗಿಲ್ಲದ ನವೆ ಕೆಸಿಬೇಕೋ? ಆತನಿಗೆ ನೀನೇನು ಸಂಬಂಧವೋ ಯಾವನೋ ನೀನು?" ಎಂದು ನನ್ನನ್ನು ಹೀಯಾಳಿಸಿದ. ಆತನಾಡಿದ ಆ ಮಾತುಗಳಿಂದ ನನ್ನ ಅಳುವೆಲ್ಲಾ ಹೋಗಿಬಿಟ್ಟಿತು. ಸ್ವಲ್ಪ ಹೊತ್ತಿನತನಕ ಅತ್ತ ಇತ್ತ ಏನೂ ತೋಚದೆ ತಿರುಗಾಡುತ್ತಿದ್ದು, ಕೊನೆಗೆ ದನಗಳ ಕೊಟ್ಟಿಗೆಯಲ್ಲಿನ ಗೋದಲಿಯಲ್ಲಿ, ಹುಲ್ಲಿನ ಮೇಲೆ ಮಲಗಿಕೊಂಡೆ; ಕೋಳಿ ಕೂಗುವ ಹೊತ್ತಿಗೆ ಜೋಂಪು ಹತ್ತಿತು. ಸೂರ್ಯೋದಯವಾಗುವುದಕ್ಕಿಂತ ಮುಂಚೆಯೇ ಎಚ್ಚರವಾಯಿತು.

ಒಂದು ಮಾರು ಹೊತ್ತೇರಿತ್ತು. ನನಗೆ ಹಸಿವಾಗುತ್ತಿತ್ತು. ನನ್ನ ಮನಸ್ಸಿನಲ್ಲಿ ಲಕ್ಷ ವಿಷಯಗಳು ಸುತ್ತುತ್ತಿದ್ದವು. ನನಗೆ ಆ ಮನೆ ತೊರೆದು ಹೋಗಿಬಿಡಬೇಕೆಂದೆನ್ನಿಸಿತು. ನಾನು ಹೊರಟುಬಿಟ್ಟರೆ ಹೇಗೆ? ನನ್ನ ಚಿಕ್ಕಪ್ಪನ ವ್ಯವಹಾರಗಳೆಲ್ಲ ನನಗಲ್ಲದೆ ಮತ್ತಾರಿಗೂ ಗೊತ್ತಿಲ್ಲ. ನನ್ನ ತಮ್ಮಂದಿರು ಇಬ್ಬರಿದ್ದಾರೆ. ಸೋದರಿಯೊಬ್ಬಳಿದ್ದಾಳೆ. ನಾನು ಹೊರಟುಹೋಗಿಬಿಟ್ಟರೆ ಇವರ ಗತಿ ಏನು? ಆಲೋಚಿಸತೊಡಗಿದೆ.

ಅವರಿಗೆ ನಾನಾರು? ಅವರ ಸೋದರಮಾವನಿಗಿಂತ ನಾನು ಹೆಚ್ಚಿನವನೇ? ಆದರೆ, ವ್ಯವಹಾರಗಳೆಲ್ಲಾ ನನಗೆ ಮಾತ್ರವೇ ಗೊತ್ತಲ್ಲ! ಅದೆಲ್ಲವನ್ನೂ ಅವರ ಸೋದರಮಾವನಿಗೆ ಒಪ್ಪಿಸಿ, ಹೊರಟುಹೋಗಿಬಿಡಬೇಕೆಂದು ನಿಶ್ಚಯಿಸಿದೆ. ಹೊರಟುಹೋಗುತ್ತೇನೆ; ಎಲ್ಲಿಗೆ? ಎಲ್ಲಿಗೋ ಗೊತ್ತಾಗುತ್ತಿಲ್ಲ. ನಮ್ಮ ರಕ್ತಸಂಬಂಧಿ–ನನ್ನ ಸೋದರಮಾವನವರ ಊರಿಗೆ ಹೋಗೋಣವೇ ಎನ್ನಿಸಿತು. ಸೋದರಮಾವನಿಲ್ಲ. ಆತನ ಹೆಂಡತಿ ಇದ್ದಾಳೆ. ನಾನು ಕೈಕೂಸಾಗಿದ್ದಾಗಲೇ ಆಕೆ ನನ್ನ ಮೇಲೆ ಸಿಡಿಮಿಡಿಗುಟ್ಟಿದ್ದಳಂತೆ. ಈಗ ನಾನಲ್ಲಿಗೆ ಹೋದರೆ ಹೇಗಿರುತ್ತದೋ ಪರಿಸ್ಥಿತಿ.

ನನ್ನ ಸೋದರಮಾವನಿಗೆ ಒಬ್ಬ ಮಗಳೂ, ಒಬ್ಬ ಮಗನೂ ಇರುವರಂತೆ. ಅವರಾದರೋ ಈಗ ಇನ್ನೂ ಚಿಕ್ಕವರಿರುತ್ತಾರೆ. ನನ್ನನ್ನು ಈ ಮೊದಲೆಂದೂ ನೋಡಿ ಬಲ್ಲವರಲ್ಲ. ನಾನಲ್ಲಿಗೆ ಹೋಗಿ ನಿಮ್ಮ ಸೋದರತ್ತೆಯ ಮಗನೆಂದು ಹೇಳಿಕೊಂಡಾಗ ಅವರು ಬಹುಶಃ ನನ್ನ ಕಡೆಗೆ ಮಿಕಿ ಮಿಕಿ ನೋಡುತ್ತಾರೆಂದುಕೊಂಡೆ. ಇಲ್ಲಾ, ನಮ್ಮ ತಾತನವರ ಊರಿಗೆ ಹೋಗೋಣವೇ? ಅವರ ಮನೆಯನ್ನು ನಾನಾಗಿಯೇ ತೊರೆದು ಬಂದಿದ್ದೇನೆ. ಅಲ್ಲಿ ಏನೂ ಸರಿಬೀಳದೆ ತಾನೇ ನಾನು ಹೊರಟುಬಂದಿದ್ದು? ಈಗ ಅಲ್ಲಿಗೆ ಹೋದರೆ ಅವರು ನನ್ನನ್ನು

ಸರಿಯಾಗಿ ನೋಡುತ್ತಾರೆಯೇ? ಇದುವರೆಗೆ ನೋಡಿದ್ದರೆಂದೇ? ಎಷ್ಟು ಯೋಚಿಸಿದರೂ ನಾನೆಲ್ಲಿಗೆ ಹೋಗಬೇಕೋ ತಿಳಿಯದಾಯಿತು. ಇಲ್ಲಿಂದ ಹೊರಟುಹೋಗಲೇಬೇಕೆಂಬುದು ಮಾತ್ರ ನಿಚ್ಚಳವಾಗಿ ಗೊತ್ತಾಯಿತು. ಪುನಃ ಮತ್ತೊಂದು ಯೋಚನೆ ತಟ್ಟಿತು.

ನನ್ನ ಸಾಕುತಂದೆಯನ್ನು ನಾನೇನಾದರೂ ಹುಡುಕಿಕೊಂಡು ಬಂದಿದ್ದೆನೇ? ಹಾಗೆಯೇ ಹೊರಟುಬಿಡುತ್ತೇನೆ. ಈ ದಯಾಳುವಿನಂಥ ವ್ಯಕ್ತಿ ಮತ್ತೊಬ್ಬ ಕಾಣಿಸಕೂಡದೆಂದು ಎಲ್ಲಿದೆ? ಎಂದೆನ್ನಿಸಿತು. ಕೂಡಲೇ ನನಗೆ ನಾಚಿಕೆಯಾಯಿತು. ಈ ಭೂಮಿಯ ಮೇಲೆ ನನ್ನ ಸಾಕುತಂದೆಯಂಥ ವ್ಯಕ್ತಿ ಮತ್ತೊಬ್ಬ ಕಾಣಿಸಬಲ್ಲನೆ? ಅಲ್ಲ, ಅಂಥ ವ್ಯಕ್ತಿ ಇರುವುದಾದರೂ ಹೇಗೆ? ಇರಬಹುದು–ಎಂದು ಅಂದುಕೊಳ್ಳುವುದು, ನನ್ನ ಸಾಕು ತಂದೆಯ ಒಳ್ಳೆಯತನವನ್ನು ನಾನು ಗ್ರಹಿಸಲಾರದೇ ಹೋದಂತೆಯೇ ಎನ್ನಿಸಿತು.

ನನ್ನ ಸಾಕುತಂದೆ ನಿನ್ನೆ ತಾನೇ ಗತಿಸಿರುವನು. ಆಗಲೇ ಆತನ ಬಗ್ಗೆ ನಾನು ಅಪಚಾರಕ್ಕೆ ಮೊದಲಿಟ್ಟೆನಲ್ಲ! ನನ್ನ ಸಾಕು ತಂದೆಯಂಥ ವ್ಯಕ್ತಿ ಮತ್ತೊಬ್ಬನಿಲ್ಲ ಈ ವಿಷಯ ಮನಸ್ಸಿಗೆ ಚೆನ್ನಾಗಿ ರುಜುವಾಯಿತು. ಅನಂತರ, ಎರಡು ಜಾವದತನಕ ನನ್ನ ಸಾಕುತಂದೆಯ ಬಗ್ಗೆ ಯೋಚಿಸುತ್ತಾ ಕುಳಿತುಬಿಟ್ಟೆ ನಾನು ಕಳ್ಳನೆಂದು ಊರಿನವರೆಲ್ಲಾ ಆ ದಿನ ನನ್ನನ್ನು ಹೊಡೆದು ಬಡೆದು ಹಿಂಸಿಸಿದಾಗ ನನ್ನ ಸಾಕುತಂದೆ ಮೊಟ್ಟಮೊದಲು ಕಾಣಿಸಿದ್ದನಲ್ಲಾ–ಆಗಿನ ಆತನ ಆ ರೂಪವೇ ಆ ಆಕಾರವೇ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ನೆಲಸಿಬಿಟ್ಟಿದೆ. ನಾನು ಆ ನನ್ನ ಸಾಕುತಂದೆಯ ಮನೆಯಲ್ಲಿದ್ದಷ್ಟು ದಿನವೂ, ಕಣ್ಣು ಮುಚ್ಚಿಕೊಂಡರೆ ಆ ದಯಾಳುವೇ ಕಾಣಿಸುತ್ತಿದ್ದ. ಈಗಲೂ ಆತನೇ ಕಾಣಿಸುತ್ತಿದ್ದಾನೆ. ಆತ ಕಣ್ಣಿಗೆ ಕಾಣಿಸುತ್ತಿದ್ದಷ್ಟು ಹೊತ್ತೂ ನನಗಿನ್ನೊಂದು ಆಲೋಚನೆ ಬರಲಿಲ್ಲ. ಎರಡು ಜಾವಗಳು ಕಳೆದುಹೋದುವು. ಎಲ್ಲರೂ ಊಟ ಮಾಡುತ್ತಿದ್ದರು. ನನ್ನನ್ನಾರೂ ಕರೆಯಲಿಲ್ಲ. ಊಟಕ್ಕೆ ಊರಿನವರು ಹಲವರು ಬಂದಿದ್ದರು. ಅವರಲ್ಲಾರೋ ಊಟದ ಹೊತ್ತಿನಲ್ಲಿ ನನ್ನ ವಿಷಯವೆತ್ತಿದ್ದರಂತೆ, ನನ್ನ ತಮ್ಮಂದಿರ ಸೋದರಮಾವ ನಾನೆಲ್ಲಿರುವೆನೋ ತನಗೆ ಗೊತ್ತಿಲ್ಲವೆಂದುಬಿಟ್ಟನಂತೆ. ನನ್ನ ಹುಚ್ಚು ತಂಗಿ ಬಂದು ನನ್ನನ್ನು ಊಟಕ್ಕೆ ಬಾ ಎಂದು ಕರೆದಳು, ಹೋದೆ. ಊಟ ಮಾಡಿದೆ. ಬಂದು ಮತ್ತೆ ದನಗಳ ಕೊಟ್ಟಿಗೆಯಲ್ಲಿ ಬಿದ್ದುಕೊಂಡೆ. ನಾನು ಹೊರಟುಬಿಡುವುದು ದಿಟ. ಆ ದಿನ ಸಂಜೆಯೇ ಹೊರಟುಬಿಡೋಣ ಎನ್ನಿಸಿತು. ಆದರೆ, ಹಿಂದೊಮ್ಮೆ ನಮ್ಮ ತಾತನವರ ಮನೆಯಿಂದ ರಾತ್ರಿ ಹೊತ್ತು ಹೊರಟುಬಂದಿದ್ದೂ, ಆ ರಾತ್ರಿ ನಾನು ಪಟ್ಟಪಾಡುಗಳೆಲ್ಲಾ ಜ್ಞಾಪಕಕ್ಕೆ ಬಂದುವು. ಬೆಳಗಾಗುತ್ತಲೇ ಎದ್ದು ಹೊರಟುಬಿಡೋಣವೆಂದು ನಿರ್ಧರಿಸಿಕೊಂಡೆ. ಆ ಹಗಲೆಲ್ಲಾ ನಾನು ಅತ್ತಿದ್ದರಿಂದ ನನ್ನ ಕಣ್ಣುಗಳು ಉಬ್ಬಿ, ಕೆಂಪೇರಿದ್ದುವು. ಹಾಗೆಂದು ಜೀತದಾಳು ಹೇಳಿದ. ಅವನೆಂದ–'ಬುದ್ದೀ, ನಿನಗೂ ಈ ಮನೆಗೂ ಇನ್ನು ಋಣ ತೀರಿತು. ಅತ್ತರೇನು ಲಾಭ?'

ಹೊತ್ತು ಕಂತಿತು. ನನ್ನ ತಮ್ಮಂದಿರ ಸೋದರಮಾವ ಮನೆಯಂಗಳದ ಜಗುಲಿಯ ಮೇಲೆ ಕುಳಿತಿದ್ದ. ನಾನು ಆತನ ಬಳಿಗೆ ಹೋಗಿ, "ನಾಳೆ ಬೆಳಗಾಗುತ್ತಲೇ ನಾನು ಹೊರಟುಹೋಗುತ್ತೇನೆ. ಇಷ್ಟು ದಿನಗಳವರೆಗೆ ನಾನೇ ವ್ಯವಹಾರವನ್ನೆಲ್ಲಾ

ನೋಡಿಕೊಳ್ಳುತ್ತಿದ್ದೆನಲ್ವೇ? ಆ ಕಾಗದ ಪತ್ರಗಳನ್ನೆಲ್ಲಾ ಒಪ್ಪಿಸುತ್ತೇನೆ. ನೀವು ನೋಡಿಕೊಳ್ಳಿ." ಎಂದೆ. ಆತ ನನ್ನತ್ತ ಕೋಪದಿಂದ ದುರುಗುಟ್ಟಿ ನೋಡಿದನಾಗಲೀ ಯಾವ ಮಾತನ್ನೂ ಆಡಲಿಲ್ಲ. ಸ್ವಲ್ಪ ಹೊತ್ತು ಹಾಗೆಯೇ ನೋಡುತ್ತಿದ್ದು ಅನಂತರ 'ನೀನು ಹೋಗಬಹುದು. ನಿನಗಾಗಿ ಇಲ್ಲಾರೂ ಕಾಯುತ್ತಿಲ್ಲ' ಎಂದ. ನಾನು ಕ್ಷಣ ಹೊತ್ತು ಹಾಗೆಯೇ ಕುಳಿತಿದ್ದೆ. ಅನಂತರ ಹೀಗೆಂದೆ–

"ಚಿಕ್ಕಪ್ಪಾ, ಅವರು ಸಾಯುತ್ತಾ ನನ್ನೊಂದಿಗೆ ಮಕ್ಕಳು ಜೋಕೆ ಎಂದು ಕಣ್ಮುಚ್ಚಿದರು. ನಾನು ಮಾಡಿದ ಕರ್ಮವೋ ಏನೋ ಚಿಕ್ಕಮ್ಮ ಕೂಡಾ ಹೋಗಿಬಿಟ್ರು. ಮಕ್ಕಳ ಜವಾಬ್ದಾರಿಯನ್ನು ಚಿಕ್ಕಪ್ಪ ನನಗೊಪ್ಪಿಸಿ ಹೋಗಿದ್ದಾರೆ" ನನ್ನ ಈ ಮಾತುಗಳಿಂದ ಆತ ಭುಗಿಲ್ಲೆದ್ದು ಸಿಡಿದುಬಿದ್ದ "ನೀನೆಲ್ಲಿಂದ ಮೂಲವಾದೆಯೋ ಈ ಮನೆಗೆ ಶನೇಶ್ವರನ ಹಾಗೆ? ಮನೆಯನ್ನಿನ್ನೂ ತೊಳೆದು ಮಸೀದಿ ಮಾಡಬೇಕೂಂತ ಇದೀಯೇನೋ? ನೀನೇನು? ನಿನ್ನ ಯೋಗ್ಯತೆಯೇನು? ಮಕ್ಕಳನ್ನು ನೀನು ನೋಡಿಕೊಳ್ಳೋದೂ ಅಂದ್ರೇನು? ಹೊತ್ತುಗೊತ್ತಿಗೆ ಟಿಕಾಣೆಯಿಲ್ಲದ ಬೇವಾರ್ಸಿ ನೀನೊಬ್ಬ ದೊಡ್ಡ ಮನುಷ್ಯನಾಗಿಬಿಟ್ಟೆಯೇನೋ! ನೀನೀಕ್ಷಣವೇ ಈ ಮನೆ ಬಿಟ್ಟು ಕದಲು. ನಾಳೆ ಬೆಳಗ್ಗೆ ಹೋಗ್ತೀನಿ ಅಂತೀಯಲ್ಲಾ? ಈ ಬೆಳಿಗ್ಗೆ ಎರಡು ಬಟ್ಟಲು ಧ್ವಂಸಮಾಡಿದೆ. ನಾಳೆ ಬೆಳಗಿನತನಕ ಇಲ್ಲಿಯೇ ತಳ ಊರೋಣ ಅಂತ ಮಾಡಿಕೊಂಡಿದೀಯೇನೋ? ನಿಮ್ಮಪ್ಪನ ಗಂಟೇನಾದ್ರೂ ಇದೆಯೇನೋ ಇಲ್ಲಿ? ಭಡವಾ! ತೊಲಗಾಚೆ!" ಎಂದ. ನನಗೆ ಅಳು ಬಂದಿತು, ಕೋಪವೂ ಬಂದಿತು. ನನ್ನನ್ನು ಬೇಕಾದರೆ ಹೋಗು ಎನ್ನಲಿ; ಆದರೆ ಕಾಗದ ಪತ್ರಗಳನ್ನು ನೋಡಿಕೊಳ್ಳುತ್ತೇನೆ ಎನ್ನುತ್ತಿಲ್ಲವಲ್ಲಾ? ಆದರೂ, ಪೆಟ್ಟಿಗೆ ತೆರೆದು ನೋಡಿಕೊಂಡರೆ ಪತ್ರಗಳ ಸಂಗತಿ ತಿಳಿಯಲಿಕ್ಕಿಲ್ಲವೇ? ನಾನು ಹೇಳದಿದ್ದರೂ ಆತ ನೋಡಿಕೊಳ್ಳಲಿಕ್ಕಿಲ್ಲವೆ? ಈ ಮನೆಯೊಂದಿಗೆ ನನ್ನದೇನೋ ಸಂಬಂಧವಿದ್ದಂತೆ ಮಾತನಾಡುವುದು ನನ್ನದೇ ತಪ್ಪು ಆತ ಅಲ್ಲಿಂದೆದ್ದು ಎಲ್ಲಿಗೋ ಹೋಗಿಬಿಟ್ಟ

ನಾನು ಹಾಗೆಯೇ ಜಗುಲಿಯ ಮೇಲೆ ಕುಳಿತಿದ್ದೆ ಆತನ ಹೆಂಡತಿ ಬಂದು ಅಂಗಳದಲ್ಲಿ ಕಸ ಗುಡಿಸಿದಳು. ನಾನು ಕುಳಿತಿದ್ದೇನಲ್ಲಾ ಎಂದಾದರೂ ಅಂದುಕೊಳ್ಳದೆ ನನ್ನ ಮೇಲೊಂದಿಷ್ಟು, ಅಂಗಳಕ್ಕೆ ಚಿಮುಕಿಸುವ ನೆಪದಲ್ಲಿ, ನೀರು ಚೆಲ್ಲಿದಳು.

ರಾತ್ರಿಯಾಯಿತು. ನಾನು ಪುನಃ ಕೊಟ್ಟಿಗೆಗೆ ಹೋಗಿ ಬಿದ್ದುಕೊಂಡೆ. ನಿದ್ರೆ ಹತ್ತಿತು. ಬೆಳಕು ಹರಿಯುತ್ತಿದೆ ಎನ್ನುವಾಗ ನನಗೆ ಎಚ್ಚರವಾಯಿತು, ಎಚ್ಚರವಾದದ್ದು, ನಾನು ಹೊರಟುಬಿಟ್ಟದ್ದೂ ಏಕಕಾಲದಲ್ಲಿಯೇ ನಡೆದುವು. ಊರ ಹೊರಗಿನ ಮೇರೆಯವರೆಗೆ ಹೋದೆ. ತಮ್ಮಂದಿರನ್ನೂ, ಹುಚ್ಚು ಸೋದರಿಯನ್ನೂ ಒಮ್ಮೆ ನೋಡಿಕೊಂಡು ಹೋಗೋಣ ಎನ್ನಿಸಿತು. ಹತ್ತು ಹೆಜ್ಜೆ ಹಿಂದಕ್ಕೆ ಬಂದೆ ಆ ಹೊತ್ತಿಗೆಲ್ಲಾ ಅವರಿನ್ನೂ ಎದ್ದಿರುವುದಿಲ್ಲ ಎದ್ದಿದ್ದರೂ ಇನ್ನು ನಾನೇಕೆ ಅವರ ಮನೆಗೆ ಹೋಗಬೇಕು? ಅವರ ಮನೆ ಏನು? ಮನೆ ನನ್ನದೂ ಅಲ್ಲವೇ? ನನ್ನ ತಮ್ಮಂದಿರದಲ್ಲವೇ? ನನ್ನ ಸಾಕುತಂದೆಯದಲ್ಲವೇ? ನನ್ನ ಸಾಕುತಂದೆ ಈಗಿಲ್ಲ. ಮಕ್ಕಳಿಗೇನೂ ತಿಳಿಯದು. ನಾನವರಿಗೆ ರಕ್ತ ಸಂಬಂಧಿಯಲ್ಲ. ನನ್ನ ಚಿಕ್ಕಪ್ಪನಿಗೆ

ನಾನು ಸಾಕುಮಗ. ನನಗಾತ 'ತಂದೆ.' ಮಿಕ್ಕವರಿಗೂ ನನಗೂ ಯಾವುದೇ ಸಂಬಂಧವಿಲ್ಲ. ಮತ್ತೆ ದಾರಿ ಬಿದ್ದು ಹೊರಟೆ. ತುಂಬ ದೂರದವರೆಗೆ ಹೋಗುವವರೆವಿಗೂ, ಎಷ್ಟು ದೂರ ಹೋಗಬೇಕೋ, ಎಲ್ಲಿಗೆ ಹೋಗಬೇಕೋ ತಿಳಿಯದಾಯಿತು. ಸಾಕಷ್ಟು ಹೊತ್ತೇರಿತ್ತು. ಒಂದೂರಿನ ಸಮೀಪವಾದೆ. ಆ ಊರು ನನಗೆ ಗೊತ್ತಿದ್ದ ಊರು. ಆ ಊರಿನೊಳಗಡೆ ಹೋಗಲು ನನಗಿಷ್ಟವಿಲ್ಲ. ಆ ಊರಿನಲ್ಲಿ ಕಾಲಿಕ್ಕದೆ, ದೂರವಾಗಿ ಹೋದೆ. ಹಾಗೆಯೇ ನಡೆಯುತ್ತಿದ್ದೆ. ಮತ್ತೊಂದು ಸಣ್ಣ ಹಳ್ಳಿ ಎದುರಾಯಿತು. ಆ ಹಳ್ಳಿಯನ್ನು ನಾನೆಂದೂ ನೋಡಿರಲಿಲ್ಲ. ಹಳ್ಳಿಯೊಳಗಿನಿಂದಲೇ ಹಾದು ಹೋಗತೊಡಗಿದೆ. ಆ ಹಳ್ಳಿ ಕುಗ್ರಾಮ. ಹೆಂಚಿನ ಮನೆಯೇ ಕಂಡುಬರಲಿಲ್ಲ. ಅಲ್ಲಿರುವವರೆಲ್ಲರೂ ಗೊಲ್ಲರು, ಗೌಳಿಗರೇ ಹೊರತು, ಇನ್ನಿತರೆ ಜನ ಕಂಡುಬರಲೇ ಇಲ್ಲ. ಆ ಹಳ್ಳಿಯನ್ನೂ ಬೆನ್ನ ಹಿಂದಿಕ್ಕಿ ಮುಂದುವರಿದೆ. ಹೊತ್ತು ನಡುನೆತ್ತಿಗೆ ಬಂದಿತು. ಹಸಿವು ದಹಿಸುತ್ತಿತ್ತು. ಇನ್ನು ನಡೆಯಲಾರೆನೆನ್ನಿಸಿತು. ಕಣ್ಣ ಮುಂದಕ್ಕೂ–ಬೆನ್ನ ಹಿಂದಕ್ಕೂ ದೃಷ್ಟಿ ಹಾಯಿಸಿ ನೋಡಿದರೂ, ಕಣ್ಣ ನೋಟದ ಮೇರೆಯಲ್ಲಿ ಎಲ್ಲೂ ಊರೊಂದು ಕಂಡುಬರಲಿಲ್ಲ. ಎಲ್ಲಿಯಾದರೂ ಕೆರೆಯೋ, ಕುಂಟೆಯೋ ಇದೆಯೇನೋ ಎಂದು ತಡಕಾಡಿದೆ. ಹೋಗುವ ದಾರಿಗೆ, ಅಡ್ಡ ನೋಟಕ್ಕೆ ಅನತಿ ದೂರದಲ್ಲಿ ಎತ್ತರದ ಕೆರೆಯ ಒಡ್ಡಿನಂಥದು ಕಂಡುಬಂದಿತು. ಕೆರೆಯೇ ಇರಬೇಕೆಂದುಕೊಂಡೆ. ದಾರಿಯನ್ನು ಬಿಟ್ಟು, ಅತ್ತಕಡೆಗೆ ನಡೆಯತೊಡಗಿದೆ. ಒಂದು ಕೂಗಳತೆಯ ದೂರ ಹೋದೆ. ಅದು ಕೆರೆಯಲ್ಲ. ಒಡ್ಡು ಹತ್ತಿದೆ. ಆ ಒಡ್ಡು ಏಕೆ ಹಾಕಿದ್ದರೋ ತಿಳಿಯದು. ಹತ್ತಿರದಲ್ಲಿಯೇ ಒಂದು ಜಾಲಿ ಮರವಿತ್ತು. ಇನ್ನು ನಡೆಯಲಾರೆ. ಹಸಿವಾಗುತ್ತಿದೆ. ನಾಲಗೆ ಸೇದುತ್ತಿದೆ. ಆ ಜಾಲಿ ಮರದ ಕೆಳಗೆ ಅಂಗೈಯಗಲದ ನೆರಳಿತ್ತು. ಆ ನೆರಳಿನಲ್ಲಿ, ಮೈಮೇಲಿನ ಉತ್ತರೀಯವನ್ನು ಹಾಸಿಕೊಂಡು, ಮಲಗಿಕೊಂಡೆ. ಅಂದೊಮ್ಮೆ, ನಮ್ಮ ತಾತನವರ ಮನೆ ತೊರೆದು ಬಂದಾಗ ಬಟ್ಟೆಯೆಂಬುದೇ ಇರಲಿಲ್ಲ. ಈಗ ನನ್ನ ಸಾಕು ತಂದೆಯ ಪುಣ್ಯವೋ ಎಂಬಂತೆ ಒಂದು ಪಂಚೆ, ಒಂದು ಉತ್ತರೀಯವಿತ್ತು. ಆ ಉತ್ತರೀಯವನ್ನು ನೋಡಿದಷ್ಟು ಹೊತ್ತೂ ನನ್ನ ಸಾಕುತಂದೆ ಜ್ಞಾಪಕಕ್ಕೆ ಬಂದ. ನನ್ನ ಸಾಕುತಂದೆ ತಾನು ಸಾಯುತ್ತಾ, ನನಗೆ ಮಲಗಿಕೊಳ್ಳಲು ಕೆಳಗೊಂದು ಉತ್ತರೀಯವನ್ನು ಕೊಟ್ಟು ಸತ್ತ. ಆ ಉತ್ತರೀಯವನ್ನು ಮೈ ತುಂಬಾ ಹೊದ್ದುಕೊಂಡು, ನನ್ನ ಸಾಕುತಂದೆಯೇ ನನ್ನನ್ನು ಅಪ್ಪಿಕೊಂಡಂತೆ ಸಂತೋಷಪಟ್ಟೆ ಅಷ್ಟರಲ್ಲಿ ಮೈಮರೆಯತೊಡಗಿತು. ನಿದ್ರೆ ಬಂದಿತು.

ಹೊತ್ತು ಕಂದುತ್ತಿದೆ ಎನ್ನುವಾಗ ನನಗೆ ಎಚ್ಚರವಾಯಿತು. ಅತ್ತ ಇತ್ತ ನೋಡಿದೆ. ದೂರದಲ್ಲಿ ಹತ್ತು ಕುರಿಗಳನ್ನು ಮೇಯಿಸುತ್ತಿದ್ದ ಗೊಲ್ಲರವನು ಕಂಡುಬಂದ. ಅವನ ಹತ್ತಿರಕ್ಕೆ ಹೋದೆ. ಹೊಟ್ಟೆ ಹಸಿಯುತ್ತಿದೆ ಎಂದೆ. ಅವನು, 'ನಿನ್ನದು ಯಾವೂರು?' ಎಂದ. ನನ್ನ ಸಾಕುತಂದೆಯ ಊರೂ, ಆತನ ಹೆಸರೂ ಹೇಳಿ, ನಾನು ಆತನ ಮಗನೆಂದೂ, ಯಾವುದೋ ಊರಿಗೆ ಹೋಗುತ್ತಾ ದಾರಿ ತಪ್ಪಿ ಇಲ್ಲಿಗೆ ಬಂದೆನೆಂದೂ ತಿಳಿಸಿದೆ. ಅವನು, "ಬುದ್ದೀ, ಆ ದೊಡ್ಡ ಬುದ್ಯೋರು ಕಾಲವಾದರಲ್ಲಾ! ಅವರೆಂಥಾ ಧರ್ಮಾತ್ಮರಪ್ಪಾ! ಒಂದ್ಸಲ ನಾನು ಊರಿಗೆ

ಹೊಟ್ಟೆಗಿಲ್ಲದೆ ಹೋದಾಗ, ಒಂದು ಮೊರದ ತುಂಬ ಭತ್ತ ಕೊಟ್ಟು, ಒಂದು ಶಾಲು ಕೊಟ್ರು ದೊಡ್ಡ ಬುದ್ಯೋರು. ಎಂಥ ತಣ್ಣನೆಯ ಮನಸ್ಸಿನ ಒಡೆಯರು ತಂದೆ! ಬುದ್ದೀ, ಕೂತ್ಕೊಳ್ಳಿ, ಕುರಿ ಹಾಲು ಕರೆದು ತತ್ತೀನಿ," ಎಂದು ಹೇಳಿ, ತನ್ನ ಬಳಿಯಲ್ಲಿದ್ದ ಬಟ್ಟಲಿನ ತುಂಬ ಹಾಲು ಕರೆದು ತಂದ. ಆ ಹಾಲು ಕುಡಿದೆ. ಅವನ ಹತ್ತಿರವಿದ್ದ ಸೋರೆ ಬುರುಡೆಯಲ್ಲಿ ನೀರು ಕುಡಿದೆ, ಇನ್ನು ಅಲ್ಲಿಂದ ಹೊರಡಲು ಸಿದ್ಧನಾದೆ. ಆ ಹೊತ್ತಿಗಾಗಲೇ ಕತ್ತಲಾಗಿತ್ತು. ಅವನು, "ಈಗೆಲ್ಲಿಗೆ ಹೋಗ್ತೀರಿ ಬುದ್ದೀ? ಊರು ಇಲ್ಲಿಗೆ ಶಾನೆ ದೂರ. ನಾನು ಬೆಳಗಾಗೋಗಂಟ ಹೊಲದಲ್ಲೇ ಇರ್ತೀನಿ. ಕುರಿಗಳೂ, ನಾಯಿಯೂ ಇವೆ, ಭಯವಿಲ್ಲ. ಹೊಟ್ಟೆ ತಂಪಾಯಿತಲ್ಲಾ, ಬೆಳಗಾಗೋಗಂಟ ಇಲ್ಲೇ ಮನೀಕೊಳಿ, ಬೆಳಗಾಗುತ್ಲೇ ಮತ್ತೆ ಒಸಿ ಹಾಲು ಕುಡ್ದು ಹೊಲ್ಟುಬಿಡೋರಂತೆ" ಎಂದ. ಆಗಲೇ ಬಹಳ ಕತ್ತಲಾಗಿತ್ತು. ಮಲಗಿಕೊಂಡೆ, ನಿದ್ರೆ ಹತ್ತಿತು.

೫

ನನಗೆ ರಾತ್ರಿ ಒಂದು ಹೊತ್ತಿನಲ್ಲಿ ಎಚ್ಚರವಾಯಿತು. ಕುರಿಗಳೆಲ್ಲಾ ಪಕ್ಕದ ಹೊಲದಲ್ಲಿ ಮೇಯುತ್ತಿದ್ದವು. ಗೊಲ್ಲರವನ ನಾಯಿ ನನ್ನ ಕಾಲುದಿಸೆಯಲ್ಲಿ ಮಲಗಿತ್ತು. ಗೊಲ್ಲರವನು ಕಂಬಳಿ ಮುಸುಕು ಹೊದೆದು, ಕುರಿಗಳರ ಆ ಪಕ್ಕದಲ್ಲಿ ಮಲಗಿದ್ದನು. ಅಂದು ಕರಾಳ ರಾತ್ರಿ, ಮಧ್ಯೆ ಮಧ್ಯೆ ಒಂದೆರಡು ಕುರಿಗಳು ಅರಚುವುದರ ವಿನಾ ಮತ್ತೊಂದು ಸದ್ದೇ ಇಲ್ಲ. ನನಗೆ ಪುನಃ ನಿದ್ರೆ ಬರಲಿಲ್ಲ. ನನ್ನ ಪರಿಸ್ಥಿತಿಯನ್ನು ಕುರಿತು ಆಲೋಚಿಸತೊಡಗಿದೆ.

ಈ ಗೊಲ್ಲರವನಿಲ್ಲದಿದ್ದ ಪಕ್ಷಕ್ಕೆ ಈ ದಿನ ನಾನು ಸತ್ತೇಹೋಗುತ್ತಿದ್ದೆನಲ್ಲವೇ! ಎಂದೆನ್ನಿಸಿತು. ಈ ಗೊಲ್ಲರವನಿಗೆ ನನ್ನ ಮೇಲೇಕೆ ಇಷ್ಟು ದಯೆ ಹುಟ್ಟಿತು? ಸಹಜವಾಗಿ ಮಾನವರು ಸಹ–ಮಾನವರೆಂದರೆ ದಯೆಯಿಂದಿರುತ್ತಾರೆ. ಆದರೆ ನನ್ನ ತಮ್ಮಂದಿರ ಸೋದರಮಾವನಿಗೇಕೆ ನಾನೆಂದರೆ ಅಷ್ಟೊಂದು ದ್ವೇಷ? ಎಲ್ಲರೂ ಹಾಗಿರೋಲ್ಲ. ಕೆಲವರಿಗೆ ಸ್ವಾಭಾವಿಕವಾಗಿಯೇ ಮೆತ್ತನೆಯ ಮನಸ್ಸಿರುತ್ತದೆ. ಅವರು ಅಮಾಯಕರಾಗಿರುತ್ತಾರೆ. ಗೊಲ್ಲರವರು ಮತ್ತಿಷ್ಟು ಅಮಾಯಕರು. ಅಷ್ಟೇ ಅಲ್ಲ; ಗೊಲ್ಲರವನು ನನ್ನ ಮೇಲೆ ತೋರಿಸಿದ ಈ ದಯೆಯಲ್ಲಿ ಬಹುಪಾಲ ನನ್ನ ಸಾಕು ತಂದೆಯವರ ಹೆಸರು ಕೇಳಿದ್ದರಿಂದಲೇ ಉಂಟಾದದ್ದು. ಮಹಾರಾಜನಂಥ ಆ ವ್ಯಕ್ತಿ ಹೀಗೆ ಇನ್ನೆಷ್ಟು ಜನರಿಗೆ ಉಪಕಾರಗೈದಿರುವರೋ! ನಾನು ಅವರಲ್ಲೊಬ್ಬನಷ್ಟೆ. ಈ ಗೊಲ್ಲರವನು ಮತ್ತೊಬ್ಬನಷ್ಟೆ. ಒಂದು ಮೊರದ ತುಂಬ ಬತ್ತ ಹೊದೆಯಲು ಒಂದು ಶಾಲು ಕೊಟ್ಟಿದ್ದಕ್ಕೇನೇ ಈ ಗೊಲ್ಲರವನಿಗೆ ನನ್ನ ಸಾಕುತಂದೆ ಮಾಡಿದ ಉಪಕಾರ ಮರೆತುಹೋಗಲಿಲ್ಲವಲ್ಲಾ! ಎರಡು ಮೂರು ವರ್ಷಗಳವರೆಗೆ ನನ್ನನ್ನು ಮನೆಯಲ್ಲಿಟ್ಟುಕೊಂಡು, ತನ್ನ ಹಿರಿಯ ಮಗನೋಪಾದಿಯಲ್ಲಿ, ನೋಡಿಕೊಂಡು, ಮನೆಯ ಯಾಜಮಾನ್ಯವನ್ನೆಲ್ಲಾ ನನಗಿತ್ತ ನನ್ನ ಸಾಕುತಂದೆಯ ಉಪಕಾರವನ್ನು ನಾನು ಮರೆಯಬಲ್ಲೆನೇ! ಮರೆತುಬಿಡದಿರುವುದೇ ಒಂದು ಸುಗುಣವೆನ್ನಿಸೀತೇ? ಅಷ್ಟು ವಿನಾ ನಾನು ಇನ್ನೇನು ತಾನೇ ಮಾಡಬಲ್ಲೆ? ತಿನ್ನಲು ತಿಂಡಿ ಇಲ್ಲ; ತಲೆಯ ಮೇಲೊಂದಿಷ್ಟು ಸೂರಿಲ್ಲ. ನಾನು ನಾಳೆ ಬೆಳಗ್ಗೆ

ಹೊರಟು ಹೋಗುವುದಂತೂ ತಪ್ಪಿದ್ದಲ್ಲವಲ್ಲಾ? ಎಲ್ಲಿಗೆ ಹೋಗಲಿ? ನನ್ನ ವಿಷಯವನ್ನೆಲ್ಲಾ ಈ ಗೊಲ್ಲರವನಿಗೆ ಹೇಳಲೇ? ಹತ್ತು ಕುರಿಗಳನ್ನಿಟ್ಟುಕೊಂಡು ಕಾಲಕ್ಷೇಪ ಗೈವ ಈ ಗೊಲ್ಲರವನು ತಾನೇ ನನಗೇನು ಉಪಕಾರ ಮಾಡಬಲ್ಲ? ಇವನೊಂದಿಗೆ ಹೇಳಿಕೊಳ್ಳಲೇ? ಹೇಳಿಕೊಂಡರೂ ಪ್ರಯೋಜನವಿಲ್ಲ. ಎಲ್ಲದಕ್ಕೂ ಮೇಲಿನ ಆ ಭಗವಂತನೇ ಇದಾನೆ. ನನ್ನ ಸಾಕುತಂದೆ ಆಗಾಗ ಒಂದು ಪದ್ಯವನ್ನು ಹೇಳುತ್ತಿದ್ದ:

ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ
ಅಲ್ಲಲ್ಲಿಗಾಹಾರವಿತ್ತವರು ಯಾರೊ
ಬಲ್ಲಿದನು ಕಾಗಿನೆಲೆಯಾದಿ ಕೇಶವರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ.

ನಿಜ. ಕಲ್ಲಿನೊಳಗಣ ಕಪ್ಪೆಗೆ ಆಹಾರವನ್ನೊದಗಿಸಿಕೊಡುವ ಆ ಭಗವಂತ ಮನುಷ್ಯರಿಗೇಕೆ ಕೊಡದೇ ಇದ್ದಾನು? ಹುಟ್ಟಿಸಿದ ದೇವರೇನು ಹುಲ್ಲು ಮೇಯಿಸುತ್ತಾನೆಯೇ? ಎಲ್ಲದಕ್ಕೂ ಆ ದೇವರಿದ್ದಾನೆ. ನನ್ನ ಸಾಕು ತಂದೆ ನನಗೆ ಮಾಡಿದ ಉಪಕಾರಕ್ಕಾಗಿ ನನ್ನ ಚರ್ಮ ಸುಲಿದು ಆತನ ಪಾದಗಳಿಗೆ ಚಪ್ಪಲಿ ಹೊಲಿದು ಕೊಟ್ಟೇನು! ಈಗಾರಿಗೆ ಕೊಡಲಿ? ನನ್ನ ಸಾಕು ತಂದೆಯಾದರೋ ಈಗ ಸತ್ತು ಸ್ವರ್ಗದಲ್ಲಿದ್ದಾನೆ. ಆತ ಸಾಯುತ್ತಾ, 'ಮಕ್ಕಳು ಜೋಕೆ' ಎಂದು ಸತ್ತ

ನಾನಾದರೋ ಆ ಮಕ್ಕಳನ್ನು ತೊರೆದು ಬಂದಿರುವೆ. ಆ ಮಕ್ಕಳ ಸೋದರಮಾವ ನನ್ನನ್ನು ಅಲ್ಲಿ ಉಳಿಯಗೊಡಲಿಲ್ಲವಲ್ಲಾ. ತೊರೆದು ಬರದೇ ಇನ್ನೇನು ತಾನೇ ಮಾಡಲಿ? ಆ ಮಕ್ಕಳಿಗೇನು? ಎರಡು ಜೊತೆ ಎತ್ತುಗಳ ಸಾಗುವಳಿ ಇದೆ. ನಾಲ್ಕು ಸಾವಿರಕ್ಕೆ ಕಾಗದಪತ್ರಗಳಿವೆ. ಅವರಿಗೆ ನಾನು ಉಪಯೋಗ ಬೀಳುವ ಅಗತ್ಯವಿಲ್ಲ. ವ್ಯವಹಾರಗಳನ್ನೆಲ್ಲಾ ನೋಡಿಕೊಳ್ಳಲು ಸ್ವತಃ ಅವರ ಸೋದರಮಾವನೇ ಇದಾನೆ. ನಾನು ಅನಾಥ ಪಕ್ಷಿಯಾಗಿ ತಿರುಗುತ್ತಿರುವೆ. ನನಗೇನೇ ತಂದೆ–ತಾಯಿಗಳಿಲ್ಲ. ನನ್ನ ಖಾಸಾ ಸೋದರಮಾವನ ಮನೆಗೆ ಹೋಗೋಣವೇ ಎಂದರೆ ನನ್ನ ದುರದೃಷ್ಟಕ್ಕೆ ಸರಿಯಾಗಿ ಆತನೂ ಸತ್ತುಹೋಗಿದಾನೆ. ನನ್ನ ಸ್ವಂತ ಚಿಕ್ಕಮ್ಮನವರ ಮನೆಗೆ ಹೋಗುವುದೆಂದರೆ ಕನಸಿನ ಮಾತೇ ಸರಿ. ನನ್ನ ಸಾಕುತಂದೆ ನನಗೆ ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರ ಮಾಡಬೇಕೆಂಬ ಹಂಬಲ ಮಾತ್ರ ನನಗಿದ್ದೇ ಇದೆ.

ನಾನು ಹೀಗೆಂದುಕೊಳ್ಳುತ್ತಿರುವಾಗ ಕುರಿಯೊಂದು 'ಬ್ಯಾ' ಎಂದು ಅರಚಿತು. 'ಓ ಮೂರ್ಖಾ' ಎಂದಂತೆ ಆ ಧ್ವನಿ ಕೇಳಿಸಿತು. ನಾನು ಉತ್ತರೀಯವನ್ನು ಮುಸುಗು ಹೊದೆದು ಮತ್ತೆ ಮಲಗಿಕೊಂಡೆ...ನನ್ನ ಸಾಕು ತಂದೆ ಎದುರುಗಡೆಯಲ್ಲಿ ಕಾಣಿಸತೊಡಗಿದ. ಗಜನಿಂಬೆ ಹಣ್ಣಿನಂಥ ಮೈಬಣ್ಣದ, ಅರವತ್ತು ವರ್ಷದ ಆಜಾನುಬಾಹು. ಸಣ್ಣ ಕುಂಬಳಕಾಯಷ್ಟು ಹೊಟ್ಟೆಯಿದೆ. ಮುಖದಲ್ಲಿ ಸಣ್ಣ ಗೆರೆಯ ನಾಮಗಳಿವೆ. ತಲೆಯ ಮೇಲೆ ಎತ್ತಿ ಕಟ್ಟಿದ, ಕೊಂಡಿಯಂತಿರುವ ಜುಟ್ಟು ಕಾಣುವ ಮುಡಿ. ತೆಳು ಕಾವಿಬಣ್ಣದ ಪಂಚೆ ತೊಟ್ಟು, ಮೇಲೆ ಉತ್ತರೀಯವನ್ನು ಹೊದೆದಿದ್ದಾನೆ. ಕಾಲುಗಳಲ್ಲಿ ಚಡಾವುಗಳಿವೆ. ಬಲಗೈಯಲ್ಲಿ ಹಿತ್ತಾಳೆ ಅಣಸು

ಹಾಕಿದ ಬಡಿಗೆಯಿದೆ. ಚುಟ್ಟಾ ಸೇದುತ್ತಿದ್ದಾನೆ. ನನ್ನ ಪ್ರಾಣ ಇದ್ದುದ್ದಿದ್ದಂತೆಯೇ ಹಾರಿಹೋದಂತಾಯಿತು. ಬಾಯಿಂದ ಮಾತೇ ಹೊರಬಾರದಾಯಿತು. ಆದರೆ 'ಚಿಕ್ಕಪ್ಪಾ' ಎಂದು ಕೂಗಿದೆನೆಂದುಕೊಳ್ಳುವೆ. ನಾನು ನಿದ್ರಿಸುತ್ತಿದ್ದಂತಿಲ್ಲ. ಆದರೂ ನಿದ್ರಿಸುತ್ತಿದ್ದಂತೆಯೇ ಇದೆ. ಆತ, 'ಮಗೂ, ಮಕ್ಕಳು ಜೋಪಾನ' ಎಂದಂತಾಯಿತು. ನನಗೆ ಅಳು ಬಂದುಬಿಟ್ಟಿತು, ಅತ್ತುಬಿಟ್ಟೆ ಗಟ್ಟಿಯಾಗಿ ಅತ್ತುಬಿಟ್ಟಿರಬೇಕು. ನಗೆ ಮುಚ್ಚಿದ್ದ ಆ ಒಂದಿಷ್ಟು ಮಂಪರೂ ತಟಕ್ಕನೆ ಮರೆಯಾದಂತಾಗಿ ನಾನು ಮುಸುಕು ತೆಗೆದು ನೋಡಿದೆ. ನನ್ನ ಬಳಿಯೇ ಮಲಗಿದ್ದ ನಾಯಿ ತಟಕ್ಕನೆ ಎದ್ದು ಒಮ್ಮೆ ಬೊಗಳಿತು! ನನಗೆ ಭಯವಾಯಿತು. ದೂರದಲ್ಲಿ ಮಲಗಿದ್ದ ಗೊಲ್ಲರವನೆದ್ದು ಕುರಿಗಳೆಲ್ಲೋ ತಪ್ಪಿಸಿಕೊಂಡು ಹೋಗುತ್ತಿವೆ ಎಂದುಕೊಂಡರಬೇಕು. ಸರ್ರನೆ ಎದ್ದು ಕುಳಿತು ಕೋಲು ಕುಟ್ಟಿದ. ಮರುಕ್ಷಣವೇ ಮತ್ತೆ ಎಲ್ಲವೂ ನಿಶ್ಶಬ್ದಗೊಂಡಿತು. ನಾನು ಮತ್ತೆ ನಿದ್ರಿಸಲಿಲ್ಲ. ನನ್ನ ಸಾಕು ತಂದೆ ಇದೇ ರೂಪದಲ್ಲಿ ಆಮೇಲೆ ನನಗೆಷ್ಟೋ ಸಾರಿ ಕಾಣಿಸಿಕೊಂಡಿದ್ದಾನೆ. ಕಾಣಿಸಿಕೊಂಡಾಗಲೆಲ್ಲಾ, 'ಅಪ್ಪಾ, ಮಗೂ, ಮಕ್ಕಳು ಜೋಪಾನ!' ಎನ್ನುತ್ತಲೇ ಬಂದ. ಆತ ಹಾಗೆ ಹೇಳುತ್ತಾ ಬಾರದೇ ಇದ್ದಿದ್ದರೆ ಈ ಕಥೆಯನ್ನೇ ಬರೆಯುತ್ತಿರಲಿಲ್ಲ. ನನ್ನ ಕಥೆಯನ್ನು ಯಾರೂ ಓದುವ ಅಗತ್ಯವೇ ಇರುತ್ತಿರಲಿಲ್ಲ.

ಆಮೇಲೆ ಸ್ವಲ್ಪ ಹೊತ್ತಿನತನಕ ನನ್ನ ಮನಸ್ಸು ಬರಿದೋ ಬರಿದಾಯಿತು. ಯಾವ ಭಾವವೂ ಏಳಲಿಲ್ಲ, ಯಾವ ಆಲೋಚನೆಯೂ ಬರಲಿಲ್ಲ. ಸ್ವಲ್ಪ ಹೊತ್ತಿಗೆ, ಮಕ್ಕಳು ಸುಖವಾಗಿಯೇ ಇದಾರಲ್ಲಾ! ನನ್ನ ಸಾಕು ತಂದೆ, 'ಮಕ್ಕಳು ಜೋಪಾನ' ಎನ್ನುತ್ತಾನಲ್ಲಾ?– ಏಕೆ? ಎಂದೆನ್ನಿಸಿತು. ನನ್ನ ಸಾಕು ತಂದೆಗೆ ತನ್ನ ಭಾವಮೈದುನನೆಂದರೇನೇ ಒಂದಿಷ್ಟೂ ಗೌರವವಿದ್ದಿಲ್ಲ. ಆತ ಒಳ್ಳೆಯವನಲ್ಲವೆಂದು ಅಂದುಕೊಳ್ಳುತ್ತಿದ್ದನೋ ಏನೋ ನಾನರಿಯೆ. ಹಾಗೆಂದುಕೊಳ್ಳದಿದ್ದ ಪಕ್ಷಕ್ಕೆ ಬದುಕಿರುವಾಗಲೂ, ಸತ್ತಮೇಲೂ, 'ಮಕ್ಕಳು ಜೋಪಾನ'ವೆಂದು ನನ್ನೊಂದಿಗೆ ಏಕೆ ಹೇಳುತ್ತಿದ್ದ? ಆ ಮಕ್ಕಳ ಸೋದರಮಾವ ಮಕ್ಕಳಿಗೆ ಅನ್ಯಾಯ ಮಾಡುತ್ತಾನೆಯೇ? ಮಾಡುವುದಿಲ್ಲ; ಒಂದು ಪಕ್ಷ ಮಾಡುವನೇನೋ? ಮಾಡದವನಾಗಿದ್ದ ಪಕ್ಷಕ್ಕೆ ನಾನು ಕಾಗದ ಪತ್ರಗಳನ್ನು ಒಪ್ಪಿಸಿಬಿಡುತ್ತೇನೆಂದಾಗ ಅದೇಕೆ ಒಪ್ಪಿಕೊಳ್ಳಲಿಲ್ಲ? ಏನಾದರೂ ಆಗಲಿ, ಪುನಃ ಹಿಂತಿರುಗಿ ಆ ಹುಡುಗರ ಹತ್ತಿರಕ್ಕೆ ಹೋಗೋಣವೆಂದೆನ್ನಿಸಿತು.

ಮನೆಯಲ್ಲಿ ನನಗೆ ಅನ್ನ ಹಾಕುವುದಿಲ್ಲವಲ್ಲಾ! ಊರಿನಲ್ಲಿ ಎಲ್ಲಾದರೂ ತಿನ್ನುತ್ತೇನೆ. ಕರ್ಮಗಳೆಲ್ಲಾ ಮುಗಿಯುವ ತನಕ ಉಳಿದಿದ್ದು, ವಿಷಯವೆಲ್ಲಾ ಬಗೆಹರಿದ ಮೇಲೆ ತಿರುಗಿ ಹೊರಟುಬಿಡೋಣ ಎನ್ನಿಸಿತು. ಮತ್ತೆ ಬೇಡವೆಂದುಕೊಂಡೆ. ನಾನು ತಂದೆಯನ್ನು ಬಲ್ಲವನಲ್ಲ. ನನ್ನ ಸಾಕು ತಂದೆಯನ್ನೇ ಬಲ್ಲವನು, ಆದ್ದರಿಂದ ನನಗಾತ ಕಾಣಿಸಿಕೊಳ್ಳುತಿದ್ದನಾಗಲೀ ಮತ್ತೇನೂ ಅಲ್ಲ, ಮಕ್ಕಳು ಜೋಪಾನವೆನ್ನುತ್ತಿದ್ದಾನಲ್ಲಾ? ಆತ ಸಾಯುತ್ತಾ ನನ್ನೊಂದಿಗೆ ಆ ಮಾತುಗಳನ್ನಾಡಿದ್ದ. ನನಗೆ ಪುನಃ ಪುನಃ ಆ ಮಾತುಗಳೇ ಜ್ಞಾಪಕಕ್ಕೆ ಬರುತ್ತಿವೆ. ಅಷ್ಟಲ್ಲದೆ ಮತ್ತಿನ್ನೇನೂ ಅಲ್ಲ.

ಕೋಳಿ ಕೂಗುವ ಹೊತ್ತಿಗೆ ನನಗೊಂದಿಷ್ಟು ನಿದ್ರೆ ಬಂದಿತು. ಬೆಳ್ಳಿ ಚುಕ್ಕೆ ಮರೆಯಾಗಿ ಬೆಳಕು ಹರಿದ ಮೇಲೆ ನನಗೆ ಎಚ್ಚರವಾಯಿತು. ಮಂಜು ಸುರಿದು ನನ್ನ ಉತ್ತರೀಯವೆಲ್ಲಾ ತೊಯ್ದುಹೋಗಿದೆ. ಚಳಿಯಾಗುತ್ತಿದೆ. ನಿನ್ನೆಯೆಲ್ಲಾ ಊಟವಿಲ್ಲದೇ ಹೋದುದರಿಂದ, ಮೈಯಲ್ಲಿ ನಿತ್ರಾಣವೆನ್ನಿಸಿ, ಮೈಯೆಲ್ಲಾ ಗದಗುಟ್ಟಿತು. ಎಚ್ಚರವಾಗುತ್ತಲೇ ಎದ್ದು ನಾನು ಹೊರಟುಬಿಟ್ಟೆ ಗೊಲ್ಲರವನು, 'ಬುದ್ದೀ, ಹೊರಟ್ಬಿಟ್ರಾ' ಎಂದು ಕೇಳಿದ. ಹೊರಟೆ ಎಂದೆ ನಾನು. ಅಷ್ಟರಲ್ಲಿ ಕುರಿಮರಿಯೊಂದು ದಾರಿತಪ್ಪಿ, ಎತ್ತಲೋ ಹೋಗುತ್ತಾ ಇದ್ದರೆ ಅವನ ನಾಯಿಯೂ, ಅವನೂ ಓಡಿಹೋಗಿ ಅದನ್ನು ಮತ್ತೆ ಮಂದೆಗೆ ಹಾಕಿಕೊಂಡರು. ನಾನಷ್ಟರಲ್ಲಿ ಹತ್ತು ಮಾರು ದೂರ ನಡೆದು ಬಂದಿದ್ದೆ. ಅವನ ನಾಯಿ ನನ್ನನ್ನು ಬೀಳ್ಕೊಡಲು ಬಂದಿತು. ಅದು ಒಂದು ನೂರು ಗಜಗಳಷ್ಟು ದೂರ ನನ್ನನ್ನು ಹಿಂಬಾಲಿಸಿ ಬಂದಿತು. ಅಷ್ಟರಲ್ಲಿಯೇ ಅವನು ಶಿಳ್ಳೆ ಹೊಡೆದು ಅದನ್ನು ಹಿಂದಕ್ಕೆ ಬರುವಂತೆ ಕರೆದ. ಆ ನಾಯಿ ನನ್ನ ಹತ್ತಿರಕ್ಕೆ ಬಂದು, ನನ್ನನ್ನು ಮೂಸಿ ನೋಡಿ, ಎರಡು ಗಜಗಳಷ್ಟು ದೂರ ಹೋಗಿ, ಅಲ್ಲಿ ಕುಕ್ಕರಿಸಿ ಒಮ್ಮೆ ಬೊಗಳಿ ಮತ್ತೆ ಓಡಿಹೋಗಿ ಗೊಲ್ಲರವನನ್ನು ಕೂಡಿಕೊಂಡಿತು.

ಹಗಲು ಎರಡು ಜಾವಗಳವರೆಗೆ ನಾನು ನಡೆಯುತ್ತಲೇ ಇದ್ದೆ. ಇನ್ನು ನಡೆಯಲಾರೆ ಎಂದೆನ್ನಿಸಿದಾಗ ಯಾವುದಾದರೂ ಮರದ ಕೆಳಗೆ ಕುಳಿತುಕೊಳ್ಳುವುದು, ಕೊಂಚ ದಣಿವಾರುತ್ತಲೇ ಮತ್ತೆ ಹೊರಟುಬಿಡುವುದು–ಹೀಗೆ ನಡೆಯತೊಡಗಿದೆ. ಊರುಗಳೆಂದರೇನೇ ನನಗೆ ಭಯ. ಆದ್ದರಿಂದ ಯಾವ ಊರು ಬಂದರೂ ಸರಿಯೇ, ತಪ್ಪಿಸಿಕೊಂಡು, ದೂರವಾಗಿ ತೊಲಗಿ ಬಂದೆನಲ್ಲದೆ, ಊರೊಳಗಿನಿಂದ ಹಾದು ಬರಲಿಲ್ಲ. ಹೊತ್ತು ತಿರುಗಿತು. ಇನ್ನು ನಡೆಯಲಾರೆ, ನಿನ್ನೆಯ ಹಾಗೆ ಯಾವುದಾದರೂ ಮರದ ಕೆಳಗೆ ಮಲಗಿಕೊಳ್ಳಲೆ? ಎಚ್ಚರಾದಾಗ ಮತ್ತೆ ಅಂತಹ ಮತ್ತೊಬ್ಬ ಗೊಲ್ಲರವನು ಕಾಣಿಸಬಲ್ಲನೆ? ಅಂತಹ ಗೊಲ್ಲರು ಎಷ್ಟು ಜನರಿದ್ದಾರೆ? ಅಷ್ಟು ದೂರದಲ್ಲಿ ಯಾವುದೋ ಊರು ಕಾಣಿಸುತ್ತಿದೆ. ಆ ಊರೊಳಗೆ ಹೋಗಿ ಯಾರನ್ನಾದರೂ ಒಂದಿಷ್ಟು ಅನ್ನ ಹಾಕಿ ಎಂದು ಕೇಳೋಣವೆನ್ನಿಸಿತು. ಬಾಯಿ ಬಿಟ್ಟು ಅನ್ನ ಹಾಕಿ ಎಂದು ಇದುವರೆಗೆ ಎಂದೂ ಯಾರನ್ನೂ ನಾನು ಕೇಳಿದವನಲ್ಲ. ನಾನು ಬಾಯಲ್ಲಿ ಬಂಗಾರದ ಚಮಚೆಯಿಟ್ಟುಕೊಂಡು ಹುಟ್ಟಲಿಲ್ಲವಾದರೂ, ಇದುವರೆವಿಗೂ ಯಾರನ್ನೂ ಬೇಡುವ ಬವಣೆ ನನಗೆ ಬಂದಿಲ್ಲ. ಈಗ ತಾನೇ ಹೇಗೆ ಕೇಳಲಿ? ಆ ಊರನ್ನು ಕೂಡ ತಪ್ಪಿಸಿಕೊಂಡು ಹೋಗೋಣವೆಂದೇ ನಡೆಯುತ್ತಿರುವೆ. ನನಗೆ ತಿಳಿಯದೇನೇ ಆ ಊರೊಳಗೆ ನಾನು ಹೋದ ಮೇಲೆಯೇ ನನಗೆ ತಿಳಿದುಬಂದಿದ್ದು. ಒಂದು ಸೆಣಕಲು ನಾಯಿ ತಿಪ್ಪೆಯೊಂದರ ಮೇಲೆ ಮಲಗಿಕೊಂಡಿದ್ದುದು ನನ್ನನ್ನು ನೋಡಿ ಬೊಗುಳುತ್ತಾ ಎದ್ದು ಹೋಗಿಬಿಟ್ಟಿತು. ಒಂದು ಮನೆಯೊಳಗಿನಿಂದ ಒಬ್ಬಾಕೆ ಹೊರಗೆ ಇಣುಕಿ ನೋಡಿ, ಹೊರಬಂದು, 'ಮಗಾ? ನಿಮ್ದಾವೂರು?' ಎಂದು ಪ್ರಶ್ನಿಸಿದಳು. ನನ್ನ ಬಾಯಿಂದ ಮಾತೇ ಹೊರಬೀಳಲಿಲ್ಲ. ನಾನು ನಡೆಯುತ್ತಲೇ ಇದ್ದೆ. ಆಕೆ–'ನಿಮ್ದಾವೂರು ಅಂತ ಕೇಳಿದರೆ ಮಾತಾಡಂಗಿಲ್ಲವಲ್ಲಾ? ಯಾರ ಮಗಾ ಇದು?'–ಎಂದಳು.

ಅಷ್ಟರಲ್ಲಿಯೇ ಮತ್ತೊಬ್ಬಾಕೆ ಬಂದಳು. ಆಕೆ ಮಹಾಲಕ್ಷ್ಮಿಯಂತೆ ಕಂಡುಬಂದಳು. ಆಕೆ ನನ್ನನ್ನು ನೋಡುತ್ತಲೇ–'ಇದೇನು ಹೀಗಿದ್ದಾನಲ್ಲಾ? ಅಯ್ಯೋ ಮರೀ, ಉಣ್ಣಿಲ್ವೇ? ನಮ್ಮನೀಗೆ ಬಾ, ಒಂದಿಷ್ಟು ಮಜ್ಜಿಗೆ ಕೊಡ್ತೀನಿ. ಅದನ್ನಾದರೂ ವಸಿ ಹೊಟ್ಟೆಗೆ ಹಾಕ್ಕೊಂಡು ಹೋಗುವಿಯಂತೆ, ಬಾ'–ಎಂದು ನನ್ನನ್ನು ತಮ್ಮ ಮನೆಗೆ ಕರೆದೊಯ್ದಳು. ನನ್ನ ಮುಖ ನೋಡಿ, ಅನ್ನ ಊಟಮಾಡಿಲ್ಲವೆಂದು ಗ್ರಹಿಸಿ, 'ಉಂಬ್ತೀಯಾ?' ಎಂದು ಕೇಳಿದಳು. 'ಊಟ ಆಗಿದೆ, ಒಂದಿಷ್ಟು ಮಜ್ಜಿಗೆ ಕೊಡಿ' ಎಂದೆ. ಆಕೆ ಸಿಹಿ ಮಜ್ಜಿಗೆಯನ್ನು ಕೊಳದಪ್ಪಲೆಯಲ್ಲಿ ಒಂದಿಷ್ಟು ಉಪ್ಪು ಹಾಕಿ ಕೊಟ್ಟಳು. ಕುಡಿದೆ. ಎದ್ದು, ಇನ್ನು ಹೊರಡೋಣವೆಂದುಕೊಂಡೆ. ಆದರೆ ಮುಂದಕ್ಕೆ ಹೆಜ್ಜೆಯಿಡಲಾಗದೆ ಹಾಗೆಯೇ ಕುಸಿದು ಕುಳಿತುಬಿಟ್ಟೆ ಆಕೆ ನನ್ನ ವಿಷಯವೆಲ್ಲಾ ಗ್ರಹಿಸಿಬಿಟ್ಟಳು. 'ನೀನ್ಯಾರ ಮಗಾ? ಮನೇಲಿ ಹೇಳದೇ ಕೇಳದೇ ಓಡಿಬಂದ್ಯೋ? ಉಣ್ಣಿಲ್ಲಾಂತ ಕಾಣ್ಸುತ್ತೆ! ಏದುಸಿರು ಬೇರೆ ಬಿಡ್ತಾ ಇದೀಯೆ! ಬಾ, ಊಟ ಮಾಡುವಿಯಂತೆ'–ಎಂದು ಬಲವಂತದಿಂದ ನನ್ನನ್ನು ಒಳ ಕರೆದೊಯ್ದಳು. ಅನ್ನವಿಟ್ಟಳು. ನಾನು ಅನ್ನ ಉಣ್ಣುತ್ತಿದ್ದಷ್ಟು ಹೊತ್ತೂ, 'ಅಯ್ಯೋ ಮರೀ!' 'ಪಟಾಣೀ', 'ಹುಚ್ಚು ಕೂಸು!' ಎನ್ನುತ್ತಿದ್ದಳೇ ಹೊರತು, ನನ್ನನ್ನು ಮತ್ತೊಂದು ವಿಧವಾಗಿ ಆಕೆ ಕರೆಯಲೇ ಇಲ್ಲ. ಅನ್ನಕ್ಕೆ ಬಿಸಿ ಹಾಲು ಬಡಿಸಿದಳು. ನಾನು ಊಟ ಮಾಡಿ ಏಳುವಷ್ಟರಲ್ಲಿಯೇ ಹೊರಸು ಹಾಕಿ, ಅದರ ಮೇಲೆ ಜಮಖಾನ ಹಾಸಿದ್ದಳು. 'ಮರೀ, ಕೊಂಚ ಮಲಕ್ಕೋ, ನಾಳೆ ಬೆಳಗಾಗುತ್ಲೇ ಹೋಗುವಿಯಂತೆ' ಎಂದಳು. ನಾನು ಮಲಗಿದೆ.

ಆಕೆ ನನ್ನನ್ನು 'ನಿಮ್ಮದಾವೂರು?' ಹೇಳೆಂದು ಪಟ್ಟು ಹಿಡಿದಳು. ಆ ಸುತ್ತಮುತ್ತಲಿನ ಊರುಗಳ ಹೆಸರುಗಳು ನನಗೆ ತಿಳಿಯವು. ನಾನು ಮತ್ತೆ ನನ್ನ ಸಾಕುತಂದೆಯ ಊರ ಹೆಸರನ್ನೇ ಹೇಳಿದೆ. 'ಎಲ್ಲಿಗೆ ಹೋಗ್ತಾ ಇದೀಯೆ?' ಎಂದಾಕೆ ಕೇಳಿದ್ದಕ್ಕೆ 'ಅಲ್ಲಿಗೇನೇ ಹೋಗುತ್ತಿರುವೆ' ಎಂದು ನುಡಿದೆ. ಆಕೆ, 'ಮಲಗು, ನಾಳೆ ಬೆಳಗ್ಗೇನೇ ಎದ್ದು ಹೊರಡುವಿಯಂತೆ' ಎಂದಳು. ನಾನು ಮಲಗಿಕೊಂಡೆ. ತಲಬಾಗಿಲು ಹಾಕಿ, ಹೊರಗೆ ಚಿಲಕ ಹಾಕಿಕೊಂಡು ಆಕೆ ಎಲ್ಲಿಗೋ ಹೋಗಿಬಿಟ್ಟಳು. ನನಗೆ ನಿದ್ರೆ ಬಂದಿತು.

ನನಗೆ ಎಚ್ಚರಾದಾಗ ನನ್ನ ವಯಸ್ಸಿನ ಹುಡುಗನೊಬ್ಬ, ನನಗಿಂತ ಚಿಕ್ಕವನೊಬ್ಬ, ನಲವತ್ತು ವರ್ಷದ ವ್ಯಕ್ತಿಯೊಬ್ಬಾತ–ಮನೆಯಲ್ಲಿ ತಿರುಗುತ್ತಿರುವುದು ಕಂಡುಬಂದಿತು. ಆಕೆ ದೀಪಗಳನ್ನು ಬೆಳಗುತ್ತಿದ್ದಳು. ತನ್ನ ಗಂಡನಿಗೆ ನನ್ನ ಬಗ್ಗೆ ಹೇಳಿದ್ದಳೆಂತ ಕಾಣುತ್ತದೆ. ಅವರಾರೂ ನನ್ನೊಂದಿಗೆ ಮಾತನಾಡಲಿಲ್ಲ. ನಾನು ಅಲ್ಲಿಂದ ಎದ್ದು ಹೋಗಿ ಎದುರಿನ ಪಡಸಾಲೆಯಲ್ಲಿ ಕುಳಿತುಕೊಂಡೆ. ರಾತ್ರಿ ಹೊತ್ತಾದ ಮೇಲೆ ಆಕೆ ನನ್ನನ್ನು ಕರೆದು ಪುನಃ ಊಟಕ್ಕಿಟ್ಟಳು. ನನ್ನೊಂದಿಗೆ ಹುಡುಗರು ಸಹ ಮಾತನಾಡಲಿಲ್ಲ. ನಾನೇನು ಮಾಡಲಿ? ಆಕೆಯೂ ಮಧ್ಯಾಹ್ನ ನನಗೆ ತೋರಿದ ಆದರವನ್ನು ಮತ್ತೆ ತೋರಲಿಲ್ಲ. ಆ ಮಧ್ಯಾಹ್ನವಾದರೂ ಅಷ್ಟಿಲ್ಲದಿದ್ದರೂ ಒಂದಿಷ್ಟಾದರೂ ನನ್ನ ಸಾಕುತಂದೆಯ ಮನೆಯಂಥಾ ಮನೆಗೆ ಬಂದೆನೆಂದುಕೊಂಡಿದ್ದೆ. ರಾತ್ರಿ ಊಟವಾಗುವಷ್ಟರಲ್ಲಿ ನನ್ನ ಅನುಮಾನ ಬಗೆಹರಿಯಿತು. ಜಗುಲಿಯ ಮೇಲೆಯೇ

ಪಡಸಾಲೆಯಲ್ಲಿ ಒಂದು ಗೋಣಿ ಚೀಲದ ಮೇಲೆ ಮಲಗಿಕೊಂಡೆ. ನಸುಕಿನಲ್ಲಿ, ಆಕೆ ಬಂದು ನನ್ನನ್ನು ಎಚ್ಚರಗೊಳಿಸಿದಳು. 'ಮಗಾ, ನಿಮ್ಮೂರಿಗೆ ಹೋಗ್ಬಿಡು. ಬೆಳಕು ಹರಿಯುವಷ್ಟರಲ್ಲಿ ಒಂದಿಷ್ಟು ದೂರ ಹೋಗ್ತೀಯೆ' ಎಂದಳು. ನಾನು ಹೊರಟು ಬಂದೆ. ಊರು ದಾಟುವತನಕ ಆಕೆ ನನ್ನ ಹಿಂದೆಯೇ ಬಂದಳು. ಊರು ದಾಟಿದ ಮೇಲೆ ಆಕೆ ನನ್ನೊಂದಿಗೆ ಹೀಗೆ ಹೇಳಿದಳು: 'ಮಗಾ, ನಮ್ಮೋರು ಒಳ್ಳೆಯವರಲ್ಲ. ಅದ್ರಿಂದಲೇ ಹೊತ್ತಾರೆ ನಿನ್ನನ್ನು ಕಳಿಸಿಬಿಡ್ತಾ ಇದೀನಿ. ಇಗೋ, ಬುತ್ತಿ ಕಟ್ಟಿ ತಂದಿದ್ದೀನಿ. ಇದರಲ್ಲಿ ಪುಂಡಿಚಟ್ನಿ, ಕೆನೆಮೊಸರು ಹಾಕಿದೀನಿ. ಯಾವುದಾದರೂ ಕೆರೆಯ ಹತ್ತಿರ ಮುಖ ತೊಳೆದುಕೊಂಡು ಊಟಮಾಡು. ದೀಪಾರಾಧನೆಯ ಹೊತ್ತಿಗೆಲ್ಲಾ ನಿಮ್ಮೂರು ಸೇರಿಕೊಳ್ತೀಯಲ್ಲಾ?" ಎಂದಳು. ನಾನು 'ಹೂಂ' ಎಂದು ಆ ಬುತ್ತಿ ಈಸಿಕೊಂಡು ಹತ್ತು ಹೆಜ್ಜೆ ಹಾಕಿದೆ. ಪುನಃ ಹಿಂತಿರುಗಿ ಆಕೆಯ ಬಳಿಗೆ ಹೋದೆ, ಹಿಂತಿರುಗಿ ಬಂದ ನನ್ನನ್ನು ನೋಡಿ ಆಕೆ 'ಏನು?' ಎಂದು ಕೇಳಿದಳು. ನಾನು ಅಳುತ್ತಾ ಆಕೆಯ ಪಾದ ಮುಟ್ಟಿ ನಮಸ್ಕಾರ ಮಾಡಿದೆ. ಆಕೆ ನನ್ನನ್ನು ಮೇಲಕ್ಕೆ ಎಬ್ಬಿಸುತ್ತಾ 'ಅಯ್ಯೋ ನನ್ನ ಗುನ್ನಾರೀ! ಮತ್ತೆ ಯಾವಾಗಲಾದರೂ ಬಂದು ನಿನ್ನ ಈ ಚಿಕ್ಕಮ್ಮನನ್ನು ನೋಡಿ ಹೋಗು' ಎಂದಳು. ಹಾಗೆ ಹೇಳುವಾಗ ಆಕೆಯ ಹಸ್ತ ನನ್ನ ತಲೆಗೂದಲನ್ನು ನೇವರಿಸಿತು. ಆಕೆಯೊಮ್ಮೆ ತನ್ನ ಸೆರಗನ್ನು ನನ್ನ ಬೆನ್ನಿನ ತುಂಬ ಹೊದೆಸಿದಳು! ಆಗ ನನ್ನ ಮನಸ್ಸಿನಲ್ಲೊಂದು ವಿಚಿತ್ರವಾದೊಂದು ಭಾವ ಉಕ್ಕಿತು–ನನ್ನ ಹೆತ್ತಮ್ಮ ಬದುಕಿದ್ದ ಪಕ್ಷಕ್ಕೆ ಈಕೆಯ ಹಾಗೆಯೇ ಇರುತ್ತಿದ್ದಳೆಂದೆನ್ನಿಸಿತು!

## ೭

ನಾನು ಎರಡು ಮಾರು ಹೊತ್ತೇರುವಷ್ಟರಲ್ಲಿಯೇ ಎರಡು ಮೂರು ಊರುಗಳನ್ನು ದಾಟಿ ಬಂದೆ. ಒಂದು ಕೆರೆ ಕಂಡುಬರಲಾಗಿ, ಮುಖ ತೊಳೆದುಕೊಂಡೆ. ನಿನ್ನೆ ಎರಡು ಹೊತ್ತೂ ಊಟ ಮಾಡಿದ್ದರಿಂದಾಗಿ ಹೆಚ್ಚಿಗೆ ಹಸಿವಾಗಿರಲಿಲ್ಲ. ಎರಡು ಜಾವಗಳು ಕಳೆದ ಮೇಲೆ, ಒಂದು ಸಣ್ಣ ಕುಂಟೆ ಸಿಕ್ಕಲಾಗಿ, ಅಲ್ಲಿ ಕುಳಿತು ನಮ್ಮಮ್ಮ ಕೊಟ್ಟ ಬುತ್ತಿ ಬಿಚ್ಚಿ ಊಟ ಮಾಡಿದೆ. ಆ ತಾಯಿ ಕೇವಲ ಮೊಸರನ್ನದ ಬುತ್ತಿಯೊಂದನ್ನೇ ಕೊಟ್ಟಿರಲಿಲ್ಲ; ಜೊತೆಗೊಂದು ಬಟ್ಟೆಯನ್ನೂ ಕೊಟ್ಟಿದ್ದಳು. ಊಟ ಮಾಡಿದ ಮೇಲೆ ಮತ್ತೆ ಮುಂದುವರಿದೆ. ಎಲ್ಲಿಗೆ ನನ್ನೀ ಪಯಣ? ಏತಕ್ಕೆ ನನ್ನೀ ಪಯಣ? ಯಾವುದಾದರೂ ಒಂದು ಊರಿನಲ್ಲಿ, ಯಾರ ಹತ್ತಿರವಾದರೂ ಜೀತದಾಳಾಗಿ ಇದ್ದುಬಿಡೋಣವೆನ್ನಿಸಿತು. ನನ್ನ ಸಾಕುತಂದೆ ನನಗೆ ತನ್ನ ಮನೆಯ ಯಜಮಾನಿಕೆಯನ್ನು ಕೊಟ್ಟು ಕೆಡಿಸಿಬಿಟ್ಟ. ನನ್ನನ್ನು ಜೀತದಾಳನ್ನಾಗಿಟ್ಟುಕೊಂಡು ನನ್ನ ಕೈಯಲ್ಲಿ ಹೊಲದ ಬದುಕನ್ನೆಲ್ಲಾ ಮಾಡಿಸಿದ್ದಲ್ಲಿ ನನ್ನ ಗತಿಯನ್ನು ನಾನು ಹೇಗೋ ಮಾಡಿ ಕಂಡುಕೊಳ್ಳುತ್ತಿದ್ದೆನಲ್ಲವೆ? ಈಗ ನಾನು ಹೊಲದ ಗೈಮೆಗೆ ಕೆಲಸಕ್ಕೆ ಬಾರದವನು. ಆದರೂ ಹೇಗೆ ವ್ಯವಸಾಯ ಮಾಡುವುದೆಂಬುದು ನನಗೆ ಎಲ್ಲವೂ ಗೊತ್ತಿದೆ. ಆಳುಗಳ ಕೈಯಲ್ಲಿ ಮಾಡಿಸಿದ್ದೆನಾದ್ದರಿಂದ, ಆ ಅನುಭವದಿಂದ ಐದಾರು ತಿಂಗಳುಗಳವರೆಗೆ ಹೇಗೋ

ಒದ್ದಾಡಿದರೆ, ಒಂದು ಮಟ್ಟಕ್ಕೆ ಬಂದು ಹೇಗೋ ನನ್ನ ಬದುಕನ್ನು ನಾನು ಮಾಡಿಕೊಳ್ಳದಿರಲಾರೆ ಎಂದೆನ್ನಿಸಿತು–ನಡೆಯುತ್ತಲೇ ಇದ್ದೆ. ಯಾವುದಾದರೊಂದು ದೊಡ್ಡ ಊರು ಕಂಡು, ದೊಡ್ಡ ಮಹಡಿ ಮನೆಯನ್ನು ಕಂಡುಕೊಂಡು, ಆ ಮನೆಯವರನ್ನೇ ಕೇಳಿಕೊಳ್ಳೋಣವೆಂದುಕೊಂಡೆ. ಈ ಎರಡು ದಿನಗಳಿಂದಲೂ ಒಂದೇ ಸಮನೆ ನಾನು ನಡೆದುದ್ದರಿಂದಲೂ, ಹೊತ್ತಿಗೆ ಸರಿಯಾಗಿ ಊಟವಿಲ್ಲದ್ದರಿಂದಲೂ, ಸ್ನಾನವಿಲ್ಲದೇ ಹೋದುದರಿಂದಲೂ, ನನ್ನ ರೂಪದಲ್ಲಿ ಏನಂಥ ಬದಲಾವಣೆಯುಂಟಾಗಿತ್ತೋ ನಾನರಿಯೆ. ಅದು ಮುಂಬರುವ ವಿಪತ್ತಿನ ಮೂಲಕ ನನಗೆ ಗೊತ್ತಾಯಿತು.

ಆ ವಿಪತ್ತೇನೆಂದರೆ–ನಾನು ಹೊತ್ತು ಕಂದುತ್ತಿರುವಾಗ, ಜಾಲಿ ಮರಗಳಿಂದ ತುಂಬಿದ ಒಂದು ಬೀಳಿನ ಹತ್ತಿರಕ್ಕೆ ಹೋಗುವತನಕ ಅದು ನಿರ್ಜನ ಪ್ರದೇಶವೆಂದಾಗಲೀ, ಅಲ್ಲಿ ಕೆಲವು ಗುಡಿಸಲುಗಳು ಮಾತ್ರವೇ ಇವೆ ಎಂದಾಗಲೀ ನನಗೆ ತಿಳಿದುಬರಲಿಲ್ಲ. ಅಲ್ಲಿ ಕೆಲವು ಮರಗಳಿವೆಯಲ್ಲಾ, ಅವುಗಳ ಮರೆಯಲ್ಲಿ ಯಾವುದಾದರೂ ಒಂದು ಹಳ್ಳಿ ಇದೆಯೇನೋ ಎಂದುಕೊಂಡಿದ್ದೆ. ಆದರೆ ಆ ಸುತ್ತಮುತ್ತ ಎತ್ತಲೂ ಊರೆಂಬುದೇ ಕಂಡುಬರಲಿಲ್ಲ. ಆ ಗುಡಿಸಲುಗಳನ್ನು ನೋಡುತ್ತಲೇ ನನ್ನ ಎದೆಗುಂಡಿಗೆ ಹಾರಿತು! ಹಿಂತಿರುಗಿ ಹೋಗೋಣವೆಂದರೆ ಎತ್ತ ಹೋಗಬೇಕೋ ತಿಳಿಯದಾಯಿತು. ನನ್ನ ಮನಸ್ಸು ಬೇಡ ಬೇಡವೆಂದರೂ ನನ್ನ ಕಾಲುಗಳು ಆ ಗುಡಿಸಲುಗಳ ಬಳಿಗೇ ನನ್ನನ್ನು ಕರೆದೊಯ್ದವು.

ಅಲ್ಲಿದ್ದ ಗುಡಿಸಲುಗಳು ಮೂರೇ ಮೂರು. ಒಂದನ್ನು ಚೆನ್ನಾಗಿ ಚಾಪೆಗಳಿಂದ ಮುಚ್ಚಿದ್ದರು. ಇನ್ನುಳಿದ ಎರಡು ಗುಡಿಸಲುಗಳ ಮೇಲ್ಛಾವಣಿಗಳಿಗೆ ಮಾತ್ರವೇ ಎರಡು ಚಾಪೆಗಳನ್ನು ಹಾಕಿದ್ದರು. ಆ ಗುಡಿಸಲುಗಳಿಗೆ ಅನತಿ ದೂರದಲ್ಲಿ ಒಂದು ಕತ್ತೆಯನ್ನು ಕಟ್ಟಿಹಾಕಲಾಗಿತ್ತು ಒಂದು ಗುಡಿಸಲ ಬಳಿ ಕೋತಿಯೊಂದನ್ನು ಕಟ್ಟಿಹಾಕಿದ್ದರು. ಆ ಕೋತಿಯ ಹತ್ತಿರವೇ ಏಳು ವರ್ಷಗಳ ಹುಡುಗನೊಬ್ಬ, ವರ್ಷದ ಮಗುವೊಂದು ಇಬ್ಬರೇ ಇದ್ದರು. ಪರಿಕಿಸಿ ನೋಡಿದೆ. ಒಂದು ಗುಡಿಸಲಲ್ಲಿ ಎರಡು ಹಾವಿನ ಬುಟ್ಟಿಗಳು ಕಂಡುಬಂದುವು. ಹುಡುಗನ ಕೊರಳಲ್ಲಿ ಮಣಿಗಳ ಹಾರವಿತ್ತು. ಇದನ್ನೆಲ್ಲಾ ನೋಡಿದ ಮೇಲೆ ಇವು ಹಾವಾಡಿಗರ ಗುಡಿಸಲುಗಳೆಂಬುದು ಸ್ಪಷ್ಟವಾಯಿತು. ನನ್ನ ಮನಸ್ಸಿನಲ್ಲಿ ದಿಗಿಲಾಗುತ್ತಿದ್ದರೂ, ಧೈರ್ಯ ತಂದುಕೊಂಡು ಆ ಹುಡುಗನನ್ನು 'ಇಲ್ಲಿಗೆ ಊರು ಎಷ್ಟು ದೂರದಲ್ಲಿದೆಯೋ?' ಎಂದು ಕೇಳಿದೆ. ಅವನು 'ಒಂದು ಹರದಾರಿ ಇದೆ' ಎಂದ. 'ಯಾವ ಕಡೆಗೆ?' ಎಂದೆ. ಅವನು 'ಈ ಕಡೆಗೆ' ಎಂದು ಕೈ ತೋರಿಸಿದ. ಹೊರಡುವುದರಲ್ಲಿದ್ದೆ. ನಾನು ಮಾಡಿದ ತಪ್ಪೇನೆಂದರೆ ಆ ಗುಡಿಸಲುಗಳ ಹತ್ತಿರ ಒಂದಷ್ಟು ಹೊತ್ತು, ಏನೂ ತೋಚದೆ ನಿಂತುಕೊಂಡೆ. ಇಲ್ಲದಿದ್ದಲ್ಲಿ ಒಂದು ಓಟದಷ್ಟು ದೂರ ಹೊರಟುಹೋಗಿರುತ್ತಿದ್ದೆ.

ಅಲ್ಲಿಂದ ನಾನು ಹೊರಡಬೇಕೆಂದಿರುವಷ್ಟರಲ್ಲಿಯೇ, ಇಬ್ಬರು ಹಾವಾಡಿಗರು ಅಲ್ಲಿಗೆ ಬಂದುಬಿಟ್ಟರು. ಅವರ ಜೊತೆಯಲ್ಲೊಬ್ಬ ಹೆಂಗಸಿದ್ದಳು. ಆ ಗಂಡಸರಲ್ಲೊಬ್ಬ ತೊಲೆ

ತುಂಡಿನಂಥ ಕೈಗಳು; ಬಂಡೆಯಂಥ ಎದೆ; ಪೊದೆಗೂದಲು; ಮಣಿಗಳು; ದೊಡ್ಡ ಕಣ್ಣುಗುಡ್ಡೆಗಳು; ಕಪ್ಪನೆಯ ಗಡ್ಡ ಮೀಸೆಗಳು ನೋಡಿದರೆ ಕಾಲಕಿಂಕರನ ಹಾಗೆ ಕಂಡುಬಂದ. ಅವನು ನನ್ನನ್ನು ನೋಡುತ್ತಲೇ, 'ನಿನ್ನದ್ಯಾವೂರು?' ಎಂದು ಕೇಳಿದ. ನನಗೆ ಭಯವಾಯಿತು. ಒಂದು ಹರದಾರಿ ದೂರದಲ್ಲಿರುವ ಊರನ್ನುದ್ದೇಶಿಸಿ, ಇಂಥಾ ಊರು ಎಂದು ಹೇಳಿ ಹೊರಟುಬಿಟ್ಟಿದ್ದರೆ ಹೇಗಿರುತ್ತಿತ್ತೋ? ಆದರೆ ತಟಕ್ಕನೆ ನಮ್ಮದು ಇಂಥಾ ಊರೆಂದು; ನನ್ನ ಸಾಕು ತಂದೆಯ ಊರಿನ ಹೆಸರು ಉಸುರಿಬಿಟ್ಟೆ ಅವನು, 'ಅಬ್ಬೋ, ಶಾನೇ ದೂರವಲ್ಲಾ,' ಇತ್ಲಾ ಕಡೆ ಯಾಕೆ ಬಂದೆ?' ಎಂದು ಪ್ರಶ್ನಿಸಿದ. ನನ್ನ ತಲೆಯ ಮೇಲೆ ಗೂಬೆ ಕೂತು ನಿಜ ನುಡಿಯಿಸಿಬಿಟ್ಟಿತು. ಅವನಲ್ಲಿ ಎಂಥ ಮಾಯವಿದೆಯೋ! ಅವನೆದುರಿನಲ್ಲಿ ನಾನು ಮಾತನಾಡಲು, ಅವನ ಮುಖವನ್ನು ನೋಡಲು, ಗಡಗಡ ನಡುಗಿಬಿಟ್ಟೆ ನನ್ನ ವಯಸ್ಸು ಕಡಮೆಯೇ ಆದರೂ ಹದಿನಾರು ವರ್ಷದ ಪ್ರಾಯದವನ ಹಾಗೆಯೇ ಇರುತ್ತೇನೆಂದು ಈಗಾಗಲೇ ತಿಳಿಸಿದ್ದೇನೆ. ತಿರುಗಿಬಿದ್ದರೆ–ಅವನನ್ನು ಹೊಡೆಯಲಾರೆನಾದರೂ, ಎರಡನೆಯವನು ನನ್ನನ್ನೇನೂ ಮಾಡಲಾರ. ತಪ್ಪಿಸಿಕೊಂಡು ಓಡಿಹೋಗಬಲ್ಲೆ. ಆದಾಗ್ಯೂ ಅಲ್ಲಿಯೇ ನಿಂತುಬಿಟ್ಟೆ ಅವನು 'ಅಬ್ಬ! ಈಗೆಲ್ಲಿಗೆ ಹೋಗ್ತೀಯೆ ಬಿಡು, ಇಲ್ಲೇ ಇರು!' ಎಂದ. ಎರಡನೆಯವನೂ, ಆ ಹೆಂಗಸೂ–ಅವರಿಬ್ಬರೂ ಗುಡಿಸಲೊಳಗೆ ಹೋಗಿ–ಆ ಕೆಲಸ ಮಾಡುವುದಕ್ಕೆ ತೊಡಗಲು, ಮೊದಲನೆಯವನು ನನ್ನನ್ನು ಅಲ್ಲಿಯೇ ಕುಳಿತುಕೋ ಎಂದು ಹೇಳಿ, ಅವನೂ ನನ್ನ ಬಳಿಯೇ ಕುಳಿತುಕೊಂಡ. ನನ್ನ ಕಡೆಗೇ ನೋಡತೊಡಗಿದ. ನಾನೇನಾದರೂ ಮೇಲೆದ್ದರೆ ಸಾಕು, ನನ್ನ ಕೈಕಾಲುಗಳನ್ನು ಕಟ್ಟಿ ಒಂದು ಮೂಲೆಯಲ್ಲಿ ಬಿಸಾಡುತ್ತಾನೆಂದೆನ್ನಿಸಿತು. ಅನಂತರ ಒಂದು ಜಾವ ಕಳೆಯುವತನಕವೂ ನಾನಾರೋ, ನಾನು ಅಲ್ಲೇಕೆ ಇರುವೆನೋ–ನನಗೇ ತಿಳಿಯದಾಯಿತು. ರಾತ್ರಿ ಎರಡನೇ ಜಾವದಲ್ಲಿ ಒಂದು ಚಿಪ್ಪಿನಲ್ಲಿ ಒಂದಿಷ್ಟು ಅನ್ನ ತುಂಬಿ, ನನ್ನ ಮುಂದಿಟ್ಟರು. ನಾನು ಆ ಅನ್ನವನ್ನು ತಿನ್ನಲಿಲ್ಲ. 'ಇವನೆಲ್ಲಿಗೆ ಹೋದಾನು!' ಎಂದುಕೊಂಡು ಆ ಹಾವಾಡಿಗ ನಿದ್ರೆ ಮಾಡತೊಡಗಿದ. ಅನ್ನ ತುಂಬಿದ ಆ ಕರಟ ಆ ಕೋತಿಗಳಿಗೂ ಎಟುಕುವಷ್ಟು ಹತ್ತಿರದಲ್ಲಿಯೇ ಇತ್ತು. ಎರಡನೆಯ ಕೋತಿ ಆ ಹಾವಾಡಿಗರವಳು ಗುಡಿಸಲಿಗೆ ಹಿಂತಿರುಗಿದಾಗ ತಂದು ಕಟ್ಟಿಹಾಕಿದ್ದಳು. ಆ ಕತ್ತಲಲ್ಲಿ ನನ್ನ ಕಣ್ಣುಗಳು ಚೆನ್ನಾಗಿ ಕಾಣುವುದಕ್ಕಾರಂಭಿಸಿತು! ಆ ದೊಡ್ಡ ಕೋತಿ ನನ್ನ ಕಡೆಗೇ ನೋಡುತ್ತಾ, ನೋಡುತ್ತಾ ಆ ಚಿಪ್ಪನ್ನು ಸ್ವಲ್ಪ ಸ್ವಲ್ಪವೇ ತನ್ನ ಕಡೆಗೆ ಎಳೆದುಕೊಂಡಿತು. ಆ ಎರಡು ಕೋತಿಗಳೂ ಕೂಡಿ ಅನ್ನವನ್ನೆಲ್ಲಾ ತಿಂದುಹಾಕಿದುವು. ಅವು ತಿಂದು ಮುಗಿಸಿದ ಬಳಿಕ ಆ ಚಿಪ್ಪನ್ನು ಪುನಃ ನನ್ನ ಬಳಿಗೆ ಎಳೆದಿಟ್ಟುಕೊಂಡೆ.

ಕೋಳಿ ಕೂಗಿತು. ಅಷ್ಟರಲ್ಲಿಯೇ ತಪ್ಪಿಸಿಕೊಂಡು ಹೋಗಿಬಿಡೋಣವೆಂದು ಹತ್ತು ಸಾರಿಯಾದರೂ ಅಂದುಕೊಂಡೆ. ಹಾಗೆ ಹತ್ತು ಸಾರಿ ಅಂದುಕೊಂಡಾಗ, ಹತ್ತು ಸಾರಿಯೂ ನನ್ನ ಕಾಲುಗಳು ಮೇಲೇಳಲೇ ಇಲ್ಲ. ಕೋಳಿ ಕೂಗುತ್ತಲೇ ಆ ಹಾವಾಡಿಗರವನು ದಿಗ್ಗನೆ ಎದ್ದು ಕುಳಿತುಬಿಟ್ಟ, ಅದರೊಳಗಾಗಿಯೇ, ನಾನಿರುವೆನೋ ಇಲ್ಲವೋ ಎಂದು ನಾಲ್ಕೈದು

ಸಾರಿ ಎದ್ದೆದ್ದು ನೋಡಿದ್ದ. ಅವನು ಎದ್ದು ಕುಳಿತ ಬಳಿಕ, ಬೆಳಕು ಹರಿಯುವುದರೊಳಗಾಗಿಯೇ ಅವನು ನನ್ನ ಕೈಲಿ ಪರಿಪರಿಯಾಗಿ ಮಾತು ಹೊರಡಿಸಿದ. ನನಗೆ ತಂದೆ ತಾಯಿಗಳಿಲ್ಲವೆಂತಲೂ, ದಿಕ್ಕು ದೆಸೆಗಳಿಲ್ಲವೆಂತಲೂ, ಮನೆ ಮಠಗಳಿಲ್ಲವೆಂತಲೂ, ಎಲ್ಲಿಗೆ ಹೋಗಬೇಕೋ ತಿಳಿಯದಾಗಿದೆ ಎಂತಲೂ–ಈ ಎಲ್ಲ ವಿಷಯಗಳನ್ನೂ ಹೊರಬೀಳಿಸಿದ.

'ನೀನೇನಾದ್ರೂ ಇಲ್ಲೇ ಇದ್ದುಬಿಟ್ಟೆ ಅಂದ್ರೆ ನಿನ್ನ ಹೊಟ್ಟೆ ಬಟ್ಟೆ ನಾವು ನೋಡ್ಕೊಂತೀವಿ. ನೀನೂ ನಮ್ಮಲ್ಲಿ ಸೇರಿಕೊಂಡುಬಿಡು' ಎಂದ. ಅವನ ಒಂದು ಮಾತಿಗೂ ನಾನು ಉತ್ತರಿಸಲಿಲ್ಲ. ಬೆಳಕು ಹರಿದು ಒಂದು ಜಾವವಾಯಿತು. ನಾನು ಅಲ್ಲಿಂದ ಹೊರಟುಹೋಗಲಾರದಾದೆ. ಅವನೇನಾದರೂ ಮೋಡಿಹಾಕಿರುವನೇನೋ ಎನ್ನಿಸಿತು. ತಿಂಡಿ–ತೀರ್ಥಗಳಿಲ್ಲ; ಹಿಂದಿನ ಮಧ್ಯಾಹ್ನ ತಿಂದಿದ್ದೇ ಕೊನೆ. ಆ ದಿನ ಅವನು ಗುಡಿಸಲ ಹತ್ತಿರವೇ ಉಳಿದುಕೊಂಡುಬಿಟ್ಟ. ಇನ್ನೊಬ್ಬ ಹಾವಾಡಿಗರವನೂ, ಆ ಹೆಂಗಸೂ, ಆ ಏಳು ವರ್ಷಗಳ ಹುಡುಗನೂ–ಎಲ್ಲಿಗೋ ಹೊರಟುಹೋದರು. ಹಗಲು ಹನ್ನೆರಡು ತಾಸಾಯಿತು. ಅಷ್ಟರಲ್ಲಿ ಅವನು ಎರಡು ಸಾರಿ ಬಂದು ತಾನಿಟ್ಟ ಅನ್ನ ಊಟ ಮಾಡೆಂದ. ನಾನು ಉಣ್ಣಲಿಲ್ಲ. 'ರಾತ್ರಿ ತಿಂದೆಯಲ್ಲಾ? ಈಗ್ಯಾಕ್ಲಾ ತಿನ್'ಕೂಡ್ದು?' ಎಂದು ಪ್ರಶ್ನಿಸಿದ. ಹೊತ್ತು ಇಳಿಮುಖವಾಯಿತು. ನನಗೆ ಚೆನ್ನಾಗಿ ಹಸಿವಾಗತೊಡಗಿತು. ದೇಹವೆಲ್ಲಾ ಹಗುರಗೊಂಡಿತು. ಮನಸ್ಸು ನಿಚ್ಚಳವಾಯಿತು. ಆಗ ಹೀಗೆಂದೆ, 'ನಿಮ್ಮೊಂದಿಗೆ ಇದ್ದುಬಿಡುತ್ತೇನೆ ಆದರೆ ನಿಮ್ಮ ಅನ್ನ ಮಾತ್ರ ಉಣ್ಣೋಲ್ಲ' ಎಂದೆ. 'ಹಾಗಾದರೆ ಏನು ತಿನ್ನುತ್ತೀ?' ಎಂದು ಕೇಳಿದ. 'ಹಾಗೇ ಬೀಳಿಗೆ ಹೋಗಿ ಯಾವುದಾದರೂ ಗಡ್ಡೆಗೆಣಸು ಇದೆಯೇನೋ ಆಯ್ಕೊಂಡು ತಿನ್ನುವೆ' ಎಂದೆ. ಅವನು ಸ್ವಲ್ಪ ಹೊತ್ತು ಆಲೋಚಿಸಿ 'ಸರಿ ಹಾಗೇ ಆಗಲಿ. ನಡಿ, ನಾನೂ ಬರ್ತೀನಿ' ಎಂದ. ನಾನು ಹೊರಟೆ. ಜಾಲಿಬೀಳನ್ನೆಲ್ಲಾ ತಡಕಾಡಿದೆ. ಬೀಳಿನ ಕೊನೆಯಲ್ಲೊಂದು ಬೇಲದ ಹಣ್ಣಿನ ಮರವಿತ್ತು. ಆ ಮರದಲ್ಲಿ ಕಾಯಿಗಳೇ ಇದ್ದುವು. ಮರದ ಕೆಳಗಡೆ ಹತ್ತಾರು ಕಾಯಿಗಳು ಗಾಳಿಗೆ ಉದುರಿ ಬಿದ್ದಿದ್ದುವು. ಅವುಗಳನ್ನು ತಿಂದೆ. ಸೀಮೆ ಹುಣಿಸೆ ಮರವಿತ್ತು. ಅದರಲ್ಲಿದ್ದ 'ಚಕ್ರ ಕಾಯಿ'ಗಳ್ನು ಸಿಪ್ಪೆ ಸುಲಿದು, ಒಳಗಿನ ಪೊಪ್ಪನ್ನೇ ತಿಂದೆ. ಜಾಲಿ ಮರವೊಂದಕ್ಕೆ ಬಂಗಾರದಂಥ ಜಾಲಿ ಹೂ ಗೊಂಚಲಿತ್ತು. ಅದನ್ನು ಹೆಕ್ಕಿ ಚಪ್ಪರಿಸಿದೆ. ಹೊಟ್ಟೆಯೇನೋ ತುಂಬಿತಾಗಲೀ, ದಾಹವಾಗತೊಡಗಿತು. ಏನು ಮಾಡಬೇಕೋ ತೋಚದಾಯಿತು. ಒಂದು ಕೂಗಳತೆ ದೂರ ಹೋದರೆ ಮಾತ್ರವೇ ಕೆರೆ ಇದೆ. ಆ ಕೆರೆ ಊರಿಗೆ ಕೊಂಚ ಹತ್ತಿರದಲ್ಲಿಯೇ ಇದೆ. ಆ ಹಾವಾಡಿಗನಿಗೆ ನೀರಡಿಕೆಯಾಗುತ್ತಿದೆ ಎಂದೆ. ಅವನು ಕೊಂಚ ಆಲೋಚಿಸಿ, 'ರಾತ್ರಿಗೆ ಕುಡಿಯುವೆಯಂತೆ, ನಡಿ' ಎಂದ. ಆ ರಾತ್ರಿ–ಅರ್ಧ ರಾತ್ರಿಯಲ್ಲಿ ಅವನು ನನ್ನನ್ನು ಹಿಂದಿಟ್ಟುಕೊಂಡು, ಕೆರೆಗೆ ಕರೆದೊಯ್ದು ನೀರು ಕುಡಿ ಎಂದ. ಊರಿನ ಮುಖವಾಗಿ ಕರೆದೊಯ್ಯದೆ, ಆ ಕೆರೆಗೆ, ಬೆನ್ನ ಹಿಂದಿನಿಂದ ಕರೆದೊಯ್ದಿದ್ದ. ಅಲ್ಲಿ ಇಳಿಯುವ ಮೆಟ್ಟಲುಗಳಿರಲಿಲ್ಲ. ದಾಹವನ್ನು ಕಳೆದುಕೊಳ್ಳುವುದಕ್ಕಾಗಿ ಆ ಕೆಸರಿನಲ್ಲಿಯೇ ಇಳಿದೆ. ನೀರು ತಿಳಿಮಾಡಿಕೊಂಡು, ಮೂರು ನಾಲ್ಕು ಬೊಗಸೆ ನೀರು

ಕುಡಿದೆ. ಮತ್ತೆ ನನ್ನನ್ನು ಬೆನ್ನ ಹಿಂದಿಟ್ಟುಕೊಂಡು ಗುಡಿಸಲಿಗೆ ಕರೆತಂದ. ಒಂದು ಗುಡಿಸಲಿನಲ್ಲಿ ಮಲಗಿ ನಿದ್ರೆ ಹೋದೆ. ಆಮೇಲೆ ಹತ್ತು ದಿನಗಳ ತನಕ ಅವರ ಗುಡಿಸಲಲ್ಲಿಯೇ ಇದ್ದುಬಿಟ್ಟೆ

ಈ ಹತ್ತು ದಿನಗಳೂ ನನಗೆ ಸರ್ಪಗಾವಲಿದ್ದೇ ಇತ್ತು. ಪ್ರತಿ ದಿನವೂ ಸಾಯಂಕಾಲ, ಆ ಹಾವಾಡಿಗರುವಳೂ, ಅವನೂ ಸೇರಿ ನನಗೆ ತಿನ್ನಲು ಸೌತೆಕಾಯಿ, ಹಸಿ ಬದನೆ, ಈರೇಕಾಯಿ, ಅಕ್ಕಿಗಳನ್ನು ತರುತ್ತಿದ್ದರು. ನಾನು ಅವುಗಳನ್ನು ತಿನ್ನುವುದು, ಒಂದು ಬಟ್ಟಲಿನಲ್ಲಿ ಪ್ರತಿನಿತ್ಯವೂ ರಾತ್ರಿ ಕೆರೆಯಿಂದ ನೀರು ತಂದುಕೊಳ್ಳುವುದು, ಹಗಲೆಲ್ಲಾ ಅದನ್ನು ಬಳಸುವುದು, ಹೀಗೆ ಆ ಹತ್ತು ದಿನಗಳು ಕಳೆದುವು.

ಅವನು ನಿಜಕ್ಕೂ ಮೋಡಿ ಹಾಕಿದ್ದನೋ ಇಲ್ಲವೋ ತಿಳಿಯದಾಗಲಿಲ್ಲ. ನನ್ನ ಮನಸ್ಸು ಮಾತ್ರ ಮೊದಲೆರಡು ಮೂರು ದಿನಗಳವರೆಗೆ ಯಾವುದೋ ಒಂದು ಮಂಪರಿನಲ್ಲಿದ್ದಂತಿತ್ತು. ಅನಂತರ ಆ ಮಂಪರು ಬಿಟ್ಟುಹೋಯಿತು. ಅದು ಬಿಟ್ಟುಹೋದಂದಿನಿಂದಲೂ ನಾನು ತಪ್ಪಿಸಿಕೊಂಡು ಹೋಗುವುದರ ಬಗ್ಗೆಯೇ ಯೋಚಿಸಲಾರಂಭಿಸಿದೆ. ಅವರಿಗೆ ನಂಬಿಕೆಯುಂಟಾಗುವಂತೆ ಮಾಡಿದರೇನೇ ಅದಕ್ಕೆ ಅನುವಾಗುತ್ತದೆಂದು ಮನಗಂಡೆ. ಅತ್ತಕಡೆಗೆ ಯಾರಾದರೂ ಜನ ಬರುತ್ತಾರೇನೋ ಎಂದು ಎದುರುನೋಡಿದೆ. ಒಂದಿಬ್ಬರು, ಅವರಾದರೋ ಮಾಲ ಜಾತಿಯವರು–ಅವರಲ್ಲದೆ ಮತ್ತಾರೂ ಬರಲಿಲ್ಲ. ಆ ಬಂದವರೊಂದಿಗೆ ನನ್ನ ವಿಷಯ ತಿಳಿಸಿ, ನನ್ನ ಯೋಜನೆಯನ್ನು ಹಾಳುಮಾಡಿಕೊಳ್ಳಲು ನನಗೆ ಇಷ್ಟವಿರಲಿಲ್ಲ. ಇಷ್ಟಕ್ಕೂ, ಸೌತೆಕಾಯಿ ಮುಂತಾದ ಹಸಿರು ಕಾಯಿಗಳನ್ನು ತಿನ್ನುತ್ತಾ, ನೀರು ಕುಡಿಯುತ್ತಾ ಇದ್ದುಬಿಟ್ಟಿದ್ದರಿಂದ ನನ್ನ ಆರೋಗ್ಯ ಚೆನ್ನಾಗಿ ಸುಧಾರಿಸಿತ್ತು. ದೇಹ ಕೊಂಚ ಇಳಿಯಿತಷ್ಟೆ ಬಣ್ಣ ಕಪ್ಪಗೆ ತಿರುಗಿತು. ಆದರೆ ಶರೀರ ಮಾತ್ರ ತುಂಬ ಚಟುವಟಿಕೆಯಿಂದ, ಲವಲವಿಕೆಯಿಂದ ಕೂಡಿಕೊಂಡಿತು. ನಾನು ಓಡತೊಡಗಿದರೆ ಆ ಹಾವಾಡಿಗ ನನ್ನನ್ನು ಹಿಡಿದುಕೊಳ್ಳಬಲ್ಲನೆಂದೆನ್ನಿಸುತ್ತಿಲ್ಲ. ಅವರವರೇ ಮಾತನಾಡಿಕೊಳ್ಳುವಾಗ ಅವರು ಇಲ್ಲಿಂದ ಮತ್ತೆಲ್ಲಿಗೋ ಗುಡಾರವನ್ನೆತ್ತುತ್ತಾರೆಂಬ ವಿಷಯ ಗ್ರಹಿಸಿದೆ. ಅದರೊಳಗಾಗಿಯೇ ನಾನೂ ತುಂಬ ನಂಬಿಕಸ್ಥನ ಹಾಗೆ ನಟಿಸುತ್ತಾ ಬಂದೆ. ಆ ಕೋತಿಗಳಿಗೆ ನಾನೆಂದರೆ ಬಳಕೆಯಾಯಿತು. ಅವು ಈಗ ನನ್ನ ಮಡಿಲಲ್ಲಿಯೇ ಮಲಗಿಕೊಳ್ಳುತ್ತವೆ; ದೊಡ್ಡ ಕೋತಿ ನನ್ನ ತಲೆಯಲ್ಲಿನ ಹೇನುಗಳನ್ನು ಹೆಕ್ಕಿ, ಕುಕ್ಕಿ ತಿನ್ನುತ್ತದೆ. ಅದು ಹೇನು ನೋಡುವುದಕ್ಕೆ ಮೊದಲಿಟ್ಟ ಗಳಿಗೆಯ ಮಹಿಮೆಯೋ ಏನೋ ಆ ಹೇನುಗಳು ನೂರಾರು, ಸಾವಿರಾರು ವೃದ್ಧಿಗೊಂಡುಬಿಟ್ಟವು. ಸಣ್ಣ ಕೋತಿ–ನಾನು ಸೌತೆಕಾಯಿ ಮುಂತಾದವುಗಳನ್ನು ತಿನ್ನುತ್ತಿದ್ದರೆ, ನನ್ನ ಕೈಯಲ್ಲಿದ್ದ ಕಾಯಿಯನ್ನು ಕಿತ್ತುಕೊಂಡು ಹೋಗಿಬಿಡುತ್ತಿತ್ತು. ವರ್ಷದ ಮಗುವನ್ನು ನಾನು ಆಡಿಸಲು ಪ್ರಾರಂಭಿಸಿದೆ. ನಾನು ಆ ಮಗುವನ್ನು ಮುಟ್ಟಿಕೊಳ್ಳದೇ ಇದ್ದರೂ, ಆ ಮಗು ನಾನೇನಾದರೂ ಮಾತನಾಡಿಸಿದರೆ ನಗುತ್ತಿತ್ತು. ಸಣ್ಣಪುಟ್ಟ ಕೆಲಸಗಳನ್ನು ಮಾಡಿಡುತ್ತಾ, ಅವರಿಗೆಲ್ಲಾ ನಾನೆಂದರೆ ಒಂದು ನಂಬಿಕೆಯುಂಟಾಗುವಂತೆ ವರ್ತಿಸಿದೆ. ನಾನು ಆ ಮೂವರೊಂದಿಗೂ ಒಂದಾಗಿ ಕಲೆತು ಮಾತನಾಡುತ್ತಾ, ಅವರಿಗೆಲ್ಲಾ ಹಾಗೆ ಮಾಡೋಣ, ಹೀಗೆ ಮಾಡೋಣ ಎಂದು

ತಿಳಿಸುತ್ತಿದ್ದೆ. ಈ ರೀತಿ ನಾನು ಅವರೊಂದಿಗೆ ಕಲೆತು ಬೆರೆತು ಮಾತನಾಡುತ್ತಿದ್ದುದರಿಂದ ನಾನವರಿಗೆ ಹಳಬನಾಗಿಬಿಟ್ಟೆ ಆದಾಗ್ಯೂ ದೊಡ್ಡ ಹಾವಾಡಿಗ ಮಾತ್ರ ನನ್ನ ಮೇಲೊಂದು ಕಣ್ಣಿಟ್ಟೇ ಇದ್ದ.

ಅವರ ಯೋಚನೆ ಏನೆಂದರೆ–ಇಲ್ಲಿನ ಗುಡಿಸಲು–ಗುಡಾರಗಳನ್ನೆತ್ತಿಬಿಟ್ಟು, ಮತ್ತಾವುದೋ ಊರಿನಲ್ಲಿರುವ ಇನ್ನಿತರ ಹಾವಾಡಿಗರ ಬಳಿಗೆ ಹೋಗಬೇಕೆಂದು. ಅಲ್ಲಿಗೇನಾದರೂ ಹೋಗಿಬಿಟ್ಟರೆ ನಾನು ತಪ್ಪಿಸಿಕೊಂಡು ಹೋಗಲು ಇನ್ನು ಸಾಧ್ಯವೇ ಇಲ್ಲದಂತಾಗಿಬಿಡುತ್ತದೆ ಎಂದು ನಾನು ಬಲ್ಲೆ. ಆದರೂ ಮೇಲಕ್ಕೆ ಮಾತ್ರ ಅಲ್ಲಿಗೇ ಹೋಗೋಣವೆಂದೇ ಅವರೊಂದಿಗೆ ತಿಳಿಸಿದೆ. 'ಹೌದು ನನಗೆಲ್ಲಿಯಾದರೇನು? ನಿಮ್ಮೊಂದಿಗೆ ಸೇರಿಕೊಂಡುಬಿಡ್ತೇನೆ' ಎಂದೆ. ಅದಕ್ಕೆ ಆ ದೊಡ್ಡ ಹಾವಾಡಿಗ, 'ಹಾಗಾದರೆ ನಮ್ಮ ಅನ್ನವನ್ನುಣ್ಣು ಮತ್ತೆ?' ಎಂದ. 'ಹಾಗೇ ಆಗಲಿ, ತಿನ್ನುತ್ತೇನೆ. ಆದರೆ ಇನ್ನೂ ನಾಲ್ಕೈದು ದಿನ ಕಳೀಲಿ' ಎಂದೆ. ಆ ಹಾವಾಡಿಗರವಳು ಅನ್ನ ಮಾಡಲು ಸಿದ್ಧಳಾದರೆ, ನಾನು ಒಲೆ ಹೊತ್ತಿಸಿಡುವುದು, ಸುತ್ತಮುತ್ತಲಿನ ಮರಗಳ ಕೆಳಗೆ ಬಿದ್ದ ರೆಂಬೆ, ಕಾಷ್ಠ, ಕಟ್ಟಿಗೆಗಳನ್ನು ತಂದು ಗುಡ್ಡೆ ಹಾಕುವುದು, ಹೀಗೆ ಮಾಡುತ್ತಾ ಬಂದೆ. ಇದರಿಂದಾಗಿ ಅವರಿಗೆ ನನ್ನ ಮೇಲೆ ಚೆನ್ನಾಗಿ ನಂಬಿಕೆ ಏರ್ಪಟ್ಟಿತು.

ಆ ಹತ್ತನೆಯ ದಿನ ಹೊತ್ತು ಮುಳುಗುತ್ತಲೇ ಅವರು ಗುಡಿಸಲುಗಳನ್ನು ಕಿತ್ತರು. ಸ್ವಲ್ಪ ಸಾಮಾನುಗಳನ್ನು ಕತ್ತೆಯ ಮೇಲೆ ಹೇರಿದರು. ನಾನು ಸಹ ಅವರಿಗೆ ಕೈಯಾಸರೆಯಾಗಿ ಆ ಈ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಟ್ಟೆ 'ಬೆಳಕು ಹರಿಯುವುದರೊಳಗಾಗಿ ನಾವೆಲ್ಲಾ ಆ ಊರಿನ ಹಾವಾಡಿಗರೊಂದಿಗೆ ಸೇರಿಕೊಳ್ತೀವಿ ತಾನೆ?' ಎಂದು ಕೇಳಿದೆ. ಅವರು 'ಸೇರಿಕೊಳ್ತೇವೆ' ಎಂದರು. ನನ್ನ ಒಳಗಿನ ಆಸೆಗೆ ಕಲ್ಲು ಬಿದ್ದಂತಾಯಿತು. ಹೇಗಾದರೂ ಮಾಡಿ, ಹಗಲು ಯಾವುದಾದರೂ ಊರಿನ ಬಳಿಯಲ್ಲಿಂದ ಹೋಗುವ ರಿವಾಜೇನಾದರೂ ಇದ್ದ ಪಕ್ಷಕ್ಕೆ ನಾನು ತಪ್ಪಿಸಿಕೊಳ್ಳಲು ಅನುವಾಗಿರುತ್ತದೆ ಎಂದು ಚಿಂತಿಸುತ್ತಿದ್ದೆ. ನನ್ನ ಅದೃಷ್ಟಕ್ಕೆ ಸರಿಯಾಗಿ ಒಂದು ಪುಟ್ಟ ಸಂಗತಿ ನಡೆಯಿತು. ರಾತ್ರಿ, ಒಂದು ಜಾವವಾದ ಮೇಲೆ ನಮ್ಮ ಪಯಣ ಸಾಗಿಸಿದೆವು. ದಾರಿಯಲ್ಲಿ ಕತ್ತೆಯ ಕಾಲು ಒಂದು ಕೊರಕಲಿನಲ್ಲಿ ಸಿಕ್ಕು ಮುರಿದುಹೋಯಿತು. ಅದರಿಂದಾಗಿ ಅಲ್ಲಿ ಒಂದು ಜಾವ ತಡವಾಯಿತು. ದೊಡ್ಡ ಹಾವಾಡಿಗ ಅವಸರಪಡಿಸತೊಡಗಿದ.

ಮರುದಿನ ಬೆಳಕು ಹರಿದು, ಮಾರು ಹೊತ್ತೇರಿದ ಮೇಲಲ್ಲದೆ, ಅದಕ್ಕಿಂತ ಮುಂಚೆ ಆ ಗುಂಪನ್ನು ಸೇರುವಂತಿಲ್ಲವಲ್ಲಾ ಎಂದುಕೊಳ್ಳುತ್ತ ಮತ್ತೆ ನಮ್ಮ ಪಯಣವನ್ನು ಮುಂದುವರಿಸಿದೆವು. ಕತ್ತೆಯ ಮೇಲೆ ಹೇರಿದ ಸಾಮಾನೆಲ್ಲಾ ಇಳಿಸಿ, ಗಂಡಸರೇ ಅದನ್ನು ತಲಾ ಒಂದಿಷ್ಟು ಹೊರಬೇಕಾಯಿತು. ನಾನು ಸಹ ಒಂದಿಷ್ಟು ಸಾಮಾನು ಹೊರಬೇಕಾಯಿತು. ಬೆಳಕು ಹರಿದಾಗ ನಾವು ಯಾವುದೋ ಒಂದು ಊರನ್ನು ಸಮೀಪಿಸಿದೆವು. ದೊಡ್ಡ ಹಾವಾಡಿಗ ಊರಿಗೆ ದೂರವಾಗಿಯೇ ದಾರಿ ತೆಗೆಯುತ್ತಿರುವನು. ನಾನು ಊರಿನ ಮೂಲಕ ಹೋಗುವ ದಾರಿಯ ಮೂಲಕವೇ ಹೋದರೆ, ನಾವು ಸೇರಬೇಕಾದ ಸ್ಥಳವನ್ನು ಸೇರಿಕೊಳ್ಳುತ್ತೇವೆ;

ಆ ಸುತ್ತು ಬಳಸಿನ ದಾರಿಯಾದರೆ ಹೊತ್ತು ನೆತ್ತಿಗೇರಿಬಿಡುತ್ತದೆ ಎಂದು ಅನುಮಾನ ತಲೆ ಎತ್ತದಂತೆ ನುಡಿದೆ. ಆದಾಗ್ಯೂ ಆ ಹಿರಿಯ ಹಾವಾಡಿಗನಿಗೆ ನನ್ನ ಮೇಲೆ ಕೋಪ ಬಂದು, 'ಆ ಕಡೆಗೇನಾದ್ರೂ ನೀನು ದಾರಿ ತುಳಿದ್ಯೋ ನಿನ್ನ ಕಾಲು ಮುರಿದುಬುಟ್ಟೇನು' ಎಂದ. ಅಷ್ಟರಲ್ಲಿಯೇ ದೂರದಲ್ಲಿ ಯಾರೋ ಒಬ್ಬ ರೈತ ರಂಟೆ ಹೊತ್ತುಕೊಂಡು ಬರುತ್ತಿರುವುದು ಕಾಣಿಸಿತು. ನಾನು ಇದೇ ಒಳ್ಳೆಯ ಅವಕಾಶವೆಂದು ಬಗೆದು, ನನ್ನ ನೆತ್ತಿಯ ಮೇಲಿನ ಮೂಟೆಯನ್ನು ಆಯ ನೋಡಿ ಆ ಹಿರಿಯನ ಕಾಲುಗಳಿಗೆ ಬೀಸಿಯೊಗೆದುಬಿಟ್ಟೆ ತತ್ ಕ್ಷಣವೇ ಅಲ್ಲಿಂದ ಓಡಿಹೋಗಿ ಆ ರೈತನನ್ನು ಕೂಡಿಕೊಂಡೆ. ನಾನು ಆ ರೈತನೊಂದಿಗೆ, ನನ್ನ ಸಾಕು ತಂದೆಯ ಹೆಸರು ಹೇಳಿ, ನಾನು ಆತನ ಹತ್ತಿರವೇ ಇರುತ್ತಿದ್ದೆನೆಂದೂ, ಆ ಊರು ತೊರೆದು ಬಂದುಬಿಟ್ಟೆನೆಂದೂ, ದಾರಿ ತಪ್ಪಿ ಆ ಹಾವಾಡಿಗರ ಗುಡಿಸಲುಗಳ ಬಳಿಗೆ ಹೋದೆನೆಂತಲೂ, ಅವರು ಈ ಹತ್ತು ದಿನಗಳಿಂದಲೂ ನನ್ನನ್ನು ಹೋಗಗೊಡದೆ ಕೂಡಿಹಾಕಿದ್ದರೆಂತಲೂ ತಿಳಿಸಿದೆ. ಅಷ್ಟರೊಳಗಾಗಿ ಆ ಹಿರಿಯ ಹಾವಾಡಿಗ ನಾವಿದ್ದಲ್ಲಿಗೆ ಬಂದು, ನನ್ನ ಕೈ ಹಿಡಿದೆಳೆದ. ನಾನು ಬೀಸಿಯೊಗೆದ ಮೂಟೆ ಸರಿಯಾಗಿ ಅವನ ಮೊಣಗಾಲ ಚಿಪ್ಪಿಗೆ ಬಲವಾದ ಪೆಟ್ಟನ್ನುಂಟುಮಾಡಿತ್ತು. ನಾನು ಮತ್ತೆ ಗುರಿ ನೋಡಿ ಅದೇ ಸ್ಥಳಕ್ಕೆ ಝಾಡಿಸಿ ಒದ್ದೆ. ಅವನ ಕಾಲು ಸೊಟ್ಟಾಗಿ, ಕೆಳಗೆ ಬಿದ್ದುಬಿಟ್ಟನಾಗಲೀ ಅವನು ನನ್ನ ಕತ್ತನ್ನು ಎರಡು ಕೈಗಳಿಂದಲೂ ಗಟ್ಟಿಯಾಗಿ ಒತ್ತಿ ಹಿಡಿದುಕೊಂಡುಬಿಟ್ಟ. ನನ್ನ ಅವಸ್ಥೆ ತೀರಿತು ಎಂದೆನ್ನಿಸುವಷ್ಟರಮಟ್ಟಿಗೆ ಉಸಿರು ಸಿಕ್ಕಿಹೋಯಿತು. ಅಷ್ಟರಲ್ಲಿ ಆ ರೈತ ತನ್ನ ಕೈಯಲ್ಲಿನ ದೊಣ್ಣೆಯಿಂದ ಆ ಹಾವಾಡಿಗನ ಕೈಗಳ ಮೇಲೆ ರಪ್ಪೆಂದು ಹೊಡೆದ. ಆಗ ಅವನ ಹಿಡಿತ ಸಡಲಿತು. ಆದರೆ ಅವನು 'ಇವನು ನಮ್ಮಣ್ಣನ ಮಗ. ಕಳ್ಸೂಳೇಮಗ ಓಡಿಹೋಗೋಣಾಂತ ಈ ಆಟ ಹೂಡವ್ನೆ' ಎಂದ. ನನ್ನ ಬಟ್ಟೆ–ಬರೆ; ನನ್ನ ಸ್ಥಿತಿ–ಗತಿಗಳನ್ನು ನೋಡಿ ಆ ರೈತನಿಗೆ ನಾನು ಹಾವಾಡಿಗರವನೇನೋ ಎಂದೆನ್ನಿಸಿತು. ಅಷ್ಟರೊಳಗಾಗಿ ಅಲ್ಲಿಗೆ ಮತ್ತೊಂದು ಮೂರು ಜನ ರೈತರು ಬಂದುಬಿಟ್ಟರು. ಆ ಹಾವಾಡಿಗ ಚಾಲಾಕಿಯವನಾದ್ದರಿಂದ ಕತ್ತೆಯನ್ನು ಹೊಡೆದುಕೊಂಡು ಹೋಗುವವನ ಹಾಗೆ ನಟಿಸುತ್ತಾ ಹೊರಟುಹೋಗಿಬಿಟ್ಟ. ಅವನು ಇನ್ನೂ ಹೆಚ್ಚಿನ ಚಾಲಾಕಿಯವನು. ಅವನು ತನ್ನವರ ಬಳಿಗೆ ಹೋಗಿ, ಏನೋ ಎರಡು ಮಾತು ಹೇಳಿ ಮತ್ತೊಂದು ದಾರಿ ಹಿಡಿದು ಹೊರಟೇ ಹೋಗಿಬಿಟ್ಟ.

ಅಲ್ಲಿ ಸೇರಿದ ರೈತರೆಲ್ಲಾ ಎಷ್ಟು ಹುಡುಕಿದರೂ ಅವನು ಕಂಡು ಬರಲಿಲ್ಲ. ಆಗ ಅವರೆಲ್ಲರೂ ಸೇರಿ ಇನ್ನುಳಿದ ಆ ಇಬ್ಬರನ್ನು ಹಿಡಿದುಕೊಂಡರು. ಅವರು ಮಕ್ಕಳು ಮರಿಗಳೊಂದಿಗೆ ಓಡಿಹೋಗಲಾಗಲಿಲ್ಲ. ಅವರದೇನೂ ತಪ್ಪಿಲ್ಲ; ಅವರನ್ನು ಬಿಟ್ಟುಬಿಡಿ ಎಂದು ನಾನು ತಿಳಿಸಿದೆ. ಆದರೆ ಆ ಊರಿನವರು ಅವರನ್ನು ಬಿಟ್ಟುಬಿಡಲೊಪ್ಪದೆ ಊರೊಳಗೆ ಎಳೆದುತಂದರು. ಆಗ ಊರಿನ ಜನರೆಲ್ಲರೂ ಗುಂಪು ಗುಂಪಾಗಿ ನನ್ನ ಸುತ್ತ ಮುತ್ತಿಕೊಂಡರು. ನನ್ನ ಕಥೆಯನ್ನೆಲ್ಲಾ ಅವರಿಗೆ ತಿಳಿಸಿದೆ. ಅವರು, ತಲೆಗೊಬ್ಬರು ತಲೆಗೊಂದು ರೀತಿಯಲ್ಲಿ ಪ್ರಶ್ನಿಸಿದರು. 'ಅವರ ನೀರು ಕುಡಿದ್ಯೋ?' 'ಅವರ ತಿಂಡಿ ತಿಂದೆಯಾ?' ಅದಕ್ಕೆ

ಅವರನ್ನೇ ಕೇಳಿ ನೋಡಿ ಎಂದೆ ನಾನು. ಹಾವಾಡಿಗರವಳು "ಸಾಮೇರಾ, ಆತ ನಮ್ಮನ್ನಾ ಉಣ್ಣಿಲ್ಲಾ, ನಮ್ ನೀರು ತಾಕ್ನಿಲ್ಲ. ನಾವು ದಿನ್ನೂ ಸೌತೇಕಾಯಿ ಅವೂ ಇವೂ ತಂದು ಕೊಡ್ತಾ ಇದ್ದೊ. ಅವನ್ನೇ ತಿನ್ತಾ ಇದ್ದುಬಿಟ್ಟ, ನೀರು ತಾನೇ ತಂದುಕೊಳ್ತಾ ಇದ್ದ" ಎಂದು ತಿಳಿಸಿದಳು. ಆ ದಿನ ಎರಡನೇ ಜಾವಕ್ಕೆ ಅವರಿಬ್ಬರನ್ನೂ ಹೋಗಗೊಟ್ಟರು. ಆ ಊರಿನವರೆಲ್ಲರೂ, 'ನಿನ್ನದು ಯಾವ ಊರು?' ಎಂದು ಕೇಳಿದರು. ನನ್ನ ಸ್ವಂತ ಚಿಕ್ಕಮ್ಮನವರ ಊರಿನ ಹೆಸರು ತಿಳಿಸಿ, ಅಲ್ಲಿಂದ ನಮ್ಮ ಸಾಕು ತಂದೆಯವರ ಊರಿಗೆ ಹೋಗಿ ಸೇರಿಕೊಂಡ ಘಟ್ಟವನ್ನೆಲ್ಲಾ ತಿಳಿಸಿದೆ. ನಮ್ಮ ಸ್ವಂತ ಚಿಕ್ಕಮ್ಮನವರ ಊರೂ, ಆಕೆಯ ಹೆಸರು ತಿಳಿಸುತ್ತಲೇ ನನಗಿನ್ನೊಂದು ವಿಷಯ ತಿಳಿದು ಬಂದಿತು–ಆ ಊರೂ ನನ್ನ ಸೋದರಮಾವನವರ ಊರು! ಎಂದು.

೭

ನನ್ನ ಸೋದರ ಮಾವನಿಗೆ ಒಬ್ಬ ಮಗನೂ, ಒಬ್ಬ ಮಗಳೂ ಇರುವರೆಂದು ತಿಳಿಸಿರುವೆನಲ್ಲವೆ? ಮಗಳಿಗೆ ಎಂಟು ವರ್ಷಗಳು, ಮಗನಿಗೆ ಏಳು ವರ್ಷಗಳು. ನನ್ನ ಸೋದರಮಾವನ ಹೆಂಡತಿ ನನ್ನ ಸೋದರಮಾವ ಗತಿಸಿದ ಮೇಲೆ ಅದೇ ಊರಿನಲ್ಲಿ ತನ್ನ ಇಬ್ಬರು ಮಕ್ಕಳನ್ನು ನೋಡಿಕೊಳ್ಳುತ್ತಾ ಒಬ್ಬಳೇ ಇರತೊಡಗಿದ್ದಳು. ಆಕೆಗೊಬ್ಬ ಅಣ್ಣನಿದ್ದನಂತೆ. ಆದರೆ ಆತನೂ ಸತ್ತುಹೋಗಿದ್ದನಂತೆ. ಮನೆಯಲ್ಲಿ ಗಂಡು ದಿಕ್ಕಿಲ್ಲದೆ ಆ ಹೆಂಗಸೊಬ್ಬಳೇ ನಾನಾ ಪಾಡು ಪಡುತ್ತಿದ್ದಳು. ನನ್ನನ್ನು ಕರೆತಂದು ತನ್ನ ಮನೆಯಲ್ಲಿಯೇ ಇಟ್ಟುಕೊಳ್ಳಬೇಕೆಂದು ಒಂದು ಸಲ ನನ್ನ ಚಿಕ್ಕಮ್ಮನಿಗೆ ಹೇಳಿಕಳಿಸಿದ್ದಳಂತೆ. ಆಗ ನನ್ನ ಚಿಕ್ಕಮ್ಮ, ನಾನು ನನ್ನ ಸಾಕು ತಂದೆಯ ಮನೆಯಲ್ಲಿರುವುದನ್ನು ತಿಳಿಸುತ್ತಾ, 'ಅವನಿಗೇನು ಮಹಾರಾಜನಂಗೆ ಅವ್ನೆ. ಅವನಿಗೆ ಶುಕ್ರದೆಸೆ ಪ್ರಾರಂಭವಾಗಿದೆ' ಎಂದು ಹೇಳಿಕಳಿಸಿದ್ದಳಂತೆ. ನಾನು ತನ್ನ ಕೈಯಾಸರೆಗೆ ಇಲ್ಲದೇ ಹೋದೆನಲ್ಲಾ ಎಂದು ನನ್ನ ಸೋದರಮಾವನ ಹೆಂಡತಿ ನಿರಾಶಳಾದಳಂತೆ. ಊರಿನವರೆಲ್ಲಾ ನನ್ನನ್ನು ನೋಡಿ ಹೋಗಲು ಬರುತ್ತಾ ಇದ್ದರೆ ಆಕೆಯೂ ಸಹ ನಾನಿದ್ದಲ್ಲಿಗೆ ಬಂದಳು. ಸೋದರಮಾವನ ಹೆಂಡತಿಯನ್ನು ಕೂಡ ಜನ ವಾಡಿಕೆಯಲ್ಲಿ ಸೋದರತ್ತೆ ಎಂದು ಕರೆಯುವ ರೂಢಿ ಇದೆ. ನಾನು ನನ್ನ ಈ ಕಥೆಯಲ್ಲಿ ಸೌಲಭ್ಯಕ್ಕೋಸ್ಕರವಾಗಿ ಆಕೆಯನ್ನು ಸೋದರತ್ತೆ ಎಂದೇ ಸಂಬೋಧಿಸತೊಡಗುತ್ತೇನೆ.

ನಾನಿರುವಲ್ಲಿಗೆ ನನ್ನ ಸೋದರತ್ತೆ ಬಂದು ನನ್ನನ್ನು ನೋಡಿದಳು. ನಾನು ಸ್ನಾನ ಮಾಡಿ ಹನ್ನೆರಡು ದಿನಗಳೇ ಉರುಳಿದ್ದವು. ತಲೆಯೆಲ್ಲಾ ಮಾಸಿತ್ತು. ತೊಟ್ಟ ಬಟ್ಟೆಗಳು ಎಷ್ಟು ಕೊಳೆಯಾಗಲು ಸಾಧ್ಯವೋ ಅಷ್ಟೂ ಕೊಳೆಯಾಗಿತ್ತು. ಅಂಥ ಸ್ಥಿತಿಯಲ್ಲಿ ಯಾರೇ ಆಗಲಿ ನನ್ನನ್ನು ತಮ್ಮವನು ಎನ್ನಲಾರರು. ನನ್ನ ಸೋದರತ್ತೆ 'ಮಗೂ ಮನೆಗೆ ಹೋಗುವ, ಬಾ' ಎಂದು ಕರೆದುಕೊಂಡು ಹೋದಳು. ನಾಯಿಂದನನ್ನು ಕರೆಯಿಸಿ, 'ತಲೆಮಾಡಿಸಿ'ದಳು. ಎಣ್ಣೆ ಸ್ನಾನ ಮಾಡಿಸಿದಳು. ಊರಿನಲ್ಲಿ ನೇಕಾರರಿದ್ದುದರಿಂದ, ಅವರ ಮನೆಯಿಂದ ನನಗೆ

ಎರಡು ಜೊತೆ ಹೊಸ ಬಟ್ಟೆಗಳನ್ನು ತರಿಸಿಕೊಟ್ಟಳು. ನಾನು ಬಂದಿದ್ದೇನೆಂದು ಆ ದಿನ ಗಾರಿಗೆಯನ್ನು ಮಾಡಿದಳು. ನಾನು ಊಟ ಮಾಡಿ, ಮದುವಣಿಗನ ಹಾಗೆ ಹೊಸ ಬಟ್ಟೆಗಳನ್ನುಟ್ಟು ಎದೆಯುಬ್ಬಿಸಿಕೊಂಡು ನಡೆದಾಡಿದೆ. ಪ್ರತಿಯೊಬ್ಬರೂ ನನ್ನ ಕಥೆ ಹೇಳೆಂದು ಕೇಳುವುದು, ನಾನು ಹಾವಾಡಿಗರ ಕುರಿತು ಅನೇಕ ಕಥೆಗಳನ್ನು ಕಲ್ಪಿಸಿ ಹೇಳುವುದು; ಈ ರೀತಿಯಾಗಿಯೇ ಆ ದಿನವೆಲ್ಲಾ ಕಳೆದುಹೋಯಿತು.

ಆ ಊರಿನಲ್ಲಿ ಹತ್ತು ಬ್ರಾಹ್ಮಣರ ಮನೆಗಳಿವೆ. ಕಮ್ಮಾ ಜನಾಂಗದವರೂ, ರೆಡ್ಡಿ ಜನಾಂಗದವರೂ ಇದ್ದಾರೆ. ಒಕ್ಕಲಿಗರ ಮನೆ–ನನ್ನ ಸೋದರ ಮಾವನದೊಂದೇ ಇದೆ ಆ ಊರಲ್ಲಿ. ಸುಮಾರು ಇನ್ನೂರು ಮುನ್ನೂರು ಕಮ್ಮಾ ಮತ್ತು ರೆಡ್ಡಿ ಜನಾಂಗದವರ ಮನೆಗಳಿವೆ. ಅವರಲ್ಲಿ ಕೆಲವರು ಸಾಮಂತರೂ ಇದಾರೆ. ಬ್ರಾಹ್ಮಣರ ಹತ್ತು ಮನೆಗಳ ಪೈಕಿ ಒಂದು ಮನೆಯವರು ಮಾತ್ರ ಧನಿಕರು. ಅವರದು ಹೆಂಚಿನ ದೊಡ್ಡ ಮಹಡಿಮನೆ. ಆ ಮನೆಯ ಯಜಮಾನನಿಗೆ ಮೂರು ಜನ ಗಂಡು ಮಕ್ಕಳಿದ್ದಾರೆ. ದೊಡ್ಡ ಮಗ ಯಾವುದೋ ಉದ್ಯೋಗದಲ್ಲಿದ್ದಾನಂತೆ. ಎರಡನೆಯ ಮಗ ಗುಂಟೂರಿನಲ್ಲಿ ಎಂಟರೆನ್ಸ್ (F.A.) ಓದುತ್ತಿದ್ದಾನಂತೆ. ಮೂರನೆಯ ಮಗ ವ್ಯವಸಾಯ ನೋಡಿಕೊಳ್ಳುತ್ತಿದ್ದನು. ಇನ್ನುಳಿದ ಬ್ರಾಹ್ಮಣರು ಹಣವಂತರಲ್ಲ. ಅವರಲ್ಲಿ ಎರಡು ಮನೆಯವರು ಪೌರೋಹಿತ್ಯ ಮಾಡುವವರು. ನಿಯೋಗಿ ಬ್ರಾಹ್ಮಣರ ಎರಡು ಮನೆಗಳಿವೆ. ಒಬ್ಬರದು ಶಾನುಭೋಗರ ಮನೆ. ಅವರು ಕೊಂಚ ಸ್ಥಿತಿವಂತರೆಂದೇ ಹೇಳಬಹುದು. ಆತನ ಮಗನೂ ಸಹ ಇಂಗ್ಲಿಷ್ ವಿದ್ಯಾಭ್ಯಾಸ ಮಾಡುತ್ತಿರುವನಂತೆ. ಊರಲ್ಲಿ ಒಬ್ಬ ಬ್ರಾಹ್ಮಣ ಶಾಸ್ತ್ರಿಗಳಿದ್ದರು. ಆತ ದೊಡ್ಡ ಪಂಡಿತನೆಂದೆನ್ನುತ್ತಾರೆ. ಪೋಕರಿಗಳಾಗಿ ಉಂಡಾಡಿಗುಂಡರಾಗಿ ತಿರುಗುವ ನಾಲ್ಕೈದು ಬ್ರಾಹ್ಮಣ ಹುಡುಗರಿದ್ದರು ಆ ಊರಲ್ಲಿ.

ಕಮ್ಮಾ ಜನಾಂಗದವರಲ್ಲಿ, ರೆಡ್ಡಿ ಜನಾಂಗದವರಲ್ಲಿ, ಶೇಕಡಾ ಹತ್ತುಪಟ್ಟು ಜನ ಎಂಬತ್ತು ಎಕರೆಗಳ ಮೇಲೆ ಇನ್ನೂರು ಎಕರೆಗಳೊಳಗೆ ಹೊಲಗಳನ್ನುಳುವವರಿದ್ದಾರೆ. ಈ ದೊಡ್ಡ ಕುಳಗಳಿಗೆಲ್ಲಾ ಕೆರೆಯ ಕೆಳಗೆ ಗದ್ದೆಗಳಿವೆ. ಎಲ್ಲಾ ಗದ್ದೆಗಳೇ ಅಲ್ಲದೆ, ಬಯಲು ಹೊಲಗಳು ಇನ್ನೂ ಮುನ್ನೂರು ಎಕರೆಗಳವರೆಗೆ ಬೇರೆ ಬೇರೆ ಇದೆಯಂತೆ. ಅವರ ಮನೆಗಳೆಲ್ಲಾ ದೊಡ್ಡ ದೊಡ್ಡ ಮನೆಗಳೇ. ಇಬ್ಬರು 'ಕಮ್ಮಾ' ಜನರಿಗೆ, ಇಬ್ಬರು ರೆಡ್ಡಿಗಳಿಗೆ ಮಹಡಿ ಮನೆಗಳೂ ಇವೆ. ಊರಿನಲ್ಲಿ, ಗುಂಟೂರಿನಲ್ಲಿ ಓದಿಕೊಳ್ಳುತ್ತಿರುವ ರೆಡ್ಡಿ, ಕಮ್ಮಾ ಹುಡುಗರು, ಇನ್ನಿತರೆ ರೈತರ ಹುಡುಗರು, ಊರಲ್ಲಿಯೇ ಕೆಲವರು ಇಂಗ್ಲಿಷ್ ಓದುತ್ತಿದ್ದರು. ಊರು ಒಟ್ಟಿನಲ್ಲಿ ಹಳೆಯ ಪದ್ಧತಿಯಲ್ಲಿಯೇ ಇತ್ತಾಗಲೀ, ಹೊಸ ಸುಧಾರಣೆಗಳೇನೂ ನಡೆದಿರಲಿಲ್ಲ. ಊರಿನಲ್ಲಿ ಎರಡು ಬೀದಿ ಶಾಲೆಗಳಿವೆ. ಅವುಗಳನ್ನು ನೋಡಿದೆ. ನನ್ನ ಸಾಕು ತಂದೆಯವರ ಊರಿನಲ್ಲಿ ನಾನು ಓದಿದ್ದ ಶಾಲೆ ಹೇಗಿತ್ತೋ ಹಾಗೆಯೇ ಇದ್ದುವು ಅಲ್ಲಿನ ಶಾಲೆಗಳೂ ಸಹ.

ನನ್ನ ಸೋದರತ್ತೆಯ ಈಗಿನ ಸ್ಥಿತಿ, ಆಕೆ ನಾನೆಂದರೆ ತೋರಿಸುವ ಈ ಆದರ ನೋಡಿದರೆ, ನನ್ನ ಶೈಶವದಲ್ಲಿ ನಾನೀ ಮನೆಗೆ ತರಲ್ಪಟ್ಟಾಗ ಈಕೆಯೇನೇ ಆಗ ಸಿಡಿಮಿಡಿಗುಟ್ಟಿದ್ದು?–ಎಂದೆನ್ನಿಸುತ್ತಿದೆ. ನನ್ನ ಸೋದರಮಾವನ ಮಗಳು ಕೆಂಪನೆಯ ಹುಡುಗಿ. ನನ್ನ ಸೋದರತ್ತೆ ಅವಳನ್ನು ಚೆನ್ನಾಗಿ ಪೋಷಿಸುತ್ತಿದ್ದಳು. ಸಾಮಾನ್ಯವಾಗಿ ಹಳ್ಳಿಯ ತಾಯಂದಿರು ತಮ್ಮ ಮಕ್ಕಳ ಪರಿಶುಭ್ರತೆಯ ಕಡೆಗೆ ಗಮನಿಸುವುದೇ ಇಲ್ಲ. ಒರಟೊರಟಾಗಿ ಬೆಳೆಸುತ್ತಾರೆ. ನನ್ನ ಸೋದರತ್ತೆ ತನ್ನ ಮಗಳನ್ನು ಆ ರೀತಿ ಬೆಳೆಸದೆ, ಶುಭ್ರವಾಗಿ, ನಾಜೂಕಾಗಿ ಬೆಳೆಸುತ್ತಿದ್ದಳು. ನನ್ನ ಸೋದರಮಾವನ ಮಗ ಮಾತ್ರ ಏಳು ವರ್ಷದವನಾದರೂ ಅವನದೆಲ್ಲಾ ಗಂಡಾಗುಂಡಿ ತರಹ. ಮನೆಯಲ್ಲಿ ಒಂದು ನಿಮಿಷವೂ ನಿಲ್ಲುತ್ತಿರಲಿಲ್ಲ. ಅವನು ತನ್ನ ವಯಸ್ಸಿನ ಹುಡುಗರನ್ನೆಲ್ಲಾ ಹೊಡೆಯುವುದು–ಬಡೆಯುವುದು ಮಾಡುತ್ತಿದ್ದ. ಅವನದು ಮಂಗಮುಷ್ಟಿಯೇ. ಪಟ್ಟು ಹಿಡಿದನೆಂದರೆ ಹಟಹಿಡಿದನೆಂದರೆ ಜಪ್ಪಯ್ಯಾಂದ್ರೂ ಜಗ್ಗುವುದಿಲ್ಲ. ಅವನಿಗೇನು ಬೇಕಾಗಿ ಬಂದರೂ ಬೆಟ್ಟದ ಮೇಲಿನ ಕೋಡಂಗಿಯಾದರೂ ಸರಿಯೇ, ಅಲ್ಲಿಂದ ತನ್ನಲ್ಲಿಗೆ ಇಳಿದು ಬಂದರೇನೇ ಅವನು ಸುಮ್ಮನಾಗುವುದು. ಇಷ್ಟಕ್ಕೂ ನನ್ನ ಸೋದರಮಾವನಿಗೆ ಬಯಲು ಹೊಲಗಳು, ಗದ್ದೆಗಳು ಎಲ್ಲಾ ಸೇರಿ ಸುಮಾರು ಐವತ್ತು ಎಕರೆಗಳಷ್ಟಿದೆ. ಅದರಲ್ಲಿ ಐದು ಎಕರೆ ಗದ್ದೆ. ನನ್ನ ಸೋದರಮಾವ ಬದುಕಿದ್ದಾಗ ಆತನೇ ಸ್ವತಃ ಬೇಸಾಯವನ್ನೆಲ್ಲಾ ಮಾಡುತ್ತಿದ್ದ. ಹೊಗೆಸೊಪ್ಪು ಮೆಕ್ಕೇ ಜೋಳ, ಕಡಲೆಕಾಯಿ ಬೆಳೆಯಿಸಿ, ಆತ ಬಯಲು ಹೊಲಗಳಿಂದ ಚೆನ್ನಾಗಿ ಆದಾಯ ತೆಗೆಯುತ್ತಿದ್ದನಂತೆ. ಆತ ಗತಿಸಿದ ಮೇಲೆ, ನಮ್ಮತ್ತೆ ಹೆಂಗಸಾದ್ದರಿಂದ, ಹೊಲಗಳನ್ನು ಬೇರೆಯವರಿಗೆ ಗೇಣಿಗೆ ಕೊಟ್ಟುಬಿಟ್ಟಿದ್ದಳು. ಅವರು ಎಕರೆಗೆ ನಾಲ್ಕೋ ಐದೋ ಕಂದಾಯ ಕೊಡುತ್ತಿದ್ದರು.

ಕೆರೆಯ ಕೆಳಗಿನ ಭೂಮಿ ಗದ್ದೆಯಾದುದರಿಂದ ಆ ಐದೆಕರೆ ಗದ್ದೆಗಳಿಂದ ನಾಲ್ಕೈದು ಚೀಲಗಳಷ್ಟು ಬತ್ತವನ್ನು ಆ ಗೇಣಿದಾರರು ಕೊಡುತ್ತಿದ್ದರು. ಆದರೆ ಅವರು ಕೊಡುವುದೆಂದರೆ–ದಯೆಯೋ, ದಾನವೋ ಎಂಬಂತೆ ಕೊಡುತ್ತಾ ಇದ್ದರು. ಅದೂ ಸಹ ಕೊಟ್ಟರೆ ಕೊಟ್ಟರು, ಇಲ್ಲದಿದ್ದರೆ ಇಲ್ಲವೇ ಇಲ್ಲ. ಒಮ್ಮೊಮ್ಮೆ ಕುಯ್ಲಾದ ಮೇಲೆ ಮನೆಯಲ್ಲಿ ತುಂಬಿಕೊಂಡು, ಈ ಸಲ ಬೆಳೆ ಏನೂ ಸರಿಯಾಗಿ ಬೆಳೆಯಲೇ ಇಲ್ಲ ಎಂದು ಮಾತು ಹಾರಿಸಿಬಿಡುತ್ತಲೂ ಇದ್ದರು. ಕಂದಾಯವನ್ನು ಕೂಡಾ ಸರಿಯಾಗಿ ಕೊಡುತ್ತಿರಲಿಲ್ಲ. ಏನೇ ಆಗಲಿ, ನನ್ನ ಸೋದರತ್ತೆ ಇಬ್ಬರು ಮಕ್ಕಳು–ಇಷ್ಟೇ ಜನರ ಕುಟುಂಬವಾದ್ದರಿಂದ ತೊಂದರೆ ಇಲ್ಲದೆ ಸಂಸಾರ ಸಾಗುತ್ತಾ ಇತ್ತು.

ನಾನು ಆ ಊರು ಸೇರಿಕೊಂಡ ಒಂದು ವಾರದ ಬಳಿಕ, ಆ ಊರಿನವರು ನನ್ನನ್ನು ಒಬ್ಬ ಮನುಷ್ಯನ ಹಾಗೆ ಕಾಣಲಾರಂಭಿಸಿದರು. ಏಕೆಂದರೆ ಅಷ್ಟುವರೆಗೆ ಶೂದ್ರರದಲ್ಲಿ ಲೆಕ್ಕ–ಲೇಖಗಳು ಏನು ಬೇಕಾದರೂ, ಅವರೆಲ್ಲಾ ಬ್ರಾಹ್ಮಣರ ಹತ್ತಿರಕ್ಕೆ ಹೋಗಬೇಕಾಗಿತ್ತು. ನೋಟು ಬರೆಯುವುದು, ಬಡ್ಡಿ ಲೆಕ್ಕ ಕಟ್ಟುವುದು–ಇವೆಲ್ಲಾ ನನಗೆ ಗೊತ್ತಿವೆ ಎಂದು ತಿಳಿದು ಬಂದ ಮೇಲೆ ನನ್ನ ಸೋದರತ್ತೆಯ ನೆರೆಹೊರೆಯವರೆಲ್ಲಾ ನನ್ನ ಬಳಿಗೇ ಬರಲಾರಂಭಿಸಿದರು.

ಆ ಊರಿನಲ್ಲೊಬ್ಬ ಬ್ರಾಹ್ಮಣ ನಿತ್ಯವೂ ಪುರಾಣ ಹೇಳುತ್ತಿದ್ದ. ನಾನು ಹೋದ ಮೂರನೇ ದಿನ, ಆ ಬ್ರಾಹ್ಮಣನ ಬಳಿ ದಿನವೂ ಪುರಾಣವನ್ನು ಓದುತ್ತಿದ್ದ ವ್ಯಕ್ತಿ ಆ ದಿನ ಎಲ್ಲಿಗೋ ಹೋಗಿಬಿಟ್ಟಿದ್ದರಿಂದ, ನಾನು ಪುರಾಣ ಓದಿದೆ. ನಾನು ರಾಗವಾಗಿ ಪದ್ಯಗಳನ್ನು ಓದಿದೆ. ಸ್ಪಷ್ಟವಾಗಿ ಉಚ್ಚರಿಸಿದೆ. ಇದನ್ನು ಕಂಡು ಆ ಬ್ರಾಹ್ಮಣ ತುಂಬ ಸಂತೋಷಿಸಿದ. ಊರಿನ ದೊಡ್ಡ ದೊಡ್ಡ ರೈತರೆಲ್ಲರೂ ನನ್ನನ್ನು ತುಂಬ ಪ್ರೇಮದಿಂದ ನೋಡುವುದಕ್ಕಾರಂಭಿಸಿದರು. ಆದ್ದರಿಂದ ಅನಂತರ ಆ ಬ್ರಾಹ್ಮಣನಿಗೆ ನನ್ನ ಮೇಲೆ ಕೋಪ ಬಂದಿತು. ಮೊದಮೊದಲು ಬುದ್ಧಿವಂತ ಹುಡುಗನೆಂದು ಕರೆದ ಬಾಯಿಂದಲೇ, ಈಗ, 'ಅವನ ತಲೆ, ಅವನಿಗೆ ಸರಿಯಾಗಿ ಪದ್ಯ ಓದುವುದಕ್ಕೇ ಬರೋಲ್ಲ' ಎಂದು ನನ್ನ ಬಗ್ಗೆ ಆಡಿಕೊಳ್ಳತೊಡಗಿದ. ಊರಿನಲ್ಲಿ, ಬ್ರಾಹ್ಮಣರು ಪ್ರಾಂಸರಿ ನೋಟು ಬರೆಯಲು ನಾಲ್ಕಾಣೆಯಂತೆ ತೆಗೆದುಕೊಳ್ಳುತ್ತಿದ್ದರು. ಬಡ್ಡಿ ಲೆಕ್ಕಾಚಾರ ಮಾಡಿಕೊಟ್ಟರೂ, ಕಂದಾಯದ ವಸೂಲಿ ಇಂತಿಷ್ಟಾಗುತ್ತದೆ ಎಂದು ಲೆಕ್ಕ ಹಾಕಿ ಹೇಳಿದಾಗಲೂ 'ಮಾಮೂಲು'ಗಳನ್ನು ಪಡೆಯುತ್ತಿದ್ದರು. ನಾನು ಈ 'ಮಾಮೂಲು'ಗಳಾವುವೂ ತೆಗೆದುಕೊಳ್ಳದೆ, ಪುಕ್ಕಟೆಯಾಗಿ ಕೆಲಸಮಾಡಿಕೊಡುತ್ತಿದ್ದುದರ ಮೂಲಕ ಬ್ರಾಹ್ಮಣರಿಗೆಲ್ಲಾ ನನ್ನ ಮೇಲೆ ಕೋಪ, ಊರಿನ ಇನ್ನುಳಿದವರಿಗೆಲ್ಲಾ ನನ್ನ ಮೇಲೆ ಪ್ರೀತಿಗಳುಂಟಾದುವು. ಈ ಗೌರವವನ್ನು ಕಂಡು ನನ್ನ ಸೋದರತ್ತೆ ನನ್ನನ್ನು ತುಂಬ ಪ್ರೀತಿಯಿಂದ ನೋಡಲಾರಂಭಿಸಿದಳು.

ಶೂದ್ರರ ಮನೆಗಳಲ್ಲಿ ಒಂದು ರೀತಿಯ ಪದ್ಧತಿ ಇದೆ. ಒಬ್ಬನಿಗೆ ಸ್ವಲ್ಪ ಅಕ್ಷರಜ್ಞಾನವಿದ್ದು, ವ್ಯವಹಾರಜ್ಞಾನವಿದ್ದುಬಿಟ್ಟರೆ, ಆ ಮನೆಯಲ್ಲಿ ಅವನಿಗೆ ದೊಡ್ಡ ಗೌರವವಿರುತ್ತದೆ. ಅಂಥವನು ಹೊಲದ ಕೆಲಸ ಮಾಡುವುದಿಲ್ಲ. ಗಂಜಿ ಹಾಕಿದ ಇಸ್ತ್ರಿ ಬಟ್ಟೆಗಳನ್ನೇ ತೊಡುತ್ತಾನೆ. ಅವನಿಗೆ ಅಕ್ಕಿಯನ್ನ; ಅದರಲ್ಲಿ ತುಪ್ಪ, ಬೆಣ್ಣೆ, ಮೊಸರು ಹಾಕುತ್ತಾರೆ. ಮನೆಯಲ್ಲಿ ಮಿಕ್ಕವರೆಲ್ಲರೂ ಕೇವಲ ಸಾಂಬಾರು ಕಾರ–ಅನ್ನ ಉಣ್ಣುತ್ತಾರೆ. ಹೊಲದಲ್ಲಿ ದುಡಿಯುತ್ತಾರೆ. ಒರಟಾಗಿ ಬೆಳೆಯುತ್ತಾರೆ. ಜೋಳದನ್ನವನ್ನೇ ತಿನ್ನುತ್ತಾರೆ. ಆ ದೊಡ್ಡಸ್ತಿಕೆಯುಳ್ಳವರಿಗೆ ಮಾತ್ರ ಅಕ್ಕಿಯನ್ನ!

ಮತ್ತೆ ಬೇಸಾಯದ ದಿನಗಳು ಪ್ರಾರಂಭವಾಗುತ್ತಲೇ, ನನ್ನ ಸೋದರ ಮಾವನವರ ಹೊಲಗಳನ್ನೆಲ್ಲಾ ಗೇಣಿದಾರರಿಂದ ಬಿಡಿಸಿಕೊಂಡು ನಾನೇ ಸ್ವಂತ ವ್ಯವಸಾಯಕ್ಕೆ ಪ್ರಾರಂಭಿಸಿದೆ. ಇಬ್ಬರು ಆಳುಗಳು, ಎರಡು ಜೊತೆ ಎತ್ತುಗಳು, ನೇಗಿಲು, ಗಾಡಿಗಳು–ಈ ಎಲ್ಲ ಸವಲತ್ತುಗಳನ್ನೇರ್ಪಡಿಸಿಕೊಂಡು ಸಾಗುವಳಿಗೆ ತೊಡಗಿದೆ. ಈ ಎಲ್ಲ ಸವಲತ್ತು ಸೌಲಭ್ಯಗಳಿಗಾಗಿ ಸಲಕರಣೆಗಳಿಗಾಗಿ ಐದುನೂರು ರೂಪಾಯಿಗಳನ್ನು ಸಾಲ ಮಾಡಬೇಕಾಯಿತು. ಊರಿನಲ್ಲಿನ ವ್ಯವಹಾರಗಳನ್ನು ನಿಭಾಯಿಸಿಕೊಳ್ಳಬೇಕಾಯಿತು. ಮೊದಮೊದಲು ನನ್ನನ್ನು ನೋಡಿದವರೆಲ್ಲಾ ಹದಿನಾರು ಹದಿನೇಳರ ಪ್ರಾಯದವನು ಎಂದುಕೊಂಡಿದ್ದರು. ಆಮೇಲೆ ನನಗಷ್ಟು ವಯಸ್ಸಿಲ್ಲ ಎಂದು ತಿಳಿದುಬಂದ ಮೇಲೆ, 'ಇವನು ಮೈನರ್–ಇವನು ಪ್ರೋ ನೋಟುಗಳನ್ನು ಬರೆಯಕೂಡದು' ಎಂದರು. ಅದರಿಂದಾಗಿ ಬಹಳಷ್ಟು ಜನ ನನ್ನ ಬಳಿಗೆ ಬರುವುದು ನಿಂತುಬಿಟ್ಟಿತು. ಆದರೂ, ಬರೆವಣಿಗೆಗಲ್ಲದಿದ್ದರೂ ಲೆಕ್ಕಗಳನ್ನು ತೋರಿಸುವುದಕ್ಕೆ, ಸಣ್ಣಪುಟ್ಟ

ಕೆಲಸಗಳಿಗಾಗಿ ಬರುತ್ತಲೇ ಇದ್ದರು ಕೆಲವರು. ನಾನು ಬೇಸಾಯಕ್ಕೆ ಮೊದಲಿಟ್ಟ ಮೇಲೆ ನನಗೆ ಬಿಡುವೇ ಇಲ್ಲದಾಯಿತು.

ಹೀಗಿರಬೇಕಾದರೆ ಊರಿನಲ್ಲಿ ನಾನೆಂದರೆ ಕೆಲವರು ಬ್ರಾಹ್ಮಣರಿಗೂ ಇದುವರೆವಿಗೂ ನನ್ನ ಸೋದರಮಾವನ ಹೊಲಗಳನ್ನು ಗೇಣಿಗೆ ಹಿಡಿದಿದ್ದ ಕೆಲವು ಜನ ರೈತರಿಗೂ ಕೋಪವೇರ್ಪಟ್ಟಿತು. ನಾನು ನಮ್ಮ ಸೋದರಮಾವನ ಸೋದರಳಿಯನಲ್ಲವೆಂದು ಅವರಲ್ಲಿ ಕೆಲವರೂ, ಮತ್ತೆ ಕೆಲವರು ನಾನು ಹಾವಾಡಿಗರವನೆಂತಲೂ ಆಡಿಕೊಳ್ಳತೊಡಗಿದರು. ಕೆಲವರು ನನ್ನ ಪಕ್ಷ ಹಿಡಿದವರು ಮಾತ್ರ 'ಆತ ಸೋದರಳಿಯನೋ ಅಲ್ಲವೋ ನಮಗೆ ತಿಳಿಯದಾದರೂ ಆತ ಮಾತ್ರ ಹಾವಾಡಿಗರವನಲ್ಲ. ಹಾಗೇನಾದರೂ ಒಂದು ಪಕ್ಷ ಹಾವಾಡಿಗರವನಾಗಿದ್ದಲ್ಲಿ ಆತನಿಗೆ ಓದಲು ಬರೆಯಲು ಹೇಗೆ ಬರುತ್ತೆ' ಎಂದು ನನ್ನ ಪರವಾಗಿ ಮಾತನಾಡತೊಡಗಿದರು.

ಕೆಲವು ದಿನಗಳಾದ ಮೇಲೆ, ಕಂದಾಯ ಬಾಕಿ ಬಿದ್ದ ಹಳೆಯ ರೈತರನ್ನು ಅವರು ಕೊಡಬೇಕಾದ ಹಣಕ್ಕಾಗಿ ನೋಟುಗಳನ್ನು ಬರೆದುಕೊಡಿರೆಂದು ಒತ್ತಾಯಪಡಿಸಲಾರಂಭಿಸಿದೆ. ಅವರೆಲ್ಲಾ ಈವೊತ್ತೆಂದರೆ ನಾಳೆ, ನಾಳೆ ಎಂದರೆ ನಾಡಿದ್ದು ಎಂದು ಠಳಾಯಿಸತೊಡಗಿದರು. 'ನೀನ್ಯಾರು? ಬೇಕಾದರೆ ನಿಮ್ಮ ಅತ್ತೆಯವರ ಹೆಸರಿನಲ್ಲಿ ಬರೆದು ಕೊಡುತ್ತೇವೆ' ಎಂದರು ಕೆಲವರು. ನನ್ನ ಹೆಸರಿನಲ್ಲಿ ಬರೆದು ಕೊಡಿರೆಂದು ಕೇಳಿದವನೇ ಅಲ್ಲ. ಆ ಊರಿನಲ್ಲಿ ದೊಡ್ಡ ರೆಡ್ಡಿ ನಾನೆಂದರೆ ತುಂಬ ಮಮತೆಯನ್ನಿರಿಸಿಕೊಂಡಿದ್ದ. ಆತನ ಮಾತಿಗೆ ತುಂಬ ಬೆಲೆಯಿದೆ. ಆತನ ಮೂಲಕ ಹೇಳಿಸಿ, ಮೇಲೆ ಕೆಳಗಾಗಿ, ಅಂತೂ ಇಂತೂ ಮುನ್ನೂರು ರೂಪಾಯಿಗಳವರೆಗೆ ಬಾಕಿ ಬಿದ್ದ ಕಂದಾಯದ ಬಗ್ಗೆ ಪ್ರೋನೋಟುಗಳನ್ನು ಬರೆಯಿಸಿದೆ. ವ್ಯವಹಾರವೆಲ್ಲಾ ನನ್ನ ಸೋದರತ್ತೆಯ ಹೆಸರಿನಲ್ಲಿಯೇ ನಡೆಯಿತು. ಇನ್ನೂ ಮುನ್ನೂರು ರೂಪಾಯಿಗಳ ಬಾಕಿ ವಸೂಲಿಯಾಗಬೇಕಾಗಿತ್ತು. ಅದನ್ನು ಕೊಡಬೇಕಾದವರು–ಹಿಂದಿಲ್ಲ ಮುಂದಿಲ್ಲದವರು. ಆ ರೂಪಾಯಿಗಳಿಗೆ ಎಳ್ಳುನೀರು ಬಿಟ್ಟು, ಮಿಕ್ಕ ವ್ಯವಹಾರವನ್ನು ನೋಡಿಕೊಳ್ಳತೊಡಗಿದೆ.

ಹೀಗಿರುತ್ತಿರಲು ನನಗೊಂದು ಲಾಭ, ಒಂದು ನಷ್ಟ ಎರಡೂ ಉಂಟಾದುವು. ಊರಿನಲ್ಲಿ ಕೆಲವರು, ನಾನೆಂದರೆ ಆಗದವರು, ನಾನು ಹಾವಾಡಿಗರವನೆಂದು ನಮ್ಮನ್ನು ಬಹಿಷ್ಕರಿಸಿದರು. ಇದಕ್ಕೆ ಪುರಾಣ ಹೇಳುವ ಬ್ರಾಹ್ಮಣನೂ ಮತ್ತು ನಿಯೋಗಿಗಳೂ ಮುಖ್ಯ ಕಾರಣಕರ್ತರು. ನಮ್ಮ ಮನೆಗೆ ಹೆಚ್ಚಿಗೆ ಜನ ಬರುವುದು ನಿಂತುಹೋಯಿತು. ಇದರಿಂದಾಗಿ ನಮ್ಮತ್ತೆಗೆ ಆಗಾಗ ಮನಸ್ಸಿಗೆ ನೋವುಂಟಾಗುತ್ತಿತ್ತು. ನನ್ನ ಮನ ನೋಯುವ ಮಾತೊಂದನ್ನು ಆಕೆ ಒಂದು ದಿನ ತನ್ನ ಬಾಯಾರೆ ಆಡಿಬಿಟ್ಟಳು.

ಆಕೆ 'ಅಪ್ಪಾ ಮಗೂ, ನಿನ್ನನ್ನು ಎಲ್ಲರೂ ಹಾವಾಡಿಗ, ಹಾವಾಡಿಗ ಅನ್ನುತ್ತಾರೆ. ನಿಜವೋ, ಸುಳ್ಳೋ ನನಗೆ ಬಗೆಹರಿಯದಾಗಿದೆ' ಎಂದಳು. 'ಅಯ್ಯೋ, ನನ್ನ ಕಷ್ಟಗಳಿನ್ನೂ ಕೊನೆಗಾಣಲಿಲ್ಲವಲ್ಲಾ' ಎಂಬ ಭಾವದಿಂದ ಕುಗ್ಗಿಹೋಗಿ, ಈ ಆಶ್ರಯವೂ ಇಲ್ಲದಾಗುತ್ತದೇನೋ ಎಂದು ಭಯಭೀತನಾದೆ. ಆದರೆ ಹೊರಕ್ಕೆ ಮಾತ್ರ, 'ಅತ್ತೆ ನಾನು

ಯಾರಾದರೆ ಏನಂತೆ? ವ್ಯವಹಾರವನ್ನೆಲ್ಲಾ ನಿನ್ನ ಹೆಸರಿನಲ್ಲಿಯೇ ನಡೆಸುತ್ತಿದ್ದೇನೆ. ನಾನೇನೂ ನಿಮ್ಮ ಆಸ್ತಿ ಅಪಹರಿಸುತ್ತಿಲ್ಲವಲ್ಲಾ! ನಿನಗೆ ತೊಂದರೆಯಾಗುವಂತಿದ್ದರೆ, ನನಗೆ ಹೊರಬಾಗಿಲಲ್ಲಿ ಅನ್ನಕ್ಕಿಡು. ಎಲ್ಲಿಯಾದರೂ ನಾನು ಜೀತದಾಳಾಗಿ ಬದುಕಬೇಕೆಂದುಕೊಂಡಿದ್ದೆ. ಅದೇ ಕೆಲಸವನ್ನು ನಿನ್ನ ಮನೆಯಲ್ಲಿಯೇ ಮಾಡುತ್ತೇನೆ' ಎಂದು ನುಡಿದೆ. ಆಕೆ ನೊಂದುಕೊಂಡಳು. ಪುನಃ ಆ ಪ್ರಸಂಗವನ್ನು ನನ್ನ ಹತ್ತಿರ ಎತ್ತಲಿಲ್ಲ. ಊರಿನಲ್ಲಿ ಅನೇಕರು ನಮ್ಮನ್ನು ಊಟಕ್ಕೆ ಕರೆಯುವುದನ್ನೂ ಬಿಟ್ಟುಬಿಟ್ಟರು. ನಾವೂ ಸಹ ಅವರಾರನ್ನೂ ಕರೆಯುತ್ತಿರಲಿಲ್ಲ. ಮುಖ್ಯವಾಗಿ ಹಳ್ಳಿಗಳಲ್ಲಿ ರೆಡ್ಡಿಯವರೂ, ಕಮ್ಮಾ ಜನಾಂಗದವರೂ ಒಕ್ಕಲಿಗರನ್ನು ಕಡಮೆ ಕುಲದವರೆಂದು ಕಾಣುತ್ತಾರೆ. ಆದಾಗ್ಯೂ ಆ ಊರಿನಲ್ಲಿ ಅವರಿಗೂ ಇವರಿಗೂ ಲೇವಾದೇವಿಗಳಿದ್ದುದರಿಂದಲೂ, ನನ್ನ ಸೋದರಮಾವ ಬದುಕಿರುವಾಗ, ದೊಡ್ಡ ತರಹದಿಂದಿದ್ದುದರಿಂದಲೂ, ಅವರ ಇವರ ಮಧ್ಯೆ ಶುಭಸಂದರ್ಭಗಳಲ್ಲಿ ಊಟೋಪಚಾರಗಳು ನಡೆಯುತ್ತಿದ್ದವು, ಈಗ ಆ ಗೊಡವೆ ಸಹಾ ಇಲ್ಲದಾಯಿತು.

ಇನ್ನು ಲಾಭವೇನೆಂದರೆ, ಬೇಸಗೆ ರಜೆಗಳಲ್ಲಿ ಆ ಊರಿನ ಧನಿಕ ಬ್ರಾಹ್ಮಣನ ಎರಡನೆಯ ಮಗ. ಗುಂಟೂರಿನಲ್ಲಿ ಎಂಟ್ರೆನ್ಸ್ ಓದುತ್ತಿದ್ದಾತ ಬೇಸಿಗೆ ರಜಕ್ಕೆ ಊರಿಗೆ ಬಂದ. ಆತನಿಗೂ ನನಗೂ ಕ್ರಮ ಕ್ರಮವಾಗಿ ಸ್ನೇಹವೇರ್ಪಟ್ಟಿತು. ಆ ಕಾಲದಲ್ಲಿ ಯಾರಾದರೂ ಒಬ್ಬ ಎಂಟ್ರೆನ್ಸ್ ಓದುತ್ತಿದ್ದಾನೆಂದರೆ ದೊಡ್ಡ ಸಂಗತಿಯೇ ಆಗಿತ್ತು. ಆತನಿಗೇಕೋ ನಾನೆಂದರೆ ತುಂಬ ಸ್ನೇಹವೇರ್ಪಟ್ಟಿತು. ನನಗೇನೂ ಕೆಲಸವಿಲ್ಲದಿದ್ದಾಗ ನಾನು ಆತನ ಮನೆಗೆ ಹೋಗುತ್ತಿದ್ದೆ. ದಿನವೂ ಬೆಳಗ್ಗೆ ಆತ ಕಾಫಿ ಕುಡಿಯುತ್ತಿದ್ದ. ನನಗೂ ಕೊಡುತ್ತಿದ್ದ. ಮಧ್ಯಾಹ್ನದ ಹೊತ್ತಿನಲ್ಲಿ ಫಲಾಹಾರ ಮಾಡುತ್ತಿದ್ದ. ಕೆಲವು ದಿನಗಳಾದ ಮೇಲೆ ಆತ ನನಗೆ ಇಂಗ್ಲಿಷ್ ಹೇಳಿಕೊಡಲಾರಂಭಿಸಿದ. ಆತ ಬೇಸಿಗೆ ರಜ ಮುಗಿದು ಗುಂಟೂರಿಗೆ ಹೋಗುವಷ್ಟರೊಳಗಾಗಿ ನನಗೆ ಎಷ್ಟೋ ಇಂಗ್ಲಿಷ್ ಪದಗಳು ಕಂಠಗತವಾದುವು. ಸಣ್ಣ ಸಣ್ಣ ವಾಕ್ಯಗಳನ್ನು ಹೆಣೆಯುವಷ್ಟು ಇಂಗ್ಲಿಷ್ ಭಾಷೆ ನನಗೆ ಲಭ್ಯವಾಯಿತು. ಮಾತನಾಡುವುದನ್ನೂ ಆತನೇ ಕಲಿಸಿಕೊಟ್ಟ.

ಆ ವರ್ಷ ನಮ್ಮ ಹೊಲಗಳು ತುಂಬ ಚೆನ್ನಾಗಿ ಬೆಳೆದುವು. ಹೊಗೆಸೊಪ್ಪು ದಿವ್ಯವಾಗಿ ಬೆಳೆಯಿತು. ಒಳ್ಳೆ ಬೆಲೆ ಲಭ್ಯವಾಯಿತು. ಇನ್ನೂರು ರೂಪಾಯಿ ಸಾಲ ತೀರಿಸಿದೆ. ಮನೆಗೆ ಬೇಕಾದ ಪಾತ್ರೆ ಪಡಗಗಳನ್ನು, ನಮ್ಮತ್ತೆಗೆ ನಾಲ್ಕು ಒಳ್ಳೆ ಸೀರೆಗಳನ್ನು, ಮಕ್ಕಳಿಗೆಲ್ಲಾ ಬಟ್ಟೆ ಬರೆಗಳನ್ನು ಕೊಂಡೆ. ನಾನು ಅಂಗಿಗಳನ್ನು ಹೊಲಿಸಿಕೊಂಡೆ.

ಹೀಗಿರಬೇಕಾದರೆ ಒಂದು ದಿನ ರಾತ್ರಿ, ಎರಡನೇ ಜಾಮದಲ್ಲಿ ನನಗೆ ಎಚ್ಚರವಾಯಿತು. ನಾನು ನಮ್ಮ ಸೋದರ ಮಾವನವರ ಊರಿಗೆ ಬಂದು ಒಂದು, ಒಂದೂವರೆ ವರ್ಷವಾಗಿತ್ತು....ಹಾಗೆ ಎಚ್ಚರವಾಗುತ್ತಲೇ ಎದ್ದು ಕುಳಿತಿದ್ದು, ಸ್ವಲ್ಪ ಹೊತ್ತಿನ ಬಳಿಕ ಮತ್ತೆ ಮಲಗಿಕೊಂಡೆ. ನನ್ನೆದುರಿಗೆ ನನ್ನ ಸಾಕುತಂದೆ ಕಾಣಿಸಿಕೊಂಡ! ಈ ಒಂದೂವರೆ ವರ್ಷವೂ ನಾನು ನನ್ನ ಸಾಕು ತಂದೆಯನ್ನು ಎಂದೂ ನೆನೆಸಿಕೊಂಡಿರಲಿಲ್ಲ. ನನ್ನ ಹೃದಯದ ಬಡಿತ ಒಮ್ಮೆಗೇ ನಿಂತಂತಾಯಿತು. ಅಯ್ಯೋ! ನಾನೆಷ್ಟು ಕೃತಘ್ನನೆಂದೆನ್ನಿಸಿತು. ಚಿಂತೆ ವ್ಯಸನಗಳಿಲ್ಲದೆ

ಇಲ್ಲಿ ಸೇರಿಕೊಂಡೆ ನನ್ನ ಹಿಂದಿನ ಕಷ್ಟ, ಆ ದಿನಗಳಲ್ಲಿ ನನ್ನನ್ನು ಕೈಹಿಡಿದು ಕಾಪಾಡಿದವರನ್ನೆಲ್ಲಾ ನಾನು ಮರೆತುಬಿಟ್ಟೆನಲ್ಲಾ! ಸಾಕುತಂದೆ ಕಾಣಿಸುತ್ತಿದ್ದಾನೆ. ಆತನ ಮುಖ ಮೊದಲಿನಂತೆ ನನ್ನನ್ನು ನೋಡುತ್ತಲೇ ಅರಳಲಿಲ್ಲ. ಆತನನ್ನು ನೋಡಿ ನಾನು 'ಚಿಕ್ಕಪ್ಪಾ, ನಾನು ತಪ್ಪು ಮಾಡಿದೆ' ಎಂದೆ ಆತ 'ಮಕ್ಕಳು' ಎಂದ. ನನಗೇನೂ ತೋಚದಾಯಿತು. ಎದ್ದು ಕುಳಿತುಕೊಂಡೆ

ನನ್ನ ಸೋದರಮಾವನ ಮಗ ಗೊರಕೆ ಹೊಡೆಯುತ್ತಿದ್ದ. ನನ್ನ ಸೋದರಮಾವನ ಮಗಳಿಗೆ ಏಕೋ ಎಚ್ಚರವಾಗಿ, ಅವಳು ಎದ್ದು ಕುಳಿತುಕೊಂಡು ನನ್ನನ್ನು ನೋಡಿ, 'ನಿದ್ರೆ ಬರಲಿಲ್ಲವೇ ಮಾವಯ್ಯಾ?' ಎಂದು ಕೇಳಿದಳು. ಅವಳು ಮತ್ತೆ ಕೂಡಲೇ ಮಲಗಿ ನಿದ್ರೆ ಹೋಗಿಬಿಟ್ಟಳು! ಸ್ವಲ್ಪ ಹೊತ್ತು ಹಾಗೆಯೇ ಕುಳಿತುಕೊಂಡಿದ್ದೆ. ನಮ್ಮತ್ತೆ ನಿದ್ರೆಯಲ್ಲಿ ಕನವರಿಸತೊಡಗಿದಳು. 'ತಪ್ಪಾಯ್ತು ತಪ್ಪಾಯ್ತು! ಭೋ ಅಪರಾಧ, ಭೋ ಅಪರಾಧ! ನಿನ್ನನ್ನು ಮರೆತುಬಿಡಲಿಲ್ಲ ಸ್ವಾಮೀ...' ನನಗೇನೂ ತೋಚಲಿಲ್ಲ. ಆಕೆಯನ್ನೆಬ್ಬಿಸಿ, 'ಅತ್ತೇ, ಏನೋ ಕನವರಿಸಿದೆಯಲ್ಲಾ?' ಎಂದು ಕೇಳಿದೆ. ಆಕೆ ಎದ್ದು, ಕಣ್ಣೊರೆಸಿಕೊಂಡು 'ಏನೂ ಇಲ್ಲ ಮಗೂ! ತಿರುಪತಿ ತಿಮ್ಮಪ್ಪನಿಗೆ ಹಿಂದೊಮ್ಮೆ ನಾನು ಬೇಡಿಕೊಂಡಿದ್ದೆ–ನಿನ್ನ ಸೊಸೆಗೆ ಕಾಯಿಲೆಯಾದಾಗ, ವಾಸಿಯಾದ ಮೇಲೆ, ನಿನ್ನ ದರ್ಶನ ಮಾಡಿಕೊಳ್ತೀನಿ ನನ್ನಪ್ಪಾ, ಅಂತ ಬೇಡಿಕೊಂಡಿದ್ದೆ. ನಾನು ಆ ವಿಷಯವನ್ನೇ ಮರೆತುಬಿಟ್ಟಿದ್ದೆ. ನೋಡು ಈಗ ಕನಸಿನಲ್ಲಿ ಕಾಡುಕೋಣ ಹಾಯಲು ಬಂದುಬಿಟ್ಟಿತ್ತು. ಅದು ಹಾಯಲು ಬರುತ್ಲೇ ಭಯವಾಗಿ ನಾನು ಕೂಗಿಕೊಂಡೆ ಅಂತ ಕಾಣುತ್ತೆ ಕೂಗಿಕೊಂಡೆನೇನೋ ನಾನು?' ಎಂದು ಕೇಳಿದಳು. ನಾನು 'ಕೂಗಿಕೊಳ್ಳಲಿಲ್ಲ' ಎಂದು ಹೇಳಿ, ಆಕೆ ಆಡಿದ ಮಾತುಗಳನ್ನು ತಿಳಿಸಿದೆ. ಆಕೆ, 'ಅಯ್ಯೋ ದೇವರೇ! ನಾನು ಬರುತ್ತೇನೆ ಅಂತ ಅಂದುಕೊಂಡಿದ್ದನ್ನೇ ಮರೆತುಬಿಟ್ಟೆನಲ್ಲಾ. ನಾವೆಲ್ಲಾ ಸಂಕಟ ಬಂದಾಗ ವೆಂಕಟರಮಣ ಅನ್ನೋದು, ಆಮೇಲೆ ಮರೆತೇಬಿಡೋದು! ಆಪತ್ತು ಬಂದಾಗಿದ್ದ ಬುದ್ಧಿ, ಆಪತ್ತು ಕಳೆದ ಮೇಲೆ, ಮನುಷ್ಯನಿಗದು ಇರೋದೇ ಇಲ್ಲ ಕಣೋ' ಎಂದಳು. ನಾನು 'ಇರೋಲ್ಲತ್ತೆ ಇರೋಲ್ಲ. ಮನುಷ್ಯ ಪಶು. ಅವನು ಇಲ್ಲದಾಗ ಹುಲ್ಲು ತಿನ್ತಾನೆ ಆಮೇಲೆ ನಾನು ತಿಂದದ್ದು ಪಾಯಸ ಅನ್ತಾನೆ. ಮನುಷ್ಯನೆನ್ನುವವನು ಪಶು!' ಎಂದೆ

## ೮

ಮರುದಿನ ಬೆಳಗ್ಗೆ ಏಳುತ್ತಲೇ ಮೆಣಸಿನ ಸಸಿಗಳನ್ನು ಕೀಳಿಸಿ, ನೆಡೆಸುವುದಿತ್ತು. ಆ ವರ್ಷ ಬಿಳೀ ಹೊಗೆಸೊಪ್ಪನ್ನು ಹಾಕಬೇಕೆಂದುಕೊಂಡಿದ್ದೆವು. ಅದರ 'ನಾಟಿ'ಗಾಗಿ ಅತ್ತ ಹೋಗಬೇಕಾಯಿತು. ಮೆಣಸಿನಕಾಯಿಯ ತೋಟದಲ್ಲಿನ ಮಡಿಗಳನ್ನು ಪುನಃ ಉಳಬೇಕಾಯಿತು. ಎತ್ತ ನೋಡಿದರೂ ಕೆಲಸಗಳೇ. ಹೀಗಾಗಿ ನನ್ನ ಸಾಕುತಂದೆಯವರ ಊರಿಗೆ ಹೋಗೋಣವೆಂದರೆ ಎಲ್ಲಾ ಅಡ್ಡಿ ಆತಂಕಗಳೇ ಕಂಡುಬಂದುವು. ಕ್ರಮಕ್ರಮವಾಗಿ ಹೊತ್ತು ಮುಳುಗುವಷ್ಟರಲ್ಲಿ ಹೊತ್ತಾರೆಯಲ್ಲಿದ್ದ ಆತುರವೆಲ್ಲಾ ಹೋಗಿಬಿಟ್ಟಿತು. ಆತುರವೊಂದೇ

ಅಲ್ಲ; ನನ್ನ ಸಾಕು ತಂದೆಯು ವಿಷಯವೂ ಮರವೆಯಾಗಿತ್ತು. ಹಗಲೆಲ್ಲಾ ತುಂಬ ದಣಿದಿದ್ದೆನೇನೋ ರಾತ್ರಿ ಗಾಢನಿದ್ರೆ ಬಂದುಬಿಟ್ಟಿತು. ಆ ವಿಷಯವನ್ನೇ ಪೂರ್ತಿಯಾಗಿ ಮರೆತುಬಿಟ್ಟೆ

ಮಾರನೆಯ ದಿನ ಹೊತ್ತು ಮುಳುಗಿದ ಮೇಲೆ, ನಾನು ಮನೆಗೆ ಬಂದಾಗ ನಮ್ಮತ್ತೆ ಅಳುತ್ತಾ ಒಂದು ಮೂಲೆ ಹಿಡಿದಿದ್ದಳು. ನನ್ನ ಭಾವಮೈದುನ ಮನೆಯಲ್ಲಿರಲಿಲ್ಲ. ಸಂಜೆಯ ಕಸ ಗುಡಿಸಿರಲಿಲ್ಲ. ದೀಪ ಹೊತ್ತಿಸಿಲ್ಲ. ನನ್ನ ಸೋದರಮಾವನ ಮಗಳನ್ನು ಕೇಳಿದೆ, 'ಯಾಕೆ ಅಮ್ಮ ಅಳ್ತಾ ಇದ್ದಾಳೆ?' ಅವಳು ಹೀಗೆಂದಳು 'ಪಕ್ಕದ ಮನೆ ಕಮ್ಮಾರವಳು ಅಮ್ಮನ ಕೈಲಿ ಜಗಳ ಕಾದಳು. ಅವ್ವ ಹತ್ತು ಪಾವು ಮೆಣಸಿನಕಾಯಿ, ಹತ್ತು ಬುಡ್ಡಿ ಸೀಮೆ ಎಣ್ಣೆ ಕಡ ಕೊಂಡೊಯ್ದಿದ್ದಳಂತೆ. ಒಂದು ತಿಂಗಳಲ್ಲಿ ಇಷ್ಟೆಲ್ಲ ಒಯ್ದಿದ್ದಳು. ಅವ್ವ ಆರು ಬುಡ್ಡಿ ಸೀಮೆ ಎಣ್ಣೆ ನಾಲ್ಕು ಪಾವುಗಳಷ್ಟೇ ಮೆಣಸಿನಕಾಯಿ ತಂದುಕೊಟ್ಟಳು. ಮಿಕ್ಕಿದ್ದನ್ನು ಅಮ್ಮ ಕೇಳಿದರೆ, ನಾನಿಷ್ಟೇ ತಗೊಂಡು ಹೋಗಿದ್ದು ಎಂದಳು. ಸರಿ ಬಿಡಮ್ಮ, ಉದ್ಧಾರವಾಗು ಅಂತ ಅಮ್ಮ ಅಂದ್ರೆ ಅವ್ವ, 'ನಿನ್ ಪದಾರ್ಥ ಯಾರಿಗೆ ಬೇಕೀ?' ಎಂದು ಹ್ಯಾಗಂದ್ರೆ ಹಾಗೆ, ಕಾಲು ಕೆರೆದು ನಾಲಗೆ ಹರಿಯಬಿಟ್ಟಳು. ಅಮ್ಮಂಗೂ ಕೋಪ ಬಂದು ಮಾತಿಗೆ ಮಾತು ಸೇರಿಸಿದಳು. ದೊಡ್ಡ ಜಗಳವೇ ನಡೀತು. ಅವ್ವ ಅಂಗಳದ ಕಸವನ್ನು ಬೊಗಸೆಯಿಂದ ತುಂಬಿ ಬಾಗಿಲಿಗೆ ತೂರಿ, 'ಹಾವಾಡಗಿತ್ತಿ! ಹಾವಾಡಿಗ ಮಿಂಡನ್ನ ಮನೇಲಿಟ್ಟುಕೊಂಡಿದೀಯಲ್ಲೇ, ನಾಚ್ಕೇ ಸತ್ತೋಳೆ! ಗುಡ್ಸೆಟ್ಟಿ ಮುಂಡೇ!' ಅಂತ ಬಾಯಿಗೆ ಬಂದದ್ದನ್ನೆಲ್ಲಾ ಕೂಗಾಡಿಬಿಟ್ಟು.

ನಮ್ಮತ್ತೆಯೇನೂ ಕಡಮೆಯಿಲ್ಲ. ಸೇರಿಗೆ ಸವ್ವಾಸೇರು. ಆಕೆಯ ತಲೆಗೂದಲಿನಲ್ಲಿ ಹಿಡಿಕಿತ್ತು ಅವಳ ಕೈಗೇ ಕೊಟ್ಟಿರುತ್ತಾಳೆ. ಆದರೆ, ನಮ್ಮತ್ತೆಯ ಮನಸ್ಸಿಗೆ ತಾಕಬಾರದ ಎಡೆಯಲ್ಲಿ, ಬಲವಾದ ಪೆಟ್ಟು ತಾಕಿತ್ತು. ನಿಜವಾಗಿಯೂ ನಾನು ತನ್ನ ಸೋದರಳಿಯನೋ ಅಲ್ಲವೋ ಇನ್ನೂ ನಿರ್ಧಾರವಾಗಿಲ್ಲ! ಋಜುಪಡಿಸುವ ಹೊಣೆ ನನ್ನ ಮೇಲಿತ್ತು. ಅವರ ಸಂಸಾರದ ವಿಷಯದಲ್ಲಿ ನಾನು ಜಾಗ್ರತೆಯಿಂದಲೇ ಇದ್ದ ವಿಷಯ ವಾಸ್ತವವೇ. ನಾನು ನಿಜಕ್ಕೂ ಹಾವಾಡಿಗನೇ ಆಗಿದ್ದಲ್ಲಿ–ಅವರಿಗೆ ಮಿಕ್ಕ ವಿಷಯಗಳೊಂದಿಗೇನು ಕೆಲಸ! ನನ್ನ ಸೋದರತ್ತೆಯ ಮನಸ್ಸಿನೊಳಗೆ ನಾನು ಆಗಾಗ ಇಣುಕಿ ನೋಡುತ್ತಲೇ ಇರುವೆ. ಆ ಅನುಮಾನವಿನ್ನೂ ಪೂರ್ತಿಯಾಗಿ ಬಿಟ್ಟುಹೋಗಿಲ್ಲ. ಅದು ಆಕೆಯ ಮನಸ್ಸನ್ನು ಬಾಧಿಸುತ್ತಲೇ ಇದೆ.

ಅನಂತರ, ಕೆಲವು ದಿನಗಳ ಬಳಿಕ ಮತ್ತೊಂದು ವಿಷಯ ನಡೆಯಿತು. ಆ ದಿನ ನಾನು ಹಗಲೆಲ್ಲಾ ಹೊಲದಲ್ಲಿಯೇ ಇದ್ದುಬಿಟ್ಟೆ ಆ ಮಧ್ಯಾಹ್ನ ಹಾವಾಡಿಗರವಳೊಬ್ಬಳು, ಕೋತಿಯನ್ನಾಡಿಸುತ್ತಾ ಭಿಕ್ಷೆಗೆ ಬಂದಿದ್ದಳಂತೆ. ಅವಳನ್ನು ನಮ್ಮತ್ತೆ ಒಂದು ಪ್ರಶ್ನೆ ಕೇಳಿದಳಂತೆ 'ಏನೇ, ನಿಮ್ಮಲ್ಲಿ ಯಾವುದಾದ್ರೂ ಒಂದು ಹುಡುಗ ಓಡಿಹೋಗಿದೆಯೇನೇ?' ಅವಳು 'ಓಡಿಹೋಗವ್ನಂತ್ರವ್ವಾ! ನಮ್ಮಣ್ಣನ ಮಗಾ! ಚಿಕ್ಕಣ್ಣಯ್ಯ ಹೇಳಿದ' ಎಂದಳಂತೆ. 'ಎಷ್ಟು ದಿನಗಳ ಕೆಳಗವ್ವಾ ಓಡಿಹೋಗಿದ್ದು?' ಎಂದು ನಮ್ಮತ್ತೆ ಕೇಳಿದ್ದಕ್ಕೆ, 'ಆರು ತಿಂಗಳ ಕೆಳಗೆ' ಎಂದು ಅವಳು ಹೇಳಿದಳಂತೆ. ಕಾಲಕ್ಕೂ, ಓಡಿಹೋದದ್ದಕ್ಕೂ ಹೊಂದಾಣಿಕೆ ಸರಿಹೋಗದಿದ್ದರೂ,

'ಅವರು ಹಾವಾಡಿಗರು, ಅವರಿಗೆ ವರ್ಷಗಳೂ, ತಿಂಗಳುಗಳೂ ಏನು ತಿಳಿಯುತ್ತೆ?' ಎಂದು ನೆರೆಮನೆಯಾಕೆ ಸಮನ್ವಯ ಮಾಡಿದಳಂತೆ. ಆ ಹಾವಾಡಿಗರವಳು ಹೇಳಿದ್ದು ನನ್ನ ಬಗ್ಗೆಯೇ ಎಂದು ತೀರ್ಮಾನಿಸಿಬಿಟ್ಟರಂತೆ! ಆ ದಿನ, ಹೊತ್ತು ಕಂತಿದ ಬಳಿಕ ನಾನು ಮನೆಗೆ ಹೋದ ಮೇಲೆ ಏನಾಯಿತೆಂಬುದನ್ನು ಹೇಗೆ ಹೇಳಲಿ? ಆ ರಾತ್ರಿ ನಮ್ಮತ್ತೆ ನನ್ನನ್ನು ಊಟಕ್ಕೆ ಬಾ ಎನ್ನಲಿಲ್ಲ! ನಾನೂ ಹೋಗಲಿಲ್ಲ. ಕೊನೆಗೆ, ಏನು ಮಾಡಲೂ ತೋಚದೆ, ಮತ್ತೆ ಹೊಲಕ್ಕೆ ಹಿಂತಿರುಗಿ ಬಂದು ಮಲಗಿಕೊಂಡೆ ನಾನು ತಪ್ಪೆಸೈದೆನೆಂದೆನ್ನಿಸಿತು. ಆ ಹಾವಾಡಿಗರೊಂದಿಗೇ ಇದ್ದುಬಿಟ್ಟಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು ಎಂದೆನ್ನಿಸಿತು. ನಾನು ನನ್ನ ನಿಜತ್ವವನ್ನು ಋಜುಪಡಿಸಿಕೊಳ್ಳಬೇಕೆಂದರೆ ಯಾರ ಮೂಲಕ ಋಜುಪಡಿಸಬೇಕು? ನನ್ನ ಸಾಕುತಂದೆ, ನನ್ನ ಸ್ವಂತ ಚಿಕ್ಕಮ್ಮ ಇಬ್ಬರೂ ಸತ್ತುಹೋಗಿರುವರು. ನನ್ನ ಸಾಕುತಂದೆಯ ಭಾವಮೈದುನನ ಕೈಲಿ ಹೇಳಿಸೋಣವೆಂದರೆ–ಆತನಿಗೆ ನನ್ನ ಮೇಲಿರುವ ಕೋಪಕ್ಕೆ ತಕ್ಕಹಾಗೆ 'ಇವನು ಹಾವಾಡಿಗರವನೇ' ಎಂದುಬಿಟ್ಟರೆ ಏನು ಗತಿ? ನನ್ನ ಸ್ವಂತ ಚಿಕ್ಕಮ್ಮನವರ ಊರಿಗೆ ಹೋಗಿ, ಆಕೆಯ ಭಾವಂದಿರೂ, ಮೈದುನರೂ–ಅವರಲ್ಲಿ ಯಾರಾದರೂ ಒಂದಿಬ್ಬರನ್ನು ಕರೆದುಕೊಂಡು ಬಂದು ನಿಜ ಹೇಳಿಸೋಣವೆಂದೆನ್ನಿಸಿತು. ಅಷ್ಟು ದೂರ ಹೋದಮೇಲೆ ಮತ್ತಾವ ಹೊಸ ಕೇಡು ಮೂಡುತ್ತದೋ ಬಲ್ಲವರಾರು! ಆದರೆ ಬೆಳಗಾಗುತ್ತಿರುವಂತೆಯೇ, ನನ್ನ ಸೋದರಮಾವನ ಮಗ ಹೊಲಕ್ಕೆ ಬಂದು, 'ಮಾವಯ್ಯಾ, ನೀನು ಬರಬೇಕಂತೆ, ಅಮ್ಮ ಹೇಳಿಕಳಿಸಿದಳು' ಎಂದು ತಿಳಿಸಿದ. ಅವನ ಮುಖಭಾವ ನೋಡಿದರೆ ಚೆನ್ನಾಗಿಯೇ ಇತ್ತು. ಮನೆಗೆ ಹೋಗುತ್ತಲೇ–ಕೆಲವರು ಚಿಲ್ಲರೆ ಸಾಲ ಕೊಟ್ಟವರು, ನಮ್ಮತ್ತೆಯನ್ನು ಹಣಕ್ಕಾಗಿ ಒತ್ತಾಯಪಡಿಸುತ್ತಿದ್ದುದರಿಂದ, ನನ್ನನ್ನು ಕರೆಯಿಸಿದ್ದಳೆಂಬುದು ತಿಳಿದುಬಂದಿತು. ನಾನಿಲ್ಲದೇ ಹೋದರೆ ಸಂಸಾರದಲ್ಲಿ ಯಾವ ಕೆಲಸವೂ ಸಾಗುವಂತಿಲ್ಲವಾದ್ದರಿಂದ, ನಿಧನಿಧಾನವಾಗಿ ಹಾವಾಡಿಗರವನು ಎಂಬ ನಿಂದೆ ಮರೆಯಾಗುತ್ತಾ ಬಂದಿತು. ಪುನಃ ಯಥಾರೀತಿಯಾಗಿಯೇ ದಿನಗಳು ಕಳೆಯತೊಡಗಿದುವು.

ನನ್ನ ಸೋದರತ್ತೆಯ ಮಗಳಿಗೆ ಹತ್ತು ವರ್ಷಗಳು ತುಂಬಿದುವು. ಅವಳ ಮದುವೆಯ ಪ್ರಸ್ತಾಪ ಬಂದಿತು. ನಮ್ಮ ಜಾತಿಯಲ್ಲಿ ಹೆಣ್ಣು ಹುಡುಗಿಯರ ಮದುವೆಯನ್ನು ಅಷ್ಟು ಚಿಕ್ಕವಯಸ್ಸಿನಲ್ಲಿಯೇ ಮಾಡಿಬಿಡಬೇಕೆಂಬ ನಿರ್ಬಂಧವೇನೂ ಇಲ್ಲದಿದ್ದಾಗ್ಯೂ ನಮ್ಮತ್ತೆಗೆ ಅದೇಕೋ ಮಗಳಿಗೆ ಬೇಗ ಲಗ್ನ ಮಾಡಿಬಿಡಬೇಕೆಂದೆನ್ನಿಸಿತು. 'ಅಷ್ಟೇಕೆ ಅವಸರ ಅತ್ತೇ?' ಎಂದು ನಾನೆಂದರೆ, ಯಾರೋ ಬೈರಾಗಿ ಆಕೆಗೆ–ತಾನಿನ್ನು ಬಹಳ ಕಾಲ ಬದುಕುವುದಿಲ್ಲವೆಂದು ಹೇಳಿರುವನೆಂತಲೂ, ಆದ್ದರಿಂದಲೇ ಮಗಳ ಮದುವೆ ನೋಡಿ ಸಾಯಬೇಕೆಂದಿದೆ ಎಂತಲೂ ಆಕೆ ನುಡಿಯುತ್ತಿದ್ದಳು. ಅಷ್ಟೇ ಅಲ್ಲದೆ, ಆ ದಿನ ನಸುಕಿನಲ್ಲಿ ಬುಡಬುಡಕಿಯವನೊಬ್ಬ ಮನೆಗೆ ಭಿಕ್ಷೆಗೆ ಬಂದು 'ಈ ಮನೆಯಲ್ಲಿ ಇನ್ನು ಕೆಲವು ದಿನಗಳಲ್ಲಿಯೇ ಒಂದು ವಿಪತ್ತು ಸಂಭವಿಸುತ್ತದೆ' ಎಂದು ನುಡಿದು ಹೋದನಂತೆ! ಇವೆಲ್ಲಾ ಸೇರಿ ಆಕೆಯನ್ನು ದುಗುಡಕ್ಕೀಡುಮಾಡಿ, ಆತುರಪಡುವಂತೆ ಮಾಡಿದ್ದುವು.

ನನ್ನ ಸೋದರಮಾವ ಒಂದು ಉಯಿಲು ಬರೆದಿಟ್ಟಿದ್ದ. ತನ್ನ ಮಗಳಿಗೆ ಇಪ್ಪತ್ತು ಎಕರೆ ಜಮೀನು ಬರೆದಿದ್ದ. ಮಗನಿಗೆ ಇನ್ನುಳಿದ ಬಯಲು ಜಮೀನು ಹಾಗೂ ಐದೆಕರೆ ಗದ್ದೆ ಸೇರಬೇಕೆಂದು ಬರೆದಿದ್ದ. ಹುಡುಗಿಯನ್ನು ಲಗ್ನವಾಗುವವನಿಗೆ ಈ ಇಪ್ಪತ್ತು ಎಕರೆ ಜಮೀನು ಲಭಿಸುತ್ತದೆ. ಗೇಣಿಗೆ ಕೊಟ್ಟುಕೊಂಡರೆ ಒಂದು ನೂರು ರೂಪಾಯಿ ಬರಬಹುದಾಗಲೀ, ಸ್ವಂತ ನಿಂತು ಮಾಡಿದರೆ ಆ ಇಪ್ಪತ್ತು ಎಕರೆ ಭೂಮಿಯಿಂದ, ಕಾಲ ಅನುಕೂಲವಾಗಿದ್ದ ಪಕ್ಷಕ್ಕೆ ಏನಿಲ್ಲವೆಂದರೂ ವರ್ಷಕ್ಕೆ ಸಾವಿರ ರೂಪಾಯಿಗಳು ಬರುತ್ತವೆ. ಹೊಲದ ಗೈಮೆ ಮಾಡಬಲ್ಲಂಥವನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಬೇಕೆಂದಿತ್ತು ನಮ್ಮತ್ತೆಗೆ. ನಾನಿಲ್ಲಿಗೆ ಬಂದಂದಿನಿಂದ, ನೆರೆಹೊರೆಯವರಲ್ಲಿ ಬಹಳಷ್ಟು ಜನ, ಆ ಹುಡುಗಿ ನನ್ನ ಹೆಂಡತಿಯೆಂದೇ ಅನ್ನುತ್ತಿದ್ದರು. ಕೆಲವೊಮ್ಮೆ ಮಾತ್ರವೇ ಬೇರೆ ಯಾರಿಗಾದರೂ ಕೊಡಬೇಕು ಎಂದೂ ನುಡಿಯುತ್ತಿದ್ದಳು. ನನಗಲ್ಲದೆ ಅವಳನ್ನು ಬೇರೆ ಇನ್ನಾರಿಗೋ ಕೊಟ್ಟು ಮದುವೆ ಮಾಡಿದ ಪಕ್ಷಕ್ಕೆ ನನಗಾ ಮನೆಯಲ್ಲಿ ಎಡೆಯಿಲ್ಲವೆಂದು ನಾನು ಬಲ್ಲೆ. ನಾನು ನಿಜಕ್ಕೂ ತನ್ನ ಸೋದರಳಿಯನೆಂಬುದಾಗಿ ಖಚಿತವಾಗಿ ದೃಢಪಟ್ಟ ಪಕ್ಷಕ್ಕೆ ತನ್ನ ಮಗಳನ್ನು ಖಂಡಿತ ನನಗೇ ಕೊಡುತ್ತಾಳೆಂಬುದರಲ್ಲಿ ಲೇಶಮಾತ್ರವಾದರೂ ಸಂದೇಹವಿರಲಿಲ್ಲ. ಆದರೆ ನಾನು ತನ್ನ ಸೋದರಳಿಯನೇ ಎಂದು ಹೇಗೆ ಸ್ಥಿರಪಡುವುದು? ಏನೇ ಆಗಲಿ, ನಾನು ನನ್ನ ಸ್ವಂತ ಚಿಕ್ಕಮ್ಮನವರ ಊರಿಗೆ ಹೋಗಿ, ಆಕೆಯ ಸಂಬಂಧಿಗಳ ಪೈಕಿ ಯಾರನ್ನಾದರೂ ಕರೆತಂದು ನಾನಾರೆಂಬುದನ್ನು ಸ್ಥಿರಪಡಿಸಬೇಕೆಂದುಕೊಂಡೆ.

ಒಂದು ದಿನ ಸಾಯಂಕಾಲ ನನ್ನ ಸೋದರಮಾವನ ಮಗಳಿಗೆ 'ದೇವರು' ಮೈಮೇಲೆ ಬಂದು 'ನಾನು, ತಿರುಪತಿ ವೆಂಕಟೇಶ್ವರಾ! ಹೋಯ್! ಹೋ!' ಎಂದಬ್ಬರಿಸಿ 'ಮುಂಡೇ! ನನ್ನ ಮುಡಿಪು ಸಲ್ಲಿಸಲಿಲ್ಲ!' ಎಂದಿತು. ಹಳ್ಳಿಯ ಜನರಲ್ಲಿ ಇಂಥವುಗಳ ಬಗ್ಗೆ ಬಲವಾದ ನಂಬಿಕೆಗಳಿವೆ. ಅಂದಿನಿಂದಲೇ ನಮ್ಮತ್ತೆ ತಿರುಪತಿ ಬೆಟ್ಟಕ್ಕೆ ಹೋಗಲೇಬೇಕೆಂದು ಹಟ ಹಿಡಿದು ಕುಳಿತಳು. ನಾನು ಹೊಲದ ಕೆಲಸಗಳನ್ನೆಲ್ಲಾ ಆಳುಗಳಿಗೆ ಒಪ್ಪಿಸಿ, ಒಂದೊಳ್ಳೆಯ ದಿನ ನೋಡಿ ಗಾಡಿಯನ್ನು ಸಿದ್ಧಗೊಳಿಸಿ ಸಾಕಾಗುವಷ್ಟು ಹಣ ತೆಗೆದುಕೊಂಡು, ತಿರುಪತಿಗೆ ಪ್ರಯಾಣ ಬೆಳೆಸಿದೆವು. ಗುಂಟೂರಿನವರೆಗೆ ಗಾಡಿಯಲ್ಲಿ ಹೋಗಿ, ಅಲ್ಲಿಂದ ರೈಲು ಹತ್ತಬೇಕು. ಅವರಿವರನ್ನು ಗುಂಟೂರಿಗೆ ಯಾವ ದಾರಿ ಎಂದು ಕೇಳಲಾಗಿ, ನನ್ನ ಸಾಕು ತಂದೆಯವರ ಊರಿನ ಮೇಲೆ, ಹಾಗೂ ನನ್ನ ಸ್ವಂತ ಚಿಕ್ಕಮ್ಮನವರ ಊರಿನ ಮೂಲಕವಾಗಿಯೂ ಹಾದು ಹೋಗಬೇಕೆಂಬುದಾಗಿ ತಿಳಿದು ಬಂದಿತು. ಆಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ನಮ್ಮ ಜೊತೆಗೆ ಇನ್ನೊಂದು ಕುಟುಂಬದವರೂ ತಿರುಪತಿಗೆ ಹೊರಡಲು ಸಿದ್ಧರಾದರು.

ಎರಡು ಗಾಡಿಗಳೂ ಹೊರಟವು. ನಮ್ಮ ಗಾಡಿಯನ್ನು ನಮ್ಮ ಮನೆಯ ಆಳು ಹೊಡೆಯುತ್ತಿದ್ದನು. ಅವನು ಪಂಚಮರವನು. ಅವನನ್ನು ಕುರಿತು ಒಂದಿಷ್ಟು ತಿಳಿಸುತ್ತೇನೆ. ಅವನ ವಯಸ್ಸು ಸುಮಾರು ನಲವತ್ತೈದು ವರ್ಷವಿರಬಹುದು. ಕಟ್ಟುಮಸ್ತಾದ ದೇಹ ಪಟುತ್ವವುಳ್ಳವನು. ನನ್ನ ಸೋದರಮಾವನವರ ಊರಿಗೆ–ನಾನು ಆ ಊರು

ಸೇರಿಕೊಳ್ಳುವುದಕ್ಕಿಂತ ಹತ್ತು ಹದಿನೈದು ವರ್ಷಗಳ ಹಿಂದೆ–ಟಗರುಗಳ ಕಾಳಗವನ್ನಾಡಿಸುವ ವೃತ್ತಿಯವರು ಬಂದಾಗ, ಆ ಊರಿನ ಅನೇಕರು ಅವರನ್ನು ಐದಾರು ತಿಂಗಳುಗಳವರೆಗೆ ತಮ್ಮಲ್ಲಿಯೇ ಉಳಿಸಿಕೊಂಡು, ಅವರಿಂದ ದೊಣ್ಣೆ ಬೀಸುವುದು, ಲಾಠಿ ತಿರುಗಿಸುವುದು, ಕತ್ತಿ ಸಾಮು ಮುಂತಾದವುಗಳನ್ನು ಕಲಿತುಕೊಂಡರಂತೆ. ನಮ್ಮ ಗಾಡಿಯನ್ನು ಹೊಡೆಯುತ್ತಿರುವ ಪಂಚುಮರವನೂ ಸಹ ಇನ್ನುಳಿದವರೊಂದಿಗೆ ಅವುಗಳನ್ನೆಲ್ಲಾ ಚೆನ್ನಾಗಿ ಕಲಿತುಕೊಂಡಿದ್ದ ಅವನೀಗ ಆ ವಿದ್ಯೆಯನ್ನೆಲ್ಲಾ ಪೂರ್ಣ ಮರೆತುಬಿಟ್ಟಿದ್ದರೂ, ಏನಿಲ್ಲವೆಂದರೂ ಒಂದು ಹತ್ತು ವರಸೆಗಳಾದರೂ ಈಗಲೂ ಅವನಿಗೆ ಚೆನ್ನಾಗಿ ಗೊತ್ತಿವೆ. ಹತ್ತಿಪ್ಪತ್ತು ಜನಗಳ ಗುಂಪನ್ನು ಅನಾಯಾಸವಾಗಿ ಎದುರಿಸಿ ನಿಲ್ಲಬಲ್ಲ. ಅವನು ಗಾಡಿಯ ತೊಟ್ಟಿಯಲ್ಲಿ ಕುಳಿತುಕೊಳ್ಳದೆ, ಮುಂಗಡೆಯಲ್ಲಿ ಮೂಗುದಾಣದ ಹಗ್ಗಗಳನ್ನು ಹಿಡಿದುಕೊಂಡು ನಡೆಯುತ್ತಿದ್ದ. ನನ್ನ ಸೋದರಮಾವನ ಮಗ ಗಾಡಿಯ ತೊಟ್ಟಿಯಲ್ಲಿ ಕುಳಿತುಕೊಂಡಿದ್ದ. ನಮ್ಮತ್ತೆ ಆಕೆಯ ಮಗಳು ಗಾಡಿಯೊಳಗಿದ್ದರು.

ನಾನು ಆ ಪಂಚುಮರವನ ಹತ್ತಿರ ಈ ಎರಡು ವರ್ಷಗಳಲ್ಲಿ ನಾಲ್ಕೈದು ವರಸೆಗಳನ್ನು ಕಲಿತುಕೊಂಡಿದ್ದೆ. ಆ ವರಸೆಗಳಲ್ಲಿ ಅವನೂ ಸಹ ನನ್ನನ್ನೇನೂ ಮಾಡಲಾರ! ನಮ್ಮೊಂದಿಗೆ ನಮ್ಮೂರಿನವರ ಒಂದು ಗಾಡಿಯೂ ಬಂದಿದೆ ಎಂದು ತಿಳಿಸಿರುವೆನಲ್ಲ. ಅವರ ಗಾಡಿಯಲ್ಲಿ ಮೂರು ಜನ ಹೆಂಗಸರು–ಅವರು ಕಮ್ಮಾ ಜನರು–ಒಬ್ಬ ಹೆಣ್ಣು ಹುಡುಗಿಯೂ ಇದ್ದರು. ನಲವತ್ತು ವರ್ಷದ ವ್ಯಕ್ತಿಯೊಬ್ಬ ಅವರ ಗಾಡಿ ಹೊಡೆಯುತ್ತಿದ್ದನು. ಒಂದೆರಡು ವರ್ಷಗಳಿಂದ ಆತನ ಆರೋಗ್ಯ ಕೆಟ್ಟುಹೋಗಿತ್ತು. ಕೇವಲ ಗಾಡಿ ಹೊಡೆಯುತ್ತಾನಷ್ಟೆ. ಅವರೂ ನಮ್ಮ ಆಸರೆ ನೋಡಿಕೊಂಡೇ ಹೊರಟಿದ್ದು.

ನನಗಾಗ ಹದಿನಾಲ್ಕು ದಾಟಿತ್ತೋ ಏನೋ, ನೋಡಲು ನಾನು ತೊಲೆ ತುಂಡಿನಂತಿದ್ದೆ ನೋಡಿದವರು ನನಗೆ ಇಪ್ಪತ್ತು ವರ್ಷಗಳಿರಬಹುದು ಎನ್ನುವಂತಿದ್ದೆ ಈ ಎರಡು ವರ್ಷಗಳಿಂದ, ನಮ್ಮತ್ತೆ ನನ್ನನ್ನು ಚೆನ್ನಾಗಿ ಮೇಯಿಸಿದ್ದಳು; ನಾನೂ ಚೆನ್ನಾಗಿ ಕೊಬ್ಬಿದ್ದೆ! ನನ್ನ ಮನಸ್ಸು–ನಾನು ಹತ್ತು ಜನ ಧಾಂಡಿಗರನ್ನು ನೀರು ಕುಡಿದ ಹಾಗೆ 'ಸುಧಾರಿಸ'ಬಲ್ಲೆ–ಎಂದು ಉಸುರುತ್ತಿತ್ತು.

ಸೂರ್ಯ ಮುಳುಗುವ ಹೊತ್ತಿಗೆಲ್ಲಾ ಗಾಡಿಗಳನ್ನು ಕಟ್ಟಿದ್ದೆವು. ನಮ್ಮ ಎತ್ತುಗಳು ತುಂಬ ಚುರುಕಾಗಿವೆ. ಹಣೆಪಟ್ಟಿ ಗೆಜ್ಜೆಗಳ ಸರ, ಕೊರಳಲ್ಲಿ ಗಂಟೆಗಳ ಪಟ್ಟಿಗಳಿಂದ ಅವುಗಳನ್ನು ಸಿಂಗರಿಸಿದ್ದೆವು. ಅವು ಸರಸರನೆ ನಡೆಯತೊಡಗಿದುವು. ನಮ್ಮ ಜೊತೆಯ ಗಾಡಿಗೆ ಹೂಡಿದ್ದ ಎತ್ತುಗಳು ಕೂಡಾ ಮೇಲ್ತರಗತಿಯವಾಗಲೀ ನಮ್ಮ ಜೊತೆಗೆ ಈಡಲ್ಲ. ಆದ್ದರಿಂದ ನಮ್ಮ ಗಾಡಿಯ ಜೊತೆ ಜೊತೆಗೆ ಅವರ ಗಾಡಿಯೂ ಬರಲೆಂದು ನಮ್ಮ ಗಾಡಿಯನ್ನು ಕೊಂಚ ನಿಧಾನವಾಗಿ ಹೊಡೆಯಬೇಕಾಯಿತು..... ರಾತ್ರಿಯಾಯಿತು. ರಾತ್ರಿ ಎರಡನೇ ಜಾವಕ್ಕೆ–ಹಾವಾಡಿಗರ ಕೈಯಲ್ಲಿ ನಾನು ಸಿಕ್ಕಿಹಾಕಿಕೊಂಡ ಸ್ಥಳವನ್ನು ಸೇರಿಕೊಳ್ಳುತ್ತಿರುವೆವು. ನನಗೆ ಅಂದಿನ ಆ ಕಥೆಯೆಲ್ಲಾ ಜ್ಞಾಪಕಕ್ಕೆ ಬಂದಿತು. ಅಷ್ಟೇ ಅಲ್ಲದೆ ಒಂದು ಅನುಮಾನವೂ

ತಲೆದೋರಿತು. ದೂರದಲ್ಲಿ, ಯಾರೋ ಒಂದಿಬ್ಬರು ಒಂದು ಸಲ ನಮ್ಮ ಮುಂದೆ, ಒಂದು ಸಲ ನಮ್ಮ ಗಾಡಿಗಳ ಹಿಂದೆ ಕಾಣಿಸಿಕೊಂಡಿದ್ದರು. ನನ್ನ ಅನುಮಾನ ಬಲಗೊಂಡಿತು. ಯಾರೊಂದಿಗೂ ನನ್ನ ಅನುಮಾನವನ್ನು ಬಾಯಿಬಿಟ್ಟು ಹೇಳಲಿಲ್ಲವಾದರೂ ನಾನು ಕೂಡಲೇ ಎಚ್ಚರಿಕೆ ವಹಿಸಿದೆ–ನಮ್ಮ ಗಾಡಿಯನ್ನು ಹಿಂದಾಗಿಸಿ, ಹಿಂದಿದ್ದ ಕಮ್ಮಾ ಅವರ ಗಾಡಿಯನ್ನು ಮುಂದೆ ಮಾಡಿ–ದಾರಿ ಸಾಗತೊಡಗಿದೆವು. ಗಾಡಿಯ ತೊಟ್ಟಿಯಲ್ಲಿ ಕುಳಿತಿದ್ದ ಆ ಕಮ್ಮಾ ಆಸಾಮಿಯನ್ನು ಗಾಡಿಯ ಒಳಗೆ ಕುಳಿತುಕೋ ಎಂದು ಹೇಳಿ, ನಾನು ಅವರ ಗಾಡಿಯ ತೊಟ್ಟಿಯಲ್ಲಿ ಗಾಡಿ ಹೊಡೆಯಲಾರಂಭಿಸಿದೆ. ನಮ್ಮ ಮನೆಯಾಳು–ನಮ್ಮ ಗಾಡಿಯ ಹಿಂದೆ ನಡೆದು ಬರುತ್ತಿದ್ದನು. ಆ ದಿನ ದಶಮಿ ಎಂದು ಕಾಣುತ್ತದೆ. ಅದು ಶುಕ್ಲಪಕ್ಷ. ಆಗಿನ್ನೂ ತಿಂಗಳ ಬೆಳಕಿತ್ತು. ಗಾಡಿಗಳು ಹೋಗುತ್ತಾ ಇವೆ. ನನ್ನ ಅನುಮಾನ ಎಷ್ಟರಮಟ್ಟಿಗೆ ನಿಜವೋ ನನಗೆ ಗೊತ್ತಾಗಲಿಲ್ಲ. ಆ ಅನುಮಾನದ ಬಗ್ಗೆ ಯಾರೊಂದಿಗೂ ಹೇಳಿಕೊಳ್ಳಲು ನನಗೆ ಮನಸ್ಸಾಗಲಿಲ್ಲ. ತೊಟ್ಟಿಯಲ್ಲಿ, ಬಳಿಯಲ್ಲಿಯೇ 'ಅಣಸು ಬಡಿಗೆ'ಯೊಂದನ್ನಿರಿಸಿಕೊಂಡೆ. ನಮ್ಮ ಆಳಿನ ಕೈಯಲ್ಲೂ ಒಂದು ಅಣಸು ಬಡಿಗೆಯಿದೆ. ಗಾಡಿಯನ್ನು ಜೋರಾಗಿ ಓಡಿಸತೊಡಗಿದೆ. ನಾನು 'ಮೂಕಿ'ಯ ಮೇಲೆ ಕುಳಿತುಕೊಳ್ಳುತ್ತಲೇ ಎತ್ತುಗಳು ಬೇಗಬೇಗ ಹೆಜ್ಜೆ ಹಾಕತೊಡಗಿದುವು. ಆ ಕಮ್ಮಾ ಆಸಾಮಿಯ ಹೆಂಡತಿ ಹೀಗೆಂದಳು 'ರಾವುತನಿಗೆ ತಕ್ಕಂತೆ ಕುದುರೆ ಎಂಬ ಮಾತು ಸುಳ್ಳಲ್ಲ ಕಣೋ. ಇದುವರೆಗೂ ಇವ್ರ ತೊಟ್ಟೀಲಿ ಕೂತ್ಕೊಂಡು ಹೊಡೆಯುತ್ತಿದ್ರೂ ಓಡದ ಎತ್ತುಗಳು ಈಗ ನೋಡು, ಹೇಗೆ ಕುಣೀತಾ ಓಡ್ತಾ ಇವೆ.'

ಬೆಳುದಿಂಗಳು ಮರೆಯಾಗುವುದರೊಳಗೆ ಅಲ್ಲಿಗೆ ಎರಡು ಕೂಗು ದೂರದಲ್ಲಿರುವ ಒಂದು ಗ್ರಾಮವನ್ನು ತಲುಪುತ್ತಿದ್ದೆವು. ಆ ಊರಿನಲ್ಲಿ ಎತ್ತುಗಳನ್ನು ಬಿಚ್ಚೋಣವೆಂದು ನಮ್ಮ ಯೋಚನೆ. ಅಷ್ಟರಲ್ಲಿಯೇ ನನ್ನ ಅನುಮಾನ ನಿಜವಾಗಿಬಿಟ್ಟಿತು! ಆ ಜಾಲಿ ಬೀಳಲು ಸೇರಿಕೊಳ್ಳುವಷ್ಟರಲ್ಲಿ, ಅದರೊಳಗಿನಿಂದ ಇಪ್ಪತ್ತಾಳುಗಳು ಕೈಗಳಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡು ಬರುತ್ತಿರುವುದು ಕಾಣಿಸಿತು! ನಾನು ನಮ್ಮ ಆಳನ್ನು 'ಯಾರೋ ಅವರು, ಅಲ್ಲಿ ಬರ್ತಾ ಇರೋದು?' ಎಂದು ಕೇಳಿದೆ. ಅವನು 'ಯಾರೋ ಏನೋ ಗೊತ್ತಿಲ್ಲ ಬುದ್ಧೀ' ಎಂದ. ನಾನು ಅವನೊಂದಿಗೆ ನನ್ನ ಅನುಮಾನವನ್ನು ಪ್ರಕಟಪಡಿಸಿದೆ. 'ಹಾಗಲ್ಲವೋ, ಕೈಯಲ್ಲಿ ದೊಣ್ಣೆ ಇದೆ ತಾನೆ?' ಎಂದೆ. ಅವನು 'ನಮ್ಮೇಲೇನಾದ್ರೂ ಬೀಳ್ಲಿ ಆ ಬಡ್ಡೀಮಕ್ಕಳನ್ನು! ಸಿಗ್ದುಹಾಕಿಬುಟ್ಟೇನು!' ಎಂದ. ಹಾಗೆನ್ನುವಷ್ಟರಲ್ಲಿಯೇ ಅವರಲ್ಲಿ ನಾಲ್ಕಾರು ಜನ ಗಾಡಿಯ ಮುಂಭಾಗದಲ್ಲಿ, ಮಿಕ್ಕವರು ಗಾಡಿಗಳ ಮೂರೂ ಕಡೆಗಳಲ್ಲೂ ಆಯ ನೋಡಿ ಮುತ್ತಿಗೆ ಹಾಕಲು ಪ್ರಯತ್ನಿಸತೊಡಗಿದರು. ನಾನು 'ನೋಡಿದೆಯೇನೋ!' ಎಂದೆ. ನಾನು ಹಾಗೆನ್ನುತ್ತಲೇ ಅವನು ಎರಡು ಸಲ 'ಗುಟುರು' ಹಾಕಿ, ಎರಡು ವರಸೆ ದೊಣ್ಣೆ ತಿರುವಿ, ಹಿಂಬದಿಯಿಂದ ಬರುತ್ತಿರುವ ಆ ವ್ಯಕ್ತಿಗಳನ್ನೆಲ್ಲಾ ಗಾಡಿಗಳನ್ನು ಮುತ್ತಲು ಅನುವು ಕೊಡದೆ, ತಡೆಹಾಕಿ ನಿಲ್ಲಿಸಿಬಿಟ್ಟ. ಇನ್ನುಳಿದ ನಾಲ್ಕಾರು ಜನ ಗಾಡಿಯ ಮುಂಭಾಗಕ್ಕೆ ಬಂದು ದಾರಿಗೆ ಅಡ್ಡ ನಿಂತರು. ನಾನು ಕೂಡಲೇ ತೊಟ್ಟಿಯಿಂದ ಕೆಳಗೆ ಧುಮುಕಿ, ದೊಣ್ಣೆಯನ್ನು ಕೈಗೆತ್ತಿಕೊಂಡೆ. ಅವರು 'ಗಾಡಿ

ನಿಲ್ಲಿಸಿ!' ಎಂದು ಕೂಗಿದರು. ಅವರಲ್ಲಿ ಒಬ್ಬನ ಧ್ವನಿಯನ್ನು ಗುರುತಿಸಿದೆ. ಅದು ಆ ಹಿರಿಯ ಹಾವಾಡಿಗನದು! ನಾನು ತತ್‌ಕ್ಷಣವೇ ಗುರಿ ನೋಡಿ, ದೊಣ್ಣೆಯಿಂದ ಅವನ ಮೊಣಕಾಲಿನ ಗಂಟಿಗೆ ಬಲವಾಗಿ ಬೀಸಿದೆ. ಆ ಹೊಡೆತವನ್ನು ಅವನು ಹಾವಿನಂತೆ ತಟಕ್ಕನೆ ತಪ್ಪಿಸಿಕೊಂಡು, ತನ್ನ ಕೈಯಲ್ಲಿನ ದೊಣ್ಣೆಯಿಂದ ನನ್ನ ಭುಜಕ್ಕೆ ಬಲವಾಗಿ ಹೊಡೆದ. ಇನ್ನುಳಿದ ಆ ನಾಲ್ವರ ದೊಣ್ಣೆಗಳೂ ಏಕಕಾಲದಲ್ಲಿಯೇ ನನ್ನ ಮೇಲೆರಗಲು ಮೇಲೇಳುತ್ತಿರುವುದು ಕಂಡುಬಂದಿತು. ನಾನು ಕೂಡಲೇ ಎತ್ತುಗಳನ್ನು ಬೆದರಿಸಿ, ಗಾಡಿ ಹಾದಿ ತಪ್ಪಿ ಪಕ್ಕಕ್ಕೆ ತಿರುಗುವಂತೆ ಮಾಡಿ, ಎರಡು ವರಸೆಗಳನ್ನು ಪ್ರಾರಂಭಿಸುವುದರೊಳಗೆ, ಅವರ ಒಂದು ಪೆಟ್ಟೂ ಸಹ ನನಗೆ ತಾಕಲಿಲ್ಲ. ಹಿಂಭಾಗದಲ್ಲಿ ದೊಡ್ಡ ಗಲಾಟೆ ಕೇಳಿಬರುತ್ತಿತ್ತು. ಗಾಡಿಯಲ್ಲಿ ಹೆಂಗಸರು–ಮಕ್ಕಳು ಗಟ್ಟಿಯಾಗಿ ಅಳುತ್ತಿದ್ದರು. ಗಾಡಿ ಹಾದಿಯಿಂದ ತೊಲಗಿಹೋಗಿದ್ದರಿಂದ ನನಗೆ ಎಡೆ ದೊರೆಯಿತು. ನೋಡಿ ದೊಣ್ಣೆ ಬೀಸಿದೆ. ಆ ಹೊಡೆತಕ್ಕೆ ದೊಡ್ಡ ಹಾವಾಡಿಗ ನೆಲ ಕಚ್ಚಿದ. ಮಿಕ್ಕವರನ್ನು ಕುರಿತು 'ನೀವು ಹುಟ್ಟಿಲ್ಲಾಂತ ಅನ್ನಿಸಿಬಿಡ್ತೇನೆ. ಬಡ್ಡೀ ಮಕ್ಕಳಾ! ಬನ್ರೋ ಬನ್ರಿ' ಎಂದಬ್ಬರಿಸಿ, ಅವರ ಮೇಲೆರಗಿದೆ. ಅವರಲ್ಲಿಬ್ಬರು ಪರಾರಿಯಾಗಿಬಿಟ್ಟರು. ಉಳಿದಿಬ್ಬರು ಮಾತ್ರ ಹೆಣಗುತ್ತಿದ್ದರು. ಅವರನ್ನು ಮಣ್ಣು ಮುಕ್ಕಿಸುವ ಮುನ್ನ–ಆ ದೊಡ್ಡ ಹಾವಾಡಿಗ ಕಣ್ಣು ತಪ್ಪಿಸಿಕೊಂಡು ಓಡಿಹೋಗದಂತೆ ಹಿಡಿದಿಡಬೇಕೆಂದು ನನ್ನ ಯೋಚನೆ. ಆ ಇಬ್ಬರ ಹೊಡೆತಗಳು ನನ್ನ ತಲೆಯ ಮೇಲೆ ಬೀಳದಂತೆ ನೋಡಿಕೊಳ್ಳುತ್ತಾ ಆ ಹಾವಾಡಿಗರ ತಲೆಗೆ ಹೊಡೆಯ ಹೋದೆ. ಆ ಕಳ್ಳ ಬಡ್ಡೀಮಗ, ನೆಲ ಕಚ್ಚಿದ್ದರೂ, ನನ್ನ ಕಾಲು ಹಿಡಿದು ಎಳೆದುಬಿಟ್ಟ! ನಾನು ತಟಕ್ಕನೆ ನೆಲಕ್ಕುರುಳಿಬಿದ್ದೆ. ಆದರೆ ಎಡಗೈಯಿಂದ ಅವನ ಮಣಿಕಟ್ಟು ಹಿಡಿದು ಬಾಗಿಸಿ, ಮತ್ತೆ ಮೇಲೇಳುವಷ್ಟರಲ್ಲಿ–ನನ್ನ ಮೇಲೆ ನಾಲ್ಕೈದು ಹೊಡೆತಗಳು ಮೇಲಿಂದ ಮೇಲೆ ಬಿದ್ದುಬಿಟ್ಟವು! ನಾನು ಕೂಡಲೇ ಇನ್ನುಳಿದ ಆ ಇಬ್ಬರ ಮೊಣಕಾಲ ಚಿಪ್ಪುಗಳನ್ನು ಮುರಿದು, ಆ ಹಾವಾಡಿಗರ ಕಡೆಗೆ ನೋಡಿದೆ. ಅವನು ಒಂದು ಕೈಯಿಂದ, ನೆಲದ ಮೇಲೆ ವಾಲಿ, ಹಾವಿನಂತೆ ಸರಸರನೆ ಹರಿದು ಹೋಗುತ್ತಿದ್ದಾನೆ! ಅವನು ಆ ರೀತಿ ಹರಿದಾಡಿ ಹೋಗುತ್ತಿರುವುದನ್ನು ನೋಡಿದರೆ ನನಗೆ ಭೀತಿಯುಂಟಾಯಿತು. ಆ ರೀತಿ ಭೀತಿಯುಂಟಾಗಲು ಕಾರಣ ಬಯಲು ಭೂಮಿಯಲ್ಲಿ ನಾಗರಗಳು ಸರಸರನೆ ಹಾದುಹೋಗುತ್ತಿದ್ದರೆ ಗೊತ್ತಾಗುತ್ತೆ! ಬೆನ್ನ ಹಿಂದೆ ದೊಡ್ಡ ಗಲಭೆ ಕೇಳಿಸುತ್ತಿದೆ. ಹಾವಾಡಿಗನನ್ನು ಕೈಬಿಡುವುದೋ, ಅತ್ತ ನಮ್ಮ ಆಳಿನ ಸಹಾಯಕ್ಕೆ ಧಾವಿಸುವುದೋ, ಏನೊಂದೂ ತೋಚದಾಯಿತು. ಆದರೆ ನನಗರಿವಿಲ್ಲದೆಯೇ ನಾನು ಆ ಹಾವಾಡಿಗನತ್ತ ಮುಂಬರಿದು, ಮೇಲೆರಗಿದ್ದೆ. ತತ್ ಕ್ಷಣವೇ ಅವನು ಮೇಲೆದ್ದು ನಿಂತುಕೊಂಡನಾಗಲೀ, ಅವನ ಸೊಂಟಕ್ಕೆ ಬಲವಾಗಿ ಪೆಟ್ಟು ಬೀಳುತ್ತಲೇ, ಅವನು ದೊಪ್ಪನೆ ನೆಲಕ್ಕೆ ಬಿದ್ದು, ಕೂಡಲೇ ಮೊದಲಿನಂತೆ ಹರಿದು ಹೋಗಲು ಯತ್ನಿಸಿದ. ನಾನು ದೊಣ್ಣೆಯನ್ನು ಅವನ ಮೇಲೆ ಬಲವಾಗಿ ಒತ್ತಿ ಹಿಡಿದೆ. ಅವನು ಕಾಲುಗಳನ್ನು ಮೇಲಕ್ಕೆತ್ತಿ 'ಛೂಮಂತರ್' ಎಂಬಂತೆ ನನ್ನ ಪಟ್ಟು ಬಿಡಿಸಿಕೊಂಡುಬಿಟ್ಟನಾಗಲೀ ಪಕ್ಕದಲ್ಲಿಯೇ ಒಂದು ಮರದ ತುಂಡು ಕಂಡುಬರಲಾಗಿ,

ಅದನ್ನೆತ್ತಿ ಅವನ ಮೇಲೆ ಹಾಕಿ, ಅವನ ತಲೆಗೆ ಸಾಯುವಂಥಾ ಪೆಟ್ಟು ಹಾಕಿದೆ. ಅದರಿಂದ ಅವನು ಮೂರ್ಛಿತನಾಗಿಬಿಟ್ಟ. ನಾನು ಅವನ ತಲೆಗೂದಲನ್ನು ಹಿಡಿದು, ಗಾಡಿಗಳ ಬಳಿಗೆ ದರದರನೆ ಎಳೆದುಕೊಂಡು ಬಂದೆ. ದೂರದಲ್ಲಿ ನೋಡಿದರೆ ಯಾರೋ ಒಬ್ಬ ಹೆಂಗಸನ್ನು ಇಬ್ಬರು ಹಾವಾಡಿಗರು ಎಳೆದುಕೊಂಡು ಹೋಗುತ್ತಿರುವುದು ಕಂಡುಬಂದಿತು. ನಮ್ಮ ಆಳಿನ ಸಂಗತಿ ಏನಾಯಿತೋ ಕಂಡುಕೊಳ್ಳಲು ಸಾಧ್ಯವಾಗದಾಯಿತು. ನಾನು ಆ ಹೆಂಗಸಿನ ಸಹಾಯಕ್ಕಾಗಿ ಅತ್ತ ಧಾವಿಸಿದೆ. ಯಾರನ್ನು ಹೊಡೆಯಬೇಕೋ ತಿಳಿಯದಾಯಿತು. ಹೊಡೆದರೆ ಹೆಂಗಸಿಗೆ ತಾಕುತ್ತದೇನೋ. ಆದರೆ ದೈವಾನುಕೂಲದಿಂದ, ಆ ಹೆಂಗಸಿನಿಂದಾಗಿ ಅವರಿಬ್ಬರೂ ಓಡಿಹೋಗಲು ಸಾಧ್ಯವಿಲ್ಲದಾಯಿತು. ಆ ಹೆಂಗಸು ಅಲ್ಲಿಯೇ ಬಿದ್ದುಬಿಟ್ಟಳು. ಆಗ ಅವರಿಬ್ಬರೂ ನನ್ನತ್ತ ತಿರುಗಿದರು, ನಾನು ಎವೆ ಮಿಟುಕುವಷ್ಟರಲ್ಲಿಯೇ ಅವರ ಕೈಗಳಲ್ಲಿನ ದೊಣ್ಣೆಗಳನ್ನು–ದೂರಕ್ಕೆ ಹಾರಿ ಬೀಳುವಂತೆ ಮಾಡಿ, ಅವರಿಬ್ಬರ ಕತ್ತುಗಳನ್ನು ನನ್ನ ಒಂದೊಂದು ಕಂಕುಳಲ್ಲಿ ಇರುಕಿಸಿಕೊಂಡು ಗಟ್ಟಿಯಾಗಿ ಹಿಚುಕತೊಡಗಿದೆ. ಒಬ್ಬ ನನ್ನನ್ನು ಕಚ್ಚುತಿದ್ದನು, ಇನ್ನೊಬ್ಬ ನನ್ನ ಮೀನು ಖಂಡಗಳಿಗೆ ಒದೆಯುತ್ತಿದ್ದನು. ಒದೆಯುತ್ತಿದ್ದವನ ಮೊಣಕಾಲು ಮುರಿಯುವ ಹಾಗೆ ಝಾಡಿಸಿ ಒದ್ದೆ. ಅವನು ನೆಲಕ್ಕೆ ಕುಸಿಯುತ್ತಿರಲು ಅವನನನ್ನು ಕುಸಿಯಲು ಬಿಟ್ಟು, ನೆಲಕ್ಕೆ ಬಿದ್ದ ಮೇಲೆ ಅವನ ಹೆಡಕತ್ತಿನ ಮೇಲೆ ಬಲವಾಗಿ ಎರಡು ಸಲ ತುಳಿದುಬಿಟ್ಟೆ. ಇನ್ನವನು ಈಗಲೇ ಮೇಲೇಳಲಾರ! ಎರಡನೆಯವನ್ನು ದೂರಕ್ಕೆ ತಳ್ಳಿ, ದೊಣ್ಣೆಯಿಂದ ತಲೆಗೆ ಬಲವಾಗಿ ಬೀಸಿದೆ. ಅವನೂ ತಲೆ ಹಿಡಿದುಕೊಂಡು ನೆಲಕ್ಕುರುಳಿ ಬಿದ್ದ. ಕೂಡಲೇ ಅಲ್ಲಿಂದ ಹೋಗಿ ಆ ಹೆಂಗಸಾರೆಂದು ನೋಡಿದೆ. ಆಕೆ ನಮ್ಮತ್ತೆ! 'ಅತ್ತೇ, ಇನ್ನು ಭಯವಿಲ್ಲ' ಎಂದೆ. ಆಕೆ ಕೂಡಲೇ 'ಅಪ್ಪಾ ಮಗೂ!' ಎಂದು ನನ್ನನ್ನು ಅಪ್ಪಿಕೊಂಡಳು. ನಾನು ಆಕೆಯನ್ನು ಗಾಡಿಗಳ ಬಳಿಗೆ ಕರೆದುಕೊಂಡು ಬಂದೆ.

೯

ಗಾಡಿಗಳು ನಿಂತಿದ್ದ ಸ್ಥಳಕ್ಕೆ ಬಂದು ನೋಡಿದರೆ ಕಮ್ಮಾ ಅವರ ಗಾಡಿ ಹಾಗೆಯೇ ನಿಂತಿತ್ತು. ಆದರೆ ನಮ್ಮ ಗಾಡಿ ಉರುಳಿ ಬಿದ್ದಿತ್ತು. ಒಂದು ಎತ್ತು ಕೊರಳ ಪಟ್ಟಿ ಕಿತ್ತುಕೊಂಡು ಓಡಿಹೋಗಿಬಿಟ್ಟಿತ್ತು. ಬಂಡಿಯ ನೊಗ ಒಂದು ಕಡೆಗೆ ಕೆಳಗೆ ವಾಲಿ ಬಿದ್ದಿತ್ತು. ಎರಡನೆಯ ಎತ್ತು ಅಡ್ಡ ತಿರುಗಿ ನಿಂತಿತ್ತು. ಹಾಗೆ ನಿಂತಿದ್ದರಿಂದ, ಅದರ ಕೊರಳಪಟ್ಟಿ ಕತ್ತಿಗೆ ಉರುಲು ಬಿದ್ದಿದೆ. ತತ್‌ಕ್ಷಣವೇ ನಾನು ಅದರ ಕೊರಳ ಪಟ್ಟಿಯನ್ನು ಸಡಲಿಸಿದೆ. ನಮ್ಮ ಆಳು ಏದುಸಿರು ಬಿಡುತ್ತ ನನ್ನ ಬಳಿಗೆ ಬಂದ. 'ಗಾಡಿಯಲ್ಲಿ ಎಲ್ಲಾರೂ ಇದಾರೇನೋ?' ಎಂದು ಕೇಳಿದೆ. ಅವನು ತನಗೆ ತಿಳಿಯದೆಂದ. ಮುಂದಿದ್ದ ಗಾಡಿಯಲ್ಲಿನ ಹೆಂಗಸರು, ಮಕ್ಕಳು, ಆ ಕಮ್ಮಾ ಆಸಾಮಿ– ಎಲ್ಲರೂ ಚಾಪೆಗಳ ಕೆಳಗೆ ಅಡಗಿಕೊಂಡಿದ್ದಾರೆ. ನಮ್ಮ ಗಾಡಿಯಲ್ಲಿ ನಮ್ಮತ್ತೆಯ ಮಗಳು

ಗಾಡಿಯ ಕೆಳಗೆ ಬಿದ್ದುಬಿಟ್ಟಿದ್ದಳು. ಅವಳ ತಮ್ಮ ಕಂಡುಬರಲಿಲ್ಲ. ಅವನನ್ನು ಹುಡುಕಿದೆವು. ಅವನು ಗಾಡಿಯ ತೊಟ್ಟಿಯಲ್ಲಿನ ಹುಲ್ಲಿನ ಕೆಳಗೆ ಅಡಗಿದ್ದು ಎಷ್ಟು ಹೊತ್ತಾದರೂ ಮರು ನುಡಿಯಲಿಲ್ಲ. ಅವನು ನಿಧಾನವಾಗಿ ನಮ್ಮ ಸ್ವರಗಳನ್ನು ಗುರುತಿಸಿದ ಮೇಲೆಯೇ ಮಾತನಾಡಿದ್ದು. ಎಲ್ಲರೂ ಇರುವರೆಂದು ಮನಗಂಡ ಮೇಲೆ, 'ನೀನೇನು ಮಾಡಿದೆಯೋ?' ಎಂದು ಕೇಳಿದೆ. ಅವನು 'ನೀನೇನು ಮಾಡಿದೆ?' ಎಂದು ಮರು ಪ್ರಶ್ನಿಸಿದ. ನಾನು ಅದನ್ನೆಲ್ಲಾ ಹೇಳಿದೆ. ಹಿರಿಯ ಹಾವಾಡಿಗ ಎಚ್ಚರ ತಪ್ಪಿ ಬಿದ್ದಿದ್ದನು. ಒಂದು ಎತ್ತಿನ ಹಗ್ಗವನ್ನು ಬಿಚ್ಚಿ, ಅದರಿಂದ ಅವನ ಕೈಕಾಲುಗಳನ್ನು ಕಟ್ಟಿಹಾಕಿ, ನಮ್ಮ ಗಾಡಿಯ ಕೀಲಚ್ಚಿನ ಕೆಳಗೆ ನೇತಾಡಬಿಟ್ಟೆವು. ನಮ್ಮ ಆಳು ಹೀಗೆ ಹೇಳಿದ–

'ಅವರೆಲ್ಲಾ ಸಮೀಪಿಸುವುದರೊಳಗೇ ಅವರೆಷ್ಟಾಳು ಇದಾರೆ ಅಂತ ಲೆಕ್ಕ ಹಾಕ್ದೆ, ಹದಿನೆಂಟಾಳುಗಳಿದ್ರು. ಅವ್ರ ಗಾಡಿಯ ಹತ್ರ ಸುಳೀದ ಹಾಗೆ ಅವ್ರನ್ನು ಗಾಡಿಯಿಂದ ಅಷ್ಟು ದೂರದಲ್ಲಿಯೇ ಅಡ್ಡಗಟ್ಟಿದೆ. ಅದ್ರಿಂದ ಗಾಡಿಯ ಹತ್ತಿರ ಏನು ನಡೀತೋ ನಂಗೊತ್ತಾಗ್ಲಿಲ್ಲ. ಅವರನ್ನೆಲ್ಲಾ ನೋಡ್ ನೋಡ್ತಿದ್ದ ಹಾಗೇ, ಅವರಲ್ಲಿ ಇಬ್ಬರನ್ನು ಮೊದ್ಲು ಇಚಾರಿಸಿಕೊಳ್ಳಬೇಕಂತನ್ನಿಸ್ತು, ಅವ್ರಿಬ್ರೂ ಕಟ್ಟುಮಸ್ತಾದ ಆಳುಗಳು. ಮೊದ್ಲು ಅವರ ಇಷ್ಯಾ ನೋಡ್ಕೊಳ್ಳಬೇಕಂತ ನನ್ನ ಮನಸ್ಸಿಗೆ ತೋಚಿಬಂತು. ಅವ್ರಿಬ್ರೂ ಗರಡೀ ಮನೇಲಿ ಸಾಮು ಕಲಿತ ಬಡ್ಡೀಮಕ್ಳು! ಅವ್ರಿಬ್ರನ್ನ ಮೊದಲು ಒಂದು ಕೈ ನೋಡೋಷ್ಟರೊಳಗೆ ಇನ್ನುಳಿದಾಳುಗಳೆಲ್ಲಾ ನನ್ನ ಮೇಲೆ ಭರ್ ಅಂತ ಎರಗಿಬಿಟ್ರು. ಒಂದು ವರಸೆ ನಂಗೆ ಗ್ಯಾಪ್ತಿ ಮರ್ತುಹೋಗಿತ್ತು. ಅದನ್ನ ತಿರುಗಿಸಿ ಹತ್ತು ವರ್ಷಗಳೇ ಆಗಿತ್ತು. ಆ ದಿನ ತನ್ನಷ್ಟಕ್ಕೆ ತಾನೇ ಗ್ಯಾಪ್ತಿಗೆ ಬಂದುಬಿಟ್ತು. ಬಂತೂಂತ್ಲೇ ನಾನೀದಿನ ಉಳಕೊಂಡೆ. ಅದನ್ನು ಆ ಟಗರಿನ ರಾಜ ಕಲಿಸಿದ್ದ. ಆ ವರಸೆ ನಮ್ಮೂರಿನ್ಯಾಗ ಇನ್ನಾರಿಗೂ ಬರಲ್ಲ. ದೇವರು ದೊಡ್ಡ ಕಣ್ಣು ಬಿಟ್ಟು ನೋಡ್ದಾಂತ್ಲೇ ಅದು ವಿಪತ್ತಿನ್ ಕಾಲ್ದಾಗ ಗ್ಯಾಪ್ತಿಗ್ಬಂತು. ಅವರಿಬ್ರ ಎಲುಬು ಮುರಿದೆ. ಅವರು ತಕ್ಷಣವೇ ಕಂಬಿ ಕಿತ್ತುಬಿಟ್ರು. ಇನ್ನುಳಿದ ಆಳುಗಳ ಇಷ್ಯಾ ನೋಡ್ಕೊಳ್ಳೋಕೆ ಸುರು ಮಾಡ್ದೆ. ಹದ್ನಾರು ಆಳುಗಳನ್ನ ಚೆಲ್ಲಾಪಿಲ್ಲಿಯಾಗಿ ಚೆದುರಿ ಹೋಗ್ದಂತೆ ಅಡ್ಡಗಟ್ಟಿ ಚೆನ್ನಾಗಿ ಥಳಿಸಿದೆ. ಎಲ್ರೂ ನೆಲ ಕಚ್ಚಿಬಿಟ್ರು. ತೋರಿಸ್ತೇನ್ಬನ್ನಿ, ಆ ಇಬ್ರೂ ಅಮ್ಮಾವ್ರನ್ನ ಹಿಡ್ಕೊಂಡು ಹೋದರೂಂತ ಕಾಣುತ್ತೆ' ಎಂದ. ನಾನು 'ಸರಿ, ಅದು ಹಾಗಿರಲಿ ಬಿಡು. ಮೊದಲು ಎತ್ತಿನ ವಿಷಯ ನೋಡು' ಎಂದೆ. 'ಆ ಎತ್ತು ಸತ್ತರೂ ಇದ್ದ ಜಾಗ ಬಿಟ್ಟು ಕದಲುವಂಥದಲ್ಲವಲ್ಲಾ! ಅದು ಸೀಮೆ ಎತ್ತು. ಒಳ್ಳೆ ಪೌರುಷವಿರೋ ಎತ್ತಲ್ಲಾ!' ಎಂದು ಹೇಳಿ ಅವನು 'ಅದನ್ನ ನೀವೇ ಹುಡಿಕ್ಕೊಂಡು ಬನ್ನಿ ಬುದ್ಧಿ, ಅದು ನಾನೆಂದರೆ ಹಾಯಲು ಬರುತ್ತೆ ನಾನು ಇವರಿಬ್ರನ್ನೂ ಒಂದು ಕಡೆ ಗುಪ್ಪೆ ಹಾಕ್ತೇನೆ' ಎಂದ. ಎತ್ತಿಗಾಗಿ ನಾನು ಬೀಡನ್ನೆಲ್ಲಾ ಹುಡುಕಿದೆ. ಎತ್ತಿನ ಬುಸುಗರೆತ ದೂರದಿಂದ ಕೇಳಿಬಂದಿತು. ನಾನತ್ತ ಕಡೆಗೆ ಹೆಜ್ಜೆ ಹಾಕಿದೆ. ಅದು ತಪ್ಪಿಸಿಕೊಂಡು ಹೋಗಿದ್ದವರಲ್ಲೊಬ್ಬನನ್ನು ಅಡ್ಡಗಟ್ಟಿ ನಿಲ್ಲಿಸಿ, ಜಾಲಿಮರಕ್ಕೆ ಆನಿಸಿ, ಕೋಡಿನಿಂದ ಇರಿದುಬಿಟ್ಟಿದೆ. ಅವನು ಕೆಳಗುರುಳಿ ಬಿದ್ದಿದ್ದಾನೆ. ಎದ್ದರೆ ಎಲ್ಲಿ ಎತ್ತು ಕೊಂದುಹಾಕಿಬಿಡುತ್ತೋ ಎಂದು ಅವನು

ಹಾಗೆಯೇ ಅಲುಗಾಡದೆ ಬಿದ್ದುಕೊಂಡಿದ್ದಾನೆ. ನನ್ನನ್ನೂ ಸಹ ಎತ್ತು ಹಾಯುವಂತೆ ಕಂಡಿತು. ಮೊದಲೇ ಅದು ಹೋರಿ. ನನ್ನನ್ನಲ್ಲದೆ ಮತ್ತಾರನ್ನೂ ಕಟ್ಟಿಹಾಕಲು ಬಿಡುವುದಿಲ್ಲ. ನಾನು ನಿಧಾನವಾಗಿ, 'ಆ ಹಾಯ್, ಹ್ಯಾಯ್!' ಎನ್ನುತ್ತಾ ಅದರ ಬಳಿಗೆ ಹೋದೆ. ಸ್ವಲ್ಪ ಹೊತ್ತಿಗೆಲ್ಲಾ ಅದು ನನ್ನನ್ನು ಗುರುತು ಹಿಡಿದು ಸುಮ್ಮನಾಯಿತು. ನಾನು ಅದರ ಕಣ್ಣಿ ಬಿಚ್ಚಿ, ಕೆಳಗೆ ಬಿದ್ದವನನ್ನು ಕೈಕಾಲು ಕಟ್ಟಿ ಎಳೆದುಕೊಂಡು ಎತ್ತಿನ ಸಹಿತ ಬಂದೆ. ಗಾಡಿಗಳನ್ನು ಸಮೀಪಿಸುತ್ತಿರುವಂತೆಯೇ ಆ ಪಂಚಮರವನು, 'ಕಳ್ಳ ಬಡ್ಡೀಮಕ್ಳು ಎಲ್ರೂ ಓಡಿಹೋಗಿಬಿಟ್ಟವ್ರೆ ಬುದ್ದೀ! ಇಬ್ರು ಮಾತ್ರ ಎಚ್ಚರ ತಪ್ಪಿ ಬಿದ್ದಿದ್ರು. ಅವರನ್ನು ಕೈಕಾಲು ಕಟ್ಟಿ ಎಳಕೊಂಡು ಬಂದಿವ್ನಿ, ನೋಡಿ' ಎಂದು ತೋರಿಸಿದ. 'ಅತ್ತೆಯನ್ನು ಹಿಡಿದೊಯ್ದವರ ಸಂಗತಿ ಏನು ಮಾಡಿದ್ಯೋ?' ಎಂದು ಕೇಳಿದೆ. 'ಅವ್ರು ಕಾಣ್ನಿಲ್ಲ ಬುದ್ದೀ' ಎಂದ. ನಾನು ಮತ್ತೆ ಎಲ್ಲ ಕಡೆಗೂ ಅವರಿಗಾಗಿ ಹುಡುಕಿದೆ. ಒಬ್ಬನೂ ಕಂಡುಬರಲಿಲ್ಲ. ಹಾಳಾಗಿಹೋಗಲಿ ಎಂದು ಎತ್ತುಗಳನ್ನು ಗಾಡಿಗೆ ಹೂಡಿ, ಅಲ್ಲಿಂದ ಮುಂದಕ್ಕೆ ಸಾಗತೊಡಗಿದೆವು. ಹೆಂಗಸರೆಲ್ಲಾ ಭಯಭೀತರಾಗಿಬಿಟ್ಟಿದ್ದರು. ನನ್ನ ಸೋದರಮಾವನ ಮಗಳಿಗೆ, ಸ್ವಲ್ಪ ಹೊತ್ತಿಗೆಲ್ಲಾ ಎಚ್ಚರ ಬಂದಿತು. ಅವಳು ಆ ಕೂಡಲೇ ತಮ್ಮ ತಾಯಿಯನ್ನು ಅಪ್ಪಿಕೊಂಡು ಅತ್ತುಬಿಟ್ಟಳು. ನಮ್ಮತ್ತೆ–'ಮಾವಯ್ಯನನ್ನು ಅಪ್ಪಿಕೋ ಕಣೇ. ಈ ದಿನ ನಿನ್ನ ಮಾವಯ್ಯನಿಂದಲೇ ನಾವೆಲ್ಲಾ ಜೀವಸಹಿತ ಉಳಿದಿದ್ದು' ಎಂದಳು. ಆದರೆ ಅವಳು ನನ್ನನ್ನು ನೋಡಿ, ಅಳುವಿನಲ್ಲಿಯೇ ನಕ್ಕು ನನ್ನ ಕೈ ಹಿಡಿದುಕೊಂಡಳು. ಅವಳಿಗೆ ಹನ್ನೆರಡು ಹದಿಮೂರು ವರ್ಷಗಳು. ಅವಳು ಎತ್ತರಕ್ಕೆ ಬೆಳೆದಿದ್ದಳು. ಅವಳ ಮುಖರೇಖೆಗಳು ಮಾಟಾಗಿದ್ದವು. ಮನೆಯಲ್ಲಿಯೂ ಸಹ ನನ್ನ ಸೋದರಮಾವನ ಮಗ ನನ್ನೊಂದಿಗಿದ್ದಷ್ಟು ಸಲಿಗೆಯಿಂದ ಅವಳು ಇರುತ್ತಿರಲಿಲ್ಲ. ಅಪ್ಪಿಕೊಂಡೇ ಬಿಡುವಳೇನೋ ಎಂದುಕೊಂಡೆ. ಹಾಗೇನೂ ನಡೆಯಲಿಲ್ಲ. ಏಕೆ ನಡೆದೀತು?–ಬ್ರಹ್ಮ ಮತ್ತೊಂದು ರೀತಿಯಲ್ಲಿ ಬರೆದಿರುವಾಗ.

ನಮ್ಮ ಜೀತದಾಳು ಓಡಿಹೋದವರನ್ನು ಹಿಡಿದು ತರೋಣವೆನ್ನುತ್ತಿದ್ದನು. ಹೆಂಗಸರೆಲ್ಲಾ 'ಅವರಿನ್ನು ನಮ್ಮ ತಂಟೆಗೆ ಬರೋಲ್ಲ. ನಾವು ಆದಷ್ಟೂ ಬೇಗ ಹೊರಟುಬಿಡೋಣ' ಎನ್ನುತ್ತಿದ್ದರು. ಜೀತದಾಳು 'ಅವರಿಲ್ಲೇ ಎಲ್ಲೋ ಮರಗಳ ಹಿಂದೆ ಅಡಗಿಕೊಂಡಿರ್ತಾರೆ. ಅಥವಾ ಮರ ಹತ್ತಿ ಕುಳ್ತಿರ್ತಾರೆ. ಹೋಗಿ ನಾನು ನೋಡ್ಕೊಂಡು ಬರ್ತೀನಿ' ಎನ್ನುತ್ತಿದ್ದನು. ನಾನು ಅವನನ್ನು ಗದರಿಸಿ, ಗಾಡಿಗಳನ್ನು ಹೊರಡಿಸಿದೆ. ಆ ಹಾವಾಡಿಗನನ್ನು ಗಾಡಿಯ ಇರ್ಚಿ ಮರಕ್ಕೆ ಇಳಿಬಿಟ್ಟಿದ್ದೆವಲ್ಲಾ! ಇನ್ನುಳಿದ ಮೂವರಲ್ಲಿ ಇಬ್ಬರಿಗೆ ಎಚ್ಚರ ಮೂಡಿತು. ಆ ಮೂವರ ಕೈಗಳನ್ನು ನಮ್ಮ ಆಳು ಹುರಿ ತಿರುವಿ ಬೆನ್ನ ಹಿಂದಕ್ಕೆ ತಂದು ಹೆಡಮುರಿಗೆ ಕಟ್ಟಿ, ಹಗ್ಗವನ್ನು ಗಾಡಿಯ ಗೂಟಕ್ಕೆ ಬಿಗಿದು, ಅವರನ್ನು ನಡೆಯಿಸಿಕೊಂಡು ಹಿಂದಿನಿಂದ ಬರುತ್ತಿದ್ದನು. ಎತ್ತುಗಳು ಬೆದರಿದ್ದುವೋ ಏನೋ, ಬೆನ್ನು ಸವರಿ 'ಮುಸುಡಿ ಕುಕ್ಕೆ'ಗಳನ್ನು ಹಾಕಿದ್ದೆವು. ನನ್ನ ಸೋದರಮಾವನ ಮಗ ಮಾತ್ರ ಗಾಡಿ ಹೊಡೆಯುತ್ತಾ ನಗುತ್ತಿದ್ದನು. ಕೇಕೆ ಹಾಕುತ್ತಿದ್ದನು. ಸುಮ್ಮನಿರಲೋ ಎಂದರೂ ಸುಮ್ಮನಾಗುತ್ತಿಲ್ಲ. ಕೊನೆಗೆ ಅವರಮ್ಮ ಕೋಪ ಮಾಡಿಕೊಂಡಾಗ

ಸುಮ್ಮನಾದ. ಇನ್ನು ಅವನ ಜಂಭದ ಮಾತುಗಳಿಗೆ ಎಣೆಯಿರಲಿಲ್ಲ. ತೊಟ್ಟಿಯಲ್ಲಿ ಹುಲ್ಲಿನಡಿ ಅಡಗಿಕೊಂಡಿದ್ದವನು ನಾಲ್ಕು ಜನರನ್ನು ಚೆನ್ನಾಗಿ ಥಳಿಸಿದನಂತೆ! ಹೇಗೆ ಥಳಿಸಿದನೋ ನಾ ಬೇರೆ ಕಾಣೆ!

ನನಗೆ ಒಳಗೊಳಗೇ, ಆಗ ಓಡಿಹೋದವರು ಮತ್ತಿನ್ನಷ್ಟು ಜನರನ್ನು ಗುಂಪು ಕೂಡಿಸಿಕೊಂಡು ಬರುತ್ತಾರೇನೋ ಎಂದು ಭಯವಾಗುತ್ತಿತ್ತು. ನಾನು ಸೇರಿಕೊಳ್ಳಬೇಕೆಂದಿದ್ದ ಗ್ರಾಮ ದೂರದಲ್ಲಿ ಕಾಣಿಸಿತು. ಆಗ ಮಾತ್ರವೇ ನನ್ನ ಜೀವ ಸಮಾಧಾನದ ಉಸಿರ್ಗರೆಯಿತು. ಆ ಕೂಡಲೇ ನನ್ನ ಮೈಯ್ಯೆಲ್ಲಾ ನೋವು ಕಾಣಿಸಿಕೊಂಡಿತು. ಮನಸ್ಸು ನೆಮ್ಮದಿಗೊಳ್ಳುತ್ತಲೇ– ನನಗೆ ಬಿದ್ದ ಪೆಟ್ಟುಗಳು ಬಯಲಿಗೆ ಬಂದುವು! ನಮ್ಮ ಆಳಿಗೂ ಸಹ ಹತ್ತು ಹನ್ನೆರಡು ಪೆಟ್ಟು ತಾಕಿದ್ದವು. ಅವು–ಹತ್ತು ವರ್ಷಗಳಿಂದ ಮರೆತುಹೋಗಿದ್ದ ವರಸೆ ನೆನಪಿಗೆ ಬರುವುದಕ್ಕಿಂತ ಮುನ್ನ ತಾಕಿದ ಪೆಟ್ಟುಗಳು. ಆ ಮೂವರನ್ನು ಗಾಡಿಯ ಹಿಂದೆ ನಡೆಯಿಸಿಕೊಂಡು ಬರುತ್ತ ಅವನು ಅವರನ್ನು ಹೊಡೆದವನು ಹೊಡೆದಂತೆಯೇ ಇದ್ದನು. ನಾನು 'ಲೋ, ಬಡ್ಡೀಮಗನೇ, ಹೊಡೀಬೇಡ್ವೋ' ಎಂದೆ. ಅವನು 'ಈ ಸೂಳೇಮಕ್ಕಳನ್ನಾ! ಊರು ಬರಲಿ, ಆಗ ತಿಳಿಸ್ತೇನೆ. ಹುಟ್ಟಿಲ್ಲಾಂತ ಅನ್ನಿಸಿಬಿಡ್ತೇನೆ' ಎನ್ನುತ್ತ ಕೈಯಲ್ಲಿನ ಚುಟುಕಿನಂಥ ಬರಲಿನಿಂದ ಸೆಳೆ ಸೆಳೆದು ಹೊಡೆಯುತ್ತಿದ್ದಾನೆ. ಇದಕ್ಕಾಗಿಯೇ ಅವನು ಹಾದಿಯಲ್ಲೊಂದು ಬರಲನ್ನು ಬೇರೆ ಸಂಪಾದಿಸಿದ್ದ

ಆ ಊರು ಸೇರಿಕೊಂಡೆವು. ಗಾಡಿಗಳ ಗಡಗಡ ಸದ್ದು, ಎತ್ತುಗಳ ಕೊರಳ ಗಂಟೆಗಳ ಟಿಂಟಿಣಿ, ಹೆಂಗಸರು–ಮಕ್ಕಳ ಕಲಕಲ ರವ, ನಮ್ಮ ಜೀತದಾಳಿನ ಕೋಪದ ಮಾತುಗಳು– ಈ ಎಲ್ಲ ಗಲಾಟೆಗೆ, ಆ ಊರಿನಲ್ಲಿ ಅನೇಕರು ಎಚ್ಚರಗೊಂಡು ಹೊರಬಂದು ನಮ್ಮ ಗಾಡಿಗಳ ಸುತ್ತಲೂ ವಿಷಯವೇನೆಂದು ಗುಂಪುಕೂಡಿದರು. ವಿಷಯವನ್ನೆಲ್ಲಾ ತಿಳಿದುಕೊಂಡು ನಾನು ಆ ದಿನ, ನಮ್ಮ ಸ್ವಂತ ಚಿಕ್ಕಮ್ಮನವರ ಊರಿನಿಂದ ಓಡಿಹೋದಾಗ ನನ್ನನ್ನು, ನನ್ನ ಸಾಕುತಂದೆಯ ಊರಿನವರು ಥಳಿಸಿದ ಹಾಗೆಯೇ ಆ ಊರಿನವರು ಆ ಮೂರು ಜನರನ್ನೂ ಚೆನ್ನಾಗಿ ಥಳಿಸತೊಡಗಿದರು. ಏನೆಂಥ ಹೊಡೆತಗಳು! ಅದನ್ನು ನೋಡಲಾರದೆ ನಾನು 'ನೀವಿನ್ನು ಅವರನ್ನು ಹೊಡೆದಿರೆಂದರೆ, ನಾನವರನ್ನು ಬಿಟ್ಟುಬಿಡುತ್ತೇನೆ' ಎಂದು ಕೂಗಿದೆ. ಆಗ ಮಾತ್ರವೇ ಅವರು ಹೊಡೆಯುವುದನ್ನು ನಿಲ್ಲಿಸಿದರು. ಆ ಹಾವಾಡಿಗನಿಗೆ ಇನ್ನೂ ಎಚ್ಚರ ಬಂದಿರಲಿಲ್ಲ. ಅವನನ್ನು ಗಾಡಿಯ ಇರ್ಚಿ ಮರಕ್ಕೆ ಇಳಿಬಿಟ್ಟಿದ್ದರಿಂದ, ಚಕ್ರಗಳ ಸಂದುಗಳ ಮೂಲಕ ಗಿಡ–ಗಂಟೆಗಳ ಮೊನೆಗಳು, ಮುಳ್ಳಿನ ಪೊದೆಗಳ ಚೂಪು ಮುಳ್ಳುಗಳು ಅವನ ಮುಖಕ್ಕೆ ರಾಚಿ, ಚುಚ್ಚಿ, ರಕ್ತಸಿಕ್ತವಾಗುವಂತೆ ಮಾಡಿಬಿಟ್ಟಿದ್ದುವು. ಅವನನ್ನು ನೋಡಿದರೆ ನನಗೇನೇ ಅಯ್ಯೋ ಎನ್ನಿಸಿತು. ಅವನ ಮುಖಕ್ಕೆ ಒಂದಿಷ್ಟು ನೀರು ಚೆಲ್ಲಿದೆ. ಬೆಳಕು ಹರಿಯುವುದರೊಳಗೆ ಅವನಿಗೆ ಎಚ್ಚರ ಬಂದಿತು.

ಸೂರ್ಯೋದಯವಾದಮೇಲೆ, ಆ ನಾಲ್ಕು ಜನರನ್ನೂ ಆ ಊರಿನ ಪಟೇಲ ಹಾಗೂ ಶ್ಯಾನುಭೋಗರಿಗೆ ಒಪ್ಪಿಸಿದೆವು. ಇನ್ನುಳಿದ ಮೂವರು ಹಾವಾಡಿಗರಲ್ಲ. ಇಬ್ಬರು ಕೊರವಂಜಿ

ಜಾತಿಯವರು. ಇನ್ನೊಬ್ಬ ಕೊರಚರವನು. ಅವರು, ಎಷ್ಟು ಒದ್ದರೂ, ತಮ್ಮ ಬಗ್ಗೆ ಬಾಯಿ ಬಿಡಲಿಲ್ಲ. ಆ ಹಾವಾಡಿಗ ಮಾತ್ರ ಎಷ್ಟು ಥಳಿಸಿದರೂ–ಒಂದೇ ಕಥೆ ಬೊಗಳತೊಡಗಿದ– ನಾನು ಅವನ ಅಣ್ಣನ ಮಗನಂತೆ! ಓಡಿಬಂದು ಒಕ್ಕಲಿಗರಲ್ಲಿ ಸೇರಿಕೊಂಡುಬಿಟ್ಟೆನಂತೆ! ನನ್ನನ್ನು ಪುನಃ ತಮ್ಮಲ್ಲಿ ಸೇರಿಸಿಕೊಳ್ಳುವುದಕ್ಕಾಗಿಯೇ ಅವನೀ ಕೆಲಸಕ್ಕೆ ಕೈಹಾಕಿದನಂತೆ!

ನಾನು 'ಸರಿಯೇ, ನಾನು ನಿನ್ನ ಅಣ್ಣನ ಮಗನಾಗಿದ್ದರೆ, ಈ ಎರಡು ವರ್ಷಗಳಿಂದ ನಾನು ನಮ್ಮ ಸೋದರಮಾವನವರ ಊರಿನಲ್ಲಿದ್ದೆನಲ್ಲಾ? ನೀನೇಕೆ ಅಲ್ಲಿಗೆ ಬಂದು ನನ್ನನ್ನು ಕಳಿಸಿಕೊಡಿ ಅಂತ ಕೇಳಲಿಲ್ಲ?' ಎಂದು ಅವನನ್ನು ಪ್ರಶ್ನಿಸಿದೆ. ಅದಕ್ಕೆ ಅವನು–

'ಆ ಊರಿನಲ್ಲಿ ಎಲ್ರೂ ಕತ್ತಿವರಸೆ, ದೊಣ್ಣೆವರಸೆ ಬಲ್ಲವರಿದ್ದಾರೆ. ಆದ್ದರಿಂದ ನಾನು ಆ ಊರಿಗೆ ಬರಲಿಲ್ಲ' ಎಂದ.

'ಅಂದ್ರೆ, ಇಷ್ಟು ದಿನವೂ ನೀನು ನನ್ನ ಮೇಲೊಂದು ಕಣ್ಣಿಟ್ಟಿದ್ದೆ ಹಾಗಾದ್ರೆ?'

'ಇಟ್ಟಿದ್ದೆ, ಇಟ್ಟೇ ಇಡುತ್ತೀನಿ.'

'ಹಾಗೇ ಆಗಲಿ! ಕಣ್ಣಿಟ್ಟಿರುವೆಯಂತೆ ಬಿಡು! ನಾನು ನಿಮ್ಮಣ್ಣನ ಮಗನಾಗಿದ್ದರೆ, ಚಿಕ್ಕಂದಿನಿಂದಲೂ ನಿಮ್ಮಲ್ಲಿಯೇ ಬೆಳೆದವನಲ್ವೇ?'

–ಅವನ ಬುದ್ಧಿವಂತಿಕೆ ನೋಡಿ ಹೇಗಿದೆ?–

'ಚಿಕ್ಕಂದಿನಲ್ಲೊಂದು ಸಲ ನೀನು ಓಡಿಹೋಗಿದ್ದೆ ಆಗ ಪುನಃ ಹಿಡ್ಕೊಂಡು ಬಂದೊ.'

'ನನ್ನ ವಯಸ್ಸೆಷ್ಟು ಈಗ? ಎಷ್ಟನೇ ವಯಸ್ಸಿನಲ್ಲಿ ನಾನು ಹಾಗೆ ಓಡಿಹೋದದ್ದು?' ಎಂದು ಕೇಳಿದೆ.

ಅದಕ್ಕೆ ಅವನು ತಟಪಟಾಯಿಸಿ–

'ನಿನಗೀಗ ಹತ್ತೊಂಬತ್ತು ವರ್ಷ. ಹತ್ತನೇ ವರ್ಷದಲ್ಲಿ ಓಡಿಹೋಗಿದ್ದೆ' ಎಂದ. ನಾನು ಸುಮ್ಮನೇ ಇದ್ದೆ. ನಮ್ಮತ್ತೆ ಇದನ್ನೆಲ್ಲಾ ನಂಬುತ್ತಿರುವಳು! ನಮ್ಮೊಂದಿಗೆ ಬಂದಿದ್ದ ಕಮ್ಮಾ ಜನರ ಪೈಕಿ ಒಬ್ಬಾಕೆ.

'ಅಯ್ಯೋ! ಮಹಾರಾಯ! ನೀನು ಅವರೊಂದಿಗೇನೇ ಹೋಗಿಬಿಟ್ಟಿದ್ದಿದ್ರೆ ಸರಿಯಾಗ್ತಿತ್ತಲ್ಲಯ್ಯಾ! ನಮ್ಮೆಲ್ಲರ ಪ್ರಾಣಕ್ಕೆ ಸಂಚಕಾರ ತಂದಿದ್ದೆಯಲ್ಲೋ?' ಎಂದುಬಿಟ್ಟಳು! ನಾನು ಹಾವಾಡಿಗನೊಂದಿಗೆ–

'ಸರಿಯೇ. ಆ ದಿನ ನಸುಕಿನಲ್ಲಿ ನಿಮ್ಮಿಂದ ನಾನು ತಪ್ಪಿಸಿಕೊಂಡು ಓಡಿಬಂದೆನಲ್ಲಾ, ಅದಕ್ಕಿಂತ ಮುಂಚೆ ಯಾವಾಗ ನೀನು ನನ್ನನ್ನು ಹಿಡಿದುಕೊಂಡಿದ್ದು?' ಎಂದು ಪ್ರಶ್ನಿಸಿದೆ. ಆಗ ಅವನು ಒಂದು ತಪ್ಪು ಮಾಡಿದ–

'ಒಂದು ವರ್ಷದ ಹಿಂದೆ!' ಎಂದುಬಿಟ್ಟ. ಹತ್ತು ದಿನಗಳ ಮುಂಚೆ ಎಂದು ಎಲ್ಲಿ ನುಡಿದುಬಿಡುತ್ತಾನೋ ಎಂದು ನನ್ನ ಎದೆ ಗುಂಡಿಗೆ ಡವಡವ ಹೊಡೆದುಕೊಳ್ಳುತ್ತಿತ್ತು. ಸಧ್ಯ ಬದುಕಿದೆಯಾ ಬಡಜೀವವೇ! ಎಂದುಕೊಂಡೆ. ಅವನೇನಾದರೂ ಹತ್ತು ದಿನಗಳ ಮುಂಚೆ– ಎಂದೇನಾದರೂ ನುಡಿದುಬಿಟ್ಟಿದ್ದಿದ್ದರೆ–ನನಗಿನ್ನು ಗತಿಯೇ ಇಲ್ಲದಂತಾಗುತ್ತಿತ್ತು!

'ಒಂದು ವರ್ಷದವರೆಗೆ ನಿಮ್ಮ ಜೊತೆಯಲ್ಲಿಯೇ ಇದ್ದೆನಲ್ಲವೇ? ಆ ವಿಷಯವನ್ನೇ ಉಂಟು ಮಾಡಿಸುವೆಯಂತೆ. ನಿನ್ನನ್ನು ನಾನು ನನ್ನೊಂದಿಗೆ ಕರೆದೊಯ್ಯುತ್ತೇನೆ. ಅದನ್ನು ಋಜುಪಡಿಸುವೆಯಂತೆ' ಎಂದು ನುಡಿದೆ.

ಮಿಕ್ಕ ಮೂರು ಜನರನ್ನು–ಊರಿನವರು ಚೆನ್ನಾಗಿ 'ಹಣ್ಣುಗಾಯಿ ನೀರುಗಾಯಿ' ಮಾಡಿದ ಮೇಲೆಯೇ ಅವರು ನಿಜ ನುಡಿದರು–ಆ ಹಾವಾಡಿಗ ತಮ್ಮ ಕಳ್ಳರ ಗುಂಪಿಗೆ ನಾಯಕರಲ್ಲೊಬ್ಬನೆಂತಲೂ, ತಾವು ಮಾತ್ರ ಎಂದೂ ಕಳ್ಳತನ ಮಾಡಿಲ್ಲವೆಂತಲೂ, 'ಒಬ್ಬ ಹುಡುಗ ಹತ್ತು ದಿನ ತಮ್ಮೊಂದಿಗಿದ್ದು ತಪ್ಪಿಸಿಕೊಂಡು ಓಡಿಹೋಗಿದಾನೆ, ಅವನನ್ನು ಹಿಡಿಯೋಣ ಬನ್ನಿ' ಎಂದು ಕರೆದುಕೊಂಡು ಬಂದನೆಂತಲೂ ತಿಳಿಸಿದರು.

ಅವನು ಈ ಎರಡು ವರ್ಷಗಳಿಂದಲೂ ನನ್ನನ್ನು ಹಿಡಿಯಬೇಕೆಂದು ಹೊಂಚುಹಾಕುತ್ತಲೇ ಇದ್ದನಂತೆ. ನನ್ನ ದಿನನಿತ್ಯದ ಆಗುಹೋಗುಗಳನ್ನು ಅವನು ಕಂಡುಕೊಳ್ಳುತ್ತಲೇ ಇದ್ದನಂತೆ! ಆದರೆ ನಮ್ಮ ಸೋದರಮಾವನವರ ಊರಿನ ಬಲ ನೋಡಿಕೊಂಡು ಅಲ್ಲಿಗೆ ಕಾಲಿಡುವ ಸಾಹಸ ಮಾಡಲಿಲ್ಲವಂತೆ! ಆ ಕಾಲದಲ್ಲಿ ಹಳ್ಳಿಗಳಲ್ಲಿ ಒಂದು ಪದ್ಧತಿಯಿತ್ತು. ಒಬ್ಬ 'ಚುಂಡು' ಜಾತಿಯವನೋ, ಒಬ್ಬ ಕೊರಚರವನೋ ಪ್ರತಿ ಹಳ್ಳಿಗೂ ಗಸ್ತು ತಿರುಗುತ್ತಿದ್ದ. ಆ ಊರಿನವರು ಅವನಿಗೆ ಮನೆಗೊಂದು ಮೊರದಷ್ಟು ಕಾಳುಕಡ್ಡಿ ಅಳೆಯುತ್ತಿದ್ದರು. ಊರಿನ ಮೇಲೆ ಕಳ್ಳರು ಬೀಳದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಅವನದಾಗಿರುತ್ತಿತ್ತು. ಅಂಥವನಿಗೆ ಸಾಮಾನ್ಯವಾಗಿ, ಆ ಸುತ್ತುಮುತ್ತಲಿರುವ ಎಲ್ಲ ಕಳ್ಳರೊಂದಿಗೂ ಲೇವಾದೇವಿಗಳಿದ್ದೇ ಇರುತ್ತಿದ್ದವು. ಅವನು ಊರಿನಲ್ಲಿದ್ದಷ್ಟು ದಿನವೂ ಕಳ್ಳರಾರೂ ದಾಳಿ ನಡೆಸುತ್ತಿರಲಿಲ್ಲ. ನಮ್ಮ ಸೋದರಮಾವನವರ ಊರಿನಲ್ಲೊಬ್ಬ 'ಚುಂಡು' ನಾಯಕನಿದ್ದ. ಅವನಿಂದಾಗಿಯೇ ಇವರಾರೂ ಅತ್ತ ನನ್ನನ್ನು ಹಿಡಿಯುವ ಕೆಲಸಕ್ಕೆ ಕಾಲು ಹಾಕಲಿಲ್ಲವಂತೆ.

ಅವರು ಈ ಮಾತು ತಿಳಿಸುತ್ತಲೇ, ನಮ್ಮೂರ ಆ 'ನಾಯಕ'ನ ಮೇಲೆ ನನಗೊಂದು ತೆರನಾದ ಅಭಿಮಾನ ಉಂಟಾಯಿತು. ನನ್ನ ಮೇಲೆ ಅವನಿಗೇಕೆ ಇಷ್ಟೊಂದು ಪ್ರೇಮ ಎನ್ನಿಸಿತು. ತಟ್ಟನೆ ನನಗೊಂದು ವಿಷಯ ನೆನಪಿಗೆ ಬಂದಿತು–ನಾನು ನನ್ನ ಸೋದರಮಾವನವರ ಊರು ಸೇರಿಕೊಂಡ ಹೊಸತರಲ್ಲಿ–ಆ ನಾಯ್ಕರವನ ನಾಲ್ಕು ವರ್ಷದ ಹೆಣ್ಣು ಮಗು ಕೆರೆಗೆ ಬಿದ್ದು ಸತ್ತುಹೋಗುವುದರಲ್ಲಿತ್ತು. ಆಗ ಆ ಮಗುವನ್ನು ನಾನು ಬಯಲಿಗೆಳೆದು ಬದುಕಿಸಿದೆ. ಆಗ ಅವನು ನನ್ನೊಂದಿಗೊಂದು ಮಾತು ಆಡಿದ್ದ–'ಬುದ್ದೀ, ನೀವ್ ನ್ನ ಮಗೀನ ಬದುಕಿಸಿದ್ರಿ ಯಾವ ಬಡ್ಡೀಮಗನಾದರೂ ನಿಮ್ಮೇಲೆ ಕೈಮಾಡಾಕೆ ಬಂದಾಂತಂದ್ರೆ, ಅವನ ರುಂಡ ಮುಂಡದಿಂದ ಬೇರ್ಪಟ್ಟಿತೆಂದೇ ತಿಳ್ಕಳ್ಳಿ ಬುದ್ದೀ!'

–ಅಂದರೆ, ನಾನು ಆ ಹೆಣ್ಣುಮಗುವನ್ನು ಕಾಪಾಡುವುದಕ್ಕಿಂತ ಮುಂಚೆಯೇ ಈ ಹಾವಾಡಿಗ ಅವನೊಂದಿಗೆ ತಂತ್ರ ನಡೆಸಲೆತ್ನಿಸಿದ್ದನೆಂಬುದು ಸ್ಪಷ್ಟವೇ! ಹಾಗಾದರೆ ಇವನು ತನ್ನ ಗುಂಪಿನೊಂದಿಗೆ–ನಮ್ಮ ಮೇಲೆ ದಾಳಿಮಾಡುವ ವಿಷಯವೂ ಸಹ ಅವನಿಗೆ ಗೊತ್ತಿತ್ತೇ? ಎನ್ನಿಸಿತು. ಗೊತ್ತಿರಲಿಕ್ಕಿಲ್ಲವೇನೋ ಎಂದುಕೊಂಡೆ. ಆದರೆ ಅವರಲ್ಲಿ ಒಂದು ಕಟ್ಟಳೆ ಇರುತ್ತದೆ.

ಊರಿನಲ್ಲಿರುವಷ್ಟುರ ತನಕವೇ ಅವರ ಹೊಣೆ. ಊರಿನ ಮೇರೆ ದಾಟಿದ ಮೇಲೆ ಏನು ನಡೆದರೂ ಅದಕ್ಕೆ ತಮ್ಮ ಸಂಬಂಧವಿಲ್ಲ ಎನ್ನುತ್ತಾರೆ!

ಆ ದಿನ ಮಧ್ಯಾಹ್ನವೆಲ್ಲಾ ನಮ್ಮತ್ತೆಯೂ, ಆ ಕಮ್ಮಾ ಹೆಂಗಸೂ ಸುಮ್ಮನೆ ವಟಗುಟ್ಟುತ್ತಲೇ ಇದ್ದರು. ನಾನು, ಹೊತ್ತು ಕಂತುವುದರೊಳಗೆ ಅವನು ಹೇಳಿದ್ದೆಲ್ಲಾ ಸುಳ್ಳು ಎಂದು ನಿರೂಪಿಸುತ್ತೇನೆ– ಎಂದು ತಿಳಿಸಿದೆ. ನಮ್ಮತ್ತೆಗೆ ಅನುಮಾನ ಪೆಡಂಭೂತವಾಗಿಬಿಟ್ಟಿತ್ತು. ನಾನೆಷ್ಟು ಹೇಳಿದರೂ ಆಕೆ ಕೇಳುವ ಸ್ಥಿತಿಯಲ್ಲಿರಲಿಲ್ಲ–'ಮುಡಿಪು ಸಲ್ಲಿಸೋದು ಗಿಲ್ಲಿಸೋದು ಏನೂ ಬೇಡ. ತಿರುಪತಿಗೆ ನಾನು ಇನ್ನಾವಾಗಲಾದ್ರೂ ಹೋಗ್ತೇನೆ. ಈಗ ಮಾತ್ರ ನಾನು ಜಪ್ಪಯ್ಯಾಂದ್ರೂ ತಿರುಪತಿಗೆ ಬರೋಲ್ಲ. ಈಗಿಂದೀಗಲೇ ನಾನು ಊರಿಗೆ ಹಿಂತಿರುಗಿಬಿಡ್ತೇನೆ' ಎಂದು ಹಟ ಹಿಡಿದಳು. ನಮ್ಮ ಜೀತದಾಳು 'ಸಾಕು ಬಿಡ್ರಮ್ಮಾ! ಆ ಹಾವಾಡಿಗ ಬಡ್ಡೀಮಗನಾಡಿದ ಮಾತು ನಂಬ್ತೀರಾ? ಇವ್ರ ಚಿನ್ನದಂಥಾ ಬುದ್ಯೋರು ಇವ್ರಿಗೇನು? ಇವ್ರ ಹಾವಾಡಿಗರೇ ಆಗಿದ್ದಲ್ಲಿ ಈಟೊಂದು ಚೆಂದಾಗಿ ಬ್ರಾಂಬ್ರು ಮಾತಾಡಿದಂತ ಮಾತಾಡ್ತಾರಾ? ನಮ್ಮ ಬುದ್ಯೋರಿಗೆ ನೀವ್ರ ಹಾಕೋದು ಒಂದಿಷ್ಟು ಅನ್ನ ತಾನೇ? ನೀವೇನಾದ್ರೂ ಮಗಳ್ನ ಕೊಟ್ಟೀರಾ? ಮನೆಮಾರು ಕೊಟ್ಟೀರಾ? ಈ ಬುದ್ಯೋರು ಬರುವಂತಿಲ್ಲವಾದ್ರೆ ನಾನೂ ಬರೋಲ್ಲ ನಿಮ್ ಕೊಂಪೆಗೆ! ನಿಮಗೆ ನಾನು ಜೀತದಾಳೂ ಆಗಿರೋಲ್ಲ, ನೋಡ್ಕಳ್ಳಿ ಅಮ್ಮಾವ್ರೇ!' ಎಂದು ತಟಪಟನೆ ನಾಲ್ಕು ಬಿರುಸು ಮಾತುಗಳನ್ನಾಡಿದ ಗಟ್ಟಿಯಾಗಿ!

ನಾನು ಆ ಊರಿನ ಪಟೇಲರನ್ನು ಬೇಡಿಕೊಂಡು, ಮಿಕ್ಕ ಆ ಮೂವರನ್ನು ಬಿಡಿಸಿದೆ. ಕೇಸುಗೀಸು ಹಾಕಿದರೆ, ಕೋರ್ಟಿನ ಸುತ್ತಲೂ, ಪೋಲೀಸರ ಸುತ್ತಲೂ ತಿರುಗಲಾರದೆ ಹೆಣವಾಗ್ತೇವೆ ಎಂದು ನಮ್ಮತ್ತೆಗೂ ಭಯವೇ. ಆ ಪಟೇಲ ಆ ಮೂವರಿಗೂ ಭಾರೀ ಮೊದ್ದುಗಳ ಬೇಡಿಗಳನ್ನು ಕಾಲಿಗೆ ಹಾಕಿಸಿದ. ಮರುದಿನ ಬೆಳಿಗ್ಗೆ ಬಿಟ್ಟುಬಿಡ್ತೇನೆ– ಎಂದು ತಿಳಿಸಿದ. ಹಾವಾಡಿಗನನ್ನು ಮಾತ್ರವೇ ನನ್ನ ಹಿಂದೆ ಕರೆದೊಯ್ಯುತ್ತೇನೆ ಎಂದು ಕೇಳಿಕೊಂಡೆ. ಆ ಪಟೇಲ ಹಾಗೂ ಶ್ಯಾನುಭೋಗರಿಬ್ಬರೂ ಮೊದ ಮೊದಲು ಒಪ್ಪಲಿಲ್ಲ. ಆಗ ನಾನು 'ಮತ್ತೇತಕ್ಕೂ ಅಲ್ಲ. ಇಲ್ಲಿಗೆ ನಾಲ್ಕು ಹರದಾರಿಗಳ ದೂರದಲ್ಲಿ ಒಂದು ಊರಿದೆ. ನಾನು ವರ್ಷದಿಂದಲೂ ತಮ್ಮಲ್ಲಿಯೇ ಇದ್ದೆನೆಂದು ತಿಳಿಸಿದನಲ್ಲಾ! ಆ ಮಾತಿನಲ್ಲೆಷ್ಟು ಸುಳ್ಳಿದೆಯೋ ನಮ್ಮತ್ತೆಯವರಿಗೆ ತೋರಿಸಿ, ಅನಂತರ ಇವನನ್ನು ಪುನಃ ನಿಮ್ಮೂರಿಗೆ ಕಳಿಸಿಕೊಡ್ತೇನೆ. ನಿಮಗಷ್ಟು ಬೇಕಾಗಿದ್ರೆ ನಿಮ್ಮ ತಳವಾರನನ್ನು ನಮ್ಮ ಜೊತೆಯಲ್ಲಿ ಕಳಿಸಿಕೊಡಿ. ಇವನನ್ನು ಆ ತಳವಾರನ ಜೊತೆ ಮಾಡಿ ಕಳಿಸುತ್ತೇನೆ' ಎಂದೆ. ಅವರಿಬ್ಬರೂ ಸ್ವಲ್ಪ ಹೊತ್ತು ಹಿಂದೆ ಮುಂದೆ ಕೇಸು ಗೀಸು ಏನೂ ಇಲ್ಲವೆಂದಾದ ಮೇಲೆ, 'ನಮ್ಮ ತಳವಾರನೂ ಬೇಡ, ಯಾರೂ ಬೇಡ, ಕರಕೊಂಡು ಹೋಗಿ' ಎಂದರು.

ಆ ದಿನ ಅಡುಗೆ ಮಾಡಿಕೊಂಡು, ಊಟವಾದ ಮೇಲೆ ಮತ್ತೆ ನಮ್ಮ ಪ್ರಯಾಣವನ್ನು ಮುಂದುವರೆಸಿದೆವು. ಹಾವಾಡಿಗರವನ ಕೈಗಳನ್ನು ಬೆನ್ನ ಹಿಂದಕ್ಕೆ ತಿರುಗಿಸಿ, ಕಟ್ಟಿ, ನಮ್ಮ

ಆಳು ನಡೆಯಿಸಿಕೊಂಡು ಬರುತ್ತಿದ್ದನು. ಹಗಲು ಹೊತ್ತಾದುದರಿಂದ ಅವನ ಅನುಯಾಯಿಗಳು ಬಂದು ಬಿಡಿಸಿಕೊಂಡು ಹೋಗುತ್ತಾರೆಂಬ ಭಯ ನನಗಿಲ್ಲದಾಗಿತ್ತು.

ದಾರಿ ಸಾಗುತ್ತಿದ್ದೆವು. ನಾನು ಯಾರೊಂದಿಗೂ ಮಾತನಾಡದೆ, ಗಾಡಿಗಳ ಹಿಂದೆ ನಡೆದುಕೊಂಡೇ ಹೋಗುತ್ತಿದ್ದೆನು. ಇಷ್ಟು ಕಷ್ಟಗಳು ಎಡತಾಕಿದರೂ ನಾನು ಜಗಮೊಂಡನಲ್ಲದಿದ್ದರೆ ನಾನೇಕೆ ಹೀಗೆ ಪಟ್ಟು ಹಿಡಿದು ಕುಳಿತುಕೊಳ್ಳುತ್ತಿದ್ದೆ? ನನ್ನ ಸ್ಥಾನದಲ್ಲಿ ಮತ್ತಾರೇ ಇದ್ದರೂ ಅವರು–ಛೀ! ಇದೆಲ್ಲಿಯ ಪೀಡೆಯಪ್ಪಾ ಎಂದು ಓಡಿಹೋಗಿಬಿಡುತ್ತಿದ್ದರು. ದೇವರು ನನಗೊಂದು ಮೊಂಡುತನವನ್ನು ದಯಪಾಲಿಸಿದ್ದನು. ಯಾವುದೇ ಆಗಲಿ ಅದು ಪೂರ್ತಿಯಾಗಿ ಬಗೆಹರಿಯುವ ತನಕ ನಾನಲ್ಲಿಂದ ಕದಲುವವನಲ್ಲ. ನನ್ನ ತಾತನವರ ಮನೆಯಿಂದ ಕದಲಿದೆನೆ? ನನ್ನ ಸಾಕುತಂದೆಯ ಮನೆಯಿಂದ ಕದಲಿದೆನೆ?

ಸಂಜೆಯಾಗುವುದರೊಳಗೆ ನಾವು ಆ ಊರು ಸೇರಿದೆವು. ಆ ಊರು ಯಾವುದೆಂದರೆ–ನಾನು ಗೊಲ್ಲರವನನ್ನು ಬೀಳ್ಕೊಂಡು ಬಂದಾಗ–ನನಗೆ ಅನ್ನವಿತ್ತು, ನಸುಕಿನಲ್ಲಿಯೇ ಎಬ್ಬಿಸಿ, ಬುತ್ತಿ ಕಟ್ಟಿಕೊಟ್ಟು ಕಳಿಸಿದ್ದಳಲ್ಲಾ–ಕಳಿಸಿಕೊಡುತ್ತಾ–ನಿನ್ನ ಈ ಚಿಕ್ಕಮ್ಮನನ್ನು ಮತ್ತೆ ಯಾವಾಗಲಾದರೂ ಬಂದು ನೋಡಿಕೊಂಡು ಹೋಗುತ್ತೀ ತಾನೇ ಎಂದು ನುಡಿದಿದ್ದಳಲ್ಲಾ– ಆ ತಂಪು ಹೃದಯದ ಆ ತಾಯಿಯ ಊರು. ಗಾಡಿಗಳನ್ನು ಏಕಾಏಕಿ ಅವರ ಮನೆಯಂಗಳದಲ್ಲಿಯೇ ನಿಲ್ಲಿಸಿದೆವು. ಗಾಡಿಗಳು ತಮ್ಮ ಮನೆಯಂಗಣದಲ್ಲಿಯೇ ನಿಂತುಕೊಂಡಿದ್ದರಿಂದ, ಬಂದವರು ಯಾರಿರಬಹುದೆಂದು ಹೊರಬಾಗಿಲಿಗೆ ಬಂದು ನಿಂತು ನೋಡಿದಳು ಚಿಕ್ಕಮ್ಮ. ನನ್ನನ್ನು ತಟ್ಟನೆ ಗುರುತು ಹಿಡಿಯಲಿಲ್ಲ. ಆಮೇಲೆ ಗುರುತು ಹಿಡಿದಳು. ಕೂಡಲೇ ಬಂದು ನನ್ನನ್ನು ಅಪ್ಪಿಕೊಂಡಳು 'ಮಗೂ! ಎಷ್ಟು ದಿನಗಳಿಗೆ ಬಂದೆ ಮಗೂ!' ಎಂದಳು.

ಅದೇನು ವಿಚಿತ್ರವೋ!–ಆಕೆಯ ಮುಖ ನೋಡುತ್ತಿದ್ದಷ್ಟು ಹೊತ್ತೂ. ಆಕೆ ಮಾತನಾಡುತ್ತಿದ್ದಷ್ಟು ಹೊತ್ತೂ, ಸತ್ತುಹೋದ ನನ್ನ ತಾಯಿಯೇ ಮತ್ತೆ ಬದುಕಿ ಬಂದಿರುವಳೇ ಎಂದೆನ್ನಿಸಿತು. ನನ್ನ ತಾಯಿಯ ಮೊಗವನ್ನು ನಾನು ಕಂಡರಿಯೆನಾಗಲೀ, ಆಕೆಯನ್ನು ಅಮ್ಮಾ ಎಂದು ಅದೇಕೆ ಕರೆಯುತ್ತಿರುವೆನೋ ನಾನರಿಯೆ. ನನ್ನ ಹೆತ್ತಮ್ಮ ಆಕೆಯ ರೂಪದಲ್ಲಿ ಬಂದಿದ್ದಾಳೆಂದೇ ನನ್ನ ನಂಬಿಕೆ.

## ೧೦

ಹಾವಾಡಿಗನನ್ನು ಬಂದಿಯನ್ನಾಗಿ ಕೊಂಡೊಯ್ದುದರಿಂದ ಆ ಊರಿನ ಜನರೆಲ್ಲರೂ ನಮ್ಮ ಸುತ್ತ ಗುಂಪು ಕೂಡಿದರು. ನನ್ನ ಆ ತಾಯಿ ನನ್ನನ್ನು ಹಾಗೆ ಆಲಿಂಗಿಸಿಕೊಂಡಿದ್ದನ್ನು ಕಂಡು ನಮ್ಮ ಅತ್ತೆ ಆ ಕುಮ್ಮಾ ಆಸಾಮಿಯ ಹೆಂಡತಿ ಇಬ್ಬರೂ ತುಂಬ ಆಶ್ಚರ್ಯಚಕಿತರಾದರು. ನನ್ನ ಆ ತಾಯಿ– ನನ್ನ ಯೋಗಕ್ಷೇಮಗಳನ್ನು ತಿಳಿದುಕೊಂಡ ಮೇಲೆ "ನೀನು ನನ್ನನ್ನು ನೋಡಿ ಎಷ್ಟು ದಿನಗಳಾಯಿತಮ್ಮಾ?' ಎಂದು ಕೇಳಿದೆ. 'ಎರಡು ವರ್ಷಗಳ ಮೇಲೆಯೇ

ಆಗಿದೆ ಮಗೂ' ಎಂದಳಾಕೆ. ನಾನು ಹಾವಾಡಿಗನನ್ನು ಮುಂದಕ್ಕೆ ಕರೆದು 'ಏನೋ, ನಿನ್ನ ಲೆಕ್ಕಾಚಾರದ ಪ್ರಕಾರ ಈಕೆ ನನ್ನನ್ನು ನೋಡಿ ಮೂರು ವರ್ಷಗಳ ಮೇಲೆಯೇ ಆಗಿರಬೇಕಲ್ಲ? ಈಗೇನು ಹೇಳುತ್ತಿ?' ಎಂದು ಕೇಳಿದೆ. ಅವನು ಸುಮ್ಮನೇ ಇದ್ದ. ನಮ್ಮತ್ತೆಗೂ ಮತ್ತಿತರರಿಗೂ ಅವನು ಸುಳ್ಳು ಬೊಂಕಿದ್ದಾನೆಂಬುದು ಖಚಿತವಾಯಿತು. ಆದಾಗ್ಯೂ ನಾನು ಅವನನ್ನು ಅಷ್ಟಕ್ಕೇ ಬಿಟ್ಟುಬಿಡಲಿಲ್ಲ–'ನಿನ್ನನ್ನು ನನ್ನ ಸಾಕುತಂದೆಯವರ ಊರಿಗೂ ಕರೆದೊಯ್ದು ಅಲ್ಲಿಯೂ ಸಹ ಸತ್ಯಸಂಗತಿಯನ್ನು ಬಯಲಿಗೆ ಹಾಕಿಯೇ ನಿನ್ನನ್ನು ಬಿಡೋದು' ಎಂದೆ. ಅವನೆಂಥಾ ಮೊಂಡು ಘಟವೋ ಏನೋ~ ಒಂದು ರಾತ್ರಿಯೆಲ್ಲಾ, ಒಂದು ಹಗಲೆಲ್ಲಾ, ಅವನ ಕೈಗಳನ್ನು ಹಿಂದಕ್ಕೆ ಹುರಿ ತಿರುಗಿಸಿ, ಬೆನ್ನ ಹಿಂದೆ ಬಿಗಿಯಾಗಿ ಕಟ್ಟಿದ್ದರೂ ಅವನಿಗೆ ರವೆಯಷ್ಟಾದರೂ ಬಾಧೆಯೆಂಬುದೇ ಇಲ್ಲವೆಂದು ತೋಚುತ್ತದೆಯಲ್ಲಾ! ನಮ್ಮ ಜೀತದಾಳು ಬೇಡಬೇಡವೆಂದರೂ ಕೇಳದೆ ನಾನು ಅವನಿಗೆ ಅನ್ನ ಹಾಕಿಸಿದೆ. ಅವನು ಅನ್ನವನ್ನುಣ್ಣುವುದಕ್ಕೆ ಮಾತ್ರ ಅವನ ಬಲಗೈಯೊಂದನ್ನೇ ನಮ್ಮ ಆಳು ಬಿಚ್ಚಲು ಒಪ್ಪಿಕೊಂಡ. ನನಗೂ ಆ ತಾಯಿಗೂ ಬಂಧುತ್ವವಿದೆ ಎಂದೇ ಭಾವಿಸಿದರು.

ಈ ಎರಡು ವರ್ಷಗಳಲ್ಲಿ ಅವರ ಮನೆಯಲ್ಲಿ ಎಷ್ಟೋ ಬದಲಾವಣೆಗಳುಂಟಾಗಿದ್ದವು. ಆಯಮ್ಮನ ಗಂಡನಿಗೆ ಒಂದು ವರ್ಷದಿಂದಲೂ ಉಬ್ಬಸ, ಕೆಮ್ಮಂತೆ. ಆತ ಸರಿಯಾಗಿ ಹೊಲದ ಕೆಲಸಗಳನ್ನು ನೋಡಿಕೊಳ್ಳಲಾರನಂತೆ. ಅಷ್ಟರತನಕ, ರಾಕ್ಷಸನ ಹಾಗೆ ಆಕೆಯ ಮಾತು ಸಾಗಗೊಡುತ್ತಿದ್ದಿಲ್ಲವಂತೆ. ಈಗ ಮನೆಯಲ್ಲಿ ಆಕೆಯದೇ ಯಾಜಮಾನ್ಯ. ಆದ್ದರಿಂದಲೇ ನಾವು–ಎರಡು ಗಾಡಿಯ ಜನ ಇಳಿದುಕೊಳ್ಳುವುದಕ್ಕೆ ಅವರ ಮನೆಯಲ್ಲಿ ಊಟ ಮಾಡುವುದಕ್ಕೆ ಸಾಧ್ಯವಾಯಿತು. ಆಕೆಯ ಹಿರಿಯ ಮಗನಿಗೆ ಈಗ ಹದಿನಾರು ವರ್ಷಗಳು. ಅವನೂ ಸಹ ತಾಯಿ ಯಾವ ಕೆಲಸ ಹೇಳಿದರೂ ಮಾಡುತ್ತಾನೆ. ಅವನು ಮೊದಲು ನನ್ನನ್ನು ನೋಡಿ ಕೊಂಚ ದೂರದೂರವೇ ಇದ್ದರೂ, ಕ್ರಮಕ್ರಮವಾಗಿ, ರಾತ್ರಿಗೆಲ್ಲಾ ನನ್ನೊಂದಿಗೆ ಕಲೆತು, ಕೂಡಿ ಮಾತನಾಡಲಾರಂಭಿಸಿದ. ನನ್ನನ್ನು 'ಏನೋ ಭಾವಾ!' ಎನ್ನುವುದಕ್ಕೆ ತೊಡಗಿದ! ಅವನ ತಾಯಿ 'ಭಾವ ಅನ್ನುತ್ತೀಯಲ್ಲೋ? ಅಣ್ಣಯ್ಯ ಅನ್ನೋ' ಎಂದಳು. 'ಊಹುಂ, ನಾನು ಭಾವಯ್ಯಾಂತಲೇ ಕರೆಯೋದು' ಎಂದ. 'ಹೋಗೋ ಹುಚ್ಚುಮುಂಡೇದೆ' ಎಂದಳು. ನಾನು 'ಅವನು ಹೇಗೆ ಕರೆದರೂ ಏನಂತೆ? ನಾನು ನಿನಗೆ ಮಗ. ನೀನು ನನಗೆ ತಾಯಿ' ಎಂದೆ.

ಇನ್ನು ನನ್ನ ಕಥೆಯಲ್ಲಿ ಚಿಕ್ಕಮ್ಮನೆಂದರೆ ಈಕೆಯೇ.

ನನ್ನ ದೇಹವೆಲ್ಲಾ ಊತ–ಬಾವುಗಳಿಂದ ತುಂಬಿಕೊಂಡು ತುಂಬ ವೇದನೆಯಾಗುತ್ತಿತ್ತು. ನನ್ನ ಚಿಕ್ಕಮ್ಮ ಚೆನ್ನಾಗಿ ನೀರು ಕಾಯಿಸಿ, ಬಿಸಿ ನೀರ ಕಾವು ಕೊಟ್ಟಳು. ಅನಂತರ ಬಿಸಿಬಿಸಿ ನೀರಿನಿಂದ ಸ್ನಾನ ಮಾಡಿಸಿದಳು. ಕೆನೆ ಮೊಸರು ಹಾಕಿ ಅನ್ನ ಬಡಿಸಿದಳು. ಹೊಟ್ಟೆ ತುಂಬ ತೃಪ್ತಿಯಾಗಿ ಊಟ ಮಾಡಿದೆ. ಮಿಕ್ಕವರೆಲ್ಲಾ ಗಾಡಿಗಳಲ್ಲಿಯೇ ಮಲಗಿಕೊಂಡರು.

ನನಗೊಬ್ಬನಿಗೆ ನನ್ನ ಚಿಕ್ಕಮ್ಮ ಒಂದು ಹೊರಸನ್ನು ಹಾಕಿ, ತನ್ನ ಹಳೆಯ ಸೀರೆಯೊಂದನ್ನು–ಅಗಸನ ಮಡಿಕೆಗಳನ್ನು ಬಿಚ್ಚಿ, ಹಾಸಿ, ಮಲಗು ಮಗೂ ಎಂದಳು. ಆ ಹಾಸಿಗೆಯ ಮೇಲೆ ಮಲಗಿಕೊಂಡೆ.....ನನ್ನ ಜೀವ ಯಾವ ಮೂಲೆಗೆ ಹೋಗಿಬಿಟ್ಟಿತೋ....! ಬೆಳಕು ಹರಿಯುತ್ತಿದೆ ಎನ್ನುವಾಗ ನನಗೊಂದು ಕನಸು ಬಿತ್ತು. ಆ ಕನಸಿನಲ್ಲಿ ನಮ್ಮಮ್ಮ ಕಾಣಿಸಿದಳು. ನನ್ನ ಹೆತ್ತಮ್ಮನನ್ನು ನಾನೆಂದೂ ನೋಡಿ ಅರಿಯೆ. ನನ್ನ ತಾಯಿಯ ಮುಖ ಹೇಗಿತ್ತೋ ನಾನು ಕಂಡರಿಯೆ. ಆದರೂ ಕನಸಿನಲ್ಲಿ ಕಂಡ ವ್ಯಕ್ತಿ ನನ್ನ ಹೆತ್ತ ತಾಯಿಯೆಂದೇ ಬಗೆದೆ. ಆಕೆ ನುಡಿದಳು: 'ಮಗೂ, ಇಂದಿಗೆ ನನ್ನ ಸೀರೆ ಹಾಸಿ ನಿನ್ನನ್ನು ಮಲಗಿಸಿದೆ ಕಣಾ!' ನನಗೆ ಕೂಡಲೇ ಎಚ್ಚರುವಾಗಿಬಿಟ್ಟಿತು. ಕನಸಿನಲ್ಲಿ ಕಾಣಿಸಿದ ತಾಯಿಯ ಮೊಗವೂ, ನನ್ನ ಚಿಕ್ಕಮ್ಮನ ಮೊಗವೂ ಒಂದೇ ಅಲ್ಲ. ನನಗೆ ವಿಚಿತ್ರವೆನ್ನಿಸಿತು.

ನಸುಕಿನಲ್ಲಿಯೇ ಎದ್ದು ಗಾಡಿಗಳ ಹತ್ತಿರಕ್ಕೆ ಹೋದೆ. ನಮ್ಮ ಆಳು ರಾತ್ರಿಯೆಲ್ಲಾ ಎಚ್ಚರುವಾಗಿಯೇ ಇದ್ದ. ರಾತ್ರಿಯಲ್ಲೊಮ್ಮೆ ಆ ಹಾವಾಡಿಗ ಮೆಲ್ಲಗೆ ಎದ್ದು ಕುಳಿತು, ಕೈಗಳಿಗೆ ಬಿಗಿದ ಹುರಿಯನ್ನು ಹಲ್ಲುಗಳಿಂದ ಬಿಚ್ಚಿಕೊಳ್ಳಲು ಯತ್ನಿಸಿದ್ದನಂತೆ. ನಮ್ಮ ಆಳು ಅವನ ಮೇಲೊಂದು ಕಣ್ಣಿಟ್ಟೇ ಇದ್ದ ಆ ಹಾವಾಡಿಗನ ಕಾಲುಗಳನ್ನು ಹಗ್ಗದಿಂದ ಜೋಡಿಸಿ ಗಟ್ಟಿಯಾಗಿ ಬಿಗಿದಿದ್ದರಿಂದ ಅವನಿಗೆ ಓಡಿಹೋಗಲು ಆಗಲಿಲ್ಲ. ಅವನು ಕೈಕಟ್ಟುಗಳನ್ನು ಬಿಚ್ಚಿಕೊಳ್ಳಲು ಯತ್ನಿಸುತ್ತಿರುವಂತೆಯೇ, ನಮ್ಮ ಜೀತದಾಳು ತಟಕ್ಕನೆ ಅವನಿದ್ದಲ್ಲಿಗೆ ಹೋಗಿ, ಚೆನ್ನಾಗಿ ನಾಲ್ಕು ತೀಡಿಕೊಟ್ಟು 'ಅಯ್ಯೋ ಪಾಪ ಅಂತ ದಯೆಯಿಟ್ಟು ನಿನ್ನ ಕೈಗಳನ್ನು ಬೆನ್ನ ಹಿಂದೆ ಕಟ್ಟದೆ ಹಾಗೆಯೇ ಜೋಡಿಸಿ ಕಟ್ಟಿದ್ದಕ್ಕೋ ನೀನೀಕೆಲಸ ಮಾಡಿದ್ದು?' ಎಂದು ಮತ್ತೆ ಎರಡು ಒದೆ ಕೊಟ್ಟು, ಅವನ ಕೈಕಾಲುಗಳನ್ನು ಒಂದುಗೂಡಿಸಿ ಬಿಗಿಯಾಗಿ, ಮಿಸುಕಾಡದಂತೆ, ಮೂಟೆಯಂತೆ ಬಿಗಿದು ಕಟ್ಟಿದ್ದ. ಅವನ ಬಾಯಿಗೆ–ಕಡಿವಾಣದಂತೆ–ಸಣ್ಣನೆಯ ಹಗ್ಗವನ್ನು ಸಿಕ್ಕಿಸಿ, ಹಗ್ಗದ ಎರಡೂ ಕೊನೆಗಳನ್ನು ಹಿಂದಕ್ಕೊಯ್ದು, ಕತ್ತಿನ ಹಿಂಭಾಗಕ್ಕೆ ಬಿಗಿಯಾಗಿ ಗಂಟುಹಾಕಿದ್ದ! ಅಷ್ಟು ಮಾಡಿಯೂ ಹಗ್ಗವಿನ್ನೂ ಉಳಿದಿದ್ದರಿಂದ ಅದನ್ನು ಗಾಡಿಯ ಚಕ್ರಕ್ಕೆ ಬಿಗಿದು ಕಟ್ಟಿದ್ದ. ನಾನು ಅದನ್ನು ಕಂಡು 'ಛಿ! ಛೀ! ಏನೋ ಇದೆಲ್ಲಾ' ಎಂದು ನುಡಿದು ಆ ಹಗ್ಗವನ್ನು ಬಿಚ್ಚಿದೆ. ಆಗ ಆ ಹಾವಾಡಿಗ–

'ಅವನಿಗೆ ನನ್ನ ಮೇಲೇಕೆ ದಯೆ ಬಂದೀತು?! ನೀನಾದರೋ ನನ್ನ ಅಣ್ಣ ಮಗ! ಆದ್ರಿಂದ ನಾನೆಂದರೆ ನಿನಗೆ ಕರುಣೆ!' ಎಂದು ನುಡಿದು–ನಮ್ಮ ಜೀತದಾಳಿನ ಕಡೆಗೆ ನೋಡಿ–

'ಈಗ್ಲಾದರೂ ಗೊತ್ತಾಯಿತೇ?' ಎಂದು ಪ್ರಶ್ನಿಸಿದ!

ನಮ್ಮ ಜೀತದಾಳು ದುರ್ಮಾರ್ಗನೆಂದುಕೊಳ್ಳಲೇ? ಆ ಹಾವಾಡಿಗ ದುರ್ಮಾರ್ಗನೆಂದುಕೊಳ್ಳಲೇ? ನನಗೆ ಸಾಮಾನ್ಯವಾಗಿ ಕೋಪ ಬರುವುದಿಲ್ಲ. ಸಾಮಾನ್ಯವಾಗಿ ಏಕೆ?–ನಮ್ಮ ಸ್ವಂತ ಚಿಕ್ಕಮ್ಮನ ಭಾವನ ಮಗನನ್ನು, ನಾನು ಬಾಲ್ಯದಲ್ಲಿ ಅಂದು ಹೊಡೆದಿದ್ದೇ ಹೊಡೆದಿದ್ದು; ಅನಂತರ ನಾನು ಕೋಪವನ್ನೇ ಅರಿಯೆ! ಆ ಹಾವಾಡಿಗನಾಡಿದ ಮಾತು ಕೇಳುತ್ತಲೇ ನನಗೆ ಅದೆಲ್ಲಿಂದ ಕೋಪ ಬಂದುಬಿಟ್ಟಿತೋ ಏನೋ! ಕಾಲು ಮೇಲಕ್ಕೆತ್ತಿ ಝಾಡಿಸಿ

ಅವನ ಮುಸುಡಿಗೆ ಒದ್ದುಬಿಟ್ಟೆ. ಹಾಗೆ ಒದ್ದ ಮೇಲೆ ನನ್ನ ಮನಸ್ಸು ಅದೆಷ್ಟು ಬಾಧೆಗೊಳಗಾಯಿತೋ, ಏನೆಂದು ಹೇಳಲಿ? ನಮ್ಮ ಆಳಿಗೆ ಕೂಡಲೇ ಗಾಡಿ ಹೂಡು ಎಂದು ಹೇಳಿ, ನಾನು ಆ ಮನೆಯ ಜಗುಲಿಯ ಮೇಲೆ ಕುಳಿತುಕೊಂಡೆ.

ನನಗೀ ಕೋಪ ಅದೆಲ್ಲಿಂದ ಬಂತು?

ಕೋಪ ಅಹಂಕಾರದೊಳಗಿನಿಂದ ಹುಟ್ಟುತ್ತದೆ. ಅಹಂಕಾರ ಕೈ ನಡೆಯುವುದರ ಮೂಲಕ ಉಂಟಾಗುತ್ತದೆ. ಕೈ ನಡೆಯುವುದರಿಂದ ಮನಸ್ಸಿಗೆ ಸುಖ ಅಭ್ಯಾಸವಾಗುತ್ತದೆ. ಆ ಸುಖಕ್ಕೆ ಕೊಂಚ ವ್ಯತಿರೇಕವಾಗಿ ಏನಾದರೂ ನಡೆದರೇನೇ ಕೋಪ ಬರುತ್ತದೆ. ಸುಖ, ಕೈ ನಡೆಯುವುದರಿಂದಲೇ ಬರಬೇಕೆಂದೇನೂ ಇಲ್ಲ. ಮನಸ್ಸಿಗೊಂದು ತೃಪ್ತಿ ಎಂಬುದುಂಟಾಗಿಬಿಟ್ಟರೆ– ಅದು ಸುಖ ಎನ್ನಿಸುತ್ತದೆ. ನನಗೆ ಕನಸಿನಲ್ಲಿ ಕಾಣಿಸಿದ ತಾಯಿಯಿಂದಾಗಿ, ಆ ತಾಯಿಗೆ ಪ್ರತಿ ಛಾಯೆಯಂತೆ ಕಂಡುಬಂದ ಈ ಮನೆಯ ಚಿಕ್ಕಮ್ಮನಿಂದಾಗಿ–ನಾನಿದುವರೆವಿಗೂ ಎಂದೂ ಕಂಡರಿಯದ ಒಂದು ಬಗೆಯ ತೃಪ್ತಿ ಒಂದು ತೆರನ ಸುಖ ನನ್ನ ಮನಸ್ಸಿಗೆ ಹಬ್ಬಿಕೊಂಡಿತ್ತು. ಆ ಹಾವಾಡಿಗರವನಾಡಿದ ಮಾತು–ಆ ತೃಪ್ತಿಯನ್ನೂ, ಆ ಸುಖವನ್ನೂ ಘಾತಿಸಿತ್ತು. ನನ್ನ ಕೋಪಕ್ಕೆ ಅದುವೆ ಕಾರಣವೆಂದುಕೊಂಡೆ.

ಅಮ್ಮ ಎನ್ನುವ ಭಾವದಲ್ಲಿ ಅಷ್ಟು ಸುಖವಿದೆಯೆ? ನಾನು ಜೀವಿಸಿದ ಈ ಹದಿನಾಲ್ಕು ವರ್ಷಗಳವರೆವಿಗೂ–ಅವರಿವರ ಹಂಗಿನಲ್ಲಿಯೇ ಜೀವಿಸಿದ ನನಗೆ–ಈ ದಿನ ಹೇಗೆ ಆ ಭಾವ ಬಂದಿತು? ನಸುಕಿನಲ್ಲಿಯೇ ಹೊರಟು ಹೋಗುವಾಗ, ಬುತ್ತಿ ಕಟ್ಟಿಕೊಟ್ಟಿದ್ದರಿಂದ ಉಂಟಾಯಿತೇ? ಹಾಗಾದರೆ ಅಮ್ಮ ರಕ್ತ ಸಂಬಂಧಿಯಲ್ಲವೆ? ಒಂದು ದಯೆ, ಆ ದಯೆಯಿಂದ ಹುಟ್ಟಿಕೊಂಡ ಭಾವ–ಇವುಗಳಲ್ಲಿಂದ ಅಮ್ಮ ಹುಟ್ಟಿಕೊಂಡಳೇ? ಕರುಳಿನ ಸಂಬಂಧವಿಲ್ಲದೆಯೂ ಅಮ್ಮ ಇರುತ್ತಾಳೆಯೇ? ಹಾಗಾದರೆ ನನ್ನ ಸಾಕು ತಂದೆಯ ಹೆಂಡತಿ–ಆಕೆ ಮಾತ್ರ ಏಕೆ ಅಮ್ಮನಲ್ಲ? ಎರಡು ವರ್ಷಗಳಿಗೂ ಮಿಕ್ಕಿ ನಾನು ಅವರ ಮನೆಯಲ್ಲಿಯೇ ಇದ್ದಾಗ್ಯೂ ಆಕೆಯ ಬಗ್ಗೆ ನನಗೀ ಅಮ್ಮ ಎಂಬ ಭಾವ ಅದೇಕೆ ಹುಟ್ಟಲಿಲ್ಲ? ಎರಡು ಹೊತ್ತು ಅನ್ನವಿತ್ತು, ನಸುಕಿನಲ್ಲಿಯೇ ಹೊರಟುಹೋಗುವಾಗ, ಬುತ್ತಿ ಕಟ್ಟಿಕೊಟ್ಟ ಈಕೆಯ ಬಗ್ಗೆಯೇ ಅದೇಕೆ ಅಮ್ಮನೆಂಬ ಭಾವ ಉದಿಸಿತು? ನನಗೆ ಒಂದಕ್ಕೊಂದು ಯಾವ ತಾಳೆಯೂ ಕಂಡುಬರಲಿಲ್ಲ. ನನ್ನ ಹೆತ್ತಮ್ಮ– ಜೀವಿಸಿರುವಾಗ–ಈಕೆಯ ಹಾಗೆಯೇ ಇದ್ದಳೋ, ಏನೋ! ಆದರೆ ಕನಸಿನಲ್ಲಿ ಮಾತನಾಡಿದ ಅಮ್ಮ ಈಕೆಯ ಹಾಗಿಲ್ಲವಲ್ಲಾ! ಸತ್ತುಹೋದ ನನ್ನ ಹೆತ್ತಮ್ಮ ಈಕೆಯಲ್ಲಿ ಪ್ರವೇಶಿಸಿರುವಳೋ ಏನೋ! ಹಾಗಾದರೆ ಹನ್ನೆರಡು ವರ್ಷಗಳವರೆವಿಗೂ ನನ್ನ ಹೆತ್ತಮ್ಮ ಏನಾಗಿದ್ದಳು? ಎತ್ತ ಹೋಗಿದ್ದಳು? ನನ್ನ ಹೆತ್ತಮ್ಮ ಯಾವಾಗಲೂ ನನ್ನ ಹಿಂದೆಯೇ ಇದ್ದು ನನ್ನನ್ನು ಎಡೆಬಿಡದೆ ರಕ್ಷಿಸುತ್ತಿದ್ದಳೋ ಏನೋ! ಹಾಗೆ ರಕ್ಷಿಸದೇ ಇದ್ದಿದ್ದರೆ ನನ್ನ ಜೀವನ ಹೀಗೆ ಹೇಗೆ ಸಾಗುತ್ತಿತ್ತು? ಯಾವುದೋ ಒಂದು ರೀತಿಯಲ್ಲಿ ನಿರಪಾಯವಾಗಿಯೇ ಕಳೆಯಿತಲ್ಲವೆ ಇಷ್ಟುರತನಕ? ಸತ್ತವರು ನಮ್ಮನ್ನು ಕಾಯುತ್ತಾ ಇರುತ್ತಾರೆಯೇ?.......

ಅಷ್ಟರಲ್ಲಿ ಆಳು ಗಾಡಿಗಳನ್ನು ಕಟ್ಟಿ ನನ್ನನ್ನು ಕರೆದ. ನಾನು ಬೆಚ್ಚಿಬಿದ್ದೆ. ಆಗ ಸೂರ್ಯೋದಯವಾಗಿತ್ತು ನಾನು ಬೆಚ್ಚಿಬಿದ್ದಾಗ ನನ್ನ ಚಿಕ್ಕಮ್ಮ ನನ್ನ ಪಕ್ಕದಲ್ಲಿಯೇ ನಿಂತಿದ್ದಳು. ನಾನು ಹಾಗೆ ಬೆಚ್ಚಿಬಿದ್ದುದನ್ನು ನೋಡಿ 'ಅದೇನು ಮಗೂ ಹಾಗೆ ಬೆಚ್ಚಿಬಿದ್ದೆಯಲ್ಲಾ?' ಎಂದು ಕೇಳಿದಳು. ಆಕೆ ಹಾಗೆ ಕೇಳಿದ್ದೂ, ಹಾಗೆ ಕಾತರಪಟ್ಟದ್ದೂ ನೋಡಿದರೆ, ಆಗಿನ ಆಕೆಯ ಮುಖ ನೋಡಿದರೆ ಯಾರಿಗಾದರೂ ಸರಿಯೇ, ಆಕೆ ನನ್ನ ಹೆತ್ತಮ್ಮನಂತಲೇ ಅನ್ನಿಸುತ್ತಿತ್ತು. ನಾನು ಆಕೆಯ ಆ ಮಾತಿಗೆ ಉತ್ತರವೀಯದೆ, ನನಗರಿವಿಲ್ಲದಂತೆಯೇ 'ಅಮ್ಮಾ' ಎಂದು ಕರೆದೆ. ಹಾಗೆ ಕರೆದಿದ್ದರಲ್ಲಿ–ಮರ್ಯಾದೆಗಾಗಿ, ಏನಾದರೂ ಒಂದು ಪ್ರೀತಿಭಾವ ಇದ್ದಾಗ, ಪರಸ್ತ್ರೀಯನ್ನು ಗೌರವಕ್ಕಾಗಿ ಅಮ್ಮಾ ಎಂದು ಕರೆದ ಹಾಗಿರದೆ–ಮಗನೊಬ್ಬ ತಾಯಿಯನ್ನು ಕರೆಯುವಂತೆಯೇ ಇತ್ತು ಅದು ನನಗೆ ತಿಳಿದುಬಂದಿತು; ನನ್ನ ಆ ತಾಯಿಗೆ ತಿಳಿದುಬಂದಿತು ಅಷ್ಟೆ

ಗಾಡಿಗಳು ಹೊರಟುವು. ನಾನು ಹೊರಟುಹೋಗುತ್ತಿರುವೆ. ನನ್ನ ಚಿಕ್ಕಮ್ಮನ ಮಗ 'ಭಾವಾ, ಬರುವಾಗ ಹೀಗೆ ಬಂದು ಹಾಗೆ ಹೋಗ್ತೀನಿ ಅಂದ್ರೆ ನಾನು ಕೇಳೋಲ್ಲ. ಒಂದೆರಡು ದಿನ ನಮ್ಮಲ್ಲಿಯೇ ಇರಬೇಕು, ತಿಳೀತೇ?' ಎಂದ. ಅದಕ್ಕೆ ನಾನು 'ನಿನ್ನನ್ನು ನಮ್ಮೂರಿಗೆ ಕರೆದುಕೊಂಡೇ ಹೋಗ್ತೇನೆ' ಎಂದು ನುಡಿದೆ.

ಊರು ದಾಟಿದೆವು. ಬೆಳಗ್ಗೆ ಒಂದು ಜಾವದ ಹೊತ್ತಿಗೆಲ್ಲಾ ಒಂದು ಕೆರೆಯನ್ನು ಸಮೀಪಿಸಿದೆವು. ಆ ಕೆರೆಯ ಏರಿಯ ಮೇಲೆ, ಎತ್ತುಗಳನ್ನು ಬಿಚ್ಚಿ, ಅಡುಗೆ ಮಾಡಿಕೊಂಡು ಊಟ ಮಾಡಿದೆವು. ನಮ್ಮತ್ತೆಗೆ ನನ್ನ ಮೇಲಿದ್ದ ಅನುಮಾನವೆಲ್ಲಾ ಪೂರ್ತಿಯಾಗಿ ಹೊರಟುಹೋಗಿಬಿಟ್ಟಿತ್ತು. ತ್ರಿಕರಣಶುದ್ಧಿಯಾಗಿ–ನಾನು ತನ್ನ ಸೋದರಳಿಯನೆಂದೇ ಆಕೆ ನಂಬಿದಳು. ಏತಕ್ಕೆಂದರೆ–ಅಡುಗೆ ಮಾಡುವುದಕ್ಕೋಸ್ಕರ ನಾನು ಕಡ್ಡಿ ಸೌದೆ ಪುರುಳೆಗಳನ್ನು ಆಯ್ದುಕೊಂಡು ಬರಲು ತುಸು ದೂರದವರೆಗೆ ಹೊರಟುಹೋಗಿದ್ದೆ. ಹಿಂತಿರುಗಿ ಬರುವಾಗ–ನಮ್ಮತ್ತೆ ಜೀತದಾಳಿನ ಜೊತೆಯಲ್ಲಿ ಈ ಮಾತುಗಳನ್ನಾಡುತ್ತಿರುವುದು ಕೇಳಿಸಿತು–

'ಲೋ, ಈ ಹಾವಾಡಿಗ ನಮ್ಮ ಹಿಂದೇಕೆ? ಮೊನ್ನೆ ರಾತ್ರಿಯೇ ಇವನ ಹೆಣಾ ಬೀಳುಮತೆ ಚಚ್ಚಿಹಾಕಬಾರದಾಗಿತ್ತೇನೋ? ಇವನು ಬದುಕಿರುವತನಕ ಅಳೀಮಯ್ಯನ ಮೇಲೆ ಹಗೆ ಸಾಧಿಸ್ತಾನಂತೆ. ಈ ಬಡ್ಡಿ ಮಗನ್ನ ಈಗ ಕೊಂದುಹಾಕಿಬಿಟ್ಟರೆ ಕೇಳೋರು ಯಾರು? ದಿಕ್ಕೋ ದೆಸೆಯೋ? ದಾರಿಯಲ್ಲಿ ಎಲ್ಲಾದರೂ ಇವನನ್ನು ಮುಗಿಸಿಬಿಡು. ಆ ಮಗೂಗೇನಾರಾ ಗೊತ್ತಾಗಿಬಿಟ್ಟರೆ ಈ ಕೆಲಸ ಸಾಗೊಡೋಲ್ಲ. ಯಾವ ಪಾಪ ಬಂದ್ರೂ ನಾನು ಕಟ್ಟಿಕೊಳ್ತೇನೆ!'

–ಈ ಮಾತುಗಳನ್ನು ಕೇಳುತ್ತಲೇ ಆ ಹಾವಾಡಿಗನ ಮುಖ ಬೆಳ್ಳಗೆ ಬಿಳಿಚಿಕೊಂಡುಬಿಟ್ಟಿತು. ಅವನ ದೂರಾಲೋಚನೆ, ಊಹಾಶಕ್ತಿ, ಬುದ್ಧಿಶಕ್ತಿಗಳು–ಮೊದಲಿನಿಂದಲೂ ನನಗೆ ಆಶ್ಚರ್ಯವನ್ನುಂಟುಮಾಡಿದ್ದವು. ಅವನೀಗ ಬೆಳ್ಳಗೆ ಬಿಳಿಚಿಕೊಂಡಿದ್ದನ್ನು ಕಾಣುತ್ತಲೇ 'ಇವನು ಯಾರ ಮನಸ್ಸಿನಲ್ಲಿ ನನ್ನ ಬಗ್ಗೆ ಅನುಮಾನವುಂಟಾಗಬೇಕೆಂದು ಬಗೆದಿದ್ದನೋ ಅವರ ಮನಸ್ಸೇ ತಿಳಿಯಾಗಿ, ಅವರ

ಬಾಯಿಂದಲೇ ತನ್ನ ಇತಿಶ್ರೀ ಕೊನೆಗಾಣಬೇಕೆಂಬ ಮಾತುಗಳನ್ನು ಕೇಳುತ್ತಲೇ–ಅವನು ಹಾಗೆ ಬಿಳಿಚಿಕೊಂಡ' ಎಂಬುದು ನನಗೆ ಗೊತ್ತಾಗಿಬಿಟ್ಟಿತು. 'ಇವನೆಂಥಾ ಘಾಟಿಯಪ್ಪಾ!' ಎನ್ನಿಸಿತು ನನಗೆ.

ಎಲ್ಲರ ಊಟವಾದ ಮೇಲೆ ಮತ್ತೆ ಗಾಡಿಗಳನ್ನು ಕಟ್ಟಿಕೊಂಡು ನಮ್ಮ ಪಯಣವನ್ನು ಮುಂದುವರೆಸಿದೆವು. ಹೊತ್ತು ಮುಳುಗುತ್ತಿರುವಾಗ, ನನ್ನನ್ನು ಆದರಿಸಿ, ಎರಡು ವರ್ಷಗಳಿಗೂ ಮಿಕ್ಕಿ ನನ್ನನ್ನು ಸಾಕಿದ ಆ ದಯಾಮಯನಾದ ನನ್ನ ಸಾಕುತಂದೆಯ ಊರನ್ನು ಸಮೀಪಿಸಿದೆವು. ಆ ಊರಿನ ಹಕ್ಕಿ ಪಕ್ಷಿಗಳೆಲ್ಲವೂ ನಾನು ಬರುತ್ತಿದ್ದೇನೆ ಎಂದು ಕಲರವವನ್ನುಂಟು ಮಾಡುತ್ತಿದ್ದವು. ಆ ಊರೊಳಗಿನಿಂದ ಪ್ರಿಯವಾದ ಕರೆಯಂತಹ ಕಮ್ಮನೆಯ ಸಪ್ಪುಳವೊಂದು ಕೇಳಿಬಂದಿತು!

ಎರಡು ವರ್ಷಗಳಾದ ಮೇಲೆ ಮತ್ತೊಮ್ಮೆ ನನ್ನ ಸಾಕುತಂದೆಯ ಊರಿನ ಮುಖವನ್ನು ಕಂಡೆನಲ್ಲಾ ಎಂದು ನನ್ನಲ್ಲುಂಟಾದ ಆನಂದಕ್ಕೆ ಮೇರೆಯೇ ಇರದಾಯಿತು. ನನ್ನ ಜೀವಕ್ಕೆ ಆ ಊರೇ ನನ್ನ ಹುಟ್ಟೂರು ಎನ್ನಿಸುತ್ತಿದೆ. ನನ್ನ ಜನ್ಮದಲ್ಲಿ ನಾನು ಮನುಷ್ಯನೆನ್ನಿಸಿಕೊಳ್ಳುವುದಕ್ಕೂ, ನಾನು ಗೌರವಸ್ಥರ ಹುಡುಗನೆನ್ನಿಸಿಕೊಳ್ಳುವುದಕ್ಕೂ ಕಾರಣವಾದದ್ದು ಆ ಊರು. ಆದ್ದರಿಂದ ಆ ಊರಿನ ಮೇಲೆ ನನಗೆ ಎಲ್ಲಿಲ್ಲದ ಅಭಿಮಾನವಿದೆ ಎಂದೆನ್ನಿಸುತ್ತಿದೆ. ಗಾಡಿ ಊರೊಳಗೆ ಪ್ರವೇಶ ಮಾಡುವವರೆವಿಗೂ ನಾನು ಮೈಮರೆತವನು ಮೈಮರೆತಂತೆಯೇ ಇದ್ದೆ. ಊರೊಳಗೆ ಪ್ರವೇಶಿಸುತ್ತಲೇ ನನಗೆ ಎಚ್ಚರು ಬಂದಿತು. ಆ ಕೂಡಲೇ ನನ್ನ ಮನಸ್ಸು ನನ್ನ ಬಳಿಗೆ ಬಂದಿತು. ಊರನ್ನು ನೋಡುತ್ತಲೇ ಅದುವರೆವಿಗೂ ಉಂಟಾಗಿದ್ದ ಆನಂದದಲ್ಲಿ ಅರ್ಧಕ್ಕೆ ಅರ್ಧದಷ್ಟು ಇಳಿದುಬಿಟ್ಟಿತು. ನನ್ನ ಸಾಕುತಂದೆಯ ಮನೆಗೆ ಹೋಗೋಣವೇ? ಊಹುಂ, ಅಲ್ಲಿಗೆ ಹೋಗಬೇಕೆಂದೆನ್ನಿಸಲಿಲ್ಲ. ಮಕ್ಕಳನ್ನು ನೋಡಬೇಕೆಂಬ ಹಂಬಲವುಂಟಾಯಿತು. ಅವರನ್ನು ನೋಡಲು, ಅವರ ಮನೆಗೇ ಹೋಗಬೇಕಾಗಿಲ್ಲ. ನಾನು ಆ ಊರಿನಲ್ಲಿದ್ದಾಗ, ಆ ಊರಿನ ಶಾಲೆ, ಪಟೇಲರ ಮನೆಯ ಜಗುಲಿಯ ಮೇಲಿತ್ತು. ಆ ಪಟೇಲರ ಹೆಂಡತಿಗೆ ನಾನೆಂದರೆ ದಯೆಯಿತ್ತು. ಆದ್ದರಿಂದವರ ಮನೆಗೇ ಹೋಗೋಣವೆನ್ನಿಸಿತು. ಒಂದು ವೇಳೆ ನಮ್ಮ ಉಪಾಧ್ಯಾಯರು ಕಾಣಿಸಿದರೂ ಕಾಣಿಸಬಹುದು. ಗಾಡಿಗಳನ್ನು ಪಟೇಲರ ಮನೆಯಂಗಳಕ್ಕೆ ಹೊಡೆಸಿದೆ. ಎದುರುಗಡೆಯಿಂದ ಪಟೇಲರೇ ಬಂದರು. ನನ್ನನ್ನು ನೋಡುತ್ತಲೇ ಗುರುತು ಹಿಡಿದು 'ಎಷ್ಟು ದಿನಗಳಿಗೆ, ಎಷ್ಟು ದಿನಗಳಿಗೆ ಬಂದೆಯಲ್ಲೋ! ಎಲ್ಲಿದ್ದೀಯೆ? ಏನು ಮಾಡಿಕೊಂಡಿದ್ದೀಯೆ? ಏನು ಕಥೆ? ನಿನ್ನನ್ನು ನಾವೆಲ್ಲಾ ನೆನೆಸಿಕೊಳ್ಳದ ದಿನವಿಲ್ಲ' ಎಂದು ಪ್ರಶ್ನೆಗಳ ಮಳೆಗರೆದರು. ತತ್‌ಕ್ಷಣವೇ ಪಟೇಲರ ದೃಷ್ಟಿ ಆ ಹಾವಾಡಿಗನ ಮೇಲೆ ಬಿತ್ತು. ಆಗಾಗಲೇ ಮುಚ್ಚಂಜೆಯ ಕತ್ತಲು ಮುಸುಕಿಕೊಳ್ಳುತ್ತಿತ್ತು. 'ಕಣ್ಣು ಕಪಟ'ಗಳು ಹಾರಾಡುವಷ್ಟು ಕತ್ತಲು ಕತ್ತಲಾಗಿತ್ತು. ಅವನಾರಿರಬಹುದೆಂದು ಪಟೇಲರು ಅವನ ಹತ್ತಿರಕ್ಕೆ ಹೋಗಿ, ಅವನನ್ನು ನೋಡು ನೋಡುತ್ತಲೇ–

'ಇವನೇ!? ಇವನೆಲ್ಲಿ ಸಿಕ್ಕಿದನೋ? ಇವನು ಮಹಾ ಕಳ್ಳಕೊರಮ! ಈ ಊರಿನಲ್ಲಿ ಎರಡು ಮೂರು ಕಡೆ ಕನ್ನಾ ಹಾಕಿದ್ದಾನೆ. ಎಲ್ಲಿ ಹಿಡಿದಿರಿ?' ಎಂದು ಕೇಳಿದರು.

ನಾನು ಹೇಳಿದೆ 'ನಾನು ಇವನ ಅಣ್ಣನ ಮಗನಂತೆ! ಇವನು ನನ್ನ ಚಿಕ್ಕಪ್ಪನಂತೆ! ಹಾಗಂತ ಹೇಳ್ತಾ ಇದಾನೆ' ಎಂದು ಮೊದಲಿಟ್ಟು ನಡೆದದ್ದನ್ನೆಲ್ಲಾ ಹೇಳಿದೆ. ಪಟೇಲರು ಮಹಾ ಕೋಪಿಷ್ಟರು, ಆ ಹಾವಾಡಿಗ ನನ್ನ ಮೇಲೆ ಹೊರಿಸಿದ ಆ ಅಪವಾದವನ್ನು, ಅವನಿಂದಾಗಿ ನನಗುಂಟಾದ ಕಷ್ಟಗಳೆಲ್ಲವನ್ನೂ ನಾನು ಹೇಳಿಕೊಂಡೆ. ಆ ಪಟೇಲರು ನಮ್ಮತ್ತೆಯತ್ತ ನೋಡಿ 'ಏನು ತಾಯೀ? ಅವನ ಮಾತನ್ನೇ ನಂಬಿದಿರಾ? ಈ ಮಗು ಎರಡು ಮೂರು ವರ್ಷ ನಮ್ಮೂರಿನಲ್ಲಿಯೇ ಇದ್ದ. ಇಲ್ಲಿಂದಲೇ ನಿಮ್ಮೂರಿಗೆ ಬಂದಿದ್ದಾನೆ. ಇವನ ಚಿಕ್ಕಮ್ಮನವರನ್ನು, ಇವನ ಬಂಧುಗಳನ್ನು ನಾವೆಲ್ಲರೂ ಬಲ್ಲೆವು. ಅವರು ಆಗೊವ್ಮೆ ಈಗೊವ್ಮೆ ಬಂದು ಈ ಮಗೂನ ನೋಡಿಕೊಂಡು ಹೋಗ್ತಾ ಇದ್ರು. ಈ ಹುಡುಗನ ಬುದ್ಧಿವಂತಿಕೆ, ಈ ಹುಡುಗನ ಒಳ್ಳೆಯತನ ನಿಮಗೇನು ಗೊತ್ತು? ನಮ್ಮ ಸ್ವಾಮಿಗೆ–ನಮ್ಮ ಸ್ವಾಮಿಯ ಮನೆಗೆ ಹಿರಿಯ ಮಗನಾಗಿದ್ದ ಈ ಹುಡುಗ' ಎಂದು ತಿಳಿಸಿದರು. ಸ್ವಾಮಿ ಎಂದರೆ–ನನ್ನ ಸಾಕುತಂದೆಯನ್ನು ಆ ಊರಿನಲ್ಲಿ ಎಲ್ಲರೂ ಸ್ವಾಮಿ ಎನ್ನುತ್ತಿದ್ದರು. ಪಟೇಲರು ನನ್ನ ಕಡೆಗೆ ತಿರುಗಿ–

'ಅಯ್ಯೋ ಮಗೂ, ಇವನಿಂದಾಗಿ ನೀನೆಷ್ಟು ಕಷ್ಟಗಳನ್ನನುಭವಿಸಬೇಕಾಯಿತಲ್ಲಾ! ನೀನು ಹುಟ್ಟಿರೋದೇ ಕಷ್ಟಗಳನ್ನನುಭವಿಸೋಕೆ ಅಂತ ಕಾಣುತ್ತೆ! ಈ ಬಡ್ಡೀಮಗನ್ನ ಏನು ಮಾಡಿದರೂ ಪಾಪ ಬರೋಲ್ಲ' ಎಂದು ಅಂಗೈಯಿಂದ ಅವನ ಮುಖಕ್ಕೆ ರಪ್ಪನೆ ರಾಚಿ ಬಲವಾಗಿ ಹೊಡೆದರು. ಆ ಹೊಡೆತಕ್ಕೆ ಅವನು ಸತ್ತೇಹೋದನೆಂದುಕೊಂಡೆ. ಎರಡು ದಿನಗಳಿಂದಲೂ ಒಂದೇ ಸಮ ನಮ್ಮ ಜೀತದಾಳು ಎಷ್ಟು ಹೊಡೆಯುತ್ತಿದ್ದರೂ ಲೆಕ್ಕಿಸದವನು, ಆ ಹೊಡೆತದಿಂದ ವಿಲವಿಲನೆ ಒದ್ದಾಡಿ, ಕೆಳಗುರುಳಿ ಬಿದ್ದು, ದೇಹವನ್ನೆಲ್ಲಾ ಹುರಿ ತಿರುಗಿಸುತ್ತಾ ಅಷ್ಟು ನೆತ್ತರು ಕಕ್ಕಿದ. ಕೂಡಲೇ ಮೇಲೆದ್ದು ನಿಂತು 'ಸ್ವಾಮೀ, ಅಪರಾಧವಾಯ್ತು, ನೀವಾ!? ನೀವಾ!? ಈ ಮಗು ನಿಮ್ಮ ಹುಡುಗ ಅಂತ ಅಂದ್ಕೊಳ್ಳಿಲ್ಲ. ನನ್ನನ್ನು ಬಿಟ್ಟುಬಿಡಿ. ಹೋಗಿಬಿಡ್ತೇನೆ, ಹೋಗಿಬಿಡ್ತೇನೆ' ಎಂದೊರಲಿದ. ಪಟೇಲರು 'ಇನ್ನೊಂದು ಹೊಡೆತಕ್ಕೆ ನೆಗೆದುಬಿಳ್ತೀಯೆ, ಬಡ್ಡೀಮಗನೆ! ಇವನ ಕಟ್ಟುಗಳನ್ನು ಬಿಚ್ಚೋ!' ಎಂದರು ನಮ್ಮ ಜೀತದಾಳನ್ನು. ಆ ಹೊಡೆತವನ್ನೂ, ಆಗಿನ ಆ ಹಾವಾಡಿಗನ ಸ್ಥಿತಿಯನ್ನೂ ನೋಡಿ–ನನಗೇಕೆ–ನಮ್ಮ ಜೀತದಾಳಿಗೇನೇ ಜಂಘಾಬಲ ಉಡುಗಿಹೋಗಿತ್ತು! ನಾನು ಎರಡು ವರ್ಷಗಳಿಗೆ ಮೇಲ್ಪಟ್ಟು ಆ ಊರಿನಲ್ಲಿಯೇ ಇದ್ದರೂ, ಆ ಪಟೇಲರ ಈ ಸತ್ವ ಒಂದಿಷ್ಟೂ ನನಗೆ ಗೊತ್ತಿದ್ದಿಲ್ಲ. ನಮ್ಮ ಜೀತದಾಳು ತುಟಿಪಿಟಕ್ಕೆನ್ನದೆ ಹಾವಾಡಿಗನ ಕಟ್ಟುಗಳನ್ನು ಬಿಚ್ಚತೊಡಗಿದ. ಬಿಚ್ಚುತ್ತಾ, ಧೈರ್ಯಮಾಡಿ, ಬಾಯಿಬಿಟ್ಟ–'ಬುದ್ಧೀ, ಇವನನ್ನು ಹೋಗಗೊಡಬೇಡಿ. ಇವನು ಬದುಕಿರುವತನಕ ನಮ್ಮ ಬುದ್ಯೋರ ಮೇಲೆ ನಿಗಾ ಮಡಗಿರ್ತೀನಿ ಅಂತ ಹೇಳವ್ನೆ. ಇಪ್ಪತ್ತು ಜನ ಕಳ್ಳರ ಗುಂಪಿನೊಂದಿಗೆ ನಮ್ಮ ಗಾಡಿಗಳನ್ನು ಮುತ್ತಿಕೊಂಡಿದ್ದ' ಎಂದ.

ನಮ್ಮತ್ತೆ 'ಬಿಟ್ಟುಬಿಟ್ಟರೆ ಇವನು ನಮ್ಮ ಅಳಿಯನನ್ನು ನೆಮ್ಮದಿಯಿಂದ ಬದುಕಗೊಡ್ತಾನ್ಯೇ? ಬಿಡಬೇಡಿ' ಎಂದಳು. ಪಟೇಲರು 'ಏನೋ? ಇದೆಲ್ಲಾ ನಿಜವೇನೋ?' ಎಂದು ಅವನತ್ತ ದುರುದುರು ದುರುಗುಟ್ಟಿ ನೋಡಿದರು. ಕೂಡಲೇ ಹಾವಾಡಿಗ ಪಟೇಲರಿಗೆ

ದೀರ್ಘದಂಡ ನಮಸ್ಕಾರ ಮಾಡಿ 'ಬುದ್ದೀ, ನಿಮ್ ಪಾದದಾಣೆ. ಇನ್ನು ಈ ಮಾರಾಜನ ತಂಟೆಗೆ ಬರೋಲ್ಲ' ಎಂದು ನುಡಿದು, ನನ್ನ ಬಳಿಗೆ ಬಂದು, ನನ್ನ ಕಾಲುಗಳಿಗೆ ಬಿದ್ದು 'ನನ್ನನ್ನು ಕ್ಷಮಿಸು, ಪಟೇಲರ ಕೈ ಹೊಡೆತ ತಿಂದವನಾವನೂ ಮೂರು ತಿಂಗಳಿಗಿಂತ ಹೆಚ್ಚಿಗೆ ಬದುಕಿಲ್ಲ' ಎನ್ನುತ್ತಾ ಮತ್ತೆ ಅಷ್ಟು ರಕ್ತ ಕಕ್ಕಿಕೊಂಡ; ಏದುಸಿರು ಬಿಡತೊಡಗಿದ. ಮಾತುಮಾತಿಗೆ ಮಧ್ಯೆ ಎದೆ ಗುಂಡಿಗೆಯನ್ನು ಒತ್ತಿ ಹಿಡಿದುಕೊಂಡು ಕೆಮ್ಮತೊಡಗಿದ. ಅವನನ್ನು ನೋಡಿದರೆ ನನಗೆ ಕಣ್ಣಲ್ಲಿ ನೀರುಕ್ಕುವಂತಾಗಿಬಿಟ್ಟಿತು. 'ಸರಿಹೋಗೋ' ಎಂದೆ. ಅವನು ಪಟೇಲರ ಕಡೆಗೆ ಅಪ್ಪಣೆ ಬೇಡುವವನಂತೆ ನೋಡಿದ. ಪಟೇಲರ ಮುಖಭಾವವೂ ಸಹ ಹೊರಡು ಎಂದು ತಿಳಿಸುವಂತಿತ್ತು. ಅವನು ಹಿಂದಕ್ಕೆ ತಿರುಗಿ ತಿರುಗಿ ನೋಡುತ್ತ ತಿರುತಿರುಗಿ ನೋಡಿದಂತೆಲ್ಲ ಕೈ ಮುಗಿಯುತ್ತ ಕೆಮ್ಮುತ್ತ ಕಣ್ಣ ನೋಟದಿಂದ ಮರೆಯಾಗಿ ಹೋಗುವಷ್ಟರಲ್ಲಿ ಮತ್ತೊಮ್ಮೆ ರಕ್ತ ಕಕ್ಕಿಕೊಂಡು ಶವದಂತೆ ನಡೆದು ಹೋಗಿಬಿಟ್ಟ.

ಹಾಗೆ ನೋಡಿದರೆ ಆ ಪಟೇಲರು ಆಜಾನುಬಾಹು ವ್ಯಕ್ತಿಯೂ ಅಲ್ಲ. ಅವರನ್ನು ನೋಡಿದವರಿಗೆ ಅವರಿಗಷ್ಟು ಶಕ್ತಿಯಿರುವಂತೆ ತೋಚುವುದಿಲ್ಲ.

ನಾವು ಮರುದಿನವೆಲ್ಲಾ ಆ ಊರಿನಲ್ಲಿಯೇ ತಂಗಿದೆವು. ನಮ್ಮ ಜೀತದಾಳು ತನ್ನನ್ನು ಹುಟ್ಟಿಸಿದ ಬ್ರಹ್ಮನನ್ನು ಕಂಡರೂ ಭಯಪಡುವವನಲ್ಲ. ಆದರೆ ಪಟೇಲರೆಂದರೆ ಗಡಗಡ ನಡುಗಿಬಿಡುತ್ತಿದ್ದ. ನನ್ನ ಮನಸ್ಸಿನಲ್ಲಿ ಹಾವಾಡಿಗನ ಬಗ್ಗೆ ಕರುಣೆ, ಆ ಪಟೇಲರ ಕುರಿತು ಎಲ್ಲಿಲ್ಲದ ಗೌರವ ಭಾವ ಏರ್ಪಟ್ಟಿತು. ಇದೆಲ್ಲಕ್ಕಿಂತಲೂ ಮಿಕ್ಕಿ ನನ್ನ ಮನಸ್ಸಿನಲ್ಲಿ ಮಹಾ ಸಂತೋಷ ಹುಟ್ಟಿಕೊಂಡಿತು. ನಮ್ಮತ್ತೆ ನನ್ನನ್ನು ಅಪ್ಪಿಕೊಂಡು ತಲೆ ನೇವರಿಸುತ್ತ ನನ್ನ ಗದ್ದವನ್ನು ಬೆರಳ ಕೊನೆಗಳಿಂದ ಹಿಡಿದು ಅತ್ತಿತ್ತ ಅಲುಗಿಸುತ್ತ 'ಮಗೂ, ನೀನಿಷ್ಟು ಕಷ್ಟಗಳನ್ನನುಭವಿಸಿದ್ದೀಯೆಂಬುದು ನನಗೆ ತಿಳಿಯದು. ಈ ಪಾಪವೆಲ್ಲಾ ನನ್ನದು' ಎಂದು ಕಳಕಳಿಯಿಂದ ನುಡಿದಳು. ಅಂದಿಗೆ ನಾನು ತನ್ನ ಸೋದರಳಿಯನೆಂಬ ವಿಷಯ ಸ್ಥಿರಪಟ್ಟಂತಾಯಿತು. ಅಪ್ಪಿತಪ್ಪಿ ಕನಸಿನಲ್ಲಿಯಾದರೂ ಸರಿಯೇ, ನಮ್ಮತ್ತೆಗೆ ಇನ್ನು ಅನುಮಾನವೆಂಬುದೇ ತಲೆ ಎತ್ತಲಾರದು. ನಮ್ಮೊಂದಿಗೆ ಬಂದ ಕಮ್ಮಾ ಅವರು ಸಹ ಪರಿಪರಿಯಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಒಬ್ಬಾಕೆ 'ಆ ಮುಂಡೇಮಗ ಹೇಳಿದ ಮಾತ್ರಕ್ಕೆ ನಾವು ನಂಬಿದೆವೆ?' ಎಂದಳು. ಇನ್ನೊಬ್ಬಾಕೆ 'ನಮ್ಮೂರಿನಲ್ಲಿ ಈತ ಹಾವಾಡಿಗನೆಂದರೆ ಯಾರೂ ಅಷ್ಟಾಗಿ ನಂಬಿರಲಿಲ್ಲ. ಇನ್ನು ನಂಬುವುದಕ್ಕೇ ಸಾಧ್ಯವಿಲ್ಲ! ಇದನ್ನೆಲ್ಲಾ ಕಣ್ಣಾರೆ ಕಂಡವರು ನಾವೆಲ್ಲಾ ಇಲ್ಲವೇ?' ಎಂದಳು. ಆ ಕಮ್ಮಾ ಆಸಾಮಿ 'ಹುಚ್ಚು ಮುಂಡೇರು! ಹುಚ್ಚು ಮುಂಡೇರು!' ಎಂದು ನುಡಿದ. 'ಹಾಗೇಕೆ ಅನ್ನುತ್ತೀರ?' ಎಂದು ನಾನು ಕೇಳಿದರೆ, ಆತ 'ಮಗೂ ನೀನು ಹಾವಾಡಿಗರವನೆಂದು ಅಂದುಕೊಂಡವರು ಯಾರೂಂತ? ಊರಲ್ಲಿ ಗಂಡಸರಾರೂ ಹಾಗೆ ಅಂದುಕೊಳ್ಳಲೇ ಇಲ್ಲ. ಏನಿದ್ದರೂ ಹೆಣ್ಣು ಮುಂಡೇವು ಅಂದುಕೊಂಡವೇನೋ! ನಾನೆಂದೂ ಹಾಗೆ ಅಂದುಕೊಂಡವನಲ್ಲ!' ಎಂದು ತಿಳಿಸಿದ.

ಈ ಎಲ್ಲ ಮಾತುಗಳಿಂದ ನನಗುಂಟಾದ ಆನಂದದಿಂದಾಗಿ ನನ್ನ ಹೃದಯ ಬಿರಿದುಹೋಗುತ್ತದೇನೋ ಎನ್ನಿಸಿತು. ಮತ್ತೊಬ್ಬನಾಗಿದ್ದಿದ್ದರೆ ಈ ವಿಷಯವನ್ನು ಇಷ್ಟು ಕೂಲಂಕಷವಾಗಿ ಹೇಳುತ್ತಿದ್ದನೋ ಇಲ್ಲವೋ! ನನ್ನ ಬದುಕು, ನನ್ನ ಬಾಳ್ವೆಯೆಲ್ಲಾ ಈ ಒಂದು ವಿಷಯದ ಮೇಲೆಯೇ ಆಧಾರಪಟ್ಟಿದ್ದುದರಿಂದ, ನಾನು ಪಟ್ಟ ಕಷ್ಟ–ಈ ಹಾವಾಡಿಗನ ವಿಷಯವನ್ನು ಇಷ್ಟರಮಟ್ಟಿಗೆ ವಿಶದವಾಗಿ ತಿಳಿಸುವಂತೆ ಮಾಡಿತು. ನನ್ನ ಈ ಕಥೆಯನ್ನು ಓದುವವರಿಗೆ ನಾನು ಈ ಹಾವಾಡಿಗರವನ ಕಥೆಯನ್ನು ಅನವಶ್ಯವಾಗಿ ಬೆಳೆಸಿದೆನೆಂದು ತೋಚಿದರೆ ಅವರಲ್ಲಿ ನನ್ನ ವಿಜ್ಞಾಪನೆ –ನನ್ನ ಹೃದಯ ಎಷ್ಟು ವ್ಯಥೆಯನ್ನು ಅನುಭವಿಸಿತೋ, ನನ್ನ ಮನಸ್ಸು ಎಷ್ಟೊಂದು ಬಾಧೆಪಟ್ಟಿತೋ, ನಾನು ಅವೆಷ್ಟು ಕಷ್ಟಗಳನ್ನು ಅನುಭೋಗಿಸಿದೆನೋ, ಯಾರಾದರೂ ನನ್ನ ಸ್ಥಿತಿಯಲ್ಲಿದ್ದಿದ್ದರೆ ಹೀಗೆಯೇ ಮಾಡುತ್ತಿದ್ದರೋ ಇಲ್ಲವೋ ಅವರೇ ಮಥಿಸಿ ನೋಡಲಿ–ಎಂಬುದಾಗಿ ಮನವಿ ಮಾಡಿಕೊಳ್ಳುತ್ತಿರುವೆ.

ಅಷ್ಟರಲ್ಲಿಯೇ ನನ್ನ ಹೃದಯ ಭಾರಗೊಂಡಂತೆ ತೋಚಿತು. ನನ್ನ ಅತ್ತೆಯ ಮಗನಿಂದಾಗಿ ಆ ಭಾರವೆಲ್ಲಾ ಇಳಿದುಹೋಯಿತು. ಅವನು ನನ್ನ ಪಕ್ಕಕ್ಕೆ ಬಂದು, ನನ್ನ ಕೈಯನ್ನು ತನ್ನ ಭುಜದ ಮೇಲಕ್ಕೆಳೆದುಕೊಂಡು 'ಭಾವಯ್ಯಾ, ನಾವಿಬ್ರೂ ಒಕ್ಕಲಿಗರಲ್ಲ. ಹಾವಾಡಿಗರೇ! ಇವರೇನು ಮಾಡಿಕೊಳ್ತಾರೋ ಮಾಡಿಕೊಳ್ಳಲಿ. ನನಗೆ ಇಪ್ಪತ್ತೆರೆ ಜಮೀನಿದೆ, ಅದು ನಮ್ಮಿಬ್ಬರಿಗೆ ಸಮಪಾಲು! ಅವರೇನಾದ್ರೂ ಮಾಡಿಕೊಳ್ಳಲಿ ಬಿಡು ಭಾವಾ!' ಎಂದು ನುಡಿದ. ನನ್ನ ಹೃದಯದ ಭಾರವೆಲ್ಲಾ ಕರಗಿಹೋಯಿತು. ನಾನು ನನ್ನ ಭಾವಮೈದುನನನ್ನು ಎತ್ತಿ ಹಿಡಿದು ನನ್ನ ಹೃದಯಕ್ಕೆ ಬಲವಾಗಿ ಅದುಮಿಕೊಂಡೆ. ನಮ್ಮತ್ತೆ ಒಡನೆಯೇ 'ನಿನ್ನ ಜಮೀನು ಇವನಿಗೇಕೋ? ನಿಮ್ಮಕ್ಕನಿಗೆ ಅವ್ರ ಹೇಗೂ ಇಪ್ಪತ್ತೆಕರೆ ಜಮೀನು ಬರೆದೇ ಇದ್ದಾರಲ್ಲಾ!' ಎಂದು ಪ್ರೀತಿಯಿಂದ ನುಡಿದಳು. ನನ್ನ ಸಾಕು ತಂದೆ ಗತಿಸಿದ ಎರಡು ವರ್ಷಗಳಿಗೆ ಮತ್ತೆ ನಾನು ಹೆಸರು ಹೇಳಿಕೊಳ್ಳುವಂಥಾ ಮನೆಯ ಮಗನಾದೆ. ಗೌರವಸ್ಥ ಕುಟುಂಬಕ್ಕೆ ಸೇರಿದವನಾದೆ. ನನ್ನ ಬದುಕು ಇನ್ನು ಪರವಾಗಿಲ್ಲ ಎನ್ನಿಸಿತು.

ಆ ರಾತ್ರಿ ಊಟಮಾಡಿ, ಮಲಗುವ ಸಿದ್ಧತೆಯಲ್ಲಿದ್ದೆವು. ಆಗ, ನನಗೆ ವಿದ್ಯೆ ಕಲಿಸಿದ ನನ್ನ ಗುರುಗಳು ಬಂದರು. ನನ್ನನ್ನು ನೋಡಿದರು. ಆಗ ಅವರಿಗುಂಟಾದ ಆನಂದವನ್ನು ನಾನು ಬಣ್ಣಿಸಲಾರೆ. ಸ್ವಲ್ಪ ಹೊತ್ತು ಅದೂ ಇದೂ ಮಾತನಾಡಿ, ಮಾತಿನ ಮಧ್ಯೆ ಅವರ ಹೃದಯ ತುಂಬಿ ಬಂದು, ನನ್ನನ್ನು ತಟಕ್ಕನೆ ಅಪ್ಪಿಕೊಂಡು ಮುದ್ದಾಡಿದರು. ನಾನು ಕಳ್ಳರನ್ನು ಸದೆಬಡೆದಿರುವೆನೆಂದು ಯಾರೋ ಅವರಿಗೆ ಕಥೆ ಮಾಡಿ ತಿಳಿಸಿದ್ದರು. 'ಎಷ್ಟೊಂದು ಬೆಳೆದುಬಿಟ್ಟಿದೀಯಲ್ಲೋ!' ಎಂದರು. 'ಗರಡೀ ಮನೆಗೆ ಹೋಗಿ ಸಾಮು ಕಲಿತುಕೊಂಡಿದೀಯೇನೋ' ಎಂದರು. ನನ್ನ ಅತ್ತೆಯ ಮಗಳತ್ತ ಬೆರಳುಮಾಡಿ ತೋರಿಸುತ್ತ 'ಈ ಹುಡುಗಿಯೆನೋ ನಿನ್ನ ಹೆಂಡತಿ' ಎಂದರು. ಅವಳ ಗದ್ದ ಹಿಡಿದು ಅತ್ತ ಇತ್ತ ತಿರುಗಿಸಿ 'ರತ್ನದ ತುಣುಕು ಕಣಯ್ಯಾ! ನಿನಗೆ ತಕ್ಕ ಹೆಂಡತಿ ಕಣಾ!' ಎಂದರು. 'ಆರು ಜನ ಕಳ್ಳರನ್ನು ನೆಲ ಕಚ್ಚಿಸಿದೆಯೇನೋ!' ಎಂದರು. ಈ ಮಾತುಗಳನ್ನಾಡುತ್ತಾ ಮಧ್ಯೆ ಮಧ್ಯೆ ಇನ್ನೇನೋ

ಹೇಳುತ್ತಿದ್ದರು. ಅವರು ತಮಗುಂಟಾದ ಆನಂದವನ್ನೆಲ್ಲಾ ಕೊನೆಗೆ ಒಂದು ವಿಷಯದಲ್ಲಿ ತೋಲಿಸಿಬಿಟ್ಟರು.

೧೧

ನನ್ನ ಗುರುಗಳು ತಮಗಾದ ಆನಂದವನ್ನು ಹೀಗೆ ವ್ಯಕ್ತಪಡಿಸಿದರು–ನಾನಾಗ ಪುಸ್ತಕ ಓದಬೇಕಂತೆ, ಅವರು ಅರ್ಥ ಹೇಳುತ್ತಾರಂತೆ. ಅವರೇ ಸ್ವತಃ ಊರೊಳಗೆ ಹೋಗಿ ಹತ್ತಾರು ಜನರನ್ನು ಕರೆದುಕೊಂಡು ಬಂದರು. ಭಾಗವತವನ್ನು ತೆರೆದರು. ನಾನು ಓದತೊಡಗಿದೆ. ಅವರು ಅರ್ಥ ಹೇಳಲಾರಂಭಿಸಿದರು. ಒಂದು ಗಂಟೆಯ ತನಕ ಹೀಗೆಯೇ ಸಾಗಿತು. ಅನಂತರ ಅವರು 'ಲೋ, ನಾನು ಓದುತ್ತೇನೆ, ನೀನು ಅರ್ಥ ಹೇಳಬಲ್ಲೆಯಾ?' ಎಂದು ಕೇಳಿದರು. 'ನನ್ನ ಕೈಲಾಗೋಲ್ಲ ಮೇಷ್ಟ್ರೆ' ಎಂದು ವಿನಯದಿಂದ ತಿಳಿಸಿದೆ. ಅವರು ಒತ್ತಾಯ ಮಾಡಿ ನನ್ನ ಕೈಲಿ ಒಂದಿಷ್ಟು ಅರ್ಥ ಹೇಳಿಸಿದರು. ಅವರಿಗೆ ತೃಪ್ತಿಯಾಯಿತು. ಅವರು ತಮ್ಮ ಮನೆಗೆ ಹೊರಟುಹೋದರು.

ಪುರಾಣ ಕೇಳಲು ಬಂದವರೆಲ್ಲರೂ ನನ್ನನ್ನು ಪುನಃ ಕಂಡದ್ದರಿಂದ ತುಂಬಾ ಸಂತಸಗೊಂಡರು. ತುಂಬ ಆದರಪೂರ್ವಕವಾಗಿ ಮಾತನಾಡಿಸಿದರು. ನಮ್ಮ ಅತ್ತೆಗೆ ನನ್ನನ್ನು ನೋಡಿ ಎಲ್ಲಿಲ್ಲದ ಆನಂದ. ನನ್ನನ್ನು ಪ್ರೀತಿಯಿಂದ ಆಲಿಂಗಿಸಿಕೊಂಡು, ಮಾತುಮಾತಿಗೂ ಮುದ್ದಾಡುವುದಕ್ಕಾರಂಭಿಸಿದಳು. 'ಮಗೂ, ನೀನು ಬಂದಾಗಿನಿಂದಲೇ ನಾನು ಸುಖಪಟ್ಟಿದ್ದು. ನಿನ್ನ ಸೋದರಮಾವನವರು ಕಣ್ಮುಚ್ಚಿದ ಮೇಲೆ ದಿಕ್ಕಾಪಾಲಾಗಿ ಹೋಗುತ್ತಿದ್ದ ಸಂಸಾರವನ್ನು ನೀನು ಬಂದು ಆತುಕೊಂಡೆ. ನೀನಿಲ್ಲದೇ ಹೋಗಿದ್ದರೆ, ನನ್ನ ಮಕ್ಕಳು ಕಾಡುಪಾಲಾಗಿಬಿಡುತ್ತಿದ್ದುವು. ಗಿಡಗಿಡಕ್ಕೆ ಕಣ್ಣೀರು ಸುರಿಸುತ್ತ ತಿರುಗುತ್ತಿದ್ದುವೋ ಏನೋ! ನನ್ನದೇನಿದೆ? ನಾನು ಹೆಣ್ಣು ಮಗಳು. ನೀನು ಬಂದಮೇಲೆ, ಭೂಮಿಕಾಣಿಗಳನ್ನೆಲ್ಲಾ ಬಿಡಿಸಿಕೊಂಡು, ನೇರ್ಪಡಿಸಿದೆ. ನಿನ್ನ ಋಣವನ್ನು ನಾನು ಹೇಗೆ ತೀರಿಸಲಪ್ಪಾ, ಮಗೂ?'– ಏನೇನೋ ಇಂಥ ಮಾತುಗಳನ್ನಾಡುತ್ತ ಮಲಗಿಕೊಂಡರೂ, ಬಹುಹೊತ್ತಿನ ತನಕ ನಿದ್ರೆ ಮಾಡಲು ಬಿಡಲಿಲ್ಲ.

ಸಾಮಾನ್ಯವಾಗಿ ಬೆಳಗಿನ ಜಾವದಲ್ಲಿಯೇ ನಾನು ಎದ್ದುಬಿಡುತ್ತೇನೆ. ಹೊತ್ತೇರಿದ ಮೇಲೆ ನಾನೆಂದೂ ಎದ್ದವನಲ್ಲ. ನನಗೆ ತಿಳಿದಮಟ್ಟಿಗೆ ಯಾವ ದಿನವೂ ನಾನು ಹೊತ್ತೇರಿದ ಮೇಲೆ ಎದ್ದಿಲ್ಲ. ಆ ದಿನ ಮಾತ್ರ ಬೆಳ್ಳಂಬೆಳಕಾದ ಮೇಲೆ ನನಗೆ ಎಚ್ಚರವಾಯಿತು. ಎಚ್ಚರವಾಗುತ್ತಲೇ, ಮಲಗಿದಲ್ಲಿಂದ ಎದ್ದು ಬಿಡುವುದೇ ನನ್ನ ಅಭ್ಯಾಸವಾಗಲೀ, ಮತ್ತೆ ಹಾಗೆಯೇ ಮಲಗಿಕೊಂಡುಬಿಡುವುದು ನನ್ನ ಜಾಯಮಾನಕ್ಕೇ ಬಂದಿಲ್ಲ. ಆದರೆ ಆ ದಿನ ಎಚ್ಚರವಾದರೂ ಪುನಃ ಮಲಗಿಕೊಂಡುಬಿಟ್ಟೆ. ಆಮೇಲೆ ಎದ್ದಾಗ ನನಗೇ ಆಶ್ಚರ್ಯವಾಯಿತು–ನನ್ನ ಜೀವ ಸುಖಕ್ಕೆ ಒಗ್ಗಿಕೊಂಡುಬಿಟ್ಟಿದೆಯಲ್ಲಾ! ಎಂದು. ಅಷ್ಟೇ ಅಲ್ಲ. ಆ ಸುಖಕ್ಕೆ ಒಗ್ಗಿಕೊಂಡುಬಿಟ್ಟಿದ್ದರಿಂದ, ನನ್ನ ಮೈಯನ್ನೂ ಮಂದಾಗಿಸಿಬಿಟ್ಟಿದೆಯಲ್ಲಾ ಎಂದು

ಇನ್ನಷ್ಟು ಆಶ್ಚರ್ಯವಾಯಿತು. ಅಂದು ನಾನು ಹಾಗೆ ಪುನಃ ಮಲಗಿಕೊಂಡಾಗ ನನಗೊಂದು ಕನಸು ಬಿತ್ತು. ಕನಸಿನಲ್ಲಿ ನನ್ನ ಸ್ವಾಮಿ ಕಂಡುಬಂದ. ಕಾವಿ ಬಣ್ಣಕ್ಕೆ ತಿರುಗಿದ ಆ ಪಂಚೆ, ಆ ಮೂರು ನಾಮಗಳು, ಆ ಚುಟ್ಟಾ, ಆ ಬೆತ್ತ ಆ ಚಡಾವುಗಳಲ್ಲಿ ಆತ ಪ್ರತ್ಯಕ್ಷವಾದ. 'ನನ್ನ ಮಕ್ಕಳು ಕಣೋ' ಎಂದ. ನಾನು ದಿಗ್ಗನೆ ಎದ್ದು ಕುಳಿತೆ. ಕಳೆದ ರಾತ್ರಿಯ ಸಡಗರದಲ್ಲಿ–ಮಕ್ಕಳ ವಿಷಯವನ್ನು ಕುರಿತು ನಾನು ಯಾರನ್ನೂ ಕೇಳಿ ತಿಳಿದುಕೊಂಡಿರಲಿಲ್ಲ. ಕೂಡಲೇ ಕಾಲಕೃತ್ಯಗಳನ್ನು ತೀರಿಸಿಕೊಂಡು ನನ್ನ ಸಾಕುತಂದೆಯವರ ಮನೆಗೆ ಹೋದೆ. ಬಾಗಿಲಲ್ಲಿಯೇ ನನ್ನ ತಮ್ಮ ಕಾಣಿಸಿದ. ಮೊದಲಿಗಿಂತ ತುಂಬ ಎತ್ತರವಾಗಿ ಬೆಳೆದುಬಿಟ್ಟಿದ್ದ. ನನ್ನನ್ನು ಕೂಡಲೇ ಗುರುತಿಸಿ, ಗಟ್ಟಿಯಾಗಿ ಅಪ್ಪಿಕೊಂಡ. ಜಗುಲಿಯ ಬಳಿಗೆ ಹೋದೆ. ಎರಡನೆಯವನು ಕುಳಿತುಕೊಂಡಿದ್ದ. ಅವನು ನನ್ನನ್ನು ಗುರುತಿಸಲಿಲ್ಲ. 'ಅಕ್ಕ ಎಲ್ಲಿದಾಳೋ?' ಎಂದು ಕೇಳಿದೆ. 'ಹಿತ್ತಿಲಲ್ಲಿ ಮುಸುರೆ ತಿಕ್ಕುತ್ತಿದ್ದಾಳೆ' ಎಂದ. ನಾನು ಏಕಾಏಕಿ ಹಿತ್ತಿಲಿಗೆ ಹೋದೆ. ಅವಳು ಅಳುತ್ತಾ ಮುಸುರೆ ತಿಕ್ಕುತ್ತಿದ್ದಳು. 'ಯಾಕಮ್ಮಾ ಅಳ್ತಾ ಇದೀಯೇ?' ಎಂದು ಕೇಳಿದೆ. ತಲೆ ಎತ್ತಿ ನೋಡಿದಳು. ಸ್ವಲ್ಪ ಹೊತ್ತಿನ ಮೇಲೆ ನನ್ನನ್ನು ಗುರುತು ಹಿಡಿದು, 'ಅಣ್ಣಾ....!' ಎಂದು ಅಬ್ಬಬ್ಬರಿಸಿ ಅಳತೊಡಗಿದಳು. ಅವಳನ್ನು ಎಲ್ಲರೂ ಹುಚ್ಚಿ ಎನ್ನುತ್ತಿದ್ದರು. ಅಂದಿಗೂ ಇಂದಿಗೂ ಹೋಲಿಸಿ ನೋಡಿದರೆ ಇನ್ನಷ್ಟು ಹುಚ್ಚಿಯಂತೆ ಕಂಡುಬಂದಳು. 'ಯಾಕೋ ಅಕ್ಕ ಅಳ್ತಾ ಇದಾಳೆ?' ಎಂದು ಹಿರಿಯವನನ್ನು ಕೇಳಿದರೆ 'ಅತ್ತೆಮ್ಮ ಬರಲಿನ ಹಿಡಿಯಿಂದ ಅಕ್ಕಯ್ಯನನ್ನು ಹೊಡೆದಳು. ದಿನಕ್ಕೆ ನಾಲ್ಕಾರು ಸಲ ಹೊಡೀತಾಳೆ. ನನ್ನನ್ನೂ ಹೊಡೀತಾಳೆ. ತಮ್ಮಯ್ಯನನ್ನೂ ಹ್ಯಾಗಂದ್ರೆ ಹಾಗೆ ಹೊಡೀತಾಳೆ' ಎಂದು ಬಿಕ್ಕಿ ಬಿಕ್ಕಿ ಅತ್ತುಬಿಟ್ಟ ನಾನು ನಿಂತ ನಿಲುವಿನಲ್ಲಿಯೇ ನೀರಾಗಿಹೋದೆ. ಅಷ್ಟರಲ್ಲಿಯೇ ಅವರ ಸೋದರತ್ತೆ ಅಲ್ಲಿಗೆ ಬಂದಳು. ನನ್ನನ್ನು ನೋಡಿದಳು. ನಾನಾರೋ ಆಕೆಗೆ ತಿಳಿಯದು. 'ಯಾವೂರು?' ಎಂದು ಪ್ರಶ್ನಿಸಿದಳು. ನಾನು ಇಂಥವರ ಮಗನೆಂದು ತಿಳಿಸಿದೆ. ಅಷ್ಟಕ್ಕೇ ಆಕೆ ಮುಖ ಮುರಿದುಕೊಂಡು, 'ಯಾವಾಗ ಬಂದೆ? ಯಾವೂರಲ್ಲಿದೀಯೆ?' ಎಂದು ಕೇಳಿದಳು. 'ಬೇಡಿಕೊಂಡು ತಿನ್ನುವವನಿಗೆ ನಾಡೆಲ್ಲಾ ಊರೇ!' ಎಂದು ಮರುನುಡಿದೆ. ನಾನಲ್ಲಿ ಎಷ್ಟು ಹೊತ್ತು ನಿಲ್ಲಲಿ? ತಮ್ಮನೊಂದಿಗೆ 'ಮತ್ತೆ ಬಂದು ನೋಡ್ತೇನೆ' ಎಂದು ಹೇಳಿ ಹೊರಟುಬಂದೆ. ನಾನು ತಲೆಬಾಗಿಲತನಕ ಬಂದಿರಬಹುದು; ಅಷ್ಟರಲ್ಲಿಯೇ ನನ್ನ ತಂಗಿ ಮುಸುರೆ ತಿಕ್ಕುವುದನ್ನು ಬಿಟ್ಟು ಬಾಗಿಲತನಕ ನನ್ನನ್ನು ಹಿಂಬಾಲಿಸಿ ಬಂದಿದ್ದಳು. ಅವಳು ನನಗಿಂತಲೂ ವಯಸ್ಸಿನಲ್ಲಿ ಹಿರಿಯವಳಾದರೂ, ನಾನು ಅವಳನ್ನು ತಂಗಿ ಎಂದು ಕರೆಯುವುದೇ ನನಗೆ ಅಭ್ಯಾಸವಾಗಿಬಿಟ್ಟಿದೆ. ನನ್ನ ತಂಗಿ ಬಾಗಿಲಲ್ಲಿ ಬಂದು ನಿಲ್ಲುತ್ತಲೇ ನನಗೆ ಅವಳ ವಯಸ್ಸು ಜ್ಞಾಪಕಕ್ಕೆ ಬಂದಿತು. ಆಗ ನನಗೆ ಹದಿನಾಲ್ಕು–ಹದಿನೈದು ವರ್ಷಗಳಿದ್ದವು. ಅವಳು ನನಗಿಂತಲೂ ಎರಡು ವರ್ಷಗಳಿಗೋ, ಮೂರು ವರ್ಷಗಳಿಗೋ ದೊಡ್ಡವಳು. ನೋಡಲು ಅಪಸವ್ಯವಾಗಿದ್ದರೂ, ಮುಖದಲ್ಲಿ ಹುಚ್ಚು ಕಳೆಯಿದ್ದರೂ, ಚೆನ್ನಾಗಿ ಪ್ರಾಯ ಬಂದವಳ ಹಾಗೆ ಕಾಣಿಸುತ್ತಿದ್ದಳು. ನಾನು ಒಂದು ನಿಮಿಷ ಅವಳನ್ನು ಪರಿಕಿಸಿ ನೋಡಿದೆ. 'ಇವಳಿಗೆ ಮದುವೆ ಮಾಡಿಬಿಟ್ಟರೆ, ನನ್ನ ಸಾಕು ತಂದೆಯ ಋಣದಲ್ಲಿ ಬಹಳಷ್ಟು

ತೀರಿಸಿದವನಾಗುತ್ತೇನೆ' ಎಂದುಕೊಂಡೆ. 'ಮದುವೆಯೆಂಬುದೊಂದಾಗಿಬಿಟ್ಟರೆ ಇವಳಿಗೆ ಈ ಬರಲಿನ ಹೊಡೆತ, ಈ ಬಾಧೆಗಳು ಇಲ್ಲವಾಗುತ್ತವೆ' ಎಂದು ಅಂದುಕೊಂಡೆ. ಅವಳನ್ನು ನೋಡುತ್ತಿದ್ದರೆ ನನ್ನ ಕಣ್ಣುಗಳಲ್ಲಿ ನೀರು ಗಿರ್ರನೆ ತಿರುಗಿತು. ನಾನು ತುಳುಕಿ ಬಂದ ಕಣ್ಣೀರನ್ನೊರೆಸಿಕೊಳ್ಳುತ್ತ ಅಲ್ಲಿಂದ ಹೊರಟು ಬಂದೆ.

ಊರಿನಲ್ಲಿ ಅವರಿವರನ್ನು–ನನ್ನ ಸಾಕುತಂದೆಯವರ ಸಂಸಾರದ ಬಗ್ಗೆ ವಿಚಾರಿಸಿದೆ. ಒಬ್ಬೊಬ್ಬರು ಒಂದೊಂದು ತೆರನಾಗಿ ನುಡಿದರು–'ಅವರ ಕಥೆ ಮುಗಿದಂತೆಯೇ' ಎಂದೊಬ್ಬರು, 'ಸ್ವಾಮಿ ತುಂಬ ಸಾಲ ಮಾಡಿದಾನಂತೆ!' ಎಂದು ಮಗುದೊಬ್ಬರು; 'ಸ್ವಾಮಿಯ ಭೂಮಿಕಾಣಿಗಳೊಂದೂ ಉಳಿಯುವಂತಿಲ್ಲ' ಎಂದು ಮತ್ತೊಬ್ಬರು–ಹೀಗೆ ತಲೆಗೊಂದು ರೀತಿಯಾಗಿ ನುಡಿದರು. ನನ್ನ ಮೈಮೇಲೆ ಸಾವಿರಾರು ಚೇಳುಗಳು, ಜರಿಗಳು ಹರಿದಾಡಿದಂತಾಯಿತು. 'ಐದಾರು ಸಾವಿರ ರೂಪಾಯಿಗಳಷ್ಟು ಖಾತೆಯಿದ್ದುದು ನಾನು ಕಣ್ಣಾರೆ ಕಂಡಿದ್ದೆನಲ್ಲಾ. ಅದೆಲ್ಲಾ ಏನಾಯಿತು?' ಎಂದು ಪ್ರಶ್ನಿಸಿದೆ. ಒಬ್ಬಾತ 'ಸ್ವಾಮಿ ಮಾಡಿದ್ದ ಸಾಲ ಹತ್ತು ಸಾವಿರದವರೆಗಿದೆಯಂತೆ! ಅದನ್ನೆಲ್ಲಾ ಸ್ವಾಮಿಯ ಭಾವಮೈದುನನೇ ತೀರಿಸಿದನಂತೆ!' ಎಂದ. 'ಸಾಲ ಯಾವುದು? ನನಗೆ ತಿಳಿಯದ ಸಾಲವೇನು ಬಂತು?' ಎಂದು ಮತ್ತೊಬ್ಬರನ್ನು ವಿಚಾರಿಸಿದೆ–'ಸಾಲಸೋಲಗಳಿಗೆಂದು ಹೋಗಲಾಗಿ, ನನ್ನ ಚಿಕ್ಕಪ್ಪನವರಿಗೆ ಇನ್ನೂ ಭೂಮಿಕಾಣಿಗಳು ಉಳಿಯುತ್ತವಲ್ಲಾ!' ಎಂದು ತಿಳಿಸಿದೆ. ಅದಕ್ಕೆ ಅವರು 'ನಿಮ್ಮ ಚಿಕ್ಕಪ್ಪನವರು ಉಯಿಲು ಬರೆದಿಲ್ವೇ? ಆ ಉಯಿಲಿನಲ್ಲಿ ಭಾವಮೈದುನನಿಗೆ ಒಂದಿಷ್ಟು ಆಸ್ತಿ ಬರೆದಿದಾನಂತೆ. ಆತನ ಪಾಲು ಆತನಿಗೆ ಹೋಗಲಾಗಿ, ಇನ್ನುಳಿದ ಭೂಮಿಕಾಣಿಯೆಲ್ಲಾ ಸ್ವಾಮಿ ಮಾಡಿದ ಸಾಲಕ್ಕೆ, ಅಷ್ಟಷ್ಟಕ್ಕೇ ಸರಿಹೋಗುತ್ತಂತಲ್ಲಾ. ಹೇಗೆ ನೋಡಿದರೂ, ಮಕ್ಕಳಿಗೆಲ್ಲಾ ಸೇರಿ ಎರಡು ಎಕರೆಗಳಷ್ಟಾದರೂ ಉಳಿಯುವುದು ಗಗನವಾಗುತ್ತಂತೆ!' ಎಂದು ನುಡಿದರು.

ನನಗಾಗ ಉಯಿಲಿನ ಕಿತಾಪತಿ ಜ್ಞಾಪಕಕ್ಕೆ ಬಂದಿತು. ನನ್ನ ಚಿಕ್ಕಪ್ಪ ಕಾಯಿಲೆ ಮಲಗಿದ್ದಾಗ, ನನ್ನನ್ನು ಬಳಿಯಲ್ಲಿ ಸುಳಿಯಗೊಡದೆ ಒಳಗೊಳಗೇ ನಡೆಸಿದ ಕಿತಾಪತಿ ಇದೇ ಇರಬೇಕೆಂದೆನ್ನಿಸಿತು. ಈಗೇನು ಮಾಡಬೇಕೋ ನನಗೇನೂ ತೋಚದಾಯಿತು. ಪುನಃ ನನ್ನ ಸಾಕುತಂದೆಯ ಮನೆಗೆ ಹೋದೆ. ನನ್ನ ತಮ್ಮಂದಿರ ಸೋದರಮಾವ ಹೊರ ಜಗುಲಿಯ ಮೇಲೆಯೇ ಕುಳಿತಿದ್ದ. ಆತ ನನ್ನನ್ನು ನೋಡುತ್ತಲೇ ಮುಖವನ್ನತ್ತ ತಿರುಗಿಸಿಕೊಂಡ. ಆದಾಗ್ಯೂ ನಾನು ಆತನ ಹತ್ತಿರಕ್ಕೆ ಹೋಗಿ ಸಮೀಪದಲ್ಲಿಯೇ ಕುಳಿತುಕೊಂಡೆ. 'ಮಾವನವರೇ' ಎಂದು ಮಾತನಾಡಿಸಿದೆ. ಆತ ನನ್ನತ್ತ ದುರುದುರು ನೋಡಿ, 'ಯಾರೋ ನೀನು?' ಎಂದು ಗಡುಸಾಗಿ ಕೇಳಿದ. ನನಗೆ ಹಿಡಿಸಲಾರದಷ್ಟು ಕೋಪ ಬಂದಿತು. ನಾನು ಮನಸ್ಸು ಮಾಡಿದರೆ ಆತನನ್ನು ನನ್ನ ಮುಷ್ಟಿಯಲ್ಲಿಯೇ ಹಿಡಿದು ಅಲ್ಲಾಡಿಸಬಲ್ಲೆ. ಆತನನ್ನು ಕತ್ತು ಹಿಸುಕಿ ಕೊಂದುಹಾಕಿಬಿಡೋಣವೇ ಎನ್ನಿಸಿತು. ನನಗಷ್ಟು ಅಪಕಾರ ಮಾಡಿದ ಆ ಹಾವಾಡಿಗರುವನ್ನು ನಮ್ಮ ಜೀತದಾಳು ಉಸಿರಾಡಿಸದಂತೆ ಹೊಡೆಯುತ್ತಿದ್ದರೆ, ಆ ಹಾವಾಡಿಗನ ಮೇಲೆ ನನಗೆ

ಕರುಣೆಯುಂಟಾಗಿತ್ತಾಗಲೀ, ನನ್ನ ತಮ್ಮಂದಿರ ಸೋದರಮಾವನೆಂದರೆ ನನಗೆ ಎಳ್ಳಷ್ಟಾದರೂ ದಯೆ ಇಲ್ಲದಾಯಿತು. ಅಷ್ಟರೊಳಗೆ ನನ್ನ ತಮ್ಮ ಹೊರಬಂದ. ಅವನ ಕೈಗಳಿಗೆಲ್ಲಾ ಸಗಣಿಯಾಗಿತ್ತು. 'ಕೈಯೆಲ್ಲಾ ಏನೋ ಅದು?' ಎಂದು ಕೇಳಿದೆ. ಅವನು 'ಬೆರಣಿ ತಟ್ತಾ ಇದ್ದೆ' ಎಂದ. 'ನೀನೇಕೆ ತಟ್ಟಬೇಕು? ಆಳುಗಳಿಲ್ಲವೇ?' ಎಂದು ಕೇಳಿದೆ. ಅವನು ಯಾವ ಮಾತನ್ನೂ ಆಡದೆ ಮತ್ತೆ ಒಳಗೆ ಹೋಗಿಬಿಟ್ಟ! ಒಳಗೆ ಹೋಗುತ್ತಾ ತನ್ನ ಸೋದರಮಾವನತ್ತ ಭಯಭೀತನಾಗಿ ನೋಡಿದ! ನಿಜಸಂಗತಿಯೆಲ್ಲಾ ನನಗೆ ಗೊತ್ತಾಗಿಬಿಟ್ಟಿತು. ಆತನಿಗೆ ನನ್ನನ್ನು ಏನು ಮಾಡಬೇಕೋ ತೋಚದಾಗಿದೆ– ಎಂದು ಆತನ ಮುಖಭಾವದಿಂದ ಕಂಡುಕೊಂಡೆ. ನನ್ನ ಆಗಿನ ಮುಖಭಾವವನ್ನು ನೋಡಿ ಆತನಿಗೆ ಭಯವಾಗಿದೆ ಎಂದು ಮನಗಂಡೆ. ಆದರೂ, 'ಇವನೀಗ ಯಾವುದೋ ಕೊಂಪೆಯಲ್ಲಿ ಬಿದ್ದಿದ್ದಾನೆ' ಎಂದುಕೊಂಡು, ಒಂದಿಷ್ಟು ಧೈರ್ಯ ತಂದುಕೊಂಡು, ಆತ ಮತ್ತೆ 'ಯಾರು ನೀನು? ಈ ಮನೆಯ ಗೊಡವೆ ನಿನಗೇಕೆ?' ಎಂದು ಧಿಮಾಕಿನಿಂದ ಮಾತನಾಡಿದ. ನನಗೆ ಎಲ್ಲಿಲ್ಲದ ಕೋಪ ಉಕ್ಕಿಬಂದು ಆತನನ್ನು ಹೇಗೆಂದರೆ ಹಾಗೆ ಬಯ್ದುಬಿಟ್ಟೆ. ಸುತ್ತುಮುತ್ತಲಿನ ಜನವೆಲ್ಲಾ ಗುಂಪುಕೂಡಿಬಿಟ್ಟರು. 'ನನ್ನ ಚಿಕ್ಕಪ್ಪನವರ ಆಸ್ತಿಯನ್ನೆಲ್ಲಾ ನುಂಗಿ ನೀರು ಕುಡಿದು, ಮಕ್ಕಳ ಬಾಯಿಗೆ ಮಣ್ಣು ಹಾಕಿದೆಯಲ್ಲಯ್ಯಾ! ನೀನು ಕದೀಮ! ಮಗುವಿನ ಕೈಲಿ ಬೆರಣಿ ತಟ್ಟಿಸ್ತೀಯಾ! ನಾನು ಮನೆಯಲ್ಲಿದ್ದರೆ ನಿನ್ನ ಆಟ ಸಾಗೋಲ್ಲ ಅಂತ ನನ್ನನ್ನು ಓಡಿಸಿಬಿಟ್ಟೆಯಲ್ಲವೇ? ನಾನು ನಿರಾಧಾರಿ ಎಂದುಕೊಂಡಿದೀಯೇನೋ! ನನ್ನ ಸೋದರಮಾವನ ಆಸ್ತಿಯಲ್ಲಿ ಅರ್ಧ ಆಸ್ತಿ ನನ್ನದು. ಈಗ ನಿನಗೆ ಏಳು ಕೆರೆ ನೀರು ಕುಡಿಸಬಲ್ಲೆ! ತಿಳಿಯಿತೆ? ನಿನ್ನ ಬುನಾದಿಯನ್ನು ಹೊರಗೆಳೆಯುತ್ತೇನೆ. ನಿನ್ನನ್ನು ಸುಮ್ಮನೇ ಬಿಟ್ಟುಬಿಡ್ತೇನೆ ಅಂದುಕೊಂಡೆಯಾ!' ಎಂದು ಏನೇನೋ ಕೂಗಿದೆ. ಆತನೂ ಸಹ ನನ್ನನ್ನು ಬಯ್ಯುವುದಕ್ಕಾರಂಭಿಸಿದ. ಆತನ ಹೆಂಡತಿ ಮನೆಯೊಳಗಿನಿಂದ ಹೊರಬಂದು ನನ್ನನ್ನು ಜಾಲಾಡಿಸತೊಡಗಿದಳು. ನನ್ನ ಸಾಕುತಂದೆಯ ಮೂರು ಜನ ಮಕ್ಕಳೂ ಹೊರಬಂದು ಪೇಲವ ಮುಖದವರಾಗಿ ನನ್ನತ್ತ ನೋಡತೊಡಗಿದರು. ನಾನು ಚಿಕ್ಕವನನ್ನು ನನ್ನ ಬಳಿಗೆ ಕರೆದುಕೊಂಡೆ. ನಾನು ಕರೆಯುತ್ತಲೇ, ಅವನು ಸ್ವಲ್ಪ ಗುರುತಿಸಿ, ನನ್ನ ಬಳಿಗೆ ಬಂದ–ಆಗ ಅವನನ್ನು ನನ್ನ ಕೈಯಿಂದ ಆಕೆ ತಟಕ್ಕನೆ ಆಚೆಗೆ ಎಳೆದುಕೊಂಡಳು. ಅವನು ಅಳಲಾರಂಭಿಸಿದ.

ಈ ಜಗಳವನ್ನು ನೋಡಲು ನೆರೆದಿದ್ದವರಲ್ಲಿ ಕೆಲವರು 'ನಿನಗೇನಯ್ಯಾ ಸಂಬಂಧ?' ಎಂದು ನನ್ನನ್ನು ಕೇಳಿದರು! ಅದಕ್ಕೆ ಕೆಲವರು 'ಹಾಗಂದ್ರೆ ಹೇಗ್ರೀ? ಎರಡು ವರ್ಷಗಳವರೆಗೆ ಇವರ ಮನೆಯಲ್ಲಿದ್ದು, ಮಕ್ಕಳನ್ನೆತ್ತಿ ಆಡಿಸಿ, ಬೆಳೆಸಿದ್ದಾನೆ. ಸ್ವಾಮಿಯ ವ್ಯವಹಾರವನ್ನೆಲ್ಲಾ ನೋಡಿಕೊಂಡಿದ್ದ' ಎಂದು ಉತ್ತರವಿತ್ತನು. ಬಹಳ ಜನ ಹೆಂಗಸರು 'ಈ ಹುಡುಗ ಈ ಮನೆಗೆ ಹಿರಿಯ ಮಗ. ಸುಮ್ಮನಿರುತ್ತಾನೆಯೇ?' ಎಂದರು.

ನಾನು ಅಲ್ಲಿಂದ ನನ್ನ ಸಾಕುತಂದೆಯವರ ಜೀತದಾಳಿನ ಸಲುವಾಗಿ ಗೊಲ್ಲರ ಮನೆಗಳಿರುವಲ್ಲಿಗೆ ಹೋದೆ. ಅವನು ಕಾಣಿಸಿದ. ನನ್ನನ್ನು ನೋಡುತ್ತಲೇ ಅವನಿಗೆ ಎಲ್ಲಿಲ್ಲದ

ಸಂತಸವಾಯಿತು. 'ಬುದ್ದೀ, ಬುದ್ದೀ! ಎಲ್ಲಿದೀರಿ? ಏನು ಮಾಡ್ಕೂಂಡಿದೀರಿ?' ಎಂದು ಅವನು ನನ್ನನ್ನು ಕೇಳುತ್ತಿರುವಂತೆಯೇ, ನಾನು ಮಧ್ಯದಲ್ಲಿಯೇ, 'ಅದೆಲ್ಲಾ ಹಾಗಿರಲಿ. ಚಿಕ್ಕಪ್ಪಾ ಅವನ ಮನೆಯ ವಿಷಯವೇನು? ಮಕ್ಕಳ ವಿಚಾರವೇನು? ಅವರ ಗತಿ ಏನು? ಮೊದಲು ತಿಳಿಸು' ಎಂದು ಕೇಳಿದೆ. ಅವನು ಹೇಳತೊಡಗಿದ. 'ಬುದ್ಧೀ! ನೀವ್ರು ಹೊಂಟೋಗಿಬಿಟ್ರೆ ಅದೇನೇನೋ ಕಾಜ್ಗಾ, ಪಾಜ್ಗಾ ಬರಿಯೋದು ಭರಾಟೆಯಿಂದ ನಡೀತು. ಆರು ತಿಂಗಳಿಗೆಲ್ಲಾ ಏನೇನೂ ಉಳೀಸಿಲ್ಲ ಅಂತ ಖಾಲಿ ಕೈ ತೋರಿಸಿಬಿಟ್ರು. ನನ್ನನ್ನು ಆ ಕುಳ್ಳ ಬಯ್ಯುವ್ರುದು, ದಂಡಿಸುವ್ರುದು ಮಾಡತೊಡಗಿದ. ಒಂದು ದಿನ ನನ್ನ ಮ್ಯಾಲೆ ಕೈ ಮಾಡೋಕೂ ಬಂದ! ಆವೊತ್ತಿಂದ್ಲೇ ಆ ಮನೆ ತಾವ ಹೋಗೋದು ಬುಟ್ಟುಬುಟ್ಟೆ ಅವರ ಕೆಲ್ಸಾ ಬುಟ್ಟುಬುಟ್ಟೆ ಈಗ ಅಲ್ಲೀ ಇಲ್ಲೀ ಕೂಲೀನಾಲಿ ಮಾಡ್ಕಂಡಿದೀನಿ ಬುದ್ದೀ. ಆ ಕುಳ್ಳ ಒಳ್ಳೇನಲ್ಲ ಬುದ್ದೀ, ಈ ಊರಾಗಿನ ಶಾನುಭೋಗರು ಆ ಕುಳ್ಳನಿಗೆ ಆಸರೆಯಾಗಿ ನಿಂತ್ಕಂಡವ್ರೆ. ಆ ಶಾನುಭೋಗರನ್ನು ಈ ಊರಾಗ ಯಾವ್ರೊತ್ತಾದ್ರೂ ಒಂದಿನ ಕೊಂದೇಬಿಡ್ತಾರೆ ಬುದ್ಧೀ! ಆವಯ್ಯ ನಡಿಸೋ ಘೋರಕೃತ್ಯ ಅಷ್ಟಿಷ್ಟಲ್ಲ ನನ್ನೊಡೆಯಾ! ನೋಟೀಸು ಕೂಡಾ ಯಾರಿಗೂ ತಲಪೋದಿಲ್ಲ. ಹೊಲಗಳ ಮೇಲೆ ದಬ್ಬಾಳಿಕೆ ನಡಿಸ್ತಾ ಅವ್ರೆ ಆವಯ್ಯ!' 'ಹುಡುಗರ ಗತಿ ಮುಗಿದಂತೇನೋ ಹಾಗಾದ್ರೆ' ಎಂದು ಕೇಳಿದೆ. 'ನಿಮಗೆ ತಾನೇ ಲೆಕ್ಕಗಳೆಲ್ಲಾ ಗೊತ್ತಿರೋದು? ಏನಾರಾ ಮಾಡೋ ಹಾಗಿದ್ರೆ ನೀವೇ ಮಾಡಬೇಕ್ರಾ, ಆ ಐಕ್ಳ ಮೊಕಾ ನೋಡಿದಾಗ್ಲೆಲ್ಲಾ ನನ್ನ ಹೊಟ್ಟ್ಯಾಗ ಬೆಂಕಿ ಬೀಳ್ತದೆ ಬುದ್ಯೋರಾ!' ಎಂದ.

ನಾನು ಅಲ್ಲಿಂದ ಪಟೇಲರ ಮನೆಗೆ ಹೋದೆ. ಅವರೊಂದಿಗೆ ಇದನ್ನೆಲ್ಲಾ ಪ್ರಸ್ತಾಪಿಸಿದೆ. ಅವರು ಮೊದಲು ಯಾವ ಉತ್ಸಾಹವನ್ನೂ ತೋರಿಸಲಿಲ್ಲ. ಕೊಟ್ಟಕೊನೆಗೆ 'ಕಳ್ಳ ಸೂಳೇಮಗ! ಶ್ಯಾನುಭೋಗನೂ ಅವ್ನೂ–ಇಬ್ರೂ ಸೇರ್ಕೊಂಡು ಏನು ಕಿತಾಪತಿ ನಡೆಸಿದಾರೋ ಏನೋ! ಆದ್ರೂ ನೀನು ತಾನೇ ಈಗೇನು ಮಾಡಬಲ್ಲೆ?' ಎಂದು ಕೇಳಿದರು. 'ನಾನೇನು ಮಾಡಬಲ್ಲೆನೆ? ನನ್ನ ಸಾಕುತಂದೆ ಹತ್ತು ಸಾವಿರ ಸಾಲ ಮಾಡಿದ್ದಲ್ಲಿ ಕಾಗದ–ಪತ್ರಗಳು ಇರಬೇಕಲ್ಲವೇ? ಅವೆಲ್ಲಾ ಫೋರ್ಜರಿಗಳೆಂದು ಕೋರ್ಟಿನಲ್ಲಿ ಋಜುಪಡಿಸುತ್ತೇನೆ. ಆ ಕುಳ್ಳನಿಗೆ ನಮ್ಮ ಸ್ವಾಮಿ ಅರ್ಧ ಆಸ್ತಿಯನ್ನೇಕೆ ಬರೆದುಕೊಟ್ಟ? ನನಗೆ ಹೊಟ್ಟೆಯ ಮಕ್ಕಳಿಲ್ಲವೆಂದೇ? ಹಾಗೆ ನೋಡಲು ಕೂತರೆ ಇವನು ಭಾವಮೈದುನನೂ ಅಲ್ಲ. ಇವನು ನನ್ನ ಚಿಕ್ಕಮ್ಮನವರ ಚಿಕ್ಕಮ್ಮನ ಮಗ. ಏನಾದರೂ ಹೇಳಿದ್ದಿರಬಹುದೆಂದರೆ; ಹುಡುಗರು ಮೈನಾರಿಟಿ ತೀರುವತನಕ ಮನೆಮಾರು ನೋಡಿಕೊಂಡಿರು; ಎಂದು ಹೇಳಿರಬಹುದು; ಬರೆದಿರಬಹುದು. ಆದರೆ ಹೀಗೆ ಯಾರಾದರೂ ಆಸ್ತಿ ಬರೆದು ಕೊಡೋದುಂಟೆ? ಇಬ್ಬರು ಗಂಡುಮಕ್ಕಳಿದಾರೆ, ಒಬ್ಬ ಮಗಳಿದ್ದಾಳೆ. ಆ ಹುಡುಗಿಗಿನ್ನೂ ಮದುವೆಯಾಗಿಲ್ಲ. ಮನೆಯಲ್ಲಿ ಗಂಡು ಹುಡುಗನ ಕೈಲಿ ಸಗಣಿ ಎತ್ತಿ ಹಾಕಿಸುತ್ತಿದ್ದಾರೆ. ಆ ಹುಡುಗಿ ಕೈಗೆ ಬಂದಿದ್ದಾಳೆ. ಅವಳನ್ನು ದಿನಕ್ಕೆ ನಾಲ್ಕಾರು ಸಲ ಏನು ಸಿಕ್ಕಿದರೆ ಅದನ್ನು ತೆಗೆದುಕೊಂಡು ಹೊಡೀತಿದ್ದಾಳಂತೆ, ಆ ಹೆಂಗಸು. ನಾನಿನ್ನು ಸುಮ್ಮನಿರಲಾರೆ. ನೀವು ನನಗೆ ಯಾವುದಾದರೂ ಒಂದು ರೀತಿಯಲ್ಲಿ ಸಹಾಯ ಮಾಡಬೇಕಾಗುತ್ತದೆ. ಮಕ್ಕಳ

ಪರವಾಗಿ ನಾನು ಗಾರ್ಡಿಯನ್ನಾಗಿ ದಾವಾ ಹಾಕುತ್ತೇನೆ. ನೀವು ತಿಳಿದವರು. ಅನ್ಯಾಯಗಳು ನಡೆಯುತ್ತಿರುವಾಗ ಕಣ್ಣು ಮುಚ್ಚಿ ಕುಳಿತರೆ ಆ ಮಕ್ಕಳ ಗತಿ ಅಧೋಗತಿಯಾಗಿಬಿಡುತ್ತೆ. ನನ್ನ ಚಿಕ್ಕಪ್ಪ ಚೆನ್ನಾಗಿ ಬಾಳಿ ಬದುಕಿದ್ದಕ್ಕೆ ನೀವೆಲ್ಲರೂ ಹೀಗೆ ಕೈಕಟ್ಟಿ ಕೂತುಬಿಟ್ರೆ ಆ ಮಕ್ಕಳ ಉಸಿರು ತಾಕುತ್ತೆ. ನೀವು ಸಂಭಾವಿತರು, ನ್ಯಾಯಸ್ಥರು. ನಿನ್ನೆ ಹಾವಾಡಿಗನ ಮೇಲೆ ನೀವು ತೋರಿಸಿದ ಕೋಪ–ನಿಮ್ಮ ಹೃದಯದಲ್ಲಿ ನ್ಯಾಯವೆಂಬುದು ಇಲ್ಲದಿದ್ದ ಪಕ್ಷಕ್ಕೆ ಬರುತ್ತಿರಲಿಲ್ಲ. ದಿಕ್ಕು–ದೆಸೆಗಳಿಲ್ಲದ ನನ್ನ ಮೇಲೆಯೇ ನಿಮಗಿಷ್ಟು ಕರುಣೆಯಿರುವಾಗ, ಏನೂ ಅರಿಯದ ಆ ಕಂದಮ್ಮಗಳ ಬಗ್ಗೆ ಎಷ್ಟೋ ಕರುಣೆ ಇರಬೇಕಿತ್ತಲ್ಲಾ! ರಾತ್ರಿ ಭಾಗವತ ಓದುತ್ತಿದ್ದಾಗ ನೀವು ಕೇಳಿದಿರಲ್ಲಾ–ಯಾರಿಗೂ ಅನ್ಯಾಯ ಮಾಡಬಾರದು; ಭಗವಂತನೊಬ್ಬನಿದ್ದಾನೆ ಎಂದು. ನೀವು ಮನಸ್ಸು ಮಾಡಿದರೆ ಈ ಊರಿನಲ್ಲಿ ನಿಮ್ಮ ಮಾತನ್ನು ಯಾರೂ ತೆಗೆದುಹಾಕಲಾರರು; ನಿಮ್ಮನ್ನೇನೂ ಮಾಡಲಾರರು. ನೀವು ಒಂದೇಟು ಕಪಾಳಕ್ಕೆ ಹೊಡೆದರೆ, ಮೇಲೇಳಲು, ಆರು ತಿಂಗಳೇ ಬೇಕಾಗುತ್ತದೆ. ನಾನೀಗ ನಮ್ಮತ್ತೆಯವರನ್ನು ತಿರುಪತಿಗೆ ಕರೆದುಕೊಂಡು ಹೋಗಿಬರುತ್ತೇನೆ. ಆ ಮಕ್ಕಳು ಅವರ ಕೊಂಪೆಯಲ್ಲಿಯೇ ಇದ್ದುಬಿಟ್ಟರೆ ವೃಥಾ ಅನ್ಯಾಯವಾಗಿಬಿಡ್ತಾರೆ. ನಾನು ಅವರನ್ನು ಕರೆದುಕೊಂಡು ಹೋಗುವೆ. ಕನಿಷ್ಠ ಪಕ್ಷ ಆ ಮಕ್ಕಳನ್ನಾದರೂ ನನ್ನ ಹಿಂದೆ ಕಳಿಸಿಕೊಡುವ ಏರ್ಪಾಟಾದರೂ ಮಾಡಿ. ಹುಡುಗರಿಗೆ ವಿದ್ಯೆ ಕಲಿಸುತ್ತೇನೆ. ಆ ಹುಡುಗಿಗೆ ಎಲ್ಲಾದರೂ ವರ ಹುಡುಕಿ ಮದುವೆ ಮಾಡ್ತೇನೆ....'ಎಂದು ಹೇಳಿಕೊಂಡೆ.

ನನ್ನ ಕೋಪವನ್ನು ಮನಗಂಡು, ನನ್ನ ಮಾತುಗಳನ್ನು ಕೇಳಿ ಪಟೇಲರು ತುಂಬ ಮೃದುವಾದರು. ಅವರು –

'ಆ ಹುಡುಗಿ ಹುಚ್ಚು ಹುಡುಗಿ, ಅವಳಿಗೆಲ್ಲಿ ಮದುವೆಯಾಗುತ್ತೆ ? ಒಂದುವೇಳೆ ನಾನೇನಾದರೂ ಮಾಡೋಣವೆಂದರೆ ನೀನು ಮೊದಲೇ ಹೋಗಿ ಅವನೊಂದಿಗೆ ಜಗಳಾ ಕಾದು ಬಂದಿದ್ದೀಯೆ. ಇನ್ನು ಸರಿಹೋಗೋದು ಹೇಗೆ?....' ಎಂದರು. ನಾನು ಯೋಚಿಸಿದೆ 'ಬೇಕಾದರೆ ನಾನು ಮತ್ತೊಮ್ಮೆ ಅಲ್ಲಿಗೆ ಹೋಗಿ ಆತನೊಂದಿಗೆ ಒಳ್ಳೆಯ ರೀತಿಯಲ್ಲಿ ಮಾತನಾಡಿ ಬರುತ್ತೇನೆ. ಮಕ್ಕಳನ್ನು ನನ್ನ ಹಿಂದೆ ಕಳಿಸುವಂತೆ ಮಾಡಿ. ನನಗಿನ್ನೇನೂ ಬೇಡ' ಎಂದೆ. ಹಾಗೆಂದೆನಾಗಲೀ ನನ್ನ ಮನಸ್ಸಿನಲ್ಲಿ ನನಗೇ ಅನುಮಾನ. ನಾನು ಮಕ್ಕಳನ್ನು ಹಿಂದಿಟ್ಟುಕೊಂಡು ಹೋದರೆ, ಈ ಮಕ್ಕಳನ್ನು ನಮ್ಮತ್ತೆ ಮನೆಯಲ್ಲಿರಿಸಿಕೊಳ್ಳಲು ಒಪ್ಪಿಕೊಳ್ಳುತ್ತಾಳೆಯೇ? ಮೇಲಾಗಿ, ತನ್ನ ಮಗಳನ್ನು ನನಗಿತ್ತು ಮದುವೆ ಮಾಡಿದ ಮೇಲಲ್ಲವೇ ಆ ಮನೆಯಲ್ಲಿ ನನಗೊಂದಿಷ್ಟು ಅಧಿಕಾರ ? ಸದ್ಯಕ್ಕೆ ಆ ಮನೆಗೆ ಈಗ ನಾನಾರು ? ನಿನ್ನೆ ಸಾಯಂಕಾಲದ ತನಕ ನಾನಿನ್ನೂ ಸರಿಯಾಗಿ ಸೋದರಳಿಯನೇ ಆಗಿರಲಿಲ್ಲ. ನಮ್ಮತ್ತೆಯ ಬಳಿಗೆ ಹೋಗಿ ವಿಷಯವನ್ನೆಲ್ಲಾ ತಿಳಿಸಿದೆ. ಮಕ್ಕಳನ್ನು ಕರೆತರಬೇಕೆಂದಿರುವೆನೆಂಬುದನ್ನು ಮಾತ್ರ ತಿಳಿಸಲಿಲ್ಲ. ಆಕೆ ತುಂಬ ಮರುಗಿದಳು. 'ಇರುತ್ತಾರೆ ಕಣೋ, ಲೋಕದಲ್ಲಿ ಇಂಥಾ ಕಳ್ಳ ಮುಂಡೇಮಕ್ಕಳು! ನೀನು ಬರುವ ಮುಂಚೆ ನಮ್ಮೂರಿನವರು ನನಗೆಷ್ಟು ಕಷ್ಟಗಳನ್ನು ಕೊಟ್ಟರೋ ನಾನರಿಯೆನೇ?

ಹೊಲಗಳನ್ನು ಬೇರೆ ಯಾರೂ ಗೇಣಿಗೆ ಹಿಡಿಯಲು ಅವಕಾಶವನ್ನೇ ಕೊಡುತ್ತಿರಲಿಲ್ಲ. ಹೊಲಗಂದಾಯ ಆರೆಂದರೆ, ಐದೆಂದೂ ಫಸಲಿನಲ್ಲಿ ಏಳು ಚೀಲಗಳೆಂದರೆ ಆರು ಚೀಲಗಳೆಂದೂ ನನ್ನನ್ನು ಬಹು ಗೋಳಾಡಿಸಿದರು. ಇನ್ನು ಪಾಪ ಆ ಮಕ್ಕಳ ಗತಿ ಹೇಗಿರಬೇಡ? ನೀನು ತಾನೇ ಏನು ಮಾಡೀಯೆ ?' ಎಂದು ಕಳಕಳಿಯಿಂದ ನುಡಿದಳು. ಗಾಡಿಗಳಿಗೆ ಎತ್ತುಗಳನ್ನು ಕಟ್ಟಿ ಎಲ್ಲರೂ ಪ್ರಯಾಣಸನ್ನದ್ಧರಾದರು. ನಾನು ಕೋಮಟಿಗನ ಅಂಗಡಿಗೆ ಹೋಗಿ, ಒಂದು ಸವಾಸೇರು ಹಲಗೆ ಬೆಲ್ಲವನ್ನು ಕೊಂಡು. ಹುಡುಗರ ಕೈಗೆ ಕೊಟ್ಟು ಬರೋಣವೆಂದು ಹೊರಟೆ. ಆ ಕುಳ್ಳ ಜಗುಲಿಯ ಮೇಲೆ ಚುಟ್ಟಾ ಸೇದುತ್ತಾ ಕುಳಿತುಕೊಂಡಿದ್ದ ನನ್ನನ್ನು ನೋಡುತ್ತಲೇ ಉರಿದುಬಿದ್ದು, 'ನನ್ನ ಮನೇ ಬಾಗಿಲಿಗೆ ಬರಲು ನೀನಾವನಯ್ಯಾ? ಕತ್ತು ಹಿಡಿದು ಆಚೆ ತಳ್ಳಿಸುತ್ತೇನೆ, ನೋಡಿಕೋ' ಎಂದು ಕೂಗಿಕೊಂಡ. 'ನಿನ್ನ ಸಲುವಾಗಿಯೇನೂ ಬರಲಿಲ್ಲ ಬಿಡಯ್ಯಾ !' ಎಂದೆ ನಾನು. ಹಾಗೆಂದು ಮನೆಯೊಳಗೆ ಹೋಗುವವನಿದ್ದೆ. ಅಷ್ಟರಲ್ಲಿಯೇ ಆತ ನನ್ನನ್ನು ಅಡ್ಡಗಟ್ಟಿದ. 'ಏನಯ್ಯಾ! ನಾನು ಯಾರ ಆಸ್ತಿಯನ್ನೂ ಲಪಟಾಯಿಸೋನಲ್ಲ. ಒಂದಿಷ್ಟು ಬೆಲ್ಲ ತಂದಿದೇನೆ. ಮಕ್ಕಳಿಗೆ ಕೊಟ್ಟು ಹೋಗೋಣಾಂತ ಬಂದಿದೇನಷ್ಟೇ. ನೀನು ಅನವಸರವಾಗಿ ಕೈಗೆ ಕೈ ಮಿಲಾಯಿಸಿದೆಯೋ, ಆಮೇಲೆ ನನ್ನನ್ನು ಪೋಲೀಸರು ಕೋಳ ಹಾಕಿ ಕರೆದೊಯ್ದರೂ ಚಿಂತೆಯಿಲ್ಲ ; ನಿನ್ನನ್ನು ಹುಟ್ಟಿಲ್ಲಾಂತ ಅನ್ನಿಸಿಬಿಡುತ್ತೇನೆ ; ಆರು ಜನ ಹಾವಾಡಿಗರನ್ನು ನೀರು ಗಾಯಿ ಹಣ್ಣುಗಾಯಿ ಮಾಡಿದೇನೆ. ತಿಳೀತೋ ! ಅವರಲ್ಲಿ ಒಬ್ಬನ ಕಾಲಿನ ಉಗುರಿಗೂ ಈಡಲ್ಲ ನೀನು !' ಎಂದೆ.

ಈ ಮಾತುಗಳನ್ನಾಡಿದ ಮೇಲೆ ಆತ ಬಯ್ಯುವುದನ್ನು ನಿಲ್ಲಿಸಲಿಲ್ಲವಾದರೂ, ನನ್ನನ್ನು ಅಡ್ಡಗಟ್ಟಲಿಲ್ಲ. ನಾನು ಮನೆಯೊಳಗೆ ಹೋಗಿ, ಹಲಗೆ ಬೆಲ್ಲವನ್ನು ಮೂರು ತುಂಡುಗಳನ್ನಾಗಿ ಮಾಡಿ, ಮೂರು ಜನ ಹುಡುಗರಿಗೆ ಹಂಚಿ ಬಂದೆ. ಕೊನೆಯ ಹುಡುಗನನ್ನು ಎತ್ತಿಕೊಂಡು ಹೊರಕ್ಕೆ ಬಂದೆ. ಅಷ್ಟರಲ್ಲಿ ಆತ ಬಯ್ಯುವುದನ್ನು ನಿಲ್ಲಿಸಿ ಸುಮ್ಮನೆ ಕುಳಿತಿದ್ದ. ನಾನು ಹುಡುಗನನ್ನು ಕೆಳಗಿಳಿಸಿ, ಒಳಗೆ ಹೋಗಿ ಬಿಟ್ಟು, ಮತ್ತೆ ಹೊರ ಬಂದು ಆತನೊಂದಿಗೆ ಹೇಳಿದೆ 'ಏನ್ರೀ ! ನಿಮ್ಮಿಷ್ಟ ಬಂದ ಹಾಗೆ ಮಾಡಿ. ಆದರೆ ನಾನು ಯಾವಾಗಲಾದರೂ ಬಂದು ಮಕ್ಕಳನ್ನು ನೋಡಿಕೊಂಡು ಹೋಗ್ತಾ ಇರ್ತೇನೆ. ನೋಡಿಕೊಂಡು ಹೋಗಲು ಮಾತ್ರ ಅವಕಾಶ ಮಾಡಿಕೊಡಿ. ನನ್ನ ಸಾಕುತಂದೆಯ ಉಪ್ಪು ಉಂಡಿದ್ದೇನಾದ್ದರಿಂದ ಆ ಮಕ್ಕಳ ಮೇಲಿನ ಮಮತೆ ಬಿಟ್ಟುಹೋಗಿಲ್ಲ' ಎಂದೆ.

ಅದಕ್ಕೆ ಆತ 'ಯಾರೊ ನೀನು? ನೀನಗೇನು ಸಂಬಂಧ ?' ಎಂದು ಮತ್ತೆ ಹತ್ತು ಬಯ್ದ. ಆತ ಬಯ್ಯುತ್ತಿದ್ದರೆ ನಾನು ತಲೆ ತಗ್ಗಿಸಿಕೊಂಡೇ ನಿಂತಿದ್ದೆ. ಆತನ ಬಯ್ಗುಳಗಳನ್ನು ಕೇಳಿ ಸುತ್ತಮುತ್ತಲಿನ ಹೆಂಗಸರೆಲ್ಲಾ ಮತ್ತೆ ಗುಂಪುಗೂಡಿದರು. ಆತನ ಬಯ್ಗುಳಗಳಿಗೆ ಇತಿಮಿತಿಯಿಲ್ಲದಾಯಿತು. ಕೊನೆಯ ಹುಡುಗ ಹಲಗೆ ಬೆಲ್ಲವನ್ನು ತಿನ್ನುತ್ತಾ ಅಲ್ಲಿಯೇ ನಿಂತುಕೊಂಡಿದ್ದ. ಆತ ಬಯ್ಯುತ್ತ ಬಯ್ಯುತ್ತಲೇ ಆ ಮಗುವಿನ ಕೈಯಲ್ಲಿನ ಬೆಲ್ಲದ ತುಂಡನ್ನು

ಪರಕ್ಕನೆ ಕಿತ್ತುಕೊಂಡು, ಮಣ್ಣಿಗೆಸೆದು 'ಯಾವನೋ ಅವನು ? ಅವನು ಕೊಟ್ಟ ಬೆಲ್ಲವನ್ನು ತಿನ್ನುತ್ತೀಯಾ?' ಎಂದು ಗದರಿಸಿದ. ಅಷ್ಟರೊಳಗಾಗಿ ಹಿರಿಯ ಹುಡುಗ ಹೊರಬಂದು, ಕೆಳಗೆಸೆದ ಬೆಲ್ಲದ ತುಂಡನ್ನು ಕೈಗೆತ್ತಿಕೊಂಡು ಧೂಳೊರೆಸಿ ತಮ್ಮನ ಕೈಗಿತ್ತ ಆ ಕುಳ್ಳ ಆಸಾಮಿ 'ಕತ್ತೆಗಳಾ ! ನಿಮ್ಗೂ ಇವನಿಗೂ ಏನು ಸಂಬಂಧವೋ?' ಎಂದ. ಹಿರಿಯ ಹುಡುಗ 'ಇವನು ನಮ್ಮಣ್ಣಯ್ಯ !' ಎಂದ. ಹೆಂಗಸರೆಲ್ಲರೂ ನಕ್ಕರು. ಕೆಲವರು ಆ ಕುಳ್ಳನೊಂದಿಗೆ 'ಹುಡುಗ ಹುಡುಗರಲ್ಲಿ ಅಷ್ಟೊಂದು ಅಪೇಕ್ಷೆ ಇರೋವಾಗ ನಿನ್ನದೇನಯ್ಯಾ ಹೋಗುತ್ತೆ ಮಣ್ಣಾಂಗಟ್ಟಿ! ಆ ಹುಡುಗ ಬರಲಿ ; ಬಂದು ನೋಡಿ ಪ್ರೀತಿ ತೋರಿಸಿಕೊಳ್ಳಲಿ. ಆ ಹುಡುಗ ಮಾತ್ರ ಏನು ಮಾಡಿದಾನೆ ಅಂತ? ಪಾಪ! ಎರಡು ವರ್ಷ ಈ ಮನೆಗೆ ಹಿರಿಯ ಮಗನ ಹಾಗೆ ನಿಂತಿದ್ದನಾದ್ದರಿಂದ, ಹೆಂಗುಳು ಮುಂಡೇದು ಆದ್ದರಿಂದ ಮಕ್ಕಳೊಂದ್ರೆ ಬಿದ್ದು ಸಾಯ್ತಾನೆ. ಆ ಹುಡುಗ ಪ್ರೀತಿಯಿಂದ ಬೆಲ್ಲ ಕೊಟ್ಟರೆ ಮಕ್ಕಳು ತಿನ್ನಕೂಡದೇನಯ್ಯಾ?" ಎಂದರು. ಅವರೊಳಗಿನ ಒಬ್ಬ ಮುದುಕಿ–ಆ ಕುಳ್ಳನ ಬಳಿಗೆ ಹೋಗಿ, ಆತನ ಮುಖಕ್ಕೆ ಸಮೀಪವಾಗಿ ತನ್ನ ಮುಖವನ್ನೊಯ್ದು 'ನೀನೆಂದಾದ್ರೂ ಒಂದಿಷ್ಟು ಬೆಲ್ಲದ ತುಣುಕನ್ನು ಆ ಮಕ್ಕಳ ಕೈಗಿಡೋ ಪಾಪಕ್ಕೆ ಹೋಗಿದೀಯೇನೋ ! ಆ ಮಕ್ಕಳ ತಲೇಮೇಲೆ ಚಪ್ಪಡಿ ಎಳೆದುಬಿಟ್ಟೆ! ಯಾರಾದರೂ ಬಂದು ಆ ಮಕ್ಕಳ ಕೈಗೆ ಏನಾದರೂ ಕೊಟ್ಟರೆ ನಿನ್ನ ಕಣ್ಣುಗಳು ಸಹಿಸೋಲ್ಲವೇನೋ?' ಎಂದಳು. ಆತ ಇನ್ನೂ ಬಯ್ಯುತ್ತಲೇ ಇದ್ದ.

ನಾನು ಬಹು ಹೊತ್ತು ಸಹಿಸಿಕೊಂಡೆ. ಕೊನೆಗೆ ಹಟಾತ್ತನೆ ನನಗೆ ಕೋಪ ಉಕ್ಕಿಬಂದು ಅಲ್ಲಿಯೇ ಇದ್ದ ಕೋಲನ್ನೆತ್ತಿಕೊಂಡು 'ಬಾಯ್ ಮುಚ್ಚು! ಒದರಬೇಡ. ಇನ್ನೊಂದೇ ಬಂದು ಮಾತು ನಿನ್ನ ಬಾಯಿಂದ ಹೊರಬಂತೋ ನಿನ್ನ ಹೆಣಾ ಇಲ್ಲಿ ಉರುಳುತ್ತೆ ಜಾಗ್ರತೆ !' ಎಂದೆ. ಆ ನೆರೆದವರಲ್ಲಿ ಕೆಲವರು ಗಂಡಸರೂ ಇದ್ದರು. ಅವರಾರೂ ಮಧ್ಯೆ ಬರಲಿಲ್ಲ. ಆ ಕುಳ್ಳನ ಮುಖ ನೋಡಿದರೆ ಭೀತನಾದಂತೆ ತೋಚಿತು. ತಟಕ್ಕನೆ ಬಯ್ಯುವುದನ್ನು ಅಲ್ಲೇ ನಿಲ್ಲಿಸಿಬಿಟ್ಟ ತಲೆಬಾಗಿಲಾಚೆ ಆತನ ಹೆಂಡತಿ ನಿಂತುಕೊಂಡು ಬಾಲಕಿತ್ತ ನರಿಯಂತೆ ಏನೇನೋ ಊಳಿಡುತ್ತಿದ್ದಳು. ನಾನು ಅಲ್ಲಿಂದ ಹೊರಟು ಬಂದೆ.

## ೧೨

ಆ ಊರಿನಿಂದ ಗಾಡಿಗಳಲ್ಲಿ ಹೊರಟೆವು. ನಮ್ಮ ಸ್ವಂತ ಚಿಕ್ಕಮ್ಮನವರ ಊರಿಗೆ ಹೋಗಲಿಲ್ಲ. ಅಲ್ಲಿಗೆ ಹೋಗುವ ಅಗತ್ಯವಿಲ್ಲದಾಯಿತು. ಏಕೆಂದರೆ ಗುಂಟೂರಿಗೆ ಹೋಗಬೇಕಾದರೆ, ಆ ಊರಿನ ಮಾರ್ಗವಾಗಿ ಹೋಗುವುದು ಅನಗತ್ಯವಾಗಿತ್ತು. ನನ್ನ ಸಾಕುತಂದೆಯವರ ಊರನ್ನು ಅಷ್ಟು ಬೇಗ ತೊರೆದು ಹೋಗಬೇಕಾಗಿ ಬಂದುದರಿಂದ ನನಗೆ ತುಂಬ ದುಃಖವಾಯಿತು. ಆದರೆ ನಾನೇನು ಮಾಡಲಿ?

ಹುಣ್ಣಿಮೆಯ ದಿನದೊಳಗಾಗಿಯೇ ನಾವು ತಿರುಪತಿ ತಲುಪಿದೆವು. ನಾವು ಕೆಲವು ಕಷ್ಟಗಳಿಗೀಡಾದೆವು. ಅವುಗಳಿಂದ ನನ್ನ ಕಥೆಗೆ ಹೆಚ್ಚಿನ ಪ್ರಯೋಜನವಿಲ್ಲ. ಆದ್ದರಿಂದ ನಾನು

ಅವುಗಳನ್ನು ವರ್ಣಿಸುವುದಿಲ್ಲ. ಆದರೆ ನಾಲ್ಕೈದು ವಿಷಯಗಳನ್ನು ತಿಳಿಸಿ ಮತ್ತೆ ಕಥೆಗೆ ತೊಡಗುತ್ತೇನೆ.

ತಿರುಪತಿಯ ಬೆಟ್ಟದ ಮೇಲೆ, ಒಂದು ದಿನ ನಾವೆಲ್ಲಾ 'ಪಾಪನಾಶನ'ದ ಬಳಿಗೆ ಸ್ನಾನಕ್ಕೆಂದು ಹೊರಟೆವು. ನನ್ನ ಮಾವನ ಮಗಳು ಬೆಟ್ಟ ಹತ್ತಲಾರದೆ ನನ್ನ ಕೈ ಹಿಡಿದುಕೊಂಡು ಬರುತ್ತಿದ್ದಳು. ಒಂದು ಕಡೆ ಮುಗ್ಗರಿಸಿ ಬೀಳುತ್ತಿದ್ದಳು. ಆಗ ನಾನು ತಟಕ್ಕನೆ ಅವಳನ್ನು ಹಿಡಿದುಕೊಳ್ಳುವುದರಲ್ಲಿ ಅಪ್ಪಿಕೊಂಡುಬಿಟ್ಟಿದ್ದೆ. ಬಳಿಯಲ್ಲಿಯೇ ಇದ್ದ ಒಂದು ಕೋತಿ, ತನ್ನನ್ನು ನಾನು ಹೊಡೆಯಲು ಹೋದೆನೆಂದೋ ಏನೋ ನನ್ನ ಮುಖವೆಲ್ಲಾ ಆ ಕೋತಿಯ ಉಗುರುಗಳುಂಟುಮಾಡಿದ ಚೂರು ಗಾಯಗಳಿಂದ ತುಂಬಿಹೋಯಿತು. ಹಾಗೆ ಪರಚಿದ ಕೋತಿಯೂ, ಇನ್ನೆರಡು ಕೋತಿಗಳೂ ಹತ್ತಿರದಲ್ಲಿಯೇ ಇದ್ದ ಬಂಡೆಯ ಮೇಲೆ ಕುಳಿತು, ನನ್ನನ್ನು ಬೆದರಿಸುತ್ತ ಹಲ್ಲು ಕಿರಿಯತೊಡಗಿದುವು.

ಹಾಗೇಕೆ ನಡೆಯಿತೋ ನನಗೆ ತಿಳಿಯದಾಯಿತು.

'ಪಾಪನಾಶನ'ದಲ್ಲಿ ಸ್ನಾನ ಮಾಡುವಾಗ ನನಗೆ ತಟಕ್ಕನೆ ಹೊಳೆಯಿತು – ನನ್ನ ಮಾವನ ಮಗಳನ್ನು ನಾನೆಂದೂ ತಾಕಿರಲಿಲ್ಲ. ನನ್ನ ಮನಸ್ಸಿನೊಳಗೆ ಏಕೋ ಅವಳು ನನ್ನ ಹೆಂಡತಿಯಾಗುವ ಯೋಗವಿಲ್ಲವೆಂದೆನ್ನಿಸುತ್ತಿತ್ತು. ವಿಪತ್ತಿನ ವೇಳೆಯಲ್ಲಿ ಅವಳನ್ನು ನಾನು ಅಪ್ಪಿಕೊಳ್ಳುವುದು ಆ ಭಗವಂತನಿಗೆ ಬೇಕಾಗಿರಲಿಲ್ಲವೆಂದೆನ್ನಿಸುತ್ತದೆ. ಇಂತಹ ಪ್ರಸಂಗಗಳು ಒಂದೆರಡು ಜರುಗಿದುವು. ಅವುಗಳನ್ನು ಕುರಿತು, ಅವುಗಳ ವಿಚಾರ ಬಂದಾಗ ತಿಳಿಸುತ್ತೇನೆ. ತಿರುಪತಿ ಬೆಟ್ಟದ ಮೇಲೆ ನಡೆದ ವಿಷಯಗಳಲ್ಲಿ ಇದೊಂದು.

ಎರಡನೆಯದೇನೆಂದರೆ, ಗಾಳಿಗೋಪುರದ ಹತ್ತಿರದ ಇಳಿಜಾರು ಪರ್ವತವನ್ನು ಇಳಿಯುವುದರೊಳಗೇ ಹೊತ್ತು ಕಂತಿಬಿಡುತ್ತದೆ. ಆದ್ದರಿಂದ ಕತ್ತಲಾಗಿಬಿಡುತ್ತದೆಂದು ನಾವೆಲ್ಲರೂ ಅವಸರವಸರವಾಗಿ ಇಳಿಯ ತೊಡಗಿದೆವು. ನಮ್ಮತ್ತೆ– ತನಗೆ ಡೋಲಿ ಏರ್ಪಾಟು ಮಾಡುತ್ತೇನೆ ಎಂದುದಕ್ಕೆ ಬೇಡವೆಂದಳು. ಆಕೆ ಬೆಟ್ಟವನ್ನೆಲ್ಲಾ ಇಳಿದು ಬಂದಿದ್ದಳಾಗಲೀ ಕೊನೆಗೆ ಮೂರೇಮೂರು ಮೆಟ್ಟಲುಗಳಿವೆ ಎನ್ನುವಾಗ ಆಕೆ ತಟಕ್ಕನೆ ಕಾಲು ತೊಡರಿ ಬೋರಲಾಗಿ ಬಿದ್ದುಬಿಟ್ಟಳು. ಒಂದು ತಾಸಿನತನಕ ಆಕೆಗೆ ಎಚ್ಚರವಾಗಲೇ ಇಲ್ಲ. ಮುಖದ ಮೇಲೆ ನೀರು ಚಿಮುಕಿಸಿ, ಗಂಟಲಿಗೆ ಕೊಂಚ ನೀರು ಬಿಟ್ಟು, ನಾನಾ ಪಾಡುಪಟ್ಟೆವು. ನಮ್ಮತ್ತೆಯ ಮಗಳು, ಮಗ–ಜೋರಾಗಿ ಅಳುವುದಕ್ಕಾರಂಭಿಸಿದರು. ಅವರನ್ನು ಸಮಾಧಾನಪಡಿಸಿ, ನಮ್ಮತ್ತೆಗೆ ಶೈತ್ಯೋಪಚಾರ ಮಾಡಿದ ಮೇಲೆ, ಸ್ವಲ್ಪ ಹೊತ್ತಿಗೆ ಆಕೆಗೆ ತಿಳಿವು ಬಂದಿತು. ಆಗಿನಿಂದಲೇ ಆಕೆಯ ಮನಸ್ಸು ಸರಿಯಾಗಿಲ್ಲದಾಗಿಬಿಟ್ಟಿತು. ಆಕೆ ಬದುಕಿನ ಅಷ್ಟು ವರ್ಷಗಳಲ್ಲಿ ಆಕೆಯ ಆರೋಗ್ಯ ಕೆಟ್ಟಿದ್ದು ಅದೇ ಮೊದಲು.

ನಾವು ತಿರುಪತಿಯಿಂದ ಹಿಂತಿರುಗಿ ಬಂದೆವು. 'ತದಿಗೆಗೇ ಬಂದು ಬಿಡುತ್ತೇವೆ; ಗುಂಟೂರಿನಲ್ಲಿ ಗಾಡಿಗಳೊಡನೆ ಕಾದಿರು' ಎಂದು ನಮ್ಮ ಜೀತದಾಳಿಗೆ ಹೇಳಿದ್ದೆ. ಆದರೆ ನಮ್ಮತ್ತೆ ತಿರುಪತಿ ಬೆಟ್ಟದ ಮೇಲೆ ಬಿದ್ದು ಬಿಟ್ಟುದರಿಂದ ಒಂದು ದಿನ ತಡವಾಯಿತು. ಚೌತಿಯ

ದಿನ ರಾತ್ರಿ ಮೇಲ್ ಗಾಡಿಯಲ್ಲಿ ಹೊರಟು ಬರಬೇಕಾಗಿತ್ತಾಗಲೀ, 'ಈ ದಿನ ಚೌತಿ, ಪ್ರಯಾಣ ಮಾಡುವುದು ಬೇಡ, ನಾಡಿದ್ದು ಹೋಗೋಣ' ಎಂದರು. ತಿರುಪತಿಯಲ್ಲಿ ಚಂದನದ ಗೊಂಬೆಗಳನ್ನು, ಸಣ್ಣಪುಟ್ಟ ಹಿತ್ತಾಳೆಯ ಸಾಮಾನುಗಳನ್ನು ಕೊಂಡುಕೊಂಡರು. ಷಷ್ಠಿಯ ದಿನ ಗುಂಟೂರು ಸೇರಿಕೊಂಡೆವು. ಮೂರು ದಿನ ತಡವಾದುದರಿಂದ ಗುಂಟೂರಿನಲ್ಲಿ ನಮ್ಮ ಜೀತದಾಳು–ಎರಡು ಗಾಡಿಗಳು, ನಾಲ್ಕು ಎತ್ತುಗಳೊಂದಿಗೆ ತುಂಬ ತಾಪತ್ರಯಕ್ಕೊಳಗಾಗಿದ್ದ. ಎರಡು ದಿನಗಳ ಕೆಳಗೇ ನಾವು ಬಂದುಬಿಡುತ್ತೇವೆ ಎಂದುಕೊಂಡಿದ್ದರಿಂದ ನಾನು ಅವನಿಗೆ ಕೊಟ್ಟಿದ್ದ ಹಣ ಸಾಕಾಗಿರಲಿಲ್ಲ. ಅಷ್ಟೇ ಅಲ್ಲದೆ, ಗಾಡಿಯನ್ನು ಅಲ್ಲೇಕೆ ನಿಲ್ಲಿಸಿದೆ? ಇಲ್ಲೇಕೆ ನಿಲ್ಲಿಸಿದೆ? ಎಂದು ತಕರಾರು ಹೂಡಿ ಪೋಲೀಸರು ಅವನಿಂದ ಎಂಟಾಣೆಯನ್ನು ಕಸಿದುಕೊಂಡುಬಿಟ್ಟರಂತೆ. ಆ ಪಟ್ಟಣದಲ್ಲಿ, ಯಾರನ್ನಾದರೂ ವಿಚಾರಿಸಿ, ಒಂದಿಷ್ಟು ಮೇವು ತಂದುಕೊಳ್ಳೋಣವೆಂದರೂ ಸಾಧ್ಯವಾಗಲಿಲ್ಲವಂತೆ. ಆದ್ದರಿಂದ ಗಾಡಿಗಳನ್ನು–ಗುಂಟೂರಿಗೆ ಒಂದು ಹರದಾರಿ ದೂರದಲ್ಲಿರುವ ಒಂದು ಗ್ರಾಮಕ್ಕೆ ಹೊಡೆದುಕೊಂಡು ಹೋಗಿ ತನ್ನ ಪಡಿಪಾಟಲನ್ನೆಲ್ಲಾ ಅಲ್ಲಿನ ಕೆಲವರೊಂದಿಗೆ ಹೇಳಿಕೊಂಡು, ಯಾರೋ ಒಬ್ಬರು ಕೊಟ್ಟ ಮೇವನ್ನು ಎತ್ತುಗಳಿಗೆ ತಿನ್ನಿಸುತ್ತ ನಿತ್ಯ ಗುಂಟೂರಿಗೆ ಬರುತ್ತಿದ್ದನಂತೆ. ಪಟ್ಟಣದ ಮುಖವನ್ನೇ ಕಂಡರಿಯದ ನಮ್ಮ ಜೀತದಾಳು ಪಟ್ಟಣದಲ್ಲಿ ಕಂಗಾಲಾಗಿಬಿಟ್ಟಿದ್ದ.

'ಇದೆಂಥ ಊರು ಬುದ್ಧೀ ! ನಮ್ಮೂರ್ನಲ್ಲೇನಾರಾ ಹಿಂಗಿದ್ದುಬಿಟ್ಟಿದ್ರೆ ಒಂದಿನದಲ್ಲೇ ಹೊಟ್ಟೆ ಬಗಿದುಕೊಂಡು ಸತ್ತುಬಿಡುತ್ತಿದ್ದೊ. ಒಬ್ಬ ನನ್ ಮನಗನೂ ಮಾತ್ನಾಡೋಲ್ಲವಲ್ಲಾ ! 'ದಿರಿಸು' ಹಾಕ್ಕೊಂಡಿರೋರನ್ನ ಮಾತಾಡಿಸಿದ್ರೆ ಅಣಕಿಸಿ ಮಾತ್ನಾಡ್ತಾರಲ್ಲ ! ಒಬ್ಬೊಬ್ಬನ ತಲೆ ಬುಲ್ಡೇನ ದೊಣ್ಣೆಯಿಂದ್ ಅಪ್ಪಚ್ಚಿ ಮಾಡಿಬುಡ್ಲಾ ಅನ್ನಿಸ್ತು !' ಎಂದು ತಿಳಿಸಿದ.

'ಸರಿ ಬಿಡು !' ಎಂದು ಹೇಳಿ, ಅವನಿಗೊಂದು ಅರ್ಧ ರೂಪಾಯಿ ಕೊಟ್ಟು, 'ಗಾಡಿಗಳನ್ನು ಕಟ್ಟಿಕೊಂಡು ಬೇಗ ಹೊರಟು ಬಂದುಬಿಡು' ಎಂದು ಹೇಳಿಕಳಿಸಿದೆ. ಅವನು ಒಂದು ವಾರದಿಂದಲೂ 'ಢೀಲಾ' ಆಗಿಬಿಟ್ಟಿದ್ದನೋ ಏನೋ, ಯಾವುದೋ ಪಡಖಾನೆಗೆ ಹೋಗಿ ಕಂಠಪೂರ್ತಿ ಕುಡಿದುಬಿಟ್ಟ! ಹೊತ್ತು ಮುಳುಗುವುದರೊಳಗಾಗಿಯೇ ಬರಬೇಕಾದವನು, ಹೊತ್ತು ಮುಳುಗಿದರು ಬರಲೇ ಇಲ್ಲ. ನಾವು ಒಂದು ಛತ್ರದಲ್ಲಿ ತಂಗಿದ್ದೆವು. ನಮ್ಮತ್ತೆಯನ್ನು ಎಷ್ಟು ಬೇಗ ಊರಿಗೆ ಕರೆದೊಯ್ದರೆ ಅಷ್ಟು ಒಳ್ಳೆಯದೆಂದು ನನ್ನ ತಹತಹ. ಆದರೆ ನಮ್ಮ ಜೀತದಾಳು ಆ ರಾತ್ರಿಗೆ ಬಾರದೆ, ಬೆಳಗಿನ ಜಾವಕ್ಕೆ ಗಾಡಿಗಳನ್ನು ಹೊಡೆದುಕೊಂಡು ಬಂದ. 'ಏನೋ ಇಷ್ಟು ಹೊತ್ತೇಕಾಯ್ತು?' ಎಂದು ಕೇಳಿದ್ದಕ್ಕೆ ಅವನು ನಗುತ್ತ ತನ್ನ ಕಥೆಯನ್ನೆಲ್ಲಾ ತಿಳಿಸಿದ. 'ನಾಲ್ಕು ದಿನ ನೀವು ತಡ ಮಾಡಲಿಲ್ವೆ?' ಎಂದ. 'ನಿನ್ ತಲೆ' ಎಂದು ಹುಸಿಕೋಪ ತೋರಿಸಿ ಗಾಡಿಗಳನ್ನು ಕಟ್ಟಿದೆವು. ನಮ್ಮತ್ತೆಯನ್ನು 'ಅತ್ತೆ, ನನಗೊಂದು ಹತ್ತು ರೂಪಾಯಿ ಬೇಕಾಗಿತ್ತು....' ಎಂದು ಕೇಳಿದೆ. ಆಕೆ 'ನನ್ನ ಹತ್ರ ಎಲ್ಲಿಂದ ಬರಬೇಕು ಹಣ? ನಿನ್ನ ಹತ್ತಿರವೇ ಇದೆಯಲ್ಲಾ! ನಾನು ಕೊಡೋದೂಂದ್ರೆ ಏನು? ನೀನು

ಕೊಟ್ಟರೆ ನನಗುಂಟಾಗಲೀ!' ಎಂದಳು. ಅದಕ್ಕೆ ನಾನು 'ಅದಲ್ಲ, ಹತ್ತು ರೂಪಾಯಿಗಳನ್ನು ನಾನು ಬಳಸಿಕೊಳ್ಳೇನೆ' ಎಂದು ತಿಳಿಸಿದೆ.

'ಮಗೂ, ನಾನಿನ್ನು ಎಷ್ಟೋ ದಿನ ಬದುಕೋಲ್ಲ. ನನ್ನ ಬದುಕು ಇನ್ನು ದಿನಗಳ ಮೇಲೆ ನಿಂತಿದೆ. ಆ ಬುಡಬುಡಿಕೆಯವನೂ ಹೇಳಿದಾನೆ, ಆ ಬೈರಾಗಿಯೂ ಹೇಳಿದಾನೆ. ಈ ಜನ್ಮದಲ್ಲಿಯೇ ನನ್ನ ಸ್ವಾಮಿಯನ್ನು ನನ್ನ ಕಣ್ಣುಗಳು ನೋಡಿದುವು. ನನ್ನ ಬೇಡಿಕೆಯೂ ಈಡೇರಿತು. ನನ್ನ ಮಕ್ಕಳನ್ನು ನೀನು ಅನ್ಯಾಯ ಮಾಡುವವನಲ್ಲವೇ ಅಲ್ಲ. ಮೇಲಾಗಿ ನಿನಗೂ ನಿನ್ನ ಹೆಂಡತಿಗೂ ನಿಮ್ಮಾನವರು ಹೇಗೂ ಇಷ್ಟಿತ್ತರೆ ಬರೆದಿದ್ದಾರಲ್ಲಾ. ನಿನ್ನ ಭಾಗದ ಅರ್ಧ ಆಸ್ತಿಯನ್ನು ನಿನ್ನಿಷ್ಟ ಬಂದಂತೆ ಮಾಡು. ಹುಡುಗ ದೊಡ್ಡವನಾದ ಮೇಲೆ ಅವನ ಪಾಲಿಗೆ ಬರುವುದನ್ನು ಅವನ ಪಾಲಿಗೆ ಕೊಟ್ಟುಬಿಡು' ಎಂದಳು. ನನಗೆ ಹತ್ತು ರೂಪಾಯಿಗಳು ಅದೇಕೆ ಬೇಕಾಗಿತ್ತೋ ಆಕೆಗೆ ತಿಳಿಸಿದೆ. ಆಗ ಆಕೆ 'ನಿನ್ನಿಷ್ಟ ಕಣೋ. ಕೊಂಡುಕೋ. ಎರಡು ವರ್ಷ ಆ ಮಾರಾಯ ನಿನ್ನನ್ನು ಸಾಕಿ ಸಲಹಿ ದೊಡ್ಡವನನ್ನಾಗಿ ಮಾಡಿದಾನೆ ; ವಿದ್ಯಾಬುದ್ಧಿಗಳನ್ನು ಕಲಿಸಿದ್ದಾನೆ. ನನ್ನ ಸಂಸಾರವನ್ನು ನೀನೊಂದು ನೆಲೆಗೆ ತರುವಷ್ಟುಮಟ್ಟಿಗೆ ಬುದ್ಧಿವಂತನನ್ನಾಗಿ ಆ ಸ್ವಾಮಿ ಮಾಡಿದಾನೆ. ಆತನ ಮಕ್ಕಳ ಬಗ್ಗೆ ನಿನಗಿಷ್ಟು ಪ್ರೇಮವಿರುವುದೂ ಒಳ್ಳೆಯದೇ' ಎಂದಳು. ನಾನು ಹತ್ತು ರೂಪಾಯಿಗಳಲ್ಲಿ ಕೊಳ್ಳುವಷ್ಟನ್ನು ಕೊಂಡುಕೊಂಡೆ.

ಮತ್ತೊಮ್ಮೆ ನನ್ನ ಸಾಕುತಂದೆಯವರ ಊರು ಸೇರಿಕೊಂಡೆವು. ಪಟೇಲರ ಮನೆಯಲ್ಲಿಯೇ ಇಳಿದುಕೊಳ್ಳೋಣ ಎಂದು ಹೇಳಿದಳು ನಮ್ಮತ್ತೆ. ಆದರೆ ನಾನು ನನ್ನ ಸಾಕು–ತಂದೆಯವರ ಮನೆಯ ಅಂಗಳದಲ್ಲಿ ಗಾಡಿಗಳನ್ನು ನಿಲ್ಲಿಸಿದೆ. ಮನೆಯಲ್ಲಿ ಆ ಕುಳ್ಳ, ಆತನ ಹೆಂಡತಿ–ಇವರಿಗೆ ಏನೆನ್ನಬೇಕೋ ತಿಳಿಯದಾಯಿತು. ಎಲ್ಲರೂ ಗಾಡಿಗಳಿಂದ ಇಳಿದೆವು. ಅವರ ಮನೆಯಲ್ಲಿಯೇ ಅಡುಗೆ ಮಾಡಿಕೊಂಡೆವು. ನಮ್ಮ ಊಟವನ್ನು ನಾವು ಮಾಡಿದೆವು. ನೆರೆಹೊರೆಯ ಹೆಂಗಸರು ಒಬ್ಬೊಬ್ಬರಾಗಿ ಬಂದು, ನಮ್ಮತ್ತೆ ನಮ್ಮೊಡನೆ ಬಂದ ಆ ಕುಮ್ಮಾ ಹೆಂಗಸಿನೊಂದಿಗೆ ಮಾತುಕತೆಯಾಡಿ ಹೋಗುತ್ತಿದ್ದರು. ನನ್ನ ಈ ಎದೆಗಾರಿಕೆಯ ಕೆಲಸಕ್ಕಾಗಿ ಎಲ್ಲರೂ ಚಕಿತರಾಗಿದ್ದರು. ನನ್ನ ತಂಗಿಗೆ ನನ್ನ ಮಾವನ ಮಗಳು ತಲೆ ಬಾಚಿದಳು. ನನ್ನ ತಮ್ಮನೊಂದಿಗೆ ಕಲೆತು ಬಿಚ್ಚು ಮನಸ್ಸಿನಿಂದ ಆಟಪಾಟಗಳಲ್ಲಿ ತೊಡಗಿದಳು. ನನ್ನ ತಮ್ಮ ಅವಳಿಗಿಂತ ವರ್ಷ, ಒಂದೂವರೆ ವರ್ಷದಷ್ಟು ದೊಡ್ಡವನು. ನನ್ನ ತಂಗಿಗೆ ಬಿಸಿಬಿಸಿ ನೀರಿನಿಂದ ತಲೆಗೆ ಸ್ನಾನ ಮಾಡಿಸಿ, ನಾನು ಹತ್ತು ರೂಪಾಯಿಗಳಲ್ಲಿ ಕೊಂಡು ತಂದ ಎರಡು ಸೀರೆಗಳನ್ನು ಕೊಟ್ಟೆ. ಅದರಲ್ಲೊಂದು ಸೀರೆ ಚೆನ್ನಾಗಿತ್ತು. ಆ ಸೀರೆಯನ್ನುಟ್ಟು, ನಾನು ತಂದ ರವಿಕೆ ತೊಟ್ಟು, ತಲೆ ಬಾಚಿಕೊಂಡು ನನ್ನ ತಂಗಿ ಅತ್ತಿತ್ತ ತಿರುಗಾಡುತ್ತಿದ್ದರೆ ನಾಲ್ಕು ಜನರೂ ನೋಡಿ 'ಹುಡುಗಿಗೆ ಲಾಲನೆ ಪಾಲನೆಗಳಿಲ್ಲವಾಗಲೀ, ಇದ್ದಿದ್ರೆ ಹುಚ್ಚೇನು ಬಂತು!' ಎಂದರು. ನನ್ನ ತಮ್ಮಂದಿರಲ್ಲಿ, ದೊಡ್ಡವನಿಗೆ ಪಂಚೆಗಳನ್ನು, ಚಿಕ್ಕವನಿಗೆ ಎರಡು ಅಂಗಿ ಎರಡು ನಿಕ್ಕರುಗಳನ್ನು ಕೊಂಡು ತಂದಿದ್ದೆ. ಕಿರಿಯ ತಮ್ಮನಿಗೆ ಆ ಎರಡು ಜೊತೆ ಉಡುಪುಗಳು ಕೊಂಚ ದೊಡ್ಡದಾಗಿದ್ದುವು. ಆದರೆ ಅವನು ಅವುಗಳನ್ನು ಬಿಡಲೇ ಇಲ್ಲ.

ನಾವು ಬಂದಾಗಿನಿಂದಲೂ ನೆರೆಹೊರೆಯವರು ನಮ್ಮೊಂದಿಗೆ ಮಾತುಕತೆಯಾಡುತ್ತ, ಯಾವಾಗ ನೋಡಿದರೂ ಮನೆ ತುಂಬ ಇದ್ದು ಬಿಟ್ಟಿದ್ದರಿಂದ ಆ ಕುಳ್ಳನಿಗಾಗಲೀ ಆತನ ಹೆಂಡತಿಗಾಗಲೀ ನಮ್ಮನ್ನೇನೂ ಅನ್ನಲು ಸಾಧ್ಯವಿಲ್ಲದಾಯಿತು. ನಮ್ಮ ಜೀತದಾಳು ಎತ್ತುಗಳಿಗೆ ಅವರ ಮೇವನ್ನೇ ಹಾಕಿದನಂತೆ. ಆಗ ಆ ಗಿಡ್ಡ ಕೋಪಿಸಿಕೊಂಡನಂತೆ. ನಮ್ಮ ಜೀತದಾಳು ಎಂಥವನೋ ನಿಮಗೆ ಗೊತ್ತಿಲ್ಲ ! 'ಆಸ್ತಿಯನ್ನೆಲ್ಲಾ ನುಂಗಿ ನೀರು ಕುಡ್ದುಬುಟ್ಟೆಯಲ್ಲಯ್ಯಾ ! ನಾಲ್ಕು ಸೂಡು ಮೇವು ಬಸವಣ್ಣಗಳಿಗೆ ಹಾಕಿದ್ರೆ ಪ್ರಾಣ ಕಳಕೊಳ್ತೀಯಲ್ಲಯ್ಯಾ !' ಎಂದುಬಿಟ್ಟನಂತೆ. ನಾವು ಅಲ್ಲಿದ್ದುದು ಹಗಲು ಮಾತ್ರವೇ. ಆ ಒಂದಿಷ್ಟು ಹೊತ್ತಿನಲ್ಲಿಯೇ ಆ ಕುಳ್ಳನ ಹೆಂಡತಿಗೂ – ನಮ್ಮತ್ತೆಗೂ ಜೊತೆಯಾಯಿತು. ಚೆನ್ನಾಗಿ ಪ್ರೀತಿಯಿಂದ ಮಾತಾಡಿದರು. ನಾವು ಅಲ್ಲಿಂದ ಹೊರಟು ಬರುವಾಗ ಆಕೆ, ನಮ್ಮತ್ತೆಯೊಂದಿಗೆ 'ಅಕ್ಕಾ, ವರ್ಷಕ್ಕೊಮ್ಮೆಯಾದರೂ ನಮ್ಮನೆಗೆ ದಯಮಾಡಿಸುತ್ತಿರಬೇಕು' ಎಂದು ಕೇಳಿಕೊಂಡಳು. ನನ್ನ ಎರಡನೆಯ ತಮ್ಮ ನನ್ನ ಮಾವನ ಮಗಳನ್ನು ಹೊರಡಲು ಬಿಡಲೇ ಇಲ್ಲ.

ನನ್ನ ಚಿಕ್ಕಮ್ಮನ ಊರು ಸೇರಿದೆವು. ಆಕೆಯ ಮಗ 'ಭಾವಾ, ನಾನು ನಿಮ್ಮೂರಿಗೆ ಬರ್ತೇನೆ' ಎಂದ. 'ನಿಮ್ಮ ತಂದೆಯವರ ಕಾಯಿಲೆ ವಾಸಿಯಾದ ಮೇಲೆ ಬರುವೆಯಂತೆ, ಈಗ ಬೇಡ' ಎಂದು ತಿಳಿಸಿದೆ. ನನ್ನ ಚಿಕ್ಕಮ್ಮ, 'ಮಗೂ, ನಿಮ್ಮಗಳೊಂದಿಗೆ ಸಂಬಂಧ ಕೂಡಿಸೋಣ ಅಂತ ನನಗೆ ಭೋ ಆಸೆ ಇದೆ ಕಣೋ ! ನೀನು ನನಗೆ ಮಗನ ಹಾಗೆಯೇ ಇದೀಯೆ. ಇವನು ನನಗೆ ಮಗನಂತಲೇ ಅನ್ನಿಸೋಲ್ಲ ಕಣೋ. ನಿನ್ನ ಚಿಕ್ಕಮ್ಮನನ್ನು ಏನು ಮಾಡ್ತೀಯೋ ಏನೋ...' ಎಂದಳು. ನಮ್ಮತ್ತೆ, ಚಿಕ್ಕಮ್ಮ ಎಲ್ಲೆಲ್ಲಿಯ ಸಂಬಂಧಗಳನ್ನೋ ತಿರುವಿ ಹಾಕಿಕೊಂಡರು. ಆ ಕುಳ್ಳನ ಹೆಂಡತಿಯೂ, ನನ್ನ ಚಿಕ್ಕಮ್ಮನೂ ಇಬ್ಬರೂ ತಾತಾ ಸಹೋದರರ ಮಕ್ಕಳಂತೆ. ಇದೂ ಒಳಿತೇ ಆಯಿತಲ್ಲ ಎಂದುಕೊಂಡೆ. ಚಿಕ್ಕಮ್ಮನೊಂದಿಗೆ 'ಅಮ್ಮಾ, ನಾನು ಮತ್ತೊಮ್ಮೆ ಬರ್ತೇನೆ. ನಾವಿಬ್ಬರೂ ಕೂಡಿಯೇ ನನ್ನ ಸಾಕುತಂದೆಯವರ ಊರಿಗೆ ಹೋಗ್ಬಿಟ್ಟು ಬರೋಣ' ಎಂದು ತಿಳಿಸಿದೆ. 'ತಪ್ಪದೆ ಬಾ, ಕೂಡಿಯೇ ಹೋಗೋಣ. ನಾನು ಅವಳನ್ನು ನೋಡಿ ಭೋ ದಿನಗಳಾದೊ. ಚಿಕ್ಕಂದಿನಲ್ಲಿ ನಾವಿಬ್ರೂ ಕೂಡಿ ಆಡ್ತಾ ಇದ್ದೊ. ಈಗ ನಾನವಳಿಗೆ ಜ್ಞಾಪಕ ಇದೀನೋ ಇಲ್ವೋ? ನಿಮ್ಮ ಸಾಕುತಂದೆ ಸ್ವಾಮಿ ಅಂದರೆ ನಾನು ಯಾರೋ ಅಂತ ತಿಳಿದಿದ್ದೆ' ಎಂದಳು. 'ಮೊದಲಿನ ಹಾಗೇನೂ ಅಲ್ಲವಲ್ಲಾ. ಇನ್ಮೇಲಿಂದ ಬರ್ತಾ ಹೋಗ್ತಾ ಇರ್ತೇನೆ' ಎಂದೆ.

ನಾನು ಚಿಕ್ಕಮ್ಮನೊಂದಿಗೆ 'ಬರ್ತಾಹೋಗ್ತಾ ಇರ್ತೇನೆ' ಎಂದು ತಿಳಿಸಿದೆನೇನೋ ನಿಜ. ಆದರೆ ಅನಂತರ ಆರು ತಿಂಗಳುಗಳವರೆಗೆ ನಾನು ಮನೆ ಬಿಟ್ಟು ಕದಲುವುದಕ್ಕೇ ಸಾಧ್ಯವಾಗಲಿಲ್ಲ. ನಮ್ಮೊಂದಿಗೆ ತಿರುಪತಿಗೆ ಬಂದ ಆ ಕುಮ್ಮಾ ಜನ ನನ್ನ ವಿಷಯವನ್ನೆಲ್ಲಾ ಎಲ್ಲರಿಗೂ ತಿಳಿಸಿದರು. ಪ್ರಾಯದಲ್ಲಿರುವ ಯುವಕರೆಲ್ಲರೂ ನನ್ನ ಧೈರ್ಯ ಸಾಹಸಗಳನ್ನು ಮೆಚ್ಚಿಕೊಂಡರು. ದೊಡ್ಡವರೆಲ್ಲರೂ ನನ್ನ ಒಳ್ಳೆಯತನವನ್ನು ಕೊಂಡಾಡಿದರು. ಅಕಸ್ಮಾತ್ತಾಗಿ,

ಯಾರೊಂದಿಗಾದರೂ ಬಾಯಿ ಮಾಡಿದಾಗಲೋ, ಆ ಕಡೆಯ ವ್ಯಕ್ತಿ ನನ್ನನ್ನು ಕೋಪಕ್ಕಾದರೂ ಹಾವಾಡಿಗನೆನ್ನುವುದು ಇಲ್ಲವಾಗಿಬಿಟ್ಟಿತು.

ನನ್ನನ್ನು ಆ ಮನೆಯ ಅಳಿಯನೆಂತಲೇ ಎಲ್ಲರು ಅನ್ನುತ್ತಿದ್ದರು. ನಮ್ಮತ್ತೆಯೂ ಸಹ ಒಂದೆರಡು ಸಲ ಬೇಗ ಮುಹೂರ್ತ ನೋಡಿಸಿ, ಲಗ್ನವಿಟ್ಟುಬಿಡೋಣ ಎಂದಳು. ಹಾಗೆಂದ ದಿನಗಳಲ್ಲೆಲ್ಲಾ ಯಾರಿಗೋ ಒಬ್ಬರಿಗೆ ಚೇಳು ಕಚ್ಚುವುದೋ, ಮತ್ತೇನೋ ಆಗಿಬಿಡುತ್ತಿತ್ತು ! ಅಷ್ಟರಲ್ಲಿಯೇ ಮಾಘಮಾಸ ಕಾಲಿಟ್ಟಿದ್ದರಿಂದ ಪುರೋಹಿತನನ್ನು ಕರೆಯಿಸಿ, ಮುಹೂರ್ತ ನೋಡಿ ಲಗ್ನವನ್ನಿಡಿ ಎಂದಳು ನಮ್ಮತ್ತೆ ಹಾಗೆಂದ ದಿನವೇ ಐವತ್ತು ರೂಪಾಯಿ ಬೆಲೆಬಾಳುವ, ಹಾಲು ಕರೆವ ಎಮ್ಮೆ ಸತ್ತುಹೋಯಿತು. ನಮ್ಮ ಕುಲದವರಿಗೆ ಇರೋ ಹಾಗೆ ನಮ್ಮತ್ತೆಗೆ ಹಾಲು ಮಾರುವ ಅಭ್ಯಾಸವಿರಲಿಲ್ಲ. ಹೊಟ್ಟೆಗೆ ಉಂಡದ್ದೇ ನಮ್ಮದು ; ಆಮೇಲೆ ನಾವೇನು ಕಾಣುತ್ತೇವೆ ಎನ್ನುತ್ತಿದ್ದಳು.

ಈ ರೀತಿ ಆರು ತಿಂಗಳುಗಳು ಕಳೆಯುತ್ತಿರುವಂತೆಯೇ, ನಮ್ಮತ್ತೆ ಹಾಸಿಗೆ ಹಿಡಿದುಬಿಟ್ಟಳು. ತಿರುಪತಿಯಲ್ಲಿ ಅಂದು ಬಿದ್ದಂದಿನಿಂದ ಆಕೆಗೆ ಆಗಾಗ ಮೂರ್ಛೆಯಂಥದು ಬರುತ್ತಿತ್ತು. ಅದು ಕ್ರಮವಾಗಿ ಪಕ್ಷವಾತಕ್ಕೆ ತಿರುಗಿಬಿಟ್ಟಿತು. ಆಕೆಯ ಬಲಗಾಲು, ಬಲಗೈ ಎರಡೂ ಸ್ವಾಧೀನ ತಪ್ಪಿದುವು. ನನಗಾದರೋ ಹಗಲೂ ರಾತ್ರಿ ಹೊಲದ ದುಡಿಮೆ. ಯಾವಾಗಲಾದರೂ ಒಂದಿಷ್ಟು ಬಿಡುವು ದೊರೆಯಿತೆಂದರೆ, ಆ ಬಿಡುವಿನ ವೇಳೆಯನ್ನೆಲ್ಲಾ ನಮ್ಮತ್ತೆಯ ಶುಶ್ರೂಷೆಯಲ್ಲಿಯೇ ಕಳೆಯುತ್ತಿದ್ದೆ.

'ಮಗೂ, ನಾನು ಬದುಕಿರುವಾಗಲೇ ತಲೆಯ ಮೇಲೊಂದಿಷ್ಟು ಅಕ್ಕಿಕಾಳು ಹಾಕ್ಕೊಂಡುಬಿಡು. ನಾನು ಹಾಯಾಗಿ ಕಣ್ಣು ಮುಚ್ಚಿಬಿಡುತ್ತೇನೆ' ಎನ್ನುತ್ತಲೇ ಇದ್ದಳು ನಮ್ಮತ್ತೆ 'ಅತ್ತೇ, ಮದುವೆಯಾಗುವುದು ಬರೆದಿದ್ದ ಪಕ್ಷಕ್ಕೆ ತಾನಾಗಿಯೇ ಆಗುತ್ತೆ ಮದುವೆ ಮಾಡಿ ಮುಗಿಸಿಬಿಡೋಣ ಅಂತ ನೀನು ಅಂದುಕೊಂಡಾಗಲೆಲ್ಲಾ ಏನೋ ಒಂದು ತೊಂದರೆ ಎಡತಾಕುತ್ತಲೇ ಇದೆ. ಕಾಮಧೇನುವಿನ ಹಾಗೆ ಹಾಲು ಕರೆಯುತ್ತಿದ್ದ ಹಸು ಹೋಯ್ತು. ನಿನಗೂ ಹೀಗಾಗಿಹೋಯ್ತು ನಿನಗೆ ಬೇಗ ವಾಸಿಯಾಗುತ್ತೆ; ಆಮೇಲೆ ಮಾಡಿಕೊಂಡರಾಯ್ತು' ಎಂದೆನ್ನುತ್ತಲೇ ಬಂದೆ. ನಮ್ಮತ್ತೆಯ ಊರಿಗೆ ಎರಡು ಕೂಗಳತೆಗಳ ದೂರದಲ್ಲಿರುವ ಊರಿನ ಪೂಜಾರಿ ನಮ್ಮತ್ತೆಗೆ ಔಷಧೋಪಚಾರ ನಡೆಸುತ್ತಿದ್ದ. ಆತ ಒಳ್ಳೆಯ ವೈದ್ಯನೆಂದು ಪ್ರತೀತಿ. ಸುತ್ತಮುತ್ತಲಿನ ಹತ್ತಾರು ಗ್ರಾಮಗಳಿಗೆಲ್ಲಾ ಆತನೇ ವೈದ್ಯ. ನಮ್ಮತ್ತೆಯ ಊರಿನಲ್ಲಿರುವ ನಾಯಿಂದನಿಗೂ ಕೊಂಚ ವೈದ್ಯ ಬರುತ್ತಿತ್ತು. ಆ ಪೂಜಾರಿಗೆ ಐವತ್ತು ರೂಪಾಯಿ ಕೊಟ್ಟೆ ನಮ್ಮತ್ತೆಗೆ ಪೂರ್ಣ ಗುಣವಾದರೆ ಇನ್ನೂ ನೂರು ರೂಪಾಯಿ ಕೊಡುವೆನೆಂದು ತಿಳಿಸಿದ್ದೆ. ನಮ್ಮೂರಿನ ನಾಯಿಂದನಿಗೂ ಹತ್ತು ರೂಪಾಯಿ ಕೊಟ್ಟು, ನೀನೂ ಆಗಾಗ್ಗೆ ಬಂದು ನೋಡುತ್ತಿರು – ಎಂದು ಏರ್ಪಾಟು ಮಾಡಿದ್ದೆ.

ನಮ್ಮತ್ತೆಗೆ ಈಗ ನಾನೆಂದರೆ ತನ್ನ ಭಾಗದ ದೇವರೇ ಸರಿ. ಆಕೆ ಈ ಲಕ್ವದ ದೆಸೆಯಿಂದಾಗಿ ಎಳೆದೆಳೆದಲ್ಲದೆ ಸಲೀಸಾಗಿ ಮಾತು ಆಡಲಾರಳು. ಯಾರಾದರೂ

ನೆರೆಮನೆಯಾಕೆ ಬಂದರೆ 'ನನ್ನ ಅಳೀಮಯ್ಯನಮ್ಮಾ ಅಳೀಮಯ್ಯ. ಮಾರಾಯನಂಥೋನು. ಧರ್ಮರಾಯ ಮಾತ್ರ ಹೀಗಿರೋನು ಅಂತ ಕಾಣುತ್ತೆ ಕಣಮ್ಮಾ. ನನಗಾಗಿ ಎಷ್ಟು ಒದ್ದೋತಾ ಇದೆ ಅವನ ಜೀವ! ತಿರುಪತಿ ವೆಂಕಟೇಶ್ವರಸ್ವಾಮಿಯೇ ನನಗೀ ಅಳಿಯನನ್ನು ಕಳಿಸಿಕೊಟ್ಟವ್ನೆ ಕಣ್ರಮ್ಮಾ' ಎಂದು ಮುಂತಾಗಿ ಏನೇನೊ ಹೇಳಿಕೊಳ್ಳುತ್ತಿದ್ದಳಂತೆ. ನಮ್ಮತ್ತೆಯ ಮಗ ಕೊಂಚ ಕೈಮೈ ತುಂಬಿಕೊಂಡು, ಎತ್ತರವಾಗಿ ಬೆಳೆದ. ಅವನು ಆ ಕೆಲಸ ಈ ಕೆಲಸಕ್ಕೆಲ್ಲಾ ನನಗೆ ಕೈಯಾಸರೆಯಾಗುವಂತಾದ. ಮೊದಲಿನ ಹಾಗೆ 'ತಿರುಗಲ ತಿಪ್ಪ' ನಂತೆ ಪೋಲಿ ಅಲೆಯುವುದನ್ನು ಬಿಟ್ಟುಕೊಟ್ಟ.

ಒಂದು ದಿನ ಯಾರ ಮನೆಯಲ್ಲಿಯೋ ಶುಭಕಾರ್ಯವಿತ್ತು. ಆಗ ನನ್ನ ಮಾವನ ಮಗಳಿಗೆ ಪ್ರಾಯವೇರುತ್ತಿದ್ದ ಕಾಲ. ನಾನು ಮನೆಯಲ್ಲಿ ಯಾರಿಗೂ ಬಟ್ಟೆಬರೆಗಳ ವಿಷಯದಲ್ಲಿ ಅಶ್ರದ್ಧೆ ತೋರಿಸುವವನಲ್ಲ. ನಮ್ಮತ್ತೆಯೂ ಸಹ ಮಕ್ಕಳನ್ನು ನಾಗರಿಕವಾಗಿಯೇ ಬೆಳೆಸುತ್ತಿದ್ದಳು. ನಾನು ಎತ್ತುಗಳನ್ನು ಹಟ್ಟಿಯಲ್ಲಿ ಕಟ್ಟಿಹಾಕುತ್ತಿರುವಾಗ, ನನ್ನ ಮಾವನ ಮಗಳು ಅಲ್ಲಿಗೆ ಏತಕ್ಕಾಗಿಯೋ ಬಂದಳು. ಅವಳು ಮೈನೆರೆದಿದ್ದರೂ ಇನ್ನೂ ಹುಡುಗಿಯಂತೆಯೇ ಇದ್ದಳು. ಆ ಶುಭಕಾರ್ಯಕ್ಕೆ ಹೋಗಲೆಂದೋ ಏನೋ, ಅವಳು ಕಲಾಪತ್ತಿನ ಸೀರೆಯುಟ್ಟು, ಹಸಿರು ಹೂಗಳ ರವಿಕೆ ತೊಟ್ಟು, ತಲೆಯಲ್ಲಿ ಹೂ ಮುಡಿದಿದ್ದಳು. ನಾನು ಅವಳನ್ನು ನೋಡಿ, ಯಾರೋ ಹುಡುಗಿ ಶುಭಕಾರ್ಯಕ್ಕಾಗಿ ಕರೆಯಲು ಬಂದವಳಿರಬೇಕು ಎಂದುಕೊಂಡೆ. ಮತ್ತೆ ನೋಡಿದರೆ ನನ್ನ ಸೋದರಮಾವನ ಮಗಳು. 'ಎಷ್ಟು ಚೆನ್ನಾಗಿದೀಯಲ್ಲೇ' ಎಂದೆ. ಆಗ, ಅಂದೊಮ್ಮೆ ಹಾವಾಡಿಗನ ಗುಂಪಿನವರಲ್ಲೊಬ್ಬನನ್ನು ಮರಕ್ಕೆ ಆನಿಸಿ ತಿವಿದು ಕೆಳಗುರುಳಿಸಿದ ಆ ಜಟ್ಟಿ ಹೋರಿಯನ್ನು ಕಟ್ಟಿಹಾಕುತ್ತಾ ಇದ್ದೆ. ನಾನು ಅವಳನ್ನು ನೋಡಲೆಂದು ಆ ಪಕ್ಕಕ್ಕೆ ತಿರುಗಿ ಪರಧ್ಯಾನದಲ್ಲಿದ್ದೆನೋ ಏನೋ, ಆ ಹೋರಿ ನನ್ನ ಪಕ್ಕೆಗೆ ತಿವಿದುಬಿಟ್ಟಿತು. ಆ ಕೂಡಲೇ ನಾನು ಕುಸಿದು ಕುಳಿತು, ಐದು ನಿಮಿಷಗಳ ತನಕ ಪಕ್ಕೆಯನ್ನು ಬಲವಾಗಿ ಒತ್ತಿ ಹಿಡಿದುಕೊಂಡೆ. ಕೊಂಚ ಸುಧಾರಿಸಿಕೊಳ್ಳುತ್ತಲೇ ನನ್ನಲ್ಲಿ ಉಕ್ಕೇರಿ ಬಂದ ಕೋಪದಿಂದಾಗಿ ಆ ಹೋರಿಯನ್ನು ಸಾಯಬೀಳ ಹೊಡೆದೆ. ನನ್ನ ಪಕ್ಕೆಯಲ್ಲಿ ಹೋರಿ ತಿವಿದು ಬಿಟ್ಟಿತು ಎಂಬ ಸುದ್ದಿ ಕೇಳಿ ನಮ್ಮತ್ತೆ ಕಾತರಗೊಂಡಳು, ಕಳವಳಗೊಂಡಳು. ಆ ರಾತ್ರಿ ಪಟ್ಟಿ ಹಾಕಿ ಕಾವು ಕೊಟ್ಟೆ ನಮ್ಮತ್ತೆಯ ಮಗ ಆ ಹೋರಿಯನ್ನು ಮತ್ತೆ ಚೆನ್ನಾಗಿ ಥಳಿಸಿದ. ನಮ್ಮ ಜೀತದಾಳು ನನ್ನ ಅವಸ್ಥೆಯನ್ನು ನೋಡಿ, ಅವನೂ ಸಹ ಹಿಡಿಸಲಾರದಷ್ಟು ಕೋಪದಿಂದ ಅದನ್ನು ಹೊಡೆಯಲಾರಂಭಿಸಿದ. ಆಗ ನಾನು 'ಹೊಡೆಯಬೇಡ್ರೋ. ಕಳ್ಳನನ್ನು ಉರುಳಿಸಿದ ಹೋರಿ ಕಣ್ರಯ್ಯಾ. ಅದು ತಲೆಯಲ್ಲಾಡಿಸಿಕೊಂಡಾಗ, ಅದರ ಹಣೆಯ ಮುಂಭಾಗ ನನಗೆ ತಾಕಿತಾಗಲೀ ಅದು ಬೇಕೆಂದು ನನ್ನನ್ನು ತಿವಿಯಲಿಲ್ಲ' ಎಂದೆ.

ನಮ್ಮತ್ತೆಯ ವ್ಯಾಧಿ ವಾಸಿಯಾಗಲೇ ಇಲ್ಲ. ದಿನಗಳು ಉರುಳುತ್ತಲೇ ಇದ್ದುವು. ಆಕೆ ಹಾಸಿಗೆ ಹಿಡಿದು ಐದಾರು ತಿಂಗಳಿಗಳೇ ಆಗುತ್ತಾ ಬಂದಿತು. ಒಂದು ದಿನ ಆಕೆ ತನ್ನ ಮಗಳನ್ನು ಕರೆದು ಸುಮ್ಮನೇ ಮಾತಿಗೆಂದು 'ಮಾವಯ್ಯನನ್ನು ಮದುವೆಯಾಗ್ತೀಯೇನೇ?'

ಎಂದು ಕೇಳಿದಳು. ಅವಳು 'ನಾನು ಮಾಡಿಕೊಳ್ಳಲ್ಲ!' ಎಂದುಬಿಟ್ಟಳು. ಆಗ ಅಲ್ಲಿ ನಾನು ಹಾಗೂ ಅವಳ ತಮ್ಮ ಇಬ್ಬರೂ ಇದ್ದೆವು. ಆಗ ಅವಳ ತಮ್ಮ 'ನೀನು ಮಾಡಿಕೊಳ್ಳದೇ ಇದ್ರೆ ಬಂದ ಕೇಡೇನು ? ಮಾವಯ್ಯನಿಗೆ ನಿನಗಿಂತಲೂ ಚೆನ್ನಾಗಿರೋಳು ಸಿಗ್ತಾಳೆ. ಮಾವಯ್ಯನಂಥೋನು ನಿನ್ನ ಮುಖಕ್ಕೆ ಮುಖ್ಯ ಸಿಕ್ಕುತ್ತಾನೆಯೇ ಅಂತ?' ಎಂದುಬಿಟ್ಟ. ಈ ಮಾತುಕತೆಯೆಲ್ಲಾ ತಮಾಷೆಯಾಗಿಯೇ ನಡೆದುಹೋದರೂ, ಅದೇಕೋ ನನ್ನ ಮನಸ್ಸಿಗೆ ಕಷ್ಟವಾಯಿತು. ಅವಳು ಮಾಡಿಕೊಳ್ಳುತ್ತೇನೆಂದು ಅದೇಕೆ ಹೇಳಬಾರದಾಗಿತ್ತು ಎಂದೆನ್ನಿಸಿತು. ರೆಪ್ಪೆ ಹೊಡೆಯುವಷ್ಟು ಹೊತ್ತಿನಲ್ಲಿಯೇ ನನಗೆ ಅವಳ ಮೇಲೆ ಎಲ್ಲಿಲ್ಲದ ಕೋಪ ಬಂದುಬಿಟ್ಟಿತು. ಮರುದಿನ, ಅವಳು ತನಗಾವುದೋ ಸಾಮಾನು ಕೊಂಡುಕೊಡಲು ನನ್ನನ್ನು ಕೇಳಿದಳು. 'ನನ್ನನ್ನು ಕೇಳ್ತೀಯಲ್ಲಾ ! ನೀನು ಯಾವನನ್ನು ಮಾಡಿಕೊಳ್ತೀಯೋ, ಹೋಗಿ ಅವನನ್ನೇ ಕೇಳು !' ಎಂದುಬಿಟ್ಟೆ. ಅವಳು ಮುಖ ಸಪ್ಪಗೆ ಮಾಡಿಕೊಂಡಳು. ಅವಳು ಅಲ್ಲಿಗೂ ಸುಮ್ಮನಿರದೆ ಹೀಗೆ ನುಡಿದಳಲ್ಲಾ !– 'ನನ್ನ ಹೊಲಗಳನ್ನು ನಿನಗೆ ಬರೆದುಕೊಡ್ತೇನೆ. ನಿನಗಿಷ್ಟ ಬಂದವಳನ್ನು ಮದುವೆಯಾಗು!' ಎಂದಳು. ನಾನು ಅಲ್ಲಿಂದೆದ್ದು ಏನೋ ಕೆಲಸವಿರುವವನಂತೆ ಹೊರಟುಹೋಗಿಬಿಟ್ಟೆ ಅವಳು ಈ ಮಾತುಗಳನ್ನಾಡಿದ್ದನ್ನು ನಮ್ಮತ್ತೆ ಕೇಳಿಸಿಕೊಂಡಿದ್ದಳು. ನಾನು ಹಾಗೆ ಎದ್ದು ಹೊರಟು ಹೋದಮೇಲೆ ಆಕೆ ತನ್ನ ಮಗಳನ್ನು ನಾನಾ ವಿಧವಾಗಿ ಬೈದುಬಿಟ್ಟಳಂತೆ–

'ಅವನೇ ಇಲ್ಲದೇಹೋಗಿದ್ದರೆ ನೀವಿಬ್ರೂ ಭಿಕ್ಷೆ ಬೇಡ್ಕೊಂಡು ತಿನ್ನಬೇಕಾಗ್ತಿತ್ತಲ್ಲಾ! ಅವನೀ ಮನೆಗೆ ಬಂದು ನಿಮ್ಮ ಹೊಲದಲ್ಲಿ ಗೇಯುತ್ತಿದ್ದಾನೆಂದೇ ನಿಮಗೊಂದಿಷ್ಟು ಬೆಳಕು ! ಇಲ್ಲದೇ ಹೋಗಿದ್ದರೆ ಇಷ್ಟೊತ್ತಿಗೆಲ್ಲಾ ಈ ಊರಿನವರು ನಿಮ್ಮ ಕೈಗೆ ಕರಟಾ ಕೊಟ್ಟುಬಿಡುತ್ತಿದ್ರು ! ಅವನಾದುದರಿಂದ ಸರಿಹೋಯ್ತು. ಹೊಲಗಳನ್ನೆಲ್ಲಾ ಒಂದು ಮಟ್ಟಕ್ಕೆ ತಂದು ಹೇಗೋ ಸರಿತೂಗಿಸ್ತಾ ಇದಾನೆ. ಅವನ ಚಪ್ಪಲಿಯ ಧೂಳೊರೆಸುವ ಯೋಗ್ಯತೆಯೂ ನಿನಗಿಲ್ಲ !' ಎಂದು ಇನ್ನೂ ಏನೇನೂ ಬಯ್ದಳಂತೆ. ಅವಳು ಅಳುತ್ತಾ ಮೂಲೆ ಹಿಡಿದು ಕುಳಿತುಬಿಟ್ಟಳು.

ಇತ್ತೀಚೆಗೆ ಅಡುಗೆ ಮನೆಯ ಚಾಕರಿಯೆಲ್ಲಾ ನನ್ನ ಮಾವನ ಮಗಳದೇ. ನಸುಕಿನಲ್ಲಿಯೇ ಎದ್ದು, ಕಾವಡಿ ಭುಜಕ್ಕೆ ಹಾಕಿಕೊಂಡು ಮನೆಗೆ ಸಾಕಾಗುವಷ್ಟು 'ನೀರು ನಿಡಿ' ನಾನೇ ತಂದು ಹಾಕುತ್ತಿದ್ದೆ. ಅಡುಗೆ, ಕಸ ಮುಸುರೆಯಲ್ಲಾ ಅವಳೇ ಮಾಡುತ್ತಿದ್ದಳು. ಆ ದಿನ ರಾತ್ರಿ ನನಗೆ ಅನ್ನ ಬಡಿಸುತ್ತಾ ಅಳುತ್ತಿದ್ದಳು. 'ಅದೇಕೆ ಅಳ್ತಾ ಇದೀಯೆ?' ಎಂದು ಕೇಳಿದೆ. 'ಮಾವಯ್ಯಾ, ಅಮ್ಮ ನನ್ನ ಮೇಲೆ ಕೋಪಾ ಮಾಡ್ಕೊಂಡಿದಾಳೆ. ನಾನು ನಿನ್ನಿಷ್ಟದ ಪ್ರಕಾರವೇ ನಿನ್ನನ್ನು ಮದುವೆ ಮಾಡ್ಕೋತೀನಿ' ಎಂದಳು. ನನಗೆ ನಗು ಬಂದಿತು. ಊಟವಾದ ಮೇಲೆ ನಾನು 'ಮದುವೆಗೆ ಈಗೇನು ಆತುರವಿದೆ? ಅಮ್ಮನಿಗೆ ನೋಡಿದರೆ ಹಾಗಿದೆ. ವಾಸಿಯಾದಮೇಲಲ್ಲವೇ ಏನಿದ್ದರೂ' ಎಂದೆ. ಆವಳೂ ಸುಮ್ಮನಾಗಿಬಿಟ್ಟಳು.

ಆ ಮರುದಿನದಿಂದಲೇ ನಮ್ಮತ್ತೆಗೆ ಕಾಯಿಲೆ ಮತ್ತಷ್ಟು ಹೆಚ್ಚಾಗಿಬಿಟ್ಟಿತು. ಮಾತುಗಳೇ ನಿಂತುಬಿಟ್ಟವು. ಪೂಜಾರಿಗೆ ಹೇಳಿಕಳಿಸಿದೆ. ಆತ ಬಂದು ಕೈ ನೋಡಿ, 'ಕಷ್ಟಸಾಧ್ಯವಾಗಿಯೇ

ಇದೆ ; ಆದರೂ ಪರವಾಗಿಲ್ಲ' ಎಂದು ಯಾವುವೋ ಮಾತ್ರೆಗಳನ್ನು ಕೊಟ್ಟು ಹೋದ. ಆ ಊರಿನ ನಾಯಿಂದ ಬಂದ. ನಾಡಿ ನೋಡಿ, ನಾಲಗೆ ಚಪ್ಪರಿಸಿ, 'ಏನೂ ಪ್ರಯೋಜನ ಇಲ್ಲಾರೀ. ಇನ್ನೇನು–ದಿನಗಳ ಮೇಲಿದೆ, ಅಷ್ಟೆ' ಎಂದುಬಿಟ್ಟ. ನನ್ನ ಮಾವನ ಮಗಳೂ, ಮಗನೂ ಅಳುವುದಕ್ಕೆ ಪ್ರಾರಂಭಿಸಿಬಿಟ್ಟರು.

ಆಮೇಲೆ, ಹತ್ತು ದಿನಗಳ ಬಳಿಕ, ಒಂದು ದಿನ ರಾತ್ರಿ ನಮ್ಮತ್ತೆಯನ್ನು ಮಂಚದಿಂದ ಎತ್ತಿ ಕೆಳಗೆ ಮಲಗಿಸಿದ್ದಾಯಿತು. ಆಕೆ ಸೂರ್ಯೋದಯದ ಹೊತ್ತಿಗೆಲ್ಲಾ ಸತ್ತುಹೋದಳು. ಶವಸಂಸ್ಕಾರ ಮುಂತಾದುವನ್ನೆಲ್ಲಾ ನಾನೇ ಮಾಡಿ ಮುಗಿಸಿದೆ.

ಮನೆಯಲ್ಲಿ ನಾನೊಬ್ಬನೇ ಮಕ್ಕಳನ್ನು ಹಿಡಿದುಕೊಂಡು ಒದ್ದಾಡಲಾರದಾದೆ. ಹತ್ತು ದಿನ ಕಳೆಯುವುದರೊಳಗೆ ನನ್ನ ಸ್ಥಿತಿಯನ್ನು ನೋಡಿದರೆ–ಅತ್ತ ದರಿ, ಇತ್ತ ಪುಲಿ ಎಂಬಂತಿತ್ತು. ಹೆಣ್ಣು ಹುಡುಗಿಯೊಬ್ಬಳನ್ನೇ ಬಿಟ್ಟು ನಾನು ಹೊಲಕ್ಕೆ ಹೋಗಬೇಕಾಗುತ್ತಿತ್ತು. ಅವಳ ತಮ್ಮನೂ ಸಹ ಮನೆಯ ಹತ್ತಿರವಿರದೆ ಹೊಲಕ್ಕೇ ಬಂದುಬಿಡುತ್ತಿದ್ದ. ಯಾವ ಕೆಲಸವನ್ನೂ ಮಾಡದೇ ಇದ್ದರೂ, ರೋಗವೋ ರುಜಿನವೋ ಇದ್ದಾಗ್ಯೂ, ನಮ್ಮತ್ತೆ ಬದುಕಿದ್ದಾಗ ಮನೆ ತುಂಬಿದ ಕೊಡದಂತಿತ್ತು. ನನ್ನ ಮನಸ್ಸಿಗೆ ಈ ಸಂಸಾರ ಈಗ ಬಯಲಿಗೆ ಬಿದ್ದಂತೆನ್ನಿಸಿತು. ನಾವು ಮೂವರೂ ಚಿಕ್ಕ ವಯಸ್ಸಿನವರೇ. ನನಗೇನೂ ತೋಚದಾಯಿತು. ರಾತ್ರಿಯ ಹೊತ್ತು ನಿದ್ರೆ ಬಾರದಾಯಿತು. ಇನ್ನೊಂದು ಹತ್ತು ದಿನಗಳು ಕಳೆದ ಬಳಿಕ, ಹೀಗಿದ್ದರೆ ಸಲ್ಲ ಎಂದೆನ್ನಿಸಿ, ಅವರಿಬ್ಬರಿಗೂ ಪಾಠ ಹೇಳಿಕೊಡಲು ಮೊದಲಿಟ್ಟೆ ಅವರ ಸಲುವಾಗಿ ನಾನು ಇಲ್ಲದ ಸೌಖ್ಯ ತಂದುಕೊಂಡು, ಆ ಕಥೆ–ಈ ಕಥೆಗಳನ್ನು, ಆ ಸುದ್ದಿ – ಈ ಸುದ್ದಿಗಳನ್ನು ಹೇಳುತ್ತಾ ಬಂದೆ. ಯಾವಾಗಲಾದರೂ ಅವರಿಗೆ ಅವರ ತಾಯಿ ಜ್ಞಾಪಕಕ್ಕೆ ಬಂದರೆ ಅವರು ಕೊಂಚ ಗದರಿಸಿ, ಕೊಂಚ ಸಮಾಧಾನಪಡಿಸಿ 'ಪ್ರಪಂಚದಲ್ಲಿ ಯಾರಾದರೂ ಸಾಯಬೇಕಾದದ್ದೇ. ನಾನಿದ್ದೇನೆ. ನಿಮಗೇನು ಭಯ? ನಿಮಗೇನು ಬೇಕಾದರೂ ನಾನಿದ್ದೇನೆ' ಎಂದು ಸಮಾಧಾನಪಡಿಸುತ್ತಾ ಬಂದೆ

ಹೀಗೆ ಒಂದು ತಿಂಗಳು ಕಳೆಯಿತು.

ದಿನ ಕಳೆದ ಹಾಗೆಲ್ಲಾ, ಮತ್ತೊಬ್ಬರ ಆಸರೆಯಿಲ್ಲದೇ ಹೋದರೆ ಬದುಕುವುದು ದುರ್ಭರವೆನ್ನಿಸತೊಡಗಿತು.

ನಮ್ಮತ್ತೆಯ ಸಾವಿನಿಂದಾಗಿ ನನ್ನ ಕಥೆಯಲ್ಲಿ ಪೂರ್ವಾರ್ಧ್ಯಾಯ ಮುಗಿಯಿತು.

ಇನ್ನು ನಡೆದುದೆಲ್ಲಾ ಮತ್ತೊಂದು ನಾಟಕ.

ಭಾಗ ಎರಡು

# ಉತ್ತರಾರ್ಧ

## ೧೨

ನಮ್ಮತ್ತೆ ಗತಿಸಿದ ಮೇಲೆ ವರ್ಷ, ಒಂದೂವರೆ ವರ್ಷ ನಾನು ಮನೆ ಬಿಟ್ಟು ಕದಲುವುದಕ್ಕೆ ಸಾಧ್ಯವಾಗದೇಹೋಯಿತು. ನಿತ್ಯವೂ ನಸುಕಿನಲ್ಲಿಯೇ ಎದ್ದು, ಮನೆಗೆ ಸಾಕಾಗುವಷ್ಟು ನೀರು ಸೇದಿ ಹಾಕುವುದು, ಆಮೇಲೆ ಹೊಲಕ್ಕೆ ಹೋಗುವುದು, ಮಧ್ಯಾಹ್ನ ಮನೆಗೆ ಬಂದು ಊಟ ಮಾಡಿ ಮತ್ತೆ ಹೊಲಕ್ಕೆ ಹೋಗುವುದು, ರಾತ್ರಿ ಹೊತ್ತಾದ ಮೇಲೆ ಮನೆಗೆ ಬರುವುದು – ಹೀಗೆ ಕಳೆದುಹೋಯಿತು ಆ ಒಂದೂವರೆ ವರ್ಷ.

ಆ ಒಂದೂವರೆ ವರ್ಷ, ಮುಂದೆ ಬರುವ ಮದುವೆಗಾಗಿ ಹಣ ಜೋಡಿಸಿಕೊಳ್ಳುವುದರಲ್ಲಿಯೇ ಸರಿಹೋಯಿತು. ಬಿಡುವು ದೊರೆತಾಗಲೆಲ್ಲಾ ನನ್ನ ಸೋದರಮಾವನ ಮಗನಿಗೂ, ಮಗಳಿಗೂ ಪಾಠ ಹೇಳಿಕೊಡುತ್ತ ಬಂದೆ. ಅವರಿಬ್ಬರೂ ಜಾಣರಾಗಿ ವಿದ್ಯೆ ಕಲಿಯುತ್ತಾ ಬಂದರು. ಒಂದೂವರೆ ವರ್ಷ ಕಳೆಯುವಷ್ಟರಲ್ಲಿ ಇಬ್ಬರೂ ಭಾಗವತವನ್ನಾಗಲೀ, ಭಾರತವನ್ನಾಗಲೀ ಸಲೀಸಾಗಿ, ತಡೆಯಿಲ್ಲದೆ, ಅರ್ಥವಾಗುವಂತೆ ಓದುವಷ್ಟರಮಟ್ಟಿಗೆ ತಯಾರಾದರು. ಬಡ್ಡೀಲೆಕ್ಕ, ದಾಮಾಷಾಗಳನ್ನು ಚೆನ್ನಾಗಿ ಮಾಡುವಂತಾದರು. ನನ್ನ ಸೋದರಮಾವನ ಮಗನಿಗೆ – ನನಗೆ ಬಂದಷ್ಟು ಇಂಗ್ಲಿಷ್ ಕಲಿಸಿದೆ. ಆ ಊರಿನ ನನ್ನ ಬ್ರಾಹ್ಮಣ ಸ್ನೇಹಿತನ ಕೈಲಿ, ಆತ ನಮ್ಮೂರಿಗೆ ಬಂದಾಗಲೆಲ್ಲಾ ನನ್ನ ಸೋದರಮಾವನ ಮಗನಿಗೆ ಚರಿತ್ರೆ ಭೂಗೋಳ ಮುಂತಾದುವುಗಳನ್ನು ಹೇಳಿಕೊಡಬೇಕೆಂದು ಒಪ್ಪಿಸಿದೆ.

* * * *

ಬರಬರುತ್ತಾ ನನ್ನ ಸೋದರಮಾವನ ಮಗ ನಾನೆಂದರೆ ಬಿದ್ದು ಸಾಯಲಾರಂಭಿಸಿದ. ಊಟ ಮಾಡುವಾಗ ಮೊಸರು ಕೊಂಚವೇ ಇದ್ದು, ಅದನ್ನು ಅವರಕ್ಕ ಬಡಿಸಹೋದರೆ 'ಮಾವಯ್ಯನಿಗೆ ಇರಲಿ, ಹಾಗೇ ಉಳಿಸಿಬಿಡು' ಎಂದು ಹೇಳಿ, ತಾನು ಬಡಿಸಿಕೊಳ್ಳುತ್ತಿರಲಿಲ್ಲ. ನಿತ್ಯ ರಾತ್ರಿ, ನನ್ನ ಊಟವಾಗಿ, ನಾನು ಕೈ ತೊಳೆದುಕೊಂಡು ಬರುವಷ್ಟರಲ್ಲಿ, ನನ್ನ ಹಾಸಿಗೆ ಹಾಸಿ ಸಿದ್ಧಗೊಳಿಸಿರುತ್ತಿದ್ದ. ಬರಬರುತ್ತಾ ನನಗೆ ಚುಟ್ಟಾ ಸೇದುವ ಅಭ್ಯಾಸ ಅಂಟಿಕೊಂಡುಬಿಟ್ಟಿತ್ತು. ಮೋಡ ಮುಸುಕಿದಾಗ, ಮಳೆ ಹುಯ್ಯುತ್ತಿರುವಾಗ, ಹೊಲದಲ್ಲಿ ಗೇಯುತ್ತಿರುವಾಗ–ಚುಟ್ಟಾ ಸೇದಿದರೆ ಮೈಯಲ್ಲಿ ಕೊಂಚ ಲವಲವಿಕೆಯುಂಟಾಗಿ ಬೆಚ್ಚಗಾದಂತಿರುತ್ತಿತ್ತು. – ಮೊದಮೊದಲು ಈ ರೀತಿ ಅಭ್ಯಾಸವಾಯಿತು. ಆಮೇಲೆ ಬೆಳಗ್ಗೆ ಏಳುತ್ತಲೇ ಒಂದು ಚುಟ್ಟಾ, ಮಧ್ಯಾಹ್ನ ಊಟವಾದ ಮೇಲೆ ಒಂದು, ರಾತ್ರಿಯೂಟವಾದ

ಮೇಲೊಂದು–ಹೀಗೆ ಬೇಕೇಬೇಕಾಗಿಬಿಟ್ಟಿತು. ನನ್ನ ಸೋದರಮಾವನ ಮಗ ನಿತ್ಯವೂ ನನ್ನ ಊಟ ಮುಗಿದು, ನಾನು ಹೊರಬರುತ್ತಲೇ ಸೊಗಸಾಗಿ ಚುಟ್ಟಾ ಸಿದ್ಧಗೊಳಿಸಿ ತಂದು ನನಗೆ ಕೊಡುತ್ತಿದ್ದ. ಮನೆಯಲ್ಲಿ ನನಗೇನು ಬೇಕಾಗಿ ಬಂದರೂ ಆ ಕೂಡಲೇ ಅವನು ಆ ವಸ್ತುವನ್ನು ನನ್ನ ಕೈಗೆ ಎಟಕಿಸುತ್ತಿದ್ದ.

'ಭಾವಾ, ನೀನೊಬ್ಬನೇ ಗೇಯಲಾರೆ. ನಾನೂ ಸಹ ಹೊಲಕ್ಕೆ ಬಂದು ನಿನಗೆ ಕೈಯಾಸರೆಯಾಗ್ತೇನೆ' ಎನ್ನುತ್ತಿದ್ದ. 'ಬೇಡ ಕಣೋ, ನಿನ್ನ ಪಾಡಿಗೆ ನೀನು ಓದಿಕೋ. ನನ್ನ ಸಹಾಯಕ್ಕೆ ಹೇಗೂ ಆಳು ಇದಾನಲ್ಲಾ. ಹೊಲದ ಗೈಮೆಗೆ ನಾನೂ ಅವನೂ ಸಾಕು. ಮುಂದಿನ ವರ್ಷ ನಿನ್ನನ್ನು ಮುಂದಿನ ಓದಿಗಾಗಿ ಗುಂಟೂರಿಗೆ ಕಳಿಸಿಕೊಡ್ಬೇಕೂಂತಿದೀನಿ. ನಿನಗೀ ಹೊಲದ ಗೇಮೆ ಬೇಡ' ಎಂದು ಹೇಳುತ್ತಿದ್ದೆ. 'ಪಟ್ಟಣದಲ್ಲಿ ಓದುವುದೆಂದರೆ ಮಾತೇ? ಹಣ ಬೇಡವೇ ?' ಎನ್ನುತ್ತಿದ್ದ. 'ನನ್ನ ಪಾಡು ನಾನು ಪಡುತ್ತೇನೆ ಕಣೋ. ಅದೆಲ್ಲಾ ನಿನಗೇಕೆ?' ಎನ್ನುತ್ತಿದ್ದೆ.

ನನ್ನ ಸೋದರಮಾವನ ಮಗಳು ನನ್ನೊಂದಿಗೆ ಹೆಚ್ಚಿಗೆ ಮಾತನಾಡುತ್ತಿರಲಿಲ್ಲ. ಯಾವುದೋ ಗೃಹಕೃತ್ಯದ ಬಗ್ಗೆಯಲ್ಲದೆ ಹೆಚ್ಚಿಗೆ ಮಾತಾಡುವ ವಿಷಯಗಳೂ ಇರುತ್ತಿರಲಿಲ್ಲ. ಬೆಳಗಿನ ಹೊತ್ತಿನಲ್ಲಿ ಹಾಲು ಕರೆಯುತ್ತಿದ್ದಳು. ಮನೆಯನ್ನೆಲ್ಲಾ ಗುಡಿಸಿ, ಸಾರಿಸಿ, ಅಂಗಳವನ್ನು ಶುಚಿಗೊಳಿಸಿ, ಅಡುಗೆ ಮಾಡುತ್ತಿದ್ದಳು. ನಾನು ಹೊಲಕ್ಕೆ ಹೋಗುತ್ತಲೇ, ಭಾರತವನ್ನೋ ಭಾಗವತವನ್ನೋ ಓದುತ್ತಾ ಕುಳಿತುಬಿಡುತ್ತಿದ್ದಳಷ್ಟೆ.

* * * *

ನಮ್ಮೊಂದಿಗೆ ತಿರುಪತಿಗೆ ಬಂದಿದ್ದ ಆ ಕಮ್ಮಾ ಆಸಾಮಿ ಒಂದು ದಿನ ನಮ್ಮ ಮನೆಗೆ ಬಂದು, ನನ್ನೊಂದಿಗೆ ಮಾತನಾಡುತ್ತ ಹೊರ ಜಗುಲಿಯ ಮೇಲೆ ಕುಳಿತುಕೊಂಡ. ನನ್ನ ಸೋದರಮಾವನ ಮಗಳು ತಲೆಬಾಗಿಲ ಚೌಕಟ್ಟಿನೊಳಗಡೆ ನಿಂತಿದ್ದಳು. ಆತ ಮಾತಿನ ಮಧ್ಯೆ 'ಅಲ್ಲಾ ಕಣೋ, ನಿನ್ನ ಮದುವೆಯ ವಿಷಯ ಏನು ಮಾಡ್ದೆ? ಹಿರಿಯರಾರೂ ಮನೇಲಿಲ್ದೇ ಹೋದ್ದರಿಂದ ನೀನು ಆ ವಿಷಯವನ್ನೇ ಹೆಚ್ಚಿಗೆ ಹಚ್ಕೊಂಡಂತೆ ಕಾಣ್ಸಿಲ್ಲ. ಆದಷ್ಟು ಬೇಗ ಮದುವೆ ಮಾಡಿಕೊಂಡುಬಿಟ್ರೆ ಚೆನ್ನಾಗಿರುತ್ತೆ' ಎಂದ. 'ದುಡ್ಡಿಲ್ಲ ಚಿಕ್ಕಪ್ಪಾ!' ಎಂದೆ ನಾನು. 'ಎಷ್ಟು ಬೇಕಾಗುತ್ತಯ್ಯಾ? ಮನೆಯಲ್ಲಿನ ಮಾತು; ಒಡವೆ ಹಾಕ್ಬೇಕಾ, ತೆರಾ ಕೊಡ್ಬೇಕಾ? ಆ ಕಡೆಯಿಂದ ವರದಕ್ಷಿಣೆಯೇ, ಮತ್ತೊಂದೇ? ಎರಡು ಕಡೆಗೂ ನೀನೇ ಅಲ್ಲವೇನೋ? ಯಾವುದೋ ಒಂದು ರೀತೀಲಿ ಮದುವೆ ಮುಗೀತು ಅಂತ ಅನ್ನಿಸಿಬಿಡು' ಎಂದ.

ನಾನು ಅಲ್ಲಿಯೇ ನಿಂತಿದ್ದ ಅವಳ ಕಡೆಗೆ ನೋಡಿ–

'ಏನೇ ಮಾವನ ಮಗಳೇ ! ಏನೆನ್ನುತ್ತೀಯೇ?' ಎಂದು ನಗು ಮುಖದಿಂದ ಕೇಳಿದೆ. ಅವಳು ಗಕ್ಕನೆ ಮುಖ ತಿರುಗಿಸಿಕೊಂಡು, ಮನೆಯೊಳಗೆ ಹೋಗಿಬಿಟ್ಟಳು. ಆತ ನಕ್ಕ 'ಮಗೂ, ಆದಷ್ಟು ಜಾಗ್ರತೆ ಮದುವೆ ಮಾಡಿಕೊಂಡುಬಿಡಪ್ಪಾ. ನಿನಗಷ್ಟು ಸಂಕೋಚ ಅನ್ನಿಸಿದ್ರೆ ನಾನು ಊರಿನ ನಾಲ್ಕು ಜನ ದೊಡ್ಡಮನುಷ್ಯರನ್ನು ಕರ್ಕೊಂಡು ಬಂದು ಮಾತುಕತೆ ಮುಗಿಸಿಬಿಡ್ತೀವಿ.

ಲಗ್ನದ ಮುಹೂರ್ತವೆಲ್ಲಾ ಅವರೇ ಇಡಿಸ್ತಾರೆ' ಎಂದ. 'ಹಾಗೆಯೇ ಆಗಲಿ' ಎಂದು ತಲೆಯಾಡಿಸಿದೆ. ಆತ ಹೊರಟುಹೋದ. ನಿಜ ಹೇಳಬೇಕೆಂದರೆ ನಾನು ನಮ್ಮ ಲಗ್ನಕ್ಕೆಂದು ಹದಿನೈದು ನೂರು ರೂಪಾಯಿಗಳನ್ನು ಕೂಡಿಸಿಟ್ಟಿದ್ದೆ. ಆ ವರ್ಷ ದವಸಧಾನ್ಯಗಳನ್ನು ಮಾರಾಟ ಮಾಡಿದ್ದೆ. ಹಲವು ಖಂಡುಗ ಬತ್ತ ಖಂಡುಗಗಟ್ಟಳೆ ಜೋಳ ಮಾರಿದ್ದರಿಂದ ಆರುನೂರು ರೂಪಾಯಗಳಷ್ಟು ಲಾಭ ಬಂದಿತ್ತು. ಹೊಗೆಸೊಪ್ಪಿನ ಮೇಲೆ ಆರುನೂರು ರೂಪಾಯಿ ಲಾಭ ತೆಗೆದಿದ್ದೆ. ಹೆಸರು, ತೊಗರಿ ಮುಂತಾದ ಧಾನ್ಯಗಳ ಮಾರಾಟದಿಂದಲೂ, ಆ ಖರ್ಚು ಈ ಖರ್ಚು ಹೋಗಲಾಗಿ ಹೇಗೋ ಮಾಡಿ ಸುಮಾರು ಹದಿನೈದು ನೂರು ರೂಪಾಯಿಗಳಷ್ಟು ಕೂಡಿಹಾಕಿದ್ದೆ ನಾನು ಮಾರಾಟದಲ್ಲಿ ಹೆಚ್ಚಿಗೆ ಪಡೆದ ಲಾಭ– ಆರುನೂರು ರೂಪಾಯಿಗಳಿಂದ ವಧುವಿಗೆ ಒಡವೆಗಳನ್ನು ಮಾಡಿಸಿ ಹಾಕೋಣವೆಂದು ನಿಶ್ಚಯಿಸಿಕೊಂಡಿದ್ದೆ. ಲಗ್ನದ ವಿಷಯದಲ್ಲಿ ಊರಿನವರು ಯಾರಾದರೂ ನಾಲ್ಕು ಜನ ಹಿರಿಯರು, ಟೊಂಕಕಟ್ಟಿ ನಿಂತುಕೊಂಡು ನಡೆಯಿಸಬೇಕಾಗಲೀ, ನನ್ನಷ್ಟಕ್ಕೆ ನಾನೇ ನಿಂತು ಮಾಡಿಕೊಳ್ಳಲು ನನಗೇಕೋ ನಾಚಿಕೆ

ಅನಂತರ, ಒಂದು ವಾರದ ಬಳಿಕ, ಊರಿನ ಒಂದಿಬ್ಬರು ಪ್ರಮುಖರು ನನ್ನ ಮದುವೆಯ ಪ್ರಯತ್ನಕ್ಕೆ ತೊಡಗಿದರು. ಇನ್ನೂ ಮುಹೂರ್ತವನ್ನು ನಿಶ್ಚಯಿಸಿಲ್ಲ. ನಾಡಿದ್ದು ನಿಶ್ಚಯಿಸುತ್ತಾರೆ. ಆ ದಿನ ರಾತ್ರಿ ನಾನು ಊಟ ಮಾಡಿ ಮಲಗಿಕೊಂಡೆ. ನನಗೆ ನಿದ್ರೆ ಹತ್ತಿಯೂ ಹತ್ತದಂತೆ ಹತ್ತಿತು. ನಿದ್ರೆಯಲ್ಲಿ ನನ್ನ ಸಾಕುತಂದೆ ಕಾಣಿಸಿಕೊಂಡ. ಮುಖದಲ್ಲಿ ಮುನ್ನಿನ ಪ್ರಸನ್ನತೆ ಇರಲಿಲ್ಲ. ಮುಖ ಜೋತುಬಿದ್ದಿತ್ತು. ಮಡಿಮಾಡಿದ ನೀರ್ಕಾವಿ ಉಡುಪಿನಲ್ಲಿ ಕಾಣಿಸಿಕೊಳ್ಳುತ್ತಿದ್ದ ನನ್ನ ಸಾಕುತಂದೆ–ಅಂದು ಕೊಳೆಯಾದ ಉಡುಪಿನಲ್ಲಿ ಕಾಣಿಸಿಕೊಂಡ. ಚಡಾವುಗಳಿಲ್ಲ ; ಹಿತ್ತಾಳೆಯ ಹಿಡಿಯುಳ್ಳ ಬೆತ್ತವಿಲ್ಲ ; ಚುಟ್ಟಾ ಸೇದುತ್ತಿಲ್ಲ. ಕಾಣಿಸಿಕೊಳ್ಳುತ್ತಲೇ 'ಮಗೂ, ಮಕ್ಕಳ ವಿಷಯವೇನು ಮಾಡಿದೆ? ಅವರ ಸೋದರಮಾವ ಅವರಿಗೆ ದ್ರೋಹ ಮಾಡಿಬಿಟ್ಟ ನೀನು ಸುಖವಾಗಿ ನಿನ್ನ ಹೆಂಡತಿ, ನಿನ್ನ ಸಂಸಾರ ಅಂತ ಇದೀಯೆ. ಆದಾಗ್ಯೂ ಎಂದೋ ಚಿಕ್ಕಂದಿನಲ್ಲಿ ನಿನ್ನನ್ನು ಒಂದೆರಡು ವರ್ಷ ನಾನು ಸಾಕಿದ್ದೇನೆಂಬ ಮಾತಿನ ಮೇಲೆ ನನ್ನ ಮಕ್ಕಳ ಬದುಕನ್ನು ನೇರ್ಪಡಿಸು ಅಂತ ಅನ್ನೋದು ತರವಲ್ಲವೇನೋ!' ಎಂದ.

'ಆ ಮಕ್ಕಳ ಸೋದರಮಾವ ಅವರಿಗೆ ದ್ರೋಹ ಬಗೆದರೆ ನಾನು ತಾನೇ ಏನು ಮಾಡಬಲ್ಲೆ? ಹೋಗಿ ಮಕ್ಕಳನ್ನಾದರೂ ನೋಡಿಕೊಂಡು ಬರೋಣವೆಂದರೆ, ನಾಳೆ ಮುಹೂರ್ತ ನಿಶ್ಚಯಿಸಬೇಕಾಗಿ ಬಂದಿದೆಯಲ್ಲಾ. ಮದುವೆ ಮುಗಿದಮೇಲಲ್ಲದೆ ಅಲ್ಲಿಗೆ ಈಗಲೇ ಹೋಗಲು ಸಾಧ್ಯವಿಲ್ಲ. ಏನಿಲ್ಲವೆಂದರೂ ಇನ್ನೂ ಒಂದೆರಡು ತಿಂಗಳು ಹಿಡಿಯುತ್ತೆ' ನನ್ನ ಸಾಕುತಂದೆ ನನ್ನ ಒಳಗುದಿಯನ್ನು ಕಂಡುಕೊಂಡನೆಂದು ಕಾಣಿಸುತ್ತದೆ ! ಹೀಗೆಂದ– 'ಮಗೂ, ಮದುವೆಯಾಗಿಬಿಟ್ಟರೆ ಅಲ್ಲಿಗೆ ಹೋಗುವುದಂತೂ ದುಸ್ತರವೇ ಆಗಿಬಿಡುತ್ತೆ ನಿನ್ನ ಮದುವಣಗಿತ್ತಿ, ನೀನೂ ಸರಸ–ಸಲ್ಲಾಪದಿಂದ ಕಾಲ ಕಳೆಯುವ ಹೊತ್ತಿನಲ್ಲಿ ನಾನು ನಿನ್ನನ್ನು ಅಲ್ಲಿಗೆ ಹೋಗಿ ಬಾ ಎಂದು ಒತ್ತಾಯಿಸಲೂ ಆರೆ, ನೀನು ಹೋಗಲೂ ಆರೆ. ನಿಜವಾಗಿಯೂ

ನಿನಗೆ ನನ್ನ ಮೇಲೆ ಪ್ರೇಮವೆಂಬುದೇನಾದರೂ ಒಂದಿಷ್ಟಿದ್ದರೆ, ಈ ಕೂಡಲೇ ಹೋಗಿ ಬಾ.' ನಾನು ಯೋಚಿಸತೊಡಗಿದೆ. ಆತ ಸ್ವಲ್ಪ ಹೊತ್ತು ಸುಮ್ಮನಿದ್ದು ಮತ್ತೆ ಹೀಗೆ ನುಡಿದ– 'ಮಗೂ, ಹೋಗೋದು ಬೇಡ ಬಿಡಪ್ಪಾ. ಅವರ ಪಾಡು ಅವರಿಗೆ. ಅವರ ಹಣೆಯ ಬರೆಹದಲ್ಲಿದ್ದಂತಾಗುತ್ತೆ ಅವರಿಂದಾಗಿ ನೀನೇಕೆ ನಿನ್ನ ಸಂಸಾರ ಹಾಳು ಮಾಡ್ಕೋಬೇಕು?' ಎಂದು ಹೇಳಿ ಕಣ್ಮರೆಯಾಗಿಬಿಟ್ಟ. ನಾನು ನನ್ನ ತಂದೆಗಾಗಿ ಅರಸಿದೆ. ಆತ ಪುನಃ ನನಗೆ ಕಾಣಿಸಿಕೊಳ್ಳಲೇ ಇಲ್ಲ. ನನಗೆ ತಟಕ್ಕನೆ ಎಚ್ಚರವಾಯಿತು. ಅದರೊಂದಿಗೇನೇ ನನ್ನ ಕೃತಘ್ನತೆಯೂ ನನ್ನ ಕಣ್ಣೆದುರಿಗೆ ಬಂದು ನಿಂತಿತು. ಆ ನನ್ನ ಸಾಕುತಂದೆಯೇ ಇಲ್ಲದೇಹೋಗಿದ್ದಲ್ಲಿ ನನ್ನ ಗತಿ ಏನಾಗುತ್ತಿತ್ತು? ಕಂಡಕಂಡಲ್ಲಿ ಜೀತದಾಳಾಗಿ ದುಡಿದುಕೊಂಡು ಬಿದ್ದಿರಬೇಕಾಗುತ್ತಿತ್ತು....ಬೆಳಕು ಹರಿಯುವ ತನಕವೂ ನನಗೆ ಪುನಃ ನಿದ್ರೆಯೇ ಬರಲಿಲ್ಲ. ಬೆಳಗಾಗುತ್ತಲೇ ಮುಖ ತೊಳೆದುಕೊಂಡು ನನ್ನ ಮಾವನ ಮಗಳನ್ನೂ, ಭಾವಮೈದುನನನ್ನೂ ಕರೆದು, 'ನಾನು ನನ್ನ ಸಾಕುತಂದೆಯವರ ಊರಿಗೆ ಹೋಗುತ್ತಿರುವೆ. ಮುಹೂರ್ತ ನಿಶ್ಚಯಿಸಲು ಅವರಲ್ಲಿ ಯಾರಾದರೂ ಬರುತ್ತಾರೆ ; ಬಂದರೆ ನಮ್ಮ ಭಾವ ಊರಿಗೆ ಹೋಗಿದಾನೆ, ಇನ್ನೂ ನಾಲ್ಕು ದಿನಗಳಿಗೆ ಬಂದುಬಿಡುತ್ತಾನೆ. ಬಂದಮೇಲೆ ಮುಹೂರ್ತ ನಿಶ್ಚಯಿಸಬೇಕಂತೆ ಅಂತ ತಿಳಿಸಿಬಿಡಿ. ನೀವು ಹುಷಾರಾಗಿ ಇರಿ' ಎಂದು ತಿಳಿಸಿ, ನಾನು ನನ್ನ ಸಾಕುತಂದೆಯ ಊರಿನ ಕುರಿತು ಪಯಣವಾದೆ.

ಸಾಯಂಕಾಲಕ್ಕೆಲ್ಲಾ, ಅಂದೊಂದು ದಿನ ಆದರಿಸಿದ್ದ ನನ್ನ ಆ ಚಿಕ್ಕಮ್ಮನ ಊರು ತಲುಪಿದೆ. ಆಕೆಯ ಗಂಡ ಸತ್ತುಹೋಗಿದ್ದನು. ಮಗ ಕೈಗೆ ಬಂದಿದ್ದನು. ನನ್ನನ್ನು ನೋಡಿ 'ಭಾವಾ ! ನಿನ್ನನ್ನು ಎಷ್ಟು ಸಲ ನೆನೆಸಿಕೊಂಡೆನೋ ಏನೋ ! 'ಇಗೋ ಬಂದುಬಿಟ್ಟೆ ಅಂತ ಹೇಳಿ ಹೋದೋನು, ಇಷ್ಟು ದಿನಗಳಾದ್ರೂ ಬರಲೇ ಇಲ್ಲ. ಬಂಧುವೆಂದರೆ ನೀನೇ ಕಣಯ್ಯಾ ಬಂಧು! ಮುಖದೆದುರಿಗೆ ಮಾತ್ರ ಊಂ ಊಂ ಅನ್ನುತ್ತಿ, ಮುಖ ತಿರುಗಿಸುತ್ಲೆ ನೀನ್ಯಾರೋ, ನಾವ್ಯಾರೋ ! ಅಲ್ವೇ?' ಎಂದು ಕೇಳಿದ. ನಾನು 'ಸರಿ ಕಣಯ್ಯಾ ! ನಾನು ಬರಲಿಲ್ಲ. ನೀನೇಕೆ ನಮ್ಮಲ್ಲಿಗೆ ಬರಲಿಲ್ಲ ? ನಿನ್ನ ಭಾವನನ್ನು ನೀನೇ ಏಕೆ ಬಂದು ನೋಡಲಿಲ್ಲ? ಈಗ ನೀನೇಕೆ ಬರುತ್ತೀ ಬಿಡಪ್ಪಾ ? ಆರೆಕರೆ ಎರೇ ಭೂಮಿಯ ಧಣಿ ನೀನಾದೆ ! ನಾನಾದರೋ, ತಲೆಯ ಮೇಲೆ ನೆರಳಿಲ್ಲದ, ನಿಲ್ಲಲು ನೆಲೆಯಿಲ್ಲದ, ನನ್ನವರೆಂಬ ದಿಕ್ಕಿಲ್ಲದ ಅನಾಥಪಕ್ಷಿ!' ಎಂದು ಮರುನುಡಿದೆ. ಅವನು ಕುಳಿತಲ್ಲಿಯೇ ಪಾತಾಳಕ್ಕಿಳಿದಂತೆ ಕುಗ್ಗಿದವನಾಗಿ 'ಭಾವಾ, ಎಂಥಾ ಮಾತನಾಡ್ತೀಯೆ ! ಬುಡ್ತು ಅನ್ನು ! ನೀನೂಂತಂದ್ರೆ ನನ್ನ ಮನಸ್ಸಿಗೆ ಹೇಗಿರುತ್ತೋ ನೀ ಕಾಣೆ. ನೀನೀ ದಿನ ಕೆರೆಗೆ ಹಾರು ಅಂತ ಅಂದ್ರೆ ಹಾರಕ್ಕೂ ಸಿದ್ಧನಿದ್ದೀನಿ. ನೀನಿಂಥಾ ಕೆಲಸಾ ಮಾಡೂಂತಂದ್ರೆ ಅಂಥಾ ಕೆಲಸ ಮಾಡಲೂ ತಯಾರಿದೇನೆ. ನನ್ನ ಆರೆಕರೆ ಜಮೀನು ನಿನಗಿಂತಲೂ ಹೆಚ್ಚೇ ನನಗೆ? ನೀನೇ ನನ್ನ ಭಾಗದ ದೇವರು. ನಿನ್ನನ್ನು ಕಂಡ್ರೆ ನನಗೆ ಹಾಗನ್ನಿಸುತ್ತೆ ನಿನ್ನ ಬಗ್ಗೆ ಅಮ್ಮನ ಹತ್ತಿರ ಆಗಾಗ ಏನು ಹೇಳ್ತಾ ಇರ್ತೀನೋ ಕೇಳಿನೋಡು'

ಎಂದು ನುಡಿದ. ನಾನು 'ನಿಜವಾಗಿಯೂ ನಾನು ಏನು ಹೇಳಿದರೆ ಅದು ಮಾಡುತ್ತೀಯಾ?' ಎಂದು ಕೇಳಿದೆ. 'ಮಾಡದೆ ಹೋಗ್ತೇನ್ಯೇ? ನೀನು ಯಾವ ಆಣೆ ಇಡು ಎಂದರೂ ಸರಿಯೇ, ಆ ಆಣೆ ಇಡ್ತೇನೆ' ಎಂದ. 'ಆಣೆಗೀಣೆ ಏನೂ ಬೇಡ ಕಣಯ್ಯಾ. ಆದರೆ ಇಂದಾಡಿದ ಮಾತನ್ನು ಮಾತ್ರ ನೀನು ಮರೆತುಬಿಡಬೇಡ. ಚೆನ್ನಾಗಿ ಜ್ಞಾಪಕವಿಟ್ಟುಕೋ' ಎಂದೆ.

ಗಂಡ ಸತ್ತುಹೋಗಿದ್ದರಿಂದ ನನ್ನ ಚಿಕ್ಕಮ್ಮ ಆ ರಾತ್ರಿ ನನ್ನ ಕಣ್ಣಿಗೆ ಸ್ವಲ್ಪ ಹೊತ್ತು ಕಾಣಿಸಿಕೊಳ್ಳಲಿಲ್ಲ. ನಾನು ಆಮೇಲೆ ಚಿಕ್ಕಮ್ಮನ ಬಳಿಗೆ ಹೋಗಿ ಸಮಾಧಾನದ ಮಾತುಗಳನ್ನಾಡಿದೆ. 'ಅಪ್ಪಾ ಮಗೂ, ನನ್ನ ಮಡಿಲಲ್ಲಿ ಒರಗಿಕೋಪ್ಪಾ' ಎಂದು ಆಪ್ಯಾಯವಾಗಿ ಕೇಳಿಕೊಂಡಳು. ಆಕೆ ಹೊರಸಿನ ಮೇಲೆ ಮಲಗಿದ್ದಳು. ನಾನು ಆ ತಾಯಿಯ ಮಡಿಲಲ್ಲಿ ಮುಖವೊರಗಿಸಿದೆ. 'ಮಗೂ ! ನನ್ನ ಮಕ್ಕಳು ಚಿಕ್ಕವು. ದೊಡ್ಡೋನು ಅಮಾಯಕ. ಮಿಕ್ಕವರೆಲ್ಲಾ ಚಿಕ್ಕಚಿಕ್ಕ ಕಂದಮ್ಮಗಳು. ನಮಗೇನೂ ದೊಡ್ಡದಾಗಿ ಆಸ್ತಿಪಾಸ್ತಿಗಳಿಲ್ಲ. ಈ ಅಮಾಯಕ ಹುಡುಗನಿಗೆ ಹೇಗೆ ಮದುವೆ ಮಾಡಲಿ? ಮಾಡಿದರೂ, ಆರೆಕರೆಯ ಜಮೀನಿನಲ್ಲಿ ಇವರನ್ನೆಲ್ಲಾ ಹೇಗೆ ನಿಭಾಯಿಸಿಕೊಂಡು ಬರಲಿ? ಎಷ್ಟು ಯೋಚಿಸಿದರೂ ನನಗೇನು ತೋಚುತ್ತಿಲ್ಲ. ನನಗೆ ಇದರ ಬಗ್ಗೆ ಯೋಚನೆಗಿಟ್ಟುಕೊಂಡಾಗಲೆಲ್ಲಾ ನಿನ್ನನ್ನು ನೆನೆಸಿಕೊಳ್ತಾ ಇರ್ತೇನೆ. ನನ್ನ ಹಿರೀಮಗನಿದ್ದಾನಲ್ಲಾ ! ಈ ಸಂಸಾರವನ್ನು ಪಾರುಗಾಣಿಸಿದರೆ ಅವನೇ ಪಾರುಗಾಣಿಸಬೇಕು' ಅಂತ. ನಿನಗೆ ಈ ಮಕ್ಕಳು ಭಾವಮೈದುನರೋ, ತಮ್ಮಂದಿರೋ ! ನೀನು ಮಾತ್ರ ಇವರ ಮೇಲೊಂದು ತಣ್ಣನೆಯ ಕಣ್ಣಿಟ್ಟು ಕಾಪಾಡಿಕೊಂಡು ಬರಬೇಕು, ಮಗೂ' ಎಂದಳು, ನಾನು ಆ ತಾಯಿಯ ಮುಖದ ಕಡೆಗೆ ನೋಡಿದೆ. ಗಂಡ ಗತಿಸಿದರೂ, ಆಕೆಯ ಮುಖದಲ್ಲಿ ಎಲ್ಲಿಯೂ ವೈಧವ್ಯ ಭಾವವಿಲ್ಲ. ಲಕ್ಷ್ಮೀದೇವಿಯ ಹಾಗಿದೆ ಆಕೆಯ ಮುಖ. ನನಗೆ ಸೋಜಿಗವೆನ್ನಿಸಿತು–ನನಗೆ ಮನೆಯಿಲ್ಲ, ಮಾರಿಲ್ಲ, ಹೊಟ್ಟೆಗಿಲ್ಲ, ಬಟ್ಟೆಗಿಲ್ಲ–ಇಂಥ ನನ್ನ ಮೇಲೆ ಮೂರು ಸಂಸಾರಗಳು ಆಧಾರಪಟ್ಟಿವೆ ! ಅಲ್ಲಿ ನನ್ನ ಸಾಕುತಂದೆಯ ಸಂಸಾರ, ಇಲ್ಲಿ ಈ ಚಿಕ್ಕಮ್ಮನ ಸಂಸಾರ, ಅತ್ತ ನಮ್ಮ ಸೋದರತ್ತೆಯ ಸಂಸಾರ! ಈ ಮೂರು ಸಂಸಾರಗಳನ್ನು ಬೆನ್ನಿಗೆ ಕಟ್ಟಿಕೊಂಡು ಈಜಬೇಕೇ ! ದಾರಿಬಿದ್ದು ಎಲ್ಲಿಗೋ ದಿಕ್ಕರಿಯದೆ ಹೋಗುತ್ತಿದ್ದ ನಾನು, ಈ ಮನೆಗೆ ಬಂದು, ಈಕೆಗೆ ನಾನು ಹಿರಿಯ ಮಗನಾಗಬೇಕೇ ! ನನಗೇನೂ ತೋಚಲಿಲ್ಲ. ಮರುನಿಮಿಷದಲ್ಲಿಯೇ ಆ ತಾಯಿಯ ಹಸ್ತಗಳು ನನ್ನ ಕಣ್ಣುಗಳ ಮೂಲಕ ಕಣ್ಣೀರು ಹರಿಯಲಾರಂಭಿಸಿತು. 'ಅಮ್ಮಾ' ಎಂದೆ. ಆ ತಾಯಿ ಎದ್ದು, ನನ್ನ ತಲೆಯ ಮೇಲೆ ಮುಖವಿರಿಸಿ, ಮುತ್ತಿಟ್ಟುಕೊಂಡಳು. ಸ್ವಲ್ಪ ಹೊತ್ತಿನ ಮೇಲೆ ನಾನೆದ್ದು 'ಅಮ್ಮಾ, ಏನೂ ಪರವಾಗಿಲ್ಲ. ನಾನು ನಿನ್ನ ಮಕ್ಕಳನ್ನು ನೋಡಿಕೊಳ್ಳುವೆ, ನೀನೇನೂ ಆತಂಕಪಡಬೇಡ' ಎಂದು ಮರುನುಡಿದೆ.

ಮರುದಿನ ಬೆಳಿಗ್ಗೆ ನಾನು ನನ್ನ ಸಾಕುತಂದೆಯವರ ಊರು ತಲಪಿದೆ. ಅಲ್ಲಿನ ವ್ಯವಹಾರವೆಲ್ಲಾ ತಲೆಕೆಳಗಾಗಿತ್ತು. ನನ್ನ ತಂಗಿ ಮುಂಚಿನದಕ್ಕಿಂತಲೂ ಹುಚ್ಚಿಯಂತಾಗಿಬಿಟ್ಟಿದ್ದಳು. ತಮ್ಮಂದಿರಿಬ್ಬರೂ, ಒಬ್ಬ ದನ ಕಾಯುವುದಕ್ಕೆ, ಒಬ್ಬ ಸಗಣಿ ಗುಡಿಸುವುದಕ್ಕೆ ನಿಯಮಿಸಲ್ಪಟ್ಟಿದ್ದರು. ಮೂವರೂ ಸೊರಗಿ ಅಂಚಿ ಕಡ್ಡಿಯಂತಾಗಿಬಿಟ್ಟಿದ್ದರು. ಊರಿನಲ್ಲಿ

ಅವರಿವರ ಹತ್ತಿರ ವಿಷಯವನ್ನೆಲ್ಲಾ ಕೇಳಿ ತಿಳಿದುಕೊಂಡೆ. ಮೊದಲಿನ ಆ ಮಾತುಗಳೇ ಇಲ್ಲ, ಆಸ್ತಿಯನ್ನೆಲ್ಲಾ ಆ ಮಕ್ಕಳ ಸೋದರಮಾವ ತನ್ನ ಹೆಸರಿಗೇನೇ ಬರೆಯಿಸಿಕೊಂಡುಬಿಟ್ಟಿರುವನಂತೆ. ಮನೆಯಾಗಲೀ, ಮಾರಾಗಲೀ ಯಾವುದೂ ಇಲ್ಲ ಮಕ್ಕಳ ಪಾಲಿಗೆ. ಅವರ ಸೋದರಮಾವನ ಹೆಂಡತಿ–ನನ್ನ ಹುಚ್ಚು ತಂಗಿಯ ಮೂಲಕ ಮನೆಗೆಲಸವನ್ನೆಲ್ಲಾ ಮಾಡಿಸಿಕೊಳ್ಳುತ್ತಿರುವಳಂತೆ. ಮೂವರು ಮಕ್ಕಳನ್ನು ಅವಳು ಯಾವಾಗಲೂ ಹೊಡೆಯುತ್ತಿರುತ್ತಾಳಂತೆ. ಹೊಟ್ಟೆಗೆ ಸಾಕಾಗುವಷ್ಟಾದರೂ ಅನ್ನ ಹಾಕುತ್ತಿಲ್ಲವಂತೆ. ತಳಿಗೆಯಲ್ಲಿ ಊಟಕ್ಕಿಟ್ಟ ಕ್ಷಣದಿಂದಲೇ, ಚುಚ್ಚು ಮಾತುಗಳನ್ನಾಡುತ್ತ ಸಿಡಿಮಿಡಿಗುಟ್ಟುತ್ತಿರುತ್ತಾಳಂತೆ– 'ಹೊಟ್ಟೆ ಬಿರಿಯೋ ಹಾಗೆ ತಿನ್ತೀರಿ. ನಿಮ್ಮನ್ನು ಯಾವ ಮಾತಾಯಿ ಹೆತ್ತಳೋ?! ಅವಳ ಹೊಟ್ಟೆಗಿಷ್ಟು ಬೆಂಕಿ ಹಾಕಾ ! ಮನೆಗೆ ಶನೇಶ್ವರರ ಹಾಗೆ ಮೂಲವಾಗಿದ್ದೀರಲ್ಲೋ! ಎಂಥೆಂಥೋರಿಗೊ ಬರುತ್ತಂತೆ, ನಿಮಗೆ ಬರೋಲ್ಲವಲ್ಲ ಹೊತ್ಕೊಂಡು ಹೋಗೋ ಮಾರಿ!'– ಒಂದೇ, ಎರಡೇ–ಬಾಯಿಗೆ ಬಂದದ್ದನ್ನೆಲ್ಲಾ ಬಯ್ಯುತ್ತಾಳಂತೆ. ಅವು ಕಂದಮ್ಮಗಳು, ಏನು ಮಾಡಿಯಾವು? ದೊಡ್ಡವನು ಮಾತ್ರ ಆಗಾಗ ಹಿಂಸೆ ತಾಳಲಾರದೆ ಎದುರು ತಿರುಗಿ ಏನಾದರೂ ಅಂದರೆ–ಅವನನ್ನು ಕೋಲಿನಿಂದ ಥಳಿಸಿಬಿಡುತ್ತಾಳಂತೆ. ನಾನು ಪಟೇಲರ ಬಳಿಗೂ, ಶಾನುಭೋಗರ ಬಳಿಗೂ ಹೋಗಿ ಈ ಬಗ್ಗೆ ಏನಾದರೂ ವ್ಯವಹಾರ ನಡೆಸಲು ಸಾಧ್ಯವೇನೋ ಎಂದು ವಿಚಾರಿಸಿದೆ. ಆ ಮಕ್ಕಳ ಸೋದರಮಾವ ವ್ಯವಹಾರವನ್ನೆಲ್ಲಾ ಚೆನ್ನಾಗಿ ಬಿಗಿಗೊಳಿಸಿಬಿಟ್ಟಿರುವನಂತೆ. ನನ್ನ ಸಾಕುತಂದೆ ಸಾಯುವ ಸಮಯದಲ್ಲಿ, ನಾಲ್ಕಾರು ಬಿಳಿಯ ಹಾಳೆಗಳ ಮೇಲೆ, ಆತನ ಸಹಿಯನ್ನು ತೆಗೆದುಕೊಳ್ಳಲಾಗಿತ್ತಂತೆ. ಅರ್ಧ ಆಸ್ತಿಯನ್ನು ಆ ಮಕ್ಕಳ ಸೋದರಮಾವ–ತನಗೆ ಖುದ್ದು ರಾಜಿಯಿಂದ ನನ್ನ ಸಾಕುತಂದೆಯೇ ಬರೆದು ಕೊಟ್ಟಂತೆ ಉಯಿಲನ್ನು ಸಿದ್ಧಗೊಳಿಸಿಬಿಟ್ಟಿರುವನಂತೆ! ಊರಲ್ಲಿನ ಒಂದಿಬ್ಬರು ಘಟಿಂಗರನ್ನು ತನ್ನ ಕಡೆಗೆ ಮಾಡಿಕೊಂಡು, ಅವರಿಗೆ ನನ್ನ ಸಾಕುತಂದೆ ಬಾಕಿ ಬಿದ್ದಿರುವಂತೆ ಪತ್ರಗಳನ್ನು ಸೃಷ್ಟಿಸಿಕೊಂಡಿರುವನಂತೆ. ಆ ಸಾಲಕ್ಕಾಗಿ, ನನ್ನ ಸಾಕುತಂದೆ ತನ್ನ ಮಕ್ಕಳ ಹೆಸರಿನಲ್ಲಿ ಬರೆದ ಆಸ್ತಿಯನ್ನು ಜಮಾ ಕಟ್ಟಿ, ಒಳಗೊಳಗೇ ಅದನ್ನು ಅವರ ಬಳಿಯಿಂದ ಮತ್ತೆ ತಾನು ತನ್ನ ಹೆಸರಿಗೆ ಕ್ರಯ–ವಿಕ್ರಯ ಮಾಡಿಸಿಕೊಂಡಿರುವನಂತೆ. ಆ ಆಸ್ತಿಯನ್ನು ಆತ ಅವರ ಬಳಿಯಿಂದ ತಾನು ಹಣ ತೆತ್ತು ಕೊಂಡುಕೊಂಡಂತೆ–ಕ್ರಯಪತ್ರಗಳನ್ನು ಬರೆಯಿಸಿದ್ದಾನಂತೆ. ವ್ಯವಹಾರವೆಲ್ಲಾ ಎಲ್ಲೂ ಹುಸಿಯೆಂಬಂತಿಲ್ಲದಷ್ಟು ಬಿಗಿಯಾಗಿಬಿಟ್ಟಿದೆ. ನಾನು ಮಾಡುವಂಥದು ಏನೂ ಕಾಣಬರದಾಯಿತು. ಈಚೀಚೆಗೆ ನನಗೆ–ಕೋರ್ಟು ವ್ಯವಹಾರವೆಂದರೆ ಎಂಥದೋ ಚೆನ್ನಾಗಿ ಗೊತ್ತಾಗಿಬಿಟ್ಟಿದೆ. ಕೋರ್ಟಿನಲ್ಲಿ ಲಿಖಿತ ಪತ್ರಗಳ ಮೇಲೆಯೇ ನ್ಯಾಯ ದೊರಕುತ್ತದೆಯಾಗಲೀ, ನ್ಯಾಯದ ಮೇಲೆ ಕಾಗದಪತ್ರಗಳಲ್ಲ. ನನಗೇನೂ ತೋಚದಾಯಿತು. ಈಗ ನಾನೇನು ಮಾಡಲಿ? ಈ ಸೋದರಮಾವನಿಗೇಕೆ ಇಷ್ಟೊಂದು ದುರಾಸೆ ? ತನಗಾದರೊ ಮಕ್ಕಳುಮರಿಗಳಿಲ್ಲ. ಈ ಆಸ್ತಿಯನ್ನೆಲ್ಲಾ ಏನು ಮಾಡುತ್ತಾನೆ ? ತಲೆಯ ಮೇಲಿನ 'ಮಾಸ' ಆರದ ಈ ಕಂದಮ್ಮಗಳ

ಬಾಯಲ್ಲಿ ಮಣ್ಣು ಹಾಕಿದರೆ ತನಗೇನು ಬಂದ ಹಾಗೆ? ಇಹವೆ ? ಪರವೆ? ನನಗೊಂದು ಆಲೋಚನೆ ತಟ್ಟಿತು–ಆತನನ್ನು ಹಿಡಿದು ಚೆನ್ನಾಗಿ ಎಲುಬುಗಳನ್ನೆಲ್ಲಾ ಹುಡಿಹುಡಿ ಮಾಡಿಬಿಡಬೇಕೆಂದು ; ಅಸಲು ಕೊಂದುಹಾಕಿಬಿಡೋಣವೆಂದು. ಕೊಂದರೆ ತಾನೇ ಏನು ಲಾಭ? ಪೋಲೀಸಿನವರು ನನ್ನನ್ನು ಹಿಡಿದುಕೊಂಡು ಹೋಗುತ್ತಾರೆ. ಅತ್ತ ನನ್ನ ಮೇಲೆ ಅದೆಷ್ಟೋ ಆಸೆಯನ್ನಿರಿಸಿಕೊಂಡಿರುವ ಚಿಕ್ಕಮ್ಮನಿಗೂ ನೆರವಿಗಿಲ್ಲದಂತಾಗುವೆ. ಅಲ್ಲಿ ನನ್ನ ಮಾವನ ಮಗಳು ; ಮಗ– ಇಬ್ಬರೂ ಅನಾಥ ಪಕ್ಷಿಗಳಾಗಿಬಿಡುತ್ತಾರೆ. ನನ್ನ ಸಾಕುತಂದೆಯ ಮಕ್ಕಳ ಬದುಕನ್ನು ನೇರ್ಪಡಿಸಿದವನೂ ಆಗಲ್ಲ......ಕೊಂದುಹಾಕುವುದೇನೂ ಬೇಡ, ಒಮ್ಮೆ ಸ್ವಲ್ಪ ಬಿಸಿ ತಾಕಿಸಿ ಬಿಟ್ಟುಬಿಡೋಣವೆಂದುಕೊಂಡೆ. ಏತಕ್ಕೆಂದರೆ ನನ್ನ ತಮ್ಮಂದಿರ ಸೋದರಮಾವ ಈಗ ಊರಿನಲ್ಲಿ ಗಣ್ಯವ್ಯಕ್ತಿಯಾಗಿ ಚಲಾವಣೆಯಾಗುತ್ತಿರುವನು. ಮುಂಚಿನ ಹಾಗೆ ಈಗ ಆತನೊಂದಿಗೆ ಕಚ್ಚಾಡುವುದೂ ಚೆನ್ನಾಗಿರೋಲ್ಲ ಎಂದೆನ್ನಿಸಿತು. ಆತನ ಕಿಸೆಯಲ್ಲಿಯೇ ಇದಾರಂತೆ– ಪೊಲೀಸರು ! ಸಬ್ ಇನ್ಸ್‌ಪೆಕ್ಟರ್‌ಗಳೂ! ಅವರನ್ನು ಚೆನ್ನಾಗಿ ಮೇಯಿಸುತ್ತಿದ್ದಾನಂತೆ. ತಹಸಿಲ್ದಾರರೂ, ಮ್ಯಾಜಿಸ್ಟ್ರೇಟರೂ ಸಹ ಆತ ಹೇಳಿದ ಹಾಗೆಯೇ ಕೇಳುತ್ತಾರಂತೆ ; ಊರಿನಲ್ಲಿ ಆತನ ಪ್ರಭೆ ಹೊತ್ತಿಕೊಂಡು ಧಗಧಗಿಸುತ್ತಿದೆ !

ಈ ಪರಿಸ್ಥಿತಿಗಳಲ್ಲಿ ನಾನು ತಾನೇ ಏನು ಮಾಡಬಲ್ಲೆ? ಹುಡುಗರನ್ನು ಕರೆದುಕೊಂಡು ಹೋಗೋಣವೆನ್ನಿಸಿತು. ಕಳುಹಿಸೋಲ್ಲವೆನ್ನುತ್ತಾರೇನೋ? ಅದೇಕೆ ಕಳಿಸರು? ಹುಡುಗರನ್ನು ಕಳಿಸಿದರೆ ತಮಗಿದ್ದ ಆ ಒಂದು ಅಡ್ಡಿಯೂ ತೊಲಗಿದಂತಾಗಿಬಿಡುತ್ತದಲ್ಲಾ ?

* * * *

ಈ ವಿಷಯದ ಬಗ್ಗೆ ಹೀಗೆ ಆಲೋಚಿಸುತ್ತ ಆ ಊರಿನಲ್ಲಿ ಮೂರು ದಿನಗಳವರೆಗಿದ್ದೆ. ನಾಲ್ಕನೆಯ ದಿನ ಒಂದು ಆಲೋಚನೆ ತಟ್ಟಿತು. ನಾನು ಅವರ ಮನೆಗೆ ಹೋದೆ. ಆತ ಜಗುಲಿಯ ಮೇಲೆ ಕುಳಿತಿದ್ದ. ನನ್ನನ್ನು ನೋಡಿ 'ಪುನಃ ಬಂದೆಯಲ್ಲಾ' ಎಂದ. 'ಬಂದೆ' ಎಂದೆ. 'ಬಂದು ಮೂರು ದಿನಗಳಾದುವಲ್ಲಾ, ಇಲ್ಲಿಗೆ ಈವೊತ್ತು ಬಂದೆಯಲ್ಲಾ?' ಎಂದ. 'ಏನೂ ಇಲ್ಲ ಮಾವಾ ! ಸ್ವಾಮಿ ವ್ಯವಹಾರಗಳನ್ನೆಲ್ಲಾ ಕೊಸಿಟ್ಟು ಹೋಗಿದಾನೆ ನೀವು ಅದನ್ನೆಲ್ಲಾ ಹಸನುಗೊಳಿಸಿ, ಸಂಸಾರವನ್ನು ನಿಲ್ಲಿಸಿದೀರಿ. ಹುಡುಗರಿಗೆ ಆಸ್ತಿ ಇಲ್ಲದಿದ್ರೂ ಏನಂತೆ ?! ಆಸ್ತಿ ಮಾತ್ರ ಪರರ ಪಾಲಾಗದಂತೆ ನೋಡಿಕೊಂಡಿದೀರಿ. ಮನೆಯ ದೀಪವನ್ನು ಬೆಳಗುತ್ತಿದೀರಿ. ನನಗಿಷ್ಟೇ ಸಾಕು. ಸ್ವಾಮಿಯವರ ಮನೆಯ ಮೇಲೆ ಮುಳ್ಳ ಕಂಟೆಗಳೂ, ಜೇಡರ ಬಲೆಗಳು ಹರಡದಂತೆ, ನೀವಾದ್ರೂ ಈ ತಾವಿನಲ್ಲಿ ನೆಲೆ ನಿಂತಿದೀರಲ್ಲಾ! ನನಗಿದು ಎಷ್ಟೋ ಸಂತೋಷದ ಸಂಗತಿ !' ಎಂದೆ. ನಾನು ಆಕ್ಷೇಪಿಸುತ್ತಿರುವೆನೋ ಎಂದು ನನ್ನತ್ತ ಶಂಕೆಯಿಂದ ಪರಿಕಿಸಿ ನೋಡಿದ. ನಾನು ನಗುಮುಖದಿಂದ ಇನ್ನೂ ಅಂಥದೇ ಹತ್ತಾರು ಮಾತುಗಳನ್ನಾಡಿದೆ–

'ಮಾವಾ ! ಊರಿನಲ್ಲಿ ನಿಮ್ಮ ಹೆಸರೇ ಹೆಸರು ! ಅಧಿಕಾರಿಗಳೆಲ್ಲಾ ನಿಮ್ಮ ಕೈಯಲ್ಲೇ ಇದಾರಂತೆ. ಊರಲ್ಲಿ ಎಲ್ರಿಗೂ ನೀವೂಂದ್ರೆ ತುಂಬ ಗೌರವಾದರಗಳಿವೆ. ಸ್ವಾಮಿಯವರ ಹೆಸರು ಉಳಿಯುವಂತೆ ಮಾಡಿದಿರಿ. ಈಗ ಅವರ ವಿಷಯವನ್ನು ಮಾತನಾಡುವವರೇ

ಇಲ್ಲ ! ಎಲ್ಲರೂ ನಿಮ್ಮನ್ನೇ ಕೊಂಡಾಡುತ್ತಿದ್ದಾರೆ. ನನಗೆ ತುಂಬ ಸಂತೋಷವಾಗಿದೆ. ನಾನು ಹಿಂದೊಮ್ಮೆ ಇಲ್ಲಿಗೆ ಬಂದಾಗ ನಿಮ್ಮ ಕೈಲಿ ಜಗಳಾಡಿದೆ. ನನ್ನನ್ನು ಕ್ಷಮಿಸಬೇಕು. ಕ್ಷಮೆ ಕೇಳಿಕೊಂಡು ಹೋಗೋಣವೆಂದೇ ಇಲ್ಲಿಗೆ ಬಂದೆ' ಎಂದು ನುಡಿದೆ. ಆತ ನಕ್ಕ. ನನ್ನ ಯೋಜನೆ ಫಲಿಸಿತೆಂದು ಮನಸ್ಸಿನಲ್ಲಿಯೇ ನಾನು ಹರ್ಷಿತನಾದೆ. ಸ್ವಲ್ಪ ಹೊತ್ತಾದ ಮೇಲೆ ಆತ ನುಡಿದನಲ್ಲಾ! 'ತಮ್ಮಂದಿರನ್ನೂ, ತಂಗಿಯನ್ನೂ ನೋಡಿದೆಯೋ?' ನಾನು ನೋಡಿದೆನೆಂದೆ. ಆತ 'ಸುಮ್ಮನೆ ಕೈಯಾಡಿಸಿಕೊಂಡು ಬಂದ್ಯೋ, ಅಥವಾ ಆ ಹುಡುಗರಿಗೇನಾದ್ರೂ ಬಟ್ಟೆ–ಬರೆ ತಂದಿದೀಯೋ' ಎಂದು ಕೇಳಿದ. ನಾನು 'ಏನೂ ತೆಗೆದುಕೊಂಡು ಬರಲಿಲ್ಲ ಮಾವಾ ! ಆದಾಗ್ಯೂ ನೀವೊಮ್ಮೆ ಮಕ್ಕಳನ್ನು ಕಳಿಸಿಕೊಟ್ಟರೆ, ಕರೆದುಕೊಂಡು ಹೋಗಿ ನಾಲ್ಕು ದಿನಗಳಮಟ್ಟಿಗೆ ಇಟ್ಟುಕೊಂಡು ಕಳಿಸಿಕೊಡೋಣಾಂತ ಮನಸ್ಸಿದೆ' ಎಂದೆ. ಆತ ನಕ್ಕ. ನನ್ನ ವಿನಯ, ನನ್ನ ರೀತಿ ನೀತಿಯನ್ನೆಲ್ಲಾ ಮನಗಂಡು ಚೆನ್ನಾಗಿ ನಂಬಿದ. ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ ಹೀಗೆಂದ–

'ಏನೂ ಇಲ್ಲ. ಅವರನ್ನು ಕಳಿಸಿಕೊಟ್ಟರೆ ಕೆಲಸಕಾರ್ಯಗಳಿಗೆ ತುಂಬ ತೊಂದರೆಯಾಗುತ್ತದಲ್ಲಾಂತ.' ನಾನು 'ಹೇಗೋ ನಾಲ್ಕು ದಿನಗಳ ಮಟ್ಟಿಗೆ ಸುಧಾರಿಸಿಕೊಳ್ಳಿ. ಆ ಮಾರಾಯ್ತಿ ನನ್ನನ್ನು ಸಾಕಿದರೆಂಬ ಮಮತೆಯೊಂದಿಲ್ಲದಿದ್ದರೆ, ನಾನು ಮಾತ್ರಕ್ಕೆ ಇವರನ್ನು ಕರೆದುಕೊಂಡು ಹೋಗಿ ಏನು ಮಾಡಲಿ? ಆದರೂ ಏಕೆ ಬಿಡಿ? ಅವರನ್ನೀಗ ನಾನು ಕರೆದುಕೊಂಡು ಹೋದರೂ ನಮ್ಮತ್ತೆಯ ಮನೆಯದನ್ನೇ ಇಡಬೇಕು ತಾನೆ? ನಾನು ಅಂದು ನಾಲ್ಕು ಬಟ್ಟೆಗಳನ್ನು ತಂದುಕೊಟ್ಟದ್ದಕ್ಕೇನೇ ನಮ್ಮತ್ತೆಯವರು ಕಂಡಾಬಟ್ಟೆ ರೇಗಾಡಿಬಿಟ್ಟರು!' ಎಂದೆ. ಆತ ಸಹಜ–ದುಷ್ಟನಾದುದರಿಂದ, ನನ್ನ ಈ ಕೊನೆಯ ಮಾತು ಆತನಿಗೆ ಸಂತೋಷವನ್ನುಂಟು ಮಾಡಿತು. ನಮ್ಮತ್ತೆಯ ಬಗ್ಗೆ ನಾನು ಈ ರೀತಿ ಕೆಟ್ಟದ್ದಾಗಿ ಆಡಿದ್ದರಿಂದ, ನಾನು ಮನಸ್ಸಿನಲ್ಲಿಯೇ ಆಕೆಯನ್ನು ಕ್ಷಮಿಸು ಎಂದು ಪ್ರಾರ್ಥಿಸಿದೆ. ಆತ ಒಂದು ಬಗೆಯಾಗಿ ಆಲೋಚಿಸಿಕೊಂಡನೆಂದು ಕಾಣುತ್ತದೆ– 'ಈ ಹುಡುಗರನ್ನು ನನ್ನೊಂದಿಗೆ ಕಳಿಸಿಬಿಟ್ಟರೆ ತಾನು ಪುನಃ ಕರೆದುಕೊಂಡೇ ಬರಬಾರದೆಂತಲೂ, ಈ ಹುಡುಗರ ನೆಪದಿಂದಾಗಿ ಅತ್ತೆಗೂ ನನಗೂ ತಗಾದೆ ಹುಟ್ಟುತ್ತದೆಂತಲೂ,– ತಗಾದೆ ಬರಬೇಕಾಗಲೀ ಒಮ್ಮೆ ಬಂದುಬಿಟ್ಟಿತೆಂದರೆ ನನ್ನನ್ನು ಆ ಮನೆಯಿಂದ ಅರ್ಧಚಂದ್ರ ಪ್ರಯೋಗ ಮಾಡಿಬಿಡುತ್ತಾರೆಂತಲೂ ನನ್ನನ್ನು ಅಲ್ಲಿಂದ 'ಎತ್ತಂಗಡಿ' ಮಾಡಿಬಿಡುತ್ತಾರೆಂತಲೂ' ಆತ ಮನದೊಳಗೇ ಹೀಗೆ ಯೋಜನೆಯೊಂದನ್ನು ರಚಿಸಿಕೊಂಡನೆಂದುಕೊಳ್ಳುವೆ. ಏಕೆಂದರೆ ನನ್ನನ್ನು ಆತ–ಮಕ್ಕಳನ್ನು ಕರೆದುಕೊಂಡು ಹೋಗೆಂದು ಒತ್ತಾಯಪಡಿಸತೊಡಗಿದ ! ನಾನು–

'ಮಾವಾ ! ಹುಡುಗರಿಗೆ ನಿಮಗಿಂತಲೂ ನಾನು ಹೆಚ್ಚೇ ? ನೀವಾದರೋ ಸೋದರಮಾವ. ನಾನೋ ದಿಕ್ಕಿಲ್ಲದ ಪರದೇಸಿ. ಮಕ್ಕಳನ್ನು ನೀವೇ ನೋಡಿಕೊಳ್ಳಿ, ನೀವು ನೋಡಿಕೊಂಡ ಹಾಗೆ ನಾನು ಮಕ್ಕಳನ್ನು ನೋಡಿಯೇನೇ?' ಎಂದೆ. ಅದಕ್ಕೆ ಆತ 'ಅದೆಲ್ಲಾ ಹಾಗಿರಲಿ ಕಣಯ್ಯ. ನೀನು ಬುದ್ಧಿವಂತ. ನಿನಗೆ ಸ್ವಾಮಿ ಎಂದರೆ ತುಂಬ ಅಭಿಮಾನವಿದೆ.

ಮಕ್ಕಳನ್ನು ಕರೆದೊಯ್ದು ನಾಲ್ಕು ದಿನ ಇಟ್ಟುಕೋ. ಆಮೇಲೆ ನಾನು ಬಂದು ಕರೆದುಕೊಂಡು ಬರ್ತೇನೆ' ಎಂದ. 'ಮಾವಾ ! ನೀವಿಷ್ಟು ಒಳ್ಳೆಯವರೂಂತ ನಾನಂದುಕೊಂಡಿರಲಿಲ್ಲ. ಹುಡುಗರನ್ನು ಕರೆದುಕೊಂಡು ಹೋದರೆ ನಮ್ಮತ್ತೆ ಏನೆನ್ನುತ್ತಾಳೋ ?' ಎಂದು ನುಡಿದೆ. 'ಏನೆನ್ನುತ್ತಾಳೆ ! ಸ್ವಾಮಿ ನಿನ್ನನ್ನು ಚಿಕ್ಕಂದಿನಲ್ಲಿ ಸಾಕಿ ಸಲಹಿದ್ದಾನೆ. ಅಂಥಾತನ ಮಕ್ಕಳನ್ನು ನೀನು ನಾಲ್ಕು ದಿನಗಳವಟ್ಟಿಗೆ ಮನೆಯಲ್ಲಿಟ್ಟುಕೊಳ್ಳಕೂಡದೆನ್ನುತ್ತಾಳೆಯೇ ? ಯಾರಾದರೂ ಕೇಳಿದರೆ ನೀನು ಮಾಡಿದ ಕೆಲಸ ಒಳ್ಳೆಯದೆಂದೇ ಅನ್ನುತ್ತಾರಾಗಲೀ ಮತ್ತೇನು ಅನ್ನೋಲ್ಲ. ನನ್ನ ಉದ್ದೇಶವೇನೆಂದರೆ ನೀನು ಹುಡುಗರನ್ನು ಕರೆದೊಯ್ದರೇನೇ ಚೆನ್ನಾಗಿರುತ್ತೇಂತ!' ಎಂದು ತನ್ನ ತೀರ್ಮಾನ ನುಡಿದ. ನಾನು ಭಯಪಡುತ್ತಿರುವವನ ಹಾಗೆಯೂ, ಅರ್ಧ ಅಂಗೀಕಾರದಿಂದೆಂಬಂತೆಯೂ, ಆತ ಎಷ್ಟೋ ಒಳ್ಳೆಯವನಂತೆಯೂ–ಅನೇಕ ವಿಧದಿಂದ ನಟಿಸಿ, ನಾಲ್ಕು ರೂಪಾಯಿಗಳ ಬಾಡಿಗೆಗೊಂದು ಗಾಡಿ ಮಾತನಾಡಿಕೊಂಡು, ಆ ಮರುದಿನ ಸಾಯಂಕಾಲವೇ ಹುಡುಗರನ್ನು ಕರೆದುಕೊಂಡು, ಹೊರಟುಬಂದೆ.

ಆತ ನಿಜವಾಗಿಯೂ ಪುನಃ ಮಕ್ಕಳನ್ನು ಹಿಂತಿರುಗಿ ಕರೆದುಕೊಂಡು ಬರೋಣವೆಂದುಕೊಂಡಿರುವನೆ? ನನ್ನ ಮೇಲೆಯೇ ಅವರ ಹೊರೆಯನ್ನೆಲ್ಲಾ ಹೊರಿಸಿಬಿಡೋಣವೆಂದು ಬಗೆದನೋ? ಏನೆಂದುಕೊಂಡನೋ ಏನೋ ನಾನರಿಯೆ. ನನ್ನ ಮನಸ್ಸಿನಲ್ಲಿಯೂ ಸಹ ಇನ್ನೂ ಏನೂ ನಿಶ್ಚಿತಗೊಂಡಿಲ್ಲ. ಮಕ್ಕಳನ್ನು ನನ್ನ ಬಳಿಯೇ ಇರಿಸಿಕೊಳ್ಳಲೇ ? ಒಂದು ವೇಳೆ ಆತನೇನಾದರೂ ಬಂದು ಕರೆದುಕೊಂಡು ಹೋಗದಿದ್ದರೆ, ನಾನೇ ಕರೆದೊಯ್ದು ಪುನಃ ಅವರ ಮನೆಯಲ್ಲಿಯೇ ಬಿಡಲೇ ? ಕರೆದೊಯ್ದು ಅಲ್ಲಿ ಬಿಟ್ಟರೆ ಇವರ ಗತಿ ಏನು? ಪುನಃ ಅಡುಗೆ ಮಾಡುವುದು, ಜೀತದಾಳಿದಂತೆ ಗೇಯುವುದು, ಕಂಡ ಕಂಡ ಚಾಕರಿ ಮಾಡುವುದು, ಇಷ್ಟೇ ತಾನೇ ! ಕೊನೆಗೆ ಎಂದಾದರೊಂದು ದಿನ ಆಸ್ತಿಯನ್ನೆಲ್ಲಾ ಮಕ್ಕಳಿಗೇ ಕೊಡುವನೇನೋ ಎನ್ನಿಸಿತು. ಕೊಡುವವನಾಗಿದ್ದರೆ ಇಂಥ ಕೆಲಸ ಅದೇಕೆ ಮಾಡಿದ?–ಎನ್ನಿಸಿತು. ನಾನು ಈ ವಿಷಯವನ್ನು ಕುರಿತು ಎಷ್ಟು ಯೋಚಿಸಿದರೂ ಬಗೆಹರಿಯಲಿಲ್ಲ. ಆತ ಪುನಃ ಮಕ್ಕಳನ್ನು ಕರೆದುಕೊಂಡು ಹೋಗಲು ಬಾರನೆಂದೇ ಅನ್ನಿಸಿತು. ಹಾಗಾದರೆ ಇವರನ್ನು ಏನು ಮಾಡಬೇಕು? ಹೀಗೆಲ್ಲಾ ಯೋಚಿಸುತ್ತಿರುವಂತೆಯೇ ನಾವು ಬಲುದೂರ ಬಂದುಬಿಟ್ಟಿದ್ದೆವು. ರಾತ್ರಿಯ ಹೊತ್ತಾದುದರಿಂದ ಹುಡುಗರೆಲ್ಲರೂ ನಿದ್ರೆಗೊಳಗಾಗಿದ್ದರು. ನಾನೂ ಗಾಡಿಯವನೂ ಇಬ್ಬರೇ ಎಚ್ಚರದಿಂದಿದ್ದೆವು. ಗಾಡಿಯವನು 'ಬುದ್ಧೀ, ಈ ದಾರೀಲಿ ಕಳ್ಳರು ಎದುರಿಸ್ತಾರೆ' ಎಂದ. 'ಛೆ ! ಛೆ ! ಎದುರಿಸೋಲ್ಲ ಬಿಡು' ಎಂದೆ. ಅವನು ಗಾಡಿ ಹೊಡೆಯುತ್ತಿದ್ದ, ನಾನು ಮತ್ತೆ ಆಲೋಚಿಸತೊಡಗಿದೆ–ಏನಾದರಾಗಲಿ ಮಕ್ಕಳನ್ನು ಪುನಃ ಕಳಿಸಕೂಡದು. ಹಾಗಾದರೆ ಏನು ಮಾಡಬೇಕು? ಏನಾದರೂ ಸರಿಯೇ, ಮಕ್ಕಳನ್ನು ಮಾತ್ರ ಕಳಿಸಲೇಕೂಡದು. ಅನೇಕ ಮಾರ್ಗಗಳನ್ನು ಯೋಚಿಸಿದೆ. ಯೋಚಿಸಿ, ಯೋಚಿಸಿ, ಕೊನೆಗೊಂದು ನಿರ್ಧಾರಕ್ಕೆ ಬಂದೆ–ನನ್ನ ಮಾವನ ಮಗನನ್ನೂ, ನನ್ನ ಸಾಕುತಂದೆಯ ಇಬ್ಬರು ಗಂಡುಮಕ್ಕಳನ್ನೂ ಗುಂಟೂರಿಗೆ ಓದಲು ಕಳಿಸಿಕೊಡಬೇಕು ;

ನಾನು ಬತ್ತ ಕುಸುವೆ ಮುಂತಾದ ಧಾನ್ಯಗಳನ್ನು ಈ ಮುಂಚಿನಂತೆಯೇ ಪ್ರತಿ ವರ್ಷವೂ ಮಾರಿ, ಹಣ ಸಂಪಾದಿಸಿ, ಹುಡುಗರನ್ನು ಓದಿಸುವುದು ; ಅವರು ಯಾವುದಾದರೂ ಪರೀಕ್ಷೆ ಬರೆದು ಪಾಸಾಗಿ ಮುಂದೆ ಸಂಪಾದಿಸುವವರಾಗುತ್ತಾರೆ. ನಾನೆಷ್ಟು ಸಲ ಯೋಚಿಸಿದರೂ ಈ ಯೋಚನೆಯೇ ಸರಿ ಎನ್ನಿಸಿತು. ಹುಡುಗರನ್ನು ಕೂಡಲೇ ಸ್ಕೂಲಿಗೆ ಸೇರಿಸಬೇಕು. ಸ್ಕೂಲಿಗೆ ಸೇರಿಸಿದರೆ ನಾನು ಮದುವೆಯಾಗುವುದು ಈಗ ಸಾಧ್ಯವಿಲ್ಲ. ಇನ್ನೊಂದು ವರ್ಷ ತಡೆದರಾಯಿತು. ನಷ್ಟವೇನಿದೆ?–ಎನ್ನಿಸಿತು. ಹೆಣ್ಣು ಹುಡುಗಿಯನ್ನೇನು ಮಾಡಬೇಕು? ಈ ಹುಡುಗಿಗೆ ವರನನ್ನು ಎಲ್ಲಿಂದ ತರಬೇಕು ? ಈ ಹುಡುಗಿಯನ್ನು ಯಾರು ಮಾಡಿಕೊಳ್ಳುತ್ತಾರೆ? ಯಾವನಾದರೂ ಹಣಕ್ಕೆ ಆಸೆಪಟ್ಟು ಮಾಡಿಕೊಳ್ಳುತ್ತೇನೆನ್ನಬಹುದು ; ಆದರೆ ಅವನಿಗೆ ಕೊಡಲು ಹಣವೆಲ್ಲಿದೆ ನನ್ನಲ್ಲಿ ? ಇವರ ಓದಿಗೂ, ಈ ಹುಡುಗಿಯ ಮದುವೆಗೂ ನಾನೆಲ್ಲಿಂದ ಹಣ ತರಲಿ? ನನ್ನ ಕಲ್ಪನೆಗಳೆಲ್ಲಾ ಹುಚ್ಚು ಕಲ್ಪನೆಗಳೆಂದೇ ತೋಚಿದುವು. ಇವು ನನ್ನ ಶಕ್ತಿಗೆ ಮೀರಿದ ಯೋಜನೆಗಳು ಎಂದೆನ್ನಿಸಿತು.

ನಾನು ಹೀಗೆ ಆಲೋಚಿಸುತ್ತ ಅರೆ ನಿದ್ರೆ ಅರೆ ಎಚ್ಚರದಲ್ಲಿದ್ದೆ. ದೂರದಲ್ಲಿ 'ನಿಲ್ಲಿಸೋ ಗಾಡಿ !' ಎಂಬ ಕೂಗು ಕೇಳಿಬಂದಿತು. ಕೂಡಲೇ ನನಗೆ ಎಚ್ಚರವಾಯಿತು. ಗಾಡಿಯವನು ಗಡಗಡ ನಡುಗುತ್ತಿದ್ದಾನೆ. ದೂರದಲ್ಲಿ ನಾಲ್ಕೈದು ಜನರ ಗುಂಪು ಕಂಡುಬಂದಿತು. ನಾನು ಗಾಡಿಯಿಂದಿಳಿದು, ಕೈಗೆ ದೊಣ್ಣೆಯನ್ನೆತ್ತಿಕೊಂಡು 'ಯಾರೋ ಅದು?' ಎಂದು ಗದ್ದರಿಸಿ ಕೂಗಿದೆ. ಅವರಲ್ಲೊಬ್ಬ ದೂರದಿಂದಲೇ 'ಬುದ್ದೀ ನೀನೇ?' ಎಂದ. ಅವನ ಧ್ವನಿಯನ್ನು ಎಲ್ಲೋ ಕೇಳಿದಂತಿದೆ. ಆದರೆ ಹೋಲಿಸಿಕೊಳ್ಳಲಾಗದೆ. 'ಯಾರೋ ನೀನು?' ಎಂದು ಪ್ರಶ್ನಿಸಿದೆ. 'ಬುದ್ದೀ, ನನ್ನನ್ನು ಗುರ್ತು ಹಿಡೀಲಿಲ್ವಾ ? ನಾನು, ನಾನು....' ಎನ್ನುತ್ತಾ ಅವನು ಮುಂದೆ ಬಂದ. ಅವನನ್ನು ನೋಡುತ್ತಲೇ ನನಗೆ ದಿಗಿಲಾಯಿತು. 'ಏನೋ, ನನ್ನನ್ನಿನ್ನೂ ನೀನು ಬೆನ್ನಟುವುದು ಬಿಟ್ಟಂತಿಲ್ಲ!' ಎಂದೆ. ಅವನು ತತ್‌ಕ್ಷಣವೇ ನನ್ನ ಕಾಲುಗಳ ಮೇಲೆ ಬಿದ್ದು 'ಬುದ್ದೀ ಬುದ್ದೀ, ನೀನೂ ಅಂತ ಅಂದ್ಕೊಳ್ಳಿಲ್ಲ. ನೀನಂತ ಗೊತ್ತಿದ್ರೆ ನಿನ್ ಗಾಡೀಗೆ ಅಡ್ಡ ಬಂದೇನ್ಯೇ ? ಇನ್ನಾರೋ ಅಂದ್ಕೊಂಡಿದ್ದೆ ನನ್ನ ಜನ್ಮದಲ್ಲಿ ನಿನ್ನನ್ನು ಮರೆತೇನ್ಯೇ ? ದೂರಕ್ಕೇನೇ ನಿನ್ನ ದನಿ ಗುರ್ತು ಹಿಡಿದ್ನೆಲ್ಲಾ ಬುದ್ದಿ. ಬೇರೆ ಯಾರದೋ ಗಾಡಿ ಅಂತಂದ್ಕೊಂಡೆ. ಈ ದಾರೀಲಿ ಕಳ್ಳ ಸೂಳೇ ಮಕ್ಳು ಹಾದಿ ಹೊಡೀತಾರೇ ಬುದ್ದೀ. ನೀನು ಸಮರಾತ್ರೀಲಿ ಪಯಣ ಹೊಂಟಿದೀಯಲ್ಲಾ ? ಆದ್ರೂ ನಿನಗೇನು ಭಯ ? ಬುದ್ದೀ ಎಷ್ಟೋ ಸಲ ನಿನ್ ತಾವ ಬರೋಣ ಅಂತ ಅಂದ್ಕೊಂಡೆ. ಆದ್ರೆ ನೀನು ನನ್ನನ್ನು ನಂಬಲಿಕ್ಕಿಲ್ಲ. ಅಂತ ನಾನು ಬರ್ಲಿಲ್ಲ. ಬುದ್ದೀ ನಾಳೆ ಬೆಳಿಗ್ಗೆ ಆ ತಾಯಿಯ ಊರ್ನಲ್ಲಿಳಕೊಳ್ತೀರಾ ? ನಾನೂ ಸಹ ನಿನ್ನ ಹಿಂದೆಯೇ ಬರ್ತೀನಿ' ಎಂದ. 'ನೀನೇಕೆ ನನ್ನ ಹಿಂದೆ? ಹೊರಟುಹೋಗು' ಎಂದೆ. ಅದಕ್ಕವನು 'ಬುದ್ದೀ ನನ್ ಮೇಲೆ ನಿನಗಿನ್ನೂ ಅನುಮಾನ ಹೋಗಿಲ್ಲ. ನಾನು ಹಿಂದೆ ನಿನ್ ಬಗ್ಗೆ ಭೋ ಅಪರಾಧ ಮಾಡಿದ್ದು ನಿಜಾ. ನಾನಿನ್ನು ನಿನ್ನ ದಾಸ. ನೀನು ಏನು ಹೇಳಿದ್ರೆ ಅದನ್ನ ಮಾಡ್ತೀನಿ. ನೀನು ನನ್ನನ್ನೀಗ ಎಲ್ಲಿಗೆ ಬಾ ಅಂದ್ರೂ, ಬರ್ತೀನಿ' ಎಂದ. 'ಲೋ ನೀನು ಕಳ್ಳತನ ಮಾಡ್ತೀಯೆ;

ದಾರಿ ಹೊಡೀತೀಯೆ. ನಿನ್ನ ಕೈಲಿ ನಾನು ಕಳ್ಳತನಗಳನ್ನು ಮಾಡಿಸಬೇಕು ಅಂತೀಯಾ ? ದಾರಿಗಳನ್ನು ಹೊಡಿಸಬೇಕೂಂತೀಯಾ ?' ಎಂದೆ. ಅವನು ತಟಕ್ಕನೆ ನನ್ನ ಕಾಲುಗಳ ಮೇಲೆ ಬಿದ್ದು 'ಅಯ್ಯೋ, ಬುದ್ಧೀ ಬುದ್ಧೀ ! ದೊರೆ, ನನ್ ದೊರೇ ! ನಾನಂಥಾ ಮಾತಂದೇನ್ಯೇ ನಿನ್ನ ಕಾಲಿಗೆ ಬೀಳ್ತೇನೆ. ನಿಮ್ಮನೆ ಕಾವಲು ಕಾಯ್ಕೊಂಡು ಬಿದ್ದಿರ್ತೇನೆ. ನೀನು ಬಿಟ್ಟುಬಿಡು ಅಂದ್ರೆ ಈ ಕಳ್ಳತನಗಳನ್ನೆಲ್ಲಾ ಬಿಟ್ಬಿಡ್ತೇನೆ. ನೀ ಹೇಳಿದಂತೆ ಕೇಳಿಕೊಂಡಿರ್ತೇನೆ' ಎಂದು ಹೇಳಿ, ದೂರದಲ್ಲಿರುವ ಆ ಮೂರು ಜನರ ಬಳಿಗೆ ಹೋಗಿ, ಅವರಿಗೆ ಹೊರಟುಹೋಗಿರೆಂದು ತಿಳಿಸಿದ. ಅವರು ಹೊರಟುಹೋದರು. ಅದರೊಳಗಾಗಿಯೇ ನಾನು ಗಾಡಿಯವನಿಗೆ ಗಾಡಿಯನ್ನು ಎಲ್ಲೂ ನಿಲ್ಲಿಸದಂತೆ ಹೊಡಿ ಎಂದು ಸೂಚನೆಯಿತ್ತೆ ಅವನು ಅದೇ ರೀತಿ ಮಾಡಿದ. ಹಾವಾಡಿಗ ನನ್ನ ಹಿಂದೆಯೇ ಬರತೊಡಗಿದ. ನಾನು ಅವನಿಗೆ 'ಲೋ ಬಡ್ಡೀಮಗನೇ! ನೀನು ಏನೋ ಮಸಲತ್ತು ಮಾಡಿಕೊಂಡು ನನ್ನ ಹಿಂದೆಯೇ ಬರ್ತಾ ಇದೀಯೆ? ನೀವು ನಾಲ್ಕು ಜನರು ನನ್ನನ್ನೇನೂ ಮಾಡಲಾರಿರೆಂದೇ, ಇನ್ನೂ ಸ್ವಲ್ಪ ಜನರನ್ನು ಕರಕೊಂಡ್ಬನ್ನಿ ಅಂತ ಅವರನ್ನು ಕಳಿಸಿಕೊಟ್ಟಿದೀಯೇನೋ ಭಡವಾ ? ನಿನ್ನನ್ನು ಅಂದೇ ಕೊಂದುಹಾಕದೆ, ಬಿಟ್ಟುಬಿಟ್ಟಿದ್ದರಿಂದಲ್ವೇ ನೀನು ಹೀಗೆ ಹೆಚ್ಕೊಂಡಿರೋದು ! ಈ ಸಾರಿ ನಿನ್ನನ್ನು ಆ ಪಟೇಲರಿಗೇನೇ ಒಪ್ಪಿಸ್ತೇನೆ, ನೋಡ್ತಾ ಇರು' ಎಂದೆ.

'ಬುದ್ಧೀ, ನಿಜವಾಗಿಯೂ ನಾನು ಯಾವ ಮಸಲತ್ತೂ ಮಾಡಿಲ್ಲ. ನನಗೆ ಮುಂಚಿನ ಆ ಗುಂಪೂ ಇಲ್ಲ ; ಮೊದಲಿನಂತೆ ಕಳ್ಳತನಗಳನ್ನೂ ಮಾಡುತ್ತಿಲ್ಲ. ನಾನೀಗ ಇಂಥಾ ಕೆಲಸ ಮಾಡಿ ಮೂರು ವರ್ಷಗಳೇ ಆದುವು. ಮೂರು ವರ್ಷಕ್ಕೆ ಈ ದಿನವೇ ಹೊಟ್ಟೆಗಿಲ್ಲದೆ ಹೀಗೆ ಬರಬೇಕಾಯ್ತು. ನೀನು ನನಗೊಂದಿಷ್ಟು ಅನ್ನ ಹಾಕು. ನಿನ್ನ ಬಳಿಯೇ ಬಿದ್ದಿರ್ತೇನೆ. ನೀನು ನನ್ನನ್ನು ನಂಬು. ನಂಬದೇಹೋದ್ರೂ ಕೆಲವು ದಿನಗಳಿಗೆ ನಿನಗೇ ಎಲ್ಲಾ ತಿಳಿದುಬರುತ್ತೆ ದೊರೇ ! ನಿನಗಷ್ಟು ಅನುಮಾನವಿದ್ದಲ್ಲಿ ನಾನು ಹೊರಟುಹೋಗ್ತೀನಿ. ನಾಳೆ ನಿನ್ನ ಚಿಕ್ಕಮ್ಮನ ಮನೆ ತಾವ ಕಾಣ್ತೀನಿ' ಎಂದು ಹೊರಟುಹೋದ. ಹೊರಟುಹೋದವನು ಒಂದು ಗಳಿಗೆಗೆಲ್ಲಾ ಹಿಂತಿರುಗಿ ಬಂದ, 'ಬುದ್ಧೀ, ಹೊರಟೇ ಹೋಗ್ಬಿಡೋಣ ಅಂತ ಅಂದ್ಕೊಂಡೆ. ಆದರೆ ಉಳಿದ ಆ ಮೂರು ಜನ ಬಡ್ಡೀ ಮಕ್ಳು, ನಾನು ಹೋದ ಮೇಲೆ, ನಿನ್ನ ಗಾಡಿಯನ್ನು ಮುತ್ತೋಣ ಅಂತ ಮಾಡಿಕೊಂಡವ್ರೆ ಆದ್ರೂ ಅವರು ನಿನಗೆ ಈಡಲ್ಲ ಅಂತಿಟ್ಕೊ. ಏನೇ ಆಗ್ಲೀ ನಾನು ನಿನ್ನ ಬಳಿಯಿದ್ರೆ ಒಳ್ಳೇದಂತ ಬಂದುಬುಟ್ಟೆ. ಬೆಳಕು ಹರಿಯೋತನ್ಕಾ ಗಾಡಿಯೊಂದಿಗೇನೇ ಬಂದು ಆ ಮೇಲೆ ಹೊರಟುಹೋಗ್ತೀನಿ' ಎಂದ. ಅವನ ಮೇಲೆ ನನಗೆ ಎಲ್ಲಿಲ್ಲದ ಅನುಮಾನ ತಲೆ ಎತ್ತಿತು. 'ಕಳ್ಳ ಸೂಳೇಮಗನೇ ! ನಿನ್ನ ಮಸಲತ್ತೆಲ್ಲಾ ನನಗೆ ಗೊತ್ತಿಲ್ಲಾಂತ ಅಂದ್ಕೊಂಡಿದೀಯಾ ?' ಎಂದು ಕೈಯಲ್ಲಿನ ಬಲವಾದ ದೊಣ್ಣೆಯಿಂದ, ಗುರಿ ನೋಡಿ ಅವನ ಮೊಣಕಾಲಿನ ಚಿಪ್ಪಿಗೆ ಬೀಸಿ ಕೊಟ್ಟೆ. ಅವನು 'ಅಯ್ಯಯ್ಯೋ, ಅಯ್ಯಯ್ಯೋ !' ಎಂದು ಕುಸಿದು ಕುಳಿತು, 'ಬುದ್ಧೀ, ನನ್ ಮೇಲೆ ನಿನಗಿನ್ನೂ ಅನುಮಾನ ಹೋಗಿಲ್ಲ. ನಾನು ಋಜು ಪಡಿಸಿಕೊಳ್ತೀನಿ ನೋಡುವಿಯಂತೆ. ನಾನು ನಿನ್ನ ಗಾಡಿಯನ್ನು

ಕಾಯ್ದು ಕೊಂಡೇ ಬರ್ತೀನಿ. ಇಲ್ದೇ ಇದ್ರೆ ಆ ಸೂಳೇಮಕ್ಳು ನಿನ್ನ ದಾರಿಗೆ ಅಡ್ಡ ಬರ್ತಾರೆ' ಎಂದು ನುಡಿದು, ಗಾಡಿಯ ಹಿಂದೆಯೇ ಕುಂಟುತ್ತ ಕುಂಟುತ್ತ ನಡೆದು ಬರತೊಡಗಿದ. ನನಗೆ ಅನುಮಾನವಿನ್ನೂ ತೊಲಗಿಹೋಗಲಿಲ್ಲ.

ಬೆಳಕು ಹರಿಯಲಾರಂಭಿಸಿತು. ಅವನು ನನ್ನ ಹತ್ತಿರಕ್ಕೆ ಬಂದು, 'ಬುದ್ದೀ, ನನ್ನನ್ನು ನೀನು ಏನೋ ಅಂದ್ಕೊಂಡಿದೀಯೆ, ನೋಡಿದ್ಯೋ ! ನಾನು ಹೊರಡ್ತೀನಿ. ನಾಲ್ಕೈದು ದಿನಗಳಾದ ಮೇಲೆ ಬಂದು ನಿನ್ನನ್ನು ಭೇಟಿಯಾಗ್ತೀನಿ' ಎಂದು ಹೊರಟುಹೋದ. ಎರಡನೇ ಜಾವಕ್ಕೆಲ್ಲಾ ನನ್ನ ಆ ಚಿಕ್ಕಮ್ಮನ ಊರು ಸೇರಿಕೊಂಡೆವು. ಅಲ್ಲಿ ಮಕ್ಕಳಿಗೆ ಎಣ್ಣೆ ಮಜ್ಜನ ಮಾಡಿಸಿ, ಹೊಸ ಬಟ್ಟೆಗಳನ್ನು ತರಿಸಿ ಉಡಲಿತ್ತೆ ಗಂಡು ಹುಡುಗರಿಬ್ಬರೂ ಊಟಮಾಡಿ 'ಅಣ್ಣಯ್ಯಾ, ನಾವು ಹೀಗೆ ಹೊಟ್ಟೆ ತುಂಬ ಸುಖವಾಗಿ ಉಂಡು ಎಷ್ಟೋ ದಿನಗಳಾದುವು' ಎಂದರು. ನನ್ನ ಚಿಕ್ಕಮ್ಮ ನಮ್ಮನ್ನೆಲ್ಲಾ ಎರಡು ಮೂರು ದಿನಗಳತನಕ ತನ್ನಲ್ಲಿಯೇ ಉಳಿಸಿಕೊಂಡಳು. ಬಾಡಿಗೆಯ ಗಾಡಿಯನ್ನು ಕಳಿಸಿಬಿಟ್ಟೆ ಮೂರು ದಿನಗಳಲ್ಲಿಯೇ ಮಕ್ಕಳು ಕೊಂಚ ಕೈಮೈ ತುಂಬಿಕೊಂಡಂತೆ ಕಾಣಿಸಿದರು. ನನ್ನ ತಂಗಿ ವಯಸ್ಸಿನಲ್ಲಿ ನನಗಿಂತಲೂ ಹಿರಿಯವಳೆಂದು ತಿಳಿಸಿರುವೆನಲ್ಲಾ. ಅವಳ ಮೈಮೇಲೆ ಕವಡೆ ಬೆಲೆಯಷ್ಟಾದರೂ ಆಭರಣಗಳಿಲ್ಲ. ಕಾಲುಗಳಿಗೆ ಹಿತ್ತಾಳೆಯ ಕಡಗಗಳು, ಕೈಗಳಿಗೆ ಎರಡು ಗಾಜಿನ ಬಳೆಗಳಷ್ಟೆ

ನನ್ನ ಚಿಕ್ಕಮ್ಮ ನಾವಿದ್ದ ಆ ಮೂರು ದಿನಗಳು, ಅವಳಿಗೆ ತಲೆ ಬಾಚಿ, ಮೈಗೆ ನೀರೆರೆದು, ಕಣ್ಣಿಗೆ ಕಾಡಿಗೆ ಹಚ್ಚಿ, ಮುಖಕ್ಕೆ ಕುಂಕುಮವಿಟ್ಟು ಅಲಂಕರಿಸಿದಳು. ಆ ಮೂರು ದಿನಗಳಲ್ಲಿ ಅವರು ತಮ್ಮ ಕಷ್ಟ ಕಾರ್ಪಣ್ಯಗಳನ್ನೆಲ್ಲಾ ಮಾತುಮಾತಿಗೂ ಹೇಳಿಕೊಂಡರು.

ನನ್ನ ತಂಗಿಗೆ ಅವರ ಸೋದರಮಾವ ಒಂದು ದಿನ ಬಳೆ ಹಾಕಿಸಿದ್ದನಂತೆ. ಆ ದಿನವೇ ಮುಸುರೆ ಪಾತ್ರೆಗಳನ್ನು ತಿಕ್ಕುವಾಗ ಅವು ಒಡೆದುಹೋಗಿಬಿಟ್ಟುವಂತೆ. ಅವರತ್ತೆ ಬರಲಿನ ಹಿಡಿಯಿಂದ ಗಂಟೆ ಹೊತ್ತು ತಲೆಯ ಮೇಲೆಯೇ ಹೊಡೆದು, ಬಾಯಿಗೆ ಬಂದಂತೆ ಬಯ್ದು ಶಪಿಸಿದಳಂತೆ. ಆರು ತಿಂಗಳವರೆಗೆ ಬಳೆಯೇ ಇಲ್ಲದೆ ಬೋಳುಗೈಯವಳಾಗಿಯೇ ಇರಬೇಕಾಯಿತಂತೆ. ಒಮ್ಮೆ ಎರಡನೆಯವನು ಸೆಗಣಿ ತೆಗೆಯುತ್ತ, ದೊಡ್ಡ ಬುಟ್ಟಿ ತುಂಬ ಒಮ್ಮೆಗೇ ಹೊರಲಾರದೆ, ಮೊದಲು ಅರ್ಧದಷ್ಟನ್ನೇ ಎತ್ತಿ ಹಾಕಿದನಂತೆ. ಅವರತ್ತೆ 'ತಾಟಿನ ತುಂಬ ಗಿಡಿಯುತ್ತೀಯೆ, ಒಂದು ಬುಟ್ಟಿ ಹೊರಲಾರೆಯಾ ?" ಎಂದು ಕೈಯಲ್ಲಿದ್ದ ಸೀಮೆ ಎಣ್ಣೆಯ ಬುಡ್ಡಿಯಿಂದಲೇ ನೆತ್ತಿಗೆ ಕುಕ್ಕಿದಳಂತೆ. ಅವನ ತಲೆಯೆಲ್ಲಾ, ಮೈಯೆಲ್ಲಾ ಸೀಮೆ ಎಣ್ಣೆಯೇ ಆಗಿಬಿಟ್ಟಿತಂತೆ. ಆ ಸೀಮೆ ಎಣ್ಣೆಯನ್ನು ತೊಳೆದು ನೀರು ಹಾಕಿದವರಿಲ್ಲ! ಆಕೆ ಯಾವಾಗಲೂ ಮನೆಯಲ್ಲಿ ಕದ್ದು ಕದ್ದು ತಿನ್ನುತ್ತಿರುತ್ತಾಳಂತೆ. ಅಕ್ಕಿ ತುಪ್ಪ ಮುಂತಾದವುಗಳನ್ನು ಮುಚ್ಚು ಮರೆಯಲ್ಲಿ ಮಾರಿಕೊಳ್ಳುತ್ತಾಳಂತೆ. ಆ ಹಣವನ್ನೆಲ್ಲಾ ತವರಿಗೆ ಕಳಿಸಿಕೊಡುತ್ತಾಳಂತೆ. ಆ ಊರಿನಲ್ಲಿ ಒಬ್ಬ ಕುಂಬಾರಗಿತ್ತಿಯೂ, ಒಬ್ಬ ಗೊಲ್ಲರವಳೂ ಇದಾರಂತೆ. ಆ ಕಳ್ಳತನದ ಮಾರಾಟವೆಲ್ಲಾ ಅವರಿಗಂತೆ. ಆಕೆಯ ಗಂಡ ಅನ್ಯಾಯದಿಂದ

ನನ್ನ ಸಾಕು ತಂದೆಯ ಆಸ್ತಿಯನ್ನು ಸ್ವಾಹಾ ಮಾಡಿದ್ದರೆ, ಅವನ ಹೆಂಡತಿ ಅದನ್ನೆಲ್ಲಾ ತವರೂರಿಗೆ ಕಳ್ಳತನದಿಂದ ಸಾಗಹಾಕುತ್ತಿದ್ದಾಳಂತೆ. ಒಂದು ಪಲ್ಲ ಬತ್ತ ಕುಟ್ಟಿಸಿದ ನಾಲ್ಕು ದಿನಕ್ಕೆಲ್ಲಾ ಮತ್ತೊಂದು ಪಲ್ಲ ಕುಟ್ಟಿಸುತ್ತಾಳಂತೆ! 'ಮೊನ್ನೆತಾನೇ ಕುಟ್ಟಿಸಿದ್ದೆಯಲ್ಲಾ ?' ಎಂದು ಗಂಡನೇನಾದರೂ ಕೇಳಿದರೆ 'ತಿನ್ನೋಕೆ ಬೇಕೋ ಬೇಡ್ವೋ ? ಸೋದರಳಿಯಂದರೂ, ಸೋದರ ಸೊಸೆ ಎಲ್ಲಾ ಹೆಗ್ಗಣಗಳ ಹಾಗೆ ತಿನ್ತಾರೆ. ತೀರಿಹೋಗ್ದೇ ಇರ್ತ್ತ್ಯೆ?' ಎನ್ನುತ್ತಾಳಂತೆ. ಆತನಿಗೂ ಸಹ ಕೋಪ ಬಂದುಬಿಟ್ಟರೆ, ಆಕೆಯನ್ನು ಕೈಗೆ ಸಿಕ್ಕ ಕೋಲಿನಿಂದ ಚೆನ್ನಾಗಿ ಥಳಿಸುತ್ತಾನಂತೆ. ನನ್ನ ಹಿರಿಯ ತಮ್ಮ ಈ ಎಲ್ಲ ವಿಷಯಗಳನ್ನು ಕಥೆ ಮಾಡಿ ಹೇಳುತ್ತ ಸ್ವಲ್ಪ ಹೊತ್ತು ಅಳುತ್ತ, ಸ್ವಲ್ಪ ಹೊತ್ತು ನಗುತ್ತ–ಕೇಳುವ ನಮಗೆಲ್ಲಾ ಕರುಣೆಯನ್ನೂ ನಗೆಯನ್ನೂ ಹುಟ್ಟಿಸಿದ.

ನಾಲ್ಕನೆಯ ದಿನ ನಾವು ನನ್ನ ಚಿಕ್ಕಮ್ಮನವರ ಗಾಡಿಯನ್ನು ಕಟ್ಟಿಸಿಕೊಂಡು ಪಯಣಮಾಡಿದೆವು. ಮರುದಿನ ಬೆಳಕು ಹರಿಯುವ ಹೊತ್ತಿಗೆಲ್ಲಾ ನಮ್ಮ ಊರು ಸೇರಿಕೊಂಡೆವು. ನನ್ನ ಮಾವನ ಮಗಳೂ ಮಗನೂ ಹಿಂದೊಮ್ಮೆ ಈ ಹುಡುಗರನ್ನು ನೋಡಿದ್ದರಾದ್ದರಿಂದ ಅವರೂ ಇವರೂ ಕಲೆತು ಕೂಡಿ ಇರತೊಡಗಿದರು.

ನಾನು ಈ ಒಂದು ವಾರದವರೆಗೆ ಊರಲ್ಲಿಲ್ಲದೇ ಹೋದುದರಿಂದ ಹತ್ತು ದಿನಗಳವರೆಗೆ ಹೊಲದ ಕೆಲಸಗಳನ್ನು ಒಂದೇಸಮ ನೋಡಿಕೊಳ್ಳಬೇಕಾಯಿತು. ಈವೊಂದು ಹತ್ತು ದಿನಗಳವರೆಗೆ ನಾನು ಮನೆಯಲ್ಲಿ ಇಲ್ಲವೇ ಇಲ್ಲದಂತಾದೆ. ಒಮ್ಮೊಮ್ಮೆ ಊಟಕ್ಕೂ ಸಹ ಮನೆಗೆ ಹೋಗಲು ಪುರುಸೊತ್ತಾಗಲಿಲ್ಲ. ನನ್ನ ಮಾವನ ಮಗನೇ ನನಗಾಗಿ, ಹೊಲಕ್ಕೇ ಊಟ ತಂದುಕೊಡುತ್ತಿದ್ದ. ಹದಿನೈದು ದಿನಗಳಾದ ಮೇಲೆ, ನಾನೊಂದು ದಿನ ಮನೆಗೆ ಹೋದರೆ, ನನ್ನ ತಂಗಿ ಜಗುಲಿಯ ಮೇಲೆ ಕುಳಿತು ಯಾವುದೋ ಪುಸ್ತಕ ಓದುತ್ತಿರುವುದು ಕಂಡುಬಂದಿತು. ನನ್ನನ್ನು ನೋಡುತ್ತಲೇ, ನಾಚಿ, ಪುಸ್ತಕವನ್ನು ಬೆನ್ನಹಿಂದೆ ಮರೆಮಾಚಿಕೊಂಡು ಎದ್ದು ನಿಂತುಕೊಂಡಳು. 'ಏನು ಓದುತ್ತಿದ್ದೆಯಮ್ಮಾ ?' ಎಂದು ಕೇಳಿದೆ. 'ಕೃಷ್ಣ ಶತಕ' ಎಂದಳು. 'ನಿನಗೆ ಓದಲು ಬರುತ್ತಾ?!' ಎಂದು ಕೇಳಿದೆ. 'ಈ ಹದಿನೈದು ದಿನಗಳಲ್ಲಿಯೇ ಪುಸ್ತಕ ಓದಲು ಕಲಿತ ಮೇಲೆ ಇನ್ನು ಹುಚ್ಚೆಂಥದು?' ಎಂದುಕೊಂಡೆ.

ಆ ದಿನದಿಂದ ಮೊದಲುಗೊಂಡು, ನಿತ್ಯ ಬೆಳಗ್ಗೆ ಕೊಂಚ ರಾತ್ರಿ ಊಟವಾದ ಮೇಲೆ ಬಲು ಹೊತ್ತಿನತನಕ ನನ್ನ ತಮ್ಮಂದಿರಿಗೂ, ತಂಗಿಗೂ ಓದು ಹೇಳಿಕೊಡುವುದು, ಉಳಿದ ಹೊತ್ತಿನಲ್ಲಿ ನನ್ನ ಮಾವನ ಮಗಳೂ ಮಗನೂ – ಅವರಿಂದ ಓದಿಸುವುದು, ಲೆಕ್ಕಗಳನ್ನು ಮಾಡಿಸುವುದು–ಹೀಗೆ ಮಾಡುತ್ತಾ ಬಂದೆ.

ನನ್ನ ತಂಗಿಯ ಕಾಲುಗಳಿಗೆ ಕಾಲಂದುಗೆಗಳನ್ನು ಮಾಡಿಸಿದೆ. ಹೆಣ್ಣುಮಕ್ಕಳಿಬ್ಬರಿಗೂ ಕೈಗಳಿಗೆ ಚಿನ್ನದ ಬಳೆಗಳನ್ನು ಮಾಡಿಸಿದೆ. ಕೊರಳಿಗೆ ಸರಗಳನ್ನು ಮಾಡಿಸಿದೆ. ಇಬ್ಬರಿಗೂ ಒಂದೊಂದು ಬೆಳ್ಳಿಯ ಡಾಬುಮಾಡಿಸಿದೆ. ನನ್ನ ಮಾವನ ಮಗಳು ಎಂಥ ಸೀರೆಯುಡುವಳೋ ಅಂಥದೇ ಸೀರೆಯನ್ನು ನನ್ನ ತಂಗಿಯೂ ಉಡತೊಡಗಿದಳು.

ಮುಖದಲ್ಲಿ ಮಾತ್ರ ಎಲ್ಲೋ ಕೊಂಚ ಹುಚ್ಚು ಕಳೆಯಿತ್ತಷ್ಟೇ ಹೊರತು, ಅವಳೂ ತಿಳಿವಳಿಕೆ ಇರುವ ಹುಡುಗಿಯೇ ಹೌದು. ಅವರೂ ಇವರೂ ಹೊಂದಾಣಿಕೆಯಿಂದ ನಗುತ್ತ ಕೆಲೆಯುತ್ತ ಕಾಲ ಕಳೆಯುತ್ತಿದ್ದರು. ನನ್ನ ಮಾವನ ಮಗಳೂ, ನನ್ನ ತಂಗಿಯೂ–ಬಿಸಿನೀರಿಗೆ ತಣ್ಣೀರಿನ ಹಾಗೆ–ಒಬ್ಬರಿಗೊಬ್ಬರು ಆಸರೆಯಾಗಿ ಮನೆಗೆಲಸಗಳನ್ನು ನಾ ಮುಂದು ತಾ ಮುಂದು ಎಂದು ಮಾಡಿಕೊಂಡು ಹೋಗತೊಡಗಿದರು. ನನ್ನ ಇಬ್ಬರು ತಮ್ಮಂದಿರಲ್ಲಿ ದೊಡ್ಡವನಿಗೆ ಆ ಊರಿನ ನೀರು ಮೈಗೆ ಹಿಡಿಸಿತು. ಹುಡುಗ ತುಂಬಿಕೊಂಡ. ನನ್ನ ಮಾವನ ಮಗನಿಗಿಂತಲೂ ಹೆಚ್ಚು ಚುರುಕಾಗಿ ಓದು ಕಲಿಯಲಾರಂಭಿಸಿದ.

ನನಗರಿಯದಂತೆಯೇ. ನಾನಂದುಕೊಳ್ಳದಂತೆಯೇ ನನ್ನ ಮದುವೆಯ ವಿಷಯ ದೂರದ ಮಾತಾಗಿಬಿಟ್ಟಿತು. ಅಷ್ಟುವರೆಗೆ ಊರಿನ ಹಲವು ಹಿರಿಯರು ಸೇರಿ ಮುಹೂರ್ತವನ್ನು ನಿಶ್ಚಯಿಸಿಬಿಡೋಣವೆಂದು ಉತ್ಸಾಹ ತೋರಿದವರೆಲ್ಲರೂ–ಈ ಹದಿನೈದು–ಇಪ್ಪತ್ತು ದಿನಗಳು ಹೀಗೆ ಕಳೆದು ಹೋಗುವುದರಲ್ಲಿಯೇ, ಅವರೆಲ್ಲರೂ ಆ ವಿಷಯವನ್ನೇ ಮರೆತುಬಿಟ್ಟಂತಾದರು. ಮದುವೆಮಾಡಿಕೊಳ್ಳುವುದಕ್ಕೆ ಪರಿಸ್ಥಿತಿಗಳು ಅನುಕೂಲಿಸಲಿಲ್ಲ. ಮದುವೆಗೆಂದೇ ಕೂಡಿಟ್ಟ ಹಣದಲ್ಲಿ ಬಹುಭಾಗ ಖರ್ಚಾಗಿಬಿಟ್ಟಿತು. ಹೆಣ್ಣು ಮಕ್ಕಳಿಬ್ಬರಿಗೂ ಆಭರಣಗಳನ್ನು ಮಾಡಿಸಿದ್ದಕ್ಕೆ ಅವರಿಗೆ ಸೀರೆಗಳು ; ಗಂಡು ಹುಡುಗರಿಗೆ ಬಟ್ಟೆಬರೆಗಳಿಗಾಗಿ, ಈ ಮಧ್ಯೆ ಮನೆಗೆ ಬೇಕಾದ ಸಾಮಾನು–ಸರಂಜಾಮುಗಳನ್ನು ತರುವುದಕ್ಕಾಗಿ, ಬೇಸಾಯಕ್ಕಾಗಿ ಅನಿವಾರ್ಯವಾಗಿ ಒಂದಿಷ್ಟು ಮೊತ್ತ ಖರ್ಚು ಮಾಡಿದ್ದರಿಂದಲೂ, ಕೆಲವು ಕಡೆ ಕಡ ತಂದ ಹಣವನ್ನು ಹಿಂತಿರುಗಿಸಿದ್ದರಿಂದಲೂ, ಎಲ್ಲಾ ಸೇರಿ ಒಂದು ಸಾವಿರದವರೆಗೆ ಖರ್ಚಾಗಿಬಿಟ್ಟಿತು. ಇನ್ನುಳಿದ ಐದುನೂರು ರೂಪಾಯಿಗಳಲ್ಲಿ ಮದುವೆ ಹೇಗಾದೀತು?

ಹೀಗಿರಬೇಕಾದರೆ–ಆ ಊರಿನ ದೊಡ್ಡ ಆಸ್ತಿವಂತರಾದ ಬ್ರಾಹ್ಮಣ ಕುಟುಂಬದ ವ್ಯಕ್ತಿ–ನನ್ನ ಸ್ನೇಹಿತನೆಂದು ಹೇಳಿದ್ದೆನಲ್ಲಾ–ಆತ ಗುಂಟೂರಿನಲ್ಲಿ ವಕಾಲತು ಮಾಡಲು ಪ್ರಾರಂಭಿಸಿದ್ದ. ಆಗ ಚೈತ್ರ–ವೈಶಾಖದ ದಿನಗಳಾದುದರಿಂದ ಆತ ರಜೆಗೆಂದು ಊರಿಗೆ ಬಂದ. ನಾನೊಂದು ದಿನ ಆತನೊಂದಿಗೆ ನಮ್ಮ ಹುಡುಗರ ಓದಿನ ವಿಷಯದ ಬಗ್ಗೆ ಪ್ರಸ್ತಾಪಿಸಿದೆ. ಆತ ಆ ಬೇಸಗೆಯ ಎರಡು ತಿಂಗಳ ದಿನಮಾನವೂ–ನನ್ನ ಮಾವನ ಮಗನನ್ನೂ ನನ್ನ ದೊಡ್ಡ ತಮ್ಮನನ್ನೂ ರಾತ್ರಿಯೆಲ್ಲಾ ತಮ್ಮ ಮನೆಯಲ್ಲಿಯೇ ಇರಿಸಿಕೊಂಡು ಪಾಠ ಹೇಳಿದ. ಜ್ಯೇಷ್ಠಮಾಸ ಕಾಲಿಟ್ಟಿತು. ಆತ ಗುಂಟೂರಿಗೆ ಹೊರಡುತ್ತಾ ನನ್ನೊಂದಿಗೆ ಹೀಗೆ ತಿಳಿಸಿದ–

'ಹುಡುಗರನ್ನು ನಾನು ಕರೆದುಕೊಂಡು ಹೋಗುತ್ತೇನೆ. ಗುಂಟೂರಿನಲ್ಲಿ ಫೋರ್ತ್‌ಫಾರಂಗೆ ಸೇರಿಸುತ್ತೇನೆ. ನಿನ್ನ ತಮ್ಮನಂತೂ ತುಂಬ ಬುದ್ಧಿವಂತ. ನಿನ್ನ ಮಾವನ ಮಗನೂ ಪರವಾಗಿಲ್ಲ. ಅವರಿಗೆ ವಿದ್ಯೆ ಕಲಿಸದೆ ಬಿಡುವುದು ತರವಲ್ಲ. ನಿನ್ನ ಹತ್ತಿರವಿನ್ನೂ ಐದುನೂರು ರೂಪಾಯಿಗಳಷ್ಟಿದೆ ಎಂದೆಯಲ್ಲಾ. ಅದನ್ನು ನನಗೆ ಕೊಡು. ನಾನು

ಬ್ಯಾಂಕಿನಲ್ಲಿಡುತ್ತೇನೆ. ಪ್ರತಿ ತಿಂಗಳು ಕಳಿಸಬೇಕೆಂದರೆ ನಿನಗೆ ತೊಂದರೆಯಾಗುತ್ತೆ. ಅವರ ಊಟದ ಖರ್ಚು, ಸ್ಕೂಲಿನ ಫೀಜು ಎಲ್ಲಾ ಸೇರಿ ತಿಂಗಳಿಗೆ ಮೂವತ್ತು ನಲವತ್ತಾಗುತ್ತೆ ಮೂರು ವರ್ಷ ಹೇಗಾದರೂ ಕಷ್ಟಪಟ್ಟು ಸ್ಕೂಲ್ ಫೈನಲ್‌ವರೆಗೆ ಓದಿಸಿಬಿಟ್ಟರೆ – ಮುಂದೆ ಎಲ್ಲಾದರೂ ಉದ್ಯೋಗ ಸಿಕ್ಕುತ್ತೆ. ನಿನ್ನ ಮಾವನ ಮಗ ಸ್ಕೂಲ್ ಫೈನಲ್ ಮುಗಿಸಿದ ಮೇಲೆ ಬೇಕಾದರೆ ಊರಿಗೆ ಬಂದು ಬೇಸಾಯ ಮಾಡಿಕೊಂಡಿರಲಿ. ನಿನ್ನ ತಮ್ಮನಿಗೆ ಮಾತ್ರ ಆಧಾರವೇನೂ ಇಲ್ಲವಲ್ಲಾ–ಅವನಿಗೊಂದು ದಾರಿ ಮಾಡಿಕೊಟ್ಟಂತಾಗುತ್ತೆ. ಹುಡುಗರು ತುಂಟರು, ಪೋಕರಿ, ಅಪಾಪೋಲಿಗಳಾಗದಂತೆ ನಾನು ಹದ್ದುಬಸ್ತಿನಲ್ಲಿರಿಸುತ್ತೇನೆ' ಎಂದು ಮುಂತಾಗಿ ನನ್ನನ್ನು ಪ್ರೋತ್ಸಾಹಿಸಿದ. ನಾನು ನೂರು ರೂಪಾಯಿಗಳನ್ನು ಮಾತ್ರ ಯಾವುದಾದರೂ ಸಮಯ ಸಂದರ್ಭಕ್ಕೆ ಕೈಲಿರಲಿ ಎಂದು ಮಿಗಿಸಿಕೊಂಡು, ಉಳಿದ ನಾಲ್ಕು ನೂರು ರೂಪಾಯಿಗಳನ್ನು ಆತನ ಕೈಗೆ ಕೊಟ್ಟೆ–ಹೀಗೆ ನಾನು, ನನ್ನ ಮದುವೆಯ ವಿಷಯವನ್ನು ಮತ್ತೆ ಮುಂದಿನ ವರ್ಷದತನಕ ಎತ್ತದಂತಾಗಿಬಿಟ್ಟಿತು.

ನಾನು ನನ್ನ ಸಾಕುತಂದೆಯ ಮಕ್ಕಳನ್ನು ಕರೆದುಕೊಂಡು ಬಂದು ಆ ವರ್ಷದ ಜ್ಯೇಷ್ಠಮಾಸಕ್ಕೆ ಮೂರು ತಿಂಗಳುಗಳಾದುವು. ದೊಡ್ಡ ತಮ್ಮ ತುಂಬ ಬುದ್ಧಿವಂತನಾದ. ಚಿಕ್ಕಂದಿನಲ್ಲಾಗಲೀ, ತರುವಾಯ ನಾನು ಎರಡು ಮೂರು ಸಲ ನೋಡಿದಾಗಲಾಗಲೀ–ಅಂಥ ಬುದ್ಧಿಮಂತನೆಂದೇನೂ ನನಗನ್ನಿಸಿರಲಿಲ್ಲ. ಆದರೆ ಓದು ಕಲಿಸಲು ತೊಡಗಿದಾಗ ಅವನ ಬುದ್ಧಿವಂತಿಕೆ ಚೆನ್ನಾಗಿ ವ್ಯಕ್ತಪಟ್ಟಿತು. ಆ ನನ್ನ ಸ್ನೇಹಿತ ಎಷ್ಟು ವಿಷಯಗಳನ್ನು ಹೇಳಿದರೂ ಸರಿಯೇ ಅದನ್ನೆಲ್ಲಾ ಜ್ಞಾಪಕದಲ್ಲಿಟ್ಟುಕೊಂಡು ಮತ್ತೆ ಒಪ್ಪಿಸಿಬಿಡುತ್ತಿದ್ದ. ಬೆರಳು ತೋರಿಸಿದರೆ ಹಸ್ತ ನುಂಗುವಂಥವನಾದ. ಅವನ ಬಗ್ಗೆ ನನ್ನ ಆ ಪ್ಲೀಡರ್ ಸ್ನೇಹಿತನಿಗುಂಟಾದ ಅಭಿಮಾನ ಅಷ್ಟಿಷ್ಟಲ್ಲ. ನನ್ನ ಮಾವನ ಮಗಳನ್ನೂ, ತಂಗಿಯನ್ನೂ ಕುಳ್ಳಿರಿಸಿಕೊಂಡು ಅವನು ಎಷ್ಟೋ ಕಥೆಗಳನ್ನು ಹೇಳುತ್ತಿದ್ದನು ; ಅವರನ್ನು ನಗಿಸುತ್ತಿದ್ದನು. ಮನೆಯೆಲ್ಲಾ ಅವನ ಆಟಪಾಟಗಳಿಂದ ತುಂಬಿಹೋಯಿತು. ಇನ್ನು ಅವನೂ, ನನ್ನ ಮಾವನ ಮಗಳೂ ಅತಿ ಸಲಿಗೆಯಿಂದಿರಲಾರಂಭಿಸಿದರು. ಅವಳೊಂದಿಗೆ ಅವನು ಹುಡುಗಾಟಿಕೆ ಮಾಡುತ್ತಿದ್ದನು ; ಅವಳೂ ಸರಸದಿಂದಿರುತ್ತಿದ್ದಳು–ಅವರಿಬ್ಬರೂ ಒಬ್ಬರ ಮೇಲೆ ಒಬ್ಬರು ಬೀಳುವುದೇ–ಅಷ್ಟೊಂದು ಸಲಿಗೆ. ಆದರೆ ಅದರಲ್ಲಿ ನನಗೆ ಯಾವುದೇ ತೆರನಾದ ಅನುಮಾನವುಂಟಾಗಲಿಲ್ಲ. ಅವನನ್ನ–ಅವಳು ಕೇವಲ ಹುಡುಗನ ಹಾಗೆ ಕಾಣುತ್ತಿರುವುದೇ ನನ್ನ ಕಣ್ಣಿಗೆ ಗೋಚರಿಸುತ್ತಿತ್ತು. ಅವನು ನನಗಿಂತಲೂ ಎರಡು ವರ್ಷ ಚಿಕ್ಕವನಲ್ಲದೆ, ಅಸಲು ಹಸುಗೂಸಿನ ಹಾಗೆಯೇ ಕಂಡುಬರುತ್ತಿದ್ದನು. ಚಿಕ್ಕಂದಿನಿಂದಲೂ ಮಗುವಿನಂತೆಯೇ, ಅದರಲ್ಲೂ ಸೋದರ ಮಾವನ ಹಂಗಿನಲ್ಲಿ ಈ ನಾಲ್ಕೈದು ವರ್ಷಗಳೂ ಲಾಲನೆ–ಪಾಲನೆಗಳಿಲ್ಲದೆ, ತೆಳ್ಳಗೆ, ಕುಳ್ಳಗೆ ಇರುವುದರಿಂದ ನೋಡಲು ಅವನು ಅಷ್ಟೇನೂ ಠೀವಿಯಾಗಿ ಕಂಡುಬರುತ್ತಿರಲಿಲ್ಲ. ಆದ್ದರಿಂದಲೇ ನನ್ನ ಮಾವನ ಮಗಳೂ ಸಹ ಅವನೊಂದಿಗೆ ಭೀತಿಯಿಲ್ಲದೆ ಪ್ರವರ್ತಿಸುತ್ತಿದ್ದಳು. ಆ ಪ್ರವರ್ತನೆ ನೋಡಿದವರಾರಿಗೂ ವಿಘ್ನವೆನ್ನಿಸುತ್ತಿರಲಿಲ್ಲ.

ಹುಡುಗರಿಬ್ಬರೂ ಓದಲು ಹೊರಟುಹೋದರು. ಹೊರಡುವಾಗ ನನ್ನ ಮಾವನ ಮಗಳು, ನನ್ನ ತಮ್ಮನನ್ನೂ ತನ್ನ ತಮ್ಮನನ್ನೂ ಬಿಟ್ಟಿರದಾದಳು. ನನ್ನ ತಮ್ಮ ಅವಳೊಂದಿಗೆ 'ಅತ್ತಿಗೇ, ನಾನು ಬಿ.ಎ. ಪರೀಕ್ಷೆ ಪ್ಯಾಸ್ ಮಾಡಿ ಬರ್ತ್ತೇನೆ. ಬಂದಮೇಲೆ ಅದನ್ನೆಲ್ಲ ನಿನಗೆ ಕಲಿಸುತ್ತೇನೆ' ಎಂದ. ಅವಳು 'ಈ ಎರಡರ ಮಧ್ಯೆ ತುಂಬಾ ದೂರವಿದೆ' ಎಂದಳು. ಅವಳ ತಮ್ಮ 'ಅಕ್ಕಯ್ಯಾ ಹಾಗಲ್ಲ. ಸ್ವಾಮಿ ಎಳೆ ತೋರಿಸಿದರೆ ಹಚ್ಚಡ ನುಂಗೋನು' ಎಂದ. ನನ್ನ ಹಿರಿಯ ತಮ್ಮನನ್ನು ನಾನು 'ಸ್ವಾಮಿ' ಎಂದು ಕರೆಯುತ್ತಿದ್ದುದರಿಂದ ಮನೆಯಲ್ಲಿ ಎಲ್ಲರೂ ಅವನನ್ನು ಸ್ವಾಮೀ ಸ್ವಾಮೀ ಎಂದೇ ಕರೆಯಲಾರಂಭಿಸಿದ್ದರು. ನನ್ನ ಮಾವನ ಮಗಳು 'ಹೇಗೆ ಹಚ್ಚಡ ನುಂಗುತ್ತೀ ಸ್ವಾಮೀ?' ಎಂದಳು. 'ಹೀಗೆ ನುಂಗಿಬಿಡ್ತೇನೆ' ಎಂದು ಅವಳ ಸೆರಗನ್ನು ಹಿಡಿದು ಜಗ್ಗಿದ. ನಾವೆಲ್ಲರೂ ನಕ್ಕೆವು.

ಅವರು ಹೋದಮೇಲೆ ಇನ್ನು ಮನೆಯಲ್ಲಿ ಉಳಿದವರೆಂದರೆ ನಾನು, ಚಿಕ್ಕವನು, ನನ್ನ ತಂಗಿ ಹಾಗೂ ನನ್ನ ಮಾವನ ಮಗಳು. ನನ್ನ ತಂಗಿ ಚಮತ್ಕಾರವಾಗಿ ಬದಲಾಯಿಸಿದಳು. ನೂರಕ್ಕೋ ಕೋಟಿಗೋ, ಯಾವಾಗಲೋ ಒಮ್ಮೆ ಅವಳ ಕಣ್ಣುಗಳಿಂದ ಹುಚ್ಚು ಕಳೆಯ ನೋಟ ಬಿತ್ತರಿಸುತ್ತಿತ್ತೇ ವಿನಾ ಇನ್ನುಳಿದ ಸಮಯದಲ್ಲೆಲ್ಲಾ ಚೆನ್ನಾಗಿಯೇ ಇರುತ್ತಿದ್ದಳು. ಎಷ್ಟು ಬೇಕೋ ಅಷ್ಟು, ತಕ್ಕಷ್ಟು ಮಾತನಾಡುತ್ತಿದ್ದಳು. ಯಾವ ಕೆಲಸವಾದರೂ ಸರಿಯೇ ಸದ್ದುಸಪ್ಪಳಗಳಿಲ್ಲದೆ ಮಾಡಿ ಮುಗಿಸುತ್ತಿದ್ದಳು. ಹಾಗೆ ಕೆಲಸ ಮಾಡಿ ಮುಗಿಸುತ್ತಾಳೋ ಇಲ್ಲವೋ ಹೀಗೆ ಪುಸ್ತಕ ಹಿಡಿದುಕೊಂಡು ಕುಳಿತುಬಿಡುತ್ತಿದ್ದಳು. ಅವಳ ಓದುಗಾರಿಕೆ ಬ್ರಾಹ್ಮಣ ಹುಡುಗಿಯರಿಗಿಂತಲೂ ಹೆಚ್ಚಾಗಿಬಿಟ್ಟಿತ್ತು. ನನಗೇನು ಬೇಕಾಗಿ ಬಂದರೂ ಸರಿಯೇ ನಾನಂದುಕೊಳ್ಳುವ ಮುನ್ನವೇ ನನಗೆ ತಂದುಕೊಡುತ್ತಿದ್ದಳು, ನನ್ನ ತಂಗಿ. ಅವಳಿಗೆ ಕೈಲಾಗದ ಕೆಲಸವೆಂದರೆ ಒಂದೇ ಒಂದು–ನನಗೆ ಸೇದಲು ಚುಟ್ಟಾ ತಯಾರಿಸುವುದು ಮಾತ್ರ. ನನ್ನ ಮಾವನ ಮಗ ಹೊರಟುಹೋದ ಮೇಲೆ ಚುಟ್ಟಾಗಳನ್ನು ಸುತ್ತಿಕೊಳ್ಳುವುದನ್ನು ಮಾತ್ರ ನಾನೇ ಮಾಡಿಕೊಳ್ಳಬೇಕಾಗಿ ಬಂದಿತು. ನೆರೆಹೊರೆಯವರೆಲ್ಲಾ ನನ್ನ ತಂಗಿಯನ್ನು ನೋಡಿ 'ಹುಚ್ಚೇನು ಬಂತಮ್ಮಾ? ಒಳ್ಳೆ ಮಹಾಲಕ್ಷ್ಮಿಯಂತಿದ್ದಾಳೆ' ಎನ್ನತೊಡಗಿದರು. ಈ ಐದಾರು ತಿಂಗಳು ಉತ್ತಮ ಪೋಷಣೆಯಲ್ಲಿ ಕಳೆದಿದ್ದರಿಂದ ಕೊಂಚ ಕೈಮೈ ತುಂಬಿಕೊಂಡ ಹಾಗೆ ಕಂಡುಬರಲಾರಂಭಿಸಿದಳು. ಅವಳಿಗೆ ಸರಿ ಸುಮಾರು ಇಪ್ಪತ್ತು ವರ್ಷಗಳಾಗಿದ್ದುವು.

ಕಾಲುದ್ದದ ಹುಡುಗಿಯೋ ಏನೋ. ಈ ಆರು ತಿಂಗಳುಗಳಲ್ಲಿ ದೊಡ್ಡವಳ ಹಾಗೆ ಕಂಡುಬರತೊಡಗಿದಳು. ಅವಳನ್ನು ನೋಡಿದಾಗಲೆಲ್ಲಾ ಅವಳ ಮದುವೆಯ ವಿಷಯವೇ ನನ್ನ ಮನಸ್ಸನ್ನು ಕೊರೆಯತೊಡಗುತ್ತಿತ್ತು. 'ಇವಳನ್ನು ಯಾರಿಗೆ ಕೊಡಲಿ? ಒಂದು ಕಾಸಾದರೂ ಇಲ್ಲದಾಯಿತು. ಅವಳ ಮದುವೆಯನ್ನು ಯಾವ ರೀತಿ ಮಾಡಲಿ? ಮಾಡದೇ ಇದ್ದರೆ ಅಪ್ರತಿಷ್ಠೆ ಅಗೌರವ, ಅದನ್ನು ಹೇಗೆ ಭರಿಸಲಿ? ಮಕ್ಕಳನ್ನೇನೋ ಕರೆತಂದೆ. ಇವರ ಬದುಕನ್ನು ನಾನು ನೇರಗೊಳಿಸುತ್ತೇನೆ, ನೇರ್ಪಾಗಿಸುತ್ತೇನೆ ಎಂದೇನೋ ನನ್ನ ಸಾಕುತಂದೆ ಬಗೆದಿದ್ದಾನೆ. ಲೋಕವು ಸಹ ಹಾಗೆಂದೇ ಅಂದುಕೊಳ್ಳುತ್ತಿದೆ. ಗಂಡು ಹುಡುಗರಿಗೆ ಹೇಗೋ ಒಂದಲ್ಲ

ಒಂದು ರೀತಿ ಕಷ್ಟಪಟ್ಟು ವಿದ್ಯೆ ಕಲಿಸಬಲ್ಲೆ. ಆದರೆ ಈ ಹುಡುಗಿಯ ಲಗ್ನವನ್ನು ಮಾಡುವುದು ಹೇಗೆ? ಮದುವೆ ಮಾಡದೇ ಇದ್ದರೆ ನಾನು ಸ್ವಾಮಿಗೆ ದ್ರೋಹಿಯಾದಂತಾಗುತ್ತದೆ. ಏನೋ ಗಡದ್ದಾಗಿ ಮಾಡುವವನ ಹಾಗೆ ಹುಡುಗರನ್ನು ಅಲ್ಲಿಂದ ಕರೆದುಕೊಂಡು ಬಂದುಬಿಟ್ಟೆ. ಅಲ್ಲಿಯೇ ಇದ್ದಿದ್ದರೆ ಅನ್ನುವವರೂ ಇರುತ್ತಿರಲಿಲ್ಲ; ಹೀಗೆ ಪರದಾಡಬೇಕಾದ ಪರಿಸ್ಥಿತಿಯೂ ಬರುತ್ತಿರಲಿಲ್ಲ. ಈಗ ಇವಳ ಮದುವೆ ನನ್ನ ಕುತ್ತಿಗೆಯ ಮೇಲೆ ಬಂದು ಕುಳಿತಿದೆ. ಏನು ಮಾಡಬೇಕೋ ತೋಚುತ್ತಿಲ್ಲ–ದಿನ ದಿನಕ್ಕೂ ಈ ವಿಷಯ ನನ್ನನ್ನು ಮುತ್ತಿಕೊಂಡು ಕಾಡತೊಡಗಿತು.

ಇನ್ನು ನನ್ನ ಮಾವನ ಮಗಳು–ಹುಡುಗರು ಓದಿಗೆಂದು ಹೊರಟು ಹೋದ ಮೇಲೆ, ಅವಳು ನನ್ನ ಬಗ್ಗೆ ವರ್ತಿಸುವ ಪ್ರವರ್ತನೆಯಲ್ಲಿ ನನಗೆ ಕೊಂಚ ವ್ಯತ್ಯಾಸ ಕಂಡುಬರಲಾರಂಭಿಸಿತು. ಈಚೀಚೆಗೆ ಅವಳು ನನ್ನ ಕಣ್ಣಿಗೇ ಬೀಳುತ್ತಿಲ್ಲ. ನನಗೆ ಊಟಕ್ಕೆ ಬಡಿಸುವುದೂ ನನ್ನ ತಂಗಿಯೇ. ನನಗೇನು ಬೇಕಾಗಿಬಂದರು ನನ್ನ ತಂಗಿಯೇ ಮಾಡುತ್ತಿದ್ದಳು. ಮನೆಗೆ ಬೇಕಾದ ಪದಾರ್ಥಗಳನ್ನೂ ಸಹ ಇಂಥದು ತರಬೇಕೆಂದು ತಿಳಿಸುವುದೂ ನನ್ನ ತಂಗಿಯೇ. ನಾನು ಹೊಲದಿಂದ ಹಠಾತ್ತನೆ ಬಂದುಬಿಟ್ಟರೆ, ಬಾಗಿಲಲ್ಲಿ ಕುಳಿತುಕೊಂಡಿದ್ದಾಗ ಮಾತ್ರ ಅಪ್ಪಿತಪ್ಪಿ ಕಾಣಿಸುತ್ತಿದ್ದಳು; ಅಥವಾ ಹಿತ್ತಲಿಗೆ ಸ್ನಾನ ಮಾಡಲೆಂದು ಹೋದಾಗ – ಅವಳೇನಾದರು ಅಲ್ಲಿದ್ದರೆ ಮಾತ್ರ ಕಾಣಿಸುತ್ತಿದ್ದಳು. ಇನ್ನುಳಿದ ಹೊತ್ತಿನಲ್ಲಿ ಕಾಣಿಸುತ್ತಲೇ ಇರಲಿಲ್ಲ–

ನನ್ನ ಓದುಗರು ಕ್ಷಮಿಸಿದರೆ ನನ್ನ ಮನಸ್ಸಿನಲ್ಲಿರುವ ಅದೊಂದು ಪರಿತಾಪವನ್ನು ಹೊರಗೆ ಹಾಕಿಕೊಳ್ಳುತ್ತೇನೆ. ನಾನು ಈ ಕಥೆಯನ್ನೆಲ್ಲಾ, ಅದು ನಡೆದ ಬಳಿಕವೇ ನನ್ನ ಜೀವನ ಚರಿತ್ರೆಯನ್ನಾಗಿ ಬರೆಯುತ್ತಿದ್ದೇನೆ. ಕಥೆ ಹೇಗೂ ನಡೆದಿದೆಯಲ್ಲಾ–ಹೇಗೆ ಕೊನೆಗೊಳ್ಳುತ್ತದೋ ಎಂದು ತಿಳಿಯದ ಮುನ್ನವೇ–ನಡೆದ ಕೆಲವು ವಿಷಯಗಳು ಕೊನೆಗೊಂಡ ಬಳಿಕ, ಆಗ ಹೀಗೆ ನಡೆಯಿತು ಕಣ್ರೀ ಎಂದು ತಿಳಿಸಿದರೆ–ಲೋಕದಲ್ಲಿ ಅದಕ್ಕೆ ಸಂಬಂಧಿಸಿದವರ ಮನಸ್ಸು ಚುರ್ರೆನ್ನುತ್ತದೆ. ಕಾವ್ಯದಲ್ಲಿ ರಸಭಂಗವಾಗುತ್ತದೆ. ಆದರೆ ನಾನು ನನ್ನ ಜೀವನ ಚರಿತ್ರೆಯನ್ನು ಬರೆಯುತ್ತಿರುವೆನಾಗಲೀ, ಕಾವ್ಯವೊಂದನ್ನು ರಚಿಸುತ್ತಿರುವೆನೆಂದು ನಾನೆಂದೂ ಅಂದುಕೊಂಡಿಲ್ಲ. ಈ ಪುಸ್ತಕದಲ್ಲಿ ಓದುಗರು–ಈ ಭಾಗದಲ್ಲಿ ಹೆಚ್ಚಿಗೆ ಬರೆದಿದ್ದಾನೆ; ಇಂಥಾ ಭಾಗವನ್ನು ಅನಗತ್ಯವಾಗಿ ಬೆಳೆಸಿದ್ದಾನೆ ಎಂದು ಮುಂತಾದ ದೋಷಗಳನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದಾಗಿ ಮನವಿ. ಏಕೆಂದರೆ ನನ್ನ ಹೃದಯದಲ್ಲಿ ನಾನು ಪಟ್ಟ ಕಷ್ಟಗಳನ್ನೇ, ಬಾಧೆಗಳನ್ನೇ ಇದರಲ್ಲಿ ಬರೆಯುತ್ತಿರುವೆನಾಗಲೀ, ನನ್ನ ಓದುಗರನ್ನು–ಕಥಾಶಿಲ್ಪದಲ್ಲಿ ಸೊಗಸುಗಳನ್ನು ಮೆರೆದು ರಂಜಿಸಬೇಕೆಂದೇನೂ ಬರೆಯುತ್ತಿಲ್ಲ. ಆದ್ದರಿಂದ ಇಲ್ಲೊಂದು ವಿಷಯವನ್ನು ತಿಳಿಸುತ್ತೇನೆ–

ಈ ದಿನಗಳಲ್ಲಿ ನನ್ನ ಮನಸ್ಸನ್ನು ತುಂಬ ಬಾಧಿಸಿದಂಥವು ಈ ಎರಡು ವಿಷಯಗಳು–ಮೊದಲನೆಯದು–ನನ್ನ ತಂಗಿಯ ಮದುವೆ ; ಎರಡನೆಯದು

ನನ್ನ ಮದುವೆ. ನನ್ನ ಮದುವೆಗೆ ಭಗವಂತನೇ ವಿಮುಖನಾಗಿದ್ದಾನೆ–ಎಂದೆನ್ನಿಸಿತು. ನನ್ನ ಮಾವನ ಮಗಳು ಬಲು ಅಂದಗಾತಿ ಎಂದು ಇದುವರೆಗಾಗಲೇ ತಿಳಿಸಿರುವೆ. ಅವಳ ಮುಖ ಅತ್ಯಂತ ಸುಂದರವಾಗಿದೆ. ಕೋಲುಮುಖವೂ ಅಲ್ಲ, ದುಂಡು ಮುಖವೂ ಅಲ್ಲ. ಕೆಂಪು ಬಣ್ಣದವಳು. ಕಣ್ಣುಗಳು ದೊಡ್ಡವು. ಹಣೆ ವಿಶಾಲವಾದುದು. ಮೂಗು–ಸೌಂದರ್ಯವನ್ನು ಹಿಡಿದಿಟ್ಟುಕೊಂಡಿದೇನೆ ಎಂದು ತಿಳಿಸುವ ಹಾಗೆ–ತಲೆ ಎತ್ತಿ ನಿಂತಂತಿದೆ. ಅವಳ ಬಾಯಿ ಚಿಕ್ಕದೂ ಅಲ್ಲ, ದೊಡ್ಡದು ಅಲ್ಲ. ಎರಡೂ ಬಾಯ್ದೆರೆಗಳನ್ನು ಹತ್ತಿರ ಹತ್ತಿರಕ್ಕಿರಿಸಿದರೆ, ಸಿಂಜಿನಿ ಬಿಗಿಯದ ಬಿಲ್ಲಿನಂತಿರುತ್ತವೆ. ಅವಳ ಗದ್ದ, ತುದಿಯಲ್ಲಿ ಮೊನಚಾಗಿ ಮಧ್ಯದಲ್ಲೊಂದು ಗುಳಿಬಿದ್ದು ಅತ್ಯಂತ ಅಂದವಾಗಿ ಕಾಣಿಸುತ್ತದೆ. ಅವಳ ಕುರುಳುಗಳು ಅವಳ ನಿತಂಬಗಳವರೆಗೆ ಇಳಿ ಬೀಳುತ್ತವೆ. ಅವಳು ತೆಳ್ಳಗೂ ಇಲ್ಲ. ದಪ್ಪನಾಗಿಯೂ ಇಲ್ಲ. ನಾಗಬೆತ್ತದಂತೆ ಚುರುಕಿನಂತಿದ್ದಾಳೆ. ಅವಳು ಸೀರೆ ತೊಟ್ಟರೆ ಸೊಗಸು ; ಸೆರಗು ಭುಜಕ್ಕೆ ಬೀಸಿದರೆ ಸೊಗಸು; ಬಾಗಿಲ ಚೌಕಟ್ಟಿನಿಂದ ಮನೆಯೊಳಕ್ಕೆಂದು ನಡೆದರೆ ಸೊಗಸು ; ಯಾವಾಗಲಾದರೊಮ್ಮೆ ನನ್ನ ದಾರಿಗೆದುರಾದಾಗ, ಅಲ್ಲಿಂದ ತಟಕ್ಕನೆ ತಪ್ಪಿಸಿಕೊಂಡು ಹೋದರೆ ಸೊಗಸು ; ಪುಸ್ತಕದತ್ತ ನೋಡುತ್ತಾ ಕುಳಿತರೆ ಸೊಗಸು ; ಸೊಗಸೆಂಬ ಗುಣವಲ್ಲದೆ ಅವಳು ಮತ್ತೇನೂ ಅಲ್ಲ.

ನಮ್ಮಿಬ್ಬರಿಗೂ ನಡೆಯಬೇಕಾದ ಮದುವೆ ಹೀಗೆ ಸುಮ್ಮನೆ, ಕಷ್ಟೆಯಂತೆ ಕುಪ್ಪಳಿಸುತ್ತಾ, ಕಾಲ ಗತಿಸಿಹೋಗುತ್ತಿತ್ತು. ಇಗೋ ಇಗೋ ಎಂದು ಅನೇಕ ದಿನಗಳು ಕಳೆದುಹೋದುವು. ಆ ವರ್ಷದ ಕೊನೆಗೆ ಮಾಡಿಕೊಳ್ಳುತ್ತೇನೆ, ಈ ಕಷ್ಟದ ಕಾಲ ಕಳೆದ ಮೇಲೆ ಮಾಡಿಕೊಳ್ಳುತ್ತೇನೆ–ಎಂದುಕೊಳ್ಳುತ್ತ ಆ ಎಲ್ಲ ಗಡುವುಗಳೂ ಕಳೆದುಹೋದುವು. ನಾವಿಬ್ಬರೂ ಒಂದೆ ಸೂರಿನ ಕೆಳಗೆ ವಾಸಿಸುತ್ತಿದ್ದರೂ, ಸಲಿಗೆಯಿಂದ ಮಾತನಾಡಕೂಡದೇ? ಮದುವೆಯಾಗದೇ ಇದ್ದರೂ ಗಂಡ–ಹೆಂಡಿರಂತೆ ಇರಲಾಗದೇ? ಮದುವೆಯಾದಲ್ಲದೆ ಅವಳು ನನ್ನೊಂದಿಗೆ ಸರಿಯಾಗಿರಲಾರಳು. ಆದರೆ ಮೂರು ತಿಂಗಳುಗಳ ಪರ್ಯಂತ ಅವಳು ನನ್ನ ತಮ್ಮನೊಂದಿಗೆ ಸಲಿಗೆಯಿಂದಿದ್ದಳಲ್ಲಾ! ನನ್ನೊಂದಿಗೆ ಅದರಲ್ಲಿ ಅರ್ಧ ಸಲಿಗೆಯಿಂದಲಾದರೂ ಅದೇಕೆ ಇರಕೂಡದು? ನನ್ನ ದುರದೃಷ್ಟಕ್ಕೆ ತಕ್ಕಂತೆ ನಮ್ಮತ್ತೆಯೂ ತೀರಿಕೊಂಡಳು. ಆಕೆಯೇನಾದರೂ ಬದುಕಿದ್ದ ಪಕ್ಷಕ್ಕೆ ಈ ಹೊತ್ತಿಗೆಲ್ಲಾ ನನ್ನ ಮದುವೆಯಾಗಿರುತ್ತಿತ್ತು. ನಾನು ಹೀಗೆಲ್ಲಾ ನೆನೆಸಿಕೊಂಡಾಗಲೆಲ್ಲಾ ಒಮ್ಮೊಮ್ಮೆ ನನ್ನ ಮೇಲೆ ನನಗೇ ಕೋಪ ಬರುತ್ತಿತ್ತು ; ಒಮ್ಮೊಮ್ಮೆ ಊರಿನವರ ಮೇಲೆ ಕೋಪ ಬರುತ್ತಿತ್ತು ; ನಮಗೆ ಹಿರಿಯರಾರೂ ಇಲ್ಲವಲ್ಲಾ, ಊರಿನ ನಾಲ್ಕು ಜನ ಹಿರಿಯರು ಸೇರಿ, 'ಮಗೂ, ನೀನಿನ್ನೂ ಚಿಕ್ಕವನು, ನಿನಗೆ ತಿಳಿಯದು, ಇದೋ ಇಂಥಾ ದಿನ ಒಳ್ಳೆಯ ಮುಹೂರ್ತವಿದೆ' ಎಂದು ಟೊಂಕಕಟ್ಟಿ ನಿಂತು ಮದುವೆ ಶಾಸ್ತ್ರವನ್ನು ಮುಗಿಸಬಾರದೇ ಎಂದುಕೊಳ್ಳುತ್ತ, ಊರಿನ ಗಣ್ಯ ವ್ಯಕ್ತಿಗಳ ಹೆಸರುಗಳನ್ನು ಒಂದೊಂದಾಗಿಯೇ ನೆನಪು ಮಾಡಿಕೊಳ್ಳುತ್ತ 'ಆತ ಅಂಥವನು ; ಈತ ಇಂಥವನು' ಎಂದು ಅವರ ಮೇಲೆ ಏನೇನೋ ತಪ್ಪುಗಳನ್ನು ಹೊರೆಸಿ, ಅವರನ್ನು ಕುರಿತು ಆಲೋಚಿಸುವುದಕ್ಕಾರಂಭಿಸುತ್ತಿದ್ದೆ.

ಒಮ್ಮೊಮ್ಮೆ ನನ್ನ ಮಾವನ ಮಗಳ ಮೇಲೆಯ ಕೋಪ ಬಂದು ಬಿಡುತ್ತಿತ್ತು. ದಿಕ್ಕಾಪಾಲಾಗುತ್ತಿದ್ದ ಇವರ ಸಂಸಾರವನ್ನು ನಾನು ನಿಲ್ಲಿಸಿದೆ ; ಭೂಮಿ – ಕಾಣಿಗಳನ್ನೆಲ್ಲಾ ಹಸನುಗೊಳಿಸಿ ಇವರನ್ನು ಒಳ್ಳೆ ಆಸ್ತಿವಂತರನ್ನಾಗಿ ಮಾಡಿದೆ. ತಾನೇನು ಚಿಕ್ಕ ಹುಡುಗಿಯೇ? ಹದಿನಾಲ್ಕು ಹದಿನೈದು ವರ್ಷಗಳ ಯುವತಿಯಲ್ಲಾ! ತನಗೆ ರಾಣಿಯ ಹಾಗೆ ನಡೆಸುತ್ತಿದ್ದೇನಲ್ಲಾ, ನನ್ನೊಂದಿಗೆ ತಾನು ಸಲಿಗೆಯಿಂದಿರಬಾರದೇ ? ತನ್ನ ತಮ್ಮ ನನ್ನ ಬಗ್ಗೆ ತೋರಿಸುವಷ್ಟು ಶ್ರದ್ಧೆಯನ್ನು ತಾನು ತೋರಿಸಬಾರದೇಕೆ?– ಹೀಗೆಲ್ಲಾ ಆಲೋಚನೆಗಳು ನನ್ನ ಮನಸ್ಸಿನಲ್ಲೀ ಉದಿಸಿದಾಗಲೆಲ್ಲಾ, ನಾನು ಕೊಂಚ ಸಿಡುಕಿನಿಂದ ವರ್ತಿಸುತ್ತಿದ್ದೆ. ಅವಳ ಬಗ್ಗೆ ನನ್ನಲ್ಲಿ ತಲೆ ಎತ್ತಿದ ಕೋಪವನ್ನು–ಮನೆಯಲ್ಲಿ ಸಣ್ಣ ಪುಟ್ಟ ವಿಷಯಗಳ ಮೇಲೆ ಹಾಕಿ ಹೊರಕ್ಕೆ ವ್ಯಕ್ತಪಡಿಸುತ್ತಿದ್ದೆ. ಮನೆಯಲ್ಲಿ ಸಮಯಕ್ಕೆ ಸರಿಯಾಗಿ ಚಾವಟಿಕೋಲು ಕಾಣಿಸಲಿಲ್ಲವೆನ್ನಿ, ಅಥವಾ ಒಂದು ಮೊಳೆ ಸಿಕ್ಕಲಿಲ್ಲವೆನ್ನಿ, ಕಾಣಿಸದ ಆ ವಸ್ತುವಿನ ಮೇಲುಂಟಾದ ಬೇಸರವನ್ನು ನನ್ನ ಮಾವನ ಮಗಳ ಮೇಲೆ ತೋರಿಸಿಕೊಳ್ಳುತ್ತಿದ್ದೆ– 'ಎಲ್ರೂ ದೊರೆಸಾನಮ್ಮನೋರೇ ! ಘೋಷಾದಲ್ಲಿರೋ ರಾಣಮ್ಮನೋರೇ ಆಗಿಬಿಟ್ಟಿದಾರೆ! ಕಣ್ಣಿಗೆ ಕಾಣಿಸುವುದೇ ಇಲ್ಲ. ಎಲ್ಲದಕ್ಕೂ ನಾನೇ ಪರದಾಡಬೇಕು ; ಏನು ಬೇಕಾದರೂ ನಾನೇ ಹುಡುಕಿಕೊಳ್ಳಬೇಕು !' ಒಮ್ಮೊಮ್ಮೆ ಕಾಲು ತೊಳೆದುಕೊಳ್ಳುವುದಕ್ಕೆ ನನ್ನ ತಂಗಿ ನೀರು ತಂದುಕೊಡಲು ತಡ ಮಾಡಿದರೆ 'ಎಲ್ಲಾ ಕೆಲಸ ಅವಳೇ ಮಾಡಬೇಕು. ತಾನೇನು ಮಾಡಕೂಡದೇನೋ ! ಆಕೆ ತಾನೇ ಅದೇಕೆ ನನ್ನ ಕಾಲಿಗೆ ನೀರು ತಂದು ಕೊಟ್ಟಾಳು ? ಯಾವನೋ ದೊಡ್ಡ ದೊರೆಯನ್ನೇ ಮಾಡಿಕೊಳ್ಳುವಾಕೆ ನನ್ನತ್ತ ಕಣ್ಣೆತ್ತಿ ನೋಡಿಯಾಳೇ? ನಾನ್ಯಾರು? ಜೀತದಾಳು ! ಅವಳಪ್ಪನ ಹೊಲಗಳನ್ನು ಗೇಣಿಗೆ ಮಾಡುವವನಲ್ವೇ?'– ಎಂದು ಹೀಗೆ ಮಾತನಾಡಿಬಿಡುತ್ತಿದ್ದೆ. ನಾನು ಹೀಗೆ ಬೇಸರಪಟ್ಟುಕೊಂಡಾಗಲೆಲ್ಲಾ, ಅವಳು ಎಲ್ಲಿದ್ದರೂ ತಟಕ್ಕನೆ ಬಂದು ಆಗಿನ ನನ್ನ ಕೆಲಸ ಮಾಡಿಡುತ್ತಿದ್ದಳು. ಆಮೇಲೆ ನಾನೇ ಪಶ್ಚಾತ್ತಾಪಪಡುತ್ತಿದ್ದೆ.

ಚಿಕ್ಕವಳು ಅವಳಿಗೇನು ತಿಳಿಯುತ್ತೆ? 'ಏನೇ ಹೀಗೆ ಬಂದು ಇಂಥಾದ್ದು ತಂದುಕೊಡು' ಎಂದರೆ ತಂದುಕೊಡಲಾರಳೆ ? ನಾನು ಮನಸ್ಸಿನಲ್ಲಿ ಏನೇನೋ ಅಂದುಕೊಂಡು, ಅದೆಲ್ಲಕ್ಕೂ ಅವಳೇ ಬಾಧ್ಯಳೆಂದರೆ ಹೇಗೆ?– ಎಂದು ಸಮಾಧಾನಪಟ್ಟುಕೊಳ್ಳತ್ತಿದ್ದೆ. ಈಗ ನನಗೆ ಯಾವಾಗಲಾದರೊಮ್ಮೆ ಅನ್ನಿಸುತ್ತದೆ–ನಾನು ಹಾಗೆಲ್ಲಾ ಅಂದಾಡುತ್ತಿದ್ದುದರಿಂದ ನಾನೆಂದರೆ ಆವಳಿಗಿಷ್ಟವಿಲ್ಲದೇ ಹೋಗುವುದಕ್ಕೆ ಸ್ವಲ್ಪ ಕಾರಣವಾಯಿತೆಂದು.

ನಾವಿಬ್ಬರು ಒಂದೇ ಮನೆಯಲ್ಲಿದ್ದೆವು. ನಾವಿಬ್ಬರೂ ಗಂಡ ಹೆಂಡತಿಯಾಗಬೇಕೆಂದು ನಮ್ಮತ್ತೆ ಉದ್ದೇಶಿಸಿದ್ದಳು. ಊರಿನವರಿಗೆಲ್ಲಾ ನಾವಿಬ್ಬರೂ ಗಂಡ–ಹೆಂಡಿರೆಂದೇ ನಿಶ್ಚಯ, ಮದುವೆಯಾಗುವುದೆನ್ನುವುದೊಂದು ನಿಮಿತ್ತಮಾತ್ರವಷ್ಟೆ ನನ್ನ ಮನಸ್ಸು ಕೆಲವು ದಿನಗಳಲ್ಲಿ ತುಂಬ ಅಲ್ಲೋಲಕಲ್ಲೋಲಗೊಳ್ಳುತ್ತಿತ್ತು. ಹಾಗೆ ಕಳವಳಪಟ್ಟ ದಿನಗಳನ್ನು ನಾನು ಹೊಲಗಳಲ್ಲಿದ್ದು ಕಳೆದಿದ್ದೇನೆ ; ದನಗಳ ಕೊಟ್ಟಿಗೆಯಲ್ಲಿ, ಗೋದಲಿಯಲ್ಲಿ ಹುಲ್ಲಿನ ಮೇಲೆ ಮಲಗಿ ಕಳೆದಿದ್ದೇನೆ. ನನಗೇನೋ ಒಂದು ತೆರನಾದ ಭಯವಾಗಲು ಕಾರಣವಿಲ್ಲದಿಲ್ಲ.

ಒಂದು ದಿನ ರಾತ್ರಿ–ನನ್ನ ತಮ್ಮಂದಿರೂ, ತಂಗಿಯೂ ಬರುವುದಕ್ಕಿಂತ ಮುನ್ನ–ನಾನೂ, ನನ್ನ ಮಾವನ ಮಗನೂ ಮಗಳೂ ಪಡಸಾಲೆಯಲ್ಲಿ ಮಲಗಿಕೊಂಡಿದ್ದೆವು. ಆ ರಾತ್ರಿ ತುಂಬ ಹೊತ್ತಿನತನಕ ನನಗೆ ನಿದ್ರೆಯೇ ಬರಲಿಲ್ಲ. ನನ್ನ ಮಾವನ ಮಗಳೂ ಎಚ್ಚರವಾಗಿಯೇ ಇದ್ದಳು. ನನ್ನ ಮಾವನ ಮಗ ಮಾತ್ರ ನಿದ್ರಿಸುತ್ತಿದ್ದ. ನಾನು ಅವಳನ್ನು ಮಾತನಾಡಿಸಿ 'ಎಚ್ಚರದಿಂದಿದೀಯಾ?' ಎಂದು ಕೇಳಿದೆ. ಅವಳು 'ಎಚ್ಚರವಾಗಿಯೇ ಇದೀನಿ ಮಾವಯ್ಯಾ' ಎಂದಳು. 'ಸ್ವಲ್ಪ ಇಲ್ಲಿಗೆ ಬಾ' ಎಂದು ಕರೆದೆ. ಅವಳು 'ಅದೇಕೆ?' ಎಂದಳು. ನಾನು ಯಾವುವೋ ನಾಲ್ಕು ಮಾತುಗಳನ್ನಾಡಿ, ಬಳಿಕ ಅವಳ ಹಾಸಿಗೆಯ ಮೇಲೆ ಹೋಗಿ ಕುಳಿತು, ಅವಳನ್ನು ಗಟ್ಟಿಯಾಗಿ ಅಪ್ಪಿಕೊಂಡೆ. ಅವಳು ಚಿಟ್ಟನೆ ಚೀರಿಬಿಟ್ಟಳು. ನನ್ನ ಮಾವನ ಮಗ ಎಚ್ಚರಗೊಂಡುಬಿಡುತ್ತಾನೇನೋ ಎಂದುಕೊಂಡೆ. ಅವನು ಎಚ್ಚರಗೊಳ್ಳಲಿಲ್ಲ. ನಾನು ನಿರ್ವಿಣ್ಣನಾಗಿಬಿಟ್ಟೆ. ನನಗೇನೂ ತೋಚಲಿಲ್ಲ. ನಾನು ಅಡಿಯಿಂದ ಮುಡಿಯತನಕ ನಡುಗುತ್ತಿದ್ದೆ. ಹಾಗೆಯೇ ತಟಕ್ಕನೆ ಅಲ್ಲಿಂದೆದ್ದು ಹೋಗಿ ಬಾಗಿಲ ಬಳಿ ಮಲಗಿಕೊಂಡೆ. ಮರುದಿನ ಬೆಳಗ್ಗೆ ನಾನು ಮನೆಯೊಳಗೆ ಹೋಗಿ ನೋಡಿದರೆ, ಅವಳು ನೆಲದ ಮೇಲೆ, ಸೆರಗನ್ನು ಮೈತುಂಬ, ಮುಖದ ತುಂಬ ಹೊದ್ದು ಮಲಗಿರುವುದು ಕಂಡುಬಂದಿತು. ಹಾಗೆ ಮಲಗಿಕೊಂಡಿರುವ ಅವಳನ್ನು ನೋಡುತ್ತಿರುವಾಗ ನನಗೆ ವಿಚಿತ್ರವಿಚಿತ್ರವಾದ ಭಾವನೆಗಳುದಿಸಿದುವು. ನಾನು ಅದಾರೋ ಪರಸ್ತ್ರೀಯನ್ನು ತಾಕ ಹೋದಂತೆಯೂ, ನಾನು ಯಾವುದೋ ಮಾಡಬಾರದ ತಪ್ಪು ಮಾಡಿದಂತೆಯೂ ಅನ್ನಿಸಿ ನಾನು ಆಮೇಲೆ ಒಂದು ವಾರ, ಹತ್ತು ದಿನಗಳತನಕ ಮನೆಯಲ್ಲಿಯೇ ಮಲಗಲಿಲ್ಲ.

ಆಗಾಗ ನಾನು ಅವಳೊಂದಿಗೆ ಸಲಿಗೆಯಿಂದಲೂ ಸರಸದಿಂದಲೂ ಮಾತನಾಡುತ್ತಿದ್ದದ್ದೂ ಉಂಟು. ಆದರೆ ಅದು ತುಂಬ ಕ್ವಚಿತ್ತಾಗಿ ಮಾತ್ರ ಒಟ್ಟಿನಲ್ಲಿ ದಿನಗಳನ್ನು ನೂಕುವುದೇ ಕಷ್ಟವಾಗಿತ್ತು. ಆದಷ್ಟೂ ಬೇಗ ಮದುವೆ ಮಾಡಿಕೊಂಡುಬಿಡಬೇಕು ಎನ್ನಿಸತೊಡಗಿತ್ತು. ಇನ್ನೂ ನನ್ನ ಬಳಿ ನೂರು ರೂಪಾಯಿಗಳಿದ್ದವು. ಈ ನೂರು ರೂಪಾಯಿಗಳಲ್ಲಿಯೇ ಹೇಗೋ ಹಾಗೆ ಮದುವೆಯಾಯಿತು ಎನ್ನಿಸಿಬಿಡೋಣ ಎಂದಿತು ಮನಸ್ಸು. ಏತಕ್ಕೋ ಒಂದು ದಿನ ಸ್ನಾನ ಮಾಡುತ್ತಾ, ನನ್ನ ಮಾವನ ಮಗಳನ್ನು ಬಾ ಎಂದು ಕರೆದೆ. ಅವಳು ಬಂದಳು. ಆಗ ನಾನು– 'ಏನೇ ಮದುವೆ ಯಾವಾಗ ಮಾಡಿಕೊಳ್ಳೋಣ?' ಎಂದು ಹೇಳಿದೆ. ಅವಳು ತುಟಿಪಿಟಕ್ಕೆನ್ನದೆ ಹಿಂತಿರುಗಿ ಹೋಗಿಬಿಟ್ಟಳು. ನಾನು ಸ್ನಾನ ಮುಗಿಸಿ ಒಳಗೆ ಹೋಗಿ ಅವಳೊಂದಿಗೆ 'ನಾನು ನಿಜವಾಗಿಯೂ ಕೇಳ್ತಾ ಇದೇನೆ. ನಿನಗಿಷ್ಟವಾದರೇನೇ ನಿನ್ನನ್ನು ಮದುವೆಯಾಗ್ತೇನೆ. ಇಲ್ಲದೇ ಇದ್ದರೆ ಇಲ್ಲ. ಮನೆಯಲ್ಲಿ ದೊಡ್ಡವರಾರೂ ಇಲ್ಲ. ಆದ್ದರಿಂದ ಈ ವಿಷಯವನ್ನೂ ಸಹ ನಾನೇ ಯೋಚಿಸಬೇಕಾಗಿ ಬಂದಿದೆ. ನಿನ್ನ ಇಷ್ಟವೇನೋ ಹೇಳಿಬಿಡು' ಎಂದು ಹೇಳಿದೆ. ಅವಳು ಅದಕ್ಕೇನೂ ಮಾತನಾಡಲಿಲ್ಲ. ಆಮೇಲೆ, ಮೂರು ದಿನಗಳಾದ ಮೇಲೆ, ಇದೇ ಪ್ರಶ್ನೆಯನ್ನು ಕೇಳಿದೆ. ಅವಳು 'ನಿನ್ನ ಇಷ್ಟ ನನ್ನನ್ನೇಕೆ ಕೇಳುತ್ತೀ?'

ಎಂದಳು. 'ಮಾವಾ' ಎನ್ನಲಿಲ್ಲ. ಹಾಗೆ ಕರೆಯಲ್ಲ. ನಕ್ಕು ನಾಚಲೂ ಇಲ್ಲ. ನನ್ನ ಹೃದಯದಲ್ಲಿ ಛಟಿಲ್ ಎಂದು ಸಿಡಿಲು ಹೊಡೆದಂತಾಯಿತು. ನನಗೇನೂ ತೋಚದಾಯಿತು. ಆಸೆ ಎನ್ನುವುದು ಆವರೆಗೇನಾದರೂ ಒಂದಿಷ್ಟಾದರೂ ನನ್ನ ಮನಸ್ಸಿನಲ್ಲಿದ್ದಿದ್ದರೆ–ಆ ಒಂದಿಷ್ಟು ತುಣುಕು ಆಸೆಯೂ ಆ ದಿನ, ಆ ನಿಮಿಷದಲ್ಲಿ ಮಂಗಮಾಯವಾಗಿಬಿಟ್ಟಿತು. ಆದರೇನು? ಅವಳು–ನನ್ನ ಸೋದರ ಮಾವನ ಮಗಳು. ನನಗಾಗಿಯೇ ಗೊತ್ತುಮಾಡಲ್ಪಟ್ಟ ಹೆಣ್ಣು. ಮದುವೆಯಾಗುವುದು ನನ್ನ ಕೈಯೊಳಗಿನ ಮಾತು ; ನನ್ನ ಕೈಯಲ್ಲಿನ ಕೆಲಸ. ಮದುವೆಗೆ ಅವಳು ಊಹುಂ ಎನ್ನಲು ಸಾಧ್ಯವಿಲ್ಲ. – ಈ ಸಂಗತಿಗಳೆಲ್ಲಾ ಕಲೆತು – ನನ್ನ ಮನಸ್ಸಿನಿಂದ ಸಂಪೂರ್ಣವಾಗಿ ಕತ್ತರಿಸಿಹೋಗಿರುವ ಆಸೆಯನ್ನು – ಕತ್ತರಿಸಿಹೋಗಿಲ್ಲ ಎಂಬ ಹಾಗೆ ಕಾಣಿಸುವಂತೆ ಮಾಡಿದುವು. ದಿನಗಳು ಒಂದಾದ ಮೇಲೊಂದರಂತೆ ಉರುಳತೊಡಗಿದುವು.

ಒಂದು ದಿನ ನಾನು ಹೊಲದಿಂದ ಮನೆಗೆ ಬಂದೆ. ಬಾಗಿಲಲ್ಲಿ ಯಾರೂ ಇರಲಿಲ್ಲ. ಚಿಕ್ಕ ತಮ್ಮ ಶಾಲೆಗೆ ಹೋಗಿದ್ದ. ಒಳಗೆ ಹೋದೆ. ಹಗಲು ಎರಡು ಜಾವದ ಹೊತ್ತಾಗಿದ್ದರೂ ಮನೆಯಲ್ಲಿ ಅಡುಗೆ ಮಾಡಿದ ಲಕ್ಷಣವಾವುದೂ ಕಂಡುಬರಲಿಲ್ಲ. ಹಸಿವಾಗುತ್ತಿತ್ತು. ಹಿತ್ತಿಲ ಕಡೆಗೂ ಹೋಗಿ  ನೋಡಿದೆ. ಅಲ್ಲಿಯೂ ಯಾರೂ ಕಂಡುಬರಲಿಲ್ಲ. ಕೋಣೆಯೊಳಗೆ ಹೋದೆ. ಮಲಗಿದ್ದಳು. ಅವಳನ್ನು ಎಬ್ಬಿಸಿ, 'ಈ ದಿನ ಅಡುಗೆಯೇಕೆ ಮಾಡಲಿಲ್ಲ? ತಂಗ್ಯಮ್ಮ ಎಲ್ಲಿಗೆ ಹೋಗಿದ್ದಾಳೆ ?' ಎಂದು ಕೇಳಿದೆ. ಅವಳು 'ಈ ದಿನ ನನಗೆ ಸುಸ್ತಾಗಿದೆ. ಆಕೆ ಎಲ್ಲಿಗೆ ಹೋದಳೋ' ಎಂದಳು. 'ಮನೆಯಲ್ಲಿ ಅಡುಗೆಯೇ ಮಾಡಿಲ್ಲವೇಕೆ?' ಎಂದು ಮತ್ತೊಮ್ಮೆ ಕೇಳಿದೆ. 'ಆಕೆ ಮಾಡಿರುವಳೇನೋ ಅಂತ ಅಂದುಕೊಂಡೆ' ಎಂದಳು. 'ಎಲ್ಲಿಗೆ ಹೋದಳೋ ಹೋಗಿ ನೋಡ್ಕೊಂಡು ಬಾ' ಎಂದೆ. ಅವಳು ಹೋಗಿ ಪಕ್ಕದ ಮನೆಯಲ್ಲಿದ್ದ ನನ್ನ ತಂಗಿಯನ್ನು ಕರೆದುಕೊಂಡು ಬಂದಳು. ನಾನು 'ಅಡುಗೆ ಮಾಡದೆ ಎಲ್ಲಿಗೆ ಹೋಗಿದ್ದೆಯಮ್ಮಾ?' ಎಂದು ಕೇಳಿದೆ. ಇಬ್ಬರೂ ನಿಂತಲ್ಲಿಯೇ ಕುಳಿತು ತಟಕ್ಕನೆ ಅಳಲಾರಂಭಿಸಿದರು ! ನನಗೇನೂ ತೋಚಲಿಲ್ಲ. ಅದೇಕೆ ಅಳುತ್ತಿರುವರೋ ನನಗೆ ತಿಳಿಯದಾಯಿತು. ಒಬ್ಬರೂ ಕಾರಣ ಹೇಳರು. ಸ್ವಲ್ಪ ಹೊತ್ತಾದ ಮೇಲೆ ಇಬ್ಬರು ದಡ ಬಡನೆದ್ದು ಹೋಗಿ ಆ ಕೆಲಸ ಈ ಕೆಲಸಗಳನ್ನು ಮುಗಿಸಿ, ಅಡುಗೆ ಮಾಡಿದರು. ಆಮೇಲೆ ನಾನು ಮತ್ತೆ ಹೊಲಕ್ಕೆ ಹೋದೆ. ಮರುದಿನ ಪುನಃ ಎರಡನೇ ಜಾವಕ್ಕೆ ಮನೆಗೆ ಬಂದರೆ, ಮನೆಯಲ್ಲಿ ಸಣ್ಣದಾಗಿ ಕೇಕೆಗಳು ಕೇಳಿಸಿದುವು– ನನ್ನ ಮಾವನ ಮಗಳು– 'ನನಗಿಷ್ಟ ಬಂದವನನ್ನು ಮಾಡಿಕೊಳ್ಳುವೆ. ಅದೆಲ್ಲ ನಿನಗೇಕೆ?' ಎನ್ನುತ್ತಿದ್ದಳು. ನನ್ನ ತಂಗಿ 'ನಮ್ಮಣ್ಣಯ್ಯನನ್ನು ಮಾಡಿಕೊಳ್ಳಲು ನಿನಗಿಷ್ಟವಿಲ್ಲದಿದ್ದಲ್ಲಿ ಸುಮ್ಮಸುಮ್ಮನೆ ಅವನಿಗೇಕೆ ಆಸೆ ತೋರಿಸ್ತಾ ಇದೀಯೆ ? ಅವನಿಗೂ ಈ ಎಲ್ಲಾ ತೊಂದರೆ ಏಕೆ ? ಸುಮ್ಮನೆ ನಿನಗೇಕೆ ಈ ಬಿಟ್ಟಿ ಚಾಕರಿ ಮಾಡಬೇಕು ಅವ್ನು?' ಎಂದಳು. ಅದಕ್ಕೆ ಅವಳು– 'ಯಾರು ಮಾಡೆಂದರು ? ನಾನು ಮಾಡು ಅನ್ನಲಿಲ್ಲವಲ್ಲ?' ಎಂದಳು.

ನಾನು ಬಾಗಿಲ ಮರೆಯಲ್ಲಿ ಸದ್ದು ಮಾಡದೆ ನಿಂತು ಈ ಎಲ್ಲ ಮಾತುಗಳನ್ನು ಕೇಳಿಸಿಕೊಂಡೆ–ನನ್ನ ತಂಗಿ 'ಹೌದು, ಅವನು ಜೀತದಾಳೇ ಸರಿ! ಅಲ್ಲದೆ ನಮ್ಮನ್ನೂ ಕರೆತಂದು

ನಿಮ್ಮನ್ನೇಲಿಟ್ಟಿದಾನೆ. ನಿಮ್ಮದನ್ನೇ ನಾವು ತಿನ್ನುತ್ತಿರೋದಲ್ಲದೆ ಅವನನ್ನು ನೀನು ಮದುವೆ ಮಾಡಿಕೋ ಅಂತ ಹೇಳಿದ್ದು ನನ್ನದೇ ತಪ್ಪು' ಎಂದುಬಿಟ್ಟಳು. ಅದಕ್ಕೆ ಅವಳು 'ನೀವು ನಮ್ಮದೇನು ತಿನ್ನುತ್ತಿಲ್ಲ. ಆತ ದವಸಧಾನ್ಯವನ್ನು ಮಾರಾಟ ಮಾಡಿ ಸಂಪಾದಿಸಿದಾನೆ. ನಿಮಗಿಡುತ್ತಿದ್ದಾನೆ. ಅಲ್ಲದೆ ಆತನನ್ನು ನಾನು ಮದುವೆ ಮಾಡಿಕೋಬೇಡವೆಂದೆನೇ ? ಎತ್ತನ್ನು ಕೇಳಿ ಯಾರಾದರೂ ಗಂಟೆಕಟ್ತಾರ್ಯೇ ? ನನ್ನನ್ನು ಕೇಳಿ ಮಾಡಿಕೋಬೇಕೇ?' ಎಂದಳು. ನಾನಾಗ ತಟಕ್ಕನೆ ಒಳಗೆ ಹೋದೆ. ನನ್ನನ್ನು ನೋಡುತ್ತಲೇ ಅವರಿಬ್ಬರೂ ಕಕ್ಕಾಬಿಕ್ಕಿಯಾದರು. 'ಏನಮ್ಮಾ, ಈ ದಿನವೂ ಅಡುಗೆ ಮಾಡಿಲ್ಲವೇ?' ಎಂದು ಕೇಳಿದೆ. ನನ್ನ ಮಾವನ ಮಗಳು ತಟಕ್ಕನೆ ಎದ್ದು ಅಡುಗೆ ಮಾಡುವುದರಲ್ಲಿ ನಿರತಳಾದಳು. ನನ್ನ ತಂಗಿ ಕೋಣೆಗೆ ಹೋಗಿ ಮಲಗಿಬಿಟ್ಟಳು. ನಾನು ಊಟ ಮಾಡುತ್ತಾ 'ನಿನ್ನೆ ಮನೆಯಲ್ಲಿ ನೀವಿಬ್ಬರು ಜಗಳಾ ಕಾದು ತಾನೇ ಅಡುಗೆ ಮಾಡಿರಲಿಲ್ಲಾ ?' ಎಂದು ಕೇಳಿದೆ. ಅದಕ್ಕೆ ನನ್ನ ಮಾವನ ಮಗಳು 'ಮಾವಯ್ಯಾ, ನೀನು ನನ್ನನ್ನೇಕೆ ಬೇಗ ಮದುವೆ ಮಾಡಿಕೊಳ್ಳೋಲ್ಲ? ಮನೆಯಲ್ಲಿನ ಮಾತು; ಕೈಯಲ್ಲಿನ ಕೆಲಸ. ಹಣವಿಲ್ಲಾಂತ ಹಿಂದು ಮುಂದು ನೋಡಬೇಡ. ಕೂಡಲೇ ಮುಹೂರ್ತ ನಿಶ್ಚಯಿಸಿಬಿಡು!' ಎಂದಳು. 'ನನ್ನನ್ನು ಮಾಡಿಕೊಳ್ಳಲು ನಿನಗಿಷ್ಟವಿಲ್ಲವಲ್ಲಾ ?' ಎಂದೆ. ಅವಳು ಮೇಲೆದ್ದು ನಿಂತುಕೊಂಡಳು; ಕಣ್ಣು ತುಂಬ ನೀರು ತಂದುಕೊಂಡಳು. ಸ್ವಲ್ಪ ಹೊತ್ತು ಸುಮ್ಮನಿದ್ದು 'ಇಷ್ಟವಿಲ್ಲಾಂತ ಯಾರ ಹತ್ತಿರ ಹೇಳಿದೇನೆ' ಎಂದಳು. 'ನೀನು ಆ ಹುಡುಗಿಗೆ ಹೇಳಿದ ಮೇಲಲ್ಲವೇ ಅವಳು ನಿನ್ನ ಕೈಲಿ ಜಗಳ ಕಾದಿದ್ದು' ಎಂದೆ. ಅದಕ್ಕವಳು 'ಎಲ್ಲಾ ಅವಳೇ ಆಡಿದ್ದು. ನಾನೇನೂ ಅನ್ನಲಿಲ್ಲ' ಎಂದಳು. 'ನಿನ್ನದೇ ತಪ್ಪು. ಅವಳು ಹುಚ್ಚು ಹುಡುಗಿ. ಅಂಥವಳಿಗೆ ನೀನು ಓದು ಕಲಿಸಿ ಪ್ರಪಂಚವನ್ನು ತಿಳಿದುಕೊಳ್ಳುವಂತೆ ಮಾಡಿ ಅವಳನ್ನು ನೀನೇ ಹಾಳು ಮಾಡಿದೆ' ಎಂದೆ. ಅವಳು ಮತ್ತೆ ಮಾತಾಡಲಿಲ್ಲ.

ಆ ದಿನ ರಾತ್ರಿ ನಾನು ಜಗುಲಿಯ ಮೇಲೆ ಮಲಗಿರಲು ಅವಳು ಬಾಗಿಲು ತೆರೆದುಕೊಂಡು ಹೊರ ಬಂದಳು. ನನಗೆ ನಿದ್ರೆ ಬಂದಿರಲಿಲ್ಲ. ಏಕೆಂದರೆ, ನನಗೆ ಈಗೊಂದು ವರ್ಷದಿಂದ ಮೆತ್ತನೆಯ ಗಾದಿಯ ಮೇಲೆ ಮಲಗಿಕೊಂಡು ಅಭ್ಯಾಸವಾಗಿಬಿಟ್ಟಿತ್ತು. ಕೋಣೆಯಲ್ಲಿನ ಮಂಚದ ಮೇಲಿಂದ ಆ ಮೆತ್ತೆಯನ್ನು ಈಚೆಗೆ ತೆಗೆದುಕೊಂಡು ಉಪಯೋಗಿಸಿದರೆ ಹಾಳಾಗಿಬಿಡುತ್ತದೆಂದು ಈಚೆಗೆ ತರುತ್ತಿರಲಿಲ್ಲ. ಮೆತ್ತೆಯ ಮೇಲೆ ಮಲಗಿಕೊಳ್ಳುವ ಸುಖ–ಆ ಮನೆಯಲ್ಲಿ ನನಗೊಬ್ಬನಿಗೇನೇ. ಅಂಥಾದ್ದು ಅಂದು ಜಗುಲಿಯ ಮೇಲೆ ಚಾಪೆ ಹಾಸಿಕೊಂಡು ಮಲಗಿಕೊಂಡಿದ್ದರಿಂದ, ಹಾಸಿಗೆ ಮೆತ್ತಗಿಲ್ಲದ್ದರಿಂದ ನಿದ್ರೆ ಹತ್ತಿರಲಿಲ್ಲ. ಒಂದೇ ವರ್ಷದೊಳಗೆ ನನಗೆಷ್ಟು ಸುಖ ಹಬ್ಬಿಕೊಂಡುಬಿಟ್ಟಿತಲ್ಲಾ !–ಎಂದುಕೊಂಡೆ. ನನ್ನ ಮಾವನ ಮಗಳು ನಾನು ಹಾಗೆ ಹೀಗೆ ಹೊರಳಾಡುವುದನ್ನು ಕಂಡು 'ಮಾವಯ್ಯ, ಕೋಣೆಯಲ್ಲಿ ಮಲಗಬಾರದೇ ?' ಎಂದಳು. ಇಷ್ಟು ಮಾತ್ರದ ಮೃದು ಮಾತನ್ನು ನನ್ನೊಂದಿಗೆ ಈ ಮಧ್ಯೆ ಎಂದೂ ಅವಳು ನುಡಿದಿರಲಿಲ್ಲ ! ಆದರೆ ನನಗೆ ಕೂಡಲೇ ಕೋಪ ಬಂದುಬಿಟ್ಟಿತು ! 'ನಾನೆಲ್ಲಿ ಬಿದ್ದುಕೊಂಡರೆ ಏನಂತೆ !' ಎಂದುಬಿಟ್ಟೆ ಅವಳು ಹಾಗೆಯೇ

ಬಾಗಿಲ ಚೌಕಟ್ಟಿನಲ್ಲಿ ಒಂದರೆಕ್ಷಣ ನಿಂತಿದ್ದು, ಬಳಿಕ ಮನೆಯೊಳಗೆ ಹೋಗುತ್ತಾ ಚಿಲಕ ಹಾಕಿಕೊಂಡು ಹೋಗಿಬಿಟ್ಟಳು !

ಆ ಮರುದಿನ ರಾತ್ರಿಯೂ ನಾನು ಮತ್ತೆ ಜಗುಲಿಯ ಮೇಲೆ ಹಾಸಿಕೊಳ್ಳಲೆಂದು ಚಾಪೆ ಕೈಗೆತ್ತಿಕೊಂಡು ಹೊರಡುವುದರಲ್ಲಿದ್ದೆ ಅಷ್ಟರಲ್ಲಿಯೇ ಅವಳು ಅಡ್ಡಬಂದು, ಚಾಪೆಯನ್ನು ಕಿತ್ತುಕೊಂಡು 'ಮಾವಯ್ಯಾ, ಕೋಣೆಯಲ್ಲಿಯೇ ಮಲಗಿಕೋ. ನಿನಗಷ್ಟೊಂದು ಕೋಪವಿದ್ದ ಪಕ್ಷಕ್ಕೆ ಈ ಮನೆ ಬಿಟ್ಟು ನಾನು ಹೊರಟುಹೋಗುತ್ತೇನೆ. ನನ್ನ ಮೇಲೆ ನಿನಗೂ ಕೋಪವೇ, ಅತ್ತಿಗೆಗೂ ಕೋಪವೇ. ನಿನಗೆ ನನ್ನ ಮೇಲೆ ಇಷ್ಟವಿಲ್ಲವೇ ಹೋದರೆ, ನಿನ್ನ ಮನೆ ಬಿಟ್ಟು ಹೊರಟುಹೋಗುತ್ತೇನೆ' ಎಂದಳು. ನಾನು ಕೋಪವನ್ನು ಸಹಿಸದಾದೆ– 'ನಮಗಿಷ್ಟವಿಲ್ಲದೇ ಹೋದರೆ ನೀನೇಕೆ ಮನೆ ತೊರೆದು ಹೋಗುತ್ತೀಯೆ? ನಿನಗಿಷ್ಟವಿಲ್ಲದಾದರೆ ನಾವೇ ಹೊರಟುಹೋಗಬೇಕಾಗಲೀ!' ಎಂದೆ. ಅವಳು ತಾನು ಕಿತ್ತುಕೊಂಡ ಚಾಪೆಯನ್ನು ನನ್ನ ಕೈಗಿತ್ತು ಹೊರಟುಬಿಟ್ಟಳು. ನಾನು ಹೊರಕ್ಕೆ ನಡೆದು, ಜಗುಲಿಯ ಮೇಲೆಯೇ ಮಲಗಿಕೊಂಡೆ

ಹತ್ತು ದಿನಗಳು ಗತಿಸಿದುವು. ನನ್ನ ಸೋದರಮಾವನ ಮಗಳು ಇದುವರೆಗೆ ಎಂದೂ ಮನೆ ಬಿಟ್ಟು ಹೊರ ಹೊರಟವಳಲ್ಲ. ಆದರೆ ಈ ಹತ್ತು ದಿನಗಳೂ ಬೆಳಗ್ಗೆಯೇ ಎಲ್ಲಿಗೋ ಹೋಗಿಬಿಡುತ್ತಿದ್ದಳು. ಎರಡನೇ ಜಾವವಾದ ಮೇಲೆ ಮನೆಗೆ ಹಿಂತಿರುಗುತ್ತಿದ್ದಳು. ಊಟ ಮಾಡಿ ಮತ್ತೆ ಹೊರಟುಬಿಡುತ್ತಿದ್ದಳೋ, ಸಂಜೆಗತ್ತಲಾದ ಮೇಲೆ ಹಿಂತಿರುಗಿ ಬರುತ್ತಿದ್ದಳು. ಎಲ್ಲಿಗೆ ಹೋಗುತ್ತಿದ್ದಳು. ನಾನು ಕೇಳಿದರೆ ಸರಿಯಾಗಿ ಉತ್ತರಿಸಲಿಲ್ಲ. ಆ ಹತ್ತನೆಯ ದಿನ – ರಾತ್ರಿ ನಾನು ಕೋಣೆಯಲ್ಲಿ ಮಲಗಿಕೊಂಡೆ. ಅವಳು ನನ್ನ ಬಳಿಗೆ ಬಂದಳು'ಮಾವಯ್ಯಾ, ನಮ್ಮ ತಂದೆ ನನ್ನ ಹೆಸರಿಗೆ ಬರೆದ ಹೊಲಗಳನ್ನು ನಿನ್ನ ಹೆಸರಿಗೆ ಮಾಡಿಸೋಣ ಅಂತ ಈ ಹತ್ತು ದಿನಗಳು ಅವರಿವರನ್ನು ಕೇಳಿ ನೋಡಿದೆ. ನನಗೆ ಹದಿನೆಂಟನೇ ವರ್ಷ ಬರುವತನಕ ನಾನು ಬರೆಯಕೂಡದಂತೆ. ಹಾಗೆ ಬರೆದರೆ ಅದು ನಡೆಯೋಲ್ಲವಂತೆ. ಇನ್ನು ಮೂರು ವರ್ಷಗಳಾದ ಮೇಲೆ ಹೊಲಗಳನ್ನು ನಿನ್ನ ಹೆಸರಿಗೇನೇ ಬರೆದುಬಿಡುತ್ತೇನೆ. ನನಗೇನೂ ಬೇಕಾಗಿಲ್ಲ' ಎಂದಳು. 'ಅಂದರೆ ನೀನು ನನ್ನನ್ನು ಲಗ್ನವಾಗೋಲ್ಲವೆಂದೇ? ಲಗ್ನವಾದರೆ ನಿನ್ನದೆಲ್ಲವು ನನ್ನದೇ ಅಲ್ಲವೇ? ಆಗ ಹೊಲಗಳನ್ನು ನನ್ನ ಹೆಸರಿಗೆ ಬರೆಯುವ ಅಗತ್ಯವೇ ಇಲ್ಲವಲ್ಲಾ!' ಎಂದೆ. ಅವಳು ಆ ನಿಂತ ನಿಲುವಿನಲ್ಲಿಯೇ ಅಳಲುಪಕ್ರಮಿಸಿದಳು. ಸ್ವಲ್ಪ ಹೊತ್ತಿನ ಬಳಿಕ 'ನಾನು ಹಾಗೆ ಅಂದುಕೊಳ್ಳಲಿಲ್ಲ' ಎಂದಳು. ನಾನು ಎದ್ದು ಹೋಗಿ ಅವಳ ಕಣ್ಣೀರನ್ನು ತೊಡೆದು 'ಅಳಬೇಡ. ನಿಮ್ಮ ತಾಯಿ ಸತ್ತುಹೋದುದರಿಂದ ನೀನು ತಾಯಿಯಿಲ್ಲದ ತಬ್ಬಲಿ ಹೆಣ್ಣಾದೆ. ನಾನು ಈ ಮದುವೆಯೊಂದನ್ನು ಅಡ್ಡವಿಟ್ಟು ನಿನ್ನನ್ನು ಬಾಧಿಸಿದೆ. ನಾನೇನಾದರೂ ತಪ್ಪು ಮಾಡಿದ್ದರೆ ನನ್ನನ್ನು ಕ್ಷಮಿಸು' ಎಂದು ನುಡಿದೆ. ಅವಳು ತನ್ನೆರಡೂ ಕೈಗಳನ್ನು ನನ್ನ ಭುಜದ ಮೇಲಿರಿಸಿದಳು. ನಾನವಳನ್ನು ಗಟ್ಟಿಯಾಗಿ ಆಲಿಂಗಿಸಿಕೊಂಡೆ. ಆ ಸಮಯದಲ್ಲಿ ಅವಳ ಶರೀರವೆಲ್ಲಾ ನನ್ನ ಶರೀರಕ್ಕೆ ಆನಿಕೊಂಡಿತ್ತು ಅವಳ ಯೌವನವೆಲ್ಲಾ ಒಗ್ಗೂಡಿ ಬಂದು ನನ್ನನ್ನು ತಾಕಿದಂತಾಯಿತು. ನಾನು ಮೈಮರೆಯತೊಡಗಿದೆನಾದರೂ ಆ ಸಮಯದಲ್ಲಿ

ನಾನು ಸಂಪೂರ್ಣವಾಗಿಯಾದರೂ ಮೈಮರೆತುಬಿಟ್ಟಿದ್ದಿದ್ದರೆ ಖಂಡಿತ ನಾನು ಅದೃಷ್ಟಶಾಲಿಯೇ ಆಗುತ್ತಿದ್ದೆ ! ಆದರೆ ನನ್ನ ಬುದ್ಧಿ ಕೊಂಚ ತಿಳಿಯಾಗಿ ಕೇವಲ ಅವಳನ್ನು ಮುತ್ತಿಟ್ಟುಕೊಳ್ಳಹೋದೆನಷ್ಟೆ. ಅವಳು ನನ್ನ ಆಲಿಂಗನವನ್ನು ಬಿಡಿಸಿಕೊಂಡು ಕೂಡಲೇ ನನ್ನ ಕೋಣೆಯಿಂದ ಹೊರಟುಹೋಗಿಬಿಟ್ಟಳು.

ನನಗೆ ಆಶ್ಚರ್ಯವಾಯಿತು. ನನ್ನ ಕೋರಿಕೆ ಈಡೇರುತ್ತಿದೆಯೋ, ಈಡೇರುತ್ತಿಲ್ಲವೋ? ನನ್ನ ಹೃದಯಾಂತರಾಳದ ಅಂತರಾಳದಲ್ಲಿ ಈಡೇರುವುದಿಲ್ಲವೆಂದೇ ನನಗನ್ನಿಸುತ್ತಿತ್ತು. ಆದರೆ ಮೇಲೆ ಮಾತ್ರ ಈಡೇರುತ್ತದೆನ್ನಿಸುತ್ತಿತ್ತು; ಈ ಅಡ್ಡಿಯೊಂದು ಅಡ್ಡಿಯಲ್ಲವೆನ್ನಿಸುತ್ತಿತ್ತು. ಬೆಳಕು ಹರಿಯಿತು.

ಮರುದಿನ ನನ್ನ ಚಿಕ್ಕಮ್ಮನ ಮಗ ಊರಿನಿಂದ ಬಂದ. ಅವನು ಬಂದಾಗ ನಾನು ಮನೆಯಲ್ಲಿರಲಿಲ್ಲ. ಅವನು ನನ್ನ ತಂಗಿಯನ್ನು ನೋಡಿದ್ದ. ನಾನು ಮನೆಗೆ ಬಂದಾಗ ಅವರು ಮೂವರೂ ಮಾತನಾಡುತ್ತಾ ಕುಳಿತಿದ್ದರು. ನನ್ನನ್ನು ನೋಡಿ ನನ್ನ ಸೋದರಮಾವನ ಮಗಳು ಎದ್ದು ನಿಂತಳು. ನನ್ನ ಚಿಕ್ಕಮ್ಮನ ಮಗ 'ಭಾವಾ, ನೀನೊಂದು ಸಲ ಊರಿಗೆ ಬಂದು ಹೋಗಬೇಕೆಂದು ಅಮ್ಮ ತಿಳಿಸಿದಾಳೆ' ಎಂದ 'ನಾವಿಬ್ಬರೂ ಈ ದಿನವೇ ಹೊರಡದಿದ್ದರೆ ಅಮ್ಮನೇ ಇಲ್ಲಿಗೆ ಬಂದುಬಿಡುತ್ತಾಳೆ !' ಎಂದ. 'ಸರಿ, ಮತ್ತೂ ಒಳ್ಳೆಯದೇ ಆಯ್ತಲ್ಲ. ನಾನು ಈ ಎರಡು ದಿನಗಳವರೆಗೆ ಎಲ್ಲಿಗೂ ಕದಲುವಂತಿಲ್ಲ ಕಣಯ್ಯ' ಎಂದೆ.

ಆ ಎರಡು ದಿನಗಳೂ ಮನೆಯಲ್ಲಿ ತೆರತೆರನಾದ ಸಂಗತಿಗಳು ನಡೆದುವು. ಆ ರಾತ್ರಿ ನಾವೆಲ್ಲಾ ಊಟಕ್ಕೆ ಕುಳಿತಿದ್ದೆವು. ನನ್ನ ತಮ್ಮ ಆಗಲೇ ಊಟ ಮುಗಿಸಿ ಮಲಗಿಬಿಟ್ಟಿದ್ದ. ನಮ್ಮಿಬ್ಬರಿಗು ನನ್ನ ಸೋದರಮಾವನ ಮಗಳೇ ಬಡಿಸುತ್ತಿದ್ದಳು. ನನ್ನ ತಂಗಿ ದೂರದಲ್ಲಿ ನಿಂತಿದ್ದಳು. ನನ್ನ ಚಿಕ್ಕಮ್ಮನ ಮಗ ನನ್ನ ತಂಗಿಯನ್ನು ಉದ್ದೇಶಿಸಿ, 'ನೀನು ಬಡಿಸಬಾರದೇ? ಮನೆಯ ಹೆಣ್ಣುಮಗಳು ಬಡಿಸುವುದೆಂದರೇನು?' ಎಂದು, ನನ್ನ ಮಾವನ ಮಗಳು 'ಅವಳ ಮನೆ ಯಾವುದೋ ಅಲ್ಲಿಯೇ ಬಡಿಸುತ್ತಾಳೆ !' ಎಂದಳು. ಅದಕ್ಕೆ ನನ್ನ ತಂಗಿ 'ನನ್ನ ಮನೆ ಯಾವುದೇನು ಬಂತು ?' ಎಂದಳು. ಅದಕ್ಕೆ ಅವಳು 'ನನಗೇನು ಗೊತ್ತು ? ಈತನಿಗೆ ಗೊತ್ತೋ ಏನೋ !' ಎಂದು ನನ್ನ ಚಿಕ್ಕಮ್ಮನ ಮಗನನ್ನು ತೋರಿಸಿದಳು. ನನ್ನ ತಂಗಿ 'ಯಾವ ಮನೆಯಾದರೂ ಸರಿಯೇ. ನಾನೇನೋ ಹುಚ್ಚಿ. ನನಗೊಂದು ಮನೆ ಎಂಬುದಿದೆಯೇ? ನಿನ್ನ ದಯೆ ಅಣ್ಣಯ್ಯನ ದಯೆ, ಇದ್ದರೆ ಯಾವ ಮನೆಯಲ್ಲಾದರೂ ಸರಿಯೇ ಅಡುಗೆ ಮಾಡಿಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ' ಎಂದಳು. ನನ್ನ ಚಿಕ್ಕಮ್ಮನ ಮಗ ತಲೆ ಬಾಗಿಸಿದ. 'ಏನಯ್ಯಾ, ತಲೆ ತಗ್ಗಿಸಿದೆಯಲ್ಲಾ? ನಿನಗೊಪ್ಪಿಗೆಯೋ ಹೇಗೆ?' ಎಂದು ಕೇಳಿದೆ. ನನ್ನ ಮಾವನ ಮಗಳು 'ಅವಳು ಹುಚ್ಚಿಯೆಂಬುದೊಂದೇ ಅಡ್ಡಿ. ಇಲ್ಲದೇ ಇದ್ದರೆ ಒಪ್ಪಿಗೆಯೇ' ಎಂದಳು. 'ಅತಿ ಬುದ್ಧಿಗಿಂತ ಹುಚ್ಚೇ ಮೇಲು!' ಎಂದೆ ನಾನು !

ಮೂರನೆಯ ದಿನ ಊರಿನಿಂದ ನನ್ನ ಚಿಕ್ಕಮ್ಮ ಬಂದಳು. ಆಕೆ ಎರಡು ಮೂರು ದಿನಗಳಿದ್ದಳು. ನನ್ನ ತಂಗಿಯನ್ನು ನೋಡಿ ಆಕೆ ತುಂಬ ಆಶ್ಚರ್ಯಚಕಿತಳಾದಳು. ನನ್ನ

ತಂಗಿ ನೂರಕ್ಕೋ, ಲಕ್ಷಕ್ಕೋ, ಯಾವಾಗಲೋ ಒಮ್ಮೆ ಹುಚ್ಚಿಯಂತೆ ಮಾತನಾಡುತಿದ್ದಳಾಗಲೀ, ಉಳಿದ ಹೊತ್ತಿನಲ್ಲೆಲ್ಲಾ ಚೆನ್ನಾಗಿಯೇ ಮಾತನಾಡುತ್ತಿದ್ದಳು. ಒಮ್ಮೊಮ್ಮೆ ಚಮತ್ಕಾರವಾಗಿಯೂ ಮಾತನಾಡುತ್ತಿದ್ದಳು. ಇಷ್ಟು ಬುದ್ಧಿವಂತಳು ಹೇಗಾದಳಪ್ಪಾ! ಎಂದು ನನ್ನ ಚಿಕ್ಕಮ್ಮನಿಗೆ ಆಶ್ಚರ್ಯದ್ದ! 'ಅಪ್ಪಾ ಮಗೂ ! ನೀನು ದೇವರು ಕಣೋ ! ಹುಚ್ಚರನ್ನು ಒಳ್ಳೆಯವರನ್ನಾಗಿ ಮಾಡುತ್ತೀಯೆ, ದಿಕ್ಕಿಲ್ಲದವರಿಗೆ ದಿಕ್ಕು ತೋರಿಸುತ್ತೀಯೆ' ಎಂದು ನನ್ನನ್ನು ಹೊಗಳಲು ಮೊದಲಿಟ್ಟಳು. 'ಚಿಕ್ಕಮ್ಮಾ, ಅವಳಿಗೆ ಮದುವೆ ಮಾಡಬೇಕು. ಯಾರಾದರೂ ಹಣ ಕೊಟ್ಟರೆ ಮಾತ್ರ ಮಾಡಿಕೊಳ್ಳಬಹುದು. ಆದರೆ ನನ್ನಲ್ಲಿ ಹಣವಿಲ್ಲ. ನನ್ನ ಸಾಕುತಂದೆ ನನಗೆ ಮಾಡಿದ ಉಪಕಾರಕ್ಕೆ ಇವಳನ್ನು ನೇರ್ಪಡಿಸಿದೆನಾದರೂ ಮದುವೆ ಮಾಡದೇ ಹೋದರೆ ನನ್ನ ಋಣ ತೀರಿದಂತಾಗುವುದಿಲ್ಲ' ಎಂದೆ ನಾನು. 'ಮಗೂ, ನಿನ್ನ ಭಾವಮೈದನನ್ನು ವಿಚಾರಿಸಿ ನೋಡು ; ಅವನು ಮಾಡಿಕೊಳ್ಳಬಹುದು' ಎಂದಳು. 'ಅವನು ಮಾಡಿಕೊಳ್ಳುವನೇ?' ಎಂದೆ. 'ನೀನೇನು ಹೇಳಿದರೆ ಅದನ್ನು ಮಾಡ್ತೇನೆ ಅಂತ ಹೇಳಿದಾನಲ್ಲಾ ! ಆಗ ಅವನು ಆಣೆಯಿಟ್ಟುಕೊಳ್ಳಹೋದರೆ ನೀನೇ ಬೇಡ ಅಂತ ಅಂದೆಯಲ್ಲ. ನೀನೊಂದು ಮಾತು ಹೇಳಿದರೆ ಮಾಡಿಕೊಳ್ಳದೆ ಏನು ಮಾಡ್ತಾನೆ ? ಯಾವ ಕೆಲಸವೇ ಆಗಲಿ ಚಿಟಿಕೆ ಹಾಕುವುದರೊಳಗೇ ಮಾಡಿಬಿಡುತ್ತಾಳೆ, ಹುಡುಗಿ. ನಾನೂ ಮುದುಕಿಯಾಗ್ತಾ ಬಂದೆ. ಇನ್ನೆಷ್ಟು ದಿನ ಗೇದೇನು ? ನೀನು ಅವನಿಗೊಂದು ಮಾತು ತಿಳಿಸು' ಎಂದಳು. ನಾನು ಆ ದಿನ ಸಂಜೆ ನನ್ನ ಚಿಕ್ಕಮ್ಮನ ಮಗನನ್ನು ಹೊಲಗಳತ್ತ ಕರೆದುಕೊಂಡು ಹೋದೆ. ಅಲ್ಲಿಗೆ ಹೋದ ಮೇಲೆ – 'ನಾನು ಏನು ಹೇಳಿದರೂ ಅದನ್ನು ಮಾಡುತ್ತೇನೆ ಅಂತ ನೀನೊಮ್ಮೆ ಹೇಳಿದ್ದೆಯಲ್ಲ ಕಣೋ !' ಎಂದೆ. ಅದಕ್ಕವನು 'ಭಾವಾ, ನೀನು ಏನು ಹೇಳಿಲ್ಲ? ನಾನೇನು ಮಾಡಿಲ್ಲ?' ಎಂದು ಕೇಳಿದ. 'ಲೋ ನಾನೊಬ್ಬ ಹುಚ್ಚಿಯನ್ನು ಮದುವೆ ಮಾಡಿಕೋ ಅನ್ನುತ್ತೇನೆ, ಮಾಡಿಕೊಳ್ಳುತ್ತೀಯಾ ?' ಎಂದೆ. ಅವನು ಕೊಂಚ ಹೊತ್ತು ಆಲೋಚಿಸಿದ. ಆಗ ನಾನು 'ನೋಡಿದೆಯಾ, ಆಲೋಚನೆ ಮಾಡುವಷ್ಟಕ್ಕೆ ಬಂತು' ಎಂದೆ. ಅದಕ್ಕವನು 'ಭಾವಾ, ನಾನು ನಿನ್ನ ಮಾತಿಗೆ ಪ್ರತಿಯಾಡುವುದಿಲ್ಲ. ಆದರೆ ಈ ವಿಷಯದಲ್ಲಿ ಅಮ್ಮನ ಅಭಿಪ್ರಾಯವನ್ನು ಕೇಳಿ ತಿಳಿದುಕೊಳ್ಳಬೇಕು' ಎಂದು ಮರುನುಡಿದ. 'ಅಮ್ಮ ಆಗಲೇ ತನ್ನ ಒಪ್ಪಿಗೆ ಕೊಟ್ಟುಬಿಟ್ಟಿದ್ದಾಳೆ' ಎಂದೆ. 'ಅಮ್ಮ ಒಪ್ಪಿಕೊಂಡರೆ ನೀನು ನನ್ನನ್ನು ಕೇಳಬೇಕಾಗಿಯೇ ಇಲ್ಲ. ನನಗಿಂತಲೂ ಆ ಹುಡುಗಿ ಕೊಂಚ ದೊಡ್ಡವಳೇನೋ! ಆದರೂ ನೀನು ಮಾಡಿಕೋ ಅಂದರೆ ನಾನು ಖಂಡಿತ ಮಾಡಿಕೊಳ್ಳುತ್ತೇನೆ. ಮದುವೆಯ ವಿಷಯವಾದ್ದರಿಂದ ಅಮ್ಮನನ್ನು ಕೇಳಿನೋಡು ಅಂತ ಹೇಳಿದೆನಾಗಲೀ, ಇಲ್ಲದೇ ಇದ್ದರೆ ಅಷ್ಟೂ ಅನ್ನುವವನಲ್ಲ. ಮೇಲಾಗಿ ಅವಳಿಗೆ ಹುಚ್ಚೆಲ್ಲಿ ಬಂತು? ಕೊಂಚ ಅಮಾಯಕಳೇನೋ ನಿಜವೇ. ಒಮ್ಮೊಮ್ಮೆ ತುಂಬ ತಿಳಿವಳಿಕೆಯಾಗಿಯೇ ಇರುತ್ತಾಳೆ. ಹಾಗಾದರೆ ಅವಳಿಗೂ ಇಷ್ಟವಿದೆ ತಾನೇ?' ಎಂದ.

ಮರುದಿನ ನಾವೆಲ್ಲರೂ ಕುಳಿತು ಮಾತನಾಡುತ್ತಿರುವಾಗ, ನನ್ನ ಚಿಕ್ಕಮ್ಮ 'ಮಗೂ, ಮದುವೆ ಯಾವಾಗ ಮಾಡಿಬಿಡುತ್ತೀಯೆ?' ಎಂದು ಕೇಳಿದಳು. 'ಈ ವರ್ಷ ಹೇಗೂ ಸಾಧ್ಯವಿಲ್ಲ. ಮುಂದಿನ ವರ್ಷಕ್ಕೇನೆ' ಎಂದೆ. 'ಸರಿ, ನಿನ್ನಿಷ್ಟ ನಿನ್ನದೂ ನಿನ್ನ ತಂಗಿಯದೂ ಒಂದೇ ಸಲಕ್ಕೆ

ಮಾಡಿ ಮುಗಿಸಿಬಿಡು. ಕೂಡಿಬರುತ್ತೆ. ಎರಡೂ ಮದುವೆಗಳನ್ನು ನನ್ನ ಮನೆಯಲ್ಲಿಯೇ ಮಾಡುತ್ತೇನೆ. ಹುಡುಗರನ್ನು ನಮ್ಮೂರಿಗೆ ಕಳಿಸಿಕೊಡು. ನಾಲ್ಕು ದಿನ ಇದ್ದು ಬರುತ್ತಾರೆ' ಎಂದಳು. ಅವರನ್ನು ತಮ್ಮೂರಿಗೆ ಕರೆದುಕೊಂಡು ಹೋದಳು.

ನಾಲ್ಕು ದಿನಗಳ ಬಳಿಕ ಅವರನ್ನು ಕರೆದುಕೊಂಡು ಬರಲು ನಾನು ನನ್ನ ಚಿಕ್ಕಮ್ಮನ ಊರಿಗೆ ಹೋದೆ. ಅಲ್ಲಿ ನಾನು ಎರಡು ಮೂರು ದಿನಗಳವರೆಗೆ ಉಳಿದುಕೊಂಡೆ. ನನ್ನ ಚಿಕ್ಕಮ್ಮ ತನ್ನ ಮಗನೊಂದಿಗೆ ಮಾತು ಮಾತಿಗೂ ನನ್ನ ತಂಗಿಯನ್ನು ಕುರಿತು, ಅವಳು ಅವನ ಹೆಂಡತಿ ಎಂಬಂತೆಯೇ ಮಾತನಾಡಿದಳು. 'ಅಮ್ಮಾ, ಚೆಂಬು ಎಲ್ಲಿದೆಯೇ?' ಎಂದೇನಾದರೂ ಅವನು ಕೇಳಿದರೆ 'ನನ್ನ ಕೇಳುತ್ತೀಯಲ್ಲಾ? ನಿನ್ನ ಹೆಂಡತಿಯನ್ನು ಕೇಳು' ಎಂತಲೂ, 'ಅಮ್ಮ ಅಡುಗೆ ಆಯ್ತಾ?' ಎಂದು ಕೇಳಿದರೆ 'ನಿನ್ನ ಹೆಂಡತಿ ಏನು ಮಾಡಿದಾಳೋ ಏನು ಬಿಟ್ಟಿದಾಳೋ, ನನಗೇನೂ ಗೊತ್ತಿಲ್ಲಪ್ಪಾ!' ಎಂತಲೂ ; ಹೀಗೆ ಸಾಗಿತು ಕಥೆ. ನಿಜ ಹೇಳಬೇಕೆಂದರೆ ನನ್ನ ತಂಗಿಯೂ ಸಹ ಅವನಿಗೇನು ಬೇಕಾಗಿ ಬಂದರೂ ಅವಳೇ ಅದನ್ನೊಯ್ದು ಕೊಡುವುದು ; ಅವನು ಬರುತ್ತಲೇ ಎದ್ದು ನಿಲ್ಲುವುದು ; ಅವನೆಂದರೆ ನಾಚುವುದು ; ಮಾಡುತ್ತಿದ್ದಳು. ಒಂದು ದಿನ ಅವನು ಅವಳೊಂದಿಗೆ ಏನೋ ನಗೆಚಾಟಿಕೆಯ ಮಾತನಾಡಿದ. ಆಗವಳು ವಿಚಿತ್ರವಾಗಿ ನಾಚಿದಳು. ನನಗೆ ಆಶ್ಚರ್ಯವಾಯಿತು. ಅವಳು ನಾಚಿದ್ದನ್ನು ನಾನೆಂದೂ ಕಂಡರಿಯೆ. ಭಗವಂತ ಸೃಷ್ಟಿ ಮಾಡುವಾಗಲೇ ಎಷ್ಟು ಚಮತ್ಕಾರ ಮಾಡಿದ್ದಾನಲ್ಲಾ ಎನ್ನಿಸಿತು. ಈ ಹುಡುಗಿ ಮೊನ್ನೆಮೊನ್ನೆಯವರೆಗೆ ಏನು ಅರಿಯದವಳಲ್ಲಾ ! ಹುಚ್ಚಿ ಎಂದುಕೊಂಡಿದ್ದೆವಲ್ಲಾ! ಇದೇನಿದು ? ಒಬ್ಬನನ್ನು ತನ್ನ ಗಂಡನೆಂದುಕೊಂಡು ಹೆಂಗಸು ಅವನ ಬಗ್ಗೆ ಇಷ್ಟು ನಾಚಿಕೆಯನ್ನು ಅಭಿವ್ಯಕ್ತಿಸುವುದೆಂದರೇನು ? ಅವಳನ್ನು ನಿಜಕ್ಕೂ ನಾನು ಮಳೆಯ ಹನಿಯೋಪಾದಿಯಲ್ಲಿ ಬೆಳೆಸಿದ್ದೇನೆ. ಅವಳಿಗೆ ಈ ಭಾವನೆಗಳು ಎಲ್ಲಿಂದ ಬಂದುವು? ನಾಚಿಕೆಪಡಬೇಕೆಂಬ ಉದ್ದೇಶ ಹೇಗೆ ಉಂಟಾಯಿತು? ಹೇಗೆ ನಾಚಬೇಕೆಂಬುದೇ ತಿಳಿಯದ ಅವಳು ನಾಚುವುದನ್ನು ಹೇಗೆ ಕಲಿತುಕೊಂಡಳು? ಎಲ್ಲಿ ಕಲಿತಳು ? ಅಸಲು ಚಿಕ್ಕ ಮಕ್ಕಳೂ ನಾಚುತ್ತವೆ. ಅವು ಎಲ್ಲಿಂದ ಕಲಿತುಕೊಳ್ಳುತ್ತವೆ? ಚಿಕ್ಕ ಮಕ್ಕಳಿಗೂ ಕೋಪ ಬರುತ್ತದೆ. ಆ ಕೋಪವೆಂಬುದು ಎಲ್ಲಿಂದ ಹೇಗೆ ಬರುತ್ತದೆ? ಅದು ಕಲಿತುಕೊಂಡರೆ ಬರುತ್ತದೆಯೇ ? ಸಹಜವಾಗಿಯೇ ಇರುತ್ತದೆಯೇ? ಸಹಜವಾಗಿಯೇ ಹೃದಯದಲ್ಲಿರುತ್ತದೆಂದುಕೊಳ್ಳುವೆ. ಅದು ವಿವೇಕದಿಂದೊಡಗೂಡಿರುತ್ತದೆ. ವಿಷಯ ತಿಳಿದುಬರುವುದರೊಂದಿಗೇನೇ ಅದೂ ಸಹ ಕೂಡಿಯೇ ಬರುತ್ತದೆಂದುಕೊಳ್ಳುವೆ. ಅದನ್ನಾರೂ ಕಲಿಸುವ ಅಗತ್ಯವಿಲ್ಲ. ಇಷ್ಟು ದಿನಗಳವರೆಗೆ ನನ್ನ ತಂಗಿಗೆ ಏನೊಂದೂ ತಿಳಿಯದು. ಅವಳಿಗೆ ಆ ವರ್ಷದಿಂದಲೇ ತಿಳಿದುಬರತೊಡಗಿತು. ಆ ತಿಳಿಯುವುದೇ ಕೋಪ ಬರುವುದು: ಆ ತಿಳಿಯುವುದೇ ನಾಚಿಕೆಪಡುವುದು ; ಆ ತಿಳಿಯುವುದೇ ಚಮತ್ಕಾರವಾಗಿ ಮಾತನಾಡುವುದು. ಅದಕ್ಕೂ ಇದಕ್ಕೂ ಹೆಚ್ಚು ವ್ಯತ್ಯಾಸ ಇಲ್ಲ.

ಮರುದಿನ ಅವರನ್ನು ಕರೆದುಕೊಂಡು ನಮ್ಮೂರಿಗೆ ಪಯಣವಾದೆ. ದಾರಿಯಲ್ಲಿ, ಗಾಡಿಯಲ್ಲಿ 'ಏನಮ್ಮಾ ಮದುವೆಯಾಗ್ತೀಯಾ ?' ಎಂದು ಕೇಳಿದೆ. ಅವಳು ಮಾತನಾಡಲಿಲ್ಲ. ಪುನಃ ಕೇಳಿದೆ. 'ಅಣ್ಣಯ್ಯಾ, ಎಷ್ಟು ದಿನ ಅಂತ ನಿನ್ನ ಮನೆಯಲ್ಲಿರಲಿ? ನಾನಿರುವುದರಿಂದಾಗಿ ಅತ್ತಿಗೆ ನಿನಗೆ ಮಾಡಬೇಕಾದ ರೀತಿಯಲ್ಲಿ ಸೇವೆ ಮಾಡುತ್ತಿಲ್ಲ. ನಾನು ಭಾವನನ್ನು ಮಾಡಿಕೊಳ್ಳುತ್ತೇನೆ' ಎಂದು ಸ್ಪಷ್ಟವಾಗಿ ನುಡಿದಳು. 'ಇಬ್ಬರ ಮದುವೆಗಳೂ ಒಂದೇ ಸಲಕ್ಕೆ ಆಗಿಬಿಡಲಿ' ಎಂದಳು. 'ನಿನಗಿದುವರೆಗೂ ಏನೂ ತಿಳಿಯದಲ್ಲಮ್ಮಾ. ಈ ಕೆಲವು ದಿನಗಳಲ್ಲಿಯೇ ಇಷ್ಟೆಲ್ಲಾ ಹೇಗೆ ತಿಳಿಯಿತಮ್ಮಾ ನಿನಗೆ ?' ಎಂದು ಕೇಳಿದೆ. 'ಅಣ್ಣಯ್ಯಾ, ನನಗೆ ಚಿಕ್ಕಂದಿನಲ್ಲಿ ಏನೂ ತಿಳಿಯುತ್ತಿರಲಿಲ್ಲ. ಆದರೆ ಆಮೇಲೆ ಎಲ್ಲ ಚೆನ್ನಾಗಿಯೇ ತಿಳಿದುಬರಲಾರಂಭಿಸಿತು. ಆದರೆ ನಾನು ಹೆಚ್ಚಿಗೆ ಯಾವಾಗಲೂ ಮಾತನಾಡುತ್ತಿರಲಿಲ್ಲ. ಅಲ್ಪಸ್ವಲ್ಪ ತಿಳಿಯುತ್ತಿರುವಾಗಲೇ ಅಪ್ಪ, ಅಮ್ಮ ಇಬ್ಬರೂ ಕಣ್ಮುಚ್ಚಿಬಿಟ್ಟರು. ಆಮೇಲೆ ಆ ಮನೆಯಲ್ಲಿ ಕಂಡಕಂಡ ಚಾಕರಿ ಮಾಡುತ್ತಾ ಅಷ್ಟು ದಿನಗಳತನಕ ಹುಚ್ಚು ಹಿಡಿದವಳ ಹಾಗೆಯೇ ಇದ್ದುಬಿಡಬೇಕಾಯಿತು. ನೀನು ನಮ್ಮನ್ನು ನಿನ್ನ ಮನೆಗೆ ಕರೆದುಕೊಂಡು ಬಂದ ಮೇಲೆ ನನಗಾ ಭಯವೇ ಹೋಗಿಬಿಟ್ಟಿತು. ಅತ್ತಿಗೆ ಓದುಬರೆಹ ಕಲಿಸಿದಳು. ಮನೆಯಲ್ಲಿ ಅತ್ತಿಗೆ ಹಾಗು ನನ್ನ ದೊಡ್ಡ ತಮ್ಮ ಇಬ್ರೂ ತುಂಬ ಚಮತ್ಕಾರವಾಗಿ ಮಾತನಾಡಿಕೊಳ್ಳುತ್ತಿದ್ದುದರಿಂದ ನನಗೆ ಯಾವುದೊ ಹೊಸ ತಿಳುವಳಿಕೆ ಬಂದಂತಾಯಿತು' ಎಂದಳು. ಹೀಗೆಯೇ ಮಾತುಕತೆಯಾಡುತ್ತಾ ನಾವು ಸ್ವಲ್ಪ ದೂರ ಸಾಗಿದ್ದೆವು. ಒಂದು ಸ್ಥಳದಲ್ಲಿ ನನ್ನ ತಂಗಿ ನನ್ನ ಮಾವನ ಮಗಳೊಂದಿಗೆ ಹೀಗೆ ನುಡಿದಳು 'ಏನಮ್ಮೊ ಅತ್ತಿಗೇ! ನಮ್ಮಣ್ಣಯ್ಯನನ್ನು ನೀನೇನಾದ್ರೂ ಮಾಡಿಕೊಳ್ಳದೇ ಹೋದ್ಯೋ ನಾನು ಬದುಕಿರುವಷ್ಟು ದಿನ ನಿನ್ನೊಂದಿಗೆ ಮಾತೇ ಆಡಲ್ಲ, ನೋಡಿಕೋ. ಇಂಥಾ ಮಹಾವ್ಯಕ್ತಿ ಎಷ್ಟು ಪುಣ್ಯ ಮಾಡಿದ್ದರೆ ತಾನೇ ದೊರೆತಾನು? ಭಾವಯ್ಯ ನನ್ನನ್ನು ಮದುವೆಯಾಗ್ತಾ ಇದಾನೆಂದರೆ ನನ್ನ ಅಂದಚೆಂದಗಳನ್ನು ನೋಡಿಯಲ್ಲ. ನನ್ನ ಆಸ್ತಿಯನ್ನು ನೋಡಿಯಲ್ಲ. ನಮ್ಮಣ್ಣಯ್ಯನ ಮಾತು ಮೀರಿ ಒಂದು ಹೆಜ್ಜೆ ಮುಂದಿಡಲಾರದೆ ಮಾಡಿಕೊಳ್ತಾ ಇದಾನೆ' ಎಂದಳು. 'ಭಾವಯ್ಯ ನಿನ್ನನ್ನು ಮಾಡಿಕೊಳ್ಳುತ್ತಾನೆಂಬುದು ಖಚಿತವಾಯಿತೇ ?' ಎಂದು ಕೇಳಿದೆ. ಅದಕ್ಕೆ ನನ್ನ ಮಾವನ ಮಗಳು 'ಖಚಿತವಾಯಿತೇ ಎಂದರೇನು? ಅತ್ತೆ ಈಕೆಯನ್ನು ಮನೆಮನೆಗೆ ಕರೆದುಕೊಂಡು ಹೋಗಿ ಊರಿಗೆಲ್ಲಾ ತೋರಿಸಿ, ತನ್ನ ಸೊಸೆ ಅಂತಲೇ ಹೇಳಿಕೊಂಡು ಬಂದಳು. ಮಗನನ್ನೂ–ಸೊಸೆಯನ್ನೂ ಒಂದೇ ಕಡೆ ಕುಳ್ಳಿರಿಸಿ ತಾಂಬೂಲವನ್ನೂ ಕೊಡಿಸಿದಳು' ಎಂದು ನುಡಿದಳು.

ರಜಾ ದಿನಗಳು ಬರುತ್ತಲೇ ನನ್ನ ತಮ್ಮನೂ, ನನ್ನ ಸೋದರಮಾವನ ಮಗನೂ ಊರಿಗೆ ಬಂದರು. ನನ್ನ ತಮ್ಮ ಈ ಒಂದು ವರ್ಷದಲ್ಲಿಯೇ ತುಂಬ ಬೆಳೆದುಬಿಟ್ಟಿದ್ದನು. ನನ್ನಷ್ಟು ಎತ್ತರಕ್ಕೆ ಬೆಳೆದುಬಿಟ್ಟಿದ್ದನು. ಗುಂಟೂರಿನಲ್ಲಿ ಯಾವುದೋ ವ್ಯಾಯಾಮ ಶಾಲೆಯಲ್ಲಿ ದಿನವೂ ದಂಡ, ಬಸ್ಕಿ ಹೊಡೆಯಲು, ಕಸರತ್ತು ಮಾಡಲು ಪ್ರಾರಂಭಿಸಿದ್ದನಂತೆ. ಹುಡುಗ ಗಟ್ಟಿಯಾಗಿ, ಇಷ್ಟಗಲಕ್ಕೆ ಎದೆ, ಹುರಿಗೊಂಡ ತೋಳುಗಳೂ–ಒಳ್ಳೇ ಪೈಲ್ವಾನನ ಹಾಗೆ

ತಯಾರಾಗಿದ್ದನು. ನನ್ನ ಸ್ನೇಹಿತ ಬರೆದುಕೊಟ್ಟು ಕಳಿಸಿದ ಪತ್ರವನ್ನು ನನ್ನ ತಮ್ಮ ನನ್ನ ಕೈಗೆ ಕೊಟ್ಟ. ಅದರಲ್ಲಿ ಹೀಗಿತ್ತು :

'ಮಿತ್ರಾ ಹುಡುಗರಿಗೆ ಈ ವರ್ಷದ ಓದು ಇಲ್ಲಿಗೆ ಮುಗಿಯಿತು. ನೀನು ಕೊಟ್ಟ ನಾಲ್ಕು ನೂರು ರೂಪಾಯಿಗಳೂ ಖರ್ಚಾಗಿ, ನೀನೇ ನನಗೆ ಇಪ್ಪತ್ತು–ಇಪ್ಪತ್ತೈದು ರೂಪಾಯಿಗಳಷ್ಟು ಬಾಕಿ. ನಿನ್ನ ತಮ್ಮನಿಗೆ ವ್ಯಾಯಾಮ ಮಾಡುತ್ತಿರುವಾಗಲೆಲ್ಲಾ – ಪ್ರತಿ ನಿತ್ಯ ಅರ್ಧ ರೂಪಾಯಿ. ಹನ್ನೆರಡಾಣೆ–ಬಾದಾಮಿ ಬೀಜಗಳಿಗೆಂದು, ಅದಕ್ಕೆ ಇದಕ್ಕೆಂದು ಖರ್ಚಾಗುತ್ತಿತ್ತು. ನಿನ್ನ ಸೋದರಮಾವನ ಮಗ ಮಾತ್ರ ವ್ಯಾಯಾಮ ಮಾಡೆಂದರೆ ಮಾಡುತ್ತಿರಲಿಲ್ಲ. ನಿನ್ನ ತಮ್ಮ ಚೆನ್ನಾಗಿ ಓದಿಕೊಂಡಿದ್ದಾನೆ. ಎಲ್ಲದರಲ್ಲೂ ಅವನದೇ ಫಸ್ಟ್ ನಂಬರುಗಳು. ಮುಂದಿನ ವರ್ಷಕ್ಕೆ ಅವನಿಗೆ ಐವತ್ತು ರೂಪಾಯಿಗಳ ಬಹುಮಾನ ಬರುವುದು. ಖಂಡಿತ ಬರುತ್ತದೆ. ಮುಂದಿನ ವರ್ಷಕ್ಕೆ ಅವನಿಗೆ ನೀನೇನೂ ಶಾಲೆಯ ಫೀ ಕಟ್ಟಬೇಕಾಗಿಲ್ಲ. ಅಂಥಾ ಹುಡುಗನನ್ನು ಓದಿಸದೆ ಬಿಡಬಾರದು. ಇನ್ನುಳಿದ ವಿಷಯಗಳನ್ನು ನಾನು ಅಲ್ಲಿಗೆ ಬಂದಾಗ ಮಾತನಾಡುವೆ.'

ಈ ಪತ್ರವನ್ನು, ಹುಡುಗರನ್ನು ನೋಡುತ್ತಿದ್ದರೆ ನನಗೆ ಎಲ್ಲಿಲ್ಲದ ಆನಂದವಾಯಿತು. ನನ್ನ ಮಾವನ ಮಗಳು–ಅವರನ್ನು ನೋಡಿ ಎಷ್ಟೊಂದು ಸಂತೋಷಪಟ್ಟಳೋ ನಾನು ಹೇಳಲಾರೆ. ಅವರು ಬರುತ್ತಲೇ ಮನೆ ಪುನಃ ಕಲಕಲಾರವ ಸಂಭ್ರಮದಿಂದಿರತೊಡಗಿತು.

೧೫

ನನ್ನ ಮಾವನ ಮಗನೂ, ನನ್ನ ತಮ್ಮನೂ ರಜಾದಿನಗಳಿಗೆ ಊರಿಗೆ ಬಂದ ಮೇಲೆ ನಮ್ಮ ಮನೆ ಸಂಭ್ರಮದಿಂದ ಶೋಭಾಯಮಾನವಾಗಿದ್ದೊಂದೇ ಅಲ್ಲದೆ, ಮನುಷ್ಯರ ಪ್ರವರ್ತನೆಗಳಲ್ಲೂ ಹೊಸತನಗಳು ಗೋಚರಿಸತೊಡಗಿದುವು. ನನ್ನ ಮಾವನ ಮಗನಿಗೆ ನಾನೆಂದರೆ ತುಂಬ ಪ್ರೇಮ. ಈ ಸಾರಿ ಗುಂಟೂರಿನಿಂದ ಬಂದ ಮೇಲೆ ನಾನೆಂದರೆ ಅವನಿಗೆ ಇದ್ದುದರಲ್ಲಿ ಇನ್ನೂ ಹೆಚ್ಚಿನ ಪ್ರೇಮ ಉಂಟಾಯಿತು. ನನಗೆ ಹಾಸಿಗೆ ಹಾಸಿಕೊಡುವುದು, ಚುಟ್ಟಾ ತಯಾರು ಮಾಡಿಕೊಡುವುದು ; ನನಗೇನು ಬೇಕಾಗಿ ಬಂದರೂ ಅದನ್ನು ತಂದುಕೊಡುವುದು; ಇಷ್ಟೆಲ್ಲಾ ಅಲ್ಲದೆ, ನನ್ನನ್ನು ಒಂದರೆಗಳಿಗೆಯೂ ಅಗಲಿ ಇರದಾದ.

ನಾನು ಹೊಲಕ್ಕೆ ಹೊರಟರೆ ನನ್ನ ಹಿಂದೆಯೇ ಬರುತ್ತಿದ್ದ. ನಸುಕಿನಲ್ಲಿಯೇ ನನ್ನೊಂದಿಗೇ ಎದ್ದುಬಿಡುತ್ತಿದ್ದ. ನನಗೆ, ಹಲ್ಲುಜ್ಜಲು ಬೇವಿನ ಮರದ ರೆಂಬೆಯನ್ನು ಕಿತ್ತು, ಕೊನೆಯನ್ನು ಮೆದುವಾಗಿಸಿ, ತಂದು ಕೊಡುತ್ತಿದ್ದ. ನನ್ನೊಂದಿಗೇ ಹೊಲಕ್ಕೆ ಬಂದುಬಿಡುತ್ತಿದ್ದ. ನಾನು ಯಾವುದೇ ಕೆಲಸ ಮಾಡುತ್ತಿದ್ದರೂ ಅವನು ಆ ಕೂಡಲೇ ಅಲ್ಲಿಗೆ ಬಂದು ತಾನಾ ಕೆಲಸ ಮಾಡಲು ತೊಡಗುತ್ತಿದ್ದ, ನನ್ನನ್ನು ಸುಮ್ಮನೆ ಕುಳ್ಳಿರಿಸಿ. 'ಬೇಡ ಕಣೋ, ನಾನೇ

ಮಾಡಿಕೊಳ್ತೇನೆ' ಎಂದರೆ 'ಭಾವಾ, ಇನ್ನೂ ಎಷ್ಟು ದಿನಾಂತ ಗೇಯ್ತೀಯೆ? ಇಷ್ಟು ದಿನ ಗೇದಿದ್ದು ಸಾಲದೆ?' ಎನ್ನುತ್ತಿದ್ದ. ನಾನು ಅವನ ಶಕ್ತಿಗೆ ಮೀರಿದ ಕೆಲಸಗಳನ್ನು ಬಿಟ್ಟು ಮಿಕ್ಕೆಲ್ಲ ಕೆಲಸಗಳನ್ನು ಮಾಡಗೊಡುತ್ತಿದ್ದೆ. ಬಿಸಿಲ ಹೊತ್ತಿನಲ್ಲಿ, ಕೆಲಸ ಬೊಗಸೆಗಳಿಲ್ಲದಿದ್ದರೆ, ನನ್ನ ಬಳಿಯಲ್ಲಿ ಕುಳಿತು, ಆ ಮಾತೂ ಈ ಮಾತೂ ಆಡುತ್ತ ಗುಂಟೂರಿನ ಸಂಗತಿಗಳನ್ನು ಹೇಳಲಾರಂಭಿಸುತ್ತಿದ್ದ. ಅಲ್ಲಿನ ಮೇಷ್ಟುಗಳು, ಹುಡುಗರು, ಹೀಗೆಯೇ ಏನೇನೋ ಚಮತ್ಕಾರವಾಗಿ ಮಾತನಾಡುತ್ತಿದ್ದ. ನನಗೆ ಅವನ ಮಾತುಗಳನ್ನು ಕೇಳುತ್ತಿದ್ದರೆ ನಗು ಬರೋದು.

ಒಂದೊಂದು ದಿನ ಮೇಷ್ಟ್ರು ಪಾಠವನ್ನೇ ಹೇಳುತ್ತಿರಲಿಲ್ಲವಂತೆ. ಇನ್ನೊಬ್ಬ ಮೇಷ್ಟ್ರು, 'ಏನ್ರೋ ಬೆಂಡೆಕಾಯಿ ಪಲ್ಯ ರುಚಿಯಾಗಿರುತ್ತೋ, ಬದನೇಕಾಯಿ ಬಜ್ಜಿ ರುಚಿಯಾಗಿರುತ್ತೋ?' ಎಂದು ಪ್ರಶ್ನಿಸಿದನಂತೆ ಒಮ್ಮೆ ! 'ಭಾವಯ್ಯಾ, ಇಂಗ್ಲಿಷ್ ಮೇಷ್ಟ್ರೊಬ್ಬರೇ ಚೆನ್ನಾಗಿ ಪಾಠ ಹೇಳ್ತಾರೆ. ಮಿಕ್ಕವರೆಲ್ಲಾ ಕೇವಲ ಗುಗ್ಗುಗಳಂಥೋರು.'

ಒಂದು ದಿನ ನನ್ನ ಆ ಪ್ಲೀಡರ್ ಸ್ನೇಹಿತನನ್ನು ಕುರಿತು 'ಭಾವಯ್ಯಾ, ನಿನ್ನ ಸ್ನೇಹಿತರು ಆ ಊರಿನ ಹಜಾಮರನ್ನು ತುಂಬ ಗೋಳು ಹುಯ್ಕೋತಿದ್ದಾರೆ' ಎಂದ. 'ಅದೇಕೋ?' ಎಂದು ಕೇಳಿದರೆ, 'ಅವರು ತಮ್ಮ ಗಡ್ಡವನ್ನು ತಾವೇ ಮಾಡಿಕೊಳ್ತಾರೆ. ಹಜಾಮರೆಲ್ಲಾ ಅದೆಷ್ಟು ಗೋಳಾಡ್ತಾ ಇದಾರೋ ನಿಂಗೊತ್ತಾ?' ಎಂದ. ನಿಜಕ್ಕೂ ಅವನಲ್ಲಿಯೇ ಚಮತ್ಕಾರವಿತ್ತೋ, ಅಥವಾ ನನಗೆ ಅವನ ಮೇಲಿರುವ ಪ್ರೇಮದಿಂದಾಗಿ ಅವನಾಡುವ ಪ್ರತಿಯೊಂದು ಮಾತೂ ಚಮತ್ಕಾರಭರಿತವಾಗಿ ಕಾಣಿಸುತ್ತಿತ್ತೋ ನಾನರಿಯೆ. ಒಂದು ದಿನ ನಾನು 'ಅಲ್ಲಾ ಕಣೋ, ನೀನಿಷ್ಟು ಬುದ್ಧಿವಂತನಲ್ಲಾ ! ತರಗತಿಯಲ್ಲಿ ಸ್ವಾಮಿಗೇನೇ ಫಸ್ಟ್ ಕ್ಲಾಸ್ ನಂಬರುಗಳು ಬರೋದೇನು ? ನಿನಗೆ ಬರದೇ ಇರೋದೇನು ಅಂತ?' ಎಂದು ಕೇಳಿದೆ. ಅದಕ್ಕವನು 'ಭಾವಾ ! ತೆಲುಗಿನಲ್ಲಿ ನನಗೆ ಬರುವಷ್ಟು ನಂಬರು ಸ್ವಾಮಿಗೆ ಬರಲ್ಲ. ಆ ಇಂಗ್ಲಿಷ್ ನಾನೆಷ್ಟು ಓದಿದರೂ ನನಗೆ ಹತ್ತೋಲ್ಲ. ಸ್ವಾಮಿ ಚೆನ್ನಾಗಿ ಉರು ಹಾಕ್ತಾನೆ ನನಗೆ ಉರು ಹಾಕುವುದೆಂದರೆ ತಲೆನೋವು. ಉರು ಹೊಡೆಯುವವರಿಗೇನೇ ಆ ಓದಾಗಲೀ, ನಿಜವಾದ ಬುದ್ಧಿವಂತರಿಗೆ ಆ ಓದು ಕೆಲಸಕ್ಕೆ ಬಾರದ್ದು' ಎಂದ. ಅದಕ್ಕೆ ನಾನು 'ನಿನ್ನಂಥವಳೇ ಒಬ್ಬಳು ಕುಣಿಯಲು ಬಾರದೆ ನೆಲ ಚೆನ್ನಾಗಿಲ್ಲವೆಂದಳಂತೆ !' ಎಂದೆ. ಆಗ ಅವನು 'ಹಾಗಾದರೆ ನಾನು ಹೆಣ್ಣು ಹುಡುಗಿಯೇ ?' ಎಂದ. 'ನೀನಾದರೂ ಆಗಿದ್ದರೆ ಚೆನ್ನಾಗಿತ್ತು !' ಎಂದೆ !

ನನ್ನ ತಮ್ಮ ರಜೆಗೆ ಮನೆಗೆ ಬಂದಂದಿನಿಂದ ನನ್ನ ಮಾವನ ಮಗಳೂ ಅವನೂ ಪಿಸುಮಾತುಗಳಲ್ಲಿ ಮುಳುಗಿರುತ್ತಿದ್ದರು ! ಇಬ್ಬರೂ ಒಂದೇ ಸಲ ಊಟಕ್ಕೆ ಕುಳಿತುಕೊಳ್ಳುತ್ತಿದ್ದರು. ಊಟ ಮುಗಿಯುವವರೆಗೂ–ಅವನ ತಾಟಿನೊಳಗಿನ ನಂಜಿಕೊಳ್ಳುವ ಪದಾರ್ಥಗಳನ್ನು ಅವಳು ತೆಗೆದುಕೊಳ್ಳುವುದೂ, ಅವಳ ತಾಟಿನೊಳಗಿನಿಂದ ಅವನೆತ್ತಿಕೊಳ್ಳುವುದೂ ; ಒಮ್ಮೊಮ್ಮೆ ಅವಳೊಂದು ಮುದ್ದೆಯನ್ನು ಕಲೆಸಿ ಅವನ ಬಾಯಿಗಿಡುವುದೂ ; ಅವನು ಚಟ್ನಿಯೊಂದಿಗೆ ಅನ್ನ ಉಂಡು 'ನನಗೆ ಮಜ್ಜಿಗೆ ಬೇಡ' ಎಂದನಂತರ, ಅವಳು ಮಜ್ಜಿಗೆಯನ್ನವನ್ನುಣ್ಣ

ತೊಡಗಿದರೆ, ಅವಳ ಮುಂದಿನ ಆ ತಾಟನ್ನೇ ತನ್ನತ್ತ ಎಳೆದುಕೊಂಡು, ಆ ಅನ್ನವನ್ನೇ ಉಂಡು, ಕೈ ತೊಳೆದುಕೊಂಡು ಅವಳ ಸೀರೆಯ ಸೆರಗಿಗೇನೇ ಕೈ ಒರೆಸಿಕೊಳ್ಳುತ್ತಿದ್ದ. ಅದಕ್ಕೆ ಅವಳು ತನ್ನ ಒದ್ದೆ ಕೈಯನ್ನು–ಅವನ ಮುಖಕ್ಕೂ, ಮೈಗೂ ಒರೆಸಿಬಿಡುತ್ತಿದ್ದಳು. ಇಬ್ಬರೂ ಒಂದೇ ಕಡೆ ಕುಳಿತು ಓದುತ್ತಿದ್ದರು. ಚರಿತ್ರೆ, ಭೂಗೋಳ, ಇಂಗ್ಲಿಷ್–ಇವನ್ನೆಲ್ಲಾ ಅವಳಿಗೆ ಹೇಳಿಕೊಡುತ್ತಿದ್ದ.

ಒಂದು ದಿನ ನಾನು ಮನೆಗೆ ಹೋದಾಗ, ಅವನು ಅವಳ ಮುಖಕ್ಕೆ ತಿಲಕವನ್ನಿಡುತ್ತಿದ್ದ. ನಾನು ನೋಡಿದೆ. ನನ್ನ ಮನಸ್ಸು ಧಸಕ್ ಎಂದಿತು. ಆದರೆ ಅವರಿಬ್ಬರೂ ನನ್ನನ್ನು ನೋಡಿ ಗಟ್ಟಿಯಾಗಿ ನಕ್ಕುಬಿಟ್ಟರು. ನನ್ನ ಮಾವನ ಮಗಳು ಕೊಂಚ ನಾಚಿಯೂ ನಾಚಿದಳು. ಅವರ ಆ ನಿಷ್ಕಲ್ಮಶವಾದ ಆ ನಗೆಯಿಂದ – ನನ್ನ ಆ ಒಂದಿಷ್ಟು ಅನುಮಾನವೂ ಹೊರಟು ಹೋಗಿಬಿಟ್ಟಿತು. ಆ ದಿನ ರಾತ್ರಿ ನಾನು ಹೀಗೆ ಅಂದುಕೊಂಡೆ, 'ಹೌದು ಅವರಿಬ್ಬರೂ ಸಮಪ್ರಾಯದ ಜೋಡಿಯಾಗಿದ್ದಾರೆ. ನನ್ನ ಮನಸ್ಸಿನಲ್ಲಿರುವ ಸ್ತ್ರೀ–ಪುರುಷ ಭಾವ ಅವರ ಮನಸ್ಸಿನಲ್ಲಿಲ್ಲ. ನಾನು ಪಟ್ಟ ಕಷ್ಟಗಳನ್ನು ಅವರು ಪಟ್ಟವರಲ್ಲ. ನನ್ನ ತಮ್ಮನಿಗೆ ಅವನ ಸೋದರಮಾವ ಅನೇಕ ಕಷ್ಟಗಳನ್ನು ಕೊಟ್ಟರೂ, ಆಗ ಅವನಿಗೆ ಅದೆಲ್ಲಾ ತಿಳಿಯದ ವಯಸ್ಸಾಗಿತ್ತು. ಅವನು ಅಂಥಾ ಹೇಳಿಕೊಳ್ಳುವಂಥಾ ಬುದ್ಧಿವಂತನೆಂದೇನೂ ನಾನಂದುಕೊಳ್ಳಲಾರೆ. ಆದರೂ ಒಂದು ತೆರನಾದ ಬುದ್ಧಿವಂತಿಕೆ ಇಲ್ಲದೇ ಇಲ್ಲ. ಪ್ರಪಂಚದಲ್ಲಿ ಎರಡು ತೆರನಾದ ಬುದ್ಧಿಗಳಿವೆ. ಒಂದು–ಪ್ರತಿಯೊಬ್ಬನಿಗೂ ಅವನವನ ಜೀವನಕ್ಕೆ ಉಪಯೋಗ ಬೀಳುವ ಬುದ್ಧಿ. ತನ್ನ ಸ್ವಾರ್ಥವನ್ನು ಚೆನ್ನಾಗಿ ನೋಡಿಕೊಳ್ಳುವ ಬುದ್ಧಿ ಇರುತ್ತದೆ. ಎರಡನೆಯ ವಿಧದ ಬುದ್ಧಿ–ಅವನದು ಅವನ ಸ್ವಾರ್ಥಕ್ಕೆ ಉಪಯೋಗ ಬೀಳದು. ಅದು ಪ್ರಪಂಚಕ್ಕೆ ಸಂತೋಷವನ್ನೋ ಕೋಪವನ್ನೋ ಉಂಟುಮಾಡುತ್ತದೆ. ಬಹಳ ಜನ ಅವನನ್ನು ಬುದ್ಧಿವಂತನೆನ್ನುತ್ತಾರೆ. ಆದರದು ಅವನ ಸ್ವಲಾಭಕ್ಕೇನೂ ಉಪಯೋಗಕ್ಕೆ ಬರುವಂತಿಲ್ಲ. ನಿಜವಾಗಿಯೂ ಬುದ್ಧಿ ಎಂದರೆ ಅದೇ ಆದರೂ, ಆ ಬುದ್ಧಿಯಿಂದ ಪ್ರಪಂಚ ಆನಂದಿಸಿದರೂ, ಪ್ರಪಂಚ ಆ ಸ್ವಾರ್ಥಪರನ ಬುದ್ಧಿಯನ್ನೇ ಹೆಚ್ಚಾಗಿ ಗೌರವಿಸುತ್ತದೆ. ಅದೇಕೆ ಗೌರವಿಸುತ್ತದೆ? ಪ್ರಪಂಚಕ್ಕು ಸಹ ಸ್ವಾರ್ಥವಿದೆಯಾದ್ದರಿಂದ ! ಎರಡನೆಯ ವಿಧದ ಬುದ್ಧಿ ಗಾಳಿಗೆ ಎಗರಿಹೋಗುತ್ತದೆ ! ಅದು ಆತ್ಮ ಜ್ಞಾನದಂಥದು. ಆತ್ಮಜ್ಞಾನ ಯಾರಿಗೆ ಬೇಕಾಗಿದೆ? ಸುಖ ದುಃಖಗಳನ್ನು ಲೆಕ್ಕಿಸದೆ, ಒಬ್ಬಾನೊಬ್ಬ ಯಾವಾಗಲೂ ಸಂತೋಷದಿಂದ ಉತ್ಸಾಹದಿಂದ ತುಂಬಿ ತುಳುಕಾಡುತ್ತಿದ್ದ ಪಕ್ಷಕ್ಕೆ, ಅಂಥವನನ್ನು ನೋಡಿ ಲೋಕ ಸಹಿಸುವುದಿಲ್ಲ. 'ದೊಡ್ಡ ಮನುಷ್ಯನ ತರಹ' ಎಂಬ ಹೆಸರಿನಿಂದ ತನ್ನ ಅಂದವನ್ನು ಮರೆತು ಮುದುಡಿಕೊಂಡು ಕುಳಿತುಕೊಳ್ಳುತ್ತದೆ. ಮೇಲಾಗಿ ಹಾಗೆ ಇರುವುದೇ ದೊಡ್ಡಸ್ತಿಕೆ ಎಂದುಕೊಳ್ಳುತ್ತದೋ ಏನೋ!

ಇಬ್ಬರು ಗಂಡು ಹುಡುಗರು ರಜೆಗೆ ಮನೆಗೆ ಬಂದ ಮೇಲಿನಿಂದ ಮನೆಗೆಲಸವೆಲ್ಲಾ ನನ್ನ ತಂಗಿಯ ತಲೆಯ ಮೇಲೆ ಬಿತ್ತು. ನನ್ನ ಸೋದರ ಮಾವನ ಮಗಳು ಆ ಕಡೆ ಕಡ್ಡಿಯನ್ನು ಈ ಕಡೆ ಎತ್ತಿಡುವುದಿಲ್ಲ. ಕಸ ಗುಡಿಸುವುದು, ಮನೆ ಸಾರಿಸುವುದು, ರಂಗದಲ್ಲಿ

ಹಾಕುವುದು, ಮುಸುರೆ ಪಾತ್ರೆಗಳನ್ನು ಬೆಳಗುವುದು, ಅಡುಗೆ ಮಾಡುವುದು, ಬಡಿಸುವುದು, ಹಾಸಿಗೆಗಳನ್ನು ಹಾಸಿಡುವುದು, ದೀಪಗಳನ್ನು ಬೆಳಗಿಸಿಡುವುದು – ಈ ಎಲ್ಲ ಕೆಲಸಗಳನ್ನೂ ನನ್ನ ತಂಗಿಯೇ ಮಾಡಬೇಕಾಗಿ ಬಂದಿತು. ಆಗಾಗ ನನ್ನ ಮಾವನ ಮಗ ಮಾತ್ರ ಕೊಂಚ ಕೈಯಾಸರೆಯಾಗುತ್ತಿದ್ದ. ರಜಾ ದಿನಗಳಲ್ಲಿ ನನ್ನ ತಂಗಿಗೆ ಮತ್ತೊಂದು ಹೊಸ ಕೆಲಸ ಅಂಟಿಕೊಂಡಿತು. ಅದೇನೆಂದರೆ–ದಿನವೂ ನನ್ನ ತಮ್ಮನಿಗೂ, ಮಾವನ ಮಗಳಿಗೂ ಬೆಳಿಗ್ಗೇನೇ ಕಾಫಿ ಮಾಡಿ ಕೊಡಬೇಕು. ಮೊದಲ ಹತ್ತು ದಿನ, ಸ್ವಾಮಿ ತಾನೇ ಕಾಫಿ ಮಾಡಿ, ನನ್ನ ತಂಗಿಗೆ ಕಲಿಸಿಕೊಟ್ಟ. ಸ್ವಾಮಿ ಮತ್ತು ನನ್ನ ಮಾವನ ಮಗಳು ಹೊತ್ತೇರಿದ ಮೇಲೆ ಏಳುತ್ತಿದ್ದರು. ಎದ್ದು ಮುಖ ತೊಳೆಯುತ್ತಲೇ ಕಾಫಿ ಬೇಕು ಆವರಿಗೆ. ನನ್ನ ತಂಗಿಗೆ ತನ್ನ ತಮ್ಮನನ್ನು ನೋಡಿದಾಗಲೆಲ್ಲಾ ಒಂದು ತೆರನಾದ ಆನಂದವುಂಟಾಗುತ್ತಿತ್ತು. ಅವನು ಗುಂಟೂರಿನಲ್ಲಿ ದೊಡ್ಡ ಓದು ಕಲಿಯುತ್ತಿದ್ದಾನೆಂತಲೂ, ಅವನು ಮುಂದೆ ಅಮಲ್ದಾರನಾಗುತ್ತಾನೆಂತಲೂ ಭಾವಿಸುತ್ತಾ, ಅವನೇನು ಮಾಡಿದರೂ ಅವಳು ಹಾಗಲ್ಲ ಎನ್ನಳು. ಅಷ್ಟರ ತನಕ ನನ್ನ ಸೋದರಮಾವನ ಮಗಳು ನನ್ನನ್ನು ಮದುವೆಯಾಗೋಲ್ಲವೇನೋ ಎಂದು ಅವಳಿಗೆ ಕೊಂಚ ಕೋಪವೇ ಇತ್ತು. ಈಗಲಾದರೋ ಅದರ ಗೊಡವೆಯೇ ಅವಳಿಗೆ ಬೇಡವಾಗಿದೆ ! ಅವರಿಬ್ಬರೂ ಹಾಗೆ ಓದುವುದು, ಇಬ್ಬರೂ ಕೇಕೆ ಹಾಕಿ ನಗುವುದು, ಕಲೆಯುವುದು–ಇದನ್ನೆಲ್ಲಾ ನೋಡುತ್ತಿದ್ದರೆ ಆ ಹುಚ್ಚಿಗೆ–ಆ ಅಮಾಯಕಳಿಗೆ–ಆ ಮುಗ್ಧೆಗೆ–ಅದೇನೋ ಹೊಚ್ಚ ಹೊಸತಾಗಿ ಕಾಣಿಸುತ್ತಿದೆ. ಸ್ವರ್ಗವೆಂದರೆ ಹಾಗೆಯೇ ಇರುತ್ತದೇನೋ ಎಂದುಕೊಂಡಿದ್ದಾಳೆ.

ಹೀಗೆಯೇ ರಜಾ ದಿನಗಳು ಮುಗಿದುಹೋದುವು. ಪುನಃ ಹುಡುಗರು ಸ್ಕೂಲಿಗೆ ಹೋಗಬೇಕು. ನಾನು ಮತ್ತೊಮ್ಮೆ ಹಣವನ್ನು ಜೋಡಿಸಿಕೊಳ್ಳಬೇಕು. ಈ ವರ್ಷ ಏತಕ್ಕೊ ನಾನು ಧಾನ್ಯ ಕೂಡಿಡದೇ ಹೋದೆ. ಹೊಗೆಸೊಪ್ಪು ಮಾರಿದ್ದರಿಂದ ಬಂದ ಹಣವಲ್ಲದೆ ಬೇರೆ ನನ್ನ ಹತ್ತಿರ ಯಾವ ಹಣವೂ ಇಲ್ಲ. ನನ್ನ ಹತ್ತಿರ ಎರಡು ನೂರು ರೂಪಾಯಿಗಳಷ್ಟೇ ಇದೆ. ಇನ್ನೂ ಮುನ್ನೂರು ರೂಪಾಯಿಗಳಲ್ಲದೆ ಸಾಕಾಗುವಂತಿಲ್ಲ. ಪರಿಸ್ಥಿತಿ ಹೀಗಿರಬೇಕಾದರೆ ಮತ್ತೊಂದು ಹೊಸ ಸುದ್ದಿ ಹೊರಬಿತ್ತು ! ಒಂದು ದಿನ ನಾನು ಊಟ ಮಾಡುತ್ತಿರುವಾಗ ನನ್ನ ತಮ್ಮ 'ಅಣ್ಣಾ !' ಎಂದ. ಅವನು ನನ್ನೊಂದಿಗೆ ಯಾವೊತ್ತೂ ಕಲೆತು ಊಟ ಮಾಡಿಲ್ಲ. ಆ ದಿನ ನನ್ನ ಜೊತೆಗೇ ಊಟಕ್ಕೆ ಕುಳಿತುಕೊಂಡ. ಈ ರಜಾದಿನಗಳಲ್ಲಿ, ಅವನು ನನ್ನೊಂದಿಗೆ ಹೆಚ್ಚಿಗೆ ಮಾತೇ ಆಡಿಲ್ಲ. ಏನು ಹೇಳಬೇಕಾಗಿ ಬಂದರೂ, ಎಷ್ಟೋ ಅಷ್ಟು ತಕ್ಕಷ್ಟು ಮಾತನಾಡಿ ಸುಮ್ಮನಿದ್ದುಬಿಡುತ್ತಿದ್ದ. ಅವನು ನನ್ನನ್ನು 'ಅಣ್ಣಾ' ಎಂದು ಕರೆದು ವರ್ಷವೇ ಆಯಿತು. ಓದಲು ಹೋಗುವ ಮುನ್ನ ನನ್ನನ್ನು 'ಅಣ್ಣಾ' ಎಂದು ಕರೆಯುತ್ತಿದ್ದನಷ್ಟೆ....

'ಏನು?' ಎಂದೆ. ಅವನು 'ಗುಂಟೂರಿನಲ್ಲಿ ಹೆಣ್ಣು ಹುಡುಗಿಯರು ಕೂಡಾ ಓದುತ್ತಿದ್ದಾರೆ' ಎಂದ. ನಾನು ಸ್ವಲ್ಪ ಹೊತ್ತು ಸುಮ್ಮನಿದ್ದು 'ನೀನು ಹೇಳುತ್ತಿರುವುದೇನು? ನಿನ್ನ ಅತ್ತಿಗೆಯನ್ನು ಕರೆದುಕೊಂಡು ಹೋಗ್ತೀನಿ ಅಂತ ತಾನೆ?' ಎಂದೆ. ಅವಳು ಬಾಗಿಲ ಮರೆಯಲ್ಲಿ ನಿಂತುಕೊಂಡಿದ್ದಳು. 'ಮಾವಯ್ಯಾ, ನನಗೆ ಓದಿಕೊಳ್ಳಬೇಕೆಂದು ತುಂಬ

ಆಸೆಯಿದೆ' ಎಂದಳು. 'ನಿನಗೆ ಓದಲು ಬರುತ್ತಿದೆಯಲ್ಲಾ. ಸೊಗಸಾಗಿ ಭಾರತ, ಭಾಗವತಗಳನ್ನು ಓದುತ್ತಾ ಇದೀಯಲ್ಲಾ' ಎಂದೆ. ಅದಕ್ಕೆ ನನ್ನ ತಮ್ಮ 'ಓದುವುದು ಇನ್ನೂ ತುಂಬಾ ಇದೆ. ಚರಿತ್ರೆ, ಭೂಗೋಳ, ಇನ್ನು ಅನೇಕ ವಿಷಯಗಳಿವೆ. ನಮ್ಮ ಇಂಗ್ಲಿಷ್ ಮೇಷ್ಟ್ರು ಒಮ್ಮೆ ಹೇಳಿದರು–ಪ್ರಪಂಚದಲ್ಲಿ ಅನೇಕ ದೇಶಗಳಿವೆ. ಅಲ್ಲೆಲ್ಲಾ ಅನೇಕ ವಿಚಿತ್ರಗಳು ನಡೆಯುತ್ತಾ ಇವೆ. ಜರ್ಮನಿಯಲ್ಲಿ ಯುದ್ಧ ನಡೆಯುತ್ತಾ ಇದೆಯಲ್ಲಾ ! ಅವರು ವಿಮಾನಗಳಿಂದ ಯುದ್ಧ ಮಾಡ್ತಿದಾರೆ. ನಮಗೇನು ತಿಳಿಯದು. ಹೆಣ್ಣು ಮಕ್ಕಳು ಸಹ ಓದಿಕೊಳ್ಳತಕ್ಕದ್ದೇ!' ಎಂದು ನುಡಿದ. ನಾನು ಏನೂ ಮರುನುಡಿಯಲಿಲ್ಲ. ಆದರೆ ಮನಸ್ಸಿನಲ್ಲಿ ಅಂದುಕೊಂಡೆ 'ಹೆಣ್ಣು ಮಕ್ಕಳು ಇಂಗ್ಲಿಷ್ ಓದಿ ಏನು ಮಾಡುತ್ತಾರೆ? ಆ ವಿಷಯಗಳನ್ನು ತಿಳಿದುಕೊಳ್ಳಬೇಕೆಂದರೆ ಯಾರನ್ನಾದರೂ ತಿಳಿದವರನ್ನು ಕೇಳಿದರೆ ಹೇಳುತ್ತಾರೆ. ಕೇಳಿ ತಿಳಿದುಕೊಳ್ಳಬಹುದು. ಇಲ್ಲದೇ ಹೋದರೆ, ಆ ವಿಷಯಗಳನ್ನು ಬಲ್ಲವರು ಮಾತೃಭಾಷೆಯಲ್ಲಿ ಬರೆದ ಪುಸ್ತಕಗಳನ್ನು ಓದಿ ತಿಳಿದುಕೊಳ್ಳಬಹುದು.' ಬಾಗಿಲ ಮರೆಯಿಂದ ಅವಳು ಪುನಃ 'ಏನೇ ಆಗಲಿ, ನಾನೂ ಸಹ ಗುಂಟೂರಿಗೆ ಹೋಗಿ ಓದಿಕೊಳ್ತೇನೆ. ಅಲ್ಲಿ ಹೆಣ್ಣು ಹುಡುಗಿಯರಿಗೆ ಪ್ರತ್ಯೇಕವಾಗಿ ಶಾಲೆಗಳಿವೆಯಂತೆ' ಎಂದಳು. ನಾನು ಮನಸ್ಸಿನಲ್ಲಿಯೇ, 'ಹೆಣ್ಣು ಹುಡುಗಿಯರು ಸ್ಕೂಲಿಗೆ ಹೋಗುವದೆಂದರೆ ಹಳ್ಳಿಯವರಿಗೆ ವಿಚಿತ್ರವಾಗಿಯೇ ತೋಚುತ್ತದೆ. ಇದು ಮರ್ಯಾದೆಯೇ?– ಎಂದುಕೊಳ್ಳುತ್ತಾರೆ !' ಎಂದುಕೊಂಡೆ.

ಆದರೆ ಹೊರಗೆ ಹೀಗೆ ನುಡಿದೆ 'ನೀನೂ ಸಹ ಹೋಗಬೇಕೆಂದರೆ ಈಗ ಹಣವಿಲ್ಲ. ಅದೂ ಅಲ್ಲದೆ, ನೀನು ಒಂದುವೇಳೆ ಗುಂಟೂರಿಗೆ ಹೋದರೆ ಅಲ್ಲಿ ನೀನು ಹೋಟೆಲಿನಲ್ಲಿ ಊಟ ಮಾಡುವಂತಿಲ್ಲವಲ್ಲಾ? ಅದಕ್ಕಾಗಿ ಪ್ರತ್ಯೇಕವಾಗಿ ಅಡುಗೆ ಮಾಡುವವರನ್ನು ಗೊತ್ತುಮಾಡಬೇಕು. ಅಡುಗೆ ಮಾಡುವವರಿಗೆ ಊಟಕ್ಕಿಟ್ಟು, ಮೇಲೆ ನಾಲ್ಕೋ ಐದೋ ತಿಂಗಳಿಗೆ ಕೊಡದೇ ಇದ್ದರೆ ಸಾಗದು' ಎಂದೆ. 'ಹೇಗಾದರೂ ಸರಿಯೇ ! ನಾನು ಖಂಡಿತ ಓದಲು ಹೋಗುತ್ತೇನೆ. ಬೇಕಾದರೆ ನನ್ನ ಹೊಲಗಳನ್ನು ಅಡವಿಟ್ಟಾದರೂ ಸರಿಯೇ, ಮಾರಿಯಾದರೂ ಸರಿಯೇ !' ಎಂದಳು. ನನ್ನ ಊಟ ಮುಗಿಯಿತು. ಮೇಲೆದ್ದು ಹೊಲದ ಕಡೆಗೆ ಹೊರಟುಹೋದೆ. ನನ್ನೊಂದಿಗೆ ನನ್ನ ಮಾವನ ಮಗ ಬಂದ. ಊಟದ ಸಮಯದಲ್ಲಿ ಈ ಪ್ರಸಂಗ ನಡೆದಾಗ ಅವನು ಮನೆಯಲ್ಲಿರಲಿಲ್ಲ. ಹೊಲದಲ್ಲಿ ನಾನು ಅವನೊಂದಿಗೆ ಈ ವಿಷಯವೆತ್ತಿದೆ. 'ಗುಂಟೂರಿನಲ್ಲಿ ಹೆಣ್ಣು ಹುಡುಗಿಯರೂ ಸಹ ಓದುತ್ತಾರಂತಲ್ಲಾ!' ಎಂದೆ. 'ಹೌದು ಓದುತ್ತಾರೆ. ದೊಡ್ಡ ದೊಡ್ಡ ಉದ್ಯೋಗಸ್ಥರ ಹೆಣ್ಣುಮಕ್ಕಳೆಲ್ಲರೂ ಓದುತ್ತಿದ್ದಾರೆ' ಎಂದ. 'ದೊಡ್ಡ ಹುಡುಗಿಯರೂ ಓದುತ್ತಿದ್ದಾರೆಯೇ?' ಎಂದು ಕೇಳಿದೆ. ಅವನು 'ಓದುತ್ತಿದ್ದಾರೆ. ಅವರೆಲ್ಲಾ ಹೆಚ್ಚಾಗಿ ಬ್ರಾಹ್ಮಣ ಹುಡುಗಿಯರು, ಕ್ರಿಶ್ಚಿಯನ್ ಹುಡುಗಿಯರು. ನಮ್ಮ ಹುಡುಗಿಯರಾರೂ ಓದುತ್ತಿಲ್ಲ' ಎಂದ. 'ನಿಮ್ಮಕ್ಕನನ್ನು ಓದುವುದಕ್ಕಾಗಿ ನಿಮ್ಮೊಂದಿಗೆ ಕಳಿಸಿಕೊಡ್ತೇನೆ' ಎಂದೆ. 'ಛಿ ! ಛಿ ! ಅಕ್ಕಯ್ಯ ಓದುವುದೆಂದರೇನು ?!' ಎಂದ.

ನನ್ನ ತಮ್ಮನೂ, ನನ್ನ ಸೋದರಮಾವನ ಮಗಳೂ ಈ ಪ್ರಸಂಗವನ್ನು ಎರಡು

ಮೂರು ದಿನ ಸರದಿಯ ಮೇಲೆ ಎತ್ತಿದರು. ನನಗೆ ಕಳಿಸಿಕೊಡಬೇಕೆಂದಿಲ್ಲ ಹಾಗೆಂದು ಕಳಿಸಿಕೊಡುವುದಿಲ್ಲ. ಎಂದು ಹೇಳುವಂತಿಲ್ಲ. ಆದರೆ ಹಣವನ್ನು ಮಾತ್ರ ಐದು ನೂರು ರೂಪಾಯಿ ಸಾಲ ಮಾಡಿ ತಂದೆ.

ಶಾಲೆಯ ಬಾಗಿಲು ತೆರೆಯಲು ಇನ್ನೂ ನಾಲ್ಕೈದು ದಿನಗಳಿದ್ದುವು. ನಾನೇತಕ್ಕೋ ಗುಂಟೂರಿಗೆ ಪಯಣವಾದೆ. ನನ್ನ ಚಿಕ್ಕಮ್ಮನ ಊರಿಗೆ ಹೋದೆ. ನನ್ನ ಚಿಕ್ಕಮ್ಮ 'ಮಗೂ, ತಂಗಿಯ ಮದುವೆಯನ್ನು ಯಾವಾಗ ಮಾಡುತ್ತೀ?' ಎಂದು ಕೇಳಿದಳು. 'ನಿನ್ನಿಷ್ಟವಮ್ಮಾ. ಮನೆಯಲ್ಲಿ ಐದು ನೂರು ರೂಪಾಯಿಗಳನ್ನು ಸಿದ್ಧವಾಗಿ ಮಡಗಿದ್ದೇನೆ. ನೀನು ಈ ದಿನವೇ ಮಾಡಿಬಿಡು ಎಂದರೆ ಇಂದೇ ಮಾಡಿ ಮುಗಿಬಿಡುತ್ತೇನೆ' ಎಂದೆ. 'ಈವೊತ್ತೇ ಬೇಡ ಕಣೊ ! ಮಾಘಮಾಸದಲ್ಲಿ ಮಾಡೋಣ. ನಾನೂ ಕೂಡ ಎಲ್ಲಿಯಾದರೂ ಒಂದಿನ್ನೂರು ರೂಪಾಯಿ ನೋಡಿಕೋಬೇಕಲ್ಲಾ?' ಎಂದಳು. 'ಹಾಗೇ ಆಗಲಿ' ಎಂದೆ. 'ನನಗೆ ಕಷ್ಟವಾಗಿದೆಯಪ್ಪಾ, ನಾನೊಬ್ಬಳೇ–ಕೈಕಾಲಾಡದೆ ತುಂಬ ತಾಪತ್ರಯಪಡ್ತಾ ಇದೇನೆ. ಅಲ್ಲದೆ ವಯಸ್ಸೂ ಆಗ್ತಾ ಬಂತು. ಅವನ ತಲೆಯ ಮೇಲೊಂದಿಷ್ಟು ಅಕ್ಕೀಕಾಳು ಹಾಕಿ ಕಣ್ಮುಚ್ಕೋಣ ಅಂತ ಆಸೆಯಾಗಿದೆ' ಎಂದಳು. 'ನನಗೂ ಕಷ್ಟವಾಗಿದೆ. ನಿಮ್ಮನ್ನೆಲ್ಲಾ ತೊಂದರೆಗೀಡುಮಾಡಲು ಇಷ್ಟವಿಲ್ಲದೆ ಸುಮ್ಮನಿದ್ದೇನೆ. ನನ್ನ ತಂಗಿಗೂ ಸಹ ಮನೆಯಲ್ಲಿ ಎಲ್ಲಾ ಕೆಲಸ ಮಾಡಲು ತುಂಬ ತೊಂದರೆಯಾಗಿಬಿಟ್ಟಿದೆ. ಇಲ್ಲಿಗೆ ಬಂದರೆ ಹಿರಿಯಳಾದ ನೀನಿರುತ್ತೀಯೆ. ಆಗ ಪರವಾಗಿಲ್ಲ' ಎಂದೆ. 'ನಿನ್ನ ತಂಗಿ ಈ ಮನೆಗೆ ಬಂದುಬಿಟ್ಟರೆ, ನಿನ್ನ ಹೆಂಡತಿಯೊಬ್ಬಳೇ ಮಾಡ್ಕೊಳ್ಳಬೇಕಾಗುತ್ತಲ್ಲಾ?' ಎಂದಳು. 'ಸರಿ ಬಿಡು. ಯಾವುದು ಹೇಗಾಗುತ್ತೋ ಹೇಗೆ ಹೇಳೋಕಾಗುತ್ತೆ' ಎಂದೆ!

ಗುಂಟೂರಿಗೆ ಹೊರಟೆ. ಬಿಸಿಲು ಹೆಚ್ಚಿಗೆ ಇದ್ದುದರಿಂದ ತಂಪಾದ ಮೇಲೆ ಹೊರಟೆ. ನಾನೊಂದು ಹರದಾರಿ ದೂರ ಹೋದ ಮೇಲೆ ನನ್ನ ಹಿಂದೆ ಹಿಂದೆಯೇ ಯಾರೋ ಬರುತ್ತಿರುವ ಹಾಗೆ ಭಾಸವಾಯಿತು. ಹಿಂತಿರುಗಿ ನೋಡಿದೆ. ದೂರದಲ್ಲಿ ಯಾರೋ ಬರುತ್ತಿದ್ದರು. ತಿಂಗಳ ಬೆಳಕಿದ್ದುದರಿಂದ ಮನುಷ್ಯ ಕಂಡುಬಂದನಾಗಲೀ, ಅವನಾರೋ ಗೊತ್ತಾಗಲಿಲ್ಲ. ನಾನು ಹಾಗೆಯೇ ಸ್ವಲ್ಪ ದೂರ ಹೋಗುವುದರೊಳಗಾಗಿ ಅವನು ಬಂದು ನನ್ನನ್ನು ಕೂಡಿಕೊಂಡ. ತೀರಾ ನೋಡಿದರೆ ಅವನು ಅದೇ ಹಾವಾಡಿಗ ! ಅವನು 'ಬುದ್ಧೀ ಶರಣು' ಎಂದು ನಮಸ್ಕರಿಸಿದ. ನಾನು 'ಎಲಾನಿನ್ ಮನೆ ಕಾಯ್ವಾಗಾ! ನೀನಿನ್ನೂ ಬದುಕೇ ಇದೀಯೇನೋ?' ಎಂದೆ. 'ಬದುಕಿದೇನೆ ಬುದ್ದೀ. ಆ ಪಟೇಲರ ಕೈಯ ಹೊಡೆತ ತಿಂದು ಬದುಕಿದವನಾವನೂ ಇಲ್ಲ. ಬದುಕಿದವನು ನಾನೊಬ್ಬನೇ. ನಾನೇಕೆ ಬದುಕಿರುವೆನೋ ನನಗೇ ತಿಳಿಯದಂತಿದೆ' ಎಂದ. 'ಇತ್ತ ಕಡೆ ಎಲ್ಲಿಗೆ ಹೊರಟೆ?' ಎಂದು ಕೇಳಿದೆ. ಅದಕ್ಕವನು 'ಬುದ್ಧೀ ನೀನೆಲ್ಲಿಗೆ?' ಎಂದು ಕೇಳಿದ. 'ಗುಂಟೂರಿಗೆ' ಎಂದೆ. 'ಬೆಳಕು ಹರಿಯುವುದರೊಳಗೆ ಗುಂಟೂರು ಸೇರಿಕೊಳ್ತೀಯಾ ಬುದ್ದೀ? ಅಥವಾ ಈ ರಾತ್ರಿಗೆ ನಿನ್ನ ಸಾಕುತಂದೆಯವರ

ಊರಲ್ಲಿ ಉಳಕೊಳ್ತೀಯಾ?' ಎಂದು ಕೇಳಿದ. 'ನಾನು ಗುಂಟೂರಿಗೆ ಹೋದರೆ ನಿನಗೇನು ಲಾಭ? ನನ್ನ ಹತ್ತಿರವೇನೂ ಹಣವಿಲ್ಲ. ಐದಾರು ರೂಪಾಯಿ ಇದೆ. ಬೇಕಾದರೆ ಕೊಟ್ಟುಬಿಡ್ತೇನೆ ತೆಗೆದುಕೊಂಡು ಹೋಗಿಬಿಡು' ಎಂದೆ. 'ಬುದ್ದೀ, ನನಗೆ ಹಣ ಬೇಕಾಗಿ ಬಂದ್ರೆ ಹೀಗೆ ನಿನ್ನನ್ನು ದಾರಿಯಲ್ಲಿ ಕೇಳ್ತೇನ್ಯೇ? ನಿನ್ನ ಮನೆಗೆ ಬಂದು ಕೇಳಿದರೆ ನೀನು ಕೊಡುವುದಿಲ್ಲವೇ ? ಬುದ್ದೀ, ಅದು ಹಾಗಿರಲಿ, ಸ್ವಾಮಿಯವರ ಮಕ್ಕಳನ್ನು ಕರೆದುಕೊಂಡು ಬಂದೆಯಲ್ಲಾ, ಸ್ವಾಮಿಯವರ ಆಸ್ತಿಯೆಲ್ಲಾ ಏನಾಯ್ತು?' ಎಂದು ಕೇಳಿದ.

ಅವನು ಮಾತನಾಡುವ ತರಹ ನೋಡಿದರೆ ನನಗೇನೂ ಅನುಮಾನ ಕಾಣಿಸಲಿಲ್ಲ. ನನ್ನ ಕಥೆಯನ್ನು ಇವನಿಗೆ ಹೇಳಲೋ ಬೇಡವೊ ಎನ್ನಿಸಿತು. ಹೇಳಿಕೊಂಡರೇನು ಲಾಭ? ಇವನೇನಾದರೂ ಆರಿಸುವವನೇ, ತೀರಿಸುವವನೇ? ಹಾಗೆಯೇ ಆವನು ನನ್ನೊಂದಿಗೇ ಏನೇನೋ ಮಾತ ನಾಡುತ್ತಾ ತುಂಬ ದೂರ ಬಂದ. ಸ್ವಲ್ಪ ಹೊತ್ತಾದ ಮೇಲೆ ಅವನು 'ಬುದ್ದೀ, ಸ್ವಾಮಿಯವರ ಆಸ್ತಿಯನ್ನೆಲ್ಲಾ ಗೇಣಿಗೆ ಕೊಟ್ಟಿದೀಯಾ?" ಎಂದು ಕೇಳಿದ. 'ಗೇಣಿಗಿಲ್ಲ, ದೇಣಿಗಿಲ್ಲ. ಆ ಹುಡುಗರ ಸೋದರಮಾವ ಎಲ್ಲ ಕಬಳಿಸಿಬಿಟ್ಟಿದ್ದಾನೆ' ಎಂದೆ. 'ಸೋದರ ಮಾವನಾರು ಬುದ್ದೀ? ಹೊಗೆಸೊಪ್ಪಿನ ದುಂಟಿನಂತಿರುತ್ತಾನಲ್ಲಾ ಅವನೇ ಏನು ?' ಎಂದ. ನನಗೆ ನಗು ಬಂದಿತು. 'ಊಂ, ಆತನೇ' ಎಂದೆ. ಅದಕ್ಕವನು 'ಹಾಗಾದರೆ ಹುಡುಗರಿಗೆ ಓದು ಕಲಿಸ್ತಾ ಇದೀಯೆ ; ಆ ಹುಡುಗಿಗೆ ಮದುವೆ ಮಾಡಬೇಕೆಂದಿದೀಯ, ಇದಕ್ಕೆಲ್ಲಾ ಹಣ ನಿನ್ನದೇನಾ?' ಎಂದು ಕೇಳಿದ. 'ನನ್ನ ಹಣವೆಲ್ಲಿದೆಯೋ! ನಮ್ಮತ್ತೆಯದು' ಎಂದೆ. 'ಹಾಗಾದರೆ ನಿಮ್ಮತ್ತೆಯ ಮಗಾ, ಮಗಳೂ ಸುಮ್ಮನೇ ಇರುತ್ತಾರಾ?' ಎಂದ. 'ನಿನಗೆ ಈ ವಿಷಯಗಳೆಲ್ಲಾ ಹೇಗೆ ಗೊತ್ತಾದುವು?' ಎಂದು ಕೇಳಿದೆ. 'ಅಯ್ಯೋ ಬಿಡು ಬುದ್ದೀ ! ಇಷ್ಟೇ ಏನು ? ಈ ಸುತ್ತಮುತ್ತಲಿನ ಇಪ್ಪತ್ತುಮೂವತ್ತು ಹಳ್ಳಿಗಳಲ್ಲಿನ ಪ್ರತಿಯೊಂದು ಸಂಸಾರದ ಕಥೆ ನನಗೆ ಗೊತ್ತಿದೆ. ಇಷ್ಟೇ ಅಲ್ಲದೆ ಪಲ್ನಾಡಿನಲ್ಲೆಷ್ಟು ಊರುಗಳಿವೆಯೋ ಅವೆಲ್ಲದರ ಸಂಸಾರಿಗಳ ಕಥೆಗಳೆಲ್ಲ ನನಗೆ ಗೊತ್ತಿವೆ. ಯಾರು ಯಾವಾಗ ಯಾವ ಊರಿಗೆ ಪಯಣವಾಗುತ್ತಾರೆ ? ಯಾರ್‍ಯಾರಿಗೆ ಎಲ್ಲೆಲ್ಲಿ ಬಂಧುತ್ವವಿದೆ? ಅವರು ದಾರಿಯ ಮಧ್ಯೆ ಎಲ್ಲೆಲ್ಲಿ ತಂಗುತ್ತಾರೆ – ಎಲ್ಲಾ ನನಗೆ ಗೊತ್ತಿದೆ. ನೀನು ನಿನ್ನೆಯೇ ಗುಂಟೂರಿಗೆ ಹೊರಡುತ್ತೀ ಎಂಬುದೂ ನಗೆ ಗೊತ್ತಿತ್ತು !' ಎಂದ. ನನಗೆ ಆಶ್ಚರ್ಯವಾಯಿತು. 'ನಾನು ಯಾರೊಂದಿಗೂ ಹೇಳಲೇ ಇಲ್ಲವಲ್ಲಾ ! ನಿನಗೆ ಹೇಗೆ ಗೊತ್ತಾಯಿತು?' ಎಂದು ಕೇಳಿದೆ. 'ನೀನು ಮೊನ್ನೆ ಹೊಲದಲ್ಲಿ ನಿನ್ನ ಮಾವನ ಮಗನೊಂದಿಗೆ ಮಾತನಾಡುತ್ತಾ – ನಿನ್ನ ಸೋದರಮಾವನ ಮಗಳನ್ನು ಓದಲಿಕ್ಕಾಗಿ ಕಳಿಸಿಕೊಡುತ್ತೇನೆ ಅಂತ ಅಂದೆಯಲ್ಲಾ! ಆದ್ದರಿಂದಾಗಿ ನಾನಂದುಕೊಂಡೆ – ಹೆಣ್ಣು ಹುಡುಗಿಯನ್ನು ಓದಲು ಕಳಿಸಬೇಕೆಂದರೆ, ಇಸ್ಕೂಲು ತೆಗೆಯುವುದಕ್ಕಿಂತ ನಾಲ್ಕು ದಿನ ಮುಂಚೆಯೇ ನೀನು ಹೋಗಿ ಮನೆಗಿನೆ ಮಾತನಾಡಿಕೊಂಡು ಬರಬೇಕಲ್ಲಾ! ಅದೂ ಅಲ್ಲದೆ ಐನೂರು ರೂಪಾಯಿ ಬೇರೆ ಸಾಲ ಮಾಡಿ ತಂದಿದೀಯಲ್ಲಾ! ಆದ್ದರಿಂದ ಆಗಲೇ ಅಂದುಕೊಂಡೆ' ಎಂದ. ನಾನು ನಿಂತ ನಿಲುವಿನಲ್ಲಿಯೇ ಸ್ತಂಭಿಸಿದೆ !

ನಾನು ಸಾಲ ತಂದಿದ್ದು ಇವನಿಗೆ ಹೇಗೆ ಗೊತ್ತಾಯಿತು ? ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ 'ಏನೋ ! ನಾನು ತಂದಿಟ್ಟ ಹಣವನ್ನು ನನ್ನ ಮನೆಯಲ್ಲಿಯೇ ಉಳಿಸಿರುವೆಯಾ?' ಎಂದು ಕೇಳಿದೆ. ಅದಕ್ಕವನು 'ಬುದ್ದೀ, ನಿನ್ನ ಹಣವನ್ನು ನಾನು ತಾಕಿಯೇನೇ ? ನನಗೆ ಬೇಕಾಗುವುದಾದರೂ ಎಷ್ಟು? ನಾನೆಲ್ಲಿಯೇ ಕಳ್ಳತನ ಮಾಡಲಿ, ನೂರುಗಟ್ಟಲೆ ಎಂದೂ ಒಯ್ದವನಲ್ಲ. ಎರಡು ಮೂರು ತಿಂಗಳುಗಳವರೆಗೆ ಕುಡಿಯೋಕೆ, ತಿಂಡಿಗೆ ಸಾಕಾಗುವಷ್ಟನ್ನಲ್ಲದೆ ಹೆಚ್ಚಿಗೇನೂ ಕದಿಯೋಲ್ಲ. ನನ್ನ ಜೀವಾ ಇರೋತನ್ಕಾ ನಿನ್ನ ಹಣದಲ್ಲಿ ಒಂದು ಚಿಕ್ಕಾಸೂ ಆಚೆಗೆ ಹೋಗದು !' ಎಂದ. 'ಸರಿಯಪ್ಪಾ ! ನಿನ್ನ ದಯೆ !' ಎಂದೆ. 'ಬುದ್ದೀ, ನೀನು ತುಂಬ ಬದಲಾಯಿಸಿಬಿಟ್ಟಿರುವೆ. ಹೀಗಾಗಿ ಹೋಗಲು ಏನು ಕಾರಣ ಬುದ್ದೀ ?' ಎಂದು ಕೇಳಿದ. 'ನಾನೆಲ್ಲಿ ಬದಲಾಯಿಸಿದ್ದೇನೋ? ನಾನೇನೂ ಬದಲಾಯಿಸಿಲ್ಲವಲ್ಲಾ !' ಎಂದೆ. 'ಅದಲ್ಲಾ ಬುದ್ದೀ. ನಿನ್ನ ತಲೆಯ ಮೇಲೀಗ ಹುಡುಗರ ಭಾರ ಬಿದ್ದಿದೆ. ನಿನ್ನ ತಂಗಿಗೆ ಮದುವೆ ಮಾಡ್ತೀ ಅಂತಿಟ್ಕೊ. ಇಬ್ಬರು ತಮ್ಮಂದಿರಿಗೆ ಹೇಗಪ್ಪಾ ? ಅಂತ ಅಂದ್ಕೊಳ್ತಾ ಇದೀಯೆ. ಇಷ್ಟೇನೇ ಅಥವಾ ಇನ್ನೇನಾದ್ರೂ ಮನಸ್ಸಿಗೆ ಕಷ್ಟವಾಗಿದೆಯೇ ?' ಎಂದು ಕೇಳಿದ. 'ಛೆ ! ಛೆ ! ಕಳ್ಳಮುಂಡೇಮಗನೇ ! ಇದೆಲ್ಲಾ ನಿನಗೇಕೆ, ನಡಿಯಾಚೆ!' ಎಂದೆ. ಅವನು ಮತ್ತಷ್ಟು ದೂರ ನನ್ನೊಂದಿಗೇನೇ ನಡೆದು ಬಂದ.

ನನ್ನ ಸಾಕುತಂದೆಯ ಊರು ಸಮೀಪಿಸುತ್ತಿತ್ತು. ಅವನು 'ಈ ರಾತ್ರಿಗೆ ಈ ಊರಲ್ಲೇ ಮಲಗು. ನಸುಕಿನಲ್ಲಿಯೇ ಎದ್ದು ಹೋಗುವಿಯಂತೆ' ಎಂದು ಹೇಳಿ, ಹೊರಟುಹೋಗತೊಡಗಿದ. ನಾನು ಕರೆದು 'ಈ ಒಂದು ರೂಪಾಯಿ ತಗೊಳ್ಳೋ, ಕುಡಿತಕ್ಕೆ ಬರುತ್ತೆ' ಎಂದೆ. ಅವನು 'ರೂಪಾಯಿ ಬೇಡ ಬುದ್ದೀ. ನಾನು ನಿಮ್ಮೂರಿಗೆ ಬರ್ತೇನೆ. ನನಗೆ ಉಡಲು ಬಟ್ಟೆಗಳಿಲ್ಲ. ಒಂದು ಏಕವಸ್ತ್ರ* ಕೊಟ್ಟರೆ ಸಾಕು, ಸಂತೋಷಪಡ್ತೀನಿ' ಎಂದ. 'ಹಾಗೇ ಆಗಲಿ ಬಾ' ಎಂದೆ. ಅವನು ಹೊರಟುಹೋದ.

ನಾನು ಮರುದಿನ ಸಾಯಂಕಾಲ ಗುಂಟೂರು ಸೇರಿಕೊಂಡೆ. ನಾನೇಕೆ ಗುಂಟೂರಿಗೆ ಬಂದೆನೋ ನನಗೆ ತಿಳಿಯದು. ಮನೆ ನೋಡಿ, ಅಡುಗೆ ಮಾಡುವ ವ್ಯಕ್ತಿಯನ್ನು ಕುದುರಿಸಿಕೊಂಡು ಬರಲೆಂದೇ ? ನಾನು ಈ ಉದ್ದೇಶದಿಂದ ಬರಲಿಲ್ಲವೆಂಬುದನ್ನು ನಾನು ಬಲ್ಲೆ. ಆ ರಾತ್ರಿ ಖಾನಾವಳಿಯಲ್ಲಿ ಊಟ ಮಾಡಿ, ಯಾವುದೋ ನಾಟಕ ನೋಡಲು ಹೋದೆ. ಅದು ಹರಿಶ್ಚಂದ್ರ ನಾಟಕ. ಹಾಲ್‌ನಲ್ಲಿ ಜನ ಕಿಕ್ಕಿರಿದು ತುಂಬಿದ್ದರು. ಉದ್ದನೆಯ ಮೂಗಿನ ವ್ಯಕ್ತಿಯೊಬ್ಬ ಹರಿಶ್ಚಂದ್ರ ಪಾತ್ರ ಧರಿಸಿದ್ದ. ತುಂಬ ಚೆನ್ನಾಗಿತ್ತು. ಜನವೆಲ್ಲಾ ಆತನ ಹೆಸರೆಂಥದೋ ಮಾತನಾಡಿಕೊಳ್ಳುತ್ತಿದ್ದರು. ಕೊನೆಗೆ ಹರಿಶ್ಚಂದ್ರ ಸುಡುಗಾಡಿನಲ್ಲಿ ನಿಂತುಕೊಳ್ಳುವಾಗ–ಆತ ಒಂಟಿಕಾಲಿನ ಮೇಲೆ ನಿಂತುಕೊಂಡು, ಬಲಪಾದವನ್ನು

---

*ಏಕವಸ್ತ್ರ–ತೆಲುಗಿನಲ್ಲಿ ರೆಕ್ಕ ಚಾಪು ಎನ್ನುತ್ತಾರೆ. ಹಾಗೆಂದರೆ–ಪಂಚೆ ಹಾಗೂ ಶಾಲನ್ನು ಏಕವಾಗಿಯೇ ನೇಯ್ದ ಬಟ್ಟೆ. –ಅನುವಾದಕ.

ಎಡತೊಡೆಯ ಮೇಲಿರಿಸಿಕೊಂಡು, ಕೋಲನ್ನು ಭುಜಕ್ಕೆ ಅಡ್ಡಲಾಗಿರಿಸಿಕೊಂಡು—ಸರಿಯಾಗಿ ಮಾಲರವನು ನಿಂತುಕೊಳ್ಳುವಂತೆ ನಿಂತುಕೊಂಡ. ನಾಟಕ ನಡೆಯುತ್ತಿದ್ದರೆ ಎಲ್ಲರೂ ಅಳುತ್ತಿದ್ದರು. ಆತ ಯಾರೋ ಆಮೇಲೆ ಗೊತ್ತಾಯಿತು ನನಗೆ. ನಾನು ಪುನಃ ನನ್ನ ಆ ಪ್ಲೀಡರ್ ಸ್ನೇಹಿತನ ಮನೆಗೆ ಹೋಗಿ ಮಲಗಿಕೊಂಡೆ. ನನಗೆ ನಿದ್ರೆ ಬರಲಿಲ್ಲ. ಆಲೋಚನೆ ಬಗೆ ಹರಿಯಲಿಲ್ಲ. ಹರಿಶ್ಚಂದ್ರ, ಪಾಪ, ತನ್ನ ಋಣವನ್ನು ತೀರಿಸಲು ಹೆಂಡತಿಯನ್ನು ಮಾರಿಬಿಟ್ಟ ಮಹಾವ್ಯಕ್ತಿ ಎಂದುಕೊಂಡೆ. ಆ ಕಾಲದಲ್ಲಿ ಹೆಂಡತಿಯರನ್ನು ಮಾರಿಕೊಳ್ಳುವ ಪದ್ಧತಿಯೂ ಸಹ ಇತ್ತೇನೋ. ವಿಚಿತ್ರವಾಗಿಯೇ ಇದೆ.

ಆ ಮರುದಿನ ಸಣ್ಣದೊಂದು ಮನೆ ಮಾತಾಡಿದೆ. ಅಡುಗೆ ಮಾಡುವ ಸಲುವಾಗಿ ಗೊತ್ತಾದ ವ್ಯಕ್ತಿ ಒಬ್ಬ ಮುದುಕಿ. ಆಕೆಯೂ ನಮ್ಮ ಜನವೇ. ಆಕೆಗೆ ನನ್ನವರೆಂಬುವರಾರೂ ಇಲ್ಲ. ಕೇವಲ ಅನ್ನ ಹಾಕಿದರೆ ಸಾಕು ಇರುತ್ತೇನೆ –ಎಂದಳು. ನಾನು, ಅನ್ನ ಹಾಕಿ ವರ್ಷಕ್ಕೆ ಎರಡು ಜೊತೆ ಸೀರೆ, ತಿಂಗಳಿಗೆ ಎರಡು ರೂಪಾಯಿಗಳನ್ನು ಕೊಡುತ್ತೇನೆಂದೆ. ಆಕೆಗೆ ಬೆಟ್ಟ ಹತ್ತಿದಷ್ಟು ಸಂತೋಷವಾಯಿತು. ಆ ಮಾರನೆಯ ದಿನ, ಆ ಮನೆಯಲ್ಲಿ ಆ ಮುದುಕಿಯ ಕೈಲಿ ಅಡುಗೆ ಮಾಡಿಸಿ ಊಟ ಮಾಡಿದೆ. ಆ ಮುದುಕಿ ಎಷ್ಟು ಒಳ್ಳೆಯ ಹೃದಯದವಳೋ ಹೇಳಲಾರೆ. ಆಕೆ ನನ್ನನ್ನು 'ಮಗೂ, ನಿನಗೆ ಮದುವೆಯಾಗಿದೆಯಾ? ಹುಡುಗರೆಷ್ಟು?' ಎಂದು ಕೇಳಿದಳು. ನಾನು ನಕ್ಕು 'ಆಗಿದೆ, ಹುಡುಗರು ಐದು ಜನ !' ಎಂದೆ. ಆಕೆ ನಂಬಲಿಲ್ಲ. "ನೀನಿಷ್ಟು ಚಿಕ್ಕವನು. ನಿನಗೆ ಐದು ಜನ ಮಕ್ಕಳು ಹೇಗಿದ್ದಾರೆ?" ಎಂದಳು. 'ಹೇಗಿದ್ದಾರು ಎಂದರೆ ? ಇದಾರೆ. ನಮ್ಮ ಹುಡುಗರ ಓದಿನ ಅನುಕೂಲಕ್ಕಾಗಿಯೇ ಈ ಮನೆ ಮಾತಾಡಿದ್ದು ; ನಿನ್ನನ್ನು ಅಡುಗೆಗೆ ಏರ್ಪಾಟು ಮಾಡಿದ್ದು. ಇಬ್ಬರು ಗಂಡು ಮಕ್ಕಳು, ಒಬ್ಬ ಹೆಣ್ಣು ಹುಡುಗಿ ಇಲ್ಲಿಗೆ ಓದಲು ಬರುತ್ತಾರೆ' ಎಂದೆ. ಆ ಹುಚ್ಚು ಭಾಗ್ಯಶಾಲಿ ನಿಜವೆಂದೇ ಭಾವಿಸಿದಳು. ಅನಂತರ ನಾನು ಇನ್ನೂ ಎರಡೂ ದಿನಗಳವರೆಗೆ ಆ ಊರಿನಲ್ಲೇ ಇದ್ದೆ. ತಿನ್ನುವುದು, ತಿರುಗುವುದು, ನಿದ್ರಿಸುವುದಲ್ಲದೆ ಮತ್ತಿನ್ನೇನೂ ಕೆಲಸವಿರಲಿಲ್ಲ. ಮೂರನೆಯ ದಿನ ಊರಿಗೆ ಹೊರಟು ಬರುತ್ತಾ, ನನ್ನ ಪ್ಲೀಡರ್ ಸ್ವೇಹಿತನಿಗೆ ಹೇಳಿದೆ 'ನನ್ನ ಮಾವನ ಮಗಳು ಕೂಡಾ ಓದಲು ಬರುತ್ತಾಳೆ. ಮನೆ ನೋಡಿ, ಅಡುಗೆ ಮಾಡಲು ಒಬ್ಬ ಮುದುಕಿಯನ್ನೂ ಗೊತ್ತುಮಾಡಿದ್ದೇನೆ. ನೀವು ಇನ್ನೂ ಸ್ವಲ್ಪ ಎಚ್ಚರಿಕೆಯಿಂದ ಅವರನ್ನು ನೋಡಿಕೊಳ್ಳಬೇಕು.'

ಆತ ಆಶ್ಚರ್ಯಚಕಿತನಾಗಿ "ನೀನು ಅಸಾಧ್ಯನ ಹಾಗೆ ಕಾಣುತ್ತೀ ಕಣಯ್ಯ! ನಿನ್ನಂಥ ವ್ಯಕ್ತಿ ಹಳ್ಳಿಯಲ್ಲೇ ಅಲ್ಲ–ಪಟ್ಟಣದಲ್ಲೂ ಇಲ್ಲ. ಹೆಣ್ಣುಮಕ್ಕಳನ್ನು ಓದಿಸಬೇಕೆಂದರೆ ನಮ್ಮವರು ಪ್ರಾಣ ಬಿಟ್ಟಂತೆ ಆಡ್ತಾರೆ. ಅದರಲ್ಲೂ ನಿಮ್ಮ ಜನ ಅಸಲು ಒಪ್ಪುವುದೇ ಇಲ್ಲ. ನೀನು ನನ್ನ ಸ್ನೇಹಿತನಾಗಿರುವುದು ನನ್ನ ಮಹಾಭಾಗ್ಯವೆಂದೇ ಭಾವಿಸುವೆ' ಎಂದು ಮುಂತಾಗಿ ಏನೇನೋ ಹೇಳಿದ. ಆ ದಿನ ರಾತ್ರಿ ಒಮ್ಮೆ ತಿರುಪತಿಗೆ ಹೋಗಿ ಬರಬೇಕೆಂದೆನ್ನಿಸಿತು ನನಗೆ. ಆದರೆ ಆ ಮರುದಿವೇ ಶಾಲೆ ತೆರೆಯುವುದು. ನಾನು ತಿರುಪತಿಗೆ ಹೋಗಿಬಿಟ್ಟರೆ–ಹುಡುಗರನ್ನು

ಗುಂಟೂರಿಗೆ ಕರೆದುಕೊಂಡು ಬರುವವರು ಯಾರು ? ಆದ್ದರಿಂದ ನಾನು ಮರುದಿನ ಊರಿಗೆ ಹೊರಟುಬಿಟ್ಟೆ

ಹುಡುಗರನ್ನು ಕರೆದೊಯ್ಯಲು ಗಾಡಿಗೆ 'ಗೂಡು' ಹಾಕಿಸಿದೆ. ಆದರೆ ನನ್ನ ಮಾವನ ಮಗಳಿಗೆ ಓದಲು ತನ್ನನ್ನ ಕಳಿಸುವೆನೋ ಇಲ್ಲವೋ ಎಂಬ ಅನುಮಾನವಿನ್ನೂ ಬಿಟ್ಟುಹೋಗಿರಲಿಲ್ಲ. ನಾನು ಮನೆ ಗೊತ್ತುಮಾಡಿದ್ದ ಸಂಗತಿ ಅವಳಿಗೇನು ಗೊತ್ತು? ನಾನು ಬಾಗಿಲ ಹತ್ತಿರ ಕುಳಿತಿದ್ದೆ ; ಅವಳು ಅಲ್ಲಿಗೆ ಬಂದು 'ಮಾವಯ್ಯಾ, ನನ್ನ ಓದಿನ ವಿಷಯ ಏನು ಮಾಡಿದೆ?' ಎಂದು ಹೇಳಿದಳು. ನಾನು 'ನೋಡು, ನೀನು ಹೋಗುತ್ತೇನೆನ್ನುತ್ತಿರುವಾಗ ನಾನು ತಾನೇ ಏನು ಹೇಳಲಿ ? ಬೇಡವೆನ್ನಲು ನನಗೇನು ಹಕ್ಕಿದೆ ? ನಾನು ನಿಮ್ಮ ಹೊಲಗಳನ್ನು ನೋಡಿಕೊಳ್ಳುತ್ತಾ ನೀವೆಲ್ಲಾ ಹೇಳಿದಂತೆ ನಡೆದುಕೊಳ್ಳುವವನೇ ವಿನಾ ನನಗೆ ಸ್ವಾತಂತ್ರ್ಯವೇನೂ ಇಲ್ಲ. ನೀನು ಹೋಗ್ತೀನಿ ಅಂತ ಹೇಳ್ತಾ ಇದೀಯೆ. ಆದ್ದರಿಂದ ಕಳಿಸಿಕೊಡುತ್ತೇನೆ' ಎಂದು ನುಡಿದೆ. 'ಹಾಗಾದರೆ ತಮ್ಮಯ್ಯನೊಂದಿಗೇನೇ ಕಳಿಸ್ತೀಯಲ್ಲಾ?' ಎಂದು ಕೇಳಿದಳು, ನಾನು ಊಂ ಎಂದೆ. 'ಹಾಗಾದರೆ ನನಗೆ ಸೀರೆಗಳೂ, ರವಿಕೆಗಳೂ ಬೇಕು. ಅಲ್ಲಿಗೆ ಹೋದ ಮೇಲೆ ಇನ್ನೇನೇನು ಬೇಕಾಗುತ್ತೋ? ಅಲ್ಲದೆ ಒಂದಿಷ್ಟು ಹಣವೂ ಬೇಕಾಗುತ್ತೆ ಎಂದಳು. 'ಐನೂರು ರೂಪಾಯಿ ಸಾಲ ತಂದಿದೇನೆ. ಇನ್ನೂರು ರೂಪಾಯಿ ಮನೇಲಿದೆ. ಏಳುನೂರು ತೆಗೆದುಕೊಂಡು ಹೊರಡಿ. ನಿಮ್ಮಿಷ್ಟ' ಎಂದೆ. 'ನನ್ನಿಷ್ಟ ಏನ್ಬಂತು? ನೀನಾಗಿ ಕಳಿಸಿಕೊಟ್ಟರೆ ಹೋಗುತ್ತೇನೆ. ಇಲ್ಲದಿದ್ದರೆ ಹೋಗುವುದಿಲ್ಲ' ಎಂದಳು. ನಾನು ಮೌನವಾಗಿದ್ದೆ.

ಆ ಮರುದಿನ ನಸುಕಿನಲ್ಲಿಯೇ ಹೊರಟೆವು. ನನ್ನ ತಂಗಿ, ಚಿಕ್ಕ ತಮ್ಮ ಇಬ್ಬರು ಮಾತ್ರವೇ ಮನೆಯಲ್ಲುಳಿದರು. ಜೀತದಾಳನ್ನು ಕರೆದು 'ಲೋ, ನಾನು ಬರೋತನಕ ಮನೆಯ ಕಡೆ ಹುಷಾರಾಗಿರು. ರಾತ್ರಿ ಹೊತ್ತು ಬಂದು ಜಗುಲಿಯ ಮೇಲೆ ಮಲಗು' ಎಂದು ತಿಳಿಸಿದೆ.

ಹೊತ್ತು ಮುಳುಗುವುದರೊಳಗೆ ನಾವು ನನ್ನ ಚಿಕ್ಕಮ್ಮನ ಊರು ತಲುಪಿದೆವು. ಆ ರಾತ್ರಿ ಅಲ್ಲಿಯೇ ಉಳಿದು ಮರುದಿನ ಬೆಳಿಗ್ಗೆಯೇ ಹೊರಡಲನುವಾದರೆ – ನನ್ನ ಚಿಕ್ಕಮ್ಮ ಅಡ್ಡಬಂದು ಹೋಗಗೊಡಲಿಲ್ಲ. ಆ ದಿನ ಗಾರಿಗೆಗಳನ್ನು ಮಾಡಿ ನಮಗೆಲ್ಲಾ ಔತಣ ಮಾಡಿಸಿದಳು. ನನ್ನ ಮಾವನ ಮಗಳನ್ನು ನಾನು ಓದಲೆಂದು ಕಳಿಸಿಕೊಡುತ್ತಿರುವುದು ಆಕೆಗೆ ಆಶ್ಚರ್ಯಕರವಾಗಿತ್ತು. 'ಮಗೂ, ನೀನು ನಿನ್ನ ಹೆಂಡತಿಯನ್ನು ಓದಲು ಕಳಿಸುತ್ತಿರುವೆ ; ಹಾಗಾದರೆ ಈ ವರ್ಷ ನಿನ್ನ ಮದುವೆ ನಡೆಯುವುದಿಲ್ಲವೇನೋ?' ಎಂದು ಕೇಳಿದಳು. 'ನನ್ನದೇನಿದೆಯಮ್ಮಾ? ಅವಳ ಇಷ್ಟದ ಪ್ರಕಾರವೇ ನಡೆದುಕೊಳ್ಳುವವನು. ಅವಳು ಯಾವಾಗ ಒಪ್ಪಿದರೆ ಆವಾಗಲೇ' ಎಂದೆ. ನನ್ನ ಚಿಕ್ಕಮ್ಮ ಅವಳೊಂದಿಗೆ 'ಏನೇ, ಓದಿನ ಗೀಳು ಹತ್ತಿಸಿಕೊಂಡೆ. ಮದುವೆ ಮಾಡಿಕೊಳ್ಳೋಲ್ಲವಾ ಹೇಗೆ?' ಎಂದು ಕೇಳಿದಳು. ಅವಳೇನೂ ಮಾತನಾಡಲಿಲ್ಲ.

ಆ ದಿನ ಹೊತ್ತು ಮುಳುಗಿದ ಮೇಲೆ ಗಾಡಿ ಕಟ್ಟಿಕೊಂಡು ಪಯಣವಾದೆವು. ಪೆಟ್ಟಿಗೆಯಲ್ಲಿ ಏಳುನೂರು ರೂಪಾಯಿಗಳಿದ್ದವು. ನನ್ನ ಮಾವನ ಮಗಳ ಮೈಮೇಲೆ

ಆಭರಣಗಳಿದ್ದವು. ನಾನು ದೊಣ್ಣೆ ಮರೆತು ಬಂದಿದ್ದೆ ಅಲ್ಲದೆ, ನನಗೆ ಮುನ್ನಿನ ಧೈರ್ಯವೂ ಇಲ್ಲವೇನೋ ಎನ್ನಿಸುತ್ತಿತ್ತು. ಆದರೂ ಸಾಹಸದಿಂದ ಹೊರಟೆವು. ಒಂದು ಹರದಾರಿ ದೂರ ಹೋದೆವೋ ಇಲ್ಲವೋ, ಅದೇ ಹಾವಾಡಿಗ ಪುನಃ ಕಾಣಿಸಿಕೊಂಡು, ನಮ್ಮನ್ನು ಕೂಡಿಕೊಂಡ. 'ಬುದ್ದೀ, ನೀನೊಬ್ಬನೇ ಗಾಡಿಯನ್ನು ಹೊಡೆಯುತ್ತಿದ್ದೀಯಲ್ಲಾ. ಜೀತದಾಳನ್ನು ಕರೆದುಕೊಂಡೇಕೆ ಬರಲಿಲ್ಲ?' ಎಂದು ಕೇಳಿದ. 'ನಾನೊಬ್ಬನೇ ಸಾಕಲ್ಲವೇನೋ !' ಎಂದೆ ! ಅದಕ್ಕೆ ಅವನು 'ನಾನಿಲ್ಲವೇ ಬುದ್ದೀ, ಪರವಾಗಿಲ್ಲ ನಡಿ' ಎಂದ. ಗಾಡಿ ಚಲಿಸುತ್ತಿತ್ತು. ಅವನು ಕಳ್ಳಕಾಕರ ಕಥೆಗಳನ್ನು ಹೇಳಲು ಮೊದಲಿಟ್ಟ. ನನ್ನ ತಮ್ಮ ಗಾಡಿಯೊಳಗೆ ನಿದ್ರೆ ಮಾಡುತ್ತಿದ್ದ. ನನ್ನ ಮಾವನ ಮಗ ಆ ಕಥೆಗಳನ್ನು ಕೇಳುತ್ತಾ, ನಗುತ್ತಾ, ಆಶ್ಚರ್ಯಪಡುತ್ತಾ, ಆಮೇಲೇನಾಯ್ತು? ಆಮೇಲೇನಾಯ್ತು? ಎನ್ನುತ್ತಾ ಅವನನ್ನು ಅವಸರಪಡಿಸುತ್ತಾ ಹಾಗೆಯೇ ಕುಳಿತುಕೊಂಡಿದ್ದ. ನನ್ನ ಮಾವನ ಮಗಳು ಅರೆ ನಿದ್ರೆ–ಅರೆ ಎಚ್ಚರದ ಸ್ಥಿತಿಯಲ್ಲಿದ್ದಳು. ಹಾವಾಡಿಗ ಮಾತ್ರ ಕಥೆಗಳನ್ನು–ಮುಖ್ಯವಾಗಿ ನನ್ನ ಮಾವನ ಮಗನಿಗೇ ಹೇಳುತ್ತಿದ್ದ. ನನಗೆ ಮಾತ್ರ ಒಳಗೊಳಗೇ ಭಯ. ಆ ಹಾವಾಡಿಗನನ್ನು ನಂಬಬಹುದೋ, ನಂಬಕೂಡದೋ ತಿಳಿಯಲಿಲ್ಲ. ಅವನ ಮನಸ್ಸಿನಲ್ಲಿನ್ನೂ ಹಳೆಯ ಹಗೆ ಹೊಗೆಯಾಡುತ್ತಿದೆಯೋ ಏನೋ !

ರಾತ್ರಿ ಎರಡು ಜಾವದ ಹೊತ್ತು ನನ್ನ ಸಾಕುತಂದೆಯ ಊರ ಸಮೀಪಕ್ಕೆ ಬಂದಿದ್ದೆವು. ಅಲ್ಲಿ ಇಳಿದು ಇನ್ನುಳಿದ ರಾತ್ರಿಯನ್ನು ಕಳೆದು, ಮರುದಿನ ಪ್ರಾತಃಕಾಲವೇ ಹೊರಟುಬಿಡೋಣವೆಂದು ನನ್ನ ಆಲೋಚನೆ. ಆದರೆ ನನ್ನ ಮಾವನ ಮಗ 'ಭಾವಯ್ಯಾ, ಭಯವೇನಿದೆ? ಗಾಡಿಯನ್ನು ಎಲ್ಲೂ ನಿಲ್ಲಿಸದೆ ಒಂದೇ ಉಸುರಿಗೆ ಹೊಡೆದುಕೊಂಡು ಹೋದರೆ ನಾಳೆ ಸ್ಕೂಲಿನ ಸಮಯಕ್ಕೆಲ್ಲಾ ಗುಂಟೂರಿನಲ್ಲಿರುತ್ತೇವೆ. ಈಗಲೇ ಎರಡು ದಿನಗಳು ವೃಥಾ ಕಳೆದುಹೋಗಿವೆ' ಎಂದ. ಹಾವಾಡಿಗನೂ ಸಹ ಗಾಡಿಯನ್ನು ನಿಲ್ಲಿಸದೆ ಹೊಡೆಯಬೇಕೆಂಬುದಕ್ಕೇ ಒತ್ತಾಸೆ ಕೊಟ್ಟ. ನಾನು ಆ ಊರನ್ನು ಪಕ್ಕಕ್ಕೆ ಮಾಡಿಕೊಂಡು ಗಾಡಿ ಹೊಡೆದೆ. ಸ್ವಲ್ಪ ಹೊತ್ತಿಗೆಲ್ಲಾ ತಣ್ಣನೆಯ ಗಾಳಿ ಬೀಸತೊಡಗಿತು. ನನಗೆ ನಿದಾನವಾಗಿ ನಿದ್ರೆ ಹತ್ತಿತು. ಎತ್ತುಗಳು ತಮ್ಮಷ್ಟಕ್ಕೆ ತಾವೇ ದಾರಿಬಿದ್ದು ಹೋಗುತ್ತಿದ್ದವು. ಗಾಡಿಯಲ್ಲಿ–ನಾನು ತೊಟ್ಟಿಯಲ್ಲಿ ಕುಳಿತಿದ್ದೆ. ನನ್ನ ಮಾವನ ಮಗಳು ನನ್ನ ಬಳಿಯಲ್ಲಿಯೇ ಕುಳಿತುಕೊಂಡಿದ್ದಳು. ನಿದ್ರೆಯಲ್ಲಿ ನಾನು ಅವಳ ಮೇಲೆ ಕೈ ಹಾಕಿದೆನೆಂದು ಕಾಣುತ್ತದೆ. ಅವಳು ನನ್ನ ಕೈ ಹಿಡಿದೆತ್ತಿ ಅತ್ತ ಹಾಕಿದಳು. ನನಗೆ ತಟಕ್ಕನೆ ಎಚ್ಚರವಾಗಿಬಿಟ್ಟಿತು. ಕೂಡಲೇ ನಡೆದುದೆಲ್ಲವೂ ನನಗೆ ಗೊತ್ತಾಗಿಬಿಟ್ಟಿತು. ಅವಳೇನೆಂದುಕೊಂಡಳೋ? ನಾನು ಬೇಕು ಬೇಕೆಂದೇ ಕೈ ಹಾಕಿದೆನೆಂದುಕೊಂಡಳೋ ಏನೋ?

ಸ್ವಲ್ಪ ದೂರ ಹೋದ ಮೇಲೆ ಯಾರೋ ನಾಲ್ಕು ಜನರು–ನಮ್ಮ ಗಾಡಿಗೆ ಎದುರಾಗಿ ಬರುತ್ತಿರುವುದು ಕಂಡುಬಂದಿತು. ಆಗಾಗಲೇ ತಿಂಗಳು ಮುಳುಗಿತ್ತು. ಕತ್ತಲಾವರಿಸಿತ್ತು. ಅವರು ಹತ್ತಿರಕ್ಕೆ ಬರುತ್ತಲೇ ಗಾಡಿ ನಿಲ್ಲಿಸೆಂದು ಗರ್ಜಿಸಿದರು ! ನಾನು ಕೊಂಪೆ ಮುಳುಗಿತೆಂದುಕೊಂಡೆ. ಇದೆಲ್ಲಾ ಹಾವಾಡಿಗನ ಮಸಲತ್ತೆಂದೇ ಭಾವಿಸಿದೆ. ಆದರೆ ಹಾವಾಡಿಗ

ಗಾಡಿಯ ಪಕ್ಕ ಪಕ್ಕದಲ್ಲಿಯೇ ನಡೆದು ಬರುತ್ತಾ ಇದ್ದು ಅವನು ಗಾಡಿಯ ಮುಂಭಾಗಕ್ಕೆ ಬಂದು ಆ ರೀತಿ ಪ್ರಶ್ನಿಸುತ್ತಲೇ ಆ ನಾಲ್ವರು "ನೀನೇನೋ ! ನೀನೇನೋ !' ಎಂದರು. ಗಾಡಿ ಯಾರದೆಂದು ಕೇಳಿದರು. 'ಯಾರದಾದರೆ ನಿಮಗೇನಂತೆ? ಹೊರಡಿ' ಎಂದ ಹಾವಾಡಿಗ. ಅವರು ಮರುಮಾತಾಡದೆ ಹೊರಟುಹೋದರು.

ನನಗೆ ಹಾವಾಡಿಗನ ಮೇಲೆ ನಂಬಿಕೆ ಏರ್ಪಟ್ಟಿತು. ಅವನು ನಿಜವಾಗಿಯೂ ದ್ರೋಹವನ್ನೇ ಮಾಡಲೆಣಿಸಿದ್ದರೆ ಈ ಸುಸಮಯವನ್ನು ಬಿಟ್ಟುಕೊಡುತ್ತಿದ್ದನೇ ? ಪೆಟ್ಟಿಗೆಯಲ್ಲಿ ಹಣವಿದೆ ಎಂಬುದೇನು ಅವನಿಗೆ ಗೊತ್ತಿಲ್ಲವೇ? ನನಗೆ ಭಯಪಟ್ಟು ಬಿಟ್ಟುಕೊಟ್ಟನೆನ್ನಲೆ? ನಾನು ಒಬ್ಬ ; ಅವರು ಐದು ಜನರಾಗುತ್ತಿದ್ದರು. ನಾನೊಬ್ಬನೇ ಅವರನ್ನು ಹೇಗೆ ಎದುರಿಸಿ ನಿಲ್ಲುತ್ತಿದ್ದೆ, ಗೆಲ್ಲುತ್ತಿದ್ದೆ ? ಆ ವ್ಯಕ್ತಿಗಳನ್ನು ಅವನೇ ಕರೆಕಳಿಸಿದ್ದ ಪಕ್ಷದಲ್ಲಿ–ನನ್ನ ಮೇಲೆ ಬೀಳಲು ನಾಲ್ಕು ಜನರನ್ನು ಮಾತ್ರವೇ ಕರೆಕಳಿಸುತ್ತಿರಲಿಲ್ಲ.....

ಮರುದಿನ ಹೊತ್ತೇರಿದ ಮೇಲೆ ಗುಂಟೂರು ತಲಪಿದೆವು. ಹುಡುಗರು ಕೂಡಲೇ ಸ್ಕೂಲಿಗೆ ಹೊರಟುಬಿಟ್ಟರು. ಮುಂದಿನ ತರಗತಿಯಲ್ಲಿ ಸೇರಿಕೊಂಡರು. ಆ ಮರುದಿನ ನನ್ನ ಮಾವನ ಮಗಳನ್ನು ಹೆಣ್ಣು ಮಕ್ಕಳ ಶಾಲೆಯಲ್ಲಿ ಸೇರಿಸಿದೆ. ಫೋರ್ತ್ ಫಾರಂನಲ್ಲಿ ಸೇರಿಕೊಂಡಳು. ಮನೆಗೂ ಸ್ಕೂಲಿಗೂ ಸಾಕಷ್ಟು ದೂರವೇ, ಆದ್ದರಿಂದ ಅವಳನ್ನು ಶಾಲೆಗೆ ಕರೆದುಕೊಂಡು ಹೋಗಲೂ, ಶಾಲೆಯಿಂದ ಮನೆಗೆ ಕರೆದುಕೊಂಡು ಬರಲೂ, ಒಂದು ಗಾಡಿಯನ್ನು ಕುದುರಿಸಿದೆ. ಒಂದು ವಾರದ ದಿನಮಾನ ನಾನು ಗುಂಟೂರಿನಲ್ಲಿಯೇ ಉಳಿದುಕೊಂಡೆ. ಉಳಿದ ಹಣವನ್ನೆಲ್ಲಾ ನನ್ನ ಪ್ಲೀಡರ್ ಸ್ನೇಹಿತನ ಕೈಗೆ ಕೊಟ್ಟೆ 'ಹುಡುಗರ ಮೇಲೆ ನಿಗಾ ಇಡಗಿರಿ' ಎಂದು ಕೇಳಿಕೊಂಡೆ. ಶನಿ ಭಾನುವಾರಗಳು ಬಂದುವು. ಹುಡುಗರಿಗೆ ಸ್ಕೂಲಿರಲಿಲ್ಲ. ಮನೆಯಲ್ಲಿಯೇ ಇದ್ರು. ನಾನು ಎಲ್ಲೆಲ್ಲಿಯೋ ತಿರುಗಾಡುತ್ತಿದ್ದು ಹೊತ್ತಿಗೆ ಸರಿಯಾಗಿ ಊಟಕ್ಕೆ ಹೋಗಲಿಲ್ಲ. ನನ್ನ ಸಲುವಾಗಿ ಅವರು ಮೂವರೂ ಊಟ ಮಾಡದೆ ಹಾಗೆಯೇ ಕಾಯುತ್ತಾ ಕುಳಿತಿದ್ದರು. ನಾವು ಗುಂಟೂರಿಗೆ ಬಂದ ನಾಲ್ಕನೆಯ ದಿನವದು. ನನ್ನ ಮಾವನ ಮಗಳನ್ನು ಅಡುಗೆಯ ಮುದುಕಿ ಕೇಳಿದಳಂತೆ 'ನಿಮ್ಮ ತಂದೆ ಇನ್ನೂ ಊಟಕ್ಕೆ ಬರಲಿಲ್ಲವಲ್ಲಾ !' ಎಂದು ! ನನ್ನ ಸೋದರಮಾವನ ಮಗಳು 'ನಮ್ಮ ತಂದೆ ಯಾರು?' ಎಂದು ಕೇಳಿದಳಂತೆ. ಆದಕ್ಕೆ ಆ ವೃದ್ಧೆ 'ಈಗ ನಿಮ್ಮೊಂದಿಗೆ ಬಂದಿರುವಾತ ನಿಮ್ಮ ತಂದೆಯಲ್ಲವೇನು? ನೀವು ಮೂವರೂ ಆತನಿಗೆ ಮಕ್ಕಳಂತಲ್ಲಾ ! ಹಾಗೆಂದು ಆತ ನನಗೆ ಹೇಳಿದ್ದ' ಎಂದಳಂತೆ. ನನ್ನ ಮಾವನ ಮಗ, ನನ್ನ ತಮ್ಮ–ಇಬ್ಬರೂ ಗಹಗಹಿಸಿ ನಕ್ಕುಬಿಟ್ಟರಂತೆ. ನನ್ನ ಮಾವನ ಮಗಳು ಮಾತ್ರ ನಗದೆ ಮೌನವಾಗಿಯೇ ಅಲ್ಲಿಂದೆದ್ದು ತನ್ನ ಕೋಣೆಗೆ ಹೋಗಿಬಿಟ್ಟಳಂತೆ. ಅದಾದ ಮೇಲೆ ನಾನು ಮನೆಗೆ ಹೋದೆ. ನನ್ನ ಮಾವನ ಮಗ ನನ್ನ ಬಳಿಗೆ ಬಂದು 'ಅಪ್ಪಯ್ಯಾ! ಊಟಕ್ಕೆ ಬರೋಲ್ಲವೇ ?' ಎಂದು ಕರೆದ! 'ಅಪ್ಪಯ್ಯ ! ಏನೋ ಅದು?' ಎಂದು ಕೇಳಿದೆ. 'ನೀನೇ ಹೇಳಿದೆಯಂತೆ! ಅಜ್ಜಿಗೆ ಹೇಳಿದ್ದೀಯಲ್ಲಾ–

ನೀನು ನಮ್ಮಪ್ಪಯ್ಯನೆಂದು ! ಅದಕ್ಕೇ ಅಪ್ಪಯ್ಯ ಅಂತ ಕರೆದೆ !' ಎಂದ. ನಾನು ಉಕ್ಕಿಬಂದ ನಗುವನ್ನು ತಡೆಹಿಡಿದುಕೊಂಡೆನಾಗಲಿ ಮನಸ್ಸಿನಲ್ಲಿ ಏನೆಂದುಕೊಂಡೆನೋ ನನಗೇ ತಿಳಿಯದು!

ಆ ದಿನ ರಾತ್ರಿ ಎಲ್ಲರೂ ಮಲಗಿಕೊಂಡರು. ನಾನೊಬ್ಬನೇ ತಣ್ಣನೆಯ ಗಾಳಿಗೆ, ಹಿತ್ತಲಲ್ಲಿ ಮಂಚ ಹಾಕಿಕೊಂಡು ಮಲಗಿಕೊಂಡೆ. ಕಣ್ಣುಗಳನ್ನು ಮುಚ್ಚಿಕೊಂಡು ಏನನ್ನೋ ಯೋಚಿಸುತ್ತಾ ಇದ್ದೆ. ಹತ್ತಿರದಲ್ಲಿಯೇ ಹೆಜ್ಜೆಗಳ ಸಪ್ಪುಳ ಕೇಳಿಸಿತು. ಕಣ್ಣು ತೆರೆದು ನೋಡಿದರೆ ಅವಳು. ನಾನು ಪುನಃ ಕಣ್ಣು ಮುಚ್ಚಿಕೊಂಡೆ. ಅವಳು ನನ್ನ ಬಳಿಗೆ ಬಂದು 'ಮಾವಯ್ಯಾ' ಎಂದು ಕರೆದಳು. 'ಏನು ?' ಎಂದೆ. ಅವಳು ಹಾಗೆಯೇ ಸುಮ್ಮನೆ ನಿಂತುಕೊಂಡಳು. ಸ್ವಲ್ಪ ಹೊತ್ತಾದ ಮೇಲೆ ಮತ್ತೆ 'ಮಾವಯ್ಯಾ' ಎಂದು ಕರೆದಳು. 'ಏನು ?' ಎಂದೆ. ಅವಳು ಹಾಗೆಯೇ ಸುಮ್ಮನೆ ನಿಂತುಕೊಂಡಳು. ಸ್ವಲ್ಪ ಹೊತ್ತಾದ ಮೇಲೆ ಮತ್ತೆ 'ಮಾವಯ್ಯಾ ....' ಎಂದಳು. ನಾನು ಎದ್ದು ಕುಳಿತು 'ಏನು ಬೇಕು? ಸ್ಕೂಲಿನಲ್ಲಿ ಎಲ್ಲಾ ಸರಿಯಾಗಿದೆಯೆ? ನಿಮ್ಮನ್ನೆಲ್ಲಾ ಚೆನ್ನಾಗಿ ನೋಡ್ಕೋ ತಾರಾ ? ಇನ್ನೂ ನಿನಗೆ ನಿದ್ರೆ ಬರಲಿಲ್ಲವೇ?' ಎಂದು ಕೇಳಿದೆ. 'ಮನೇಲಿ ತುಂಬ ಸೆಕೆ' ಎಂದಳು. 'ಹಾಗಾದರೆ ನೀನೀ ಮಂಚದ ಮೇಲೆಯೇ ಮಲಗು. ನಾನು ಒಳಗೆ ಹೋಗಿ ಮಲಗಿಕೊಳ್ಳುತ್ತೇನೆ' ಎಂದೆ. 'ಅದಲ್ಲ ಮಾವಯ್ಯಾ ಸ್ವಲ್ಪ ಹೊತ್ತು ಇಲ್ಲಿಯೇ ಕುಳಿತಿದ್ದು, ನಾನೇ ಹೋಗಿ ಮನೇಲಿ ಮಲಗ್ತೇನೆ' ಎಂದಳು. ಹಾಗೆಯೇ ಆಗಲಿ ಎಂದು ಮಲಗಿ ನಾನು ಮತ್ತೆ ಕಣ್ಣು ಮುಚ್ಚಿಕೊಂಡು 'ಒಳಗೆ ಹೋಗ್ತಾ ಬಾಗಿಲಿಗೆ ಚಿಲಕ ಹಾಕು' ಎಂದೆ...ನನಗೆ ಜೋಂಪು ಹತ್ತುತ್ತಿತ್ತು. ಪುನಃ 'ಮಾವಯ್ಯಾ' ಎಂದು ಅವಳು ಕರೆದಳು. ಕಣ್ಣು ಬಿಟ್ಟು, ಎದ್ದು ಕುಳಿತುಕೊಂಡು, 'ಏನಮ್ಮಾ ಏನು? ನಿನ್ನ ಮನಸ್ಸಿನಲ್ಲೇನೋ ಬಾಧೆ ಇದ್ದಂತಿದೆ. ಹೇಳು, ನಾನಿರಬೇಕಾದರೆ ನಿನಗೇನು ಕೊರತೆ ? ಸತ್ತು ಹೋದ ಅತ್ತೆಯನ್ನು ಕರೆತರಲಾರೆನಾಗಲೀ, ಉಳಿದಿದ್ದು ಏನಾದರೂ ಹೇಳು ಮಾಡುತ್ತೇನೆ !' ಎಂದೆ. 'ಮಾವಯ್ಯಾ ! ನಮ್ಮಮ್ಮನೇ ಇದ್ದಿದ್ದರೆ ಎಷ್ಟು ಚೆನ್ನಾಗಿರ್‍ತಾ ಇತ್ತು. ನಮ್ಮಮ್ಮನೇ ಇದ್ದಿದ್ರೆ ನಿಮ್ಮ ತಂಗಿಯನ್ನು, ತಮ್ಮಂದಿರನ್ನು ಕರೆತರಲು ಒಪ್ಪುತ್ತಿರಲಿಲ್ಲವೆಂದುಕೊಳ್ಳುವೆ!' ಎಂದಳು ! ನಾನು ಯೋಚಿಸಿದೆ. ಸ್ವಲ್ಪ ಹೊತ್ತಾದ ಮೇಲೆ ಹೀಗೆಂದೆ–

'ನಿಮ್ಮ ಹಣವನ್ನು ಅವರಿಗಾಗಿ ನಾನೇನೂ ಖರ್ಚು ಮಾಡುವುದಿಲ್ಲ. ಈ ವರ್ಷ ಅನೇಕ ಕೆಲಸಗಳ ಒತ್ತಡದಲ್ಲಿ ಧಾನ್ಯ ವ್ಯಾಪಾರ ಮಾಡಲಾರದಾದೆ. ಮುಂದಿನ ಸಲಕ್ಕೆ ತಮ್ಮನ ಓದಿಗೆ, ತಂಗಿಯ ಲಗ್ನಕ್ಕಾಗುವ ಖರ್ಚನ್ನೆಲ್ಲಾ ಹೇಗೋ ಒಂದು ರೀತಿಯಲ್ಲಿ ಗಳಿಸುತ್ತೇನೆ. ವ್ಯವಹಾರವನ್ನೆಲ್ಲಾ ನಾನೇ ಮಾಡುತ್ತಿರುವುದರಿಂದ–ಹಣವನ್ನು ಕೂಡಿಯೇ ಬಳಸುತ್ತಿದ್ದೇನೆ. ಆದರೆ ಲೆಕ್ಕಗಳನ್ನು ಮಾತ್ರ ಪ್ರತ್ಯೇಕ ಪ್ರತ್ಯೇಕವಾಗಿಯೇ ಬರೆದಿಡುತ್ತಿರುವೆ' ಎಂದು ತಿಳಿಸಿದೆ. 'ನಾನು ಹಾಗೆಂದೆನೇ?' ಎಂದವಳೇ ಅವಳು ಅತ್ತುಬಿಟ್ಟಳು. ನನಗೆ ಅವಳ ವಿಚಾರವೇನೊ ಸ್ಫುರಿಸದಾಯಿತು. ನನಗೇನೂ ತೋಚದೆ 'ಹಾಗಾದರೆ ನಿನ್ನ ಉದ್ದೇಶವೇನು? ಅದೇಕೆ ಅಳ್ತಾ ಇದೀಯೆ?' ಎಂದು ಪ್ರಶ್ನಿಸಿದೆ. ಅವಳು ಮತ್ತೆ ಅಳುವುದಕ್ಕಾರಂಭಿಸಿದಳು. 'ಮಾವಯ್ಯಾ' ಎನ್ನುತ್ತಾ ಅಳತೊಡಗಿದಳು. ನನಗೇನೂ ತೋಚದಂತಾಯಿತು. ಅವಳನ್ನು

ಸಮೀಪಿಸಿ, ಅವಳನ್ನು ಹಿಡಿದುಕೊಂಡು, ನನ್ನ ಬಳಿಗೆ ಸೆಳೆದುಕೊಂಡು, 'ಅಳಬೇಡವಮ್ಮಾ, ಅಳಬೇಡ. ಏತಕ್ಕೆ ವೃಥಾ ಅಳುತ್ತೀಯೆ?' ನಿಮ್ಮ ತಾಯಿ ಇದ್ದಷ್ಟು ದಿನವೂ, ಇವರನ್ನು ಕರೆದುಕೊಂಡು ಬಂದಿದ್ದರೆ ಬೇಡಾಂತ ಅನ್ನುತ್ತಿರಲಿಲ್ಲ' ಎಂದೆ. ಆಗ ತಣ್ಣನೆಯ ಗಾಳಿಯ ಅಲೆಯೊಂದು ಬೀಸಿ ಬಂದಿತು. ನನಗೊಂದು ವಿಚಿತ್ರವಾದ ಯೋಚನೆ ತಟ್ಟಿತು. ಅವಳ ದೇಹ ನನ್ನ ದೇಹಗಳು ಒಂದಕ್ಕೊಂದು ತಾಕಿಕೊಂಡೇ ಇದ್ದವು. ನನ್ನ ಎಡಗೈ ಅವಳ ಭುಜದ ಮೇಲಿತ್ತು, ನನ್ನ ಬಲಗೈ ಅವಳ ಕೆನ್ನೆಯ ಮೇಲಿತ್ತು. ಆದರೆ ಅಷ್ಟರಲ್ಲಿಯೇ ನನ್ನ ತಮ್ಮ ಬಾಗಿಲು ತೆರೆದುಕೊಂಡು ಹಿತ್ತಲಿಗೆ ಬಂದುಬಿಟ್ಟ.

೧೭

ಆ ಮರುದಿನ ಉದಯವೇ ಊರಿಗೆ ಪಯಣವಾದೆ. ಇನ್ನೂ ಮೂರು ನಾಲ್ಕು ದಿನಗಳವರೆಗೆ ಅಲ್ಲಿಯೇ ಇರೋಣವೆಂದು ತುಂಬಾ ಅನ್ನಿಸಿತು. ಆದರೆ ಆ ಮರುದಿನವೇ ಹೊರಟುಬಂದೆ. ದಾರಿಯುದ್ದಕ್ಕು ನನ್ನ ಮಾವನ ಮಗಳಲ್ಲಿ ಈ ಬದಲಾವಣೆ ಅದೇಕೆ ಉಂಟಾಯಿತೋ ಎಂದು ಆಲೋಚಿಸಿದೆ. ತಾನು ಓದಲು ಹೋಗುತ್ತೇನೆ ಎಂದಕೂಡಲೇ ನಾನು ಒಪ್ಪಿ ಸ್ಕೂಲಿಗೆ ಸೇರಿಸಿದೆನೆಂತಲೇ? ಇನ್ನೊಂದು ಸಂಗತಿ–ಅವಳಿಗೆ ಪ್ರಾಯ ಬಂದು ಮೂರು ನಾಲ್ಕು ವರ್ಷಗಳಾಗಿವೆ. ಪ್ರಾಯ ಬರುತ್ತಲೇ ಸಕಲ ಪ್ರಾಣಿಗಳಲ್ಲೂ ಕಾಮ ಸಂಚಲನವಾಗುತ್ತದಲ್ಲವೇಗ! ಇದು ಕಾರಣವಾಗಿರಬಹುದೆಂದುಕೊಂಡೆ. ನಾನು ಅಡುಗೂಲಜ್ಜಿಯೊಂದಿಗೆ ತಾನೂ ಸಹ ನನ್ನ ಮಗಳೆಂದೇ ತಮಾಷೆಯಾಗಿ ನಾನು ಹೇಳಿದ್ದನ್ನು ಅವಳು ನಿಜವೆಂದು ಭಾವಿಸಿದ್ದು, ಅದು ಅವಳ ಮನಸ್ಸಿನ ಮೇಲೆ ಕೆಲಸ ಮಾಡಿರಬಹುದೇ? ಇವೆಲ್ಲಾ ಸೇರಿ ಪರಿಣಾಮ ಮಾಡಿರಬಹುದು. ಹೇಗಾದರೇನಂತೆ ? ನನ್ನ ಮಾವನ ಮಗಳು ನನ್ನ ಬಗ್ಗೆ ಸುಮುಖಿಳಾದಳು.

ಸುಮುಖಿಳಾದಳಲ್ಲಾ ! ನಾನಿನ್ನು ನಾಲ್ಕಾರು ದಿನಗಳವರೆಗೆ ಅಲ್ಲಿಯೇ ಇದ್ದು ಆ ಭಾವವನ್ನು ಮತ್ತಷ್ಟು ವೃದ್ಧಿಗೊಳಿಸಿ ಕ್ರಮವಾಗಿ ಸುಖಪಡುವ ಹಾದಿಯನ್ನು ಯೋಚಿಸದೆ ನಾನು ತತ್‌ಕ್ಷಣವೇ ಅದೇಕೆ ಹೊರಟುಬಂದೆ? ಆದರೂ ನನಗೇಕೆ ಸುಖ? ಸುಖಕ್ಕೂ ನನಗೂ ಹುಟ್ಟಿದಾರಭ್ಯದಿಂದಲೂ ದೂರವೇ ತಾನೇ ! ಈವೊತ್ತು ನಾನದನ್ನು ಬಯಸುತ್ತಿರುವುದು ನನಗರ್ಥವಾಗಲಿಲ್ಲ. ಮೇಲಾಗಿ ನನ್ನ ಮಾವನ ಮಗಳಿಗೆ ನನ್ನ ಬಗ್ಗೆ ನಿಜವಾಗಿಯೂ ಪ್ರೇಮ ಉಂಟಾಗಿತ್ತೇ ? ಅಥವಾ ನನ್ನ ಬಗ್ಗೆ ಕರುಣೆಯುಂಟಾಗಿತ್ತೋ ? ಕರುಣೆ, ದಯೆ, ಗೌರವ– ಇವು ಕೂಡಾ ಪ್ರೇಮದಂತೆಯೇ ಕೆಲಸ ಮಾಡುತ್ತವೆ. ಅವು ಯಾರಲ್ಲಿ ಉಂಟಾಗುತ್ತವೋ ಅವರ ನಿಜವಾದ ಪ್ರೇಮ ನಮ್ಮದಾಗದೇ ಹೋದರೂ, ಪ್ರೇಮದಷ್ಟು ಕೆಲಸ ಮಾಡುತ್ತವೆ. ನನ್ನ ಮಾವನ ಮಗಳಿಗೆ ನನ್ನ ಮೇಲೆ ಉಂಟಾಗಿದ್ದುದು ಕರುಣೆಯೇ, ಪ್ರೇಮವೇ? ಕರುಣೆ ಎಂದರೇನು ? ಪ್ರೇಮವೆಂದರೇನು?– ಎಂಬ ವಿಚಾರಕ್ಕೊಳಗಾದೆ. ಕರುಣೆ ಎಂದರೆ– ನಾವು ಕಷ್ಟಪಡುತ್ತಿದ್ದೇವಲ್ಲಾ ಎಂದು ; ನಾವು ದುಃಖದಲ್ಲಿದ್ದೇವಲ್ಲಾ ಎಂದು ಇನ್ನಿತರರಿಗೆ

ನಮ್ಮ ಮೇಲೆ ಉಂಟಾಗುವ ಒಂದು ಮೆತ್ತನೆಯ ಮನಸ್ಸು. ಪ್ರೇಮವೆಂದರೆ–ನಮ್ಮ ಅಂದ–ಚೆಂದಗಳು, ನಮ್ಮ ಸ್ವಭಾವದಲ್ಲಿರುವ ಗುಣಗಣಗಳು, ದೋಷಗಳು ಎಲ್ಲಾ ಆಚೆಯವರಿಗೆ ಇಷ್ಟವಾಗಿ, ನಮ್ಮ ಜೀವನವೆಲ್ಲಾ ತಮ್ಮ ಜೀವನದೊಂದಿಗೆ ಬೆರೆತುಹೋಗಬೇಕೆಂದು ಉಂಟಾಗುವ ಒಂದು ಮನಸ್ಸು. ಆ ಮನಸ್ಸು ಮೆತ್ತಗೂ ಅಲ್ಲ. ಕಠಿಣವೂ ಅಲ್ಲ–ಹಾಗಿರುತ್ತದೆ. ಮನಸ್ಸಿನ ಮೆದುತನದೊಳಗಿನಿಂದ ದಯೆ ಮುಂತಾದ ಗುಣಗಳು ಉದ್ಭವಿಸುತ್ತವೆ. ಮನಸ್ಸಿನ ಕಾಠಿಣ್ಯದೊಳಗಿನಿಂದ ಕೋಪ, ತಾಪ, ರೋಷ, ದ್ವೇಷ ಮೊದಲಾದ ಗುಣಗಳು ಹುಟ್ಟುತ್ತವೆ. ಪ್ರೇಮ ಎಂಬುದು ಮೆದುತನ, ಕಾಠಿಣ್ಯ ಇವುಗಳೊಂದಿಗೆ ಸಂಬಂಧವಿಲ್ಲದಂಥದು. ಅದೊಂದು ಉದ್ವೇಗ, ಅದೊಂದು ಬಯಕೆ. ಅದು ಪ್ರೇಮಿಸುವವರ ಸರ್ವಸೃಷ್ಟಿಯಲ್ಲೂ ಇರುತ್ತದೆ. ಅವರ ಪ್ರತಿಯೊಂದು ನೆತ್ತರ ಹನಿಯಲ್ಲೂ ಇರುತ್ತದೆ.

ಅಂತಹ ಪ್ರೇಮ ನನ್ನ ಮಾವನ ಮಗಳಿಗೆ ನನ್ನ ಮೇಲಿದೆಯೇ? ಇಲ್ಲವೆಂದೇ ನನ್ನ ಮನಸ್ಸು ನುಡಿಯುತ್ತಿತ್ತು. ಇಲ್ಲವೆಂದು ಹೇಗೆ ನಿರ್ಧರಿಸಿಕೊಳ್ಳುವುದು? ಬಹು ದೂರ ಸಾಗಿ ಹೋದ ಮೇಲೆ ನನಗೇ ಪ್ರಶ್ನೆಗೆ ಉತ್ತರ ದೊರಕಿತು–ನಿನ್ನೆ ರಾತ್ರಿ ಅವಳು ಬಂದು ಏನೆಂದು ನುಡಿದಳು? 'ಮಾವಯ್ಯ, ನಮ್ಮಮ್ಮನೇ ಇದ್ದಿದ್ದರೆ ನೀನು ನಿನ್ನ ಸಾಕುತಂದೆಯ ಮಕ್ಕಳನ್ನು ಕರೆತರುತ್ತಿರಲಿಲ್ಲ' ಎಂದು. ಇದರ ಅರ್ಥವೇನು? ನನ್ನ ಸಾಕುತಂದೆಯ ಮಕ್ಕಳು ಬಂದದ್ದರಿಂದಾಗಿಯೇ ನನಗೆ ಕಷ್ಟವಾಯಿತೆಂದಲ್ಲವೇ? ಆ ಕಷ್ಟವೆಂಥದು? ಅವಳು ನನ್ನನ್ನು ಮದುವೆಯಾಗಲು ಇಷ್ಟವಿಲ್ಲದಂತೆ ಮಾಡಿದ್ದು ! ನಿಜಕ್ಕೂ ಅವಳು ನಮ್ಮಿಬ್ಬರ ಮದುವೆಗೆ ವಿಮುಖಳಾಗಿ ಇರತೊಡಗಿದ್ದು–ಅವರು ಬಂದುದಿನಿಂದಲೇ. ಅಷ್ಟುತನಕ ಅವಳು–ಮದುವೆಗೆ ಇಷ್ಟದಿಂದಲೇ ಇದ್ದಳೇ? ಇಷ್ಟದಿಂದಿದ್ದೋ ಇಲ್ಲವೋ– ಈ ಎರಡು ವರ್ಷಗಳಿಂದ ಇರುವ ಹಾಗೆ ಮಾತ್ರ ಆಗ ಇರಲಿಲ್ಲ. ನನ್ನ ಸಾಕುತಂದೆಯ ಮಕ್ಕಳು ಬಂದ ತರುಣದಲ್ಲಿಯೇ ಅವಳು ನನ್ನ ತಮ್ಮನನ್ನು ಪ್ರೇಮಿಸಿದಳೇ? ಆಗಿನ್ನೂ ಅವನಿಗೆ ತಿಳಿವಳಿಕೆಯೇ ಇರಲಿಲ್ಲ. ವಿದ್ಯೆಯೇ ಇರಲಿಲ್ಲ. ಈಗಿನಂತೆ ಆಗ ಅವನು ಠೀವಿಯಿಂದ ಕೂಡಿರುವವನ ಹಾಗೆಯೂ ಕಂಡುಬರುತ್ತಿರಲಿಲ್ಲ. ಆದರೂ ಅವರಿಬ್ಬರೂ ತುಂಬ ಸಲಿಗೆಯಿಂದಲೇ ಇರತೊಡಗಿದ್ದರು.

ಈಗ ಮಾತ್ರ ಅವರಿಬ್ಬರ ಮಧ್ಯೆ ಪ್ರೇಮ ಉಂಟಾಗಿದೆ ಎಂದು ಏನು ನಂಬಿಕೆ ? ಅವರಿಬ್ಬರಲ್ಲಿ ಪ್ರೇಮವೇ ಇಲ್ಲದಿದ್ದರೆ, ತನ್ನನ್ನು ನಾನು ಅನಪೇಕ್ಷಿತವಾಗಿಯಾದರೂ ಮುಟ್ಟಲು ಅವಕಾಶ ಕೊಡಲಿಲ್ಲವಲ್ಲಾ ಇದುವರೆಗೆ? ಆದರೆ ಅವನ ಮೇಲೆ ಬೀಳುವುದು, ಅವನೂ ತಾನೂ ಕೈಕೈ ಹಿಡಿದು ತಿರುಗುವುದು, ಅವನಿಗೆ ತಾನು ತಲೆ ಬಾಚುವುದು, ಅವನ ಕೈಯಿಂದ ತಾನು ತಿಲಕವಿಡಿಸಿಕೊಳ್ಳುವುದು–ಇವೆಲ್ಲಾ ಏಕೆ ನಡೆದುವು? ಒಂದು ವೇಳೆ ಅವರಿಬ್ಬರ ಮಧ್ಯೆ ಪ್ರೇಮವೇ ಇಲ್ಲವೆಂದುಕೊಳ್ಳೋಣ. ನಾನು ಅವಳನ್ನು ಮದುವೆಯಾದರೆ, ಅವರಿಬ್ಬರ ಮಧ್ಯೆ ಇರುವ ಸಲಿಗೆ–ಮದುವೆಯಾದ ಮೇಲೆ ಹೊರಟುಹೋಗುತ್ತದೆಯೇ? ಈ ಸಲಿಗೆಯೆಲ್ಲಾ ಕೇವಲ ಹುಡುಗುತನವೇನೋ ! ಅವಳಿಗೆ ಇಷ್ಟು ಬುದ್ಧಿ ತಿಳಿದಿರುವಾಗ

ಇದು ಹುಡುಗುತನ ಹೇಗಾದೀತು ? ಆದರೂ ನಾನು ಅವಸರಪಡುವುದೇಕೆ ? ಅವಳಿಗೆ, ಮದುವೆ ಮಾಡಿಕೊಳ್ಳಬೇಕೆಂಬ ಇಚ್ಛೆ ತನ್ನಷ್ಟಕ್ಕೆ ತಾನೇ ಯಾವಾಗ ಉಂಟಾಗುತ್ತೋ ಆವಾಗಲೇ ಮಾಡಿಕೊಳ್ಳುತ್ತೇನೆ. ಇನ್ನೂ ವರ್ಷ–ಎರಡು ವರ್ಷಗಳಿಗೆ, ಅವಳ ಮನಸ್ಸೇನೋ ಅವಳಿಗೇ ಚೆನ್ನಾಗಿ ತಿಳಿದುಬರುತ್ತದೆ. ಆಗ ಅವಳ ಮನಸ್ಸಿನಂತೆಯೇ ನಡೆದುಕೊಳ್ಳುತ್ತೇನೆ. ಆಗ ಅವಳಿಗೆ ನನ್ನ ತಮ್ಮನನ್ನು ಮದುವೆಯಾಗಬೇಕೆಂಬ ಮನಸ್ಸಿದ್ದರೆ ? ನನ್ನ ತಮ್ಮ ನನ್ನ ಬಗ್ಗೆ ಅಷ್ಟು ದ್ರೋಹ ಮಾಡಿಯಾನೇ? ಅವನಲ್ಲಿ ಔದಾರ್ಯವೆಂಬ ಗುಣ ಹೆಸರಿಗೆ ಮಾತ್ರವಾದರೂ ನನಗೆ ಕಂಡುಬರುತ್ತಿಲ್ಲ. ಇನ್ನೂ ಹುಡುಗುತನದಲ್ಲಿರುವವರ ಚರ್ಯೆಗಳ ಮೇಲಿಂದಲೇ ಅವರ ಗುಣ ಇಂಥಾದ್ದೆಂದು ಆರೋಪಿಸುವುದು ನ್ಯಾಯವಲ್ಲವಾದರೂ, ಹೂವು ಹುಟ್ಟುತ್ತಲೇ ಪರಿಮಳಿಸುತ್ತದೆಂದು, ಕೊಂಚ ಹಾಗೆ ಆಲೋಚಿಸುವುದಕ್ಕೆ ಸಾಧ್ಯವಿಲ್ಲದಿಲ್ಲ. ನನ್ನ ತಮ್ಮ ಎಷ್ಟು ಹೊತ್ತೂ ತನ್ನ ಸುಖ, ತನ್ನ ಒಳಿತನ್ನೇ ಯೋಚಿಸುತ್ತಾನೆಯೇ ವಿನಾ ನನ್ನನ್ನು ಕುರಿತು ಒಂದಿಷ್ಟೂ ಯೋಚಿಸುವುದಿಲ್ಲ. ನಾನು ಅವನನ್ನು ಕರೆತಂದು ಏನೋ ನನ್ನ ಕೈಲಾದಮಟ್ಟಿಗೆ ಅವನ ಬದುಕಿಗೊಂದು ದಾರಿ ಮಾಡಬೇಕೆಂದು ಪ್ರಯತ್ನಿಸುತ್ತಿರುವೆನಲ್ಲಾ ! ಅವನಿಗೀ ವಿಷಯ ಗೊತ್ತಿದೆಯಲ್ಲಾ !

ನಾನೆಂದರೆ ಹೆಚ್ಚು ಪ್ರೀತಿಯಿಂದಿರುವುದು–ಅಣ್ಣಯ್ಯ ಏನೆಂದುಕೊಳ್ಳುವನೋ ಎಂದು ಭಾವಿಸಿಕೊಳ್ಳುವುದು–ನನ್ನ ಮಾವನ ಮಗನ ಹಾಗೆ ನನ್ನೊಂದಿಗೆ ತಿರುಗಾಡುವುದು–ಇದಾವುದೂ ನನಗೆ ಅವನಲ್ಲಿ ಕಂಡುಬರಲಿಲ್ಲ. ತೀರಾ ಅಜ್ಞಾನಿಯೂ ಅಲ್ಲವಲ್ಲಾ ! ವರ್ಷದ ಹಿಂದೆ ಹೇಗೇ ಇದ್ದರೂ, ಮೊನ್ನೆ ರಜಾ ದಿನಗಳಿಗೆಲ್ಲಾ ವ್ಯಕ್ತಿ ಕೊಂಚ ಬಲಿತಿದ್ದಾನೆ; ಕೊಂಚ ಬುದ್ಧಿ, ತಿಳುವಳಿಕೆಯೂ ಬಂದಿದೆ. ಆದರೆ ತನ್ನ ಅಣ್ಣನ ಭಾವೀ ಪತ್ನಿಯೊಂದಿಗೆ ಹಾಗೆಲ್ಲಾ ವರ್ತಿಸಕೂಡದೆಂದೇನಾದರೂ ಅಂದುಕೊಂಡನೆ? ಓದಿಗೆಂದೇ ಆಗಲಿ, ತನ್ನ ಸೌಖ್ಯಗಳಿಗೇ ಆಗಲಿ–ಹಣವನ್ನು ಹಾಗೆ ಯಥೇಷ್ಟವಾಗಿ ಖರ್ಚು ಮಾಡಿದನಾಗಲೀ, 'ಅಯ್ಯೋ, ಇದು ನಮ್ಮ ಹಣವಲ್ಲ. ಅಣ್ಣಯ್ಯ ದಯೆ, ಧರ್ಮ, ಭಿಕ್ಷೆಯಾಗಿ ನಮಗೆ ಕೊಡುತ್ತಿದ್ದಾನೆ' ಎಂದೇನಾದರೂ ಆಲೋಚಿಸಿದನೇ ? ರಜಾ ದಿನಗಳಲ್ಲಿ ಎರಡು ತಿಂಗಳು ಅವನು ಕೋಣೆಯಲ್ಲಿ ಹಾಸಿಗೆಯ ಮೇಲೆಯೇ ಮಲಗಿಕೊಂಡ. 'ಮಾವಯ್ಯ ಮಂಚವಿಲ್ಲದೆ ಕೆಳಗೆ ಮಲಗಿಕೊಳ್ಳಲಾರ' ಎಂದು ನನ್ನ ಮಾವನ ಮಗಳು ಎರಡು ಮೂರು ಸಲ ಹೇಳಿಯೂ ಹೇಳಿದಳು. ಅವನು ಮಲಗಿಕೊಳ್ಳುವುದು ಬಿಟ್ಟನೆ? ಇಲ್ಲ. ಬಿಡಲಿಲ್ಲ. ಒಂದಿಷ್ಟು ಎತ್ತು ಕಟ್ಟಿಹಾಕುವ ಪಾಪಕ್ಕೂ ಹೋಗಲಿಲ್ಲ ಅವನು. ಎಮ್ಮೆಯನ್ನು ಮುಸುರೆ ನೀರು ಕುಡಿಸುವುದಿರಲಿ, ಅದರ ಕಣ್ಣಿ ಬಿಚ್ಚಿದ ಪಾಪಕ್ಕೂ ಹೋಗಲಿಲ್ಲ. ತನ್ನ ಓದು–ನನ್ನ ಮಾವನ ಮಗಳೊಂದಿಗೆ ಚಕ್ಕಂದವಾಡುವುದು–ಇವುಗಳಲ್ಲಿಯೇ ಅವನಿಗೆ ಸರಿಹೋಯಿತು ! ಅವನಿಗೆ ನಿಜವಾಗಿಯೂ ಗ್ರಹಣಶಕ್ತಿಯಿದ್ದು, ಅವಳು ತನ್ನನ್ನು ಪ್ರೇಮಿಸುತ್ತಿರುವಳೆಂದು ಬಗೆದಿರುವನೇ ? ಈ ಹೆಣ್ಣು ಅಣ್ಣನಿಗಾಗಿ ಉದ್ದೇಶಿಸಲ್ಪಟ್ಟಿರುವಳೆಂದು ಅವನು ಬಿಟ್ಟುಕೊಡುತ್ತಾನೆಂದು ನಾನಂದುಕೊಳ್ಳಲಾರೆ. ಪ್ರೇಮ–ಕಲೆತು ಕೂಡಿ ಇರುವುದರಿಂದ ವೃದ್ಧಿಗೊಳ್ಳುತ್ತದೆ. ನಾನು ಹತಬುದ್ಧಿಯವನಂತೆ–

ಅವರಿಬ್ಬರೂ ಒಂದೇಕಡೆ ಇರುವ ಏರ್ಪಾಟು ಮಾಡಿಕೊಟ್ಟೆ ಓದಲು ಕಳಿಸಿಕೊಡದಿದ್ದರೆ ಅವಳಿಗೆ ನನ್ನ ಮೇಲೆ ಕೋಪ ಬರುತ್ತೇನೋ? ಬಂದಿದ್ದರೆ ಇಷ್ಟು ಮಾತ್ರ ಕರುಣೆಯೂ ನನ್ನ ಮೇಲೆ ಉಂಟಾಗುತ್ತಿರಲಿಲ್ಲವೇನೋ ! ಓದುವ ನಿಮಿತ್ತದ ಮೇಲೆ ಅವರಿಬ್ಬರನ್ನೂ ನಾನು ಒಂದೇ ಕಡೆ ಇರುವಂತೆ ಮಾಡಿದೆ. ನಾನು ಹಾಗಿರುವಂತೆ ಮಾಡುವುದೇನು ಬಂತು ? ಅವರಿಬ್ಬರೂ ಕೂಡಿಯೇ ನಡೆಸಿದ ಮಸಲತ್ತಿದು.

ಹೀಗೆಲ್ಲಾ ಆಲೋಚಿಸುತ್ತಾ, ಹೊತ್ತು ಮುಳುಗುತ್ತಿದೆ ಎನ್ನುವಾಗ ನಾನು ನನ್ನ ಚಿಕ್ಕಮ್ಮನ ಊರು ತಲುಪಿದೆ. ಬೆಳಗಿನಿಂದಲೂ ನನಗೆ ಊಟವಿರಲಿಲ್ಲ. ದಾರಿಯಲ್ಲಿ ಎರಡು ಮೂರು ಊರುಗಳಲ್ಲಿ ತಂಗೋಣ ಎನ್ನಿಸಿತ್ತು. ಆದರೆ ತಂಗಲಿಲ್ಲ. ಚಿಕ್ಕಮ್ಮನ ಮನೆಯಲ್ಲಿ ಊಟ ಮಾಡಿ ಮಲಗಿಕೊಂಡೆ. ನನಗೆ ಉಷ್ಣಾಧಿಕ್ಯವಾಗಿ ನಿದ್ರೆ ಹತ್ತಲಿಲ್ಲ. ನನ್ನ ತಮ್ಮಂದಿರ ಸೋದರಮಾವ ಈಗೇನು ಮಾಡುತ್ತಿರುವನೋ! ನಾನು ಆ ಊರಿಗೆ ಮತ್ತೆ ಹೋಗಲೇ ಇಲ್ಲ. ಆತನಿಗೆ ಮಕ್ಕಳಿಲ್ಲ, ಮರಿಗಳಿಲ್ಲ. ಆಸ್ತಿಯನ್ನೆಲ್ಲಾ ಏನು ಮಾಡುತ್ತಾನೆ ? ಹುಡುಗರು ಏನಾದರೋ ಎಂದು ಅವರ ಸ್ಥಿತಿಗತಿಗಳನ್ನು ವಿಚಾರಿಸಲೇ ಇಲ್ಲ. ಹಾವಾಡಿಗ ಏನೆಂದ? ಆತ ಹೊಗೆಸೊಪ್ಪಿನ ಕಾಂಡದ ಹಾಗಿದ್ದಾನಲ್ಲವೇ? ಎಂದು. ನನಗೆ ದೊಡ್ಡದಾಗಿ ನಗು ಬಂದು ನಕ್ಕುಬಿಟ್ಟೆ ನನ್ನ ಹತ್ತಿರವೇ ಇನ್ನೊಂದು ಮಂಚದ ಮೇಲೆ ನನ್ನ ಚಿಕ್ಕಮ್ಮ ಮಲಗಿಕೊಂಡಿದ್ದಳು. ನಾನು ಹಾಗೆ ನಕ್ಕಿದ್ದರಿಂದ ಆಕೆಗೆ ಎಚ್ಚರವಾಗಿ 'ಏಕೆ ನಕ್ಕಿದ್ದು?' ಎಂದು ಕೇಳಿದಳು. ಅದಕ್ಕೆ ನಾನು 'ನಿನ್ನ ಮಗನ ಮದುವೆಯನ್ನು ಯಾವಾಗ ಮಾಡುತ್ತೀಯಮ್ಮಾ?' ಎಂದು ಕೇಳಿದೆ. 'ಎರಡು ಮದುವೆಗಳನ್ನೂ ಒಟ್ಟಿಗೇ ಮಾಡಬೇಕಲ್ಲಾ ನೀನು! ನೀನು ನಿನ್ನ ಹೆಂಡತಿಯಾಗುವವಳನ್ನು ಓದಲು ಕಳಿಸಿಕೊಟ್ಟೆ ಅಂದಮೇಲೆ ಅವಳ ಓದು ಒಂದು ರೀತಿಯಾಗಿ ಕೊನೆ ಮುಟ್ಟುವ ತನಕ ನೀನು ಮದುವೆ ಮಾಡಿಕೊಳ್ಳೋಲ್ಲ ಎಂದಂತಾಯಿತಲ್ಲಾ. ಹಾಗಾದರೆ ನನ್ನ ಮಗನ ಮದುವೆಯನ್ನು ಬೇರೆಯಾಗಿಯೇ ಮಾಡುತ್ತೀಯಾ? ನಿನಗೆ ಖರ್ಚು ಎರಡರಷ್ಟಾಗೋಲ್ಲವೇ?' ಎಂದಳು. 'ನನ್ನ ಮದುವೆಯ ವಿಷಯವಲ್ಲಮ್ಮಾ. ಖರ್ಚಾದರೆ ಆಗುತ್ತೆ ನಿಮ್ಮ ಹುಡುಗನಿಗೆ ನೀನು ಯಾವಾಗ ಮದುವೆ ಮಾಡುತ್ತೀನೆಂದರೆ ಆಗಲೇ ಮಾಡಿಕೊಡುತ್ತೇನೆ' ಎಂದೆ. 'ಹಾಗಾದರೆ ಮಾಘಮಾಸದಲ್ಲಾಗಲಿ ಎಂದು ಮೊನ್ನೆ ಹೇಳಿದೆನಲ್ಲಾ, ಮಾಡಿಬಿಡು' ಎಂದಳು. ನಾನು ಹಾಗೆಯೇ ಆಗಲಿ ಎಂದೆ.

ನಾನು ಮರುದಿನ ಬೆಳಗ್ಗೆ ಎದ್ದು, ನನ್ನ ಚಿಕ್ಕಮ್ಮನ ಮಗನ ಹೊಲಗಳನ್ನೆಲ್ಲಾ ನೋಡಿಕೊಂಡು ಬಂದೆ. ಆವನು ಎರಡೆಕರೆಯಷ್ಟು ಜಮೀನಿನಲ್ಲಿ ಹೊಗೆಸೊಪ್ಪು ನಾಟಿದ್ದನು. ನಾನು ಹೇಳಿದ್ದರಿಂದಲೇ ಅವನು ಆ ಬೆಳೆ ಬೆಳೆಯಲು ಉದ್ಯುಕ್ತನಾಗಿದ್ದ. ಆದರೆ ಹೊಗೆಸೊಪ್ಪಿನ ಬೆಳೆಗೆ ತುಂಬಾ ದುಡಿಮೆಯಿತ್ತು. ಅವನೊಬ್ಬನೇ ಮಾಡಿಕೊಳ್ಳಲಾರದೆ, ಆ ಬೆಳೆಯ ಕಡೆಗೆ ಸರಿಯಾಗಿ ಆಸ್ಥೆವಹಿಸಲಾರದವನಾಗಿದ್ದ. ಸಸಿಗಳೇನೂ ಬೆಳೆದಿಲ್ಲ. ಮೊಟಕುಗೊಂಡುಬಿಟ್ಟಿದ್ದುವು. ಕೆಂಪಿಗೆ ತಿರುಗುತ್ತಿದ್ದುವು. ಸ್ವಲ್ಪ ಶ್ರದ್ಧೆ ತೆಗೆದುಕೊಳ್ಳದೇ ಹೋದರೆ ಈವರೆಗಿನ ಶ್ರಮವೆಲ್ಲಾ ವ್ಯರ್ಥವಾಗಿಬಿಡುತ್ತದೆ, ಎಲೆಗಳೇನಾದರೂ ವೃದ್ಧಿಗೊಂಡರೆ ಮದುವೆಯ ಹೊತ್ತಿಗೆಲ್ಲಾ ಹಣ

ಕೈ ಸೇರೀತು–ಎಂದು ತಿಳಿಸಿದೆ. 'ನಮ್ಮ ಜೀತದಾಳನ್ನು ಕಳಿಸಿಕೊಡುತ್ತೇನೆ. ಹತ್ತು ಹದಿನೈದು ದಿನಗಳವರೆಗೆ ಅವನನ್ನಿಟ್ಟುಕೊಂಡು, ಎಲೆ ಕೆಟ್ಟುಹೋಗದಂತೆ ನೋಡಿಕೊ' ಎಂದು ತಿಳಿಸಿ ಊರಿಗೆ ಬಂದೆ.

ಮನೆಗೆ ಬಂದು ನೋಡಿದರೆ ಮನೆಯೆಲ್ಲಾ ಬಿಕೋ ಎನ್ನುತ್ತಿತ್ತು. ನನ್ನ ತಂಗಿ ಎಲ್ಲೋ ಹಿತ್ತಲಲ್ಲಿದ್ದಳು. ಸಣ್ಣವನು ಶಾಲೆಗೆ ಹೋಗಿದ್ದನು. ಮನೆಯೆಲ್ಲಾ ಶೂನ್ಯವಾಗಿತ್ತು. ನಾನು ಜೀತದಾಳನ್ನು ಕರೆದು ಮನೆಮಾರು ; ಹಿತ್ತಲು–ಬಯಲು ; ಕೆಲಸ–ಕಾರ್ಯಗಳೆಲ್ಲಾ ಸರಿಯಾಗಿವೆಯೋ ಇಲ್ಲವೋ ಎಂದು ನೋಡಿಕೊಂಡು, ಮನೆಗೆ ಬಂದು ಊಟ ಮಾಡಿ ಮಲಗಿದೆ. ಮತ್ತೆ ಆಲೋಚನೆಗೊಳಗಾದೆ. ನನ್ನ ಮಾವನ ಮಗಳನ್ನು ಓದಿಸುವುದು ಸಾಕುಮಾಡಿ, ಊರಿಗೆ ಕರೆದುಕೊಂಡು ಬಂದುಬಿಡೋಣ ಎನ್ನಿಸಿತು. ಓದಿಕೊಂಡು ಅವಳೇನು ಮಾಡುತ್ತಾಳೆ?.....ನನಗೆ ನಿದ್ರೆ ಹತ್ತಿತು. ನಿದ್ರೆಯಲ್ಲಿ ನನ್ನ ಸಾಕುತಂದೆ ಕಾಣಿಸಿಕೊಂಡ. ತುಂಬ ಖುಷಿಯಾಗಿದ್ದ. ಆತ ನನಗೆ ಕಾಣಿಸಿಕೊಂಡು ಎರಡು ವರ್ಷಗಳೇ ಆಗಿತ್ತು. ಇನ್ನುಮೇಲೆ ಕಾಣಿಸಿಕೊಳ್ಳಲಿಕ್ಕಿಲ್ಲ ಎಂದುಕೊಂಡಿದ್ದೆ. ಪುನಃ ಈಗ ಕಾಣಿಸಿಕೊಂಡಿದ್ದರಿಂದಾಗಿ ನನಗೆ ಆಶ್ಚರ್ಯವಾಯಿತು. ಮತ್ತೇಕೆ ಈತ ಬಂದನೆಂದುಕೊಂಡೆ. ಈತನ ಮಕ್ಕಳನ್ನು ಕರೆದುಕೊಂಡು ಬಂದಿದ್ದೇನೆ. ಕೈಲಾದಮಟ್ಟಿಗೆ ಅವರನ್ನು ಸರಿಪಡಿಸಿದ್ದೇನೆ. ಇನ್ನೂ ಸರಿಪಡಿಸುತ್ತೇನೆ. ಇದರ ಬಗ್ಗೆ ಸಾಕುತಂದೆಗೆ ಚಿಂತೆ ಅನಗತ್ಯ. ಈ ಬಗ್ಗೆ ಅನುಮಾನವೆಂಬುದು ದೇವರಿಗೂ ಅನಗತ್ಯ. ಈತನಿಗೇನಾದರು ಇನ್ನೂ ಅನುಮಾನವಿದೆಯೇ? ಆದರೂ ಕ್ರಮಕ್ರಮವಾಗಿ ತಾನಾಗಿಯೇ ತಿಳಿಯುತ್ತದಲ್ಲಾ ಎಂದು ನಾನು ಸುಮ್ಮನೇ ಇದ್ದೆ.

ನಿದ್ರೆಯಿಂದ ಎಚ್ಚೆತ್ತು ಹೊರಬಾಗಿಲಿಗೆ ಬರುವುದರೊಳಗಾಗಿ ಹಾವಾಡಿಗ ಕಾಣಿಸಿದ. ಅವನನ್ನು ನೋಡುತ್ತಲೇ ನನಗೆ ಜ್ಞಾಪಕಕ್ಕೆ ಬಂದಿತು–ಏಕವಸ್ತ್ರ ಕೇಳಿದ್ದನಲ್ಲವೇ–ಎಂದು. ಗುಂಟೂರಿನಲ್ಲಿರುವಾಗ ನನಗೀ ವಿಷಯವೇ ಜ್ಞಾಪಕಕ್ಕೆ ಬಾರದಾಯಿತು. ಜ್ಞಾಪಕಕ್ಕೆ ಬಂದಿದ್ದರೆ ಒಂದು ಏಕಸ್ತ್ರವನ್ನು ಕೊಂಡು ತರುತ್ತಿದ್ದೆ. ಆದಾಗ್ಯೂ ನಮ್ಮೂರಿನಲ್ಲಿ ನೇಕಾರರ ಮನೆಯೊಂದಿದೆ. ನಮ್ಮ ಜೀತದಾಳನ್ನು ಕರೆದು 'ನೇಕಾರರ ಮನೆಗೆ ಹೋಗಿ ನೇಯ್ದ ಪಂಚೆ–ಶಾಲು ಇದ್ದರೆ ತೆಗೆದುಕೊಂಡು ಬಾ' ಎಂದು ಕಳಿಸಿಕೊಟ್ಟೆ. ಹಾವಾಡಿಗ ನನ್ನೊಂದಿಗೆ ಕಾಡುಹರಟೆಗೆ ಪ್ರಾರಂಭಿಸಿದ. ನಮ್ಮ ಜೀತದಾಳು ಹಿಂತಿರುಗಿ ಬಂದು 'ಅವನು ದುಡ್ಡು ಕೊಟ್ಟರೆ ಕೊಡ್ತಾನಂತೆ' ಎಂದು ತಿಳಿಸಿದ. ನನ್ನಲ್ಲಿ ಒಂದು ಚಿಕ್ಕಾಸೂ ಇರಲಿಲ್ಲ. ಹಣವನ್ನೆಲ್ಲಾ ಗುಂಟೂರಿನಲ್ಲಿ ಕೊಟ್ಟು ಬಂದುಬಿಟ್ಟಿದ್ದೆ. ಹಾವಾಡಿಗನಿಗೆ ಏನೆಂದು ಹೇಳಲಿ? ನಾನೇ ನೇಕಾರರ ಮನೆಗೆ ಹೋಗಿ ಎರಡು ಮೂರು ದಿನಗಳೊಳಗೆ ಹಣ ಕೊಡುತ್ತೇನೆ ಎಂದು ತಿಳಿಸಿ, ಪಂಚೆ–ಶಾಲುಗಳ ಏಕವಸ್ತ್ರವನ್ನು ತಂದು ಅವನ ಕೈಗಿತ್ತೆ ಅವನು ಅದನ್ನು ತೊಟ್ಟುಕೊಂಡ. ತೊಟ್ಟುಕೊಂಡು 'ಒಂದಿಷ್ಟು ಅನ್ನ, ನಂಜಿಕೊಳ್ಳಲು ಏನಾದರು ಒಂದಿಷ್ಟು ಕೊಟ್ಟರೆ ಸಾಕು' ಎಂದ. ತಂಗಿಯ ಕೈಯಿಂದ ಅವನಿಗೆ ಬೇಕಾದ್ದನ್ನು ಬಡಿಸಿದೆ. ಅವನು ಹೊರಟುಹೋದ. ಹೊರಡುತ್ತಾ ಒಂದು ಮಾತೆಂದ 'ಬುದ್ದಿ, ನೀನು ಗುಂಟೂರಿನಿಂದ ಬಂದಮೇಲೆ ಕೊಂಚ ಲವಲವಿಕೆಯಿಂದ

ಕಂಡುಬರುತ್ತೀಯಲ್ಲಾ !' ನನಗೆ ಅವನ ಬುದ್ಧಿವಂತಿಕೆ, ಅವನ ಅರ್ಥ ಗರ್ಭಿತ ಮಾತು–ಇವುಗಳಿಗಾಗಿ ತುಂಬ ಆಶ್ಚರ್ಯವಾಯಿತು. ನನ್ನ ಮನಸ್ಸನ್ನು ಆ ವಿಷಯ ಆಕ್ರಮಿಸಿಕೊಂಡು ಇಷ್ಟು ದಿನಗಳವರೆಗೆ ತುಂಬ ಬಾಧಿಸುತ್ತಿತ್ತೆಂದು ಕಾಣುತ್ತದೆ. ಈಗ ಆ ವಿಷಯದಲ್ಲಿ ಅವಳು ಕೊಂಚ ಅನುಕೂಲಳಾಗಿರುವುದರಿಂದ ನನ್ನ ಮುಖ ಮತ್ತೆ ಅರಳಿದೆ ಎಂಬ ಸಂಗತಿ ವಾಸ್ತವವೇ. ನಾನು ಆ ವಿಷಯವನ್ನು ಆಗ ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳಬಾರದಾಗಿತ್ತು ಎಂದೆನ್ನಿಸಿತು. ಇನ್ನುಮೇಲಿಂದಲಾದರು ಹಚ್ಚಿಕೊಳ್ಳಬಾರದೆಂದುಕೊಂಡೆ. ನನ್ನ ಅತ್ತೆ ಬದುಕಿದ್ದಿದ್ದರೆ ಆ ವಿಷಯ ಇಷ್ಟು ದೂರ ಬರುತ್ತಿರಲಿಲ್ಲ.

ಮರುದಿನ ನಮ್ಮ ಜೀತದಾಳನ್ನು ನನ್ನ ಚಿಕ್ಕಮ್ಮನವರ ಊರಿಗೆ ಕಳಿಸಿಕೊಟ್ಟೆ. ಅವನು ಇಲ್ಲದೇ ಹೋದುದರಿಂದಾಗಿ ಮನೆಯಲ್ಲಿನ ಪ್ರತಿ ಸಣ್ಣ ಪುಟ್ಟ ಕೆಲಸವೂ ನನ್ನ ಮೇಲೆಯೇ ಬಿತ್ತು. ಅವನು ಒಂದು ತಿಂಗಳಾದ ಮೇಲೆ ಹಿಂತಿರುಗಿ ಬಂದ. 'ಹೊಗೆಸೊಪ್ಪು ಮಜಬೂತಾಗಿ ಬೆಳೆಯುತ್ತಿದೆ ಬುದ್ಧೀ. ಇನ್ನೇನೂ ಪರವಾಗಿಲ್ಲ. ಹೊಗೆಸೊಪ್ಪು ಬಿಡಿಸಿದಾಗ, ಅದನ್ನು ಹದ ಮಾಡುವುದಕ್ಕೊಮ್ಮೆ ಹೋದ್ರೆ ಸಾಕು. ಆ ಊರಿನವರಿಗೆ ಹೊಗೆಸೊಪ್ಪನ್ನು ಹೇಗೆ ಹದ ಮಾಡಬೇಕೋ ತಿಳಿಯದು. ಅವರು ಹೊಗೆಸೊಪ್ಪನ್ನು ಯದ್ವಾತದ್ವಾ ನೆನೆಸಿಬಿಡುತ್ತಾರೆ. ಎಷ್ಟು ನೀರು ಚಿಮುಕಿಸಿ, ಹೇಗೆ ಸೂಡುಗಳನ್ನು ಕಟ್ಟಿ ಎಷ್ಟುಮಟ್ಟಿಗೆ ಶಾಖ ಕೊಟ್ಟು ಒಣಗಿಸಬೇಕೋ ಅವರಿಗೆ ಗೊತ್ತಿಲ್ಲ. ಹೊಗೆಸೊಪ್ಪೆಂದರೆ ಅರ್ಥ ಯಾವ ನೆಲದಲ್ಲಿ ಬೆಳೆದು ಕೈಗೆ ಬರುತ್ತೋ ಆ ನೆಲದ ಸತ್ವ, ಇನ್ನರ್ಥ ಬುದ್ಧಿವಂತಿಕೆಯೆಲ್ಲಾ ಅದನ್ನು ಹದಮಾಡುವುದರಲ್ಲೇ ಇದೆ. ಹದವನ್ನೊಂದಿಷ್ಟು ಚೆನ್ನಾಗಿ ಮಾಡಿಬಿಟ್ಟರೆ ನಿಮ್ಮ ಭಾವಯ್ಯನವರಿಗೆ ಈ ವರ್ಷ ಎರಡರಷ್ಟು ಗಿಟ್ಟುತ್ತೆ ಬುದ್ದೀ!' ಎಂದ. 'ಸರಿ ಬಿಡು, ತಿರಗಾ ಆ ಸಮಯಕ್ಕೆ ಹೋಗುವೆಯಂತೆ, ಹೊಲಕ್ಕೆ ಹೋಗು' ಎಂದೆ. ಅವನು 'ಹಾವಾಡಿಗನಿಗೆ ಅದೇಕೆ ಬುದ್ದಿ ಹೊಸಾ ಬಟ್ಟೆ ಕೊಟ್ರಿ?' ಎಂದು ಕೇಳಿದ. 'ನೀನು ಅವನ ಸ್ನೇಹಿತನೇ ಅಲ್ಲವೇನಯ್ಯಾ?!' ಎಂದೆ ನಾನು. 'ಅದೇನು ಬುದ್ಧೀ? ಹಂಗಂತೀರ?' ಎಂದ. 'ನೀನು ಅವನ ಸ್ನೇಹಿತನಲ್ಲದಿದ್ದರೆ–ನಾನು ನನ್ನ ಮಾವನ ಮಗನೂ ಇಬ್ಬರೂ ಹೊಲದಲ್ಲಿ ಮಾತನಾಡಿಕೊಂಡ ವಿಷಯಗಳೆಲ್ಲಾ ಅವನಿಗೆ ಹೇಗೆ ಗೊತ್ತಾದುವೋ?' ಎಂದೆ. ನಮ್ಮ ಜೀತದಾಳು ನಕ್ಕು 'ಬುದ್ದೀ, ಅವನು ಮೊದಲಿನ ಹಾಗಿಲ್ಲ ಬುದ್ದೀ ! ಅವನೀಗ ಕಳ್ಳತನಗಳನ್ನು ಬುಟ್ಟುಬುಟ್ಟವ್ನೆ. ನೀವೂಂದ್ರೆ ಅವನಿಗೆಷ್ಟೋ ಗೌರವ. ನಿಮಗಾಗಿ ಪ್ರಾಣ ಬೇಕಾದ್ರೂ ಕೊಡ್ತಾನೆ. ನಮ್ಮ ಹಟ್ಟಿಗೆ ಬಂದು ವಿಷ್ಯಾನೆಲ್ಲಾ ತಿಳ್ಕೊಂಡು ಹೋಗ್ತಾನೆ ಬುದ್ದೀ' ಎಂದು ನುಡಿದ.

ದಿನಗಳು ಗತಿಸಿದುವು. ಸಂಕ್ರಾಂತಿಗೆಂದು ರಜ ಕೊಟ್ಟರು. ಹುಡುಗರು ಊರಿಗೆ ಬರುತ್ತಾರೆ ಎಂದುಕೊಂಡೆ. ಆದರೆ ಅವರು ಬರಲಿಲ್ಲ. ನಾನು ಈ ಆರು ತಿಂಗಳು ಗುಂಟೂರಿನತ್ತ ತಿರುಗಿ ನೋಡುವುದಕ್ಕೂ ಪುರುಸೊತ್ತಿಲ್ಲದಾಯಿತು. ಆದರೆ ನನ್ನ ಪ್ಲೀಡರ್ ಸ್ನೇಹಿತನಿಂದ ಆಗಾಗ್ಗೆ ಪತ್ರಗಳು ಬರುತ್ತಲೇ ಇದ್ದುವು–ಹುಡುಗರು ಕ್ಷೇಮವಾಗಿದ್ದಾರೆಂದೂ, ಚೆನ್ನಾಗಿ ಓದುತ್ತಿದ್ದಾರೆಂದೂ. ಈ ಸಂಕ್ರಾಂತಿಯ ರಜಾ ದಿನಗಳಲ್ಲಿ

ನಾನು ಗುಂಟೂರಿಗೆ ಹೋಗಿ ಅವರನ್ನೊಮ್ಮೆ ನೋಡಿಕೊಂಡು ಬರೋಣವೆಂದುಕೊಂಡೆ. ಆದರೆ ನನ್ನ ಚಿಕ್ಕಮ್ಮನ ಮಗ ನನ್ನನ್ನು ಹೋಗಗೊಡಲಿಲ್ಲ. ತನ್ನ ಬೆಳೆಗಳ ಸಂಗತಿ, ಇನ್ನಿತರೆ ವ್ಯವಹಾರಗಳನ್ನೆಲ್ಲಾ ಕುದುರಿಸಿಡುವಂತೆ ಕೇಳಿಕೊಂಡ ಆ ರಜಾದಿನಗಳಲ್ಲಿ ನನ್ನನ್ನು ತಮ್ಮೂರಿನಲ್ಲಿಯೇ ನಿಲ್ಲಿಸಿಕೊಂಡುಬಿಟ್ಟ. ಹೊಗೆಸೊಪ್ಪು ಮುಂತಾದ ಫಸಲನ್ನೆಲ್ಲಾ ಮಾರಾಟ ಮಾಡಿದೆ. ನಾಲ್ಕು ನೂರು ರೂಪಾಯಿಗಳವರೆಗೆ ಹಣ ಬಂದಿತು. ನನ್ನ ಚಿಕ್ಕಮ್ಮನೂ ಅವನೂ–ಇಬ್ಬರೂ ಮದುವೆ ಎಂದು ಅವಸರಪಡಿಸತೊಡಗಿದರು. ಮದುವೆಗಿನ್ನೂ ಒಂದು ತಿಂಗಳಿತ್ತು. ನಾನು ಊರಿಗೆ ಹೋಗಿ ಹಣ ಜೋಡಿಸಿಕೊಳ್ಳಬೇಕಾಗಿರುವುದರಿಂದ ಗುಂಟೂರಿಗೆ ಹೋಗದೆ ಹಾಗೆಯೇ ಊರಿಗೆ ಹಿಂತಿರುಗಿ ಬಂದುಬಿಟ್ಟೆ.

ಆರು ತಿಂಗಳಿಂದಲೂ ಮನೆಯಲ್ಲಿ ನನ್ನ ತಂಗಿ ಒಬ್ಬಳೇ ಆದುದರಿಂದ, ಎಲ್ಲ ಕೆಲಸಗಳನ್ನೂ ಅವಳೇ ಮಾಡಬೇಕಾಗಿದ್ದುದರಿಂದ, ಯಾರೊಂದಿಗೂ ಮಾತುಕತೆಯಿಲ್ಲದಂತಾಗಿ, ಸರಿಯಾಗಿ ತಲೆ ಬಾಚಿಕೊಳ್ಳದಂತಾಗಿ, ಕೊಳೆಯಾದ ಬಟ್ಟೆಗಳನ್ನು ಕಟ್ಟಿಕೊಳ್ಳುವಂತಾಗಿ–ಮತ್ತೆ ಯಥಾಸ್ಥಿತಿಗೆ ಬಂದುಬಿಟ್ಟಿದ್ದಳು. ನನಗೆ ದಿಗಿಲಾಯಿತು. ಈಗ ಇವಳನ್ನು ನೋಡಿದರೆ ನನ್ನ ಚಿಕ್ಕಮ್ಮನ ಮಗ ಮದುವೆ ಮಾಡಿಕೊಳ್ಳೋಲ್ಲ ಎನ್ನುತ್ತಾನೇನೋ ! ಮತ್ತೆ ನನ್ನ ಮಾವನ ಮಗಳೂ, ನನ್ನ ತಮ್ಮ ಅವರೆಲ್ಲಾ ಊರಿಗೆ ಬಂದು ಒಂದು ತಿಂಗಳವರೆಗೆ ಮನೆಯಲ್ಲುಳಿದುಕೊಂಡರೆ ಇವಳ ಈ ಹುಚ್ಚು ತರಹ ಹೊರಟುಹೋದೀತು. ಆದರೆ ಅವರೀಗ ಬರುವಂತಿಲ್ಲ. ಇವಳಿಗೆ ಈಗ ತಲೆ ಬಾಚುವ ದಿಕ್ಕೇ ಇಲ್ಲದಂತಾಗಿದೆ. ಮದುವೆ ಕಾಲಕ್ಕೆ ಹುಡುಗಿ ಹೀಗೆಯೇ ಇದ್ದುಬಿಟ್ಟರೆ ಹೇಗಪ್ಪಾ ಎಂಬ ಭಯವುಂಟಾಯಿತು. ಮದುವೆಯನ್ನು ಮಾಘಮಾಸದಲ್ಲಲ್ಲದೆ, ವೈಶಾಖದಲ್ಲಿ ಮಾಡಿದರೆ ಚೆನ್ನಾಗಿರುತ್ತೆ–ಎಂದುಕೊಂಡೆ.

ಬೇಸಗೆಯ ರಜೆಯಲ್ಲಿ, ಎರಡು ತಿಂಗಳ ಕಾಲವೂ ಹುಡುಗರೆಲ್ಲಾ ಮನೆಯಲ್ಲಿರುತ್ತಾರೆ. ಆ ಎರಡು ತಿಂಗಳು ಇವಳಿಗೆ ಬಿಡುವು ದೊರೆತು ಉಲ್ಲಾಸದಿಂದಿರುತ್ತಾಳೆ–ಎಂದು ಬಗೆದು, ನನ್ನ ಚಿಕ್ಕಮ್ಮನಿಗೆ–ಮದುವೆಯನ್ನು ವೈಶಾಖದಲ್ಲಿ ಮಾಡುತ್ತೇನೆ, ಈಗ ಹಣ ಜೋಡಿಸಲಾಗಲಿಲ್ಲ–ಎಂದು ಸುದ್ದಿ ಕಳಿಸಿದೆ. ಅನಂತರ, ಹದಿನೈದು ದಿನಗಳಾದ ಮೇಲೆ, ಯಾವುದೋ ಕೆಲಸದ ಮೇಲೆ ನಾನು ಚಿಕ್ಕಮ್ಮನ ಊರಿಗೆ ಹೋದಾಗ, ನನ್ನ ಚಿಕ್ಕಮ್ಮ ನಿಷ್ಠುರವಾಗಿ ಮಾತನಾಡಿದಳು 'ಮಗನಿಗೆ ಮದುವೆಯಾಗಿಬಿಡಲಿ ಬೇಗ ಅಂತ ನಾನು ಒದ್ದುಕೊಳ್ತಾ ಇದೇನೆ. ನಿನಗೇನು? ಮಾಡಿಕೊಳ್ಳುವವನು ಹೇಗೂ ಭಾವಮೈದು ನನಿದ್ದಾನೆ ! ನಿನ್ನ ಕೆಲಸ ಅಂಗಡಿಯೊಳಗಿನ ಬೆಲ್ಲದಂತಿದೆ !' ಎಂದಳು. ನಾನು ಏನೆಲ್ಲಾ ಹೇಳಿ, 'ಮಾಘಮಾಸ ಕಳೆದರೆ ಮೂರು ತಿಂಗಳೇ!' ಎಂದು ಪುಸಲಾಯಿಸಿದೆ. 'ಹಾಗಾದ್ರೆ ವೈಶಾಖದಲ್ಲಿ ತಪ್ಪದೆ, ಖಂಡಿತಾ ಮದುವೆ ಮಾಡಿಬಿಡಬೇಕು ನೋಡು' ಎಂದಳು. 'ಮದುವೆ ಮಾಡದೆ ಹಾಗೆಯೇ ಮನೆಯಲ್ಲಿಟ್ಟುಕೊಳ್ತೀನ್ಯೇ? ಅವಸರ ನಿನ್ನದೆ? ನನ್ನದೆ? ಅವನು ದೊಡ್ಡ ಮನಸ್ಸು ಮಾಡಿ, ಮಾಡಿಕೊಳ್ತೇನೆ ಅಂತ ಅಂದನಾದ್ದರಿಂದ, ನೀನು ನನ್ನನ್ನು ಕಾಪಾಡಿದ ತಾಯಿಯಾದ್ದರಿಂದ ಸರಿಹೋಯಿತು. ಇಲ್ಲದಿದ್ದರೆ ಅವಳನ್ನಾರು ಕೇಳೋರಿದ್ರು? ವೈಶಾಖದಲ್ಲಿ

ಖಂಡಿತ ಮದುವೆ ಮಾಡಿಬಿಡುತ್ತೇನೆ' ಎಂದು ಆಕೆಯನ್ನು ಯಾವುದೋ ಒಂದು ರೀತಿಯಲ್ಲಿ ಸಮಾಧಾನಪಡಿಸಿದೆ.

ಸಂವತ್ಸರಾದಿ ಬಂದಿತು. ಚೈತ್ರ ಹೋಯಿತು. ಹುಡುಗರಿಗೆ ರಜಾ ಕೊಟ್ಟರು. ನಾನು ಅವರನ್ನು ಕರೆದುಕೊಂಡು ಬರಲು, ಗಾಡಿ ಕಟ್ಟಿಕೊಂಡು, ನಮ್ಮ ಜೀತದಾಳನ್ನು ಕರೆದುಕೊಂಡು ಹೊರಟೆ. ನಾನು ಮನೆಯೊಳಗೆ ಹೋದಾಗ ನನ್ನ ಮಾವನ ಮಗ ಕೋಪದಿಂದ ಕುಳಿತುಕೊಂಡಿರುವುದು ಕಂಡುಬಂದಿತು. 'ಯಾಕೋ ಕೋಪದಿಂದಿದೀಯೆ?' ಎಂದು ಕೇಳಿದೆ. 'ಕೋಪವಿಲ್ಲ, ಗೀಪವಿಲ್ಲ!' ಎಂದು ನುಡಿದು, ಅವನು ಅಲ್ಲಿಂದ ಎದ್ದು ಹೊರಟುಹೋಗಿಬಿಟ್ಟ. ನಾನು ಒಳಮನೆಯನ್ನು ಹೊಕ್ಕೆ. ನನ್ನ ಮಾವನ ಮಗಳೂ, ನನ್ನ ತಮ್ಮನೂ ಮುಖಗಳನ್ನು ಊದಿಸಿಕೊಂಡು ಒಬ್ಬೊಬ್ಬರು ಒಂದೊಂದು ಕಡೆ ಕುಳಿತುಕೊಂಡಿದ್ದರು. ಆದರೆ ಅವರಿಬ್ಬರತ್ತ ನೋಡಿದಾಗ ನನಗೆ ಆಶ್ಚರ್ಯವಾಯಿತು. ಇಬ್ಬರಲ್ಲೂ ಎಂಥದೋ ದೊಡ್ಡ ಬದಲಾವಣೆ ಕಾಣಿಸುತ್ತಿತ್ತು. ನನ್ನ ತಮ್ಮ, ಹಿಂದಿನ ರಜಾದಿನಗಳಿಗಿಂತ, ಈಗ ನೋಡಲು ಎರಡರಷ್ಟು ಕಾಣಿಸುತ್ತಿದ್ದನು. ಚಿಗುರುಮೀಸೆ ಕಾಣುತ್ತಿತ್ತು ಮನುಷ್ಯ ಕೈಮೈ ಚೆನ್ನಾಗಿ ತುಂಬಿಕೊಂಡು ಮಿರಿ ಮಿರಿ ಮಿಂಚುತ್ತಿದ್ದನು. ಕ್ರಾಪು ಬಿಟ್ಟಿದ್ದನು. ಚಲುವೆ ಮಾಡಿದ ಬಟ್ಟೆಗಳನ್ನು ತೊಟ್ಟುಕೊಂಡಿದ್ದನು. ನನ್ನ ಮಾವನ ಮಗಳು ಹಳ್ಳಿಯ ಹುಡುಗಿಯಂತಿಲ್ಲದೆ ಪಟ್ಟಣದ ಹುಡುಗಿಯಂತೆ ಕಂಡುಬಂದಳು. ಓರೆ ಬೈತಲೆ, ಕಣ್ಣಿಗೆ ಕಾಡಿಗೆ ಇಲ್ಲ, ಸಡಿಲು ಜಡೆ ಹಾಕಿಕೊಂಡಿದ್ದಳು. ಜಡೆಯ ಕೊನೆಯಲ್ಲಿ ಎಲೆ ಹಸುರಿನ ರೇಶ್ಮೆ ತುಂಡೊಂದನ್ನು ಗಂಟು ಹಾಕಿಕೊಂಡಿದ್ದಳು. ಅವಳು ಜಗಜಗಿಸುತ್ತಿದ್ದಳು. ಉಟ್ಟ ಸೀರೆ, ತೊಟ್ಟ ರವಿಕೆ–ಉಡುವುದರಲ್ಲಿಯೇ ಏನೋ ವಿಚಿತ್ರವಾಗಿ ಉಟ್ಟಿರುವಂತೆ ಕಂಡುಬಂದಿತು. ಕತ್ತಿನಲ್ಲಿ ನಾನು ಮಾಡಿಸಿದ್ದ ಚಿನ್ನದ ಸರವಿರಲಿಲ್ಲ. ಕೈಗಳಲ್ಲಿ ಮೊದಲಿದ್ದ ಎರಡು ಜತೆ ಬಳೆಗಳಲ್ಲದೆ ಮತ್ತೆ ಮೂರು ಜತೆ ಹೊಸ ಬಳೆಗಳಿದ್ದುವು. ಅವಳು ಹಣೆಗೆ ತೀರ ಚಿಕ್ಕದಾದ ಚುಕ್ಕೆಯನ್ನಿಟ್ಟುಕೊಂಡಿದ್ದಳು. ನೋಡಿದರೆ, ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಶಾಲೆಗೆ ಹೋಗುತ್ತಿರುವ ಹುಡುಗಿಯರಂತೆಯೇ ಕಂಡುಬಂದಳು.

ನಾನು ಕೂಡಲೇ ಗ್ರಹಿಸಿದೆ. ಇಂಗ್ಲಿಷ್ ವಿದ್ಯೆ ಹೆಣ್ಣು ಮಕ್ಕಳನ್ನೂ, ಗಂಡು ಹುಡುಗರನ್ನೂ ಬದಲಿಸಿಬಿಡುತ್ತದೆ. ಯಾವನೋ ನನ್ನ ಮಾವನ ಮಗನಂಥವನು ಮಾತ್ರವಲ್ಲದೆ, ಎಲ್ಲರೂ ಬದಲಾಯಿಸಿಬಿಡುತ್ತಾರೆ. ಅವರಿಬ್ಬರನ್ನು ನಾನು ಮಾತನಾಡಿಸಲಿಲ್ಲ. ಸ್ವಲ್ಪ ಹೊತ್ತಿಗೆ ನಾನೇ ಊಹಿಸಿದೆ–ಕತ್ತಿನಲ್ಲಿದ್ದ ಚಿನ್ನದ ಸರವನ್ನು ಮುರಿಯಿಸಿ ಬಳೆಗಳನ್ನು ಮಾಡಿಸಿಕೊಂಡಿರುವಳೆಂದು. ಅಜ್ಜಿಗೆ– 'ಗಾಡಿಯವನಿಗೆ ಊಟಕ್ಕಿಡು' ಎಂದು ತಿಳಿಸಿದೆ. ಅವನೂ ನಾನೂ ಊಟ ಮಾಡಿದೆವು. 'ಸಾಯಂಕಾಲವೇ ಪ್ರಯಾಣ. ಸಿದ್ಧರಾಗಿ' ಎಂದು ತಿಳಿಸಿದೆ. ಇದೇ ಮೊದಲಸಾರಿ ನಾನು ಅವರಿಬ್ಬರೊಂದಿಗೆ ಮಾತನಾಡಿದ್ದು. ಅವರು ಪೆಟ್ಟಿಗೆ ಮುಂತಾದುವುಗಳನ್ನು ಜೋಡಿಸಿಕೊಂಡರು. ಹೊತ್ತು ತಿರುಗಿತು. ಅವರು ಮೂವರೂ ನನ್ನೆದುರುಗಡೆಯಲ್ಲಿ ಕುಳಿತರು. 'ನಾನು ಬಂದಾಗ ನೀವೆಲ್ಲಾ ಮುಖ ಊದಿಸಿಕೊಂಡು

ಕುಳಿತಿದ್ದಿರಲ್ಲಾ, ಏಕೆ?' ಎಂದು ಕೇಳಿದೆ. ಅವರಲ್ಲಿ ಯಾರೂ ಮಾತನಾಡಲಿಲ. ತಮ್ಮತಮ್ಮೊಳಗೇ ಕಾದಾಡಿಕೊಂಡಿದ್ದಾರೆಂದುಕೊಂಡು, 'ನಿಮ್ಮಲ್ಲಿ ನೀವು ಜಗಳಾಡೋದೇಕೆ? ಒಂದಾಗಿ ಕೂಡಿಕೊಂಡಿದ್ದು ಚೆನ್ನಾಗಿ ಓದಿಕೊಳ್ಳಬೇಕು. ಒಬ್ಬರಿಗೊಬ್ಬರು ಒತ್ತಾಸೆಯಿಂದಿರಬೇಕು' ಎಂದು ತಿಳಿಸಿ, ಅಜ್ಜಿಯೊಂದಿಗೆ 'ಅಜ್ಜೀ, ನಿನ್ನನ್ನು ನಮ್ಮೂರಿಗೆ ಕರೆದುಕೊಂಡು ಹೋಗ್ತೇನೆ. ನೀನು ಕೂಡಾ ಹೊರಡಲು ತಯಾರಾಗು' ಎಂದೆ. ಆಕೆ 'ನಾನೇಕಪ್ಪಾ ಮಗೂ ? ಅದೇಕಪ್ಪಾ?' ಎಂದು ಕೇಳಿದಳು. 'ಅಜ್ಜಿ ನಿನ್ನನ್ನು ಈ ವರ್ಷಕ್ಕೆ ಮಾತ್ರವೇ ಮಾತಾಡಿಲ್ಲ ನೀನು ಬದುಕಿರುವಷ್ಟು ದಿನವೂ ನಮ್ಮೊಂದಿಗೇ ಇರಬೇಕು, ಅಷ್ಟೇ' ಎಂದು ನುಡಿದೆ. ಆಕೆಗೆ ಮಕ್ಕಳುಮರಿಗಳಾರೂ ಇರಲಿಲ್ಲ. ಒಂದು ಕವಡೆಯಷ್ಟೂ ಹಣವಿರಲಿಲ್ಲ. ತನ್ನವರೆನ್ನುವವರು ಯಾರೂ ಇಲ್ಲ. ಹಿಂದೊಮ್ಮೆ ಚೆನ್ನಾಗಿ ಬಾಳಿದ ಗೃಹಿಣಿಯೇ. ಆಕೆಗೆ ಮತ್ತೊಬ್ಬರ ಹಂಗಿಗೆ ಬಿದ್ದು ಜೀವಿಸುವುದೂ ಕೈಲಾಗದು. ತಾನು ಅಡುಗೆ ಮಾಡಿಡಬೇಕಾದ್ದು ಮೂವರೇ ಹುಡುಗರಿಗಾದ್ದರಿಂದ ತಾಪತ್ರಯವಿಲ್ಲದೆ ಬದುಕಿದಳು. ನಾನು ನಮ್ಮೊಂದಿಗೆ ಬಾ ಎಂದು ಕರೆಯುತ್ತಿರುವುದು ಕೇಳಿ ಆಕೆಗೆ ಆನೆ ಹತ್ತಿದಷ್ಟು ಸಂತೋಷವಾಯಿತು. ನೀನು ಜೀವಿಸಿರುವಷ್ಟು ಕಾಲವೂ ನನ್ನ ಹತ್ತಿರವೇ ಇರಬೇಕೆಂದಾಗ, 'ಮಗೂ....ಮಗೂ! ನೀನೆಷ್ಟು ಒಳ್ಳೆಯವನು ಕಣಪ್ಪಾ ! ಈ ವರ್ಷ ನೀನೊಂದು ಸಲವಾದ್ರೂ ಇತ್ತ ಬರಲೇ ಇಲ್ಲ. ಮಕ್ಕಳನ್ನು ನಾನು ಹುಷಾರಾಗಿ ಕಾಪಾಡಿಕೊಂಡು ಬರಲಾರದೆ ತುಂಬ ತಾಪತ್ರಯಪಟ್ಟೆ ಕಣಪ್ಪಾ! ಇನ್ನೂ ಎಷ್ಟೋ ಇದೆ ಹೇಳೋದು. ಆಮೇಲೆ ನಿಧಾನವಾಗಿ ಹೇಳ್ತೀನಿ. ನಿನ್ನ ಮಾವನ ಮಗ, ನಿನ್ನ ತಮ್ಮ ಇಬ್ರೂ ಮೊದಮೊದಲು ಚೆನ್ನಾಗಿಯೇ ಇದ್ದರು. ಆಮೇಲೆ ಬರ್ತಾ ಬರ್ತಾ ಇಬ್ಬರಿಗೂ ಆಗದಂತಾಗಿಬಿಟ್ಟಿತು. ಇದಕ್ಕೆ ನಾನೊಂದು ಕಾರಣ ಅಂದುಕೊಂಡಿದೇನೆ. ಆದ್ರೂ ನಿಧಾನವಾಗಿ ಆಮೇಲೆ ಹೇಳ್ತೀನಿ' ಎಂದಳು. 'ಊಹುಂ, ಹಾಗಲ್ಲ ಅಜ್ಜಮ್ಮಾ ! ಅದೇನೋ ಹೇಳು' ಎಂದೆ. 'ನಿನ್ನ ತಮ್ಮನನ್ನೂ, ನಿನ್ನ ಮಾವನ ಮಗನನ್ನೂ ಕೇಳಿ ತಿಳಿದುಕೋಪ್ಪಾ. ನಾನು ಹೇಳಿದರೆ ಹುಡುಗರ ಮೇಲೆ ಚಾಡಿ, ಪಿತೂರಿ ಹೇಳಿದಂತಾಗುತ್ತೆ ಎಂದಳು. ಎಷ್ಟು ಕೇಳಿದರೂ ಹೇಳಲಿಲ್ಲ.

ಆ ದಿನ ಸಾಯಂಕಾಲ ನಾವು ನಮ್ಮೂರಿಗೆ ಪಯಣವಾದೆವು. ಆ ದಿನ ರಾತ್ರಿ ಎರಡು ಜಾವ ಕಳೆದ ಮೇಲೆ ನನ್ನ ಸಾಕುತಂದೆಯ ಊರು ಸೇರಿದೆವು. ನನ್ನ ತಮ್ಮಂದಿರ ಸೋದರಮಾವನ ಮನೆಯಂಗಣದಲ್ಲಿಯೇ ಗಾಡಿ ನಿಲ್ಲಿಸಿ, ಉಳಿದ ರಾತ್ರಿಯನ್ನು ಅವರ ಮನೆಯಲ್ಲಿಯೇ ಮಲಗಿ ಕಳೆದೆವು. ನಸುಕಿ ನಲ್ಲಿಯೇ ಎದ್ದು ಅಲ್ಲಿಂದ ಹೊರಟೆವು. ನನ್ನ ತಮ್ಮನೂ, ಅವನ ಸೋದರ ಮಾವನೂ–ಇಬ್ಬರೂ ತುಂಬ ಸ್ನೇಹದಿಂದ ಮಾತನಾಡಿಕೊಂಡರು ! ನನಗೆ ಆಶ್ಚರ್ಯವಾಯಿತು. ಇವರಿಬ್ಬರೂ ಒಬ್ಬರನ್ನೊಬ್ಬರು ಭೇಟಿಯಾಗಿಲ್ಲ ; ನಾನಿವರನ್ನು ಕರೆದೊಯ್ಯುವವರೆಗೂ ಇವನ ಕೈಯಿಂದ ಸಗಣಿ ತೆಗೆಯಿಸುವುದು, ದನಗಳನ್ನು ಮೇಯಿಸಿಕೊಂಡು ಬರಲು ಅವುಗಳನ್ನು ಅಟ್ಟಿಕೊಂಡು ಹೋಗಲು ಕಳುಹಿಸುತ್ತಿದ್ದುದೂ ಮುಂತಾದ್ದನ್ನೆಲ್ಲಾ ಆತ ಇವನ ಕೈಯಲ್ಲಿ ಮಾಡಿಸುತ್ತಿದ್ದ. ಅಂಥಾದ್ದರಲ್ಲಿ ಈ ದಿನ ಈ ಪ್ರೀತಿಯೇನು!– ಎಂದೆನ್ನಿಸಿತು. ಅವರ ಸೋದರಮಾವ ನನ್ನಿಂದ ಅವರ ಓದಿನ

ವಿಷಯವನ್ನೆಲ್ಲಾ ಕೇಳಿ ತಿಳಿದುಕೊಂಡ. ಆತ ತುಂಬ ಸಂತೋಷಪಟ್ಟನೆಂದುಕೊಂಡೆ. ನನ್ನೊಂದಿಗೆ ಆತ 'ಇದ್ದರೂ ನಿನ್ನಂಥವನಿರಬೇಕು. ನಿನ್ನ ಸ್ವಾಮಿಯನ್ನು ನೀನು ಮರೆಯಲಿಲ್ಲ. ಉಪ್ಪಿಟ್ಟವರನ್ನು ಮುಪ್ಪಿನತನಕ ನಿನ್ನಂತೆ ನೆನೆಯುವವನು ನೂರಕ್ಕೋ ಸಾವಿರಕ್ಕೋ ಒಬ್ಬನಿದ್ದಾನು. ನೀನು ತುಂಬಾ ಬುದ್ಧಿವಂತ ಕಣಯ್ಯಾ!' ಎಂದು ನುಡಿದ. ನನ್ನ ಮಾವನ ಮಗ ಈ ಮಾತುಗಳನ್ನು ಕೇಳುತ್ತಾ ಮುಖ ಮುದುಡಿಕೊಂಡು ಕುಳಿತಿದ್ದ. ಕುಳಿತಿದ್ದೂ ಕುಳಿತಿದ್ದೂ ಅವನು ತಟಕ್ಕನೆ ಮೇಲೆದ್ದು 'ಏಳು ಭಾವಾ ! ಹೋಗೋಣ' ಎಂದು ನನ್ನ ಕೈ ಹಿಡಿದೆಳೆದು 'ನೀನೇನು ಒಳ್ಳೆಯವನು ಬಿಡು ! ಒಳ್ಳೆಯವರು ಪ್ರಪಂಚದಲ್ಲಿ ಬೇಕಾದಷ್ಟು ಜನರಿದ್ದಾರೆ. ನೀನಲ್ಲದಿದ್ದರೇನು ಕೊಳ್ಳೆಹೋಗೋದಿದೆ?' ಎಂದ ! ನಾನು ಇವನ್ನೆಲ್ಲಾ ಆಲೋಚಿಸಲು ಅದು ಸಮಯವಲ್ಲದ್ದರಿಂದ, ಹೊರಟು ಬಂದೆ. ನನ್ನ ತಮ್ಮನ ಸೋದರಮಾವ, 'ಹುಡುಗನನ್ನು ಇಲ್ಲಿಯೇ ಬಿಟ್ಟು ಹೋಗಬಾರದೇ!' ಎಂದ ! ನನ್ನ ಮಾವನ ಮಗ ಆತನಿಗೆ ಕಾಣಿಸದಂತೆ ಕಣ್ಸನ್ನೆ ಮಾಡಿದ. 'ಆಗಲ್ಲ ಮಾವಾ ! ಇನ್ನೊಂದು ತಿಂಗಳಿಗೆಲ್ಲಾ ತಂಗಿಯ ಮದುವೆ ಮಾಡಬೇಕಾಗಿದೆ. ಮನೆಯಲ್ಲಿ ಹುಡುಗರಿಲ್ಲದ್ದರಿಂದಾಗಿ ಅವಳು ದಿಗಿಲಿನಿಂದಿದ್ದಾಳೆ. ಈ ತಿಂಗಳೊಪ್ಪೊತ್ತು ನಿಮ್ಮ ಹುಡುಗರೊಂದಿಗೆ ಕಲೆತಿರುತ್ತಾಳೆ. ಮದುವೆಗೆ ನೀವು ಗಂಡ ಹೆಂಡತಿಯರಿಬ್ಬರೂ ತಪ್ಪದೆ ಬರಬೇಕು ಕಣ್ರೀ!' ಎಂದೆ. 'ಖಂಡಿತ ಬರುತ್ತೇವೆ' ಎಂದ. ನಾವು ಹೊರಟು ಬಂದೆವು. ದಾರಿಯಲ್ಲಿ ಮಾತಿನ ಮಧ್ಯೆ–ನನ್ನ ತಮ್ಮ ಹಾಗೂ ನನ್ನ ಮಾವನ ಮಗ ಇಬ್ಬರೂ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿಲ್ಲವೆಂಬ ಸಂಗತಿ ತಿಳಿದುಬಂತು. 'ಅದೇಕ್ರಯ್ಯಾ ಮಾತನಾಡಿಕೊಳ್ಳುತ್ತಿಲ್ಲ?' ಎಂದು ಕೇಳಿದರೆ ಒಬ್ಬನಾದರೂ ಉತ್ತರ ಕೊಡಲಿಲ್ಲ. ನನ್ನ ಮಾವನ ಮಗಳನ್ನು ಕೇಳಿದೆ. ಅವಳು ಮುಖ ತಿರುಗಿಸಿಕೊಂಡು, ಸ್ವಲ್ಪ ಹೊತ್ತಿಗೆಲ್ಲಾ ಅಳುವುದಕ್ಕಾರಂಭಿಸಿದಳು ! ನಾನು ಅಜ್ಜಿಯನ್ನು 'ಅಜ್ಜೀ, ಈ ಕಥೆಯೆಲ್ಲಾ ಏನು?' ಎಂದು ಕೇಳಿದೆ. 'ಮಗೂ, ನನಗೇನೂ ತಿಳಿಯದಪ್ಪಾ ! ನಿನ್ನ ತಮ್ಮ, ನಿನ್ನ ಭಾವಮೈದುನ ಇಬ್ರೂ ಆಗಾಗ ಹೊಡೆದಾಡಿಕೊಳ್ತಾರೆ. ಒಂದು ಸಲ ಇಬ್ಬರೂ ಒಬ್ಬರ ಮೇಲೊಬ್ಬರು ಕೈಮಾಡಿಕೊಂಡರು. ನಿನ್ನ ತಮ್ಮನನ್ನು ನಾನಾಗ ಗದರಿಸಿಕೊಂಡೆ. ಆಗ ನನ್ನ ಮೇಲೆ ಆತನಿಗೆ ಕೋಪ ಬಂದುಬಿಡ್ತು' ಎಂದಳು. 'ನೀನು ಏನೆಂದುದಕ್ಕೆ ಬಂತು?' ಎಂದು ಕೇಳಿದ ನನ್ನ ತಮ್ಮ. ನನ್ನ ಮಾವನ ಮಗ ಕೂಡಲೇ 'ಇದ್ದಿದ್ದು ಇದ್ದಂತೆ ಆಡಿದರೆ ಸಿದ್ದಪ್ಪನಿಗೆ ಸಿಡಿಲು ಬಡಿಯಿತಂತೆ!' ಎಂದ.

'ಅಜ್ಜೀ, ನೀನು ಅಂದದ್ದಾದರು ಏನು?' ಎಂದು ಕೇಳಿದೆ. 'ಅಪ್ಪಾ ಮಗೂ, ನಾನು ತಪ್ಪು ಮಾತನ್ನೇ ಆಡಿಬುಟ್ಟೆ. ತನ್ನ ಮೈಯಲ್ಲಿ ಶಕ್ತಿ ಐತಲ್ಲಾ ಅಂತ ನಿನ್ನ ತಮ್ಮ–ನಿನ್ನ ಭಾವಮೈದುನನನ್ನು ಕೂದಲು ಹಿಡಿದು ಕೆಳಗೆ ಕೆಡವಿದ. ನಾನು ಬಾಯಿ ತಪ್ಪಿ– ಹುಡುಗನಿಗೊಂದಿಷ್ಟು ಭಯವಾದ್ರೂ ಇರಲಿ ಅಂತ ಆಡಿಬುಟ್ಟೆ !' ಎಂದಳು. 'ಅಸಲು ನೀನೇನೆಂದೆಯೋ ಹೇಳುತ್ತಿಲ್ಲವಲ್ಲಾ?' ಎಂದು ನಾನು ದನಿಯೆತ್ತಿ ಕೇಳಿದೆ. ಪಾಪ, ಆ ಮುದುಕಿ ಗಡಗಡ ನಡುಗಿಬಿಟ್ಟಳು. ನನ್ನ ಮಾವನ ಮಗ ಕೂಡಲೇ 'ಏಕಜ್ಜೀ, ಅಷ್ಟು ಭಯ ಪಡ್ತೀಯೆ?

ನೀನಾಡಿದ್ದರಲ್ಲಿ ಒಂದಿಷ್ಟೂ ತಪ್ಪಿಲ್ಲ. ಅವರ ಸೊತ್ತೇ ತಿನ್ನುತ್ತಾ ಅವರ ಹುಡುಗನನ್ನೇ ಹೋಡೀತೀಯಾ? ಎಂದಳು ಭಾವಾ' ಎಂದು ತಿಳಿಸಿದ. ನಾನು ಕೊಂಚ ಹೊತ್ತು ಏನೂ ಮಾತನಾಡಲಿಲ್ಲ. ನನ್ನ ಮಾವನ ಮಗಳೂ, ನನ್ನ ತಮ್ಮನೂ ಅಳುತ್ತಾ ಕುಳಿತುಬಿಟ್ಟರು.

ಗಾಡಿ ಚಲಿಸುತ್ತಲೇ ಇತ್ತು. ಸ್ವಲ್ಪ ಹೊತ್ತಾದ ಮೇಲೆ ನಾನು ನನ್ನ ತಮ್ಮನೊಂದಿಗೆ 'ಅದೇಕೋ ಅಳ್ತೀಯ ? ನಿಜ ! ನೀನು ಅನ್ನೋದೇನು? ನಾನೂ ಅವರ ಸೊತ್ತೇ ತಿನ್ನುತ್ತಿದ್ದೇನೆ ನಾನು ಅವರದನ್ನು ತಿನ್ನುತ್ತಿದ್ದೇನಲ್ಲಾ ಅಂತ ಅವರು ಏನು ಹೇಳಿದರೆ ಅದರಂತೆ ನಡೆದುಕೊಳ್ತಾ ಇದೇನೆ. ಓದೋಕೆ ಹೋಗ್ತೇನೆಂದರೆ ನಾನು ಕೂಡಲೇ ಇವಳನ್ನು ಕಳಿಸಿಕೊಡಲಿಲ್ಲವೇ? ಅವರ ಸೊತ್ತು ನಾನು ತಿನ್ನದೇ ಇದ್ದಿದ್ದರೆ ನಾನು ಕಳಿಸಿಕೊಡುತ್ತಿದ್ದೆನೇ? ನಮ್ಮದೇನಿದೆ ಅಧಿಕಾರ? ನೀನು ಅವನನ್ನು ಹೊಡೆಯೋದಲ್ಲದೆ, ಮೇಲಾಗಿ ಇದೇಕೆ ಅಳ್ತಾ ಇದೀಯೆ? ನಿನ್ನ ಓದಿಗೂ ಅಲ್ಲದೆ, ನಿನ್ನ ಕೂಳಿಗೂ ಅಲ್ಲದೆ, ನಿನ್ನ ಷೋಕಿಗಳಿಗೆಲ್ಲಾ ಅವರ ಹಣವನ್ನೇ ಕೊಡ್ತಾ ಇದೇನೆ. ನೀನು ದಂಡ ಬಸ್ಕೀ ತೆಗೆಯಲು ಬೇಕಾದಷ್ಟು ಬಾದಾಮಿ ಬೀಜಕ್ಕೆಂದೂ, ಅದಕ್ಕಿದಕ್ಕೆಂದೂ ಹೋದ ವರ್ಷ—ಈ ವರ್ಷ ಸೇರಿ ಎಷ್ಟು ಖರ್ಚಾಗಿದೆಯೆಂದು ಬಲ್ಲೆಯಾ ? ಅಲ್ಲದೆ ಅವನ ಕ್ರಾಪು ಹಿಡಿದು ಜಗ್ಗಿಸಿ ಹೊಡೆಯುತ್ತೀಯೇನೊ ? ಅವನು ಒಳ್ಳೆಯವನಾದ್ದರಿಂದ ಸರಿಹೋಯ್ತು.'– ಎಂದೆ. ಅವನಿಗೆ ಭಯವಿರಲಿ ಎಂದೂ, ಮತ್ತೊಮ್ಮೆ ನನ್ನ ಮಾವನ ಮಗನ ತಂಟೆಗೆ ಹೋಗದಿರಲಿ ಎಂದೂ, ಬೇಕೆಂದೇ ನಾನು ಕೊಂಚ ಕಠಿಣವಾಗಿಯೇ ಮಾತನಾಡಿದೆ. ಮತ್ತೆ ಸ್ವಲ್ಪ ಹೊತ್ತಾದ ಮೇಲೆ ನನ್ನ ಮಾವನ ಮಗ ನನ್ನೊಂದಿಗೆ ಏನೋ ಮಾತನಾಡಲೆತ್ತಿಸಿದಾಗ ನಾನು ತಟಕ್ಕನೆ ಅವನ ಮೇಲೂ ಕೊಂಚ ಕೋಪಿಸಿಕೊಂಡೆ: 'ನೀನೇನೋ ಅವನಿಗಿಂತಲೂ ಬುದ್ಧಿವಂತನೆಂದುಕೊಂಡಿದ್ದೆ. ನಿನಗೂ ಜ್ಞಾನವಿಲ್ಲ. ಇಬ್ರೂ ಹೊಡೆದಾಡಿಕೊಳ್ಳೋದಂದ್ರೇನೋ ! ಹೀಗಾದರೆ ನಿಮ್ಮನ್ನು ಶಾಲೆಯಿಂದ ಬಿಡಿಸಿಬಿಡ್ತೇನೆ. ಅವನಿಂದೇನೋ ತಪ್ಪು ನಡೆಯಿತೂಂತ್ಲೇ ಇಟ್ಕೋ. ನೀನೂ ಅವನೊಂದಿಗೆ ಕಾದಾಡೋದೆ?' ಎಂದೆ. 'ನೀನು ಅವನಿಗಿಂತಲೂ ಬುದ್ಧಿವಂತ' ಎಂದು ನಾನು ಉದ್ದೇಶಪೂರ್ವಕವಾಗಿಯೇ ಅಂದೆ. ಏಕೆಂದರೆ ಓದಿನಲ್ಲಿ ನನ್ನ ತಮ್ಮನೇ ಬುದ್ಧಿವಂತನಾದ್ದರಿಂದ – ಅವನಿಗೆ ತಾನೇ ಬುದ್ಧಿವಂತನೆಂದು ಕೊಂಚ ಗರ್ವವೇನಾದರೂ ಇದ್ದ ಪಕ್ಷಕ್ಕೆ ಅದೊಂದಿಷ್ಟು ಕಡಮೆಯಾಗಲೆಂದೇ ಹಾಗೆ ನುಡಿದೆ.

ಸಾಯಂಕಾಲಕ್ಕೆಲ್ಲಾ ನನ್ನ ಚಿಕ್ಕಮ್ಮನವರ ಊರು ಸೇರಿಕೊಂಡೆವು. ಮಕ್ಕಳ ಮನಸ್ಸು ತುಂಬ ವಿಚಿತ್ರವಾಗಿರುತ್ತದೆ. ಅದರಲ್ಲೂ ಬಂಧುಗಳು ಕಂಡುಬಂದರೆ ಅವರ ಕೋಪಗಳೂ, ತಾಪಗಳೂ ಒಂದಿಷ್ಟೂ ಉಳಿಯೋಲ್ಲ. ಆ ಮರುದಿನ ಬೆಳಗಿನ ಹೊತ್ತಿಗೆಲ್ಲಾ ನನ್ನ ಮಾವನ ಮಗನೂ ನನ್ನ ತಮ್ಮನೂ ಒಬ್ಬರೊಡನೊಬ್ಬರು ಮಾತನಾಡತೊಡಗಿದ್ದರು. ನನ್ನ ಮಾವನ ಮಗಳ ಮುಖವೂ ಅರಳಿತ್ತು. ನಮ್ಮ ಅಡುಗೂಲಜ್ಜಿ, ನನ್ನ ಚಿಕ್ಕಮ್ಮನನ್ನು ಸುಮ್ಮನೇ ಕುಳ್ಳಿರಿಸಿ, ಎಲ್ಲಾ ಕೆಲಸಗಳನ್ನು ತಾನೇ ಮಾಡಿದಳು. ನನ್ನ ಚಿಕ್ಕಮ್ಮ ಅಜ್ಜಿಯನ್ನು ನಿನ್ನ ಹೆಸರೇನೆಂದು ಕೇಳಿದಳು. ನನಗೆ ಆಶ್ಚರ್ಯವಾಯಿತು. ನಾನೆಂದೂ ಆ ಅಜ್ಜಿಯನ್ನು ನಿನ್ನ ಹೆಸರೇನೆಂದು

ಕೇಳಿರಲಿಲ್ಲ. ನಮ್ಮ ಹುಡುಗರೂ ಕೇಳಿರಲಿಲ್ಲ. ಅವರೂ ಅಜ್ಜೀ ಎನ್ನುತ್ತಿದ್ದರು, ನಾನು ಅಜ್ಜೀ ಎನ್ನುತ್ತಿದ್ದೆ. ನನ್ನ ಚಿಕ್ಕಮ್ಮ ಹೆಸರು ಕೇಳುವುದೇಕೋ !

ನಮ್ಮ ಆ ಅಜ್ಜಿ ನನ್ನ ಹೆಸರು ಕುಶಲಮ್ಮನೆಂದು ತಿಳಿಸಿದಳು. ನನ್ನ ಮಾವನ ಮಗನಿಗೆ ಎಷ್ಟು ತಿಳಿವಳಿಕೆಯಿದೆಯೋ ಅಷ್ಟು ಹುಡುಗುತನವಿದೆ. ಅವನು ಈ ಹೆಸರು ಕೇಳುತ್ತಲೇ 'ಕುಶಲಮ್ಮ, ಕುಶಲಮ್ಮ' ಎಂದು ಕುಪ್ಪಳಿಸಿ, 'ಕುಶಲಮ್ಮೋ ಕುಶಲಮ್ಮೋ' ಎಂದು ಆ ಅಜ್ಜಿಯ ಮುಖದಲ್ಲಿ ಮುಖವಿರಿಸಿ, ಆಕೆಯ ಗದ್ದವನ್ನು ಬೆರಳುಗಳಲ್ಲಿ ಹಿಡಿದುಕೊಂಡು ಅತ್ತಿತ್ತ ಅಲುಗಾಡಿಸಿದ. ಅಜ್ಜಮ್ಮ ನಕ್ಕಳು. ನಕ್ಕು 'ಮಗೂ, ಇವನು ಯಾವಾಗಲೂ ಹೀಗೆಂಯೇ. ನನ್ನನ್ನು ಉಸಿರಾಡಿಸಗೊಡಲ್ಲ. ಈ ಹುಡುಗನಿಗಿಂತ ಹಸುಗೂಸು ಲೇಸು. ದಿನವೂ ನನಗೇನಾದರೂ ತಿಂಡಿ ಕೊಡು ಅಂತ ಒಂದೇ ಸಮ ಕಾಡ್ತಾನೆ. ನಾನೇನು ಕೊಡಲಿ ತಂದೆ ! ಅಲ್ಲಿಗೂ ಒಂದ್ಸಲ ಅತ್ತಿರಸ, ಒಂದು ಸಲ ಚಕ್ಕುಲಿ ಮಾಡಿ ಬಚ್ಚಿಟ್ಟು, ಯಾರಿಗೂ ಕಾಣದ ಹಾಗೆ ಇವನೊಬ್ಬನಿಗೇ ಮರೆಯಲ್ಲಿ ಕೊಡ್ತಾ ಬಂದೆ' ಎಂದಳು. 'ಇನ್ಮೇಲಿಂದ ನಿನ್ನನ್ನು ಕುಶಲಮ್ಮನೆಂದೇ ಕರೀತೇನೆ ನೋಡ್ತಾ ಇರು' ಎಂದ ನನ್ನ ಮಾವನ ಮಗ– 'ಭಾವಯ್ಯಾ ! ನೀನೂ ಸಹ ಕುಶಲಮ್ಮ ಅಂತಲೇ ಕೂಗು. ಇಲ್ಲದೇಹೋದ್ರೆ ನಾನು ಒಪ್ಪೋಲ್ಲ ತಿಳಿಯಿತೇ ?' ಎಂದ ಸಂಭ್ರಮದಿಂದ.

ಆ ದಿನ ನಾವು ಅಲ್ಲಿಯೇ ಉಳಿದುಕೊಂಡೆವು. ಮುಹೂರ್ತ ನಿಶ್ಚಯಿಸಿದೆವು. ನನ್ನ ತಂಗಿಯ ಮದುವೆ ಆ ದಿನಕ್ಕೆ ಸರಿಯಾಗಿ ಒಂದು ತಿಂಗಳಿದೆ– ಎಂದು ತೇಲಿತು. ಆ ದಿನ ನಮ್ಮೆಲ್ಲರಿಗೂ ಎಣ್ಣೆಮಜ್ಜನ ಮಾಡಿಸಿ ನನ್ನ ಚಿಕ್ಕಮ್ಮ ನಮ್ಮೆಲ್ಲರಿಗೂ ಹೊಸ ಬಟ್ಟೆಗಳನ್ನಿತ್ತಳು. ಮರುದಿನ ನಸುಕಿನಲ್ಲಿಯೇ ಎದ್ದು, ಎರಡನೆಯ ಜಾವಕ್ಕೆಲ್ಲಾ ನಮ್ಮೂರು ಸೇರಿಕೊಂಡೆವು. ನನ್ನ ತಂಗಿಗೆ– 'ಮುಹೂರ್ತ ನಿಶ್ಚಯಿಸಿದೆವಮ್ಮಾ' ಎಂದು ತಿಳಿಸಿದೆ. ಅವಳು ವಿಚಿತ್ರವಾಗಿ ಸಂತೋಷಗೊಂಡಳು. ಅವಳ ಮುಖವನ್ನು ಕಂಡಾಗ ಆ ಮುಖವನ್ನು ನಾನೆಲ್ಲಿಯೋ ನೋಡಿದಂತೆ ಭಾಸವಾಯಿತು ! ಆಮೇಲೆ ನಾನು ತುಂಬ ಹೊತ್ತಿನವರೆಗೆ 'ಆ ಮುಖವೆಂಥದು? ಆ ಕ್ಷಣದಲ್ಲಿ ವಿಚಿತ್ರವಾಗಿದೆ! ಆ ತಿಳಿವಳಿಕೆಯ ಕಾಂತಿಯನ್ನು ನಾನೆಲ್ಲಿಯೋ ನೋಡಿದಂತಿದೆ. ಎಲ್ಲಿ ನೋಡಿದೆನೋ?' ಎಂದು ಆಲೋಚಿಸಿದೆ.

ಆ ದಿನ ಸಾಯಂಕಾಲ ಅಜ್ಜಿಯನ್ನು ಕರೆದು 'ಕುಶಲಮ್ಮಾ ! ನಿನಗೆ ಈ ಒಂದು ತಿಂಗಳು ಏನು ಕೆಲಸವೋ ಗೊತ್ತಾ?' ಎಂದೆ. ಆಕೆ ಏನು? ಎಂದಳು. 'ನಿನಗೆ ತಿಳಿಯದೇ ? ಇವಳು ನನ್ನ ತಂಗಿ – ನನ್ನ ತಮ್ಮನ ಅಕ್ಕ. ಇವಳಿಗೆ ದಿನವೂ ನೀನು ತಲೆ ಬಾಚಬೇಕು. ಇವಳ ಕೈಯಿಂದ ಆ ಕಡೆ ಕಡ್ಡಿ ಈ ಕಡೆ ಎತ್ತಿಡಿಸಕೂಡದು. ಬಾಚಿದ ತಲೆಗೂದಲು, ಉಟ್ಟ ಸೀರೆ ಮಾಸದಂತೆ ನೋಡಿಕೊಳ್ಳಬೇಕು. ಮದುವೆಯ ಹೊತ್ತಿಗೆ ಈಗಿನಂತೆ ಕಾಣಿಸಕೂಡದು' ಎಂದೆ. ಅಜ್ಜಿ ಹಾಗೆಯೇ ಆಗಲಿ ಎಂದಳು.

ಆ ಒಂದು ತಿಂಗಳೂ ನನ್ನ ತಮ್ಮನೂ, ನನ್ನ ಮಾವನ ಮಗಳೂ ಹೋದ ಸಲ ರಜಾದಿನಗಳಲ್ಲಿದ್ದಂತಿರಲಿಲ್ಲ. ಒಬ್ಬರಿಗೊಬ್ಬರು ಮಾತನಾಡುತ್ತಾರಾಗಲೀ ಹಿಂದಿನ ಹಾಗೆ ಕೈಕೈ

ಹಿಡಿದು ತಿರುಗಾಡುವುದಾಗಲೀ, ಒಬ್ಬರ ಮೇಲೊಬ್ಬರು ಬೀಳುವುದಾಗಲೀ ಇರಲಿಲ್ಲ. ಊಟ ಮಾಡುವಾಗಲೂ ಒಟ್ಟಿಗೇ ಕುಳಿತುಕೊಳ್ಳುತ್ತಿರಲಿಲ್ಲ. ಕುಳಿತುಕೊಂಡರೂ ಅವರಷ್ಟಕ್ಕೆ ಅವರು ಊಟಮಾಡಿ ಎದ್ದುಬಿಡುತ್ತಿದ್ದರು. ಅವರಷ್ಟಕ್ಕೆ ಆವರು ಓದಿಕೊಳ್ಳುತ್ತಿದ್ದರೇ ವಿನಾ ಮುಂಚಿನ ಹಾಗೆ ಒಬ್ಬರಿಗೊಬ್ಬರು ಆನಿಕೊಂಡು, ಮುಖದಲ್ಲಿ ಮುಖವಿಟ್ಟು ಓದಿಕೊಳ್ಳುತ್ತಿರಲಿಲ್ಲ. ಅನಂತರ ಹದಿನೈದು ದಿನಗಳಿಗೆ ನನ್ನ ಪ್ಲೀಡರ್ ಸ್ನೇಹಿತನಿಂದ ಪತ್ರವೊಂದು ಬಂದಿತು. ನನ್ನ ತಮ್ಮ ಈ ವರ್ಷವೂ ಪರೀಕ್ಷೆಯಲ್ಲಿ ಎಲ್ಲರಿಗಿಂತಲೂ ಮೊದಲಿಗನಾಗಿ ತೇರ್ಗಡೆಯಾಗಿರುವನೆಂದು; ಮುಂದಿನ ಸಲಕ್ಕೆ ಅವನಿಗೆ ಐವತ್ತು ರೂಪಾಯಿಗಳ ಬಹುಮಾನವೂ ಬರುತ್ತದೆಂದು; ನನ್ನ ಮಾವನ ಮಗಳೂ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವಳೆಂದು, ಅವಳಿಗೊಂದು ಬೈಬಲ್ ಬಹುಮಾನ ಬಂದಿತು. ಅದು ಪೋಸ್ಟ್ ಮೂಲಕ ಊರಿಗೇ ಬಂದಿತು. ಇಂಗ್ಲಿಷ್ ಬೈಬಲ್. ನನ್ನ ಮಾವನ ಮಗಳು ಅಷ್ಟುವರೆಗೆ ಊರಿನಲ್ಲಿದ್ದಾಗ ಭಾರತ, ಭಾಗವತಗಳನ್ನು ಓದುತ್ತಿದ್ದಳು. ಆ ಹೊಸ ಪುಸ್ತಕ ಬಂದುದಿನಿಂದ ಸದಾಕಾಲ ಅದನ್ನೇ ಓದಲಾರಂಭಿಸಿದಳು. ಆ ಪುಸ್ತಕವೂ ಸಹ ತುಂಬ ಮುದ್ದಾಗಿತ್ತು. ಅಂಚುಗಳಿಗೆ ಬಂಗಾರದ ಬಣ್ಣವನ್ನು ಪೂಸಿದ್ದರು. ಕಪ್ಪನೆಯ ಚರ್ಮ ಅಲೆ ಅಲೆಯಾಗಿದ್ದು, ಅಂಚುಗಳನ್ನು ಚೊಕ್ಕವಾಗಿ ಹೊಂದಿಸಿ, ಕಟ್ಟನ್ನು ಸೊಗಸಾಗಿ ಹಾಕಿದ್ದರು. ರಟ್ಟಿನ ಮೇಲಿದ್ದ ಪುಸ್ತಕದ ಹೆಸರನ್ನೂ ಸಹ ಬಂಗಾರದ ಅಕ್ಷರಗಳಲ್ಲಿಯೇ ಮುದ್ರಿಸಿದ್ದರು. ಅವಳು ಗುಂಟೂರಿನಲ್ಲಿದ್ದಾಗ ನನಗೆ ತಿಳಿಯದ ಹಾಗೆ ಅನೇಕ ಸೀರೆಗಳನ್ನು ಕೊಂಡಿದ್ದಳು. ಆ ಸೀರೆಗಳಲ್ಲಿ—ಈರುಳ್ಳಿಯ ಪೊರೆಯಷ್ಟು ತೆಳ್ಳಗಿನ, ಅಗಲವಾಗಿರುವ ಜರಿ ಅಂಚಿನ ಸೀರೆಯೊಂದಿತ್ತು. ಅದನ್ನುಟ್ಟುಕೊಂಡು, ಆ ಬೈಬಲ್ ಗ್ರಂಥವನ್ನು ಕೈಲಿ ಹಿಡಿದು ಅತ್ತಿತ್ತ ತಿರುಗಾಡುವುದೆಂದರೆ ಅವಳಿಗೆ ಎಲ್ಲಿಲ್ಲದ ಉತ್ಸಾಹ ! ಅವಳ ಸೌಂದರ್ಯವನ್ನು ಏನೆಂದು ಬಣ್ಣಿಸಲಿ ? ಮುಹೂರ್ತ ನಿಶ್ಚಯಿಸಿದ್ದಾರೆಂದರೆ ನನ್ನ ಮದುವೆಗಾಗಿಯಲ್ಲ! ನನ್ನ ಚಿಕ್ಕಮ್ಮನೇನೋ ನನ್ನ ಮದುವೆಯ ವಿಷಯವನ್ನೆತ್ತಿದಳು. ಆದರೆ ನಾನು ಸಡಿಲ ಬಿಟ್ಟೆ ನನ್ನ ಮಾವನ ಮಗಳೂ ಸಹ ಏನೊಂದೂ ನುಡಿಯಲಿಲ್ಲ.

೧೭

ನನ್ನ ತಂಗಿಯ ಲಗ್ನಕ್ಕೆ ಇನ್ನೂ ಎರಡು ದಿನಗಳಿದ್ದುವು. ಕುಶಲಮ್ಮ ನನ್ನ ತಂಗಿಯನ್ನು ಹೂವೋ ಎಂಬಂತೆ ನೋಡಿಕೊಳ್ಳುತ್ತಿದ್ದಳು ; ಹೋರಿಕರುವನ್ನು ನೋಡಿಕೊಳ್ಳುವ ಹಾಗೆ ನೋಡಿಕೊಳ್ಳುತ್ತಿದ್ದರು. ಬೆಳಗ್ಗೆ ಏಳುತ್ತಲೇ ತಲೆ ಬಾಚಿ ನನ್ನ ತಂಗಿಯೇ ಬೇಡಬೇಡವೆಂದರೂ ಸ್ನಾನ ಮಾಡುವಾಗ ಮೈ ತಿಕ್ಕುತ್ತಿದ್ದಳು. ಕಣ್ಣಿಗೆ ಕಾಡಿಗೆ, ಹಣೆಗೆ ಕುಂಕುಮವಿಟ್ಟು, ತಲೆಗೂದಲು ಚೆದುರಿದೆ, ಸೀರೆ ಕೊಳೆಯಾಗಿದೆ ಎಂಬ ಸೊಲ್ಲೇ ಇಲ್ಲದ ಹಾಗೆ ಮಾಡುತ್ತಿದ್ದಳು. ಬೆಳಿಗ್ಗೆಯೇ ಮೊಸರು ಹಾಕಿ ಅನ್ನ ಬಡಿಸುತ್ತಿದ್ದಳು.

ಈ ಕೆಲಸಗಳನ್ನೆಲ್ಲಾ ಮಾಡುತ್ತಾ, ನನ್ನ ತಮ್ಮನಿಗೂ ನನ್ನ ಮಾವನ ಮಗಳಿಗೂ ಕಾಫಿ ಮಾಡಿಕೊಡುವುದನ್ನೂ ಸಹ ಬಿಟ್ಟುಬಿಟ್ಟಳು. ಹೊತ್ತೇರಿ ಆಲಸ್ಯವಾಗುತ್ತಿದ್ದುದರಿಂದ ಅವರು

ಕಾಫಿಯನ್ನು ತಾವೇ ಮಾಡಿಕೊಳ್ಳಲಾರಂಭಿಸಿದರು. ನನ್ನ ಮಾವನ ಮಗಳು ಕಾಫಿ ಮಾಡುತ್ತಾ ಕುಳಿತುಕೊಂಡಿರುವಾಗ, ಕುಶಲಮ್ಮ 'ಹೂನಮ್ಮ, ಹೀಗೆ ಮಾಡ್ಕೋಬೇಕು. ಎಷ್ಟು ದಿನಾಂತ ಬೇರೆಯವರು ಮಾಡಿಡ್ತಾರೆ ? ಒಂದು ವೇಳೆ ಅಡುಗೆಯವಳನ್ನಿಟ್ಟುಕೊಂಡರೂ, ಅವಳು ಯಾವೊತ್ತಾದರೂ ಬಾರದೇ ಹೋದಾಗಲಂತು ಸ್ವತಃ ಮಾಡಿಕೊಳ್ಳುವಷ್ಟಾದರೂ ಕಲಿತಿರಬೇಕಲ್ಲ!' ಎಂದಳು ಆ ದಿನ. ಆಗ ನಾನು ಅಲ್ಲಿಯೇ ಇದ್ದೆ. ನನ್ನ ಮಾವನ ಮಗಳು – ನನ್ನ ಕಡೆಗೆ ನೋಡಿ ನಕ್ಕಳು. ನನಗೂ ನಗು ಬಂದಿತು.

ನನ್ನ ತಂಗಿಗೆ ಮೂರು ದಿನಗಳಿಗೊಮ್ಮೆ ಎಣ್ಣೆಮಜ್ಜನ ಮಾಡಿಸುತ್ತಿದ್ದಳು. ಮೂರು ಹೊತ್ತೂ ಅನ್ನವನ್ನು ಬಡಿಸುತ್ತಿದ್ದಳು. ಬೆಳಿಗ್ಗೆ ಅನ್ನಕ್ಕೆ ಬೆಣ್ಣೆ ಮುದ್ದೆಯನ್ನು ಕಲಿಸಿಡುತ್ತಿದ್ದಳು. ಮಧ್ಯಾಹ್ನಕ್ಕೆ ಹಾಲೆರೆಯುತ್ತಿದ್ದಳು. ರಾತ್ರಿ ಹೊತ್ತು ಹಾಲಿನ ಕೆನೆಯನ್ನು ಯಥೇಷ್ಟವಾಗಿ ಹಾಕುತ್ತಿದ್ದಳು–ಕುಶಲಮ್ಮ. ಈ ಒಂದು ತಿಂಗಳೊಳಗಾಗಿಯೇ ನನ್ನ ತಂಗಿ ಚೆನ್ನಾಗಿ ಮೈ ತುಂಬಿಕೊಂಡು ಗುಮ್ಮಟದ ಹಾಗೆ ಕಂಡುಬಂದಳು. ನನ್ನ ತಂಗಿಯನ್ನು ಆ ಅಜ್ಜಿ ಇಷ್ಟೆಲ್ಲಾ ಪಾಲನೆ ಪೋಷಣೆ ಮಾಡುತ್ತಿರುವುದನ್ನು ಕಂಡು ನನ್ನ ಮಾವನ ಮಗಳಿಗೆ ಕೊಂಚ ಅಸೂಯೆಯಾಗದಿರಲಿಲ್ಲ. ಒಂದು ಸಲ ತನಗೆ ಬೇಕಾದ್ದು ಯಾವುದೋ ಕೊಡಲಿಲ್ಲವೆಂದು ಅವಳು 'ಎಷ್ಟು ಹೊತ್ತೂ ಅವಳಾಯ್ತು, ನೀನಾಯ್ತು ! ಹಗಲು ಮೂರು ಹೊತ್ತೂ ಅವಳೊಂದಿಗೇ ನಿನಗೆ ಸರಿಹೋಗಿಬಿಡುತ್ತೆ. ಇನ್ನು ನಾವ್ಯಾರೂ ನಿನಗೆ ಕಾಣಿಸುವುದಿಲ್ಲ' ಎಂದುಬಿಟ್ಟಳು. ಆಗ ಅಜ್ಜಿ 'ಅಮ್ಮಾ, ನಿಮ್ಮ ಭಾವಯ್ಯ ತಾಕೀತು ಮಾಡಿದ್ದರಿಂದಾಗಿ ಮಾಡ್ತಾ ಇದೇನೆ. ನನ್ನದೇನಿದೇಮ್ಮ? ಜೀತದವಳು. ನಿಮ್ಮೆಲ್ಲರಿಗೂ ದುಡಿಯಲೆಂದೇ ಬಂದಂಥವಳು ನಾನು. ನಿಮಗೆಲ್ಲಾ ಸೇವೆ ಮಾಡದೇ ಇದ್ರೆ ನನ್ನ ಜೀವನ ಸಾಗೋದು ಹೇಗಮ್ಮಾ?' ಎಂದಳು.

ನನ್ನ ತಂಗಿಯೆಂದರೆ ಕುಶಲಮ್ಮನೇಕೆ ಇಷ್ಟೊಂದು ಶ್ರದ್ಧೆ ವಹಿಸುತ್ತಿರುವಳೋ! ನನಗೆ ಎರಡು ಮೂರು ಕಾರಣಗಳು ತೋಚಿದುವು. ಒಂದು ನನ್ನ ಚಿಕ್ಕಮ್ಮನೆಂದರೆ ಕುಶಲಮ್ಮನಿಗೆ ತುಂಬ ಇಷ್ಟ ಈ ಹುಡುಗಿಗೆ ಮದುವೆಯಾಗಿಬಿಡಲೆಂದೂ, ಈ ಸಂಬಂಧವೇನಾದರು ತಪ್ಪಿಬಿಟ್ಟರೆ ಮತ್ತೆ ಮದುವೆಯೇ ಆಗಲಾರದೆಂದೂ ; ಮೂರನೆಯದು – ನನ್ನ ಪ್ರೇಮವೆಲ್ಲಾ ಈ ಹುಡುಗಿಯ ಮೇಲೆಯೇ ಇದೆ ಎಂದೂ.

ಮದುವೆಯ ಮಾತನ್ನೆತ್ತಿದಾಗಲೆಲ್ಲಾ ನನ್ನ ತಂಗಿ ಅದೊಂದು ರೀತಿಯಾಗಿ ನಾಚುತ್ತಿದ್ದಳು. ಪ್ರಪಂಚದಲ್ಲಿ ಎಲ್ಲ ಹೆಂಗಸರೂ ನಾಚುತ್ತಾರೇನೊ ನಿಜ. ಆದರೆ ಅವಳ ನಾಚಿಕೆ ಎಲ್ಲರಂಥದಲ್ಲ. ಅವಳು ನಾಚಿದರೆ – ತಲೆ ತಗ್ಗಿಸುವುದು, ಅಲ್ಲಿಂದೆದ್ದು ಹೋಗಿಬಿಡುವುದು, ಮತ್ತೆ ಕೆಲವರ ಹಾಗೆ ತುಟಿ ಕೊಂಕುಗೈಯುವುದು – ಮುಂತಾದ್ದೇನೂ ಇರದು. ಅವಳು ನಾಚುವುದು ಹೇಗೆಂದರೆ–ನಮ್ಮ ಕಡೆ ನೋಡುತ್ತಿದ್ದವಳು ಆಗಿಂದಾಗಲೇ ನೋಟವನ್ನು ಮತ್ತೊಬ್ಬರ ಕಡೆಗೆ ತಿರುಗಿಸಿಬಿಡುತ್ತಿದ್ದಳಷ್ಟೆ ನಾಚಿಕೆಯುಂಟಾಯಿತೆಂದರೆ ಅವಳ ಮುಖಮಂಡಲವೆಲ್ಲಾ ಬೆಳಗಿಬಿಡುತ್ತಿತ್ತು. ಅವಳ ಕೆನ್ನೆಗಳು ಕೆಂಪೇರುತ್ತಿದ್ದುವು. ಆಗ ಅವಳು ತನ್ನ ಬಲಗೈಯಿಂದ ಜಡೆಯನ್ನು ಸರಿಪಡಿಸಿಕೊಳ್ಳುತ್ತಿದ್ದಳು. ಆಗ ಆ ಕೈಯನ್ನು ಪರಿಕಿಸಿ

ನೋಡಿದರೆ ಮಾತ್ರ ಬೆರಳುಗಳು ಸಣ್ಣಗೆ ನಡುಗುತ್ತಿರುವುದು ಕಂಡುಬರುತ್ತಿತ್ತು. ಅವಳು ನಾಚುವ ಲಕ್ಷಣವಿದು ! ಒಂದುವೇಳೆ ಏನಾದರೂ ಹೆಚ್ಚಿನ ನಾಚಿಕೆಯುಂಟಾಯಿತೆಂದರೆ ಮುಖದಲ್ಲಿ ಎಂಥದೋ ಒಂದು ತಿಳಿವಳಿಕೆಯ ಕಾಂತಿ ತಟ್ಟನೆ ಮೂಡಿಬಿಡುತ್ತಿತ್ತು. ಆ ಕಾಂತಿಯನ್ನು ನೋಡಲೆಂದು ನನ್ನ ಮನಸ್ಸು ಅದೆಷ್ಟು ಸೆಳೆಯುತ್ತಿರುತ್ತಿತ್ತೋ ನಾನು ಹೇಳಲಾರೆ. ಆಗಿನ ಆ ಮುಖವನ್ನು ನೋಡಿದಾಗಲೆಲ್ಲಾ ನನಗೇನೋ ಜ್ಞಾಪಕಕ್ಕೆ ಬರುತ್ತಿತ್ತು. ಅದೇನೆಂದು ಮನಗಾಣಬೇಕೆಂದು ನಾನೆಷ್ಟು ಸಲ ಪ್ರಯತ್ನಿಸಿದರೂ ನನಗೆ ಅದು ಸ್ಫುರಿಸುತ್ತಿರಲಿಲ್ಲ.

ಮದುವೆಗೆ ರಾತ್ರಿಯ ಮುಹೂರ್ತ. ಆ ದಿನ ಬೆಳಿಗ್ಗೆ ನನ್ನ ಚಿಕ್ಕಮ್ಮ, ಮದುವಣಿಗ, ಆತನ ತಮ್ಮ, ಆ ಊರಿನ ಕೆಲವು ಜನ, ಇನ್ನಾರೋ ಕೆಲವರು ಬಂಧುಮಿತ್ರರೊಂದಿಗೆ ನಮ್ಮೂರಿಗೆ ಬಂದಿಳಿದರು. ನಮ್ಮ ಕುಶಲಮ್ಮ ನನ್ನ ತಂಗಿಯನ್ನು ಆ ಹಿಂದಿನ ರಾತ್ರಿಯೇ ಮದುವಣಗಿತ್ತಿಯನ್ನಾಗಿ ಮಾಡಿದ್ದಳು. ಕೆನ್ನೆಯ ಮೇಲೆ ಕಾಡಿಗೆಯ ಚುಕ್ಕೆ, ಅರಸಿನ ಪುಡಿಯನ್ನು ಸುಣ್ಣದಲ್ಲಿ ನೀರಿನೊಂದಿಗೆ ಬೆರಸಿ, ಕೆಂಪು ತಯಾರಿಸಿ, ಪದ್ಧತಿಯ ಪ್ರಕಾರ ಪಾದಗಳ ಮೇಲೆ ಸರಳರೇಖೆಗಳನ್ನೆಳೆದು, ಚುಕ್ಕೆಗಳನ್ನಿರಿಸಿ ಅಲಂಕರಿಸಿ, ಬೆಲೆ ಬಾಳುವ ಸೀರೆಯನ್ನುಡಿಸಿದ್ದಳು – ಈ ಎಲ್ಲ ಅಲಂಕಾರಗಳಿಂದಾಗಿ, ನನ್ನ ತಂಗಿ ಅತ್ಯಂತ ಸುಂದರಿಯಾಗಿ ಕಂಡುಬಂದಳು. ಆ ದಿನ ನನ್ನ ಚಿಕ್ಕಮ್ಮ ತನ್ನ ಸೊಸೆಯನ್ನು ಕಂಡು ಸಂತೋಷದ ಆಧಿಕ್ಯವನ್ನು ತಡೆಯದಾದಳು. ರಾತ್ರಿ ಮದುವೆ ಮುಗಿದುಹೋಯಿತು. ನನ್ನ ತಂಗಿಗೂ, ನನ್ನ ಚಿಕ್ಕಮ್ಮನ ಮಗನಿಗೂ ವಯಸ್ಸಿನ ಅಂತರ ಅಷ್ಟೇನೂ ಹೆಚ್ಚಾಗಿಲ್ಲ. ಅವನೇ ವಯಸ್ಸಿನಲ್ಲಿ ಕೊಂಚ ಕಿರಿಯ. ಆದರೆ ಅವನೇ ಆರು ತಿಂಗಳು ದೊಡ್ಡವನು ಎಂದು ಎಲ್ಲರೊಂದಿಗೆ ಹೇಳಿಕೊಂಡೆವು. ಹಸೆಮಣೆಯ ಮೇಲೆ ಸಾಮಾನ್ಯವಾಗಿ ಎಲ್ಲ ಹೆಂಗಸರೂ ತಲೆ ತಗ್ಗಿಸಿಕೊಂಡೇ ಕುಳಿತಿರುತ್ತಾರೆ. ಆದರೆ ನನ್ನ ತಂಗಿ ತಲೆಯನ್ನು ತಗ್ಗಿಸಲೇ ಇಲ್ಲ. ನನಗೆ ಅನೇಕ ದಿನಗಳಿಂದಲೂ ಮನಸ್ಸಿನಲ್ಲೊಂದು ಅನುಮಾನವಿತ್ತು. ನನ್ನ ಚಿಕ್ಕಮ್ಮನ ಮಗ ಯಾವಾಗಲಾದರೂ 'ಇದೇನು? ನಾನು ಹುಚ್ಚಿಯನ್ನು ಲಗ್ನವಾಗುತ್ತಿದ್ದೇನಲ್ಲ' ಎಂದು ಅಂದುಕೊಳ್ಳುತ್ತಾನೇನೋ ಎಂಬ ಅನುಮಾನ ಇದ್ದೇ ಇತ್ತು.

ಆದರೆ ಅವನು ತುಂಬ ಸಂತೋಷವಾಗಿದ್ದ. ನನ್ನ ಮಾವನ ಮಗಳು ಅವನೊಂದಿಗೆ 'ಅಣ್ಣಯ್ಯಾ, ನಿನ್ನ ಹೆಂಡತಿ ತಲೆಯನ್ನು ಒಂದಿಷ್ಟಾದರೂ ತಗ್ಗಿಸಿಕೊಳ್ಳಲಿಲ್ಲವಲ್ಲೋ!' ಎಂದು ನಗೆಯಾಡಿದಳು. ಅವನು 'ತಲೆಯನ್ನೇಕೆ ತಗ್ಗಿಸಿಕೊಳ್ಳಬೇಕು ? ತಲೆ ತಗ್ಗಿಸಿಕೊಂಡರೆ ನನಗೆ ಅವಳ ಮುಖವನ್ನು ಚೆನ್ನಾಗಿ ನೋಡಲು ಅವಕಾಶವಿರೋಲ್ಲವಲ್ಲಾ !' ಎಂದ. ಮದುವಣಿಗ ಅವಳ ತಲೆಯ ಮೇಲೆ ಬೊಗಸೆಯಕ್ಕಿಯನ್ನು ಸುರಿಯುತ್ತಿದ್ದರೆ ಅವಳು ಬಿಟ್ಟ ಕಣ್ಣು ಬಿಟ್ಟಂತೆಯೇ ಬಿಟ್ಟು ಅವನನ್ನೇ ನೋಡುತ್ತಿದ್ದಳೇ ಹೊರತು 'ನೀನೂ ತಲೇ ಮೇಲೆ ಸುರಿಯಮ್ಮಾ' ಎಂದು ಹೇಳಿದರೆ ಅವಳ ಕೈಲಾಗದಾಯಿತು ! ಎರಡು ಹರಿವಾಣಗಳೊಳಗಿನ ಅಕ್ಕಿಯನ್ನೆಲ್ಲಾ ಅವನೇ ಬೊಗಸೆಯಿಂದ ತುಂಬಿ ತುಂಬಿ ಅವಳ ತಲೆಯ ಮೇಲೆ ಸಂಭ್ರಮದಿಂದ ಎರೆದುಬಿಟ್ಟ

ನಾನು ನನ್ನ ಕೈಲಾಗುವಷ್ಟು ಮದುಮಕ್ಕಳಿಗೆ ಕೊಡುವ ವಿಚಾರದಲ್ಲಿ ಯಾವ ಲೋಪವನ್ನೂ ಮಾಡಲಿಲ್ಲ. ನೂರಾ ಹದಿನಾರು ವರದಕ್ಷಿಣೆ ಕೊಟ್ಟೆ ಮದುಮಗನಿಗೆ ಚಿನ್ನದ ಉಂಗುರವನ್ನು ಕೊಟ್ಟೆ ನನ್ನ ಚಿಕ್ಕಮ್ಮನೂ ಸಹ ಸೊಸೆಗೆ ಆಭರಣಗಳಿಗೆಂದು ಇನ್ನೂರು ರೂಪಾಯಿಗಳನ್ನು ಕೊಟ್ಟಳು. ಎಲ್ಲದಕ್ಕಿಂತಲೂ ಸೋಜಿಗದ ಸಂಗತಿಯೇನೆಂದರೆ – ಯಾವಾಗಲೋ ಚೆನ್ನಾಗಿ ನಾಚಿಕೆಯುಂಟಾದಾಗ ಮಾತ್ರವೇ ನನ್ನ ತಂಗಿಯ ಮೊಗದ ತುಂಬೆಲ್ಲಾ ಕಾಣಿಸಿಕೊಳ್ಳುತ್ತಿದ್ದ ಆ ತಿಳಿವಳಿಕೆಯ ಶೋಭೆ –ಕೊರಳೊಳಗೆ ಮಾಂಗಲ್ಯ ಕಟ್ಟಿದ ಮರುಕ್ಷಣದಿಂದಲೇ–ಕಣ್ಣುಗಳ ತುಂಬ, ಮೊಗದ ತುಂಬ ಹಾಗೆಯೇ ಉಳಿದುಕೊಂಡುಬಿಟ್ಟಿತು. ಅದು ತಿಳಿವಳಿಕೆ ಎನ್ನುವುದಕ್ಕಿಂತ ಅದನ್ನು ಒಂದು ರೀತಿಯ ಬೆಳಕು ಎಂದರೇನೇ ಚೆನ್ನ. ಐದು ದಿನಗಳವರೆಗೂ ವಿವಾಹದ ಕಾರ್ಯಗಳು ನಡೆದುವು.

ಈ ಐದು ದಿನಗಳಲ್ಲೂ, ಅವಳು ಎಲ್ಲಿಯಾದರೂ ನಿಂತುಕೊಂಡಿದ್ದಾಗ, ಅವಳ ಗಂಡನೇನಾದರೂ, ಆ ಕಡೆಯಿಂದ ಹೋಗುತ್ತಿದ್ದರೆ, ಅವಳು ಒಂದಿಷ್ಟೂ ಕದಲುತ್ತಿರಲಿಲ್ಲ, ಪಕ್ಕಕ್ಕೆ ಹೋಗುತ್ತಿರಲಿಲ್ಲ. ಅವನ ಕಡೆಗೇ ದಿಟ್ಟಿಸುತ್ತಾ ನಿಂತುಬಿಡುತ್ತಿದ್ದಳು! ಅವನೇ ನಾಚಿ ಹೊರಟುಹೋಗಿಬಿಡುತ್ತಿದ್ದನು. ಅದನ್ನು ಆಗ ಕಂಡವರೆಲ್ಲಾ ಅವಳನ್ನು ಹುಚ್ಚಿ ಎಂದರು. ನಾನೊಂದು ದಿನ 'ನೋಡಮ್ಮಾ, ಅವನು ಬಂದರೆ ನೀನು ಕೊಂಚ ಪಕ್ಕಕ್ಕೆ ಸರಿದು ನಿಂತುಕೊಳ್ಳಬೇಕು' ಎಂದೆ. ಅವಳು ನನ್ನ ಕಡೆಗೂ ಅದೇ ರೀತಿಯಾಗಿಯೇ ದಿಟ್ಟಿಸಿದಳು. ಅಷ್ಟರಲ್ಲಿಯೇ ಮದುವಣಿಗ ಅಲ್ಲಿಗೆ ಬಂದು 'ಭಾವಯ್ಯಾ, ಏನೋ ಹೇಳ್ತಾ ಇದೀಯಲ್ಲಾ?' ಎಂದು ಕೇಳಿದ. ಆಗ ಅಲ್ಲಿದ್ದುದು ನಾವು ಮೂವರೇ. ಅವನು ಅಲ್ಲಿಗೆ ಬರುತ್ತಲೇ ನನ್ನ ತಂಗಿ, ನನ್ನನ್ನು ಬಿಟ್ಟು, ಅವನ ಕಡೆಗೆ ತದೇಕಚಿತ್ತದಿಂದಲೇ ದಿಟ್ಟಿಸತೊಡಗಿದಳು. ಆಗ ನಾನು 'ನೀನು ಬಂದರೆ ಕೊಂಚ ಆಚೆಗೆ ಮರೆಯಾಗಿಬಿಡಬೇಕಮ್ಮಾ ಅಂತ ಹೇಳಿಕೊಡುತ್ತಿದ್ದೆನಯ್ಯಾ!' ಎಂದೆ. ನಾನೇನೋ ಹೇಳುತ್ತಾ ಇದ್ದೆ, ಅವನು ಅವಳತ್ತ ಹಾಗೆಯೇ ನೋಡತೊಡಗಿದ್ದ! ನನಗೇನೂ ತೋಚದಾಯಿತು. ಅವರಿಬ್ಬರೂ ನನಗಿಂತಲೂ ಹಿರಿಯರು. ನಾನು ತಟಕ್ಕನೆ ಬಾಗಿ ಅವರ ಕಾಲುಗಳಿಗೆ ನಮಸ್ಕರಿಸಿದೆ. ಕೂಡಲೇ ಅಲ್ಲಿಂದ ಹೊರಟು ಬಂದುಬಿಟ್ಟೆ. ಅವನೂ ಸಹ ನನ್ನ ಬೆನ್ನ ಹಿಂದೆಯೇ ಬಂದುಬಿಟ್ಟ. ನನ್ನ ತಂಗಿಗೆ ಇಪ್ಪತ್ತು ವರ್ಷಕ್ಕಿಂತ ಕಡಮೆಯಿಲ್ಲ. ಇನ್ನೂ ಒಂದು ವರ್ಷ ಹೆಚ್ಚಿಗಿತ್ತೋ ಏನೋ.

ಐದನೆಯ ದಿನ ಕಂಕಣಗಳನ್ನು ಬಿಚ್ಚಿದರು. ಆ ದಿನವೇ ಪ್ರಸ್ತದ ಶಾಸ್ತ್ರವೂ ಮುಗಿಯಿತು. ಆ ಮರುದಿನ ನನ್ನ ತಂಗಿ ಲೋಕಸಾಮಾನ್ಯವಾದ ನಾಚಿಕೆಪಡಲಾರಂಭಿಸಿದಳು. ಗಂಡ ಬಂದರೆ ಅವಳು ಅಲ್ಲಿಯೇ ನಿಲ್ಲುತ್ತಿರಲಿಲ್ಲ. ಯಾರಾದರು ತಮಾಷೆಗಾಗಿ ಅವಳನ್ನು ಹಾಸ್ಯ ಮಾಡಿದರೆ ಅವಳು ಅಲ್ಲಿ ನಿಲ್ಲದೆ ನಾಚಿಕೆಯಿಂದ ಹೊರಟುಹೋಗಿಬಿಡುತ್ತಿದ್ದಳು. ಅವಳ ಮುಖದಲ್ಲಿ ಆ ಬೆಳಕು ಪುನಃ ನನಗೆ ಕಂಡುಬರಲಿಲ್ಲ. ನನಗೆ ಅನುಮಾನವಾಯಿತು. ಅಷ್ಟೆಲ್ಲಾ ಬೆಳಕು ಅವಳ ಮುಖದಿಂದ ಅದೇಕೆ ಮರೆಯಾಯಿತು? ಅವರಿಬ್ಬರೂ

ಅನ್ಯೋನ್ಯವಾಗಿರುವರೋ ಇಲ್ಲವೋ ? ನಾನವಳನ್ನು ಸುಖವಾಗಿಡಬೇಕೆಂದು, ನನ್ನ ಸಾಕುತಂದೆಯ ಋಣವನ್ನು ತೀರಿಸಿಕೊಳ್ಳಬೇಕೆಂದೂ ಈ ಮದುವೆ ಮಾಡಿದೆ. ನನ್ನ ಆಸೆ ಎಷ್ಟರಮಟ್ಟಿಗೆ ಸಫಲವಾಯಿತು ? ನನ್ನ ಋಣ ಎಷ್ಟರಮಟ್ಟಿಗೆ ತೀರಿತು ಎಂಬ ಸಂದೇಹ ಉಂಟಾಯಿತು ನನ್ನಲ್ಲಿ. ಮೂರನೆಯ ದಿನ ನಾನೂ ಅವನೂ ಹೊಲದ ಕಡೆಗೆ ಹೊರಟೆವು. ನಾನು ನಿಧಾನವಾಗಿ ಅವನನ್ನು ವಿಷಯಕ್ಕೆಳೆದೆ 'ಏನಯ್ಯಾ ಭಾವಾ ! ನಮ್ಮ ತಂಗಿ ನಿನ್ನೊಂದಿಗೆ ಅನುಕೂಲವಾಗಿದಾಳೋ? ನೀವು ಸುಖವಾಗಿರೋದೇ ನನಗೆ ಮುಖ್ಯ' ಎಂದೆ. ಅವನು ಮೊದಲು ಸ್ವಲ್ಪ ನಾಚಿದ. ಆದರೆ ನಾನು ನಿಜವಾಗಿಯೂ ಆತಂಕಪಟ್ಟು ಕೇಳುತ್ತಿದ್ದೇನೆ ಎಂಬುದನ್ನು ಅವನು ಮನಗಂಡು 'ಭಾವಾ ! ನನ್ನ ಮಾವನಾದರು ನೀನೇ, ಭಾವನಾದರೂ ನೀನೇ, ಅಣ್ಣನಾದರು ನೀನೇ ! ಆದ್ದರಿಂದ ಹೇಳ್ತೀನೆ. ಮದುವೆಯಲ್ಲಿ ಐದು ದಿನವೂ ನನ್ನ ಕಡೆಗೇ ಸುಮ್ಮನೆ ನೋಡಿದಳು. ಕೋಣೆಯೊಳಗೆ ಹೋದ ಮೇಲೆ, ನಾವು ನಿದ್ರೆ ಮಾಡುವವರೆಗೂ ಅವಳು ನನ್ನ ಕಡೆಗೆ ಹಾಗೆಯೇ ನೋಡುತ್ತಾ ಇದ್ದುಬಿಟ್ಟಳು ! ಪ್ರಸ್ತವಾದ ಮೇಲಿಂದ ಹೊರಗೆ ನಾಚುತ್ತಿದ್ದಾಳೆ. ಆದರೆ ಕೋಣೆಗೆ ಬರುತ್ತಲೇ ನನ್ನತ್ತ ಮತ್ತೆ ಅದೇ ರೀತಿಯಾಗಿ ನೋಡಲಾರಂಭಿಸುತ್ತಾಳೆ!' ಎಂದ. ಆಗ ನಾನು 'ನೀನು ಮಾತನಾಡಿಸಿದರೆ ಮಾತನಾಡುತ್ತಾಳೆಯೇ?' ಎಂದು ಕೇಳಿದೆ. ಅವನು ತಲೆಬಾಗಿಸಿಕೊಂಡು 'ಭಾವಯ್ಯಾ, ನೀನು ನನಗೆ ತಂದೆಯ ಹಾಗೆ ಇದೀಯೆ. ಆದ್ದರಿಂದ ನಿನ್ನ ಮುಂದೆ ಮುಚ್ಚುಮರೆಯಿಲ್ಲದೆ ಹೇಳುತ್ತೇನೆ, ನೀನು ನನಗೊಂದು ರತ್ನವನ್ನು ಪ್ರಸಾದಿಸಿದ್ದೀಯೆ. ನಿನಗೆ ನಾನು ಚಿರಋಣಿ. ನೀನು ನನಗಿಂತಲೂ ವಯಸ್ಸಿನಲ್ಲಿ ಕೊಂಚ ಕಿರಿಯವನಾದರೂ ನೀನು ನನಗೆ ದೈವ ಸಮಾನ. ಆದ್ದರಿಂದ ನನಗಂಥಾ ರತ್ನವನ್ನು ಕೊಟ್ಟಿರುವುದರಿಂದ ನಮಸ್ಕಾರ ಮಾಡ್ತಾ ಇದೇನೆ' ಎಂದವನೇ ಅವನು ನನ್ನ ಕಾಲಿಗೆ ನಮಸ್ಕರಿಸಿ. ನಾನು ಅವನನ್ನು ಮೇಲಕ್ಕೆತ್ತಿ ನಿಲ್ಲಿಸಿ, ಆಲಿಂಗಿಸಿಕೊಂಡೆ. ಆನಂದದಿಂದಾಗಿ ನನ್ನ ಕಣ್ಣಕೊನೆಗಳಿಂದ ಬಾಷ್ಪಗಳುದುರತೊಡಗಿದುವು. ಆ ಮರುದಿನ ಲಗ್ನಕ್ಕೆ ಬಂದವರೆಲ್ಲಾ ತಮ್ಮ ತಮ್ಮ ಊರುಗಳಿಗೆ ಹೊರಟುಹೋದರು. ನನ್ನ ತಂಗಿಯೊಂದಿಗೆ ನನ್ನ ಮಾವನ ಮಗಳೂ ಊರಿಗೆ ಹೊರಟಳು.

ನನ್ನ ತಮ್ಮ, ತಮ್ಮ ಅಕ್ಕನಿಗೆ ಮದುವೆಯಾಯಿತೆಂದೂ, ಮದುವೆ ಮಾಡಿದ್ದು ನಾನೆಂದೂ, ಆನಂದವನ್ನಾಗಲೀ, ಉತ್ಸಾಹವನ್ನಾಗಲೀ ಏನೂ ತೋರ್ಪಡಿಸಲಿಲ್ಲ. ಈ ಎಂಟು ದಿನಗಳೂ–ಬೆಳಿಗ್ಗೆಯೇ ಏಳುವುದು, ಕೋಣೆಯಲ್ಲಿ ಒಬ್ಬನೇ ಬಾಗಿಲು ಮುಚ್ಚಿಕೊಂಡು ದಂಡ, ಬಸ್ಕಿಗಳನ್ನು ತೆಗೆಯುವುದು ; ಸ್ನಾನಮಾಡಿ ಕಾಫಿ ಮಾಡಿಕೊಂಡು ಕುಡಿಯುವುದು ; ಯಾವುದಾದರೂ ಒಂದು ಪುಸ್ತಕವನ್ನು ಕೈಲಿ ಹಿಡಿದು ಓದುತ್ತಾ ಕುಳಿತುಬಿಡುವುದು ! ಹೀಗೆಯೇ ಎಂಟು ದಿನಗಳನ್ನು ಕಳೆದುಬಿಟ್ಟ. ಮದುವೆಯಲ್ಲಿ ಬಟ್ಟೆಗಳನ್ನು ಓದಿಸಬೇಕಾಗಿಬಂದರೂ, ಅವನ ಕೈಯಿಂದ ಇನ್ನಾವುದಾದರೂ ಮದುವೆಯ ಕಾರ್ಯಾಂಗವನ್ನು ಮಾಡಿಸಬೇಕಾಗಿ ಬಂದರೂ, ಹತ್ತು ಸಲ ಕರೆಯಿಸಿಕೊಂಡಲ್ಲದೆ ಬರುತ್ತಿರಲಿಲ್ಲ. ಒಮ್ಮೊಮ್ಮೆ 'ಸಾಗಲಿ, ನಾನಿಲ್ಲದೇ ಇದ್ದರೆ ಏನಂತೆ ?' ಎಂದು ಬಿಡುತ್ತಿದ್ದ.

ಹಾಗೆ ಹೇಳಿ ಅವನು ಬಾರದೇ ಇದ್ದಾಗ, ನನ್ನ ಎರಡನೆಯ ತಮ್ಮನ ಕೈಲಿ ಆಯಾ ಶಾಸ್ತ್ರವನ್ನು ಹೇಗೋ ನಡೆಯಿಸಿ ಮುಗಿಸಿದೆ.

ಅವರ ಊರಿನಲ್ಲಿಯೂ ಮೂರು ನಿದ್ರೆಗಳಾದ ಮೇಲೆ ನನ್ನ ತಂಗಿಯನ್ನು ಕರೆದುಕೊಂಡು ಬಂದೆವು. ಜತೆಗೆ ಅವಳ ಗಂಡನನ್ನೂ ಕರೆದುಕೊಂಡು ಬಂದೆವು. ಅವರು ಬಂದು ಹದಿನೈದು ದಿನಗಳು ಕಳೆದುವು. ನನ್ನ ತಂಗಿ ಕ್ರಮಕ್ರಮವಾಗಿ ಮನೆಯ ಕೆಲಸಗಳನ್ನೆಲ್ಲಾ ಮಾಡತೊಡಗಿದ್ದಳು. ರಜಾ ದಿನಗಳು ಮುಗಿದುಹೋದುವು. ಪುನಃ ಹುಡುಗರೆಲ್ಲಾ ಓದಲು ಹೋಗಬೇಕು. ಗುಂಟೂರಿಗೆ ಯಾರ್‍ಯಾರನ್ನು ಕಳಿಸಬೇಕೋ ನನಗೆ ತೋಚದಾಯಿತು. ಕುಶಲಮ್ಮನನ್ನು ಕಳಿಸಿಬಿಟ್ಟರೆ ಮತ್ತೆ ಮನೆಗೆಲಸವನ್ನೆಲ್ಲಾ ನನ್ನ ತಂಗಿಯೊಬ್ಬಳೇ ಮಾಡಬೇಕಾಗಿ ಬರುತ್ತದೆ. ಕಳಿಸದೇ ಇದ್ದರೆ, ಗುಂಟೂರಿನಲ್ಲಿ ನನ್ನ ಮಾವನ ಮಗಳೇ ಅಡುಗೆ ಮಾಡುವುದು, ಬಡಿಸುವುದು, ಓದಿಕೊಳ್ಳುವುದು ಹೀಗೆ ಇಬ್ಬಗೆಯ ಕೆಲಸಗಳನ್ನು ಮಾಡಲಾರದೆ ಅವಳಿಗೆ ತೊಂದರೆಯಾಗುತ್ತದೆ. ಮೇಲಾಗಿ ಅಜ್ಜಿ ವಯಸ್ಸಾದವಳು. ಅವರ ಬಳಿಯಿದ್ದರೆ ಕೊಂಚ ಅನುವಾಗಿರುತ್ತದೆ. ನನ್ನ ಮಾವನ ಮಗನಿಗೂ ನನ್ನ ತಮ್ಮನಿಗೂ – ಪುನಃ ಅಲ್ಲಿಗೆ ಹೋದ ಬಳಿಕ ಕಾದಾಟಗಳು ನಡೆಯುತ್ತವೇನೋ! ಅವೊಂದು ದಿನ ನಾನೂ, ನನ್ನ ಮಾವನ ಮಗನೂ ಇಬ್ಬರೇ ಹೊಲದಲ್ಲಿದ್ದೆವು. ಆಗ 'ಅದೇಕೆ ಕಣೋ, ಸ್ವಾಮಿಯೂ ನೀನೂ ಇಬ್ಬರೂ ಕಚ್ಚಾಡಿದ್ದು?' ಎಂದು ಕೇಳಿದೆ. 'ಏನೂ ಇಲ್ಲ ಭಾವಯ್ಯಾ, ಅದೆಲ್ಲಾ ಈಗೇಕೆ? ಈಗ ನಾವಿಬ್ಬರೂ ಕಲೆತು ಕೂಡಿಯೇ ಇದ್ದೇವಲ್ಲಾ ! ಸ್ವಾಮಿಯೂ ಬದಲಾಯಿಸಿದಾನೆ. ಮೊದಲಿನ ಹಾಗಿಲ್ಲ. ಜಗಳಾಡೋಲ್ಲ ಬಿಡು' ಎಂದ. ನಾನೂ ಸುಮ್ಮನಾಗಿಬಿಟ್ಟಿದ್ದೆ.

ಕುಶಲಮ್ಮನನ್ನು ಗುಂಟೂರಿಗೆ ಕಳಿಸಿ, ಅಡುಗೆ ಮಾಡಲು ಒಬ್ಬ ಗೊಲ್ಲರವನನ್ನು ಏರ್ಪಾಟು ಮಾಡಿದರಾಯಿತು ಎಂದುಕೊಂಡೆ. ಆದರೆ ಹಳ್ಳಿಗಳಲ್ಲಿ ಗೊಲ್ಲರು ಜೀತದಾಳಾಗಿ ಕೆಲಸಕ್ಕೆ ಬರುತ್ತಾರಾಗಲೀ ಅಡುಗೆಯ ಕೆಲಸಕ್ಕೆ ಸರಿಬಾರರು. ಹೋಗಲಿ, ಪಟ್ಟಣದಿಂದ ಯಾರನ್ನಾದರೂ ಕರೆದುಕೊಂಡು ಬರೋಣವೇ ಎಂದರೆ ಇದುವರೆಗಾಗಲೇ ಕುಶಲಮ್ಮನನ್ನು ಏರ್ಪಾಟು ಮಾಡಿಯಾಗಿದೆ. ಒಬ್ಬರಲ್ಲದೆ ಇಬ್ಬರೇ ಎನ್ನಿಸಿತು. ಇನ್ನೊಬ್ಬ ಅಡುಗೆಯವನನ್ನು ನಿಯಮಿಸಿಕೊಳ್ಳುವ ಚೈತನ್ಯವೆಲ್ಲಿಯದು? ನಾನು ಈಗಾಗಲೇ ತೊಯ್ದು ಮುದ್ದೆಯಂತಾಗಿಬಿಟ್ಟಿದ್ದೇನೆ. ನಿಭಾಯಿಸಲಾರನೆಂದೇ ಎನ್ನಿಸಿತು. ಅದೂ ಅಲ್ಲದೆ ನನ್ನ ತಂಗಿ ಚಿಕ್ಕ ಹುಡುಗಿಯಲ್ಲ. ಅವಳ ಗಂಡ ಯಾವಾಗಲೂ ಇಲ್ಲಿಯೇ ಇರಲು ಸಾಧ್ಯವಿಲ್ಲ. ಆತ ತಮ್ಮೂರಿಗೆ ಹೋಗಿ ಮನೆ–ಮಾರು ; ಭೂಮಿ–ಕಾಣಿಗಳನ್ನು ನೋಡಿಕೊಳ್ಳಬೇಕು. ಆತ ಹೊರಡುತ್ತಾ ಹೆಂಡತಿಯನ್ನೂ ಕರೆದೊಯ್ಯುತ್ತೇನೆ ಎನ್ನದೇ ಇರಲಾರ. ಈ ಎಲ್ಲ ಸಂದೇಹಗಳಿಂದ, ಶಾಲೆ ತೆರೆದು ಈಗಾಗಲೇ ಒಂದು ವಾರವೇ ಗತಿಸಿದ್ದರೂ, ನಾನು ಕೂಡಲೇ ಯಾವುದನ್ನೂ ನಿರ್ಧರಿಸಲಾರದಾದೆ. ನನ್ನ ತಮ್ಮನೂ, ಮಾವನ ಮಗಳೂ, ನಿತ್ಯವೂ 'ನಮಗೆ ದಿನಗಳು ಹಾಳಾಗ್ತಾ ಇವೆ. ಬೇಗ ಹೋಗಬೇಕು' ಎಂದು ವರಾತ ಮೊದಲಿಟ್ಟರು. ಮದುವೆಗೆ ನಾನು ಇನ್ನಷ್ಟು ಸಾಲ ತಂದಿದ್ದೆ. ಇವರನ್ನೆಲ್ಲಾ ಕಳಿಸಿಕೊಡುವುದಕ್ಕೆ ನನ್ನ ಹತ್ತಿರ ಒಂದು

ಬಿಡಿಗಾಸು ಇಲ್ಲದಾಗಿತ್ತಾ. ಏನಿಲ್ಲವೆಂದರು ಮೊದಲು ಒಂದು ಐವತ್ತು ರೂಪಾಯಿಗಳನ್ನಾದರೂ ಜೋಡಿಸಿಕೊಟ್ಟರೆ ಅವರು ಗುಂಟೂರಿಗೆ ಹೋಗಲು ಸಾಧ್ಯವಾದೀತು ; ತರುವಾಯದ ಸಂಗತಿಯನ್ನು ನಿಧಾನವಾಗಿ ನೋಡಿಕೊಳ್ಳಬಹುದು. ನನ್ನ ಮಾವನ ಮಗಳು, 'ಬೇಗ ಗುಂಟೂರಿಗೆ ಕಳಿಸಿಕೊಡು ಮಾವಯ್ಯಾ ! ಮೊದಲು ನಾವು ಸ್ಕೂಲಿಗೆ ಸೇರಿಕೊಳ್ತೇವೆ. ಹಣವನ್ನು ಬೇಕಾದರೆ ಆಮೇಲೆ ನಿಧಾನವಾಗಿ ಕಳಿಸುವೆಯಂತೆ' ಎಂದು ಹೇಳಿದಳು. ನನ್ನ ಚಿಕ್ಕಮ್ಮನ ಮಗ 'ಊರಲ್ಲಿ ನನ್ನ ಹತ್ತಿರ ಒಂದು ಐವತ್ತು ರೂಪಾಯಿಗಳಿವೆ. ಮೊದಲು ಇವರನ್ನು ಗುಂಟೂರಿಗೆ ಕಳಿಸಿಕೊಡು. ಆಮೇಲೆ ಇನ್ನುಳಿದ ಹಣವನ್ನು ಜೋಡಿಸುವೆಯಂತೆ' ಎಂದು ತಿಳಿಸಿದ. ಈ ಸಲ ಗುಂಟೂರಿಗೆ ನನ್ನ ಎರಡನೆಯ ತಮ್ಮನನ್ನೂ ಓದಲು ಕಳಿಸಿಕೊಡಬೇಕೆಂದು ನಿಶ್ಚಯಿಸಿದ್ದೆ. ನನ್ನ ತಂಗಿ ತನ್ನ ಅತ್ತೆಯ ಮನೆಗೆ ಸಂಸಾರ ಮಾಡಲು ಹೊರಟುಹೋದರೆ, ನಾನೊಬ್ಬನೇ ಹೇಗೋ ಕಾಲ ತಳ್ಳಬಹುದು ; ಚಿಕ್ಕ ಹುಡುಗನೂ ನನ್ನ ಬಳಿಯಿದ್ದರೆ ನನಗೆ ಹೆಚ್ಚಿನ ತೊಂದರೆಯಾಗುತ್ತದೆ ಎಂದು ಅವನನ್ನೂ ಜೊತೆಮಾಡಿ, ಅವರನ್ನೆಲ್ಲಾ ಸ್ಕೂಲಿಗೆ ಕಳಿಸಿಕೊಡಲು ಪ್ರಯತ್ನಿಸುತ್ತಿದ್ದಾಗ ನನ್ನ ಚಿಕ್ಕಮ್ಮನ ಮಗನೂ ಸಹ ಈಗಲೇ ತನ್ನ ಹೆಂಡತಿಯನ್ನು ಊರಿಗೆ ಕರೆದುಕೊಂಡು ಹೋಗುತ್ತೇನೆ ಎನ್ನತೊಡಗಿದ. ನನ್ನ ಚಿಕ್ಕ ತಮ್ಮನಿಗೊಬ್ಬನಿಗೆ ಮಾತ್ರ–ಎಲ್ಲರೂ ತಮ್ಮ ತಮ್ಮ ದಾರಿ ಹಿಡಿದು ಹೊರಟುಬಿಟ್ಟರೆ–ನಾನೊಬ್ಬನೇ ಆ ಊರಲ್ಲಿ ಇರೋದು ಹೇಗೆ?–ಎಂಬ ಪ್ರಶ್ನೆ ಉದ್ಭವಿಸಿತು ! ನನ್ನ ಚಿಕ್ಕಮ್ಮನ ಮಗ ನನ್ನ ಮಾವನ ಮಗಳೊಂದಿಗೆ 'ಏನಮ್ಮಾ, ನೀನು ಓದೋದನ್ನು ಬಿಟ್ಟುಬಿಡಬಾರದೇ ? ಮೊನ್ನೆ ನಮ್ಮ ಮದುವೆಯೊಂದಿಗೆ ನಿನ್ನದೂ ನಡೆದುಬಿಟ್ಟಿದ್ದರೆ ಭಾವಯ್ಯನಿಗೆ ಈ ತಾಪತ್ರಯವೆಲ್ಲಾ ಇರುತ್ತಿರಲಿಲ್ಲ. ನೀನು ಓದಿಕೊಂಡು ತಾನೇ ಏನು ಮಾಡೋ ಹಾಗಿದೆಯೋ ನಮಗೆ ತಿಳಿಯದಾಗಿದೆ. ಭಾವಯ್ಯನಿಗೆ ಎಲ್ಲಿಲ್ಲದ ತಾಪತ್ರಯವೊಂದಲ್ಲದೆ ಇದರಲ್ಲಿ ನನಗಿನ್ನೇನೂ ಕಂಡುಬರುತ್ತಿಲ್ಲ' ಎಂದು ಬಿಟ್ಟ. ಅವಳು, 'ಸರಿಯೇ, ನಿಮ್ಮೆಲ್ಲರಿಗೂ ಇಷ್ಟವಿಲ್ಲದೇ ಹೋದರೆ ನಾನು ಓದು ನಿಲ್ಲಿಸಿಬಿಡ್ತೇನೆ !' ಎಂದಳು. ಹಾಗೆ ಹೇಳುವಾಗಲೂ, ಆ ಮಾತುಗಳನ್ನು ಅದೆಷ್ಟು ಮನಸ್ಸಿಲ್ಲದೆ ಹೇಳಿದಳೋ ನನಗೆ ಅರಿವಾಯಿತು. ಆಗ ನಾನು, 'ಏನೂ ಪರವಾಗಿಲ್ಲ, ನಾನು ಹುಟ್ಟಿದಂದಿನಿಂದಲೂ ಕಷ್ಟಗಳನ್ನೇ ಪಟ್ಟಿದ್ದೇನೆ. ಇದುವರೆಗೆ ನಾನೆಂದೂ ಅಡುಗೆ ಮಾಡಿಕೊಂಡು ಕೈ ಬಾಯಿ ಸುಟ್ಟುಕೊಂಡವನಲ್ಲ. ಈಗ ಅದರ ಪಾಡನ್ನೂ ಪಡುತ್ತೇನೆ. ಹಾನಿಯೇನಿದೆ? ಅವರವರ ದಾರಿ ಅವರು, ಹಿಡಿಸದು ಹೊರಡಲಿ ಬಿಡಿ ಎಂದೆ. ಅಷ್ಟಕ್ಕೆ ಆ ಪ್ರಸ್ತಾವನೆ ಮುಗಿಯಿತು.

ನನ್ನ ತಂಗಿ ಮತ್ತು ಅವಳ ಗಂಡನ ಮಧ್ಯೆಯಿರುವ ಅನ್ಯೋನ್ಯವನ್ನು ಕಂಡು– ಇನ್ನು ಯಾವ ತೊಂದರೆಯೂ ಇಲ್ಲವೆಂದು ನನ್ನ ಮನಸ್ಸಿಗೆ ಬೋಧೆಯಾಯಿತು. ನನ್ನ ತಂಗಿ, ಮೊದಲು ಕೆಲಸಕ್ಕೆ ಕೈ ಹಾಕುತ್ತಿರಲಿಲ್ಲ! ಈಗ ಅವನು ನಾವೆಲ್ಲ ಇರುವಾಗಲೂ ತನ್ನ ಹೆಂಡತಿಯೊಂದಿಗೆ ಹಾಸ್ಯದ ಚಟಾಕಿಗಳನ್ನು ಹಾರಿಸುತ್ತಾನೆ. ಅವಳನ್ನು ತಮಾಷೆಗೆ ರೇಗಿಸುತ್ತಾನೆ. 'ಲೋ, ಮದುವೆಯಾಗಿ ಇನ್ನೂ ಒಂದು ತಿಂಗಳಾಗಿಲ್ಲ. ಆಗಲೇ ನೀನು ಅವಳೊಂದಿಗೆ

ಹೀಗೆ ಹಾಸ್ಯಕ್ಕೆ ತೊಡಗುವುದೇ ? ನಮ್ಮ ಜನದಲ್ಲಿ ಇದೆಲ್ಲಾ ಇದೆಯೇನೋ?' ಎಂದು ನಾನೆಂದರೆ, ಅವನು– 'ಭಾವಯ್ಯಾ, ತಪ್ಪೇ? ಮಿಕ್ಕವರೆಲ್ಲಾ ಇನ್ನು ಚಿಕ್ಕವರು ತಾನೇ. ನೀನಿದ್ದರೆ ನನಗೆ ಯಾರೋ ಪರಕೀಯನೊ, ಹಿರಿಯನೋ ಎದುರಿಗಿರುವ ಹಾಗೆ ಅನ್ನಿಸೋಲ್ಲ' ಎಂದು ಮರುನುಡಿದ. ಅವನು ಎಷ್ಟು ಹಾಸ್ಯದ ಚಟಾಕಿಗಳನ್ನು ಹಾರಿಸಿದರೂ, ತಮಾಷೆಗಾಗಿ ಎಷ್ಟು ರೇಗಿಸಿದರೂ ನನ್ನ ತಂಗಿ ನಗುವುದಿಲ್ಲ, ಮುಖ ಮುದುಡಿಕೊಳ್ಳುವುದಿಲ್ಲ. ತುಟಿ ಕೊಂಕಿಸುವುದಿಲ್ಲ. ಅವನತ್ತ ಬಿಟ್ಟ ಕಣ್ಣಿನಿಂದ ದಿಟ್ಟಿಸುತ್ತ ಸುಮ್ಮನಿದ್ದುಬಿಡುತ್ತಾಳೆ. ಅವನೂ ಅವಳ ಕಡೆಗೆ ಹಾಗೆಯೇ ನೋಡಿ, 'ನಿನಗಷ್ಟು ಕೋಪವಾದರೆ ನಾನು ಹೊರಟುಹೋಗುತ್ತೇನಂತೆ ಬಿಡು !' ಎನ್ನುತ್ತಿದ್ದ.

ಇದು ಹೀಗಿರಲಾಗಿ ಮರುದಿನ ಗುಂಟೂರಿಗೆ ಹೊರಡುತ್ತೇವೆ ಎನ್ನುವಾಗ ಒಂದು ಸಣ್ಣ ಘಟನೆ ನಡೆಯಿತು. ನನ್ನ ಮಾವನ ಮಗಳಿಗೆ ಚೇಳು ಕಚ್ಚಿತು. ಅವಳಿಗೆ ಚೇಳು ಕಚ್ಚಿತೆಂದರೆ ಅವಳ ಜೀವಕ್ಕೆ ಸಂಚಕಾರ ಬಂದಂತೆ. ನಾನಿನ್ನು ಇವರ ಮನೆಗೆ ಬರುವ ಮುನ್ನ, ಚಿಕ್ಕಂದಿನಲ್ಲಿ ಯಾವಾಗಲೋ ಒಮ್ಮೆ ಅವಳಿಗೆ ಚೇಳು ಕಚ್ಚಿತ್ತಂತೆ. ನೊರೆ ಕಾರಿ, ಮಾತೇ ಬಿದ್ದುಹೋಗಿ, ಕೈಕಾಲು ತಣ್ಣಗಾಗಿ, ತೇಲುಗಣ್ಣು ಮೇಲುಗಣ್ಣು ಮಾಡಿ ಮನೆಯವರನ್ನೆಲ್ಲಾ ತುಂಬ ಗಾಬರಿಪಡಿಸಿದ್ದಳಂತೆ, ಆ ಊರಿನ ವೈದ್ಯನಾದ ಪೂಜಾರಿಯನ್ನು ಕರೆದುಕೊಂಡು ಬಂದೆ. ಆತ ಆ ಔಷಧ, ಈ ಔಷಧದ ಹಾಕಿದ. ಒಂದು ಜಾವದವರೆಗೆ ಯಾತನೆಪಟ್ಟ ಮೇಲೆ ಕೊನೆಗೆ ಎಚ್ಚರ ಬಂದಿತು. ಅದರಿಂದಾಗಿ ಪ್ರಯಾಣ ಎರಡು ದಿನ ಮುಂದಕ್ಕೆ ಬಿತ್ತು.

ಅದೂ ಅಲ್ಲದೆ ಆ ಮರುದಿನ ಮತ್ತೊಂದು ಜರುಗಿತು. ನಮ್ಮ ಎತ್ತೊಂದು, ನಾನು ಅದನ್ನು ಕಟ್ಟಿಹಾಕುತ್ತಿರುವಾಗ ನನ್ನನ್ನು ತಿವಿದುಬಿಟ್ಟಿತು. ಅದು ಚಿಕ್ಕಂದಿನಿಂದಲೂ ನನ್ನನ್ನು ಸಮೀಪಕ್ಕೆ ಸೇರಿಸುತ್ತಿರಲಿಲ್ಲ. ಐದಾರು ವರ್ಷಗಳಿಂದ ನಾನು ಆ ಎತ್ತಿನಿಂದ ದೂರದೂರಕ್ಕೇ ಇರುತ್ತಾ ಬಂದಿದ್ದೆ. ಎತ್ತು ಕಾಲಕ್ರಮೇಣ ಮುದಿಯಾಗುತ್ತಿದ್ದರೂ ಅದು ತಿವಿಯುವುದನ್ನು ಮಾತ್ರ ಬಿಟ್ಟಿರಲಿಲ್ಲ. ನನ್ನನ್ನು ನೋಡಿದರೇನೇ ಅದಕ್ಕೆ ಸರಿಬೀಳುತ್ತಿರಲಿಲ್ಲ. ತಿವಿಯಲು ಬಂದಾಗಲೆಲ್ಲಾ ಅದನ್ನು ಕಟ್ಟಿಹಾಕಿಸಿ, ಬಾರುಕೋಲಿನಿಂದ ಚೆನ್ನಾಗಿ ಥಳಿಸಿಯೇ ಥಳಿಸುತ್ತಿದ್ದೆ. ಹೊಡೆತಗಳು ಬಿದ್ದಂತೆಲ್ಲಾ ಅದು ಬುಸುಗರೆಯುತ್ತಿತ್ತು. ಈಚೀಚೆಗೆ ತಿವಿಯುವುದು ಮೊದಲಿನಷ್ಟಿಲ್ಲವಾದರೂ, ಯಾವಾಗಲೂ, ಬೆದರಿಸುವಂತೆ ತಲೆಯಾಡಿಸುತ್ತಲೇ ಇರುತ್ತದೆ. ಆ ದಿನ ನಾನು ಕೊಂಚ ಮೈಮರೆವಿನಿಂದಿದ್ದೆನೋ ಏನೊ ಅದು ಪಕ್ಕೆಯೊಳಕ್ಕೆ ಕೋಡಿಟ್ಟು ತಿವಿದುಬಿಟ್ಟಿತು. ನಾನು ಕೆಳಕ್ಕೆ ಬಿದ್ದು ಬಿಟ್ಟೆ ನನ್ನ ರೈತರುಗಳನ್ನು ಹಿಡಿದು, ಎತ್ತಿಕೊಂಡು ಹೋಗಿ ಮಲಗಿಸಿದರು. ತಿವಿದ ಸ್ಥಳದಲ್ಲಿ ಮೂಳೆ ಮುರಿದಿದೆಯೇನೋ ಎಂದು ನನಗೇ ಭಯವಾಯಿತು. ನಾನು ಹತ್ತು ಹದಿನೈದು ದಿನಗಳವರೆಗೆ ಮಂಚ ಬಿಟ್ಟು ಕದಲದಾದೆ. ನನ್ನ ಮಾವನ ಮಗಳಿಗೂ ಮೈಯಲ್ಲಿ ಹುಷಾರಿರಲಿಲ್ಲ. ಅವಳಿಗೆ, ಚೇಳು ಕಚ್ಚಿದ ಬೆರಳು ಬಾತು, ಆ ಬಾವು ಇಳಿಯಲೇ ಇಲ್ಲ. ಮೈಯೆಲ್ಲಾ ಬಳಲಿಕೆಯಿಂದಿತ್ತು. ಈ ಘಟನೆಗಳಿಂದಾಗಿಯೂ, ನನ್ನ ತಮ್ಮ ಪಾಠಗಳು ಹಾಳಾಗುತ್ತವೆ ಎಂದು ಅವಸರಿಸುತ್ತಿರುವುದರಿಂದಾಗಿಯೂ ಒಂದು

ಹದಿನೈದು ಇಪ್ಪತ್ತು ದಿನಗಳವರೆಗೆ ಖಾನಾವಳಿಯ ವಸತಿಯಲ್ಲಿರಿ ಎಂದು ಆವರಿಗೆ ದುಡ್ಡು ಕೊಟ್ಟು ಕಳಿಸಿಕೊಟ್ಟೆ ನನಗೊಂದಿಷ್ಟು ತ್ರಾಣ ಬಂದ ಮೇಲೆ, ಉಸಿರಾಡಲು ಬಿಡುವು ದೊರೆತ ಮೇಲೆ, ಎರಡನೆಯ ತಮ್ಮನನ್ನೂ, ನನ್ನ ಮಾವನ ಮಗಳನ್ನೂ, ಅಡುಗೂಲಜ್ಜಿಯನ್ನೂ ಗುಂಟೂರಿಗೆ ನಾನೇ ಕರೆದುಕೊಂಡು ಬರುತ್ತೇನೆ ಎಂದು ತಿಳಿಸಿದೆ, ಅವರಿಗೆ. ಅವರು ಗುಂಟೂರಿಗೆ ಹೊರಟುಹೋದರು. ನನ್ನ ಚಿಕ್ಕಮ್ಮನ ಮಗನೂ ಸಹ, 'ಅಲ್ಲಿನ ಕೆಲಸ ಕಾರ್ಯಗಳೆಲ್ಲಾ ಏನಾದುವೋ, ನಾನು ಹೋಗಿ ಬರುತ್ತೇನೆ ಭಾವಾ' ಎಂದು ಹೇಳಿ ಹೊರಟುಬಿಟ್ಟ. ಇನ್ನು ಮನೆಯಲ್ಲಿ, ನಾನು, ನನ್ನ ಮಾವನ ಮಗಳು, ನನ್ನ ತಂಗಿ, ಅಡುಗೆಯ ಮುದುಕಿ, ಕಿರಿಯ ತಮ್ಮ ಇಂತಿಷ್ಟೇ ಜನ ಉಳಿದೆವು. ನಾನು ಏನಾದರೂ ಆಳಿನೊಂದಿಗೆ ಮಾತನಾಡುವಾಗ ಮಾತ್ರ ಹೊರಕ್ಕೆ ಎದ್ದು ಹೋಗುವುದು, ಮನೆಯೊಳಗೆ ಊಟಕ್ಕೆ ಮಾತ್ರ ಎದ್ದು ಹೋಗುವುದರ ವಿನಾ ಹೆಚ್ಚಿಗೆ ತಿರುಗಾಡಲಾರದವನಾಗಿದ್ದೆ.

ಆ ಮರುದಿನದಿಂದ ಹೊಸದೊಂದು ನಾಟಕ ಪ್ರಾರಂಭವಾಯಿತು–

ಎತ್ತು ಇರಿದ ನಂತರ ಎರಡು ಮೂರು ದಿನಗಳಾದ ಮೇಲೆ ನಾನು ನನ್ನ ಮಂಚವನ್ನು ಬಾಗಿಲ ಹೊರಗೆ ಜಗುಲಿಯ ಮೇಲೆ ಹಾಕಿಸಿದೆ. ದನ ಕರುಗಳು ಕಣ್ಣ ನೋಟದಲ್ಲಿಯೇ ಇರುತ್ತವೆಂದು ಹೀಗೆ ಮಾಡಿದೆ. ನನಗೆ ತಿಳಿಯದಂತೆಯೇ ಒಳಮನೆಯಲ್ಲಿ ರಾದ್ಧಾಂತವೊಂದು ಸಾಗಲಾರಂಭಿಸಿತು. ನನ್ನ ತಂಗಿಯೂ ಕುಶಲಮ್ಮನೂ ಇಬ್ಬರೂ ಸೇರಿಕೊಂಡು, ನನ್ನ ಮಾವನ ಮಗಳನ್ನು ವ್ಯಂಗ್ಯವಾಗಿ ಬಿರುಸುಮಾತುಗಳನ್ನಾಡಲಾರಂಭಿಸಿದರಂತೆ. 'ನಮ್ಮಣ್ಣ ನಿಮ್ಮನ್ನೆಲ್ಲಾ ಹಚ್ಚೊಂಡು ನಿಮಗಾಗಿ ಇಷ್ಟೆಲ್ಲಾ ಒದ್ದಾಡ್ತಾ ಇದಾನೆ. ದಿಕ್ಕಾಪಾಲಾಗುತ್ತಿದ್ದ ನಿಮ್ಮ ಸಂಸಾರವನ್ನು ನೆಲೆ ನಿಲ್ಲಿಸಿದ. ನಿನ್ನನ್ನು ಓದಿಸ್ತಾ ನಿನ್ನ ತಮ್ಮನಿಗೂ ವಿದ್ಯೆ ಕಲಿಸ್ತಾ ಇದಾನೆ. ಆ ಎತ್ತು ಒಂದು ವೇಳೆ ಮರ್ಮಸ್ಥಳದಲ್ಲೆಲ್ಲಾದರೂ ಇರಿದುಬಿಟ್ಟಿದ್ದರೆ ಏನಿತ್ತು ಗತಿ? ನಿಮ್ಮೆಲ್ಲರ ಗತಿ ಏನಾಗುತ್ತಿತ್ತು? ತಾಯೀ ಕವಳಾ, ಕವಳಾ ತಾಯೀ ಅಂತ ಚಿಪ್ಪು ಕೈಲಿ ಹಿಡಿದು ಮನೆ ಮನೆ ತಿರುಗುತ್ತ ಗಿಡಗಿಡಕ್ಕೆ ಕಣ್ಣೀರು ಬಿಡಬೇಕಾಗಿತ್ತು. ಅಂಥವನನ್ನು ಮದುವೆಯಾಗೆಂದರೆ ನೀನೇನೇನೋ ಜಂಭ ತೋರಿಸ್ತೀಯಲ್ಲಾ?' ಎಂದು ನನ್ನ ತಂಗಿ ; ಇನ್ನು ಅಡುಗೆಯ ಮುದುಕಿ 'ಈಕೆ ಬಿಯ್ಯೇ, ಯಪ್ಪೇ ಪ್ಯಾಸು ಮಾಡ್ತಾಳಮ್ಮಾ ! ಈಕೆಗೇನಮ್ಮಾ ? ಅಮಲ್ದಾರ್ರೂ ಕಲೆಕ್ಟ್ರೂ ಮಾಡಿಕೊಳ್ತಾರೆ! ನಿಮ್ಮಣ್ಣನಾದರೂ ಹಳ್ಳಿಗಾಡಿನ ಗುಗ್ಗು ! ಆತ ಸರಿಹೋದಾನ್ಯೇ ? ನೀನು ಹುಚ್ಚಮ್ಮನಾದ್ರಿಂದ ನೇಗಿಲು ಹೊಡಿಯೋ ಮಡ್ಡೀನ ಲಗ್ನಮಾಡ್ಕೊಂಡೆ. ಈಕೆ ಅದೇಕೆ ಮಾಡ್ಕೊಂಡಾಳು ?' ಎಂದು ; ಹೀಗೆ ಅನೇಕ ಸಲ, ಅನೇಕ ವಿಧವಾಗಿ ಅನ್ನುತ್ತಾ ಬಂದರಂತೆ. ಅಡುಗೂಲಜ್ಜಿ ನನ್ನ ತಂಗಿಯೊಂದಿಗೆ ಒಮ್ಮೆ ಹೀಗೆಂದಳಂತೆ 'ನೀನಾದ್ರೋ ನಿಮ್ಮಣ್ಣ ಹೇಳಿದ ಮಾತು ಕೇಳಬೇಕಾದ ಗ್ರಾಚಾರವಿತ್ತಾಗಲೀ, ಈಕೆಗೇನು ಗ್ರಾಚಾರವಮ್ಮಾ? ದಿಕ್ಕಿಲ್ಲದವಳನ್ನು ನಿನ್ನನ್ನು ಕರೆತಂದು, ನಿನ್ನ ತಮ್ಮಂದಿರನ್ನೂ ಕರೆತಂದು, ತಲೆಯ ಹುಣ್ಣಗಳನ್ನೆಲ್ಲಾ ತೊಳೆದು ಕಾಪಾಡಿದ. ಪಾಪ, ಈಕೆಯನ್ನಾಗಲೀ, ಈಕೆಯ ತಮ್ಮನನ್ನಾಗಲೀ ನಿಮ್ಮಣ್ಣನೆಲ್ಲಿ ಕಾಪಾಡಿದ್ದಾನೆ? ನಿಮ್ಮಣ್ಣನದೊಂದು ಲೆಕ್ಕವೇ? ಆತನಿಲ್ಲದಿದ್ರೂ ಹೊಲಗಳನ್ನೆಲ್ಲಾ ಈಕೆಯೇ ನಿಂತು ಮಾಡಿಸ್ತಾ

ಇದ್ದು ! ಈಕೆಗೇನು ಕೈಲಾಗೋಲ್ಲ ಅಂತ ಅಂದುಕೊಂಡೆಯಾ ? ಈಕೆ ಇಂಗ್ಲಿಷ್ ಓದಿದಾಕೆ! ಇಷ್ಟು ಮಾತ್ರ ಈಕೆಗೆ ಕೈಲಾಗೊಲ್ಲ ಅಂತ ತಿಳಿದ್ಯಾ ?' ಎಂದಳಂತೆ ! ಇದನ್ನೆಲ್ಲಾ ಅನಂತರ ಅವರೇ ನನಗೆ ತಿಳಿಸಿದರು ! ನನ್ನ ಮಾವನ ಮಗಳು ಇವರಿಬ್ಬರ ಜಂಟಿ–ಉಪಟಳವನ್ನು ತಾಳಲಾರದೆ ಒಮ್ಮೊಮ್ಮೆ ಸಿಟ್ಟಾಗುತ್ತಲೊ, ಒಮ್ಮೊಮ್ಮೆ ಅವರಿದ್ದ ಸ್ಥಳದಿಂದೆದ್ದು ತನ್ನ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡು ಮಲಗುತ್ತಲೊ–ಒಮ್ಮೊಮ್ಮೆ ಅಳುತ್ತಲೊ–ಅಂತೂ ಪಾಪ, ತುಂಬ ಕಷ್ಟದಾಯಕವಾಗಿಯೇ ಪರಿಣಮಿಸಿತ್ತು ಅವಳಿಗೆ. ಒಳಮನೆಯಲ್ಲೇನೋ ಹೆಂಗಸರು ಗೃಹಕೃತ್ಯದ ಬಗ್ಗೆ ಕಲಕಲಮಾಡುತ್ತಿದ್ದಾರೆಂದೇ ನನಗೆ ತೋಚಿತ್ತಾಗಲೀ, ಈ ವೈಖರಿ ಗೊತ್ತಾಗಲಿಲ್ಲ. ಎರಡು ಹೊತ್ತು ನನಗೆ ಅವರಿಬ್ಬರೂ ಊಟಕ್ಕಿಡಲೇ ಇಲ್ಲ. ನಾನು ಊಟಕ್ಕೆ ಬಡಿಸಿರೆಂದು ಕೇಳಿದರೆ, 'ನಮಗೇನು ಗ್ರಹಚಾರ? ನಿನ್ನ ಹೆಂಡತಿಯ ಕೈಯಲ್ಲಿ ಬಡಿಸಿಕೊಂಡು ಊಟ ಮಾಡು !' ಎಂದುಬಿಟ್ಟರು. ನನ್ನ ತಂಗಿ, 'ಅಣ್ಣಯ್ಯ, ನೀನು ದೊರೆಮಗ, ನಿನ್ನಾಕೆ ದೊರೆಸಾನಿ. ಈ ಮನೆಯಲ್ಲಿ ನಾನು ಗೇಯಲಾರೆ. ನನ್ನನ್ನು ನಮ್ಮವರ ಊರಿಗೆ ಕಳಿಸಿಬಿಡು. ಏನೇ ಆಗಲಿ ನೀವು ನೀವು ಒಂದಾಗಿದ್ದರೆ, ಕೈಯಾಸರೆಗಷ್ಟೇ ನಾವು ಇರೋರಾಗಲೀ ಈ ಉಸಾಬರಿಯೆಲ್ಲಾ ನಮಗೇನು ಹಿಡಿದಿದೆ ?' ಎಂದಳು. 'ನೀನಿಷ್ಟು ಮಾತುಗಳನ್ನು ಎಲ್ಲಿಂದ ಕಲಿತೆಯಮ್ಮಾ?' ಎಂದು ಕೇಳಿದೆ. 'ಹೌದಪ್ಪಾ ! ಮನೆಯ ಹೆಣ್ಣುಮಗಳು ಏನೆಂದರೂ ತಪ್ಪೇ. ನಿನ್ನ ಹೆಂಡತಿಯ ಹಾಗೆ ಬೀಗಿಕೊಂಡು ಕೂತ್ಕೊಳ್ಳೋರ ಬಡಾಯಿ ಕಾಣಿಸೋಲ್ಲ' ಎಂದಳು. ನಾನು ಕುಶಲಮ್ಮನನ್ನು ಊಟಕ್ಕಿಡು ಎಂದು ಕರೆದೆ. 'ನನಗೀ ದಿನ ತಲೆನೋವು ಬಂದಿದೆ ಕಣಪ್ಪಾ. ನಿನ್ನ ಮಾವನ ಮಗಳನ್ನು ಬಂದು ಬಡಿಸು ಅಂತ ಹೇಳು' ಎಂದಳು. ಅವಳೇನೋ ತನ್ನ ಕೋಣೆ ಬಿಟ್ಟು ಈಚೆಗೆ ಬರಲಿಲ್ಲ. ತುಂಬ ಹೊತ್ತು ಕುಳಿತುಕೊಂಡಿದ್ದರಿಂದ, ನನಗೆ ನೋವು ಅಧಿಕವಾಗಿ, ಮೆಲ್ಲಗೆ ಅಲ್ಲಿಂದೆದ್ದು ಪಡಸಾಲೆಗೆ ಹೋಗಿ ಮಲಗಿಕೊಂಡುಬಿಟ್ಟೆ ಮಾವನ ಮಗಳು ಹೇಗೂ ಹೊರಕ್ಕೆ ಬಾರಳು. ಕುಶಲಮ್ಮನೋ, ತಂಗಿಯೋ, ಯಾರಾದರೂ ಒಬ್ಬರು ಊಟಕ್ಕೆ ಬಡಿಸಿ, ತಾವಾಗಿಯೇ ಬಂದು ಕರೆಯುತ್ತಾರೆ ಎಂದು ಬಗೆದೆನೆಂದು ಕಾಣುತ್ತದೆ. ಅದರೆ ಅವರಿಬ್ಬರೂ ಅದಾವ ಮಾಯದಲ್ಲೋ ಯಾರದೋ ನೆರೆಮನೆಗೆ ಹೋಗಿಬಿಟ್ಟಿದ್ದರು. ನಾನು ಎಷ್ಟು ಹೊತ್ತು ಮಲಗಿದ್ದರೂ, ನನ್ನನ್ನಾರೂ ಕರೆಯಲೇ ಇಲ್ಲ. ಸ್ವಲ್ಪ ಹೊತ್ತಾದ ಮೇಲೆ ಮೆಲ್ಲಗೆ ಎದ್ದು, ಪಕ್ಕೆಯನ್ನು ಕೈಯಿಂದ ಒತ್ತಿ ಹಿಡಿದುಕೊಂಡು. ಒಳಮನೆಗೂ, ಹಿತ್ತಲಿಗೂ ಹೋಗಿ ಬಂದೆ, ಯಾರೂ ಕಂಡುಬರಲಿಲ್ಲ. ಕೋಣೆಯೊಳಗೆ ಹೋದೆ. ಅವಳು ಮುಸುಕಿಟ್ಟುಕೊಂಡು ಮಲಗಿದ್ದಳು. ನಾನು ಅವಳನ್ನು ಸಮೀಪಿಸಿ, ಅವಳ ಮುಖದ ಮೇಲಿನ ಮುಸುಕು ತೆಗೆದು 'ಅವರಿಬ್ರೂ ಎಲ್ಲಿಗೊ ಹೋಗಿ ಬಿಟ್ಟಿದ್ದಾರೆ. ನೀನಾದರೂ ಬಂದು ಒಂದಿಷ್ಟು ಅನ್ನ ಹಾಕೇ' ಎಂದೆ. ಅವಳು ಅಳುವುದಕ್ಕೆ ಪ್ರಾರಂಭಿಸಿಬಿಟ್ಟಳು.

ಅದೇಕೆ ಎಂದು ಕೇಳಿದೆ. 'ನಾನಿನ್ನು ಓದಿಕೊಳ್ಳಲು ಹೋಗುವುದಿಲ್ಲ. ಇಲ್ಲಿಯೇ ಇರ್ತೇನೆ' ಎಂದಳು. 'ಸರಿ ಬಿಡು, ನಾನಾ ವಿಷಯ ಕೇಳಿದೆನೇ ಈಗ? ಅನ್ನ ಬಡಿಸುವುದಕ್ಕೂ ಓದು ನಿಲ್ಲಿಸುವುದಕ್ಕೂ ಏನು ಸಂಬಂಧ? ಇದೇಕೆ ಅಳ್ತಾ ಇದೀಯೆ ? ಅವರಿಬ್ರೂ ಸೇರ್ಕೊಂಡು

ನಿನ್ನನ್ನೇನಾದರೂ ಅಂದರೇ?' ಎಂದು ವಿಚಾರಿಸಿದೆ. ಅವಳು ನನ್ನನ್ನು ಮದುವೆ ಮಾಡಿಕೊಳ್ಳ ಎಂದ ವಿಷಯವನ್ನು ಮಾತ್ರ ಮುಚ್ಚಿಟ್ಟು, 'ಏನೇನೊ ಅಂದರು ಮಾವಯ್ಯಾ! ಅವರಿಬ್ಬರೂ ಈ ಮನೆಯಲ್ಲಿದ್ದರೆ ನಾನಿಲ್ಲಿರೋಲ್ಲ. ಅವರನ್ನು ಕಳಿಸಿಬಿಡ್ತೀಯೋ ಅಥವಾ ನಾನೇ ಹೊರಟುಹೋಗಬೇಕೋ ?' ಎಂದು ಕೇಳಿದಳು. 'ಇಗೋ ಇಲ್ನೋಡು, ಈ ಮನೆ ನಿನ್ನದು ಹಾಗೂ ನಿನ್ನ ತಮ್ಮನದು. ಈ ಆಸ್ತಿ ನಿಮ್ಮಿಬ್ಬರಿಗೂ ಸೇರಿದ್ದು. ನಿನಗಿಷ್ಟವಿಲ್ಲದೇ ಹೋದರೆ ನಾವೆಲ್ಲರೂ ಹೊರಡಬೇಕಾಗಲೀ ನಿನ್ನನ್ನು ಹೊರಟುಹೋಗು ಎನ್ನಲು ನಾವಾರು? ಆದರೂ ನಿನ್ನನ್ನು ಅವರಿಬ್ಬರೂ ಅಂದದ್ದಾದರೂ ಏನು? ಅವರಲ್ಲೊಬ್ಬಾಕೆ ಅಡುಗೆಯ ಮುದುಕಿ. ನೀನು ಹೇಳಿದ ಹಾಗೆ ನಡೆದುಕೊಳ್ಳಬೇಕಾದಂಥಾಕೆ. ಇನ್ನು ಎರಡನೆಯವಳು, ನಾಳೆ ತನ್ನ ಗಂಡನ ಮನೆಗೆ ಹೊರಟುಹೋಗತಕ್ಕವಳು. ಅಂಥವರೊಂದಿಗೆ ನಿನಗೇಕೆ?' ಎಂದೆ. 'ಅವರು ನನ್ನನ್ನು ಸುಮ್ಮನೆ ಹಿಡಿದು ಸಾಧಿಸ್ತಾ ಇದಾರೆ' ಎಂದಳು. 'ಅದೇಕೆ ಸಾಧಿಸ್ತಾರೆ? ಅಸಲು ಅವರ್‍ಯಾರು ನಿನ್ನನ್ನು ಸಾಧಿಸಲು ? ಅವರು ಹಾಗೆಲ್ಲಾ ಮಾಡಿದರೆ ನೀನೇಕೆ ಸುಮ್ಮನಿರಬೇಕು? ಅವರೇನೋ ಅಂದರು ಅಂತ ನೀನೇಕೆ ಅಳುವುದು? ಅವರು ಬರಲಿ ತಾಳು. ತರಾಟೆಗೆ ತಗೋಳ್ತೇನೆ' ಎಂದೆ. ಹಾಗೆಂದು, 'ಸರಿ, ನನಗೇನಾದರೂ ಒಂದಿಷ್ಟು ಅನ್ನ ಹಾಕ್ತೀಯಾ? ನಾನೇ ಬಡಿಸಿಕೊಳ್ಳಲೇ ?' ಎಂದು ಕೇಳಿದೆ. ಅವಳು ಹೋಗಿ ಕೈಕಾಲು ಮುಖ ತೊಳೆದುಕೊಂಡು ಬಂದು ನನಗೆ ಊಟಕ್ಕಿಟ್ಟಳು. ನಾನು ಊಟ ಮುಗಿಸಿದೆ. ನನ್ನ ತಂಗಿ ಹಾಗು ಕುಶಲಮ್ಮ ರಾತ್ರಿ ಹೊತ್ತುಮಾಡಿ ಬಂದರು. ಅವರು ಅಡುಗೆ ಮಾಡಲಿಲ್ಲ. ನಾನು ಜಗುಲಿಯ ಮೇಲೆ ಅಡ್ಡಾಗಿದ್ದು, ಊಟಕ್ಕೆ ಕರೆಯುತ್ತಾರೆಂದು ಕಾದು ನೋಡಿದೆ. ರಾತ್ರಿ ಒಂದು ಜಾವದ ಹೊತ್ತಾಯಿತು. ಯಾರೂ ಕರೆಯಲಿಲ್ಲ. ಆಗ ನಾನು ಒಳಗೆದ್ದು ಹೋಗಿ ನೋಡಿದರೆ ಅವರ ಪಾಡಿಗೆ ಅವರು ಮಲಗಿಬಿಟ್ಟಿದ್ದಾರೆ. ನಾನು ಕುಶಲಮ್ಮನೊಂದಿಗೆ, 'ಏನಜ್ಜೀ, ಅಡುಗೆ ಮಾಡಿಲ್ಲವಲ್ಲಾ?' ಎಂದು ಕೇಳಿದೆ. 'ಅಪ್ಪಾ, ನನಗೇನೂ ತಿಳಿಯದು. ನಿಮ್ಮ ತಂಗ್ಯಮ್ಮ ಮಾಡಬೇಡ ಅಂತ ಅಂದಳು. ನಾನು ಒಲೆ ಹೊತ್ತಿಸೋಣ ಅಂತ ಸೌದೆ ತರ್‍ತಾ ಇದ್ರೆ, ನನ್ನ ಕೈಯಲ್ಲಿನ ಸೌದೆ ಕಿತ್ಕೊಂಡಳು. ನಾನು ಸುಮ್ಮನಾಗಿಬಿಟ್ಟೆ' ಎಂದಳು. ನಾನು ನನ್ನ ತಂಗಿಯನ್ನು ಕುರಿತು 'ಇದೇನಮ್ಮಾ ಹೀಗೆ ಮಾಡ್ತಾ ಇದೀಯೆ? ನೀನು ನಾಳೆ ನಿನ್ನ ದಾರಿ ಹಿಡಿದು ಗಂಡನ ಮನೆಗೆ ಹೋಗುವಾಕೆ. ಅದೂ ಅಲ್ಲದೆ, ನನಗೂ ನಿನಗೂ ಈ ಮನೆಯಲ್ಲಿ ಏನು ಅಧಿಕಾರವಿದೇಂತ? ನೀನು ಅದೃಷ್ಟವಂತಳಾದ್ದರಿಂದ ನಿನ್ನ ಹುಚ್ಚು ಗುಣವಾಯ್ತು. ನನ್ನ ಮಾತು ದಕ್ಕುವುದಿತ್ತಾದ್ದರಿಂದ ಆ ಮಾರಾಯ ನಿನ್ನ ಕೈ ಹಿಡಿದ. ಈ ಮನೆಯಲ್ಲಿ ನಮ್ಮಿಬ್ಬರಿಗೂ ಯಾವ ಅಧಿಕಾರವಿದೆ? ಮಧ್ಯಾಹ್ನ ನೀವಿಬ್ರೂ ಅವಳನ್ನು ನಾನಾ ಮಾತುಗಳನ್ನಾಡಿದಿರಂತೆ. ಅವಳಿಷ್ಟಬಂದಹಾಗೆ ಅವಳು ಮಾಡಬೇಕಾದ್ದೇ ಹೊರತು ನಾವೇನೂ ಅನ್ನಲು ಸಾಧ್ಯವಿಲ್ಲ. ನೀವಿಬ್ರೂ ಕೂಡಿ ಅವಳನ್ನು ಸುಮ್ಮನೆ ಸತಾಯಿಸಿ ಸಾಧಿಸ್ತಾ ಇದೀರಂತೆ. ಅವಳೇನಾದ್ರೂ 'ನನ್ನ ಮನೆಯಿಂದ ನೀವು ತಕ್ಷಣವೇ ಹೊರಟುಹೋಗಿ' ಅಂತ ಅಂದ್ರೆ ನೀನೇ ಆಗಲಿ ನಾನೇ ಆಗಲಿ ತಲೇಮೇಲೆ ಬಟ್ಟೆ ಹಾಕ್ಕೊಂಡು ತುಟಿಪಿಟಕ್ಕೆನ್ನದೆ ಹೊರಗೆ

ಹೋಗಬೇಕಾದದ್ದೇ ! ನಿನಗೇನು ? ಭಾಗ್ಯವಂತೆ ! ನಿನ್ನ ಗಂಡನ ಮನೆಗೆ ಹೋಗ್ತೀಯೇ. ನನ್ನ ಗತಿ ಏನಾಗಬೇಕು ? ನೋಡು ತಾಯಿ, ನಿನಗೆ ತಿಳೀದು. ನೀನು ಚಿಕ್ಕವಳು. ನಾವು ಎಷ್ಟೋ ಅಷ್ಟರಲ್ಲಿರಬೇಕು. ನಕ್ಕರೆ ತಕ್ಕಷ್ಟಿರಬೇಕು ಎಂಬಂತೆ, ನಾವು ನಮ್ಮ ಸ್ಥಾನಮಾನವೆಷ್ಟೋ ಅಷ್ಟರಲ್ಲೇ ಇರಬೇಕಮ್ಮಾ ! ಹಾಗಲ್ಲದೆ, ನಮಗೆ ಅಧಿಕಾರವಿಲ್ಲದ ಕೆಲಸಗಳನ್ನು ತಲೆಯ ಮೇಲೆ ಹಾಕ್ಕೋಬಾರದು. ನೀನು ಮಾಡಿದ್ದು ಬಹಳ ತಪ್ಪು' ಎಂದೆ. ನಾನಾಡುವ ಮಾತುಗಳನ್ನು ನನ್ನ ಮಾವನ ಮಗಳೂ ಸಹ ತನ್ನ ಕೋಣೆಯಿಂದಲೇ ಕೇಳಿಸಿಕೊಳ್ಳುತ್ತಿದ್ದಳು. ಕೂಡಲೆ ನನ್ನ ತಂಗಿ ಎದ್ದು, 'ಅಣ್ಣಾ, ನೀನು ನನಗೆ ಮದುವೆಯಾದರೆ ನೀನೂ ಸಹ ಸುಖಪಡುತ್ತೀ ಎಂದು, ಕೊಂಚವಾದರೂ ನನ್ನದೂ ಋಣ ತೀರಿದಂತಾಗುತ್ತದೆ ಅಂತ ಹೀಗೆ ಮಾಡಿದೆ. ನಾನೇನಾದರು ತಪ್ಪು ಮಾಡಿದ್ದ ಪಕ್ಷಕ್ಕೆ ಅದನ್ನು ಹೊಟ್ಟೆಯಲ್ಲಿಟ್ಟುಕೊಂಡು ನನ್ನನ್ನು ಕಾಪಾಡಬೇಕಣ್ಣಾ. ನಾನು ಒಳ್ಳೆಯ ಉದ್ದೇಶದಿಂದಲೇ ಹೀಗೆ ಮಾಡಿದೆನಾಗಲೀ ಮತ್ತಾವ ಕೆಟ್ಟ ಉದ್ದೇಶದಿಂದಲೂ ಅಲ್ಲ' ಎಂದು ಕಣ್ಣೀರು ಹಾಕಿದಳು. ಹೋಗಿ ಒಲೆ ಹೊತ್ತಿಸಿದಳು. ಅಜ್ಜಿಗೂ ನಾಲ್ಕು ಮಾತು ಗಟ್ಟಿಯಾಗಿ ಆಡಿದೆ. ಆಕೆ ಭಯಪಡುತ್ತಾ ಎದ್ದುಹೋಗಿ, ಅಕ್ಕಿ ತೊಳೆದು ಎಸರಿಟ್ಟಳು. ಅಡುಗೆಯಾದ ಮೇಲೆ ನನಗೂ ಅವಳಿಗೂ ಒಮ್ಮೆಗೇ ಬಡಿಸಿಟ್ಟರು. ನಾನು ಊಟಕ್ಕೆ ಕುಳಿತೆ. ಊಟ ಮಾಡು ಬಾ ಎಂದು ಅವಳನ್ನು ಕರೆದರು. ಕರೆದರೆ ಅವಳು, 'ಮಾವಯ್ಯನದಾಗಲಿ, ಆಮೇಲೆ ಮಾಡ್ತೇನೆ' ಎಂದಳು. ನನ್ನ ತಂಗಿ– 'ನಮ್ಮ ತಮ್ಮನು ನೀನೂ ಕಲೆತು ಅದೆಷ್ಟು ಸಲ ಊಟಮಾಡಿಲ್ಲ? ಈಗ ಮಾವಯ್ಯನೊಂದಿಗೆ ಕೂತು ಊಟ ಮಾಡಕೂಡದೇನು?' ಎಂದಳು. ಹಾಗೆಂದು, 'ನನಗೇಕೆ ಬಿಡಮ್ಮಾ ! ನಿನ್ನನ್ನೇನಾದರೂ ಅನ್ನಲು ನನಗೇನು ಅಧಿಕಾರವಿದೆ? ನಮ್ಮಣ್ಣನಿಗೇ ಇಲ್ಲದೆ ಹೋದಮೇಲೆ ನನಗಿರುತ್ತಾ? ಇಷ್ಟಕ್ಕೂ ಇದೆಲ್ಲಾ ನನಗೇಕೆ? ನಮ್ಮಣ್ಣನ ಪುಣ್ಯವೋ ಅಂತ ನನಗೊಂದು ದಾರಿ ಮಾಡಿಕೊಟ್ಟಿದಾನೆ. ಇಲ್ಲದೇ ಇದ್ರೆ ನಾನೂ ಸಹ ಕುಶಲಮ್ಮನ ಹಾಗೆ ಅವರಿವರ ಹಂಗಿಗೆ ಬಿದ್ದು ಬಾಳಬೇಕಾಗ್ತಿತ್ತು' ಎಂದಳು. ನನ್ನ ಮಾವನ ಮಗಳು ಮಾತ್ರ ಊಟಕ್ಕೆ ಬರಲಿಲ್ಲ. ಆಗ ನಾನು, ನನ್ನ ತಂಗಿಯೊಂದಿಗೆ 'ನೋಡಮ್ಮಾ, ನೀನವಳಿಗೆ ಇಂಥಾ ಮಾತುಗಳನ್ನೆಲ್ಲಾ ಆಡಬಾರದು. ಇದೇನಮ್ಮಾ ಇದು ! ಸೋಜಿಗವಾಗಿದೆಯಲ್ಲಾ! ಪ್ರಪಂಚದಲ್ಲಿ ಮನುಷ್ಯರು ಆದರೆ ಹುಚ್ಚರಾಗ್ತಾರೆ, ಇಲ್ಲದೇ ಇದ್ರೆ ಅತಿ ಬುದ್ಧಿವಂತರಾಗ್ತಾರಲ್ಲಾ !' ಎಂದೆ. ನನ್ನ ತಂಗಿ ಮರುಮಾತಾಡಲಿಲ್ಲ. ನಾನು ಊಟಮಾಡಲಾರಂಭಿಸಿದೆ. ಕುಶಲಮ್ಮನಿಗೆ ನನ್ನನ್ನು ಕಂಡರೆ ಭಯ ಹಾಗೂ ಸಲಿಗೆ. ನಾನು ಒಂದಿಷ್ಟು ಕೋಪಮಾಡಿಕೊಂಡರೆ ನಡುಗಿಬಿಡುತ್ತಾಳೆ. ನನಗೆ ಅನ್ನ ಬಡಿಸಿ, ಅಡ್ಡಗೋಡೆಯ ಮರೆಯಲ್ಲಿ ಮುದುಡಿಕೊಂಡು ನಿಂತುಕೊಂಡಿದ್ದಳು. ನಾನದನ್ನು ಸೂಕ್ಷ್ಮವಾಗಿ ಕಂಡುಕೊಂಡೆ. ಮತ್ತೆ ನಾನೊಂದು ನಗೆಹನಿಯನ್ನು ಚಿಮ್ಮಿದರೆ ಆಕೆಯ ಭಯವೆಲ್ಲಾ ಹೋಗಿಬಿಡುತ್ತಿತ್ತು. ಅದಕ್ಕೋಸ್ಕರ ನಾನು, 'ಕುಶಲಮ್ಮಾ, ಹುಳಿಯೇನಾದರೂ ಇದೆಯೇ?' ಎಂದು ಕೇಳಿದೆ. 'ಅವಸರದಲ್ಲಿ ಮಾಡಲಿಲ್ಲ ಮಗೂ. ಒಂದೆರಡು ಈರುಳ್ಳಿ ಹೆಚ್ಚಿ ಹುಳಿಮಾಡಲೇ?' ಎಂದು ಕೇಳಿದಳು. ನಾನು, 'ಸಾರು ಮಾಡದಾದೆಯಾ?' ಎಂದೆ. 'ಗಾಯ ಕೀತುಹೋಗುತ್ತೇಂತ

ಮಾಡ್ಲಿಲ್ಲ' ಎಂದು ಬೇಗ ಬೇಗ ಹಸಿ–ಹುಳಿಮಾಡಲು ತೊಡಗಿದಳು. ನನ್ನ ತಂಗಿ ಈರುಳ್ಳಿ ಹೆಚ್ಚಿ ತಂದಳು. ನಾನು ಸ್ವಲ್ಪ ಹೊತ್ತು ಹಾಗೆಯೇ ಕುಳಿತಿದ್ದು, ಹುಳಿಯಾದ ಮೇಲೆ, ಅದರೊಡನೆ ಎರಡು ತುತ್ತು ಊಟಮಾಡಿ, 'ಮೊಸರು ಹಾಕು ಕುಶಲಮ್ಮಾ' ಎಂದೆ. 'ಅಪ್ಪಾ ತಂಪುಹೊತ್ತು ಮೊಸರು ಹಾಕಿಕೊಂಡರೆ ಗಾಯ ಮತ್ತೆ ರೇಗಿ ಹಸಿಯಾಗಿಬಿಡುತ್ತೆ ಮನೇಲಿರೋದೂ ಸಹ ಈದ ಎಮ್ಮೆಯ ಮೊಸರು. ಮಜ್ಜಿಗೆ ಹಾಕ್ತೇನೆ' ಎಂದಳು. ನಾನು ಹಾಸ್ಯ ಮಾಡಲೆಂದು, 'ಮೊಸರು ನೀನು ಹಾಕಿಕೊಳ್ಳಬೇಕೆಂದೇ?' ಎಂದೆ. ನನ್ನ ಈ ಮಾತಿನಿಂದ ನನ್ನ ಕೋಪ ಮಾಯವಾಗಿದೆ ಎಂದು ಕುಶಲಮ್ಮ ತಿಳಿದುಕೊಂಡಳು. ಆಕೆ ನೆಲುವಿನಿಂದ ಮಡಕೆ ಕೈಗೆತ್ತಿಕೊಂಡು, ಕೆನೆಯನ್ನು ಕೈಯಿಂದ ಪಕ್ಕಕ್ಕೆ ತಳ್ಳಿ, ಕೊಳದಪ್ಪಲೆಯೊಳಗೆ ಮೊಸರು ಬಗ್ಗಿಸಿ, 'ಮಗೂ, ಸ್ವಲ್ಪ ಮಾತ್ರ ಮೊಸರು ಹಾಕಿಸಿಕೋ' ಎಂದು ಸ್ವಲ್ಪ ಮೊಸರು ಹಾಕಿ, ಮತ್ತೆ ಅರ್ಧದಷ್ಟು ಮಜ್ಜಿಗೆ ಹಾಕಿದಳು. ಆಗ ನಾನು ತಮಾಷೆಗೆ, 'ಕುಶಲಮ್ಮಾ ಹೀಗಾದರೆ ನಿನ್ನನ್ನು ಗುಂಟೂರಿಗೆ ಕಳಿಸಿಬಿಡ್ತೇನೆ, ನೋಡ್ಕೋ ! ಈ ಆಸ್ತಿ ನಿನ್ನದೆ, ನನ್ನದೆ? ನನ್ನ ಮಾವನ ಮಗಳದು, ನನ್ನ ಮಾವನ ಮಗನದು. ಅವರದನ್ನು ನಾನು ತಿಂದರೆ ನಿನಗೆ ಸಹನೆ ಇಲ್ವಲ್ಲಾ !' ಎಂದೆ. ಕುಶಲಮ್ಮನಿಗೆ ನಾನು ಪೂರ್ಣ ಪ್ರಸನ್ನನಾಗಿರುವುದು ಕಂಡು ಮನಸ್ಸು ಹಗುರವಾಯಿತು. ಊಟ ಮುಗಿಸಿಕೊಂಡು, ನಾನು ಪಡಸಾಲೆಯಲ್ಲಿ ಮಂಚದಮೇಲೆ ಮಲಗಿಕೊಂಡೆ. ಅನಂತರ ನನ್ನ ಮಾವನ ಮಗಳೂ ಎದ್ದು ಹೋಗಿ ಊಟ ಮುಗಿಸಿದಳು. ಕುಶಲಮ್ಮ ಅವಳಿಗೂ ಸಹ ಮೊಸರು ಹಾಕಿದಳು. ನನ್ನ ತಂಗಿಗೆ ಮಜ್ಜಿಗೆ ಹಾಕಿದಳು. ಎಲ್ಲರ ಊಟವಾದ ಮೇಲೆ ಅಡುಗೆ ಮನೆಯನ್ನು ತೊಳೆದು, ಸಾರಿಸಿ, ಶುಚಿಗೊಳಿಸಿ ಮಲಗಿಕೊಂಡರು. ಕುಶಲಮ್ಮ ನನ್ನ ಹತ್ತಿರ ಬಂದು, ನನ್ನ ಕೈಗೆ ಏನನ್ನೋ ಹಾಕಿದಳು. ಅದೇನು? ಎಂದೆ. ಆಕೆ, 'ಅತ್ತಿರಸ ಮಗೂ! ಸ್ವಲ್ಪ ಕುರುಕು' ಎಂದಳು. ನಾನು, 'ಗಾಯ ಕೀವೇರೋಲ್ಲವೇ?' ಎಂದು ಕೇಳಿದೆ. 'ಅತ್ತಿರಸದಲ್ಲೇನಿದೆ? ಕೀಯೋಲ್ಲ' ಎಂದಳು. ಆಗ ನಾನು, 'ಅಜ್ಜೀ ! ನನ್ನ ಮಾವನ ಮಗ ಓದಲು ಹೋದ ಮೇಲಿಂದ ನನಗೆ ಚುಟ್ಟಾ ಸುತ್ತಿಕೊಡೋರೇ ಇಲ್ಲದಂತಾಯಿತು. ಮೊನ್ನೆ ಮದುವೆಯ ಕಾಲದಿಂದಲೂ ಚುಟ್ಟಾ ಸೇದಿದ ಕೂಡಲೇ ಅಡಿಕೆ ಹಾಕಿಕೊಳ್ಳುವುದೂ ಅಭ್ಯಾಸವಾಗಿಬಿಟ್ಟಿದೆ. ನೀನೋ ಚುಟ್ಟಾನೂ ಸುತ್ತಿಕೊಡಲ್ಲ, ಒಂದಿಷ್ಟು ಅಡಿಕೆಯನ್ನೂ ಕೊಡಲ್ಲ. ಹೋಗಜ್ಜೀ, ನಿನ್ನ ಅತ್ತಿರಸ ಬೇಡ, ಏನೂ ಬೇಡಾ' ಎಂದೆ. ಅಜ್ಜಿ ಲಾಲನೆಯಿಂದ, 'ನನ್ನ ಹತ್ತಿರ ಅಡಿಕೆ ಎಲ್ಲಿಂದ ಬರ್ಬೇಕು ಮಗಾ! ನೀನು ನನ್ ದೇವ್ರ ಕಣಪ್ಪಾ ! ಎಲ್ಲಿ, ಇದೊಂದಿಷ್ಟು ಬಾಯಲ್ಲಿ ಹಾಕ್ಕೊಳ್ಳಪ್ಪಾ!' ಎಂದು ನುಡಿದು, ಅತ್ತಿರಸವನ್ನು ನನ್ನ ಬಾಯೊಳಗಿಟ್ಟಳು. ಅದನ್ನು ತಿಂದು ಒಂದಿಷ್ಟು ನೀರು ಕುಡಿದು ಮಲಗಿಕೊಂಡೆ.

ರಾತ್ರಿ ಒಂದು ಹೊತ್ತಿನಲ್ಲಿ ಯಾರೋ ನನ್ನನ್ನು ತಟ್ಟಿದಂತಾಯಿತು. ನನಗೆ ಕೂಡಲೇ ಎಚ್ಚರವಾಯಿತು. 'ಯಾರು?' ಎಂದೆ. ನನ್ನ ಮಾವನ ಮಗಳು 'ಮಾವಯ್ಯಾ ನಾನು' ಎಂದು ನುಡಿದು, 'ಇಗೋ ಅಡಿಕೆ ಬೇಕೆಂದೆಯಲ್ಲಾ ! ನನ್ನ ಪೆಟ್ಟಿಗೆಯ ಅಡಿಯಲ್ಲಿ ಅಡಿಕೆ ಹಾಗೂ ಲವಂಗಗಳಿದ್ದುವು, ಹುಡುಕಿ ತಂದೆ' ಎಂದಳು. 'ಈಗಾ ನನಗೆ ಬೇಕಾಗಿದ್ದು!' ಎಂದೆ.

'ನನಗೆ ಅಷ್ಟು ಹೊತ್ತಿನಿಂದ ನಿದ್ರೆಯೇ ಬರಲಿಲ್ಲ. ಈಗ ಎದ್ದು ಹುಡುಕಿದೆ. ನೀನು ಮಲಗಿದ್ರೂ ಎಚ್ಚರಗೊಳಿಸಿ ಕೊಡೋಣ ಅಂತ ಬಂದೆ' ಎಂದಳು. ಸರಿ ಎಂದು ಈಸಿಕೊಂಡೆ. ಬಾಯಿಗೆ ಹಾಕಿಕೊಂಡು ಮತ್ತೆ ಮಲಗಿಕೊಂಡೆ. ಅವಳು ಹೊರಟುಹೋಗಲಿಲ್ಲ. 'ಹೋಗಿ ಮಲಕ್ಕೋ' ಎಂದೆ. ಅವಳು ಅಲ್ಲಿಯೇ ನಿಂತುಕೊಂಡಿದ್ದು ಅಳುವುದಕ್ಕೆ ಪ್ರಾರಂಭಿಸಿದಳು! 'ಏಕೆ ಅಳುತ್ತೀಯಲ್ಲಾ?' ಎಂದು ಕೇಳಿದೆ. ಅವಳು ಸ್ವಲ್ಪ ಹೊತ್ತು ಅತ್ತು. 'ಮಾವಯ್ಯ ! ನಾನು ತಪ್ಪು ಮಾಡಿದೆ. ನಿನ್ನಂಥ ಒಳ್ಳೆಯವನನ್ನು ಮದುವೆಮಾಡಿಕೊಳ್ಳುವ ಅದೃಷ್ಟ ನನಗಿಲ್ಲ. ಕೆಲವು ದಿನ ನಾನು ಹಟಮಾರಿಯಂತಿದ್ದೆ. ಮತ್ತೆ ಕೆಲವು ದಿನಗಳಿಗೆ ನಿನ್ನ ಒಳ್ಳೆಯತನ ನನಗೆ ಅರ್ಥವಾಯಿತು. ನಿನ್ನನ್ನು ಮದುವೆಯಾಗದಿದ್ದುದೇ ನಾನು ಪಾಪ ಮಾಡಿದಂತಾಯಿತೇ ಹೊರತು ಮತ್ತೊಂದಲ್ಲವೆಂದು ನನಗೆ ಗೊತ್ತಿದೆ. ಆದರೂ ನಾನೀಗ ನಿನ್ನನ್ನು ಮದುವೆಯಾಗಲಾರೆ! ನಾನು ನಿನ್ನನ್ನು ಮದುವೆ ಮಾಡಿಕೊಳ್ಳುವ 'ಬರೆಹ'ವಿದ್ದಿದ್ದರೆ ನೀನು ನನ್ನನ್ನು ಗುಂಟೂರಿಗೆ ಕಳಿಸುತ್ತಿರಲಿಲ್ಲ. ಗುಂಟೂರಿನಲ್ಲಿ ನಾವು ಒಂದು ವರ್ಷವಿದ್ದರೂ ನೀನು ಒಮ್ಮೆಯಾದರೂ ಬರಲಿಲ್ಲ. ಆ ದಿನ ರಾತ್ರಿ ನೀನು ನನ್ನನ್ನಪ್ಪಿಕೊಂಡು, ಆ ಮರುದಿನ ಬೆಳಿಗ್ಗೆಯೇ ಹೊರಟು ಬಂದೆ. ನೀನಲ್ಲಿ ಕೆಲವು ಕಾಲ ಇರುತ್ತೀಯೆಂದೇ ಅಂದುಕೊಂಡಿದ್ದೆ. ನಾನೀಗ ನಿನಗೆ ತಕ್ಕವಳಲ್ಲ. ಅತ್ತಿಗೆಗೂ, ಕುಶಲಮ್ಮನಿಗೂ, ಅತ್ತೆಗೂ ನನ್ನ ಮೇಲೆ ಕೋಪವಿದೆ ಎಂದು ನಾನು ಬಲ್ಲೆ ನೀನು ನಮಗೆಲ್ಲಾ ಮಾಡಿದ ಉಪಕಾರಕ್ಕೆ ನಾನು ನಿನಗೆ ಅಪಕಾರವನ್ನೇ ಮಾಡಿದೆ, ಮಾಡುತ್ತೇನೆ! ಮಾಡದೆ ಸುಮ್ಮನಿರುವುದಕ್ಕೂ ಬಾರದು ! ನನಗೆ ಅತ್ತಿಗೆಯ ಮೇಲೂ, ಕುಶಲಮ್ಮನ ಮೇಲೂ ಕೋಪ ಬಂದಾಗ್ಯೂ ತಪ್ಪೆಲ್ಲಾ ನನ್ನದೇ ಎಂಬುದು ನನಗೆ ಗೊತ್ತಿದೆ, ಮಾವಯ್ಯಾ ನೀನು ದೇವರಂಥವನು. ನೀನಲ್ಲದೆ ಮತ್ತೊಬ್ಬರಾಗಿದ್ದರೆ ಏನಾಗುತ್ತಿತ್ತೊ ಹೇಳಲಾರೆ. ನನ್ನನ್ನು ಕ್ಷಮಿಸು. ನಾನು ನಿನ್ನ ಹೆಂಡತಿಯಾಗುತ್ತೇನೆ ಎಂದು ಬಗೆಯಬೇಡ. ಅದೇಕೆ ನಾನು ಹೀಗೆನ್ನುತ್ತಿರುವೆನೋ ನಿನಗೆ ಆಮೇಲೆ ಗೊತ್ತಾಗುತ್ತದೆ !" ಎಂದು ಹೇಳಿ, ನನ್ನ ಕಾಲು ಹಿಡಿದುಕೊಂಡು ಅತ್ತುಬಿಟ್ಟಳು. ಅಷ್ಟರಲ್ಲಿ ಕುಶಲಮ್ಮನೋ, ನನ್ನ ತಂಗಿಯೋ ನಿದ್ರೆಯಿಂದ ಎಚ್ಚರಗೊಂಡಂತೆ ತೋಚಿ ಬರುತ್ತಲೇ ಅವಳು ಅಲ್ಲಿಂದ ಎದ್ದು ತನ್ನ ಕೋಣೆಗೆ ಹೊರಟುಹೋಗಿಬಿಟ್ಟಳು.

## ೧೮

ಮರುದಿನಕ್ಕೆಲ್ಲಾ ನನ್ನ ಪಕ್ಕೆಯ ನೋವು ಕಡಮೆಯಾಯಿತು. ನನ್ನ ಮಾವನ ಮಗಳ ಬೆರಳಿನ ಬಾವು ಕೂಡಾ ಬಹುಭಾಗ ಇಳಿದುಹೋಯಿತು. ಆ ದಿನವೇ ಗಾಡಿ ಕಟ್ಟಿಸಿ ಎಲ್ಲರನ್ನೂ ಹೊರಡಿಸಿದೆ. ನನ್ನ ಎರಡನೆಯ ತಮ್ಮನನ್ನೂ ಓದುವುದಕ್ಕೆಂದು ಕರೆದುಕೊಂಡು ಹೊರಟೆ. ನನ್ನ ಮಾವನ ಮಗಳು, 'ಮಾವಯ್ಯ ನಿನಗೆ ಸುಧಾರಿಸಿದ ಮೇಲೆ ಹೋದರಾಯಿತು' ಎಂದಳು. ನಾನು ಅವಳ ಮಾತನ್ನೇ ಕಿವಿಗೆ ಹಾಕಿಕೊಳ್ಳಲಿಲ್ಲ. ಪಯಣವಾದೆವು. ನನ್ನ ಚಿಕ್ಕಮ್ಮನ ಊರು ತಲುಪಿದೆವು. ನನ್ನ ತಂಗಿಯನ್ನು ಅವರು ತಮ್ಮ ಮನೆಯಲ್ಲಿ ಬಿಟ್ಟು ಹೋಗೆಂದರು.

'ಮದುವೆಯಾಗಿ ಇನ್ನೂ ತಿಂಗಳಾದರೂ ಆಗಿಲ್ಲ. ಆಗಲೇ ನಿಮ್ಮ ಮನೆಯಲ್ಲಿ ಬಿಡುವುದು ಅಷ್ಟು ಚೆನ್ನಾಗಿ ಕಾಣೋಲ್ಲ' ಎಂದೆ. ನನ್ನ ಚಿಕ್ಕಮ್ಮ, 'ಮಗೂ, ನಮ್ಮ ನಮ್ಮಲ್ಲಿ ಚೆನ್ನಾಗಿ ಕಾಣೋದೇನು, ಬಿಡೋದೇನು?' ಎಂದು ತಿಳಿಸಿ, ತನ್ನ ಸೊಸೆಯನ್ನು ಉಳಿಸಿಕೊಂಡಳು.

ನಾವೆಲ್ಲರೂ ಗುಂಟೂರು ಸೇರಿಕೊಂಡೆವು. ನನ್ನ ಮಾವನ ಮಗಳು ಸ್ಕೂಲಿಗೆ ಸೇರಿದಳು. ನನ್ನ ಚಿಕ್ಕ ತಮ್ಮನನ್ನು ಸೆಕೆಂಡ್ ಫಾರಂನಲ್ಲಿ ಸೇರಿಸಿದೆ. ಆ ಸಾಯಂಕಾಲವೇ ನಾನು ಗಾಡಿ ಹಿಂತಿರುಗಿಸಿಕೊಂಡು ಊರಿಗೆ ಬಂದು ಬಿಟ್ಟೆ ಈ ಎರಡು ಮೂರು ದಿನಗಳೂ ನಾನು ನನ್ನ ಮಾವನ ಮಗಳೊಂದಿಗೆ ಮಾತನಾಡಲಿಲ್ಲ. ಆದರೆ ಅಜ್ಜಿಯೊಂದಿಗೆ, ಜೋಪಾನವಾಗಿ ಹುಡುಗರನ್ನು ನೋಡಿಕೋ ಎಂದು ತಿಳಿಸಿ ಬಂದೆ. ನನ್ನ ಮಾವನ ಮಗನೊಂದಿಗೆ 'ನೀನೇನೂ ಅವನಿಗೆ ಭಯಪಡಬೇಕಾದ್ದಿಲ್ಲ. ಅವನೇನಾದರೂ ನಿನ್ನ ಮೇಲೆ ಕೈಮಾಡಲು ಬಂದರೆ ನನಗೊಂದು ಪತ್ರ ಬರೆದುಬಿಡು. ನಿನಗಿಷ್ಟವಿಲ್ಲದ ಯಾವುದೇ ಕೆಲಸವನ್ನು ಅವನೇನಾದರೂ ಮಾಡಿದರೆ ನೀನು ತೆಪ್ಪಗಿದ್ದು ಬಿಡಬೇಡ. ನಿನ್ನನ್ನೇನಾದರೂ ಅವನು 'ನಿನಗೇನು ಅಧಿಕಾರ?' ಹಾಗೆ ಹೀಗೆಂದು ಬೊಗಳಿದರೆ, ನೀನು 'ಹೌದು ! ನನ್ನದೇ ಅಧಿಕಾರ. ಹಾಗಂತ ಭಾವಯ್ಯನೇ ಹೇಳಿದಾನೆ' ಅಂತ ಹೇಳು' ಎಂದು ಕಟ್ಟುಪಾಡು ಮಾಡಿ ಬಂದೆ, ತಿಂಗಳಿಗೊಮ್ಮೆ ಗುಂಟೂರಿಗೆ ಹೋಗಿ ಅವರನ್ನೆಲ್ಲಾ ನೋಡಿಕೊಂಡು ಬರಬೇಕೆಂದು ನಿರ್ಧರಿಸಿಕೊಂಡೆ. ಗುಂಟೂರಿನಿಂದ ಹಿಂತಿರುಗಿ ಬರುತ್ತಾ, ನನ್ನ ಚಿಕ್ಕಮ್ಮನ ಊರಿನಲ್ಲಿ ಮತ್ತೊಮ್ಮೆ ಇಳಿದೆ. 'ಊರಿಗೆ ಹೋಗಿ ಏನು ಮಾಡ್ತೀಯೆ? ನೀನು ಕೈ ಬಾಯಿ ಸುಟ್ಟುಕೋಬೇಕಾಗುತ್ತದಲ್ಲಾ' ಎಂದು ಹೇಳಿ, ನನ್ನನ್ನು ಅವರೆಲ್ಲರೂ ನಾಲ್ಕಾರು ದಿನ ತಮ್ಮಲ್ಲಿಯೇ ಉಳಿಸಿಕೊಂಡರು. ಒಂದು ದಿನ ನನ್ನ ಚಿಕ್ಕಮ್ಮನ ಮಗ, ತಮ್ಮ ತಾಯಿಯೊಂದಿಗೆ, 'ಅಮ್ಮಾ ! ಭಾವಯ್ಯನೇ ಅಡುಗೆ ಮಾಡಿಕೊಳ್ಳಬೇಕಾಗುತ್ತಲ್ಲಾ. ನೀನು ಹೋಗಿ ಈ ಒಂದು ಹತ್ತು ತಿಂಗಳೂ ಅಲ್ಲೇ ಇರಬಾರದೇಕೆ?' ಎಂದ. ನನ್ನ ತಂಗಿ, 'ನಾನೇ ಹೋಗಿ ಇರ್ತೇನೆ' ಎಂದಳು. ನನ್ನ ಚಿಕ್ಕಮ್ಮ ಮನಸ್ಸಿನಲ್ಲಿ ಏನೆಂದು ಕೊಂಡಳೋ ಏನೋ, ಮಗನಿಗೂ ಸೊಸೆಗೂ ಈ ಅಗಲಿಕೆ ಏಕೆ? ಎಂದು ಕೊಂಡಂತೆ ಕಾಣುತ್ತದೆ. ಆದುದರಿಂದ, 'ಇಲ್ಲ ಇಲ್ಲ. ನಾನೇ ಹೋಗಿರ್ತೇನೆ' ಎಂದು ತಿಳಿಸಿದಳು. ನಾವಿಬ್ಬರೂ ಪಯಣವಾಗಿ ಬರುತ್ತಿದ್ದರೆ ಆ ನವದಂಪತಿಗಳು ಪಟ್ಟ ಆನಂದ ಅಷ್ಟಿಷ್ಟಲ್ಲ ! ನಾನು ಮನಸ್ಸಿನೊಳಗೆ–ನನ್ನ ಸಾಕು ತಂದೆಯ ಋಣ ಪೂರ್ತಿಯಾಗಿ ತೀರಿದಂತೆ ಭಾವಿಸಿದೆ ! ನನ್ನ ಸಾಕುತಂದೆಗೆ ನನ್ನ ತಂಗಿಯ ಮೇಲೆ ತುಂಬಾ ಪ್ರೀತಿಯಿತ್ತು. ಅವಳು ಹುಚ್ಚಿ ಎಂತಲೂ, ಅವಳ ಬಾಳುವೆ ಹೇಗೆ ಬೆಳಗುತ್ತೋ ಏನೋ ಎಂದು ಚಿಂತೆಯಿಂದ ಆತ ಆಗಾಗ ನುಡಿಯುತ್ತಿದ್ದುದನ್ನು ನಾನು ಸ್ವತಃ ನನ್ನ ಕಿವಿಯಾರೆ ಕೇಳಿದ್ದೇನೆ. ಆ ಹುಚ್ಚಿಯನ್ನು ನಾನು ಬುದ್ಧಿವಂತಳನ್ನಾಗಿ ಮಾಡಿ, ಮದುವೆ ಮಾಡಿದೆ. ಅವಳು ಸುಖದಿಂದಿದ್ದಾಳೆ. ಸುಖಪಡುತ್ತಾಳೆ. ನನ್ನ ಮನಸ್ಸಿನಲ್ಲಿ ಮಾತ್ರ ನನ್ನ ಋಣ ಪೂರ್ತಿಯಾಗಿಯೇ ತೀರಿತೆಂದು ನಿಶ್ಚಯಿಸಿಕೊಂಡೆ. ಇನ್ನು ಆತನ ಗಂಡುಮಕ್ಕಳಿಬ್ಬರನ್ನೂ ಓದಿಸುತ್ತೇನೆ. ಆಮೇಲೆ ಅವರ ದಾರಿಯಲ್ಲಿ ಅವರನ್ನು ಬಿಡುತ್ತೇನೆ. ಅವರು ತಮ್ಮ ಬದುಕನ್ನು

ತಾವೇ ನಡೆಸಿಕೊಳ್ಳುತ್ತಾರೆ. ಇನ್ನು ನನ್ನ ಸಾಕುತಂದೆ ನನಗೆ ಕಾಣಿಸಿಕೊಳ್ಳುವ ಅಗತ್ಯವಿಲ್ಲ. ಇಷ್ಟರ ಮೇಲೆ ನಾನು ಮಾತ್ರ ಏನು ಮಾಡಬಲ್ಲೆ? ಇನ್ನೂ ಮಾಡಬೇಕೆಂದರೆ ನನ್ನ ಶಕ್ತಿಗೆ ಮೀರಿದ ಕೆಲಸವಾಗುತ್ತದೆ. ನನ್ನ ಸಾಕುತಂದೆ ನನ್ನನ್ನು ಋಣಮುಕ್ತನನ್ನಾಗಿ ಮಾಡಿದನೆಂದುಕೊಂಡೆ.

ನಾವು ಊರಿಗೆ ಬಂದ ಮೇಲೆ, ನನ್ನ ಚಿಕ್ಕಮ್ಮನಲ್ಲಿ ನಾನು ಹಿಂದೆ ಎಂದೋ ಕಂಡ ಆ ತಾಯಿ ಅಕ್ಷರಶಃ ಪ್ರತ್ಯಕ್ಷವಾದಳು. ಎರಡು ಹೊತ್ತೂ ನನಗೆಂದು ಸ್ನಾನಕ್ಕೆ ಬಿಸಿನೀರು ಕಾಯಿಸುತ್ತಿದ್ದಳು. ಯಾವುದಾದರೊಂದು ಕಾಯಿಪಲ್ಯದ ಸಾಧನೆ ಇಲ್ಲದೆ ನನಗೆ ಅನ್ನ ಬಡಿಸುತ್ತಿರಲಿಲ್ಲ. ಒಂದು ತಿಂಗಳು ಕಳೆಯುವುದರೊಳಗಾಗಿ, ನನಗೆ ಯಾವ ಪದಾರ್ಥ ಇಷ್ಟವೋ, ಯಾವ ಕಾಯಿಪಲ್ಯಗಳಿಷ್ಟವೋ ಎಲ್ಲಾ ತನ್ನಷ್ಟಕ್ಕೆ ತಾನೇ ಕಂಡುಕೊಂಡಳು. ನನಗೆ ಬದನೆಕಾಯಿ ಬಜ್ಜಿಯ ತೊವೆ ಎಂದರೆ ಬಹು ಇಷ್ಟ ಹಾಗಲಕಾಯಿ ಬೇಯಿಸಿ ಮಾಡಿದ ಹುಳಿ ಎಂದರೆ ತುಂಬ ಇಷ್ಟ ಒಲೆಯ ಮೇಲೆ ಮಾಡದ ಕೈಹುಳಿ ಎಂದರೆ ಜೀವ. ಮೊಟ್ಟೆಯ ರೊಟ್ಟಿ ಎಂದರೆ ಪ್ರಾಣ. ಈ ಎಲ್ಲ ಪದಾರ್ಥಗಳು ನನಗೆ ಬಲು ಪ್ರೀತಿ ಎಂಬುದನ್ನು ಬಾಯಿ ಬಿಟ್ಟು ಕೇಳದೆಯೇ ಆ ತಾಯಿ ಮನಗಂಡಳು. ಆತನಕ ಮನೆಯಲ್ಲಿದ್ದವರು ನಾವೆಲ್ಲಾ ಕಿರಿಯರಾದ್ದರಿಂದ ಕೋಳಿಗಳನ್ನು ಸಾಕಿರಲಿಲ್ಲ. ನಮ್ಮತ್ತೆ ಬದುಕಿದ್ದಾಗ ಒಂದೆರಡು ಕೋಳಿಗಳಿದ್ದುವು. ಆಮೇಲೆ ಅವೂ ಇಲ್ಲ. ನನ್ನ ಆ ತಾಯಿ ನಮ್ಮ ಮನೆಗೆ ಬಂದ ಮೊದಲ ತಿಂಗಳಲ್ಲಿಯೇ ಎರಡು ಕೋಳಿಗಳನ್ನು ಖರೀದು ಮಾಡಿದಳು. ನಮ್ಮ ಜೀತದಾಳಿನ ಮೂಲಕ ಒಂದು ಹುಂಜವನ್ನು ತರಿಸಿದಳು. ಎರಡು ಕೋಳಿಗಳೂ, ದಿನವೂ ಮೊಟ್ಟೆ ಇಡತೊಡಗಿದುವು. ಕೆಲವು ಮೊಟ್ಟೆಗಳನ್ನು ಮರಿ ಎಬ್ಬಿಸಲು ಉಳಿಸುತ್ತಿದ್ದಳು. ನಿತ್ಯವೂ ಒಂದೊಂದು ಮೊಟ್ಟೆಯ ದೋಸೆಮಾಡಿ ಬೆಳಿಗ್ಗೆಯೇ ನನಗೆ ತಿನ್ನಲು ಕೊಡುತ್ತಿದ್ದಳು. ಹೊಲದಿಂದ ನಾನು ಯಾವಾಗ ಬರುತ್ತೇನೆ ಎಂದು ನನಗಾಗಿ ಕಾಯುತ್ತಾ ಕುಳಿತುಕೊಳ್ಳುತ್ತಿದ್ದಳು. ನಾನು ತಡವಾಗಿ ಬಂದರೆ, 'ಮಗೂ ! ಕಾಯಿಲೆ ಬಂದಾತು ! ಹೊತ್ತಿಗೆ ಸರಿಯಾಗಿ ಉಣ್ಣಬೇಕಪ್ಪಾ' ಎನ್ನುತ್ತಿದ್ದಳು. ನಾನು ಸ್ನಾನ ಮಾಡುತ್ತಿದ್ದರೆ ಬಂದು ನನ್ನ ಬೆನ್ನು ತಿಕ್ಕುತ್ತಿದ್ದಳು. ವಾರವಾರವೂ ನನಗೆ ಎಣ್ಣೆ ಮಜ್ಜನ ಮಾಡಿಸುತ್ತಿದ್ದಳು. ಮನೆಗೆ ಇಂಥದು ಬೇಕಾಗಿದೆ, ಇಂಥದಿಲ್ಲ ಎಂಬುದರ ಬಗ್ಗೆ ನಾನು ಹಚ್ಚಿಕೊಳ್ಳುವ ಅಗತ್ಯವೇ ಇಲ್ಲದಂತಾಯಿತು. ಕೋಮಟಿಗನ ಅಂಗಡಿಯಿಂದ ಏನು ಬೇಕೋ ಅದನ್ನೆಲ್ಲಾ ತಾನೇ ತಂದುಕೊಳ್ಳುತ್ತಿದ್ದಳು. ನನಗೇನೂ ಬೇರೆ ಕೆಲಸವಿಲ್ಲದಂತಾಯಿತು. ಹೊಲದಿಂದ ಬರುವುದು–ತಿಂಡಿ ತಿಂದು ಕೊಂಚ ಹೊತ್ತು ವಿಶ್ರಾಂತಿ ತೆಗೆದುಕೊಂಡು ಮತ್ತೆ ಹೊಲಕ್ಕೆ ಹೋಗಿಬಿಡುವುದು–ಅಷ್ಟೆ. ಅದೇನು ಕಥೆಯೋ ಏನೋ, ನನ್ನ ಚಿಕ್ಕಮ್ಮ ಬಂದಾಗಿನಿಂದ ನನಗಾವ ಚಿಂತೆಯೂ ಇಲ್ಲದಂತಾಯಿತು. ತಾಯಿ ಎಂದರೆ ಏನೋ ನನಗೆ ಚೆನ್ನಾಗಿ ಮನವರಿಕೆಯಾಗತೊಡಗಿತು. ಮಾತೃಪ್ರೇಮಕ್ಕೂ ಇನ್ನಿತರ ಪ್ರೇಮಗಳಿಗೂ ತುಂಬ ವ್ಯತ್ಯಾಸವಿದೆ. ಬೇರೆ ಪ್ರೇಮಗಳು ನೆರೆಯಂತೆ ಉಕ್ಕಿ ಬರುತ್ತವೆ. ಆಗ ನಾವು ಸುಖಪಡುವೆವೊ, ಬಾಧೆಪಡುವೆವೋ ಹೇಳಲಾರೆವು. ಹೆಣ್ಣಿನ ಬಗೆಗಿರುವ ಪ್ರೇಮ ಪಾಯಸ ಕುದಿದಂತಿರುಬಹುದು;

ತಾಯಿಯ ಪ್ರೇಮ ಸಿಹಿನೀರನ್ನು ಕುಡಿದಂತಿರುತ್ತದೆ. ಹೆಣ್ಣಿನ ಪ್ರೇಮ–ಶರೀರ ಅತ್ಯಂತ ತಣ್ಣಗಿರುವ ಮಂಜಿನಂತಿರುತ್ತದೆ. ತಾಕಿದರೆ ಝಲ್ಲೆನ್ನುತ್ತಿರುವಂತಿರಬಹುದು ; ಮಾತೃಪ್ರೇಮ–ಹೊಲದಲ್ಲಿ ಕಾಯ ಕಷ್ಟಪಟ್ಟು ದಣಿದಾಗ, ಬೇವಿನಮರದ ಮೇಲಿಂದ ಬೀಸಿ ಬರುವ ತಂಗಾಳಿ ನಮ್ಮ ಸರ್ವಾಂಗಗಳಿಗೂ ಸೋಂಕಿ, ಮೈಮರೆಸುವ ಸುಖದಂತಲ್ಲದೆ, ಪಟ್ಟ ಕಷ್ಟಗಳೆಲ್ಲಾ ಪರಿಹಾರವಾಗುವ ಹಾಗೆ, ಸರ್ವಧಾತುಗಳೂ ಉಪಶಾಂತಿ ಹೊಂದುವಂತೆ–ಉದ್ವೇಗರಹಿತವಾದುದು, ಸ್ವಭಾವಸಿದ್ಧವಾದುದು, ಸೌಖ್ಯವನ್ನುಂಟುಮಾಡುವಂಥದು. ಹೆಣ್ಣು ನಿನ್ನನ್ನು ಪ್ರೇಮಿಸಿದರೆ, ಪ್ರತಿಯಾಗಿ ನಿನ್ನಿಂದ ಅದೆಷ್ಟೋ ಮತ್ತೆ ಬಯಸುತ್ತಾಳೆ. ಹೆಣ್ಣಿಗೆ ನಿನ್ನ ಬುದ್ಧಿ ಕುಶಲತೆಗಳು, ನಿನ್ನ ಅಂದಚೆಂದಗಳು ಮತ್ತೆ ಇನ್ನೆಷ್ಟೋ ಬೇಕು. ಒಮ್ಮೊಮ್ಮೆ ನೀನು ಉತ್ಸಾಹದಿಂದಿದ್ದರೆ, ನೀನು ಚಾತುರ್ಯದಿಂದ ಮಾತನಾಡಿದರೆ, ಪರಿಶುಭ್ರವಾಗಿದ್ದು ಒಳ್ಳೆಯ ಉಡುಪು ಧರಿಸಿದರೆ ಅಥವಾ ನೀನು ಯಾವುದಾದರೂ ಅವಳ ಮೆಚ್ಚುಗೆ ಗಳಿಸುವ ಕೆಲಸ ಮಾಡಿದರೆ ಅವಳು ಸಂತೋಷಿಸುತ್ತಾಳೆ ; ನಿನ್ನ ಬಗ್ಗೆ ಪ್ರೇಮವನ್ನು ವ್ಯಕ್ತಪಡಿಸುತ್ತಾಳೆ. ತಾಯಿ ಹಾಗಲ್ಲ. ನೀನು ರೂಪವಿಹೀನನಾಗಿದ್ದಷ್ಟೂ ನಿನ್ನನ್ನು ಹೆಚ್ಚಾಗಿ ಪ್ರೀತಿಸುತ್ತಾಳೆ ; ನೀನು ಅಸಮರ್ಥನಾದಷ್ಟೂ ನಿನ್ನನ್ನು ಅಮಿತವಾಗಿ ಪ್ರೀತಿಸುತ್ತಾಳೆ ; ನೀನು ಅದಾವಾಗಲಾದರೂ ಮೌಢ್ಯದಿಂದ ಮಾತನಾಡಿದರೆ, 'ಅಯ್ಯೋ ಮಗೂ, ನಿನಗೆ ಸರಿಯಾಗಿ ಮಾತನಾಡಲು ಬರೋಲ್ಲವಲ್ಲಪ್ಪಾ? ಹೇಗೆ ಬದುಕುತ್ತೀಯೋ ಏನೋ....' ಎಂದು ಅಪೇಕ್ಷೆಯನ್ನೆಲ್ಲಾ ಸುರಿಸುತ್ತಾಳೆ.

ನನಗೀ ಅನುಭವವೆಲ್ಲಾ ನನ್ನ ಚಿಕ್ಕಮ್ಮನ ಮೂಲಕ ಉಂಟಾಗುತ್ತಿತ್ತು. ಯಾರೊಂದಿಗಾದರೂ ಮಾತನಾಡುತ್ತಾ, ಅವರು ನನ್ನನ್ನು ಕುರಿತು, 'ತುಂಬ ಬುದ್ಧಿವಂತ ಕಣಮ್ಮ. ಸಂಸಾರವನ್ನು ಚೊಕ್ಕಗೊಳಿಸಿದ. ಸಂಸಾರವನ್ನು ನೆಲೆಗೊಳಿಸಿದ' ಎಂದು ನುಡಿದರೆ–ಆಗ ನನ್ನ ಚಿಕ್ಕಮ್ಮ 'ಅವನು ಕೇವಲ ಹುಚ್ಚ ಕಣ್ರಮ್ಮಾ. ಅವನಿಗೇನು ಗೊತ್ತಿದೆ? ಬರೀ ಹುಚ್ಚು ಕಂದ' ಎನ್ನುತ್ತಿದ್ದಳು. ಅವರು ಹೊರಟುಹೋದ ಮೇಲೆ, ನನಗಿಷ್ಟು 'ಉಪ್ಪು ದಿಷ್ಟಿ' ತೆಗೆದು ಒಲೆಗೆ ಹಾಕುತ್ತಿದ್ದಳು. 'ಅಮ್ಮಾ, ನಿನಗೆಲ್ಲೋ ಹುಚ್ಚು' ಎಂದು ನಾನಂದರೆ 'ನಿಂಗೊತ್ತಿಲ್ಲ ಕಣೋ ಮಗೂ. ಯಾರ ಕಣ್ಣು ಎಂಥವೋ ಏನೋ ! ನೀನು ಚೆನ್ನದಂಥಾ ಮನುಷ್ಯ ಅಂತ ಕೆಲವರು ಕಣ್ಣಲ್ಲಿ ಕೆಂಡ ಕಾರ್ತಾರೆ' ಎಂದು ನುಡಿಯುತ್ತಿದ್ದಳು. ಆ ತಾಯಿಗೆ ನನ್ನ ತಲೆ ಒಂದಿಷ್ಟೂ ಮಾಸಕೂಡದು. ನನ್ನನ್ನು ಯಾವಾಗಲೂ 'ಈ ನೀರ್ಕಾವೀ ಬಟ್ಟೆಗಳೆಂಥದೋ ನಿನಗೆ ? ಚಲುವೆ ಬಟ್ಟೆಗಳನ್ನು ಉಡಬಾರದೇ?' ಎಂದು ದುಂಬಾಲು ಬೀಳುತ್ತಿದ್ದಳು. ನಾನು ಉಡುವ ಬಟ್ಟೆಗಳು ಹಳ್ಳಿಯವರು ಉಡುವ ಬಟ್ಟೆಗಳಂತಿದ್ದುವು. 'ಮಗೂ, ನಿನಗೆ ಇಪ್ಪತ್ತು ವರ್ಷಗಳಾಗಿವೆ. ಒಳ್ಳೇ ಪ್ರಾಯದವನು. ನಿನ್ನ ತಮ್ಮ ತೊಟ್ಟುಕೊಳ್ಳುವಂಥ ಬಟ್ಟೆಗಳನ್ನು ತೊಡಬಾರದೇ ? ಅಂಥ ಬಟ್ಟೆಗಳನ್ನು ನೀನೇನಾದರೂ ತೊಟ್ಟುಕೊಂಡರೆ ನೀನು ಅದೆಷ್ಟು ಸುಂದರವಾಗಿರ್ತೀ ಅಂತ!' ಎಂದು ಕಾಡತೊಡಗಿದ್ದಳು. ನಾನು ಆ ತಾಯಿಯ ಬಲವಂತ ನೋಡಲಾರದೆ, 'ಹಾಗೆಯೇ ಆಗಲಮ್ಮಾ. ಈ ಸಲ ಗುಂಟೂರಿಗೆ ಹೋದಾಗ

ಹೊಲಿಸಿಕೊಂಡು ಬರ್ತೀನಂತೆ' ಎಂದೆ. 'ಅಗಸರವನು ನಿನ್ನ ಬಟ್ಟೆಗಳಿಗೆ ಕೆಂಪು ನೀರು ಹಿಡಿಸ್ತಾ ಇದಾನೆ. ಈ ಸಲ ನೀನು ತೆಳ್ಳಗಿನ ಮಲ್ಲುಪಂಚೆಗಳನ್ನು ತಂದುಕೋ. ದಿನವೂ ನಿನ್ನ ಬಟ್ಟೆಗಳಿಗೆ ಸವಳು, ಸುಣ್ಣ ಹಿಡಿಸಿ, ಮಡಿಮಾಡಿ ತರಬೇಕು ಅಂತ ಕಟ್ಟುಪಾಡು ಮಾಡ್ತೇನೆ. ಹಾಗೇ ಹೆಗಲ ಮೇಲೆ ಹಾಕ್ಕೊಳ್ಳೋಕೆ ಒಳ್ಳೇ ಶಾಲುಗಳನ್ನು ತಂದುಕೋ. ಗಡದ್ದಾಗಿ ಓದಿಕೊಂಡಿದೀಯೆ. ನಿನ್ನ ಬುದ್ಧಿ, ಇನ್ನೊಬ್ಬನಿಗೆ ಸಾವಿರ ಸಲ ಪುಟವಿಟ್ಟರೂ ಬರುವಹಾಗಿಲ್ಲ. ಒಳ್ಳೆ ಚಂದದ ಬಟ್ಟೆಗಳನ್ನು ಉಟ್ಟು ದೊರೆ ಮಗನಂತಿರದೆ ಇದೇನಿದು ಭಿಕಾರಿಯಂತಿರ್ತೀಯಲ್ಲಾ?' ಎಂದು ವಾದಿಸುತ್ತಿದ್ದಳು.

ಆಮೇಲೆ ನನಗೆ ಎರಡು ತಿಂಗಳತನಕ ಗುಂಟೂರಿಗೆ ಹೋಗುವು ದಕ್ಕಾಗಲಿಲ್ಲ. ನನ್ನ ಚಿಕ್ಕಮ್ಮ ನಿತ್ಯವೂ, ಗುಂಟೂರಿಗೆ ಹೋಗಿ ಒಮ್ಮೆ ಹುಡುಗರನ್ನು ನೋಡಿಕೊಂಡು ಬಾ ಎನ್ನತೊಡಗಿದ್ದಳು. ಆಕೆಯ ಉದ್ದೇಶ – ನಾನು ಗುಂಟೂರಿಗೆ ಹೋದರೆ ಹುಡುಗರನ್ನು ನೋಡಿ ಬರುವ ವಿಷಯ ಹೇಗೇ ಇದ್ದರೂ, ಒಳ್ಳೆ ಬಟ್ಟೆಗಳನ್ನು ಹೊಲಿಸಿಕೊಂಡು ಬರುತ್ತೇನೆಂದು. ಗುಂಟೂರಿಗೆ ಹೋಗಬೇಕೆಂದಾಗಲೆಲ್ಲಾ ಯಾವುದೋ ಕೆಲಸ ತಗುಲುತ್ತಿತ್ತು, ಗುಂಟೂರಿನ ಪ್ರಯಾಣ ನಿಂತುಬಿಡುತ್ತಿತ್ತು. ಹೀಗೆ ನಡೆಯುತ್ತಾ ಬಂದಿತ್ತು. ಹೀಗಿರುವಾಗ ನಾನು ಯಾವುದೋ ಒಂದು ಮೊಕದ್ದಮೆಯಲ್ಲಿ ಸಾಕ್ಷಿ ಹೇಳಲು ನರಸರಾವ್ ಪೇಟೆಗೆ ಹೋಗಬೇಕಾಗಿ ಬಂದಿತು. ಆ ಊರಿಗೆ ಹೋದಾಗ ಹೇಗೂ ನನ್ನ ಚಿಕ್ಕಮ್ಮ ಸುಮ್ಮನೆ ಹೊಸ ಬಟ್ಟೆಗಳು, ಹೊಸ ಬಟ್ಟೆಗಳು ಅಂತ ಪಟ್ಟುಹಿಡಿದಿದ್ದಾಳಲ್ಲಾ ಎಂದು ನಾನು, ತೆಳ್ಳನೆಯ ಪಂಚೆಗಳು ಎರಡು ಜತೆ, ನಾಲ್ಕು ಒಳ್ಳೇ ಅಂಗಿಗಳನ್ನು, ಎರಡು ಜರಿಯಂಚಿನ ಉತ್ತರೀಯಗಳನ್ನು ಕೊಂಡುಕೊಂಡೆ. ನನ್ನ ಚಿಕ್ಕಮ್ಮನಿಗೂ ತೆಳ್ಳನೆಯ ನಾಜೂಕಿನ ಎರಡು ಬಿಳಿಯ ಸೀರೆಗಳನ್ನು ಕೊಂಡುಕೊಂಡೆ. ಆಕೆ ನನ್ನ ಎರಡು ಪಂಚೆಗಳನ್ನೂ, ಒಂದು ಉತ್ತರೀಯವನ್ನೂ, ಎರಡು ಅಂಗಿಗಳನ್ನೂ ಪೆಟ್ಟಿಗೆಯಲ್ಲಿ ಭದ್ರವಾಗಿಟ್ಟಳು. 'ನೀನು ಯಾವಾಗಲಾದರೂ ಪಟ್ಟಣಕ್ಕೆ ಹೋಗುವಾಗ ಇವನ್ನುಟ್ಟುಕೊಂಡು ಹೋಗುವಿಯಂತೆ. ಈಗ ಉಳಿದವುಗಳನ್ನು ನಿತ್ಯ ತೊಟ್ಟುಕೊಳ್ಳಲು ಬಳಸು' ಎಂದು ತಿಳಿಸಿದಳು. ನನ್ನ ಆ ನಾಲ್ಕು ಅಂಗಿಗಳನ್ನು ಆ ಸಾಬಿ ಚೆನ್ನಾಗಿ ಹೊಲಿದಿದ್ದ. ಅವನು ಬಟ್ಟೆಗಳನ್ನು ಹೊಲಿಯುವುದರಲ್ಲಿ ಹೇಮಾಹೇಮಿಯಂತೆ. ನಾಲ್ಕು ಅಂಗಿಗಳನ್ನು ಹೊಲಿಯಲು ಎರಡು ರೂಪಾಯಿ ಕೂಲಿ ತೆಗೆದುಕೊಂಡ. ಕೈಗಳಿಗೆ 'ಕಫ್ಸ್', ಕತ್ತಿನ ಪಟ್ಟಿಗೆ ಎರಡು 'ಹೋತಿನ ಮೊಲೆ' (ಕಾಲರ್)ಗಳನ್ನು, ಒಳಗಡೆ 'ಡಕ್ಸ್' ಹಾಕಿ, ಇಸ್ತ್ರಿ ಮಾಡಿಕೊಟ್ಟ. 'ಹಳ್ಳಿಗನಾದ ನನಗೇಕಯ್ಯಾ ಈ ಷೋಕಿ ಫ್ಯಾಷನ್ ಎಲ್ಲ!' ಎಂದೆ. ಅದಕ್ಕೆ ಅವನು 'ಒಳ್ಳೆ ಎತ್ತರದ ಮಟ್ಟಸವಾದ ಆಳು. ಒಳ್ಳೆ ಅಗಲವಾದ ಛಾತಿ. ಆಜಾನುಬಾಹು. ನೀವು ಈ ಷರ್ಟ್ ತೊಟ್ಟುಕೊಂಡು ಇನ್ನೊಮ್ಮೆ ಈ ಊರಿಗೆ ಬನ್ನಿ. ಜನವೆಲ್ಲಾ ನಿಮ್ಮ ಕಡೆಗೇ ನೋಡ್ತಾರೆ' ಎಂದ. ನಾನು ನಕ್ಕೆ.

ಮತ್ತೆ ಮೂರು ತಿಂಗಳಾದರೂ ನನ್ನ ಚಿಕ್ಕಮ್ಮ ಗುಂಟೂರಿನ ಸಂಗತಿಯನ್ನೇ ಎತ್ತಲಿಲ್ಲ. ಅಲ್ಲದೆ ನನಗೆ ಹೋಗಲೂ ಆಗಲಿಲ್ಲ. ಆ ವರ್ಷ ಹೊಗೆ ಸೊಪ್ಪನ್ನು ಹೆಚ್ಚಾಗಿ ಬೆಳೆಸಿದ್ದೆ.

ಸಾವಿರ, ಸಾವಿರದ ಐನೂರು ರೂಪಾಯಿಗಳನ್ನು ಸಾಲ ಮಾಡಿದ್ದೆ ಸಾಲವನ್ನೆಲ್ಲಾ ತೀರಿಸಬೇಕೆಂಬ ಧ್ಯಾನವೇ ಮೂರು ಹೊತ್ತೂ. ಮಾರುಕಟ್ಟೆಗೆಂದು ಧಾನ್ಯಾದಿಗಳನ್ನು ಸಂಗ್ರಹಿಸಿದ್ದೆ. ಇವನ್ನೆಲ್ಲಾ ಬಿಟ್ಟುಕೊಟ್ಟು ಹೋಗಲು ಅನುವು ದೊರೆಯಲಿಲ್ಲ. ಈ ಐದಾರು ತಿಂಗಳುಗಳಿಂದಲೂ– ಈ ಎಲ್ಲ ಕಾರ್ಯಭಾರಗಳಿಂದಲಾದರೇನು ; ನನ್ನ ಚಿಕ್ಕಮ್ಮ ನನ್ನ ಮೇಲೆ ತೋರಿಸುತ್ತಿದ್ದ ಮಮತೆಯ ದೆಸೆಯಿಂದಲಾದರೇನು–ನಾನು ಹುಡುಗರನ್ನೇ ಜ್ಞಾಪಿಸಿಕೊಳ್ಳಲಿಲ್ಲ. ನನ್ನ ಮಾವನ ಮಗಳ ನೆನಪು ಒಂದೆರಡು ಸಲ ಉಂಟಾಯಿತಾದರೂ, ನಾನು ಅವಳನ್ನು ಕುರಿತು ಹೆಚ್ಚಾಗಿ ಆಲೋಚಿಸಲಿಲ್ಲ. ಅಷ್ಟರಲ್ಲಿ ಡಿಸೆಂಬರ್ ರಜೆಗಳು ಕೊಟ್ಟರಂತೆ. ನನ್ನ ಮಾವನ ಮಗ ಹಾಗೆಂದು ಪತ್ರ ಬರೆದ. ಅದರಲ್ಲಿ ಹೆಚ್ಚಿಗೆ ಏನೂ ಇಲ್ಲ. 'ನೀನು ಈ ಪತ್ರವನ್ನು ಕಂಡಹೂಡಲೇ ಹೊರಟು ಬರತಕ್ಕದ್ದು. ನೀನು ಬಾರದೇ ಹೋದರೆ ನಾನೇ ಬಂದುಬಿಡುತ್ತೇನೆ. ನನಗೆ ಓದು ಅನಗತ್ಯ. ನೀನಿಲ್ಲಿಗೆ ಬಂದರೆ ಎಲ್ಲಾ ಸಂಗತಿಗಳನ್ನು ತಿಳಿಸುತ್ತೇನೆ' ಎಂದಿಷ್ಟು ಮಾತ್ರವೇ ಇತ್ತು. ಅವರಿಬ್ಬರೂ ಪುನಃ ಹೊಡೆದಾಡಿಕೊಂಡಿದ್ದಾರೆಂದುಕೊಂಡೆ. ಆ ಸಾಯಂಕಾಲವೇ ಗುಂಟೂರಿಗೆ ಪಯಣವಾದೆ. ಮರುದಿನ ಹೊತ್ತು ಮುಳುಗುವಷ್ಟರೊಳಗೆ ಗುಂಟೂರು ತಲುಪಿದೆ. ನನ್ನ ತಮ್ಮ ಹಾಗೂ ನನ್ನ ಮಾವನ ಮಗಳು ಮನೆಯಲ್ಲಿರಲಿಲ್ಲ. ನನ್ನ ಮಾವನ ಮಗನೊಬ್ಬನು ಮಾತ್ರವೇ ಕೋಪದಿಂದ ಕುಳಿತುಕೊಂಡಿದ್ದ. ಕುಶಲಮ್ಮ ಪಚ್ಚಡಿ ಮಾಡುತ್ತಿದ್ದರೆ ಆಕೆಯ ಪಕ್ಕದಲ್ಲಿ ಕುಳಿತು ಪಚ್ಚಡಿ ಹಾಕಿಸಿಕೊಂಡು ತಿನ್ನುತ್ತಿದ್ದ. ನಾನು ಒಳಗೆ ಹೋಗಿ 'ಏನು, ಪತ್ರ ಆ ರೀತಿ ಬರೆದಿದ್ದೀಯಲ್ಲಾ? ಅವರಿಬ್ರೂ ಎಲ್ಲಿ ?' ಎಂದು ಕೇಳಿದೆ. 'ಅವರಿಬ್ರೂ ವಾಕಿಂಗ್ ಹೋಗಿದ್ದಾರೆ. ನಾನು ಬೇಡಬೇಡವೆಂದರೂ ಕೇಳದೆ ಹೋಗಿದ್ದಾರೆ. 'ನೀವೇನಾದ್ರೂ ಈವೊತ್ತು ಹೋದಿರಿ ಅಂದ್ರೆ ನೋಡ್ಕೊಳ್ಳಿ, ಭಾವಯ್ಯನಿಗೆ ತಿಳಿಸ್ತೇನೆ' ಎಂದು ಬೆದರಿಸಿದೆ. ಅದಕ್ಕೆ ನಿನ್ನ ತಮ್ಮ, 'ಹೇಳ್ಕೋ, ಏನು ಮಾಡ್ತಾನೆ?' ಎಂದ. 'ಹೇಳಿ ಹೇಳೀ ಹಿತ್ತಾಳೆ ಕಿವಿ ಮಾಡಿಸು' ಎಂದು ಮತ್ತೆ ಕೆಣಕಿದ' ಎಂದು ತಿಳಿಸಿದ. 'ಇವರಿಬ್ರೂ ಒಟ್ಟೊಟ್ಟಿಗೆ ತಿರುಗಾಡಲು ಹೋಗೋದೆಂದರೇನು? ನೋಡಿದವರಾದರೂ ಏನೆಂದುಕೊಂಡಾರು?' ಎಂದು ನುಡಿದೆ. ಆಮೇಲೆ 'ಸರಿ. ಆ ಪತ್ರವೇಕೆ ಆ ರೀತಿ ಬರೆದಿದ್ದೀಯಲ್ಲಾ?' ಎಂದು ಕೇಳಿದೆ. ಅವನು ಹೀಗೆ ಹೇಳಿದ 'ಭಾವಯ್ಯಾ, ಅಂದೇ ಈ ವಿಷಯಗಳನ್ನೆಲ್ಲಾ ನಿನಗೆ ಹೇಳಿಬಿಡೋಣವೆಂದುಕೊಂಡೆ. ಆದರೆ ರಜಾ ದಿನಗಳಲ್ಲಿ ಸ್ವಾಮಿಯ ನಡತೆಯಲ್ಲಿ ಬದಲಾವಣೆಯುಂಟಾದಂತೆ ಕಂಡುಬಂತು. ಆದ್ದರಿಂದ ಇದನ್ನೆಲ್ಲಾ ಏಕೆ ಹೇಳಬೇಕು? ಹೇಳಿದರೆ ಸುಮ್ಮನೆ ಇಲ್ಲದ ಸಲ್ಲದ ಗಲಾಟೆಯಾಗುತ್ತೆ ಅಂತ ಭಾವಿಸಿಕೊಂಡು ಆಗ ನಿನಗೇನೂ ತಿಳಿಸಲಿಲ್ಲ. ಕಳೆದ ವರ್ಷ ಒಮ್ಮೆಯಾದರೂ ನೀನಿತ್ತ ಬರಲೇ ಇಲ್ಲ. ಸ್ವಾಮಿಯ ಸೋದರ ಮಾವ ಇಲ್ಲಿಗೆ ನಾಲ್ಕೈದು ಸಲ ಬಂದಿದ್ದ. ಆತ ಬಂದಾಗಲೆಲ್ಲಾ ಸ್ವಾಮಿ ಸ್ಕೂಲಿಗೆ ರಜಾ ಕೊಡುತ್ತಿದ್ದ. ನಾನು ಮೊದಲು ಒಂದೆರಡು ಸಲ ಚೆನ್ನಾಗಿ ಆಲೋಚಿಸಲಿಲ್ಲ. ನಾನೊಂದು ದಿನ, ಅವನ ಸೋದರಮಾವ ಬಂದ ದಿನ, ಸ್ಕೂಲಿಗೆ ಹೋಗುವಂತೆ ನಟಿಸಿ, ಹಿಂತಿರುಗಿ ಬಂದೆ. ಮನೆಯಲ್ಲಿ ಕುಶಲಮ್ಮನಿರಲಿಲ್ಲ. ಕುಶಲಮ್ಮನನ್ನು ಯಾವುದೋ ಕೆಲಸದ ಮೇಲೆ ಹೊರಗೆ ಕಳಿಸಿಬಿಟ್ಟಿದ್ದ. ನಾನು ಬಾಗಿಲ ಮರೆಯಲ್ಲಿ

ಅಡಗಿಕೊಂಡಿದ್ದು, ಅವರಿಬ್ರೂ ಏನು ಮಾತಾಡಿಕೊಳ್ತಾರೋ ಅಂತ ಕಾದಿದ್ದು ಎಲ್ಲಾ ಕೇಳಿಸಿಕೊಂಡೆ. ಅವರ ಜೊತೆಗೆ ಅಕ್ಕಯ್ಯನ ಧ್ವನಿಯೂ ಕೇಳಿಸಿತು. ಓಹೋ ! ಇವ್ಳೂ ಸಹ ಸ್ಕೂಲಿಗೆ ಹೋಗಿಲ್ಲ ಹಾಗಾದರೆ ! ಎಂದುಕೊಂಡೆ.

ಆತ ಆಡಿದ ಮಾತುಗಳು ಎಷ್ಟು ವಿಚಿತ್ರವಾಗಿದ್ದುವು ಅಂತ ! ಸ್ವಾಮಿಯ ತಂದೆಯೇ ಅಂತೆ ಆಸ್ತಿಯನ್ನೆಲ್ಲಾ ಹಾಳು ಮಾಡಿದ್ದು ! ನೀನೇನೋ ಶುದ್ಧ ಶುಂಠಿಯಂತೆ ! ಹಳ್ಳಿ ಗಮಾರನಂತೆ ! ನಿನ್ನ ಮುಖ ನೋಡಿದರೇನೇ ವಾಂತಿ ಬರುವ ಹಾಗಿದೆಯಂತೆ ! ಸ್ವಾಮಿ ತುಂಬ ಸುಂದರನಂತೆ ! ನಿನ್ನ ತಮ್ಮ ಸ್ವಾಮಿಗೂ–ಅಕ್ಕಯ್ಯನಿಗೂ ಜೋಡಿ ಸರಿಯಾಗಿರುತ್ತಂತೆ! ಅವರಿಬ್ರೂ ಮದುವೆ ಮಾಡಿಕೊಂಡ್ರೆ ಎಷ್ಟೋ ಚೆನ್ನಾಗಿರುತ್ತಂತೆ ! ಸ್ವಾಮಿ ಓದು ಕಲಿತಿದ್ದಾನಾದ್ದರಿಂದ ನಮ್ಮಕ್ಕನಿಗೆ ಸ್ವಾಮಿಯೇ ತಕ್ಕವನಂತೆ ! ಎದೆ ಸೀಳಿದರೆ ಮೂರಕ್ಷರವಿಲ್ಲದ ನಿನ್ನನ್ನು ಲಗ್ನವಾದರೆ ನಮ್ಮಕ್ಕ ಸುಖಪಡುವಂತಿಲ್ಲವಂತೆ! ಇಂಥವೇ ಏನೇನೋ ಹೇಳಿದ. “ನೀವೀಬ್ರೂ ಒಂದೇ ಕಡೆ ಕೂತ್ಕೊಳ್ಳಿ, ನಾನು ನೋಡ್ತೇನೆ ಹೇಗೆ ಕಾಣ್ತೀರೋ” ಅಂತ ಎಂದು ಹೇಳಿ ಅವರಿಬ್ಬರನ್ನೂ ಪಕ್ಕ ಪಕ್ಕದಲ್ಲಿಯೇ ಕುಳ್ಳಿರಿಸಿ, ಒಬ್ಬರ ಭುಜದ ಮೇಲೆ ಮತ್ತೊಬ್ಬರ ಕೈ ಹಾಕಿಸಿದ. ನಾನಾಗ ತಟಕ್ಕನೆ ಒಳಗೆ ಹೋದೆ. ನಾನು ಹೋಗುತ್ತಲೇ ಅಕ್ಕಯ್ಯ ಏಳತೊಡಗಿದಳು. ‘ಅದೇಕೆ ಮೇಲೇಳ್ತೀಯೆ? ಇಬ್ರೂ ಧೈರ್ಯದಿಂದ ಕೂತ್ಕೊಳ್ಳಿ. ದೊರೆಗಳೂ ದೊರೆಸಾನಿಗಳನ್ನು ನೋಡಿ, ಹೇಗೆ ಸೊಗಸಾಗಿ ಒಬ್ಬರ ಕೈ ಒಬ್ಬರು ಹಿಡಕೊಂಡು ತಿರುಗಾಡ್ತಾರೋ ! ಈ ದೇಶದಲ್ಲಿ ಇದೆಲ್ಲಾ ಅಪಸವಿಯಾಗಲೀ ಅವರ ದೇಶದಲ್ಲಿ ಇವೆಲ್ಲಾ ತುಂಬ ಚೆನ್ನಾಗಿರುತ್ತವೆ! ಇಬ್ಬರೂ ಕಲೆತು ಒಂದೇ ಕಡೆ ಕೂತ್ಕೊಂಡ್ರೇನು ತಪ್ಪು ?’ ಎಂದ.

‘ನಾನು ಉತ್ತರವೇನನ್ನು ಕೊಡದಾದೆ ; ಅವರತ್ತ ಕಣ್ಣೆತ್ತಿಯೂ ನೋಡಲಿಲ್ಲ. ಯಾವುದೋ ಪುಸ್ತಕವನ್ನು – ಸ್ಕೂಲಿಗೆ ಒಯ್ಯುವುದನ್ನು ಮರೆತುಹೋದವನ ಹಾಗೆ ನಟನೆ ಮಾಡಿ, ಒಂದು ಪುಸ್ತಕವನ್ನು ಕೈಗೆತ್ತಿಕೊಂಡು ಹೊರಗೆ ಹೊರಟುಹೋದೆ. ಆ ದಿನವೇ ಸಾಯಂಕಾಲ ಆತ ಹೊರಟುಹೋಗಿಬಿಟ್ಟ. ನಾನು ಆಮೇಲೆ ಅಕ್ಕಯ್ಯನೊಂದಿಗೆ ‘ಆಗ ನೀನೇಕೆ ಅವನೊಂದಿಗೆ ಹಾಗೆ ಕೂತ್ಕೊಂಡೆ? ಭಾವಯ್ಯನಿಗೆ ಹೇಳ್ತೇನೆ ತಾಳು !’ ಎಂದೆ. ಆಗ ಅವಳು ನನ್ನ ಮೇಲೆ ಕೋಪ ಮಾಡ್ಕೊಂಡು ನನ್ನನ್ನು ಹೊಡೆಯುವುದಕ್ಕೂ ಬಂದಳು. ಆತ ಕೆಲವು ದಿನಗಳಾದ ಮೇಲೆ ಮತ್ತೆ ಇಲ್ಲಿಗೆ ಬಂದ. ನಾನು ಆ ದಿನ ಸ್ಕೂಲಿಗೆ ಹೋಗದೆ, ಅಟ್ಟದ ಮೇಲೆ ಅಡಗಿ ಕುಳಿತೆ. ಆ ದಿನ ಮನೆಯಲ್ಲಿ ನಡೆದ ಪ್ರಕರಣಗಳನ್ನು ನಾನು ಹೇಳಲಾರೆ. ಅಂದು ಆಡಿದಂಥಾ ಮಾತುಗಳನ್ನೇ ಎಷ್ಟೋ ಆಡಿದ. ಅವರಿಬ್ಬರನ್ನೂ ಕೋಣೆಗೆ ತಳ್ಳಿ ಬಾಗಿಲು ಹಾಕಿದ ! ನಾನಾಗ ಅಟ್ಟದಿಂದ ಕೆಳಗಿಳಿದು ಬಂದು, ಬಾಗಿಲು ತೆಗೆದೆ. ‘ನೀನೇಕೆ ನಮ್ಮ ಮನೆಗೆ ಬರ್ತೀಯೆ ? ನೀನಿನ್ನೊಂದು ಸಾರಿ ಏನಾದರೂ ನಮ್ಮನೆಗೆ ಬಂದರೆ ನಿನ್ನ ಕಾಲು ಮುರಿದು ಬಿಡ್ತೇನೆ, ನೋಡ್ಕೊ’ ಎಂದೆ. ‘ಭಡವಾ! ಚೋಟುದ್ದ ಇದೀಯೋ ಇಲ್ಲೋ! ಬಾಯಿಗೆ ಬಂದಂತೆ ಬೊಗಳುತ್ತೀಯಾ ?’ ಎಂದು ಹೇಳಿ ನನ್ನ ಕಿವಿಯನ್ನು ಜೋರಾಗಿ ಹಿಂಡಿಬಿಟ್ಟ. ನಾನು ಬಿಡಿಸಿಕೊಂಡು ಅತ್ತೆ. ಆತ ಆ ದಿನವೇ ಹೊರಟುಹೋಗಿಬಿಟ್ಟ. ಆ

ದಿನದಿಂದ ಸ್ವಾಮಿ ಹಾಗೂ ಅಕ್ಕಯ್ಯ ಇಬ್ರೂ ಒಂದೇ ತಾಟಿನಲ್ಲಿ ಊಟ ಮಾಡ್ತಾರೆ. ಒಂದೇ ಕಡೆ ಕೂತು ಓದುತ್ತಾರೆ. ಮಾತು ಮಾತಿಗೆ ಏನೋ ಕಣ್ಣು ಮುಚ್ಚಾಲೆಯಾಡ್ತಾರೆ ! ಮಾತೆತ್ತಿದರೆ ಇಬ್ರೂ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡುಬಿಡ್ತಾರೆ ! ನನ್ನೊಂದಿಗೆ ಮಾತನಾಡುವುದನ್ನೇ ಬಿಟ್ಟುಬಿಟ್ಟಿದಾರೆ ! ಸ್ವಾಮಿ ನನ್ನ ಜೊತೆಗೆ ಸ್ಕೂಲಿಗೆ ಬಾರದೆ, ತಾನೊಬ್ಬನೇ ಹೊರಟುಹೋಗ್ತಾನೆ ನಾನು ಬಂದ ಮೇಲೆ ಎಷ್ಟೋ ಹೊತ್ತಿಗೆ ತಾನೊಬ್ಬನೇ ಬರ್ತಾನೆ. ನನ್ನ ಜತೆಯನ್ನೇ ಬಿಟ್ಟುಬಿಟ್ಟಿದಾನೆ. ನನ್ನನ್ನು ಬಿಟ್ಟೇ ಅವರಿಬ್ರೂ ಊಟ ಮಾಡ್ತಾರೆ. ಅವರು ಓದಿಕೊಳ್ಳುವ ಎಡೆಗೆ ನಾನು ಹೋಗಿ ಓದಲು ಕೂತರೆ ಸ್ವಾಮಿ ನನ್ನನ್ನು ಹೊಡೆದು ಬಡಿದು ಅಲ್ಲಿಂದ ಕಳಿಸಿಬಿಡುತ್ತಾನೆ. ಅವನು ನನಗಿಂತಲೂ ಬಲಿಷ್ಠನಾದ್ದರಿಂದ ನಾನೇನೂ ಮಾಡಲಾರದವನಾಗಿದ್ದೇನೆ. ಕುಶಲಮ್ಮ – ನಾವಿಬ್ರೂ ಓದಿನ ವಿಚಾರದಲ್ಲಿ ಬಡಿದಾಡಿಕೊಳ್ತಾ ಇದೇವೆ ಅಂತ ಅಂದ್ಕೊಳ್ತಾ ಇದ್ದಳು. ಒಂದು ದಿನ ಅವರಿಬ್ರೂ ಒಬ್ಬರನ್ನೊಬ್ಬರು ಅಪ್ಪಿಕೊಂಡು....' ಅವನು ಮುಂದು ವರೆಸದಾದ. ನಾನು 'ಪರವಾಗಿಲ್ಲ, ಹೇಳು' ಎಂದೆ. ಅವನು ಅಳುತ್ತಾ 'ಭಾವಾ ! ಮುತ್ತಿಟ್ಟುಕೊಳ್ಳುತ್ತಿದ್ದರು. ಆಗ ನನ್ನ ಕೈಗೆ ಸಿಕ್ಕಿದ ದೊಣ್ಣೆಯನ್ನು ಅವರ ಮೇಲೆ ಬೀಸಿದೆ. ಅವನು ನನ್ನನ್ನು ಸಾಯಬೀಳ ಹೊಡೆದ. ನಿನಗೆ ಪತ್ರ ಬರೆಯೋಣವೆಂದುಕೊಂಡೆ. ಹೇಗಿದ್ದರೂ ಇನ್ನು ಕೆಲವೇ ದಿನಗಳಿಗೆ ರಜಾ ಸಿಕ್ಕುತ್ತಲ್ಲಾ ಅಂತ ಬರೆಯಲಿಲ್ಲ. ಅಂದಿನಿಂದ ಅವರು ನನ್ನನ್ನು ಹೊಡೆದರೂ ಸಹ ನಾನು ಅವರಿಬ್ಬರಿದ್ದ ಸ್ಥಳದಿಂದ ಕಾಲು ಕೀಳುತ್ತಲೇ ಇರಲಿಲ್ಲ. ಆ ವರ್ಷವೆಲ್ಲಾ ಹೀಗೆಯೇ ಕಳೆಯಿತು. ರಜಕ್ಕೆ ಊರಿಗೆ ಬಂದೆವು. ಊರಲ್ಲಿ ಅವರಿಬ್ರೂ ಒಬ್ಬರಿಗೊಬ್ಬರು ಸಂಬಂಧವಿಲ್ಲದವರಂತೆ ಇದ್ದುಬಿಟ್ಟರು. ಆದ್ದರಿಂದ ಇದನ್ನೆಲ್ಲಾ ನಿನಗೆ ಹೇಳಲಿಲ್ಲ. ರಜಾ ಮುಗಿದು ನಾವಿಲ್ಲಿಗೆ ಬಂದ ಮೇಲೆ ನೀನು ಇಷ್ಟು ತಿಂಗಳಾದರೂ ಇಲ್ಲಿಗೆ ಬರಲಿಲ್ಲ. ಮನೆಯಲ್ಲಿ ಅವರದೇ ರಾಜ್ಯವಾಗಿಬಿಟ್ಟಿದೆ. ಅವರಾಡಿದ್ದೇ ಆಟ, ಮಾಡಿದ್ದೇ ಮಾಟವಾಗಿಬಿಟ್ಟಿದೆ. ಪುನಃ ಸ್ವಾಮಿಯ ಸೋದರಮಾವ ಬಂದಿದ್ದ. ಎರಡು ಮೂರು ಸಾರಿಯಾಯ್ತು ಆತ ಬರುವುದಕ್ಕೆ. ಆತ ಬಂದಾಗಲೆಲ್ಲಾ ನನ್ನನ್ನು ಮನೆಯಿಂದ ಹೊರಗೆ ತಳ್ಳಿಬಿಡುತ್ತಿದ್ದರು ! ಅವರು ನಡೆಸುತ್ತಿರುವ ಮಸಲತ್ತನ್ನೆಲ್ಲಾ ನಾನು ನೋಡ್ತಾನೇ ಇದೇನೆ. ಪ್ರತಿ ದಿನ ರಾತ್ರಿ ಅವರಿಬ್ಬರೂ ಜೊತೆಯಾಗಿಯೇ ಮಲಗಿಕೊಳ್ತಾರೆ! ಕುಶಲಮ್ಮನಿಗೆ ಹೇಳಿದೆ. ಅಜ್ಜಮ್ಮ, 'ಏನೋಪ್ಪ! ಇನ್ನೂ ಹೈಕಳು. ಹೋಗಲಿ ಬಿಡು' ಎಂದಳು. ಆದರೂ ಹಾಗೆ ಮಲಗಿಕೊಳ್ಳಕೂಡದೆಂದು ತಿಳಿಸಿದಳು. ಅಂದಿನಿಂದ ಇಬ್ಬರೂ ಬೇರೆ ಬೇರೆಯಾಗಿಯೇ ಮಲಗಿಕೊಳ್ಳುವುದಕ್ಕಾರಂಭಿಸಿದರೂ ರಾತ್ರಿ ಅದಾವ ಹೊತ್ತಿನಲ್ಲೋ ಇಬ್ಬರೂ ಒಂದೇ ಕಡೆಗೆ ಮಲಗಿಕೊಂಡುಬಿಡುತ್ತಿದ್ದರು. ಇಬ್ರೂ ಕೂಡಿ ನಾಟಕಗಳಿಗೆ ಹೋಗುತ್ತಾರೆ. ನಾನು ಬೇಡ ಅಂತ ಅಡ್ಡಿಪಡಿಸಿದರೆ ಅವರು ಲೆಕ್ಕಿಸುವುದೇ ಇಲ್ಲ.

'ಒಂದು ದಿನ ರಾತ್ರಿ ಇಬ್ಬರೂ ಮಲಗಿಕೊಂಡಾಗ, ನಾನು ಸದ್ದು ಮಾಡದಂತೆ ಹೋಗಿ ಸ್ವಾಮಿಯ ಕೈಕಾಲುಗಳನ್ನು ಹಗ್ಗದಿಂದ ಬಿಗಿದು, ಅದರ ತುದಿಯನ್ನು ಮಂಚದ ಕೋಡಿಗೆ ಗಂಟು ಹಾಕಿದೆ. ಬೆಳಗಾಗುತ್ತಲೇ ಅಕ್ಕಯ್ಯ ಹಗ್ಗವನ್ನು ಬಿಚ್ಚಲು ಯತ್ನಿಸಿದಾಗ, ನಾನು

ಬಿಚ್ಚಗೊಡಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ, ಹಗ್ಗ ಬಿಚ್ಚಿದ ಮೇಲೆ, ಸ್ವಾಮಿ ನನ್ನನ್ನು ಚೆನ್ನಾಗಿ ಥಳಿಸುತ್ತಾನೆ ಎಂದುಕೊಂಡಿದ್ದೆ ಸ್ವಾಮಿ ಅಂಥದೇನೂ ಮಾಡಲಿಲ್ಲ ಆದರೆ ಎರಡು ದಿನಗಳತನಕ ಮನೆಗೆ ಬರಲಿಲ್ಲ. ಎಲ್ಲಿ ತಿನ್ನುತ್ತಿದ್ದನೋ, ಎಲ್ಲಿ ಮಲಗುತ್ತಿದ್ದನೋ ಏನೋ ! ಆದರೆ ಸ್ಕೂಲಿಗೆ ಮಾತ್ರ ಬರುತ್ತಿದ್ದ. ಮೇಷ್ಟ್ರಿಗೆ ಏನೋ ಚಾಡಿ ಹೇಳಿ ನನ್ನನ್ನು ಹೊಡೆಸಿದ. ಯಾವಾಗಲೂ ನನ್ಮೇಲೆ ಮೇಷ್ಟ್ರುಗಳ ಹತ್ತಿರ ಏನೇನೋ ಚಾಡಿ ಹೇಳ್ತಾ ಇರ್ತಾನೆ. ಮೇಷ್ಟ್ರಿಗೆ ಅವನೆಂದರೆ ತುಂಬಾ ಪ್ರೀತಿ. ಅವನ ಮಾತು ಕೇಳಿ ನನಗೆ ಕಡಮೆ ಮಾರ್ಕುಗಳನ್ನು ಹಾಕಿಬಿಡ್ತಾರೆ. ಆ ಎರಡು ದಿನ ಸ್ವಾಮಿ ಮನೆಗೇ ಬಾರದಂತಾದಾಗ, ಅಕ್ಕಯ್ಯ ನನ್ನ ಮೇಲೆ ಕಾರ ಮೆಣಸು ಅರೆಯಲಾರಂಭಿಸಿದಳು ; ಕೆಂಡ ಕಾರಲಾರಂಭಿಸಿದಳು. ಅವಳು ಸ್ವಾಮಿಯನ್ನು ಮದುವೆ ಮಾಡಿಕೊಳ್ತಾಳಂತೆ. ಅಪ್ಪಯ್ಯ ತನಗೆ ಇಪ್ಪತ್ತೈದು ಎಕರೆ ಬರೆದಿದ್ದಾನಂತೆ. ಅದೆಲ್ಲಾ ಸ್ವಾಮಿಯದಂತೆ. ಈ ಮನೆಯಲ್ಲಿ ನನಗೆಷ್ಟು ಅಧಿಕಾರವಿದೆಯೋ ಸ್ವಾಮಿಗೂ ಅಷ್ಟೇ ಅಧಿಕಾರವಿದೆಯಂತೆ ! ಬೇಸಗೆ ರಜೆಯಲ್ಲಿ ತಾವಿಬ್ಬರೂ ಮದುವೆ ಮಾಡಿಕೊಳ್ತಾರಂತೆ !

'ನೀನೇನು ಮಾಡ್ತೀಯೋ ಹುಡುಗು ಮುಂಡೇದೇ? ಸ್ವಾಮಿಯನ್ನು ಮನೆಬಿಟ್ಟು ಓಡಿಸ್ತೀಯಾ ? ಕೈಕಾಲುಗಳನ್ನು ಮಂಚದ ಕೋಡಿಗೆ ಬಿಗಿಯುತ್ತೀಯೇನೋ? ನಾಳೆ ನಿನ್ನ ಕೈಕಾಲುಗಳಿಗೆ ಹಗ್ಗ ಕಟ್ಟಿ ಮಂಚಕ್ಕೆ ಬಿಗಿಸುತ್ತೇನೆ. ಆಗ ಏನು ಮಾಡ್ತೀಯೋ ನೋಡ್ತೇನೆ' ಎಂದೆಲ್ಲಾ ಅಕ್ಕಯ್ಯ ನನ್ಮೇಲೆ ರೇಗಾಡಿದಳು. ಮೂರನೇ ದಿನ ಸ್ವಾಮಿ ಮನೆಗೆ ಬಂದ. ಈ ವಿಷಯಗಳನ್ನೆಲ್ಲಾ ಕುರಿತು ನಾನು ನಿನಗೆ ಎರಡು ಸಲ ಪತ್ರ ಬರೆದೆ. ಮೊದಲ ಸಲ ನಾನು ಪತ್ರ ಬರೆಯುತ್ತ ಕುಳಿತಾಗ ಅಕ್ಕಯ್ಯ ನೋಡಿಬಿಟ್ಟಳು. ಕೂಡಲೇ ಪತ್ರವನ್ನು ಕಿತ್ಕೊಂಡು ಚೂರುಚೂರಾಗಿ ಹರಿದುಹಾಕಿದಳು ! ಎರಡನೇ ಸಲ ಗುಟ್ಟಾಗಿ ಬರೆದು ಮರುದಿನ ಪೋಸ್ಟಿನಲ್ಲಿ ಹಾಕೋಣ ಅಂತ ನನ್ನ ಪುಸ್ತಕಗಳ ಕೆಳಗೆ ಬಚ್ಚಿಟ್ಟಿದ್ದರೆ, ಅದು ಹೇಗೆ ಪತ್ತೆಮಾಡಿದಳೋ ಏನೋ, ಅದನ್ನೂ ಹರಿದು ಚೂರು ಚೂರು ಮಾಡಿ ಬಿಸಾಡಿದಳು. 'ಭಾವಯ್ಯನಿಗೆ ನಾನೇ ಎಲ್ಲಾ ತಿಳಿಸಿದೇನೆ. ನೀನು ತಾನೇ ಬರೆಯೋದೇನಿದೆ?' ಎಂದಳು! ಕುಶಲಮ್ಮನಿಗೆ ಈ ವಿಷಯವನ್ನೆಲ್ಲಾ ತಿಳಿಸಿದಾಗ, ನಿನಗೆ ಪತ್ರ ಬರೆದು ಹಾಕು–ಎಂದಳು.

'ನಾನು ಅವರಿಬ್ಬರಿಗೂ ತಿಳಿಯದ ಹಾಗೆ, ನಾಲ್ಕು ದಿನಗಳ ಕೆಳಗೆ, ಆ ಪತ್ರವನ್ನು ಪೋಸ್ಟಾಫೀಸಿನಲ್ಲಿಯೇ ಬರೆದು ಹಾಕಿದೆ ಭಾವಯ್ಯಾ ! ನಿನ್ನ ಇಷ್ಟ ಏನಿದ್ದರು ಸರಿಯೇ, ನಾನು ಮಾತ್ರ ಇವರೊಟ್ಟಿಗೆ ಇರಲಾರೆ. ಇನ್ನುಳಿದ ಈ ಮೂರು ತಿಂಗಳವರೆಗೆ ನಾನು ಯಾವುದಾರೂ ಖಾನಾವಳಿಯಲ್ಲಿರ್ತೇನೆ. ಬೇರೆ ಕೋಣೆಯನ್ನು ಗೊತ್ತುಮಾಡು. ನಾನದರಲ್ಲಿದ್ದು ಓದಿಕೊಳ್ತೇನೆ' ಎಂದ. ಇಷ್ಟು ಹೇಳಿ ಮೌನವಹಿಸಿದ. ನಾನು ಯೋಚನೆಗೊಳಗಾದೆ. 'ಅಲ್ಲಾ ಕಣೋ! ಈ ವಿಷಯಗಳನ್ನೆಲ್ಲಾ ನೀನು ರಜಾ ದಿನಗಳಲ್ಲಿಯೇ ಹೇಳಿಬಿಟ್ಟಿದ್ದರೆ ಎಷ್ಟು ಚೆನ್ನಾಗಿರ್ತಿತ್ತು!' ಎಂದೆ. ಅವನು ಸುಮ್ಮನೆ ಪಿಳಿಪಿಳಿ ಕಣ್ಣು ಬಿಡುತ್ತ ಕುಳಿತಿದ್ದ. 'ಸರಿ ಬಿಡು. ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು?' ಎಂದೆ. ಅಷ್ಟರಲ್ಲಿ ಅವರಿಬ್ಬರು ತಿರುಗಾಟದಿಂದ ಮನೆಗೆ ಹಿಂತಿರುಗಿ ಬಂದರು. ನನ್ನನ್ನು ನೋಡುತ್ತಲೇ

ಗಾಬರಿಗೊಳಗಾದರು. ನಾನೇನೂ ತುಟಿ ಪಿಟಕ್ಕೆನ್ನಲಿಲ್ಲ. ನಮ್ಮಿಬ್ಬರ ಮುಖಗಳನ್ನು ನೋಡಿ– ನಡೆದಿರಬಹುದಾದುದನ್ನೆಲ್ಲಾ ಅವರು ಕ್ಷಣದಲ್ಲಿಯೇ ಊಹಿಸಿಕೊಂಡರು– ನನ್ನ ಮಾವನ ಮಗ ನನಗೆ ಎಲ್ಲಾ ವಿಷಯಗಳನ್ನೂ ಹೇಳಿಬಿಟ್ಟಿದ್ದಾನೆಂದು. ತಮ್ಮನ್ನೀಗ ನಾನೇನು ಮಾಡುತ್ತೇನೋ ಎಂದು ಅವರಿಬ್ಬರೂ ಭಯಭೀತರಾದರು. ಕೂಡಲೇ ಅವಳು ಹಿತ್ತಲ ಕಡೆಗೆ ಹೊರಟುಹೋಗಿಬಿಟ್ಟಳು. ಅವನು ತನ್ನ ಕೋಣೆಗೆ ಹೋಗಿ ದೀಪದ ಮುಂದೆ ಓದುತ್ತಾ ಕುಳಿತುಕೊಂಡ. ನನಗೆ ಹಿಡಿಸಲಾರದಷ್ಟು ಕೋಪ ಬಂದಿತು. ಅವರಿಬ್ಬರನ್ನೂ ಸಾಯಬೀಳ ಹೊಡೆದು, ಓದು ಬಿಡಿಸಿ ಊರಿಗೆ ಕರೆದೊಯ್ಯೋಣ ಎನ್ನಿಸಿತು. ಏನಿದ್ದರೂ ಇನ್ನು ಓದಿಸುವುದನ್ನು ಮಾತ್ರ ನಿಲ್ಲಿಸಿಬಿಡಬೇಕೆಂದು ಆಗಾಗಲೇ ಗಟ್ಟಿಯಾಗಿ ನಿಶ್ಚಯಿಸಿಕೊಂಡುಬಿಟ್ಟಿದ್ದೆ

ನನ್ನ ಮುಖದಲ್ಲಿ ಕೋಪ ತಾಂಡವಿಸುತ್ತಿತ್ತು. ಮನೆಯಲ್ಲಿ ಆಗ ನಾವಷ್ಟು ಜನರಿದ್ದರೂ ಒಬ್ಬರೂ ಮಾತನಾಡಲೇ ಇಲ್ಲ. ಕುಶಲಮ್ಮ ವಿಷಯವನ್ನೆಲ್ಲಾ ಗ್ರಹಿಸಿದಳು. ಊಟಕ್ಕೇಳಿ ಎನ್ನಲಿಲ್ಲ. ತಿಂಡಿಯಿಲ್ಲ, ತೀರ್ಥವಿಲ್ಲ. ಯಾರಷ್ಟಕ್ಕೆ ಅವರು ಎಲ್ಲಿದ್ದವರಲ್ಲಿಯೇ ಮಲಗಿಕೊಂಡೆವು. ನಾನು ನಡೆದು ಬಂದದ್ದರಿಂದಲೋ ಏನೋ, ನನಗೆ ಹೇಳಲಾರದಷ್ಟು ಹಸಿವಾಗುತ್ತಿತ್ತು. ಆದರೂ ನನ್ನ ಗಮನವನ್ನದು ಸೆಳೆಯದಾಗಿತ್ತು. ಎಲ್ಲರೂ ಮಲಗಿಕೊಂಡರು. ನಾನು ಯೋಚಿಸುತ್ತಿದ್ದೆ– ನಿಜವೇ. ಅವಳಿಗೆ ಇಪ್ಪತ್ತೈದು ಎಕರೆ ಜಮೀನಿದೆ. ಅವಳು ತನ್ನಿಷ್ಟ ಬಂದವನನ್ನು ಲಗ್ನವಾಗುತ್ತಾಳೆ. ಬೇಡವೆನ್ನಲು ನಾನಾರು? ಆದರೆ ಈ ಮೋಸವೆಲ್ಲಾ ಸ್ವಾಮಿಯ ಸೋದರಮಾವನದೇ. ಸ್ವಾಮಿಯ ಸೋದರಮಾವನೆಂಬ ಭಾವ ಬರುತ್ತಲೇ ಕೋಪವೆಲ್ಲಾ ಆತನ ಮೇಲೆ ಹೋಯಿತು. ಆತ ಚಿಕ್ಕಂದಿನಲ್ಲಿ ನನಗೆ ಕೊಟ್ಟ ಕಷ್ಟಗಳು, ನನ್ನ ಸಾಕುತಂದೆಯ ಮಕ್ಕಳಿಗೆ ಮಾಡಿದ ಅನ್ಯಾಯ, ನನ್ನ ಸ್ವಾಮಿಗೆ ಮಾಡಿದ ದ್ರೋಹ, ನನ್ನನ್ನೀಗ ಈ ರೀತಿ ಹಾಳು ಮಾಡುತ್ತಿರುವುದು–ಎಲ್ಲವೂ ಒಮ್ಮೆಗೇ ನನ್ನ ಮನಸ್ಸಿನಲ್ಲಿ ನೆರೆಯಂತೆ ಉಕ್ಕಿ ಬಂದುವು. ನನ್ನ ಸಾಕುತಂದೆಯ ಮಕ್ಕಳ ಬಾಳನ್ನು ಹಸನುಗೊಳಿಸಲು ಉದ್ದೇಶಿಸಿ ಅವರನ್ನು ಕರೆತಂದೆ. ಅವರನ್ನೀಗ ನಡು ನೀರಿನಲ್ಲಿ ಕೈಬಿಡಕೂಡದು. ಮುಖ್ಯವಾಗಿ ನನ್ನ ತಮ್ಮ ಇದನ್ನೆಲ್ಲಾ ತನ್ನ ಸ್ವಂತ ಬುದ್ಧಿಯಿಂದ ಮಾಡಿಲ್ಲ. ಅವನ ಸೋದರಮಾವ ಮಾಡಿಸಿದ್ದಾನೆ. ಅವನು ಹಸುಳೆಯಾದ್ದರಿಂದ ಸೋದರಮಾವ ಹೇಳಿದ್ದೆಲ್ಲಾ ನಿಜವೆಂದು ನಂಬಿದ. ಆದರೂ ಹೀಗೆ ಮಾಡುವುದು ನನಗೆ ದ್ರೋಹ ಮಾಡಿದಂತಾಗುತ್ತದೆಂದು ಅವನು ಯೋಚಿಸಿಕೊಂಡನೆ ? ಮುಖ್ಯವಾಗಿ ಅವನಲ್ಲಿ ತುಂಬ ಸ್ವಾರ್ಥಬುದ್ಧಿ ಇದೆ. ಅವನಿಗೆ ಒಬ್ಬನು ಲೇಸುಂಟು ಮಾಡುತ್ತಿದ್ದರೂ ಆ ಲೇಸು ಅವನು ಗ್ರಹಿಸಿಕೊಳ್ಳುವುದಿಲ್ಲ. ಅವನು ಮತ್ತೆ ತುಂಬ ಬುದ್ಧಿವಂತನಲ್ಲಾ ! ವಿದ್ಯೆಯಲ್ಲಿ ತುಂಬ ಮುಂದುವರೆದಿದ್ದಾನಲ್ಲಾ! ಯೋಚಿಸಿದೆ. ವಿದ್ಯೆಯಲ್ಲಿ ತೋರಿಸುವ ಬುದ್ಧಿವಂತಿಕೆ ಬೇರೆ. ಸದ್ಗುಣಗಳೇ ಬೇರೆ. ಪ್ರಪಂಚದ ಮಹಾ ಮೇಧಾವಿಗಳಲ್ಲಿ ಅದೆಷ್ಟು ಜನ ದುರ್ಮಾರ್ಗಿಗಳಿಲ್ಲ? ಅಂಥಾದ್ದರಲ್ಲಿ ಇವನೊಂದು ಲೆಕ್ಕವೇ? ಅಂಥಾ ಸ್ವಾಮಿಯ ಹೊಟ್ಟೆಯಲ್ಲಿ ಇಂಥವನು ಹೇಗೆ ಹುಟ್ಟಿದನೋ ? ಕಬ್ಬಿನ ಹೊಟ್ಟೆಯಲ್ಲಿ ಸೂಲಂಗಿ ಹುಟ್ಟಿದಂತಾಯ್ತು. ನನ್ನ ಸಾಕು ತಂದೆಗೆ ನಿಜವಾದ ಸಂತಾನವೆಂದರೆ ನನ್ನ ತಂಗಿಯೇ.

ನನ್ನ ಸಾಕುತಂದೆಯಾಗಲೀ, ಆತನ ಹೆಂಡತಿಯಾಗಲೀ ಇಬ್ಬರೂ ಧರ್ಮಾತ್ಮರೇ. ಇವನಿಗೆ ಈ ಪೋಲಿ ಗುಣ ಎಲ್ಲಿಂದ ಬಂದಿತು? ಛಿ ! ಛಿ! ಇವನ ಬಗ್ಗೆ ಯೋಚಿಸುವುದಾದರೂ ಏಕೆ? ಹೋಗಲಿ, ಅವಳಿಗಾದರೂ ಒಂದಿಷ್ಟು ಜ್ಞಾಪಕವಿರಕೂಡದೇ? ನಾನು ಯಾರಿಗೆ ಮೇಲುಂಟುಮಾಡುತ್ತೇನೋ ಅವರಿಗೆಲ್ಲಾ ವಿಷವಾಗಿಬಿಡುತ್ತೇನೆ ಅಂತ ಕಾಣುತ್ತೆ ಪಾಪದ ಮಾತುಗಳನ್ನು ನಾನೇನೆ ಅಂದುಕೊಳ್ಳಲಿ ? ನನ್ನ ಮಾವನ ಮಗನಿಲ್ಲವೆ? ನನ್ನ ತಂಗಿಯಿಲ್ಲವೆ? ಅವರು ಇವರುತಿದಾರೆಯೇ ? ಈ ತಪ್ಪೆಲ್ಲಾ ಇವಾರದೂ ಅಲ್ಲ ಅವನ ಸೋದರಮಾವನದು. ಆತನನ್ನು ಏನು ಮಾಡಿದರೂ ಪಾಪವಿಲ್ಲ. ನಾನು ಆತನೊಂದಿಗೆ ಒಳ್ಳೆಯತನದಿಂದಿದ್ದುದೇ ಇಷ್ಟು ದೂರಕ್ಕೆ ತಂದಿತು. ಆತನನ್ನು ಕೊಂದಲ್ಲದೆ ನನ್ನ ಕೋಪ ತೀರುವಂತಿಲ್ಲ ; ಕಸಿ ತೀರುವಂತಿಲ್ಲ. ಬೆಳಕು ಹರಿಯುತ್ತಲೇ ಆ ಊರಿಗೆ ಹೋಗಿ, ಆತನೊಂದಿಗೆ ಜಗಳ ತೆಗೆದು ತಲೆಯೊಡೆದುಬಿಡೋಣವೇ ಎನ್ನಿಸಿತು. ಆದರೆ ಏನೇ ಆಗಲಿ, ದೈವವೇ ಹೀಗಾಗಬೇಕೆಂದು ಬಯಸಿದಂತಿದೆ. ಆತನನ್ನು ನಾನು ಕೊಲ್ಲುವ ದ್ರೋಹವನ್ನೇಕೆ ಗೈಯಲಿ–ಎನ್ನಿಸಿತು.

ರಾತ್ರಿ ಎರಡು ಜಾವವಾಯಿತು. ಬಾಗಿಲ ಬಳಿ ಮಲಗಿದ್ದೆನಾದ್ದರಿಂದ ಮಂಜು ಬಿದ್ದು ಮೈಯೆಲ್ಲಾ ಒದ್ದೆಯಾಗಿತ್ತು. ಕೋಪವೆಲ್ಲಾ ತಣ್ಣಗಾಗಿತ್ತು. ಕ್ಷುದ್ಬಾಧೆ ದಹಿಸುತ್ತಿತ್ತು. ಎದ್ದು ಹೋಗಿ, ಕುಶಲಮ್ಮನನ್ನೆಬ್ಬಿಸಿ, ಅನ್ನ ಬಡಿಸು ಎಂದೆ. ಎಲ್ಲರನ್ನೂ ಎಬ್ಬಿಸಿದೆ. ನನ್ನ ಮಾವನ ಮಗಳನ್ನೂ, ನನ್ನ ತಮ್ಮನನ್ನೂ ಎಬ್ಬಿಸಿ ಊಟಕ್ಕೆ ಕರೆದುಕೊಂಡು ಬಾ ಎಂದು ಕುಶಲಮ್ಮನಿಗೆ ಹೇಳಿದೆ. ಇಬ್ಬರೂ ಎದ್ದು ಬಂದರು. ಎಲ್ಲರೂ ರಾತ್ರಿ ಆ ಹೊತ್ತಲ್ಲದ ಹೊತ್ತಿನಲ್ಲಿ ಊಟ ಮಾಡಿದೆವು. ನನ್ನ ಹೊಟ್ಟೆ ತುಂಬುತ್ತಲೇ ಎಲ್ಲೋ ಅಡಗಿದ್ದ ಕೋಪ ಮತ್ತೆ ಭುಗಿಲ್ಲೆಂದು ಸಿಡಿದೆದ್ದಿತು. ಆವಳೊಂದು ಕಡೆಗೆ, ಅವನೊಂದು ಕಡೆಗೆ ಮಲಗಿಕೊಂಡರು. ನಾನು ತಟಕ್ಕನೆ ಹೋಗಿ ಅವರಿಬ್ಬರನ್ನೂ ಎಬ್ಬಿಸಿ 'ನಾನು ಬಂದಿದೇನೆ ಅಂತ ಬೇರೆ ಬೇರೆ ಅದೇಕೆ ಮಲಗ್ತೀರಿ? ಒಂದೇ ಕಡೆ ಮಲಗಿಕೊಳ್ಳಿ!' ಎಂದೆ. ಅವರ ಹಾಗೆಯೇ ಮತ್ತೆ ಬೇರೆ ಬೇರೆ ಕಡೆಯಲ್ಲಿ ಮಲಗಿಕೊಳ್ಳಲಾರಂಭಿಸುತ್ತಲೇ, ನಾನು ನನ್ನ ತಮ್ಮನ ರಟ್ಟೆ ಹಿಡಿದೆಬ್ಬಿಸಿ, ಕೋಣೆಗೆ ತಳ್ಳೀ, ಹಿಂದೆಯೇ ಅವಳನ್ನು ಕೋಣೆಗೆ ನೂಕಿ, ಬಾಗಿಲು ಹಾಕಿದೆ. ತತ್‌ಕ್ಷಣದಿಂದ ನನ್ನ ಕೋಪ ವಿಜೃಂಭಿಸಿತು.

'ನೀವಿಬ್ರೂ ಮನುಷ್ಯರಲ್ಲ. ನೀವು ಪಶುಗಳು. ನೀವು ಹೊಟ್ಟೆಗೆ ಅನ್ನ ತಿನ್ನುತ್ತಿಲ್ಲ. ಹುಲ್ಲು ತಿನ್ನುತ್ತಿದ್ದೀರಿ. ಎಲೋ ಕತ್ತೇ! ನಾನು ನಿನ್ನನ್ನು ಕರೆತರದಿದ್ದರೆ, ನಿನ್ನ ಸೋದರಮಾವನ ಹುಗಿನಲ್ಲಿ ಬಿದ್ದು, ಅವರ ಮನೇಲಿ ಸೆಗಣಿ ಗುಡಿಸ್ತಾ ಇರ್‍ತಾ ಇದ್ದೆ ಆ ಕತ್ತೇಮಗನೇ ನಿನಗೀವೊತ್ತು ಆಪ್ತ ಬಂಧುವಾಗಿದ್ದಾನಲ್ವೇ? ಆ ಬಡ್ಡೀಮಗ ಹೇಳಿದ್ದನ್ನೆಲ್ಲಾ ಕೇಳ್ತೀಯೇನೋ? ಭಿಕ್ಷೆ ಬೇಡಿ ಹೊಟ್ಟೆ ಹೊರೆದುಕೊಳ್ಳೋ ನಾನು, ನಿನ್ನನ್ನು ಕರೆತಂದು ನಿನ್ನ ಒಳಿತಿಗಾಗಿ ಇಷ್ಟೆಲ್ಲಾ ಪಾಡುಪಟ್ಟೆ ಏನೋ ನಿಮ್ಮ ತಂದೆ ಎರಡು ವರ್ಷ ನನ್ನನ್ನು ಕನಿಕರಿಸಿ, ಸಾಕಿ ಸಲಹಿದನಲ್ಲಾ ಅಂತ ನಿನ್ನನ್ನು ನಾನು ಬೆನ್ನಿಗೆ ಕಟ್ಟಿಕೊಂಡು ಸತ್ಕರಿಸಿದ್ದರಿಂದ ಒಳ್ಳೆ ಕೆಲಸ ಮಾಡಿದೆ ಕಣಪ್ಪಾ, ಒಳ್ಳೇ ಕೆಲಸ ಮಾಡಿದೆ. ಹಾಲೂಡಿದ ಮೊಲೆಗೇ ಕೈ ಹಾಕಿದ ನಿನ್ನಂಥಾ ತಾಯಿಗ್ಗಂಡನಿಗೆ, ನಿನ್ನಂಥಾ

ಕೃತಘ್ನನಿಗೆ ಎಷ್ಟು ಮಾಡಿದರೂ ಇಷ್ಟೇ. ಹಾವಿಗೆ ಹಾಲೆರೆದಂತಾಯ್ತು. ನಿನ್ನನ್ನೀಗ ಎರಡು ತುಂಡು ಮಾಡಿ ನೀನು ಹುಟ್ಟಿಲ್ಲಾಂತ ಅನ್ನಿಸಿಬಿಡ್ತೇನೆ. ನಿನಗಾವ ದಿಕ್ಕಿದೆ ಈಗ ? ನಿನ್ನ ಆಸ್ತಿಯನ್ನೆಲ್ಲಾ ನುಂಗಿ ನೀರು ಕುಡಿದು, ನಿನ್ನ ಕೈಗೆ ಕರುಟ ಕೊಟ್ಟ ಆ ನಿನ್ನ ಸೋದರಮಾವನೀಗ ಅಡ್ಡ ಬರ್ತಾನ್ಯೇ? ಆ ಬಡ್ಡೀ ಮಗನ್ನ ಕೊಂದು ತುಂಡರಿಸದಿದ್ದರೆ ನಾನು ಒಕ್ಕಲಿಗನ ಮಗನೇ ಅಲ್ಲ ! ನೋಡಿಕೋ. ನಾನವನ್ನು ಕೊಂದು ಪೋಲೀಸರಿಗೆ ಹೇಳಿಬಿಡ್ತೇನೆ. ಅವರು ನನ್ನನ್ನು ಗಲ್ಲುಗಂಬಕ್ಕೇರಿಸ್ತಾರೆ. ಆಗ ನೀವಿಬ್ರೂ ಸುಖವಾಗಿ ಮದುವೆ ಮಾಡಿಕೊಳ್ಳುವಿರಂತೆ ! ಅಲ್ಲವ್ರೋ, ಇವಳು ನನಗೆಂದು ನಿಶ್ಚಿತಳಾದ ಹೆಣ್ಣಲ್ಲವ! ನಿನಗೆ ಅತ್ತಿಗೆಯಾಗಬೇಕಲ್ಲೋ. ಅತ್ತಿಗೆ ಎಂದರೆ ನಿನಗೆ ತಾಯಿ ಸಮಾನ. ನೀನವಳಿಗೆ ಮಗನಿದ್ದ ಹಾಗೆ. ನೀನೂ ಮನುಷ್ಯನಲ್ಲ. ಅವ್ಳೂ ಮನುಷ್ಯಳಲ್ಲ. ನೀವಿಬ್ರೂ ಮನುಷ್ಯರ ಹೊಟ್ಟೆಯಲ್ಲಿ ಹುಟ್ಟಬಾರದಿತ್ತು. ನಿಮ್ಮ ಮುಖಗಳನ್ನು ನೋಡಿದರೇನೇನೇ ಪಾಪ ಸುತ್ತಿಕೊಳ್ಳುತ್ತೆ!' ಎಂದು ಹೊರಗಿನಿಂದಲೇ ಅವರಿಬ್ಬರ ಮುಖಕ್ಕೂ ಉಗುಳಿ, ದಡದಡನೆ ಅಲ್ಲಿಂದ ಹೊರಗೆ ಹೋಗಿ ಬಿದ್ದುಕೊಂಡೆ. ಬಹಳ ಹೊತ್ತಿನ ತನಕ ಅವರಿಬ್ಬರೂ ಅಳುತ್ತಾ ಕುಳಿತಿದ್ದು ಅನಂತರ ಒಂದೊಂದು ಕಡೆ ಒಬ್ಬೊಬ್ಬರು ಮಲಗಿ ನಿದ್ರೆ ಹೋದರು. ನಾನು ನಸುಕಿನಲ್ಲಿಯೇ ಎದ್ದೆ. ಬಾಡಿಗೆ ಗಾಡಿ ಮಾತಾಡಿ, ಅವಳನ್ನು ಊರಿಗೆ ಕರೆದುಕೊಂಡು ಪಯಣವಾಗಲು ಸನ್ನದ್ಧನಾದೆ. ನನ್ನ ತಮ್ಮನನ್ನೂ, ನನ್ನ ಮಾವನ ಮಗನನ್ನೂ ಬೇರೆ ಬೇರೆ ಖಾನಾವಳಿಯಲ್ಲಿರುವ ಹಾಗೆ ಏರ್ಪಾಟುಗಳನ್ನು ಮಾಡಿ, ಎರಡನೆಯ ತಮ್ಮನನ್ನು ನನ್ನ ಮಾವನ ಮಗನೊಂದಿಗೇ ಇರುವಂತೆ ಹೇಳಿ, ನನ್ನ ಮಾವನ ಮಗನಿಗೆ 'ಇವನನ್ನು ಅವನ ಸಮೀಪಕ್ಕೆ ಬಿಡಬೇಡ. ಅವನೊಂದಿಗೆ ಮಾತುಕತೆಯಾಡದಂತೆ ನೋಡಿಕೋ. ಇಲ್ಲದೇ ಇದ್ದರೆ ಇವನನ್ನೂ ಕೆಡಿಸಿಬಿಡುತ್ತಾನೆ ಅವನು' ಎಂದು ಎಚ್ಚರಿಕೆ ಕೊಟ್ಟು, ನನ್ನ ಪ್ಲೀಡರ್ ಸ್ನೇಹಿತನೊಂದಿಗೆ 'ನಮ್ಮ ಹುಡುಗರನ್ನು ನೋಡಿಕೊಳ್ಳುತ್ತಿರಿ' ಎಂದು ವಿನಂತಿಸಿಕೊಂಡು ಬಂದೆ

ನನ್ನ ತಮ್ಮನೊಂದಿಗೆ, ಹೀಗೆ ಹೇಳಿದೆ 'ನೀನು ಬುದ್ಧಿವಂತನಾದರೆ ಇನ್ಮೇಲಿಂದಾದರೂ ನೇರವಾಗಿರಬೇಕೆಂದು ಬಯಸಿದರೆ, ಕೊಂಚ ಮೈ ಮೇಲೆ ಎಚ್ಚರಿಕೆಯಿಟ್ಟುಕೊಂಡು ಬಾಳು. ನಿನ್ನ ಸೋದರಮಾವನೇನಾದರೂ ಬಂದಾಗ ಆತನೊಂದಿಗೆ ನೀನು ಭೇಟಿ ಮಾಡಿದೆ ಎಂದಾಗಲೀ, ಮಾತನಾಡಿದೆ ಎಂದಾಗಲೀ ನನಗೇನಾದರೂ ತಿಳಿದುಬಂತೂಂದ್ರೆ ನಿನ್ನ ಎಲುಬು ಪುಡಿಪುಡಿ ಮಾಡಿಬಿಡ್ತೇನೆ. ನೀನು ಬಸ್ಕೀ, ದಂಡಾ ತೆಗೆದಿದ್ದೇನೆ, ವ್ಯಾಯಾಮ ಮಾಡಿದ್ದೇನೆ ಅಂತ ಭಾವಿಸುತ್ತೀಯೇನೋ! ಅದೆಲ್ಲಾ ನನ್ನ ಹತ್ತಿರ ನಡಿಯೋದಿಲ್ಲ. ನೀನೂ, ಬೇಕಾದ್ರೆ ನಿನ್ನ ರೌಡಿ ಸ್ನೇಹಿತರು ಇನ್ನಾರಾದರು ಇದ್ದರೆ ಅವರೂ ಬರಲಿ ಬೇಕಾದರೆ ! ನಿಮ್ಮೆಲ್ಲರನ್ನೂ ಮಣ್ಣು ಕಚ್ಚಿಸಿಬಿಡ್ತೇನೆ. ನಿನಗೊಂದಿಷ್ಟು ಮಾನ ಅಭಿಮಾನವೆಂಬುದೇನಾರೂ ಇದ್ದಪಕ್ಷಕ್ಕೆ ನನ್ನ ಕಣ್ಮರೆಯಾಗಿ ಎಲ್ಲಿಗಾದರೂ ಹೋಗಬಹುದು. ನೀನು ಹೊಳೆಗೆ ಬೀಳ್ತೀಯೋ, ನದಿಯ ಪಾಲಾಗ್ತೀಯೋ ನನಗೆ ಸಂಬಂಧವಿಲ್ಲ. ಹಾಗಲ್ಲದೆ ನಮ್ಮಣ್ಣಯ್ಯ ನಮ್ಮೆಲ್ಲರ ಒಳಿತಿಗಾಗಿ ಇಷ್ಟೆಲ್ಲಾ ಪಾಡುಪಡ್ತಾ ಇದಾನಲ್ಲಾ, ನಮ್ಮ ಬಾಳನ್ನು ಹಸನುಗೊಳಿಸಲು ನಿಶ್ಚಯಿಸಿದ್ದಾನಲ್ಲಾ

ಎಂದು ಭಾವಿಸಿಕೊಂಡರೆ ಕೊಂಚ ಮೈಮೇಲೆ ಎಚ್ಚರಿಕೆಯಿಟ್ಟುಕೊಂಡು ವ್ಯವಹರಿಸು. ನೀನು ಬಿ.ಎ. ಪಾಸು ಮಾಡುವವರೆಗಾದರು ಸರಿಯೇ ನಾನು ನಿನ್ನನ್ನು ಓದಿಸಲು ಸಿದ್ಧನಿದ್ದೇನೆ. ನಿನ್ನ ಕೈ ಬಿಡೋಲ್ಲ. ಇನ್ನುಳಿದ ಈ ಮೂರು ತಿಂಗಳೂ ನಾನು ನಿನಗೆ ಕಳಿಸುವ ಹಣದಲ್ಲಿ ಕಡಮೆಯೇನೂ ಮಾಡಲ್ಲ. ಚೆನ್ನಾಗಿಯೇ ಯೋಚನೆ ಮಾಡಿ ನೋಡು' ಎಂದೆ.

ನಾನು, ಕುಶಲಮ್ಮ ಹಾಗೂ ಅವಳು, ಮೂರು ಜನವೂ ಗಾಡಿ ಹತ್ತಿ ನಮ್ಮೂರಿಗೆ ಪಯಣವಾದೆವು. ಗಾಡಿಯಲ್ಲಿ ನನ್ನ ಮಾವನ ಮಗಳು ಮುಖಕ್ಕೆ ಸೆರಗು ಮುಚ್ಚಿಕೊಂಡು ಕುಳಿತಿದ್ದಳು. ನಾವಾರೂ ಮಾತನಾಡಲಿಲ್ಲ. ಗಾಡಿಯನ್ನು ನಾನೇ ಹೊಡೆಯುತ್ತಿದ್ದೆ. ಸ್ವಲ್ಪ ದೂರ ಹೋದ ಮೇಲೆ ಕುಶಲಮ್ಮ 'ಮಗೂ! ನಿನ್ನ ಸೋದರ ಸೊಸೆ ಕೆಳಗಿಳಿಯುತ್ತಾಳಂತೆ. ಕೊಂಚ ಗಾಡಿ ನಿಲ್ಲಿಸು' ಎಂದಳು. ನಾನು ನಿಲ್ಲಿಸದೆ ಗಾಡಿಯನ್ನು ಹಾಗೆಯೇ ಸಾಗಿಸಿದೆ. ಗಾಡಿ ಚಲಿಸುತ್ತಿರುವಂತೆಯೇ ಅವಳು ಕೆಳಗಿಳಿದುಬಿಟ್ಟಳು. ನಾನು ಗಾಡಿಯನ್ನು ಎಲ್ಲೂ ನಿಲ್ಲಿಸದೆ ಹೊಡೆಯುತ್ತಿದ್ದೆ. ಅವಳು ಗಾಡಿಯ ಹಿಂದೆಯೇ ನಡೆದು ಬರುತ್ತಿದ್ದಳು. ಗಾಡಿಗೂ ಅವಳಿಗೂ ಹತ್ತು ಮಾರಿನ ದೂರದ ಅಂತರವಿತ್ತು. ಕುಶಲಮ್ಮ ಎರಡು ಮೂರು ಸಲ ಗಾಡಿಯನ್ನು ನಿಲ್ಲಿಸೆಂದು ಕೇಳಿಕೊಂಡಳು. 'ನಡಕೊಂಡು ಬರ್ತಾಳೆ, ಬಿಡು, ಅವಳಿಗೇನು ಧಾಡಿ?' ಎಂದೆನಾಗಲೀ, ಗಾಡಿಯನ್ನು ನಿಲ್ಲಿಸಲಿಲ್ಲ. ಒಂದು ಅರ್ಧ ಹರದಾರಿ ಅವಳನ್ನು ನಡೆಯಿಸಿದೆ. ಕೊನೆಗೆ ಅವಳು ನಡೆಯಲಾರದೆ, ಒಂದು ಕಡೆ ಅಳುತ್ತಾ ಕುಳಿತುಬಿಟ್ಟಳು. ಕುಶಲಮ್ಮ ನನ್ನನ್ನು ಗೋಗರೆದಳು. ಆಗ ನಾನು ಗಾಡಿ ನಿಲ್ಲಿಸಿದೆ. ಕುಶಲಮ್ಮ ಇಳಿದು ಹೋಗಿ ಅವಳನ್ನು ಕರೆದುಕೊಂಡು ಬಂದಳು. ಅವಳು ಗಾಡಿ ಹತ್ತುತ್ತಿರಲು, ನಾನು 'ತನ್ನ ಗಂಡನನ್ನು ಬಂದು ಗಾಡಿ ಹೊಡೆಯೆನ್ನು. ಇಪ್ಪತ್ತೈದು ಎಕರೆ ಬಯಲು ಭೂಮಿಯನ್ನು ಸಾಗುವಳಿ ಮಾಡು ಅನ್ನು. ಕುರುಡುಮುಂಡೆ ! ಅವನ ಕೈಲಿ ಭೂಮಿ ಉಳುವುದಕ್ಕಾಗುತ್ತದೆಯೇ? ಅವನಿಗೆ ತರಗತಿಯಲ್ಲಿ ನಾಲ್ಕು ಮಾರ್ಕು ಹೆಚ್ಚಿಗೆ ಬರುತ್ತಿವೆ ಅಂತ ಈ ಬೇವಾರ್ಸಿಗೆ ಮೈಮರೆತುಹೋಯ್ತು! ನೋಡ್ಕೋ ಇವರಿಬ್ಬರನ್ನು ಏನು ಮಾಡ್ತೇನೋ? ಇವರಪ್ಪನೇನೋ ಇವಳಿಗೆ ಇಪ್ಪತ್ತೈದು ಎಕ್ರೆ ಜಮೀನು ಬರೆದಿದಾನೆ ಅಂತ ಹಾರಾಡ್ತಾ ಇದಾಳೆ. ಆ ಉಯಿಲು ಕಳ್ಳ ಉಯಿಲು! ಅದು ಹೇಗೆ ಚಲಾವಣೆಯಾಗುತ್ತೋ ನಾನೂ ನೋಡ್ತೇನೆ ! ಸಾವಿರ ಖರ್ಚಾದರೂ ಸರಿಯೇ, ಆ ಉಯಿಲಿನ ಗುರುತು ಐಬು ಪತ್ತೆ ಇಲ್ಲದಂತೆ ಮಾಡಿಬಿಡ್ತೇನೆ. ಅದರ ಮೇಲಿನ ಧೂಳನ್ನೂ ಉಳಿಸೋಲ್ಲ. ಇವರ ಜಮೀನೆಲ್ಲಾ ನೋಡಿಕೊಂಡು, ಕುಸಿಯುತ್ತಿದ್ದ ಇವರ ಸಂಸಾರವನ್ನು ನೆಲೆಗೊಳಿಸಿ ಯಾರಮ್ಮನ ಗಂಡನಿಗೆ ಆಸರೆಯಿದ್ದು ಮಾಡಿದೆನೆಂದುಕೊಂಡಳೋ–ಇದನ್ನೆಲ್ಲಾ? ನಾನೇ ಇಲ್ಲದಿದ್ದ ಪಕ್ಷಕ್ಕೆ, ಈವೊತ್ತಿಗಾಗಲೇ ಯಾವನೋ ಒಬ್ಬ ಇವರ ತಲೆಯ ಮೇಲೆ ಚಪ್ಪಡಿ ಎಳೆದುಬಿಡ್ತಿದ್ದ. ತನಗೆ ಹದಿನೆಂಟು ಹತ್ತೊಂಬತ್ತು ವರ್ಷ ವಯಸಾಯ್ತಲ್ಲಾ ! ತಾನೇನು ಹಸುಗೂಸೇ? ಮೊಲೆಯುಣ್ಣುತ್ತಿರುವಳೇ? ಒಂದಿಷ್ಟಾದರೂ ಬುದ್ಧಿ ಇರಬೇಡ್ವೇ? ನಾನೇನೋ ಒಳ್ಳೆಯದಾದೀತು ಅಂತ ಬಗೆದು, ಓದಲೀಂತ ಕಳಿಸಿಕೊಟ್ಟರೆ ಇಲ್ಲದ ಸಲ್ಲದ ಆಟ ಆಡ್ತಾಳ್ಯೇ?

ಈಗ ಓದು ಬಿಡಿಸಿದೇನೆ. ಏನು ಮಾಡ್ತಾಳೋ ಮಾಡಲಿ? ಇವಳಿಗೆ ಸೀರೆಗಳು, ಆಭರಣಗಳು, ಸೀಳುಜಡೆ, ಕಾಲಿಗೆ ಚಪ್ಪಲಿ, ಓರೆ ಬೈತಲೆ ಬೇರೆ ! ಮನೆಗೆ ಬಾ ಅನ್ನು. ಅಲ್ಲಿ ಕೆಂಪು ಸೂರಿದ ಒರಟು ಬಟ್ಟೆಗಳನ್ನುಡುವಂತೆ ಮಾಡ್ತೇನೆ' ಎಂದು ನನ್ನ ಕೋಪವನ್ನೆಲ್ಲಾ ಹರಿಯಗೊಟ್ಟೆ ಅವಳು ಅಳುತ್ತಾ ಜಡೆ ಬಿಚ್ಚಿಕೊಂಡು ಓರೆ ಬೈತಲೆಯನ್ನು ಕೆಡಿಸಿಕೊಂಡು, ಹಿಂದಕ್ಕೆ ತುರುಬು ಕಟ್ಟಿಕೊಂಡಳು.

ಆ ರಾತ್ರಿಗೆ ನಮ್ಮ ಚಿಕ್ಕಮ್ಮನವರ ಊರು ಸೇರಿಕೊಂಡೆವು. ನಾನು ಊಟಮಾಡಿ ಮಲಗಿಕೊಂಡೆ. ನನ್ನ ಮಾವನ ಮಗಳಿಗೆ ನಾನಷ್ಟು ಕಟುವಾದ ಮಾತುಗಳನ್ನಾಡಲು ನನಗಾವ ಅಧಿಕಾರವಿದೆ? ನಾನು ಅವರ ಬಾಳನ್ನು ಹಸನುಗೊಳಿಸಿದ್ದೇನೆ, ಹಸನುಗೊಳಿಸಿದ್ದೇನೆ ಎನ್ನುತ್ತಿರುವೆ ? ಅವರೇ ನನಗಿಷ್ಟರಮಟ್ಟಿಗೆ ಆಶ್ರಯವನ್ನೀಯದೇ ಹೋಗಿದ್ದರೆ ನಾನೇನಾಗುತ್ತಿದ್ದೆನೋ? ಆದಾಗ್ಯೂ ಒಂದಿಷ್ಟು ಭಯವಿರುವುದಕ್ಕೋಸ್ಕರ ಅಷ್ಟು ಮಾತ್ರವಾದರೂ ಅನ್ನಬೇಕಾದದ್ದೇ. ಆದರೂ ಆ ಹೆಣ್ಣು ನನ್ನ ಹೆಂಡತಿಯಾಗಲು ಅರ್ಹಳೇ? ನಾನು ಬಲವಂತದಿಂದ ಮದುವೆ ಮಾಡಿಕೊಂಡರೆ ನನ್ನ ಸಂಸಾರ ಚೆನ್ನಾಗಿರುತ್ತದೆಯೇ? ಆ ಹೆಣ್ಣಿಗೆ ನನ್ನ ಮೇಲೆ ಒಲವಿದ್ದು, ಅವನೇನೋ ಬಲವಂತದಿಂದ ಬಲಾತ್ಕರಿಸಿ ಸ್ವಾಧೀನ ಮಾಡಿಕೊಂಡಿದ್ದರೆ, ನಾನು ಮದುವೆಯಾಗಲು ಮನಗೊಡಬಹುದಿತ್ತು. ನಡೆದ ಈ ಕಥೆಯನ್ನೆಲ್ಲಾ ಮುಚ್ಚಿಡಬಹುದಿತ್ತು. ನಿಜಕ್ಕೂ ಅವಳಿಗೆ ಅವನ ಮೇಲೆ ಇಷ್ಟವಿದೆ. ಅವನು ನನಗಿಂತಲೂ ಸಮರ್ಥನೆ? ಬುದ್ಧಿವಂತನೆ? ಏನೂ ಇಲ್ಲ. ನನಗಿಂತಲು ಸುಂದರನೇ ?– ಎಂದರೆ ಹಾಗೂ ಹೌದೆನ್ನುವಂತಿಲ್ಲ. ನಾನು ಹೊಲದ ಕೆಲಸಕಾರ್ಯಗಳನ್ನು ಮಾಡಿ ಒರಟಾಗಿ ಕಾಣುತ್ತಿರಬಹುದು. ಅವನು ನೆರಳಿನಲ್ಲಿಯೇ ಇರುತ್ತಾನಾದ್ದರಿಂದ ನನಗಿಂತಲೂ ಕೊಂಚ ನಾಗರಿಕನಾಗಿ ಕಾಣುತ್ತಿರಬಹುದು. ನಾನು ಅನೇಕ ಕಷ್ಟಗಳನ್ನು ಪಟ್ಟಿರುವುದರಿಂದ ಈ ಚಿಕ್ಕ ವಯಸ್ಸಿಗೇ ನನ್ನ ಮುಖ ಮುದಿ ಬಿದ್ದಿರಬಹುದು. ಅವನ ಮುಖ ತುಂಬಿಕೊಂಡು ಮಿರಮಿರನೆ ಮಿಂಚುತ್ತಿರಬಹುದು. ಅಷ್ಟು ಮಾತ್ರಕ್ಕೆ ಇವಳು ಅವನನ್ನೇಕೆ ಪ್ರೇಮಿಸಬೇಕು? ಯೋಚಿಸಿದೆ–ಪ್ರೇಮ ಒಂದು ರೀತಿಯಾಗಿಯೇ ಇರುತ್ತದೆಯೇ? ತನ್ನಿಷ್ಟ ಬಂದತ್ತ ಹರಿದಾಡುತ್ತದೆ. ಅದೂ ಅಲ್ಲದೆ, ತಪ್ಪೆಲ್ಲಾ ನನ್ನ ಹತ್ತಿರ ಇಟ್ಟುಕೊಂಡು ಅವರನ್ನು ಅನ್ನುವುದೇಕೆ ? ಅವರಿಬ್ಬರೂ ಪ್ರಾಯದಲ್ಲಿರುವವರು. ಊರಲ್ಲಿರುವಾಗಲೇ ಅವರಿಬ್ಬರ ಮಧ್ಯೆ ಏರ್ಪಟ್ಟ ಸಲಿಗೆಯನ್ನು ನಾನು ಇಲ್ಲಗೈಯಲು ಪ್ರಯತ್ನಿಸಲೇ ಇಲ್ಲ. ಕ್ರಮಕ್ರಮೇಣ ಅವರಿಬ್ಬರ ಮಧ್ಯೆ ಪ್ರೇಮ ಬಲಿಯಿತು. ಅವರದೇನು ತಪ್ಪು? ಅವನ ಸೋದರಮಾವನೇ ಬಾರದೇ ಇದ್ದಿದ್ದರೆ ಇಷ್ಟು ರಾದ್ಧಾಂತವಾಗುತ್ತಿರಲಿಲ್ಲ. ಏನು ಮಾಡುವಂತಿದ್ದರು ಆ ಸೋದರಮಾವನಿಗೇ ಮಾಡಬೇಕು ! ನಾನು ಅಸಮರ್ಥ. ಅವನನ್ನು ಏನೋ ಮಾಡಿಬಿಡಬೇಕೆಂದು ಬಗೆಯುತ್ತೇನಾಗಲೀ ಅವನನ್ನು ನಾನೇನೂ ಮಾಡಲಾರೆ. ನಾನು ನನ್ನ ಮಾವನ ಮಗಳನ್ನು ಬಿಟ್ಟು ಬದುಕಲಾರೆನೇನೋ ! ಅವಳು ಚಿಕ್ಕ ಹುಡುಗಿಯಾಗಿದ್ದಾಗಿನಿಂದಲು ಅವಳನ್ನೇ ನನ್ನ ಹೆಂಡತಿ ಎಂದು ಭಾವಿಸಿಕೊಂಡು ಬಂದಿದೇನೆ, ನನ್ನ ಆಸೆಗಳನ್ನೆಲ್ಲಾ ಅವಳ ಮೇಲೆಯೇ

ಇಟ್ಟುಕೊಂಡೇ ಬದುಕಿದೇನೆ, ಅವಳನ್ನು ನಾನು ಅದೆಷ್ಟೋ ಪ್ರೇಮಿಸದೇ ಇದ್ದಿದ್ದರೆ ನನಗಿಷ್ಟು ಕೋಪ ಅದೇಕೆ ಬರುತ್ತಿತ್ತು? ಅವನು ಇವಳು ಮದುವೆ ಮಾಡಿಕೊಂಡರೆ ನನ್ನ ಜೀವನ ಏನಾಗಬೇಕು ? ನನಗಾರು ಹೆಣ್ಣು ಕೊಡುತ್ತಾರೆ? ಏನು ನೋಡಿ ಕೊಡುತ್ತಾರೆ? ಒಂದು ವೇಳೆ ಕೊಟ್ಟರೆ ಮಾತ್ರ ನಾನು ಪ್ರೇಮಿಸಿದ ನನ್ನ ಮಾವನ ಮಗಳನ್ನು ಬಿಟ್ಟು ಮತ್ತೊಬ್ಬಳನ್ನು ಮದುವೆಯಾಗಬಲ್ಲೆನೇ? ನಾನಿನ್ನೊಬ್ಬಳನ್ನು ಪ್ರೇಮಿಸಿಯೇ ಇಲ್ಲ. ಪ್ರೇಮಿಸಲೂ ಆರೆ. ನನ್ನ ಮಾವನ ಮಗಳಿಗಾದರೂ ನನ್ನ ಮೇಲೊಂದಿಷ್ಟು ಕರುಣೆ ಇರಬಾರದಾಗಿತ್ತೇ?– ಎಂದೆಲ್ಲಾ ಯೋಚಿಸುತ್ತಾ, ನನಗರಿವಿಲ್ಲದಂತೆಯೇ ಕಣ್ಣೀರು ಹಾಕುತ್ತಿದ್ದೆ. ನನ್ನ ತಂಗಿ ನನ್ನ ಹತ್ತಿರಕ್ಕೆ ಅದೇಕೋ ಬಂದಳು, ನನ್ನ ಕಣ್ಣೀರನ್ನು ನೋಡಿ 'ಏಕಣ್ಣಾ ಅಳ್ತಾ ಇದೀಯೇ?' ಎಂದು ಕೇಳಿದಳು. ಅವಳು ಹಾಗೆ ಕೇಳುವತನಕವೂ ನಾನು ಅಳುತ್ತಿರುವೆನೆಂಬುದೇ ನನಗೆ ತಿಳಿಯದು. ಅಷ್ಟರಲ್ಲಿಯೇ ಅವಳ ಗಂಡ, ಕುಶಲಮ್ಮ ಇಬ್ಬರೂ ಅಲ್ಲಿಗೆ ಬಂದುಬಿಟ್ಟರು. ಇದನ್ನೆಲ್ಲಾ ನೋಡಿ ನನ್ನ ಮಾವನ ಮಗಳೂ ಸಹ ಅಲ್ಲಿಗೆ ಬಂದು ದೂರದಲ್ಲಿ ನಿಂತುಕೊಂಡಳು. ನಾನು 'ಏನೂ ಇಲ್ಲ, ಏನೂ ಇಲ್ಲ' ಎನ್ನುತ್ತ ಕಣ್ಣೊರೆಸಿಕೊಂಡೆ. ನಾನು, ನನ್ನ ಮಾವನ ಮಗಳ ಕಡೆಗೆ ನೋಡಬೇಕೆಂದುಕೊಂಡೆನಾಗಲೀ ನೋಡಲಿಲ್ಲ.

೧೯

ಅಲ್ಲಿಂದ ಹೊರಡುತ್ತ, ನನ್ನ ತಂಗಿಯನ್ನೂ, ಅವಳ ಗಂಡನನ್ನೂ ಹಬ್ಬಕ್ಕೆಂದು ನಮ್ಮೂರಿಗೆ ಕರೆದುಕೊಂಡು ಬಂದೆ. ಹಬ್ಬಕ್ಕೆ ಇನ್ನೂ ಎರಡು ಮೂರು ದಿನಗಳಿತ್ತು. ಮನೆಯಲ್ಲಿ ಎಲ್ಲರೂ ನಗುತ್ತ–ಕಲೆಯುತ್ತ ಇರುವರಾಗಲೀ ನನ್ನ ಮಾವನ ಮಗಳು ಮಾತ್ರ ತನ್ನ ಕೋಣೆ ಬಿಟ್ಟು ಈಚೆಗೆ ಬರುತ್ತಿಲ್ಲ. ತಲೆ ಬಾಚಿಕೊಳ್ಳುತ್ತಿಲ್ಲ. ಒಳ್ಳೆ ಸೀರೆ ತೊಡುತ್ತಿಲ್ಲ. ಹಣೆಗೆ ಕುಂಕುಮವಿಟ್ಟುಕೊಳ್ಳುತ್ತಿಲ್ಲ. ಪುಸ್ತಕವನ್ನಾದರೂ ಕೈಯಲ್ಲಿ ಹಿಡಿದುಕೊಳ್ಳುತ್ತಿಲ್ಲ. ಯಾವಾಗ ನೋಡಿದರು ಏನೋ ಯೋಚನೆಯಲ್ಲಿಯೇ ಮುಳುಗಿರುತ್ತಿದ್ದರು. ಅವಳನ್ನು ನೋಡಿದರೆ ನನಗೆ ಎಲ್ಲಿಲ್ಲದ ದುಃಖವಾಯಿತು. ನಾನು ಪ್ರೀತಿಸಿದ ಹೆಣ್ಣು ನನ್ನವಳಾಗದಿದ್ದ ಮಾತ್ರಕ್ಕೆ ಅವಳನ್ನು ನಾನೇಕೆ ಅಷ್ಟು ಬಾಧಿಸಬೇಕು ?

ಬಾಧಿಸಲು ನನಗೇನು ಅಧಿಕಾರವಿದೆ? ನಾನು ಅವಳೊಂದಿಗೆ ಪ್ರತ್ಯೇಕವಾಗಿ ಮಾತನಾಡೋಣವೆಂದರೂ ಮನೆ ತುಂಬ ಜನರಿದ್ದರು. ಮಾತನಾಡುವುದಕ್ಕೆ ಅವಕಾಶವೇ ಸಿಕ್ಕುತ್ತಿಲ್ಲ. ಆ ರಾತ್ರಿ ಎಲ್ಲರೂ ನಿದ್ರಿಸುತ್ತಿದ್ದರು. ನಾನು, ನನ್ನ ಮಾವನ ಮಗಳು ಮಲಗಿದ್ದಲ್ಲಿಗೆ ಹೋಗಿ ಅವಳನ್ನು ಎಬ್ಬಿಸಿದೆ. ಅವಳು ಎದ್ದಳು. ಅವಳನ್ನು ದನಗಳ ಕೊಟ್ಟಿಗೆಗೆ ಕರೆದೊಯ್ದೆ. ಅಲ್ಲಿ ನಾನು ಏನು ಮಾತನಾಡಿದರು ಯಾರಿಗೂ ಕೇಳಿಸುವಂತಿಲ್ಲ. ಯಾರ ನಿದ್ರೆಗೂ ಭಂಗವಾಗುವಂತಿಲ್ಲ.

'ನೀನು ಹೀಗೆ ತಲೆ ಬಾಚಿಕೊಳ್ಳದೆ, ಸೀರೆಯುಟ್ಟುಕೊಳ್ಳದೆ ಇದ್ದರೆ ಹೇಗೆ?' ಎಂದು ಕೇಳಿದೆ. ಅದಕ್ಕವಳು 'ನೀನು ಉಡಬಾರದೆಂದೆಯಲ್ಲಾ?' ಎಂದಳು. 'ಆಗ ಕೋಪದಲ್ಲಿ

ಏನೋ ಅಂದೆ. ನಿನಗೆ ಕೊಂಚ ಭಯವಿರಲಿ ಎಂಬ ಉದ್ದೇಶದಿಂದ ಹಾಗೆ ನುಡಿದೆ. ನಿನಗೆ ಅವನ ಮೇಲೆ ಪ್ರೇಮವಿದ್ದರೆ, ನಿನ್ನನ್ನು ಅವನಿಗೆ ಕೊಟ್ಟು ಮದುವೆ ಮಾಡುವುದಿಲ್ಲವೆಂದೆನೆ? ನೀನು ಹಾಗೆ ಸ್ವತಂತ್ರಿಸುತ್ತಿರುವುದು ಒಳ್ಳೆಯದಲ್ಲವೆಂಬುದಷ್ಟೇ ನನ್ನ ಅಭಿಪ್ರಾಯ. ನೀನಿದನ್ನು ಅರ್ಥ ಮಾಡಿಕೊಳ್ಳುತ್ತಿ ಎಂದಿದ್ದೆ. ನಾನು ಸ್ವಲ್ಪ ದೊಡ್ಡವನಾದ್ದರಿಂದ ನಿನ್ನನ್ನು ಕೋಪದಿಂದ ಗದರಿಸಿಕೊಂಡೆ. ನೀನೂ ಹೀಗೆ ಕೋಪ ಮಾಡಿಕೊಂಡರೆ ಹೇಗೆ? ಅದೂ ಅಲ್ಲದೆ, ನಿನಗೆ ನಾನು ನಾಳೆ ಬರುವ ಬೇಸಗೆಯಲ್ಲಿ ರಜೆಯಲ್ಲಿ ಮದುವೆ ಮಾಡುತ್ತೇನೆ. ಅಮೇಲೆ ನೀನು ನಿನ್ನ ಗಂಡ ಇಬ್ಬರು ನಿಮ್ಮಿಷ್ಟಬಂದ ಹಾಗೆ ಇರಬಹುದು. ಅವನಿಗೆ ಹೊಲದ ಕೆಲಸ ಮಾಡಲು ಗೊತ್ತಿಲ್ಲ. ಹೊಲಗಳನ್ನು ಗೇಣಿಗೆ ಕೊಟ್ಟರೆ, ಇಪ್ಪತ್ತೈದು ಎಕರೆಗೆ ನೂರು ರೂಪಾಯಿಗಳಿಗಿಂತ ಹೆಚ್ಚಿಗೆ ಬರಲಾರದು. ನಿಮ್ಮಿಬ್ಬರ ಮದುವೆಯಾಗುತ್ತಲೇ ನಾನು ನನ್ನ ದಾರಿ ಹಿಡಿದು ಹೊರಟುಹೋಗಿಬಿಡುತ್ತೇನೆ. ಇನ್ನೆಲ್ಲಾ ನಾನು ಮನೆಯಲ್ಲಿದ್ದರೆ, ಮಹಾ ಅಂದ್ರೆ ನಾಲ್ಕು ತಿಂಗಳಿದ್ದೇನು. ಅಂಥಾ ನನ್ನೊಂದಿಗೆ ನಿನಗೇಕೆ ಈ ಪಂಥಾ ? ನನ್ನ ಮೇಲೆ ನಿನಗೇಕೆ ಕೋಪ? ನಿನ್ನ ತಮ್ಮ ಏನು ಮಾಡಿದರೂ ಈ ವರ್ಷ ಪಾಸಾಗುವಂತಿಲ್ಲ. ಅವನ ಓದು ಇಲ್ಲಿಗೆ ನಿಲ್ಲಿಸಿಬಿಡುತ್ತೇನೆ. ಅವನಿಗೆ ಹೊಲದ ಗೈಮೆ ಅಷ್ಟಲ್ಲದಿದ್ದರೂ ಒಂದಿಷ್ಟಾದರೂ ಗೊತ್ತಿದೆ. ಅವನಲ್ಲಿನ್ನೂ ಹುಡುಗುತನವೊಂದಿಷ್ಟು ಹೆಚ್ಚಿಗೆ ಇದೆಯಷ್ಟೆ. ಆದರೆ ನನ್ನ ತಮ್ಮನಿಗಿಂತಲೂ ಅವನು ಹೆಚ್ಚು ಬುದ್ಧಿವಂತ. ಒಳ್ಳೆಯತನ, ಮರ್ಯಾದೆ ಎಲ್ಲಾ ಅವನಲ್ಲಿವೆ. ಅವನೇ ನಿಮ್ಮ ಹೊಲಗಳನ್ನು ನೋಡಿಕೊಳ್ಳುತ್ತಾನೆ. ನೀನು, ನಾಳೆ ಬೆಳಗಾಗುತ್ತಲೇ ತಲೆ ಬಾಚಿಕೊಂಡು, ಒಳ್ಳೆ ಸೀರೆಯುಟ್ಟುಕೊಂಡು ಮನೆಯಲ್ಲಿ ಎಲ್ಲರೊಂದಿಗೆ ನಗುನಗ್ತಾ ಇರಬೇಕು. ನೀನು ಈ ರೀತಿ ಮಾಡದೇ ಇದ್ದರೆ ನಾನು ಮುಂದೆಂದೋ ನಿಮ್ಮ ಮದುವೆಯಾದ ಮೇಲೆ ಹೊರಟುಹೋಗುವಂಥವನು, ನಾಳೆ ಹಬ್ಬವಾದ ಮರುದಿನವೇ ನನ್ನ ತಂಗಿಯನ್ನು ಅವಳ ಅತ್ತೆಯ ಮನೆಗೆ ಕಳಿಸಿಕೊಟ್ಟು, ನನ್ನ ದಾರಿ ಹಿಡಿದು ನಾನು ಹೋಗಿಬಿಡುತ್ತೇನೆ, ನೋಡಿಕೋ. ನೀನು ನಾಳೆ ಏಳುತ್ತಲೇ ತಲೆ ಬಾಚಿಕೊಂಡು, ಒಳ್ಳೆಯ ಸೀರೆಯುಟ್ಟುಕೊಂಡು ನಾಲ್ವರಂತೆ ಇರದೇ ಹೋದರೆ, ನಾನು ನಿನ್ನೊಂದಿಗೆ ಮಾತು ಬಿಡುವುದೊಂದೇ ಅಲ್ಲ, ನೀನೆಷ್ಟು ದಿನ ಹೀಗೆಯೇ ಇರುತ್ತೀಯೋ ನಾನು ಅಷ್ಟು ದಿನವೂ ಉಪವಾಸವಿರುತ್ತೇನೆ. ಇದು ಖಂಡಿತ ತಿಳಿದುಕೋ. ನಿನ್ನನ್ನು ಇನ್ನು ಮೇಲೆ ನಾನೇನೂ ಅನ್ನುವುದಿಲ್ಲ. ಅನ್ನಬೇಕಾದ ಅಗತ್ಯವೂ ನನಗಿಲ್ಲ. ನಾನು ಅನ್ನಬೇಕಾದವನೂ ಅಲ್ಲ. ನಿನ್ನ ಮೇಲೆ ನನಗಷ್ಟು ಕೋಪ ಬರಲು ನನ್ನ ದುಃಖವೇ ಕಾರಣವಾಗಲೀ ಮತ್ತೊಂದಲ್ಲ. ಈ ನಿಮ್ಮ ಮನೆಯೇ ನನಗೆ ಇಷ್ಟು ಮಾತ್ರ ಆಶ್ರಯ ಕೊಡದೇ ಇದ್ದಿದ್ದರೆ ನಾನೇನಾಗಿರುತ್ತಿದ್ದೆನೋ ನಾನರಿಯೆ. ಇಷ್ಟು ದಿನಗಳವರೆಗೆ ನಿಮ್ಮ ಮನೆಯಲ್ಲಿದ್ದುಕೊಂಡು, ನಾನು ಮಹಾರಾಜನ ಹಾಗೆ ದೊಡ್ಡಸ್ತಿಕೆ ನಡೆಸಿದೆ. ಎರಡು ವರ್ಷ ನಾನು ತಲೆ ಮರೆಸಿಕೊಂಡಿರಲು ಅನುವು ಮಾಡಿಕೊಟ್ಟ ನನ್ನ ಸಾಕುತಂದೆಯ ಋಣವನ್ನು ಅಷ್ಟೋ ಇಷ್ಟೋ ತೀರಿಸಿದ್ದೇನೆ' ಎನ್ನುತ್ತಿರುವಂತೆಯೇ ನನ್ನ ಕಂಠ ಗದ್ಗದಗೊಂಡಿತು. ನನ್ನ ಕಣ್ಣುಗಳಿಂದ ಕಣ್ಣೀರು ಪ್ರವಹಿಸತೊಡಗಿತು.

ಸ್ವಲ್ಪ ಹೊತ್ತಾದ ಮೇಲೆ, ಹೀಗೆಂದೆ–'ನಾನು ನಿನ್ನನ್ನು ಇಷ್ಟು ದಿನವೂ ಪ್ರೀತಿಸಿದೆ. ನಾನು ಪ್ರೀತಿಸುತ್ತಿದ್ದೇನೆಂಬುದು ಅನೇಕ ಸಮಯಗಳಲ್ಲಿ ನಿನಗೆ ಗೊತ್ತಿದೆ. ನೀನು ಮತ್ತಾರನ್ನೋ ಮದುವೆ ಮಾಡಿಕೊಂಡರೆ ನಾನು ಬದುಕಲಾರೆ. ನಾನು ಹುಚ್ಚನಾಗಿಬಿಡುತ್ತೇನೇನೋ! ಆದರೆ ನನಗೆ ಆ ದುಃಖವಿಲ್ಲ. ನಾನೀಗ ಮತ್ತೊಂದು ವಿಧವಾಗಿ ಜೀವಿಸಲೂ ಆರೆ. ನಿಮ್ಮ ಮನೆಯಲ್ಲೂ ಇರಲಾರೆ' ಎಂದು ಕೈಗಳನ್ನು ನೆತ್ತಿಗಿಟ್ಟುಕೊಂಡು ಕುಸಿದು ಕುಳಿತೆ. ಅವಳು ಅಳುತ್ತಿದ್ದಳು. ಸ್ವಲ್ಪ ಸಮಯದ ಬಳಿಕ 'ಮಾವಯ್ಯಾ' ನಾನು ತಪ್ಪು ಮಾಡಿದೆ. ನನ್ನನ್ನು ಕ್ಷಮಿಸು. ನೀನು ನನ್ನನ್ನೇ ಮದುವೆ ಮಾಡಿಕೋ. ಇದುವರೆಗೆ ಆದದ್ದೇನೋ ಆಯಿತು. ನಾನೂ ಮರೆತುಬಿಡುತ್ತೇನೆ. ನೀನೂ ಮರೆತುಬಿಡು. ನಾನು ಬುದ್ಧಿ ಇಲ್ಲದವಳಾದ್ದರಿಂದ ಇಷ್ಟೆಲ್ಲಾ ಯೋಚಿಸದೇ ಹೋದೆ. ಹೆಂಗಸಿಗೆ ಎಷ್ಟಿದ್ದರೂ ಮೊಣಕಾಲ ಕೆಳಗೇ ಬುದ್ಧಿ ಅನ್ನುತ್ತಾರಲ್ಲಾ. ನಾನೂ ಹೆಣ್ಣು. ನನಗಷ್ಟು ಬುದ್ಧಿಯಿಲ್ಲ. ನಿನ್ನ ತಮ್ಮನನ್ನು ಇನ್ನು ಇಲ್ಲಿಗೆ ಕರೆದುಕೊಂಡು ಬರಬೇಡ. ನಾಳೆಯೇ ಮುಹೂರ್ತ ನಿಶ್ಚಯಿಸಿ ಬೇಗ ಮದುವೆ ಮಾಡಿಕೊಂಡುಬಿಡು' ಎಂದಳು. ನಾನು ತಟಕ್ಕನೆ ಎದ್ದು ನಿಂತುಕೊಂಡು– 'ನಾನು ನಿನ್ನನ್ನು ಮದುವೆ ಮಾಡಿಕೊಳ್ಳಲು ಸಾಧ್ಯವಿಲ್ಲ. ನನ್ನ ಮೇಲೆ ನಿನಗೆ ಪ್ರೀತಿಯಿಲ್ಲ. ನಾನು ನಿನ್ನ ಸುಖವನ್ನು ಹಾಳುಮಾಡುವುದಿಲ್ಲ. ಆದರೂ–ಇಗೋ, ಇಲ್ನೋಡು–ನೀವಿಬ್ರೂ ಕೇವಲ ಸ್ನೇಹದಿಂದಿದ್ದಿರೋ ಅಥವಾ ಸಂಸಾರವನ್ನು ಮಾಡಿದಿರೋ?' ಎಂದು ಕೇಳಿಬಿಟ್ಟೆ ಅವಳೇನೂ ಮಾತನಾಡಲಿಲ್ಲ ! ನನ್ನ ಮೂರ್ಖತ್ವಕ್ಕೆ ನಾನು ತುಂಬ ನಾಚಿದೆ. ತಟಕ್ಕನೆ, 'ಇಲ್ನೋಡಮ್ಮಾ ! ಈಗ ನಾನಾಡಿದ ಮಾತುಗಳನ್ನೆಲ್ಲಾ ಮರೆತುಬಿಡು. ನಿನ್ನನ್ನು ನಾನು ಮದುವೆಯಾಗುವುದು ಸಾಧ್ಯವಿಲ್ಲ. ನಾನು ಮಾಡಿಕೊಳ್ಳಲಾರೆ. ನನ್ನ ಮೇಲೆ ನಿನಗೆ ಕರುಣೆಯುಂಟಾಗಿ ಹೀಗೆ ಹೇಳುತ್ತಿರುವೆಯಾಗಲೀ ಇನ್ಮೇಲೆ ಹೀಗಾಡಬೇಡ. ನಾಳೆ ಬೆಳಗಾಗುತ್ತಲೇ ಮನೆಯಲ್ಲಿ ನಗುಮುಖದಿಂದಿರು. ನೀನು ಹೀಗೆಯೇ ಇದ್ದರೆ ನಾನು ಉಪವಾಸ ಮಾಡಿ, ಹಬ್ಬವಾದ ಮರುದಿನವೇ ಹೊರಟುಹೋಗಿಬಿಡುತ್ತೇನೆ. ನೋಡಿಕೋ' ಎಂದು ತಿಳಿಸಿ, ಅಲ್ಲಿ ನಿಲ್ಲದೆ ಹೊರಟು ಬಂದೆ. ಅವಳೂ ಸಹ ಸ್ವಲ್ಪ ಹೊತ್ತಾದ ಮೇಲೆ ಮನೆಯೊಳಗೆ ಹೋಗಿ ಮಲಗಿಕೊಂಡಳು.

ಮರುದಿನ ಬೆಳಿಗ್ಗೆಯೇ ಎದ್ದು, ತಲೆಗೆ ಸ್ನಾನ ಮಾಡಿ, ಒಳ್ಳೆಯ ಸೀರೆಯನ್ನುಟ್ಟು, ಸ್ವಲ್ಪ ಹೊತ್ತು ಯಾರೊಂದಿಗೂ ಮಾತನಾಡದೇ ಇದ್ದರೂ ಪುನಃ ಮನೆಯಲ್ಲಿ ಸಂಭ್ರಮದಿಂದ ತಿರುಗಾಡತೊಡಗಿದಳು.

ನನ್ನ ಮನಸ್ಸಿಗೆ ಕಲ್ಲು ಬಿತ್ತು.

ನಾನೇನು ಮಾಡಲಿ? ನನ್ನ ಜೀವನ ಏನಾಗಬೇಕು ? ನಾನು ಹಗೆ ತೀರಿಸಿಕೊಳ್ಳೋಣವೆಂದರೂ ಯಾರ ಮೇಲೆ ತೀರಿಸಿಕೊಳ್ಳಲಿ ? ಅವನನ್ನು ನಾನೇನು ಮಾಡಬಲ್ಲೆ? ನಾನು ಆ ಊರಿಗೆ ಹೋಗಿ ಅವನನ್ನು ಹೊಡೆಯಲು ಸಿದ್ಧನಾದೆನೆಂದಿಟ್ಟುಕೊಳ್ಳಿ ; ಆದರೆ ಆ ಊರಿನವರು ನಾಲ್ಕು ಜನ ನನ್ನನ್ನೇ ಛೀ ಎಂದಾರು! ಅದು ಅಲ್ಲದೆ, ನನ್ನ

ಮೇಲೆ ಕೇಸು ಹಾಕಿಯೇ ಹಾಕುತ್ತಾರೆ. ಪೋಲೀಸ್ ಜನರಲ್ಲಿ ಅವನು ಪ್ರಭಾವಶಾಲಿ. ಅವನು ನನ್ನನ್ನೇನಾದರೂ ಮಾಡಿಸಿಬಿಡಬಲ್ಲ.

ಆ ದಿನ ಊಟ ಮಾಡಿ ನಾನು ಹೊಲದ ಕಡೆಗೆ ಹೊರಟೆ. ನನಗೇನೂ ತೋಚುತ್ತಿಲ್ಲ. ಜೀತದಾಳಿನೊಂದಿಗೆ ಮಾತನಾಡಲಿಲ್ಲ. ಸುಮ್ಮನೆ ಹೊಲಗಳಲ್ಲಿ ಸುತ್ತಾಡಿದೆ. ಹೊಲದಲ್ಲಿ ಇಬ್ಬರು ಮೂವರು ನನ್ನನ್ನು ಮಾತನಾಡಿಸಿದರು. ಏನು ಮಾತನಾಡಿಸಿದರೋ, ನಾನೇನು ನುಡಿದೆನೋ ನನಗೆ ತಿಳಿಯದು ! ಸುಮ್ಮನೆ ಸುತ್ತಿದೆ. ಸ್ವಲ್ಪ ಹೊತ್ತಿಗೆ ಅದಾವುದೋ ಊರಿನ ಸಮೀಪದಲ್ಲಿದ್ದೆ ! ಪರಿಕಿಸಿ ನೋಡಿದರೆ ಅದು ನಮ್ಮೂರಲ್ಲ. ಆ ಊರು ನಮ್ಮೂರಿಗೆ ಹರದಾರಿಗಳ ದೂರದ ಊರು. ಮೈಮೇಲೆ ಪರಿವೆಯಿಲ್ಲವೆ, ಸುತ್ತಾಡುತ್ತಾ ಅಲ್ಲಿಗೆ ಬಂದೆನೇನೋ ! ಮನೆಗೆ ಹಿಂತಿರುಗಿ ಹೋಗಲು ತುಂಬ ಹೊತ್ತಾಗುತ್ತದೆ. ಆಗಾಗಲೇ ಹೊತ್ತು ಕಂತುತ್ತಾ ಇದೆ. ಗಾವುದ ದೂರ ನಡೆಯಲಾರೆನೇ ಎಂದುಕೊಂಡು ಹಿಂದಕ್ಕೆ ತಿರುಗಿದೆ. ದಾರಿಬಿದ್ದು ಹೊರಟೆ. ಎದೆಯಲ್ಲಿ ಎಂಥದೋ ದಿಗಿಲು. ಏನೇನೋ ಆಲೋಚನೆಗಳು. ದಾರಿ ತಪ್ಪಿಬಿಟ್ಟಿರುವೆನೆಂಬುದು ತಿಳಿಯಿತು. ಎಲ್ಲಿರುವೆನೋ ಸರಿಯಾಗಿ ತಿಳಿಯದಾಯಿತು. ದೂರದಲ್ಲಿ ಏನೋ ಬೆಳಕಿನಂಥದು ಕಾಣಿಸಿಕೊಂಡಿತು. ತಟಕ್ಕನೆ ನನಗೆ ಜ್ಞಾಪಕಕ್ಕೆ ಬಂದಿತು–ನನ್ನ ಚಿಕ್ಕಂದಿನಲ್ಲಿ, ನನ್ನ ಸಾಕು ತಂದೆಯ ಊರು ಸೇರಿದ ರಾತ್ರಿ–ಅದೆಂಥ ಸ್ಥಿತಿಯಲ್ಲಿದ್ದೆನೋ ಪುನಃ ಅಂಥದೇ ಸ್ಥಿತಿಯಲ್ಲಿದ್ದೇನೆ! ನನ್ನ ಜೀವನವೆಲ್ಲಾ ಮತ್ತೆ ಮೊದಲಿಗೇ ಬಂದಿತ್ತು. ಇನ್ನೇನೂ ಮಾಡುವುದಕ್ಕಿಲ್ಲದೆ, ಆ ಬೆಳಕಿನತ್ತ ಹೆಜ್ಜೆ ಹಾಕತೊಡಗಿದೆ. ಸ್ವಲ್ಪ ಹೊತ್ತಿಗೆ ನಾನು ಕೆಲವು ಗುಡಿಸಲುಗಳ ಬಳಿಗೆ ಬಂದೆ. ಆ ಗುಡಿಸಲುಗಳು ಹಾವಾಡಿಗರ ಗುಡಿಸಲುಗಳು ! ನಾನು ಮತ್ತೆ ನನ್ನ ಜೀವನದ ಮೊದಲಿಗೆ ಬಂದೆನೆಂಬ ಊಹೆ ಎಷ್ಟು ಸತ್ಯ!– ಎಂದೆನ್ನಿಸಿತು. ನಾನು ಅಲ್ಲಿಂದ ಹಿಂತಿರುಗಿ ಹೋಗೋಣವೇ ಎಂದುಕೊಳ್ಳುತ್ತಿರುವಾಗ, 'ಯಾರು ಅದು?' ಎಂಬ ಧ್ವನಿ ಕೇಳಿಸಿತು. ಆ ಧ್ವನಿಯನ್ನು ಗುರುತು ಹಿಡಿದೆ. ಅವನು ನಮ್ಮ ಹಾವಾಡಿಗ! ಕೂಡಲೇ ನನಗೆ ಭಯವಾಯಿತು. 'ಪುನಃ ಇವನ ಕೈಗೆ ಸಿಕ್ಕಿದೆನಲ್ಲಾ!' ಎನಿಸಿತು. 'ಆದರೆ ನಾನೀಗ ಮೊದಲಿನ ಹಾಗೆ ನಿಸ್ಸಹಾಯನೇನೂ ಅಲ್ಲವಲ್ಲಾ' ಎನಿಸಿತು. ಹ್ಞ! ನಿಸ್ಸಹಾಯನಲ್ಲದಿದ್ದರೆ ಮತ್ತೇನು? ಆದರೂ ಅಂದು ಈ ಹಾವಾಡಿಗ ನನ್ನನ್ನೇನು ಮಾಡಬೇಕೆಂದಿದ್ದ? ನನ್ನನ್ನು ತನ್ನ ಹತ್ತಿರವಿಟ್ಟುಕೊಂಡು ಸಾಕಬೇಕೆಂದುಕೊಂಡಿದ್ದ. ನಾನು ಇವನ ಹತ್ತಿರವಾದರೂ ಇದ್ದುಬಿಟ್ಟಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು. ಈಗ ಅಷ್ಟಕ್ಕಿಂತ ಹೆಚ್ಚಿಗೆ ತಾನೇ ಏನು ಮಾಡಿದ್ದೇನೆ ನಾನು ? ಬೇರೆಯವರ ಪೋಷಣೆಯಲ್ಲಿ, ಬೇರೆಯವರ ಹಂಗಿನಲ್ಲಿ ತಾನೇ ಬೆಳೆದಿದ್ದು!?

ನಾನು ಹೀಗೆ ಯೋಚಿಸುತ್ತಿರುವಾಗ ಅವನು ಪುನಃ ಗದರಿಸಿದ. ನಾನು 'ನಾನು' ಎಂದೆ. ಅವನಿಗೆ ನನ್ನ ಧ್ವನಿ ಅದೆಷ್ಟು ಜ್ಞಾಪಕವೋ! 'ನೀನಾ ಬುದ್ದೀ!' ಎನ್ನುತ್ತ ಎದ್ದುಬಂದು 'ಅರ್ಧ ರಾತ್ರಿಯ ಹೊತ್ತು ಇತ್ತ ಬಂದುಬಿಟ್ಟೆಯಲ್ಲಾ?' ಎಂದು ಪರಾಮರ್ಶಿಸಿದ. ಅವನಿಗೆ ನನ್ನ ವಿಷಯವನ್ನೆಲ್ಲಾ ಹೇಳಲೇ? ಬೇಡವೇ?– ಎನ್ನಿಸಿತು. ಅವನೇನು ಸಹಾಯ ಮಾಡಬಲ್ಲ?– ಎಂದೆನ್ನಿಸಿತು–ಯಾವ ರೀತಿ ಸಹಾಯ ಮಾಡಬಲ್ಲ?– ಎನಿಸಿತು. ನಾನು 'ಏನೂ ಇಲ್ಲ,

ಯಾವುದೋ ಊರಿಗೆ ಹೋಗುತ್ತಿದ್ದವನು ದಾರಿ ತಪ್ಪಿ ಬಂದೆ. ಅವನು 'ಕೊಂಚ ಹೊಗೆ ಸೊಪ್ಪಿದ್ದರೆ ಕೊಡು ಬುದ್ದೀ. ಚುಟ್ಟಾ ಸೇತ್ತೇನೆ' ಎಂದ. ನಾನು ಜೇಬಿನಿಂದ ಹೊಗೆ ಸೊಪ್ಪು, ಬೆಂಕಿ ಪೊಟ್ಟಣ ತೆಗೆದು ಅವನ ಕೈಗೆ ಕೊಟ್ಟೆ ಅವನು ಚುಟ್ಟಾ ಸುತ್ತಿ, ಬೆಂಕಿ ಕಡ್ಡಿಯನ್ನು ಕೊರೆದು, ಅಂಟಿಸಿಕೊಂಡು, ಆ ಕಡ್ಡಿಯ ಬೆಳಕನ್ನು ನನ್ನ ಮುಖದತ್ತ ಹಿಡಿದು ನೋಡಿದ. ಕಡ್ಡಿ ಆರಿಹೋಯಿತು. ಅವನು ಎರಡು ದಮ್ಮು ಎಳೆದು 'ಬುದ್ದೀ ! ನಿನ್ನ ಮುಖವೇಕೆ ಹೀಗಿದೆಯಲ್ಲಾ? ನೀನು ದಾರಿತಪ್ಪಿ ಬರಲಿಲ್ಲ. ಏನೋ ಆಪತ್ತಿನಲ್ಲಿದೀಯೇ. ನಾನಿಲ್ಲಿದ್ದೇನೆಂಬುದು ನಿನಗೆ ಗೊತ್ತು. ಆದ್ದರಿಂದ ನನ್ನನ್ನು ಹುಡುಕಿಕೊಂಡೇ ಬಂದಿದೀಯೆ! ಬಾ, ಹೋಗೋಣ' ಎಂದು ಹೇಳಿ ನಡೆಯಲಾರಂಭಿಸಿದ.

ನಾನು ಅವನನ್ನು ಹಿಂಬಾಲಿಸಿದೆ. ಅಲ್ಲಿಗೆ ಒಂದೂವರೆ ಮೈಲಿ ದೂರದಲ್ಲೊಂದು ಹುಣಿಸೆಯ ತೋಪಿದೆ. ಅಲ್ಲಿ ಕಳ್ಳರಿರುತ್ತಾರೆ ಎಂಬ ಪ್ರತೀತಿ ಉಂಟು. ಅಲ್ಲಿಗೆ ನರಪ್ರಾಣಿ ಎಂದೂ ಹೋದದ್ದಿಲ್ಲ. ಅವನು ಅಲ್ಲಿಗೆ ಕರೆದೊಯ್ದು ಒಂದು ಕಡೆ ಕುಳ್ಳಿರಿಸಿದ. ನೆಲವನ್ನೆಲ್ಲಾ ಸೊಗಸಾಗಿ ಹಸನುಗೊಳಿಸಿತ್ತು. ನಾವಿಬ್ಬರು ಕುಳಿತುಕೊಂಡೆವು. ಅವನು 'ಬುದ್ದೀ, ನಿನ್ನ ಆಪತ್ತಿಗೆ ನಾನು ನನ್ನ ಜೀವವನ್ನಾದ್ರೂ ಬಲಿ ಕೊಡ್ತೇನೆ. ನೀನು ಒಳ್ಳೆ ವಂಶದ ಮಗ. ನಾನು ಹಾವಾಡಿಗ ಮುಂಡೇಮಗ. ಆದ್ರೂ ನಿನ್ನನ್ನು ನೋಡ್ತಾ ಇದ್ರೆ ಅದೇಕೋ ನನ್ನ ಜೀವ ನಿಲ್ಲಲೊಲ್ಲದು. ಸಾಯುವ ದಿನವೇನಾದರೂ ನನಗೆ ಬಂದರೆ–ಆ ದಿನ ನಾನು ನಿನ್ನ ಬಾಗಿಲ ಬಳಿ ಪ್ರಾಣ ಬಿಡ್ತೇನೆ. ನಿನ್ನ ಆಪತ್ತು ಏನಿದೆಯೋ ನನ್ನೊಂದಿಗೆ ಹೇಳು. ಹಾವಾಡಿಗ ನನ್ಮಗ, ಇವನೇನು ಸಹಾಯ ಮಾಡಿಯಾನು ! ಅಂತ ಅಂದ್ಕೋಬೇಡ. ನೀನು ಹೇಳದೇ ಹೋದ್ರೆ, ಇಲ್ನೋಡು, ನಾನಿಲ್ಲಿಯೇ ಈ ಕಠಾರಿಯಿಂದ ತಿವಿದುಕೊಂಡು ಪ್ರಾಣ ಕಳ್ಕೊಳ್ತೇನೆ. ನೋಡಿದ್ಯೋ ನನ್ನ ನಡುವಿನಲ್ಲಿರೋ ಈ ಕಠಾರಿಯನ್ನು' ಎಂದು ತೋರಿಸಿದ. ನಾನು ಆ ಕಠಾರಿಯನ್ನು ನನಗೆ ಕೊಡು ಎಂದು ಕೇಳಿದೆ. ಅವನು 'ಊಹುಂ, ನಾನು ಕೊಡೋಲ್ಲ' ಎಂದ. 'ನಾನು ನನ್ನ ಕಷ್ಟವನ್ನು ನಿನ್ನೊಂದಿಗೆ ಹೇಳಿಕೊಳ್ಳೋಣವೆಂದು ನಾನಿಲ್ಲಿಗೆ ಬರಲಿಲ್ಲ. ದಾರಿ ತಪ್ಪಿ ಬಂದರೆ ಕಂಡುಬಂದೆ' ಎಂದು ಹೇಳಿದೆ. ಆದರೆ ಅವನು 'ಹೋಗಲಿ ಬಿಡು. ಭಗವಂತನೇ ನಿನ್ನನ್ನು ನನ್ನ ಹತ್ರ ಕರ್ಕೊಂಡು ಬಂದ. ಅದೇನಿದ್ದರೂ ನೀನು ಹೇಳಿಯೇ ತೀರಬೇಕು' ಎಂದು ನುಡಿದ. ನಾನಿನ್ನು ತಡೆಹಿಡಿಯದಾದೆ. 'ಲೋ, ಆ ದಿನ ನೀನು ನನ್ನನ್ನು ಕರೆದೊಯ್ಯುತ್ತೇನೆಂದಾಗ ನಾನು ನಿನ್ನ ಹಿಂದೆಯಾದರೂ ಬರದೇ ಹೋದೆ. ಬಂದಿದ್ದರೆ ಈ ಪೀಡೆಯೆಲ್ಲಾ ಇರ್ತಾ ಇರ್ಲಿಲ್ಲ' ಎಂದು ನಾನು ನನ್ನ ಕಥೆಯನ್ನೆಲ್ಲಾ ಅವನಿಗೆ ತಿಳಿಸಿದೆ. ಅವನು ನನ್ನ ಕಥೆಯನ್ನೆಲ್ಲಾ ಕೇಳಿ, ತುಂಬ ಹೊತ್ತು ಆಲೋಚಿಸಿದ. ಕೊನೆಗೆ 'ಬುದ್ದೀ ನಿನ್ನ ಸೇಡನ್ನು ತೀರಿಸುತ್ತೇನಾಗಲೀ ಆ ಕೆಲಸವನ್ನು ಮಾತ್ರ ಬ್ರಹ್ಮನೂ ಮಾಡಲಾರ!' ಎಂದ. 'ಯಾವ ಕೆಲಸವೋ?' ಎಂದು ಕೇಳಿದೆ. 'ಯಾವ ಕೆಲಸವೆನ್ನುತ್ತೀಯಾ ? ನಿನಗೆ ಗೊತ್ತಿಲ್ಲವೇ ಬುದ್ದೀ? ಗೊತ್ತಿದೆ ! ನಿನ್ನ ಮಾವನ ಮಗಳನ್ನು ನಿನಗೆ ಲಗ್ನ ಮಾಡಿಸುವುದು.–ಈ ಕೆಲಸ ಮಾತ್ರ ನನ್ನಿಂದಾಗದು. ಆ ಹುಡುಗ ನನ್ನ ಸ್ವಾಮಿಯ ಮಗನಾಗದೇ ಇದ್ದಿದ್ದರೆ ಮಾಡಿಬಿಡುತ್ತಿದ್ದೆ.

ಆ ಹುಡುಗನನ್ನು ನಾನೇನಾದರೂ ಮಾಡಿದರೆ, ನೀನು ಕಟ್ಟಿಕೊಂಡ ಆಸೆಯ ಗೋಪುರವನ್ನು ನೆಲಸಮ ಮಾಡಿದಂತಾಗುತ್ತದೆಯೇ ಹೊರತು ಮತ್ತಿನ್ನೇನೂ ಅಲ್ಲ. ನಿನಗೆ ನಾನೇನೂ ಸಹಾಯ ಮಾಡಲಾರೆ. ನಾನಂದೇ ಸಾಯಬೇಕಾಗಿತ್ತು. ನಿನಗೆ ಹಿಂದೆಂದೋ ನಾನು ಮಾಡಿದ ಅಪಕಾರಕ್ಕೆ ಬದಲಾಗಿ ನಿನಗೆ ಉಪಕಾರ ಮಾಡಿಯೇ ಸಾಯಬೇಕೆಂದು ಇಷ್ಟು ದಿನ ಬದುಕಿದ್ದೆ ಇಷ್ಟು ದಿನಗಳವರೆಗೆ–ನೀನು ದೊರೆಯ ಹಾಗೆ ಸುಖಪಡುತ್ತಿರುವಿ ಎಂದೇ ನಾನೆಷ್ಟೋ ಸಂತೋಷಪಟ್ಟಿದ್ದೆ. ಮೇಲೆ ಒಂದಿಷ್ಟೂ ತೋರಿಸಿಕೊಳ್ಳದೆ, ಒಳಗೇ ನೀನಿಷ್ಟು ಕಷ್ಟ ಅನುಭವಿಸುತ್ತಾ ಇದೀಯೆಂಬುದು ನನಗೆ ತಿಳಿಯದು ಬುದ್ದೀ. ನಾನು ನಿನಗೇನು ಸಹಾಯ ಮಾಡಲಾರೆ ! ನಿನಗೇನು ಸಹಾಯ ಮಾಡಲಾರೆ ! ನೀನು ಎದ್ದು ಹೋಗಿಬಿಡು. ಹೋಗಿಬಿಡು ! ನನ್ನ ಹತ್ತಿರಕ್ಕೆ ಯಾಕೆ ಬಂದೆ?' ಎಂದವನೇ ಎದ್ದು ಓಡಿಹೋಗಿಬಿಟ್ಟ! ನಾನು ಕರೆಯೋಣವೆಂದುಕೊಳ್ಳುವಷ್ಟರಲ್ಲಿಯೇ, ನನ್ನ ಕರೆ ಕೇಳದಷ್ಟು ದೂರ ಹೋಗಿಬಿಟ್ಟಿದ್ದ.

ಮೂಡಲು ಬೆಳ್ಳಂಬೆಳಕಾಗುತ್ತಿತ್ತು. ಕಾಗೆಗಳು ಕೂಗುತ್ತಿದ್ದುವು. ನಾನು ಅಲ್ಲಿಂದ ಹೊರಟು ಬಂದೆ. ಊರಿನ ಕಡೆಗೆ ಹೊರಟರೆ, ನಾನು ಈ ಹುಣಿಸೆಯ ತೋಪಿನಿಂದ ಬೆಳಿಗ್ಗೆಯೇ ಹೊರಟುಬರುವುದನ್ನು ಯಾರಾದರೂ ನೋಡಿದರೆ–ನಾನು ಕಳ್ಳರೊಂದಿಗೆ ಷರೀಕಾಗಿದ್ದೇನೆ ಎಂದು ಬಗೆದಾರು–ಎಂದುಕೊಂಡು, ಸುತ್ತುಬಳಸಾದರೂ ಆಗಲಿ ಎಂದು ಊರ ದಾರಿ ಬಿಟ್ಟು ಅಡ್ಡದಾರಿ ಹಿಡಿದು ಬಂದೆ. ನಾನು ಮನೆಗೆ ಬರುವಷ್ಟರೊಳಗೆ ಒಂದೂವರೆ ಜಾವ ಹೊತ್ತೇರಿತ್ತು. ಆ ದಿನವೇ ಹಬ್ಬ. ನಾನು ನಿನ್ನೆ ಮಧ್ಯಾಹ್ನ ಹೊರಟುಹೋದವನು ಇಷ್ಟು ಹೊತ್ತಾದರೂ ಬಾರದೇ ಇದ್ದುದರಿಂದ ಮನೆಯಲ್ಲಿ ಎಲ್ಲರೂ ಬಗೆಬಗೆಯಾಗಿ ಕಳವಳಗೊಂಡಿದ್ದರು. ಗಾಬರಿಯಿಂದಿದ್ದರು. ಎಲ್ಲರೂ ಒಂದೊಂದು ತೆರನಾಗಿ ಅಂದುಕೊಂಡರಂತೆ. ನನ್ನ ಮಾವನ ಮಗಳು–ನಾನು ನಿಜವಾಗಿಯೂ ಎಲ್ಲಿಗೋ ಹೊರಟುಹೋಗಿಬಿಟ್ಟಿರುವೆನೆಂದೇ ಬಗೆದಳಂತೆ. ಚಿಕ್ಕಮ್ಮ, ಕುಶಲಮ್ಮ, ನನ್ನ ತಂಗಿ ಮೂವರೂ ಸೇರಿ ಅವಳಿಗೆ ನಾನಾ ಮಾತುಗಳನ್ನಾಡಿದರಂತೆ. ನಾನು ಹೊಸಲೊಳಗೆ ಕಾಲಿಡುತ್ತಲೇ–ನಾನವಳ ಕಣ್ಣಿಗೆ ಬೀಳುತ್ತಲೇ–ಅವಳು ಓಡಿಬಂದು ನನ್ನನ್ನು ಅಪ್ಪಿಕೊಂಡುಬಿಟ್ಟಳು. 'ಮಾವಯ್ಯಾ !' ಎಂದು ರೋದಿಸಲಾರಂಭಿಸಿದಳು. ನಾನು 'ಯಾಕೆ ಅಳ್ತೀಯೇ? ನಾನು ತಂಗ್ಯಮ್ಮನಿಗೆ, ಆಕೆಯ ಗಂಡನಿಗೆ ಹೊಸ ಬಟ್ಟೆ ಕೊಂಡು ತರಲು ಹೋಗಿದ್ದೆ' ಎಂದೆ. ಅವಳು 'ಬಟ್ಟೆಗಳನ್ನು ಆವೊತ್ತೇ ಕೊಂಡು ತಂದು ಮನೆಯಲ್ಲಿಟ್ಟಿದೀಯಲ್ಲಾ?' ಎಂದಳು. ನನ್ನ ಚಿಕ್ಕಮ್ಮ 'ಖಾಲಿ ಕೈಯಲ್ಲಿ ಬಂದೆಯಲ್ಲಾ? ಕೊಂಡು ತರಲಿಲ್ಲವೇಕೆ?' ಎಂದು ಪ್ರಶ್ನಿಸಿದಳು. ನಾನು ಸುಳ್ಳಾಡಿದರೂ ನಿಲ್ಲದಾಯಿತು. ನಾನು ಕೊನೆಗೆ ಕಣ್ಣು ಪಿಳಿಪಿಳಿ ಬಿಡಬೇಕಾಯಿತು. ಅವರೆಲ್ಲರು 'ನಮ್ಮನ್ನೆಲ್ಲಾ ಬಿಟ್ಟು ಹೋಗಬೇಡ ಕಣಾ ! ನಿನಗೆ ಬಂದ ಕಷ್ಟವಾದರೂ ಏನು?' ಎಂದು ಕಳಕಳಿಯಿಂದ ಕೇಳಿಬಿಟ್ಟರೆ ನನ್ನ ಗತಿ ಏನು? ಒಳ್ಳೆ ದೊರೆಮಗ ದೊರೆತಿದಾನೆ ಅಂತ ಅಂದುಕೊಂಡಿಪ್ಪಿ, ನನ್ನ ಕಷ್ಟಗಳು ಕೊನೆಗೊಂಡುವು ಅಂತ ಭಾವಿಸಿಕೊಂಡಿಪ್ಪಿ, ನೀನು

ಹೊರಟುಹೋಗಿಬಿಟ್ರೆ ನನ್ನನ್ನು ನಾಯಿ ಕೂಡಾ ಮೂಸಿ ನೋಡಲಾರದು' ಎಂದು ನನ್ನ ಕೈ ಹಿಡಿದುಕೊಂಡು ರೋದಿಸಿದಳು.

ಸ್ವಲ್ಪ ಹೊತ್ತಿಗೆ ಈ ಗಂಜರ ಗೋಳೆಲ್ಲಾ ಕಡಮೆಗೊಂಡಿತು. ನಾನು ಸ್ನಾನ ಮಾಡಿ ಊಟ ಮಾಡಿದೆ. ಬಳಿಕ ಹೋಗಿ ಮಲಗಿಕೊಂಡೆ. ನನಗೆ ಎಲ್ಲಿಲ್ಲದ ನಿದ್ರೆ ಬಂದುಬಿಟ್ಟಿತು. ಎಚ್ಚರಗೊಂಡಾಗ ಮನೆಯಲ್ಲಿ ದೀಪಗಳನ್ನು ಬೆಳಗಿಸಿದ್ದರು. ಹೊಟ್ಟೆ ಚುರ್ರೆನ್ನುತ್ತಿತ್ತು. ನನ್ನ ಮಾವನ ಮಗಳು ಅಡುಗೆ ಮಾಡಿದಳು. ಬೇರೆಯವರನ್ನು, ಯಾರನ್ನೂ ಅಡುಗೆ ಮಾಡಗೊಡದೆ ತಾನೇ, ತನ್ನ ಕೈಯಾರೇ ಅಡುಗೆ ಮಾಡಿದ್ದಳು. ಗಾರಿಗೆಗಳನ್ನು ಮಾಡಿದ್ದಳು. 'ಮಾವಯ್ಯಾ, ಬಿಸಿನೀರು ತೋಡಿಟ್ಟಿರುವೆ ಸ್ನಾನ ಮಾಡಿ ಬಾ' ಎಂದಳು. ಸ್ನಾನ ಮಾಡಿಕೊಂಡು ಬಂದು ಊಟಕ್ಕೆ ಕುಳಿತೆ. ಗಾರಿಗೆಗಳನ್ನು ತಿನ್ನುತ್ತಿರುವಾಗ, ಅವಳು 'ಚೆನ್ನಾಗಿವೆಯೇ?' ಎಂದು ಕೇಳಿದಳು. ನಾನು 'ಚೆನ್ನಾಗಿವೆಯಮ್ಮಾ. ನೀನು ಸಿಹಿ ಪದಾರ್ಥಗಳನ್ನು ಕೂಡಾ ಚೆನ್ನಾಗಿಯೇ ಮಾಡುತ್ತೀಯೇ. ನನ್ನ ತಮ್ಮ ಖಂಡಿತ ಸುಖಪಡುತ್ತಾನೆ' ಎಂದೆ. ಆವಳು ಆ ಕೂಡಲೇ ನಡುಮನೆಗೆ ಹೋಗಿಬಿಟ್ಟಳು. 'ಇನ್ನು ನಾನು ಊಟಕ್ಕೆ ಬಡಿಸೋಲ್ಲ. ನೀನು ಹೋಗಿ ಬಡಿಸು' ಎಂದು ಕುಶಲಮ್ಮನಿಗೆ ಹೇಳಿದಳು. ಕುಶಲಮ್ಮ ಬಂದು ಬಡಿಸಿದಳು. ಅನ್ನಕ್ಕೆ ಕೆನೆಮೊಸರು ಬಡಿಸಿದರೂ ನನಗೆ ಸೇರದಾಯಿತು. ಆ ರಾತ್ರಿ ಎಷ್ಟು ಹೊತ್ತಾದರೂ ನನಗೆ ನಿದ್ರೆಯೇ ಹತ್ತಲಿಲ್ಲ. ಮನಸ್ಸಿನಲ್ಲಿ ಚೆನ್ನಾಗಿ ಖಚಿತಪಡಿಸಿಕೊಂಡಿದ್ದೆ–ನನ್ನ ಮಾವನ ಮಗಳನ್ನು ನನ್ನ ತಮ್ಮನಿಗೇ ಕೊಟ್ಟು ಮದುವೆ ಮಾಡಿಬಿಡುತ್ತೇನೆ. ಆವಳ ಬಗ್ಗೆ ನನ್ನಲ್ಲಿರುವ ಪ್ರೇಮವನ್ನೆಲ್ಲಾ ಕಿತ್ತುಹಾಕಿದ್ದೆ. ಆದರೆ ಬೇರುಗಳು ಮಾತ್ರ ಹಾಗೆಯೇ ಉಳಿದುಕೊಂಡಿವೆ. ತಾಯಿಬೇರು ಹಾಗೆಯೇ ಇದೆ. ಅದು ಹೋಗುವಂತಿಲ್ಲ. ಚಿಗುರು, ರೆಂಬೆ, ಕಾಯಿ, ಕೊಂಬೆಗಳನ್ನೆಲ್ಲಾ ಮುರಿ ಮುರಿದು ಹಾಕಿ, ಬರಡಾಗಿಸಿದ್ದೇನೆ. ನನ್ನ ಹೃದಯ ಕೊರಡಾಗಿದೆ. ಕಲ್ಲಿನಂತಾಗಿಬಿಟ್ಟಿದೆ. ಸುಖವಾಗಿ, ಸುಖಪ್ರದವಾದ ನಿದ್ರೆ ಬಂದಿತು. ಮತ್ತೆ ನನ್ನ ಸಾಕುತಂದೆ ಕಾಣಿಸಿಕೊಂಡ. ಆತ ನನ್ನ ಕಡೆಗೇ ನೋಡುತ್ತಿದ್ದಾನೆ. ಆತನ ಮುಖದಲ್ಲಿ ಕಳವಳವೂ ಇಲ್ಲ, ಉತ್ಸಾಹವೂ ಇಲ್ಲ. ಹಣೆಯ ಮೇಲೆ ನಾಮಗಳೂ ಇಲ್ಲ. ಚುಟ್ಟಾ ಸೇದುತ್ತಿಲ್ಲ. ತಲೆಯ ಮೇಲೆ ಪೇಟ ಇಟ್ಟುಕೊಂಡಿದ್ದ. ನಾನು ಆತನನ್ನು ನೋಡುತ್ತಲೇ 'ಮತ್ತೇಕೆ ಬಂದೆಯೋಪ್ಪಾ?' ಎಂದುಬಿಟ್ಟೆ ಆತ ಕೂಡಲೇ ಕಣ್ಮರೆಯಾಗಿಬಿಟ್ಟ ಮರುದಿನ ಬೆಳಿಗ್ಗೆ ಇದೆಲ್ಲಾ ನನಗೆ ನೆನಪಿಗೆ ಬಂದಿತು. ಅಯ್ಯೋ ಆತ ಬಂದಾಗ, ನಾನೇಕೆ ಹಾಗೆ ನುಡಿದೆ? ಎನ್ನಿಸಿತು. ಆ ಹಿಂದಿನ ರಾತ್ರಿ–ಎಚ್ಚರುವಿದ್ದು ಆಲೋಚಿಸುತ್ತಿದ್ದಾಗ 'ನನ್ನ ಮನಸ್ಸು ಕೊರಡಾಗಿದೆ' ಎಂದುಕೊಂಡಿದ್ದೆ. ನನ್ನಲ್ಲಿದ್ದ ಕೋಪ ಹೊರಟುಹೋಗಿದೆ ಎಂದುಕೊಂಡಿದ್ದೆ ಆದರೆ ನನ್ನ ಸ್ವಾಮಿ, ನನ್ನ ಸಾಕುತಂದೆ ನನಗೆ ಕಾಣಿಸಿಕೊಂಡಾಗ ನಾನು ಆಡಿದ ಮಾತನ್ನು ಕುರಿತು ಚೆನ್ನಾಗಿ ಆಲೋಚಿಸಿ ನೋಡಿದರೆ– ನನ್ನಲ್ಲಿದ್ದ ಕೋಪವೇನು ಹೊರಟುಹೋಗಿದೆಯೇ? 'ನೀನು ನನ್ನನ್ನು ಹಾಳುಮಾಡಿದೆ ಬಿಡಪ್ಪಾ? ಮತ್ತೆ ಯಾಕೆ ಬಂದೆ?' ಎಂದು ತಾನೇ ಅದರ ಅರ್ಥ! ಆತ ನನ್ನ ಕೋಪವನ್ನು ಮನಗಂಡಲ್ಲವೇ ಹಾಗೆ ತಟಕ್ಕನೆ ಕಣ್ಮರೆಯಾದದ್ದು?

ಈ ಕೋಪ ನನ್ನ ಮನಸ್ಸಿನಿಂದ ಅದು ಹೇಗೆ ಹೊರಟುಹೋದೀತು? ನಾನೆಷ್ಟು ನಿಶ್ಚಯ ಮಾಡಿಕೊಂಡರೂ ಈ ಕೋಪದ ಗೂಡು ಕದಲಿ ಹೋಗುವಂತಿಲ್ಲ. ಆದರೆ ಈ ಸಲ ಸ್ವಾಮಿ ಏನಾದರೂ ಕಾಣಿಸಿಕೊಂಡರೆ ಕ್ಷಮಾಪಣೆ ಕೇಳಿಕೊಳ್ಳುತ್ತಾ 'ಸ್ವಾಮಿ. ತಪ್ಪು ಮಾಡಿದೆ ನನ್ನಪ್ಪಾ.....' ಎಂದು ನಿವೇದಿಸಿಕೊಳ್ಳುತ್ತೇನೆ. ಆತ ನನಗೆ ಮಾಡಿದ ಉಪಕಾರಕ್ಕೆ ನನ್ನ ಜೀವನವೇ ವ್ಯರ್ಥವಾದರೇನಂತೆ ? ಆತ ನನ್ನನ್ನು ನೇರ್ಪಡಿಸಿದ. ಆತ ನನಗೆ ಮಾಡಿದ ಮೇಲನ್ನೆಲ್ಲಾ ಪುನಃ ಆತನಿಗೇ ಕೊಟ್ಟುಬಿಡುತ್ತೇನೆ.

ನನ್ನ ತಂಗಿಯೂ, ಅವಳ ಗಂಡನೂ ಹಬ್ಬವಾದ ಮೇಲೆ ನಾಲ್ಕು ದಿನವಿದ್ದು ತಮ್ಮೂರಿಗೆ ಹೊರಟು ನಿಂತರು. ಹೋಗುತ್ತಾ ಆತ–ತನ್ನ ತಾಯಿಯವರನ್ನೂ ಕರೆದೊಯ್ಯುತ್ತೇನೆಂದ. ನನ್ನ ಆ ತಾಯಿ ಮಾತ್ರ ನನ್ನನ್ನು ಬಿಟ್ಟು ಹೋಗಲಾರೆನೆಂದಳು. 'ಬೇಕಾದರೆ ಕುಶಲಮ್ಮನನ್ನು ಕರೆದುಕೊಂಡು ಹೋಗು. ನಾನು ಈ ಮಗೂನ ಈಗ ಬಿಟ್ಟು ಬರಲಾರೆ' ಎಂದು ಹೇಳಿಬಿಟ್ಟಳು. ನಾನು 'ಪರವಾಗಿಲ್ಲ ಚಿಕ್ಕಮ್ಮಾ. ಹೋಗಿ ಬಾ' ಎಂದೆ. ಅದಕ್ಕೆ ಆ ತಾಯಿ 'ನಾನು ನಿನ್ನ ಹತ್ತಿರವೇ ಇರುತ್ತೇನೆ ಮಗೂ. ನೀನೇ ನನಗೆ ಹಿರಿಯ ಮಗ. ನನ್ನ ಬಾಯಿಗೆ ನೀನೇ ತುಳಸಿದಳ, ನೀರು ಬಿಡಬೇಕು, ನಾನು ಹೋಗಲ್ಲ' ಎಂದಳು. ಕುಶಲಮ್ಮನಿಗೆ 'ನೀನು ಹೋಗಮ್ಮ' ಎಂದೆ. ಆಕೆ ತಾನೂ ಹೋಗಲ್ಲ ಎಂದಳು. ನಾನು ಕುಶಲಮ್ಮನನ್ನು ಹೊರಡೆಂದು ಬಲವಂತಪಡಿಸಿದೆ. ನನಗೆ ಚಿಕ್ಕಮ್ಮನ ಮೇಲೆ ಅಧಿಕಾರವಿಲ್ಲ. ಆದರೆ ಅಡುಗೂಲಜ್ಜಿಯ ಮೇಲೆ ನಾನು ಅಧಿಕಾರ ಚಲಾಯಿಸಬೇಕೆಂಬ ಮನಸ್ಸೂ ಇಲ್ಲ. ಆದರೂ 'ನಾನು ಹೇಳಿದ ಹಾಗೆ ನೀನು ಕೇಳಿಕೊಂಡಿರಬೇಕಾದಾಕೆ. ನೀನು ಹೋಗದೇ ವಿಧಿಯಿಲ್ಲ' ಎಂದೆ. ಅದಕ್ಕೆ ಕುಶಲಮ್ಮ 'ಅಪ್ಪಾ ! ನೀನು ಹೀಗೆಂದರೆ ನಾನೇನು ಹೇಳಲಿ? ನಿನಗಿನ್ನೂ ನಾನು ಅಡುಗೆಯವಳ ಹಾಗೇ ಕಾಣಿಸ್ತಾ ಇದೇನೆ. ಹಾಗಾದ್ರೆ ಹೋಗ್ತೀನೇಳಪ್ಪಾ' ಎಂದು ನೊಂದು ನುಡಿದಳು. ನಾನು ತಾನೇ ಏನು ಮಾಡಲಿ? ನನ್ನ ಜೀವ ಕುಗ್ಗಿಬಿಟ್ಟಿತು, ಆಕೆಯನ್ನು ಹಾಗೆ ನುಡಿದಾದರೂ ಕಳಿಸಿಕೊಡೋಣವೆಂಬುದೇ ನನ್ನ ಉದ್ದೇಶವಾಗಲೀ ಆಕೆಯ ಹೃದಯಕ್ಕೆ ನೋವುಂಟು ಮಾಡಬೇಕೆಂಬ ತುಚ್ಛ ಅಭಿಪ್ರಾಯವೇನೂ ನನಗಿರಲಿಲ್ಲ. ಆ ಹಿರಿಯಳಿಂದ ನಾನು ಅಂಥಾ ಮಾತು ಕೇಳಬೇಕೆಂಬ ಚಪಲವೂ ನನಗಿರಲಿಲ್ಲ. ನಾನು 'ಹೋಗಲಿ ಬಿಡು, ಹೋಗಬೇಡ. ಇಲ್ಲೇ ಇರು' ಎಂದೆ, ಆಕೆ 'ಹಾಗಲ್ಲಪ್ಪಾ ನಾನು ಹೋಗ್ತೀನಿ' ಎಂದು ಹೊರಡಲು ಸಿದ್ಧಳಾದಳು.

ನಾನೇನು ಮಾಡಬೇಕೋ ನನಗೆ ತಿಳಿಯದಾಯಿತು. ನಾನು ಅವರನ್ನು ಬೀಳ್ಕೊಡಲೆಂದು ಅವರ ಗಾಡಿಯ ಹಿಂದೆಯೇ ತುಂಬ ದೂರದ ತನಕ ನಡೆದು ಹೋದೆ, ನನ್ನ ತಂಗಿಯೂ, ನನ್ನ ಭಾವಮೈದುನನೂ ಅನೇಕ ಸಲ ನೀನಿನ್ನು ನಿಂತುಕೋ ಎಂದು ಹೇಳಿದರು. ನಾನು ಹಾಗೆಯೇ ಗಾಡಿಯ ಹಿಂದೆಯೇ ನಡೆಯತೊಡಗಿದೆ. ಬಹುದೂರ ಹೋದಮೇಲೆ, ನಮ್ಮ ಕುಶಲಮ್ಮ 'ನೀನಿನ್ನು ಉಳಿದುಕೋಪ್ಪಾ. ಹೊತ್ತು ಮುಳುಗ್ತಾ ಇದೆ. ಮತ್ತೆ ನೀನು ಮನೆ ಸೇರುವಷ್ಟಕ್ಕೆ ತುಂಬ ಕತ್ತಲಾಗಿಬಿಡುತ್ತೆ. ನಾನೇನೂ ಅಂದುಕೊಳ್ಳಲ್ಲಪ್ಪ ಗಂಡ ಹೆಂಡತಿ ಇಬ್ಬರೇ ಆಗ್ತಾರಲ್ಲಾ ಅಂತ ನೀನು ಇವರೊಂದಿಗೆ ನನ್ನನ್ನು

ಕಳಿಸಿಕೊಡಬೇಕೂಂತ ಹಾಗೆ ಮಾತನಾಡಿದೆಯಷ್ಟೆ ನೀನನ್ನು ಹಿಂತಿರುಗು' ಎಂದಳು. ನಾನು ಹಿಂತಿರುಗಿದೆ. ಆಕೆ ಪುನಃ ನನ್ನನ್ನು ಹಿಂದಕ್ಕೆ ಕರೆದಳು. ನಾನು ಗಾಡಿ ಸಮೀಪಿಸಿ 'ಏನಜ್ಜೀ?' ಎಂದು ಕೇಳಿದೆ. ಆಕೆ 'ಏನೂ ಇಲ್ಲ. ನೀನೆಲ್ಲಿಗೂ ಹೋಗಬೇಡ ಮಗೂ, ನೀನು ಹೋದೆಯೋ–ನಿನ್ನ ಚಿಕ್ಕಮ್ಮನಿಗೇನು, ಮಣ್ಣು ಕಾಣಿಸಲು ಹೊಟ್ಟೆಯ ಮಗನಿದ್ದಾನೆ; ಆದರೆ ನನ್ನನ್ನು ದಿಕ್ಕಿಲ್ಲದ ಪರದೇಶಿಯಂತೆ ಎಳೆದುಹಾಕಿಬಿಡ್ತಾರೆ. ನಿನ್ನ ಆಧಾರವನ್ನು ನೋಡಿಕೊಂಡು ಬದುಕುತ್ತಾ ಇದೇನೆ' ಎಂದಳು. 'ಹಾಗೇ ಆಗಲಿ, ನಾನೆಲ್ಲಿಗೂ ಹೋಗಲ್ಲ' ಎಂದೆ. 'ನನ್ನ ಕೈಮೇಲೆ ಕೈಹಾಕಿ ಆಣೆಮಾಡಿ ಕೇಳು' ಎಂದಳು. ಹಾಗೆಲ್ಲಾ ಹೋಗಬಾರದೆಂದು ಹಿತ ನುಡಿದಳು. ಆಕೆಯ ಕೈಮೇಲೆ ಕೈ ಹಾಕಿ ಆಣೆ ಮಾಡಿದೆ. ನನ್ನ ತಂಗಿ 'ಅಣ್ಣಯ್ಯಾ, ನೀನು ಹೊರಟುಹೋದರೆ ನನ್ನನ್ನೇನು ಮಾಡಿ ಹೋಗುವೆ? ನನಗೆ ನನ್ನ ತವರುಮನೆಯ ಸಂಬಂಧವು ಎಳೆಯೇ ಇಲ್ಲವಲ್ಲಾ. ನೀನಿರುವುದರಿಂದಾಗಿ ನನಗಾ ಕೊರತೆಯೇ ಇಲ್ಲದಾಗಿದೆ. ನನಗಾಗಿಯಾದರೂ ನೀನು ಹೋಗಬೇಡ ಕಣಾ' ಎಂದಳು.

ನಾನು 'ಹುಚ್ಚೀ, ಬದುಕಿರುವಷ್ಟು ದಿನವೂ ಈ ಹೊಟ್ಟೆಯೊಂದಿದೆಯಲ್ಲಾ! ನಾನೆಲ್ಲಿಗೇ ಹೋದರೂ ಮತ್ತೆ ಇದರ ಸಲುವಾಗಿ ದಾರಿ ಮಾಡಿಕೊಳ್ಳಲೇಬೇಕಲ್ಲಾ. ಎಲ್ಲಿಗೆ ಹೋಗುತ್ತೇನೆ? ಆ ದಿನ ನಾನು ಹೊರಟು ಹೋಗಬೇಕೆಂದು ಹೋಗಲಿಲ್ಲ. ದಾರಿ ತಪ್ಪಿ ಎಲ್ಲಿಗೋ ಹೋಗಿಬಿಟ್ಟೆ ಅಷ್ಟೇ' ಎಂದು ಹೇಳಿ, ಮನೆಗೆ ಮುಖ ಮಾಡಿಕೊಂಡು ಬಂದೆ. ನನ್ನ ಚಿಕ್ಕಮ್ಮ, ನಾನಿಷ್ಟು ಹೊತ್ತಾದರೂ ಮನೆ ಸೇರಿಕೊಳ್ಳದ್ದರಿಂದ ಮತ್ತೆ ಗಾಬರಿಗೊಂಡಿದ್ದಳು. ನನ್ನ ಮಾವನ ಮಗಳು 'ಮಾವಯ್ಯ ಎಲ್ಲಿಗೆ ಹೋಗ್ತಾನೆ? ಅದರಲ್ಲೂ ನಿನ್ನನ್ನು ಇಲ್ಲಿ ಬಿಟ್ಟು ಹೋಗುವುದೇ ಇಲ್ಲ' ಎಂದು ಸಮಾಧಾನ ನುಡಿದಳಂತೆ. ನಾನು ಮನೆ ಸೇರಿದ್ದನ್ನು ಕಂಡು ನನ್ನ ಚಿಕ್ಕಮ್ಮ ತುಂಬ ಸಂತೋಷಗೊಂಡಳು. ನಾನು 'ನಾನು ಗುಂಟೂರಿಗೆ ಹೋಗಿ ಹುಡುಗರನ್ನೊಂದು ಸಲ ನೋಡಿಕೊಂಡು ಬರಬೇಕಾಗಿತ್ತು. ಅವರೇನಾದರೂ ಏನೋ ! ನನ್ನ ತಮ್ಮನಿಗೆ ಒಂದಿಷ್ಟು ಭಯವಿರಲೀಂತ ಕೋಪ ಮಾಡಿಕೊಂಡು ಬಂದಿದ್ದೆ. ಅವನೂ ಸಹ ಇವಳ ಹಾಗೇನೇ ನನ್ನ ಮಾತುಗಳನ್ನು ಅಪಾರ್ಥ ಮಾಡಿಕೊಂಡಿರುವನೋ ಏನೋ ! ಅವನು ಕೋಪದಿಂದ ಎಲ್ಲಾದರೂ ಭಾವಿ ಕೆರೆಗೆ ಬಿದ್ದರೆ, ಜೀವನಾಂತ್ಯದವರೆಗೆ ನಾನು ಅವನಿಗಾಗಿ ಅಳಬೇಕಾದೀತು. ನನ್ನ ತಂಗಿ ಅವರ ಜೊತೆಗೇನೇ ಹಾಗೆಯೇ ಗುಂಟೂರಿನ ತನಕ ಹೋಗಿ ಬಂದಿದ್ದರೆ ಚೆನ್ನಾಗಿತ್ತು' ಎಂದೆ. ನನ್ನ ಚಿಕ್ಕಮ್ಮ 'ನಾಳೆಯೋ ನಾಳಿದ್ದೋ ಹೋದರಾಯಿತು' ಎಂದಳು.

ಆ ದಿನ ರಾತ್ರಿ ಊಟ ಮಾಡಿ ಮಲಗಿಕೊಂಡೆ. ನನ್ನ ಮಾವನ ಮಗಳು ನನ್ನನ್ನು ಸಮೀಪಿಸಿದಳು. ಎರಡು ಹೋಳು ಅಡಕೆ ಕೈಗೆ ಕೊಟ್ಟಳು.

ಮರುದಿನ ಬೆಳಿಗ್ಗೆಯೇ ನನಗಾಗಿ ಚುಟ್ಟಾ ತಯಾರಿಸುತ್ತಾ ಕುಳಿತುಕೊಂಡಿದ್ದಳು. ಅವಳಿಗೆ ಚುಟ್ಟಾ ತಯಾರಿಸಲು ಕೈಲಾಗುವುದಿಲ್ಲ. ನಾನು ಅವಳ ಕೈಯಲ್ಲಿಂದ ಹೊಗೆಸೊಪ್ಪನ್ನು ತೆಗೆದುಕೊಳ್ಳುತ್ತ 'ನಿನಗೇಕೆ ಈ ಕೈಲಾಗದ ಕೆಲಸ?' ಎಂದೆ. 'ಕೈಲಾಗದೇ ಇದ್ದರೆ ಕಲಿತುಕೊಳ್ತೇನೆ'

ಎಂದಳು. 'ಈಗೇಕೆ ಅಷ್ಟು ಶ್ರಮ!' ಎಂದೆ. ಅವಳು 'ಮಾವಯ್ಯಾ, ಪ್ರಪಂಚದಲ್ಲಿ ಯಾರಾದರೂ ತಪ್ಪು ಮಾಡುತ್ತಾರೆ. ಎಷ್ಟೋ ಜನ ಕ್ಷಮಿಸುತ್ತಾರಾಗಲೀ ನಿನ್ನಂಥವರು ಮಾತ್ರ ಬಹುಶಃ ಕ್ಷಮಿಸಲಿಕ್ಕಿಲ್ಲವೇನೋ!' ಎಂದಳು. ನಿಶ್ಚಯ ಮಾಡಿಕೊಂಡ ನನ್ನ ಮನಸ್ಸು ಮತ್ತೆ ಡೋಲಾಯಮಾನವಾಯಿತು. ಮುಟ್ಟಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ನಾನು ಮುಟ್ಟಿಕೊಳ್ಳುವುದಿಲ್ಲವೆಂದು ದೂರದಲ್ಲಿ ಕುಳಿತರೆ ನನ್ನನ್ನು ಮುಟ್ಟಲು ಬಿಡುತ್ತಾಳಲ್ಲಾ? ಅವಳನ್ನು ತಾಕಬಾರದು. ಅವಳಿಗೂ ನನಗೂ ಸಂಬಂಧವಿಲ್ಲ. ಆ ಪದಾರ್ಥವನ್ನು ಮೊದಲು ತಾಕೋಣವೆಂದುಕೊಂಡಿದ್ದೇ ತಪ್ಪೇನೋ ಎಂದುಕೊಳ್ಳುತ್ತಾ ಇದ್ದರೆ, ಪೂರ್ತಿಯಾಗಿ ತಪ್ಪು ಎಂದು ತಿಳಿದುಬಂದ ಮೇಲೂ ನನ್ನನ್ನೇಕೆ ಹೀಗೆ ವ್ಯಾಮೋಹಗೊಳಿಸುವುದು? ನಾನು ಕೊಂಚ ಹೊತ್ತು ಯೋಚಿಸಿ, ಹೀಗೆ ನುಡಿದೆ 'ಅಮ್ಮಾ, ನೀನು ಮರೆತುಬಿಡು. ನಾನು ಮರೆತುಬಿಟ್ಟಿರುವೆ. ನೀನು ಪುನಃ ನಿನ್ನ ಮನಸ್ಸನ್ನು ಬದಲಿಸಬೇಡ. ನಾನು ಹೊರಟುಹೋಗಿಬಿಡುತ್ತೇನೇನೋ ಎಂಬ ಭಯವನ್ನು ನೀನಿನ್ನು ಇಟ್ಟುಕೊಳ್ಳಬೇಡ. ನಾನೆಲ್ಲಿಗೂ ಹೋಗುವುದಿಲ್ಲ. ಎಲ್ಲಿಗೆ ಹೋಗಲಿ? ನೀನು ನಿಜವಾದ ಪ್ರೇಮದಿಂದ ನನ್ನ ತಮ್ಮನನ್ನು ಪ್ರೀತಿಸಿರುವೆ. ಇನ್ನಿತರೆ ಕಾರಣಗಳಿಂದಾಗಿ ಮತ್ತೆ ಮನಸ್ಸು ಬದಲಿಸಬೇಡ. ನಾನಾಗ ಹಾಗೆ ಕೋಪ ಪಟ್ಟಿದ್ದೆಲ್ಲಾ ನಿಜವಲ್ಲ. ನೀವಿಬ್ಬರೂ ಹುಡುಗುತನದಿಂದಾಗಿ ಅವಸರಪಟ್ಟು ಎಲ್ಲಾದರೂ ಅಪಕೀರ್ತಿ ತರುತ್ತೀರೇನೋ ಎಂದು ಹಾಗೆ ಕೋಪದ ಮಾತುಗಳನ್ನಾಡಿದೆನಾಗಲೀ, ನಿಮ್ಮಿಬ್ಬರಿಗೂ ಮದುವೆ ಮಾಡೋಣವೆಂದೇ ಮೊಟ್ಟಮೊದಲಿನಿಂದಲೂ ನಾನು ಅಂದುಕೊಳ್ಳುತ್ತಿರುವೆ. ಹಾಗಿಲ್ಲದಿದ್ದರೆ, ಅವನನ್ನು ಓದುವುದಕ್ಕೆಂದು ಗುಂಟೂರಿಗೆ ಕಳಿಸಿಕೊಡುವುದಕ್ಕಿಂತ ಮುಂಚೆ ಹಾಗು ರಜಾ ದಿನಗಳಲ್ಲಿ ಅವನಿಲ್ಲಿಗೆ ಬಂದಾಗಲೆಲ್ಲಾ–ನೀನೂ ಅವನೂ ಕಲೆತು ಹಾಗೆಲ್ಲಾ ಇದ್ದಾಗ ನಾನೂ ಹಾಗೆ ಇರಗೊಡುತ್ತಿದ್ದೆನೇ? ನಿನ್ನನ್ನೂ ಓದಲು ಕಳಿಸಿಕೊಡುತ್ತಿದ್ದೆನೇ? ನಿಮ್ಮಿಬ್ಬರ ಪ್ರೇಮದ ವಿಷಯವನ್ನೆಲ್ಲಾ ನಿನ್ನ ತಮ್ಮ ವರ್ಷದ ಕೆಳಗೇ ಹೇಳಿದ್ದ. ನನಗೆ ಗೊತ್ತಿದ್ದರೂ ಕೂಡ ನಿನ್ನನ್ನೇಕೆ ಓದಲು ಕಳಿಸಿದೆ ಗೊತ್ತೇ? ನೀವಿಬ್ಬರೂ ಒಂದೇ ಕಡೆಯಿದ್ದರೆ ನಿಮ್ಮ ಪ್ರೇಮ ಅಭಿವೃದ್ಧಿಗೊಳ್ಳುತ್ತದೆಂದೇ ಹಾಗೆ ಮಾಡಿದೆ. ಆದರೆ ನೀವಿಬ್ಬರೂ ನನ್ನ ಉದ್ದೇಶವನ್ನು ಸರಿಯಾಗಿ ತಿಳಿದುಕೊಳ್ಳದೆ ಬಹಿರಂಗವಾಗಿ ತಿರುಗಾಡಿ ನಾಲ್ಕು ಜನರ ಹರಕುಬಾಯಿಗೆ ಗುರಿಯಾಗುತ್ತೀರಲ್ಲಾ ಎಂದು ನಿನ್ನ ಓದು ನಿಲ್ಲಿಸಿ ನಿನ್ನನ್ನು ಕರೆದುಕೊಂಡು ಬಂದೆ. ಈ ಸಲದ ಬೇಸಗೆಯ ರಜೆಯಲ್ಲಿ ನಿಮ್ಮಿಬ್ಬರ ಮದುವೆ ಮಾಡುತ್ತೇನೆ. ಮುಂದಿನ ವರ್ಷ ಮತ್ತೆ ಹೋಗಿ ಓದು. ಆಗ ನೀವಿಬ್ಬರೂ ಹೇಗಿದ್ದರೂ ಪರವಾಗಿಲ್ಲವಲ್ಲಾ !' ಎಂದು ನುಡಿದು, ಅವಳ ಕೈಯಲ್ಲಿದ್ದ ಹೊಗೆಸೊಪ್ಪನ್ನು ಸೆಳೆದುಕೊಂಡು ಹೊರಟುಹೋಗಿಬಿಟ್ಟೆ. ಹೋಗುತ್ತಾ ಅವಳ ಮುಖದ ಕಡೆಗೆ ನೋಡಿದೆ. ಅವಳ ಮುಖದಲ್ಲಿ ಆಶ್ಚರ್ಯವೂ ಇತ್ತು ; ಕೊಂಚ ಅನುಮಾನವೂ ಇತ್ತು. ದುಃಖವಿತ್ತೋ ಇಲ್ಲವೋ ನಾನು ಹೇಳಲಾರೆನಾಗಲೀ ನನ್ನ ಮನಸ್ಸಿಗೆ ಮಾತ್ರ–ಇದೆ ಎನ್ನಿಸಿತು. ನಾನು ಈ ಮಾತುಗಳನ್ನೆಲ್ಲಾ ಎಷ್ಟೋ ನಿಜವೆಂಬಂತೆ ನುಡಿದೆ.

ಅವಳನ್ನು ಅಲ್ಲಿ ಬಿಟ್ಟು ಹೊರಟುಹೋದ ಮೇಲೆ—ನನ್ನ ಮನಸ್ಸು ಮತ್ತೆ ಕಳವಳಕ್ಕೀಡಾಯಿತು—ಕೈಯಾರೆ ನಾನು ಹಾಳುಮಾಡಿಕೊಳ್ಳುತ್ತಿರುವೆನಲ್ಲಾ—ಎಂದು. ಆದರೂ ನಾನು ಹೋಗುತ್ತಿರುವ ಮಾರ್ಗವೇ ಸರಿಯಾದ ಮಾರ್ಗವೆಂದು ನನ್ನ ಹೃದಯ ನುಡಿಯುತ್ತಿತ್ತು. ನಾನು ಇನ್ನು ಮೇಲಿಂದ  ಯಾವ ರೀತಿಯೇ ಆಗಲಿ ಬಯಲಿಗೆ ಬೀಳಕೂಡದೆಂದೂ, ಅವಳ ಮನಸ್ಸಿಗೆ ಕಷ್ಟವನ್ನಾಗಲೀ, ಅವಳಿಗೆ ಅಸುಖವನ್ನಾಗಲೀ ಉಂಟುಮಾಡಬಾರದೆಂದೂ ಗಟ್ಟಿಯಾಗಿ ನಿಶ್ಚಯಿಸಿಕೊಂಡೆ. ಆಮೇಲೆ ಎರಡು ಮೂರು ಸಲ ಅವಳು ನನ್ನ ಮನಸ್ಸು ಮೆತ್ತಗಾಗುವಂತೆ ಮಾತನಾಡಿದರೂ, ವರ್ತಿಸಿದರೂ—ನಾನು ಖಂಡಿತವಾಗಿ ಅವಳಿಗೆ ತಂದೆಯೋಪಾದಿಯಲ್ಲಿರುವ ಹಾಗೆಯೇ ನಡೆದುಕೊಂಡೆ. ಆಗಿನಿಂದ ಅವಳು ನನ್ನೊಂದಿಗೇ ತಮ್ಮನ ಹೆಂಡತಿಯಂತೆಯೇ ನಟಿಸುತ್ತಾ ಬಂದಳಾಗಲೀ ಹಿಂದಿನ ಹಾಗೆ ಮಾತನಾಡುವುದನ್ನು ಬಿಟ್ಟುಬಿಟ್ಟಳು. ಆದರೆ ಯಾವುದೋ ಒಂದು ಕ್ಷಣದಲ್ಲಿ—ಅವಳ ಕಣ್ಣುಗಳಲ್ಲಿ ಅಂತಹ ಭಾವ ನನಗೆ ಕಾಣಿಸುತ್ತಲೇ ಇತ್ತು. ನಾನೆಷ್ಟು ನಿಶ್ಚಲವಾಗಿದ್ದರೂ—ನೂರಕ್ಕೋ ಸಾವಿರಕ್ಕೋ, ನಾನು ನಿಲ್ಲುವುದರಲ್ಲಿಯೋ, ನಾನು ನೋಡುವುದರಲ್ಲಿಯೊ—ಅವಳಿಗಾ ಭಾವ ಸ್ಫುರಿಸಿತೆಂದು ನಾನು ಬಲ್ಲೆ.

ನಾನು ಗುಂಟೂರಿಗೆ ಹೋದೆ. ಹುಡುಗರು ಚೆನ್ನಾಗಿ ಓದಿಕೊಳ್ಳುತ್ತಿದ್ದರು. ನನ್ನ ತಮ್ಮ ಈ ಕಥೆಯನ್ನೆಲ್ಲಾ ಮರೆತುಬಿಟ್ಟಿದ್ದ. ಅವನು ನನ್ನೊಂದಿಗೆ ಸ್ವಲ್ಪವೇ ಮಾತನಾಡಿದರೂ, ಆ ಮಾತುಗಳಲ್ಲಿ—ನಾನು ಅವನ ಮೇಲೆ ಕೋಪ ಮಾಡಿಕೊಂಡಿದ್ದರಿಂದ ನನ್ನ ಮೇಲೆ ಅವನಿಗೆ ಅಸಮಾಧಾನವಿರುವಂತೆ ಕಂಡುಬರಲಿಲ್ಲ. ಅವನು ಶುದ್ಧ ಮಗುವಿನಂಥವನು. ನಾನು ಅವನನ್ನು ಕುರಿತು ಕೆಟ್ಟದಾಗಿ ಆಲೋಚಿಸಿದೆನೇನೋ ಎಂದು ನನಗೇ ಕಷ್ಟವೆನ್ನಿಸಿತು. ಇದೆಲ್ಲಾ ಅವನ ಸೋದರಮಾವ ಮಾಡಿದ ದ್ರೋಹವಾಗಲೀ ಅವನಿಗೇನೂ ತಿಳಿಯದು. ಅವನ ಅಮಾಯಕತನವನ್ನು ನೋಡಿದರೆ ನಾನು ನನ್ನ ಮಾವನ ಮಗಳನ್ನು ನಂಬಿಸಿ, ನನಗೆ ಅವಳ ಮೇಲೆ ಪ್ರೇಮವಿಲ್ಲದಂತೆ ನಟಿಸಿದ ನಟನೆಯೆಲ್ಲಾ ವ್ಯಥಾ ಎನ್ನಿಸಿತು. ಅವಳನ್ನು ನಾನೇಕೆ ಮದುವೆಯಾಗಕೂಡದು? ನನ್ನ ತಮ್ಮನಿಗೇನೂ ತಿಳಿಯದಲ್ಲಾ. ಅವನ ಸೋದರಮಾವ ಯಾವುವೋ ಕೆಲವು ಯೋಚನೆಗಳನ್ನು ಅವರ ಮನಸ್ಸಿನಲ್ಲಿ ತುರುಕಿದ್ದರಿಂದ ಅವರು ಯೌವನೋದ್ರೇಕದಲ್ಲಿ ಅವೆಲ್ಲಾ ನಿಜವೆಂದೇ ಬಗೆದರು. ನನ್ನ ಮಾವನ ಮಗಳು ಒಂದಿಷ್ಟು ತಿಳಿದು ಮಾಡಿದ್ದರೂ ಅವನೇನೂ ತಿಳಿದು ಮಾಡಿದಂತಿಲ್ಲ. ಈಗ ಅವಳೇನೊ ನನ್ನತ್ತ ಮತ್ತೆ ವಾಲುತ್ತಿರುವಳು. ನನ್ನ ತಮ್ಮನಿಗೆ ಆ ಗೊಡವೆಯೇ ಇಲ್ಲ. ನನ್ನ ಜೀವನವನ್ನು ನಾನೇಕೆ ಹಾಳುಮಾಡಿಕೊಳ್ಳುವುದು? ಎನ್ನಿಸಿತು. ಆ ದಿನ ಊರಿಗೆ ಹಿಂತಿರುಗಿ ಹೋಗೋಣವೆಂದುಕೊಂಡು, ನಾನು ಅವನೊಂದಿಗೆ ಹೀಗೆ ಹೇಳಿದೆ 'ಮಗೂ, ರಜೆಯಲ್ಲಿ ನನ್ನ ಮದುವೆ! ಪರೀಕ್ಷೆ ಮುಗಿಯುತ್ತಲೇ ನೀನು ಬಂದುಬಿಡು' ಎಂದೆ. ಅವನು ನನ್ನ ಕಡೆಗೆ ನೋಡಿದ. ಅವನ ಮುಖ ಬಿಳಿಚಿಕೊಂಡಿತ್ತು! 'ಏನು ಹಾಗೆ ನೋಡುತ್ತೀಯಲ್ಲಾ?' ಎಂದೆ. ಅವನು 'ನಾನು ನಿಮ್ಮ ಮನೆಗೆ ಕಾಲಿಡೋಲ್ಲ. ನಿನ್ನ ಮದುವೆಯ ವಿಷಯ ನನಗೆ ಬೇಕಿಲ್ಲ.

ಇನ್ನು ನೀನೇನೂ ನನಗೆ ಹಣ ಕಳಿಸುವುದು ಬೇಡ. ನಾನೆಲ್ಲಿಯಾದರೂ ಭಿಕ್ಷೆ ಬೇಡಿ ಚಂದಾ ಎತ್ತಿ ಈ ವರ್ಷ ನನ್ನ ವಿದ್ಯಾಭ್ಯಾಸ ಮುಗಿಸುತ್ತೇನೆ' ಎಂದಂದು ಹೊರಟುಹೋಗಿಬಿಟ್ಟ! ನಾನು ಅಷ್ಟುರತನಕ ಊಹಿಸಿಕೊಂಡಿದ್ದೆಲ್ಲವೂ ಒಂದು ಕ್ಷಣದಲ್ಲಿಯೇ ದಿಕ್ಕಾಪಾಲಾಗಿಬಿಟ್ಟಿತು. 'ಆಹಾ !' ಎಂದುಕೊಂಡೆ. ಆ 'ಆಹಾ!' ದಲ್ಲಿ ಏನೆಲ್ಲ ಅಡಗಿತ್ತೋ ನಾನು ಹೇಳಲಾರೆ!

ನಾನು ಅವನನ್ನು ಹುಡುಕಿಕೊಂಡು ಹೊರಟೆ. ಆ ರಾತ್ರಿ ಹೋಟೆಲೊಂದರಲ್ಲಿ ಅವನನ್ನು ಭೇಟಿಯಾದೆ. ಕರೆದೆ. ಅವನು ನನ್ನ ಬಳಿಗೆ ಬಂದ. 'ಮಗೂ, ನಾನು ನಿನ್ನೊಂದಿಗೆ ಹೇಳಿದ ಸಂಗತಿ ನಿಜವಲ್ಲ. ನೀನು ಏನೆನ್ನುತ್ತೀಯೋ ತಿಳಿದುಕೊಳ್ಳಬೇಕೆಂದು ಹಾಗೆ ಹೇಳಿದೆ. ನಿನ್ನ ಮೇಲೆ ಅವಳಿಗೆ ಪ್ರೇಮವಿದೆ ಎಂಬುದು ನನಗೆ ಗೊತ್ತು. ಅವಳ ಮೇಲೆ ನಿನಗಷ್ಟು ಪ್ರೇಮವಿದೆಯೋ ಇಲ್ಲವೋ ಕಂಡುಕೊಳ್ಳಬೇಕೆಂದು ನಿನ್ನೊಂದಿಗೆ ಹಾಗೆಂದೆ. ರಜೆಯಲ್ಲಿ ನಿಮ್ಮಿಬ್ಬರಿಗೂ ಮದುವೆ ಮಾಡುತ್ತೇನೆ. ನಾನು ಸುಳ್ಳು ಹೇಳುತ್ತಿಲ್ಲ. ನಾನಿಲ್ಲಿಯೇ ಇರುತ್ತೇನೆ. ಬೇಕಾದರೆ ನೀನು ಊರಿಗೆ ಹೋಗಿ ಅವಳಿಗೆ ನಾನು ಹೀಗೆ ಹೇಳಿ ಬಂದಿರುವೆನೋ ಇಲ್ಲವೋ ಕಂಡುಕೊಂಡು ಬಾ!' ಎಂದೆ. ಅವನು ಸುಮ್ಮನೇ ಇದ್ದ. 'ನಾನು ಈ ಊರಲ್ಲಿಯೇ ಇರುತ್ತೇನೆ. ನೀನು ಪತ್ರ ಬರೆದು ಉತ್ತರ ತರಿಸು. ನಿನ್ನ ಪತ್ರಕ್ಕೆ ಮಾರುತ್ತರ ಬರುವ ತನಕ ನಾನಿಲ್ಲಿಂದ ಕದಲುವುದಿಲ್ಲ' ಎಂದೆ. ಅವನು ನನ್ನತ್ತ ಕಣ್ಣ ರೆಪ್ಪೆ ಬಡಿಯದೆ ಹಾಗೆಯೇ ನೋಡುತ್ತಾ ಇದ್ದ. ನಾನು "ನಿನ್ನ ಪರೀಕ್ಷೆ ಮುಗಿದು, ಊರಿಗೆ ಬರುವವರೆಗೆ ನಿನಗೆಷ್ಟು ಬೇಕಾಗುತ್ತೆ ಹಣ?' ಎಂದು ಕೇಳಿದೆ. 'ಇಪ್ಪತ್ತೈದು ರೂಪಾಯಿಗಳಷ್ಟು ಬೇಕಾಗುತ್ತದೆ' ಎಂದ. ನಾನು ಐವತ್ತು ರೂಪಾಯಿಗಳನ್ನು ಕೊಡಬೇಕೆಂದು ನನ್ನ ಪ್ಲೀಡರ್ ಸ್ನೇಹಿತನಿಗೆ ತಿಳಿಸಿ 'ರಜೆಗೆ ಊರಿಗೆ ಬರುವಾಗ ನಿನಗೆ ಬೇಕಾದ ಬಟ್ಟೆಗಳನ್ನು ಕೊಂಡುಕೋ. ಒಳ್ಳೆ ಅಂಗಿಯನ್ನು ಹೊಲಿಸಿಕೋ' ಎಂದು ನನ್ನ ತಮ್ಮನಿಗೆ ತಿಳಿಸಿದೆ. ನನ್ನ ಮಾವನ ಮಗನೊಂದಿಗೆ 'ಅಪ್ಪಾ ಮಗೂ, ನಿಮ್ಮಕ್ಕಯ್ಯನಿಗೂ ಸ್ವಾಮಿಗೂ ಮದುವೆ ನಿಶ್ಚಯವಾಗಿದೆ. ಮುಹೂರ್ತ ನಿಶ್ಚಯಿಸುತ್ತೇವೆ. ಇನ್ನು ಸ್ವಾಮಿಯೊಂದಿಗೆ ವಿರೋಧವೇಕೆ? ನೀವಿಬ್ಬರೂ ಕಲೆತು ಒಂದೇ ಕಡೆ ಇರಿ' ಎಂದು ತಿಳಿಸಿದೆ. ಮೂವರನ್ನೂ ಒಂದು ಖಾನಾವಳಿಯಲ್ಲಿರುವಂತೆ ಏರ್ಪಾಟು ಮಾಡಿದೆ. ನನ್ನ ತಮ್ಮನೊಂದಿಗೆ 'ನನ್ನ ಮಾವನ ಮಗನೂ ಸಹ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ವಿಧಾನವನ್ನು ನೋಡು' ಎಂದೆ. ಅಲ್ಲಿಂದ ನಾನು ಊರಿಗೆ ಹಿಂತಿರುಗಿದೆ.

ನಾನು ಆಲೋಚಿಸಿದಷ್ಟೂ ನನ್ನ ಪ್ರವರ್ತನೆ ನನಗೇ ವಿಚಿತ್ರವಾಗಿ ಕಂಡುಬರುತ್ತಿತ್ತು. ನಾನು ಸುಳ್ಳುಗಳನ್ನು ನುಡಿದಿದ್ದರಿಂದ ಇರಬಹುದು—ನನ್ನ ಮನಸ್ಸಿನಲ್ಲಿ ಅದುವರೆಗೂ ಇಲ್ಲದ ಶಾಂತಿ ನೆಲಸಿತು. ನಾನು ಸುಳ್ಳಾಡುವುದು ತಪ್ಪೋ, ಒಪ್ಪೋ? ಒಂದು ವಿಷಯವನ್ನು ಒಂದು ದೃಷ್ಟಿಯಿಂದ ನೋಡಿದರೆ ತಪ್ಪಾಗಿ ಕಂಡುಬರುತ್ತದೆ. ಮತ್ತೊಂದು ದೃಷ್ಟಿಯಿಂದ ನೋಡಿದರೆ ಒಪ್ಪಾಗಿ ಕಂಡುಬರುತ್ತದೆ. ನನ್ನ ಮಾವನ ಮಗಳನ್ನು ನನ್ನ ತಮ್ಮ ಅಷ್ಟೊಂದು ಚೆನ್ನಾಗಿ ಪ್ರೇಮಿಸುತ್ತಿದ್ದನು. ಅವನನ್ನು ಅವಳೂ ಸಹ ಅಷ್ಟೇ ಚೆನ್ನಾಗಿ ಪ್ರೇಮಿಸುತ್ತಿರುವಳೇ? ಅವನಿಗಿರುವಷ್ಟು ನಿಶ್ಚಯ ಅವಳಿಗಿಲ್ಲವಾದರೂ ಅವಳಿಗೂ ನನ್ನ ಬಗ್ಗೆ ಕೃತಜ್ಞತೆಯಿದೆ, ಅವನಿಗೆ

ಇಲ್ಲ. ಅವನಿಗೆ ಅವಳ ಮೇಲಿನ ಪ್ರೇಮವೇ ಪ್ರಧಾನ. ಅವಳಿಗೆ–ನಾನು ತನ್ನಿಂದಾಗಿಯೇ ಕಷ್ಟಪಡುತ್ತಿರುವೆನೆಂತಲು, ಅದು ತನ್ನ ತಪ್ಪು ಎಂತಲೂ ಅವಳ ಮನಸ್ಸಿನಲ್ಲಿ ಒಂದು ಬಾಧೆಯಿದೆ ಅವನಿಗೆ ಆ ಬಾಧೆ ಕಾಣಿಸದು. ನನಗೆ ಈ ಸೃಷ್ಟಿಯನ್ನು ನೋಡಿದರೆ ಆಶ್ಚರ್ಯವೂ ಆಗುತ್ತಿಲ್ಲ, ಸಂತೋಷವೂ ಆಗುತ್ತಿಲ್ಲ. ಎಂಥದೋ ಒಂದು ಬರಡಾದ, ಮೋಟಾದ ಅನುಭವ ಹೃದಯಕ್ಕೆ ತಾಕುತ್ತಿತ್ತು. ಆ ಅನುಭವ ಇಂಥದೇ ಎಂದು ನಾನು ಹೇಳಲಾರದವನಾಗಿದ್ದೇನೆ.

ನಾನು ಊರಿಗೆ ಹಿಂತಿರುಗುತ್ತಾ ನನ್ನ ಸಾಕುತಂದೆಯ ಊರಿಗೆ ಹೋದೆ. ಇದುವರೆಗಾದರೆ ಆ ಊರಿಗೆ ಹೋಗಬೇಕೆಂದವನೇ ಅಲ್ಲ; ಹೋದರೂ ನನ್ನ ತಮ್ಮಂದಿರ ಸೋದರಮಾವನನ್ನು ನೋಡಿ ಬರೋಣವೆಂದು ಅಂದುಕೊಳ್ಳುವವನೇ ಅಲ್ಲ ; ನೋಡಿ ಬರೋಣವೆಂದುಕೊಂಡರೂ ಆತನೊಂದಿಗೆ ಜಗಳಾಡಿ ಆತನನ್ನು ಕೊಂದುಬಿಡುವುದಕ್ಕೆಂದೇ ಹೋಗುವವನು ! ಈಗ ಅಂಥದೇನು ಇಲ್ಲ. ಮದುವೆಗೆ ಕರೆಯೋಣವೆಂದು ಹೋದೆ. ಮನೆಯೊಳಗೆ ಕಾಲಿಟ್ಟಾಗ ಮನೆಯೆಲ್ಲಾ ಬಿಕೋ ಎನ್ನುತ್ತಿತ್ತು. ಒಳಗೆ ಹೋದೆ. ಆತ ಮಂಚದ ಮೇಲೆ ಮಲಗಿದ್ದ. ತಲೆಗೆ ಎತ್ತ ನೋಡಿದರೂ ಪಟ್ಟಿಗಳನ್ನು ಕಟ್ಟಿದ್ದರು. ಪಕ್ಕದಲ್ಲಿ ಯಾರೋ ಒಬ್ಬಾತ ಕುಳಿತುಕೊಂಡಿದ್ದನು. ಆ ಸ್ಥಿತಿಯಲ್ಲಿ ಆತನನ್ನು ನೋಡುತ್ತಲೇ ನಾನು ಬೆಬ್ಬಳಿಸಿದೆ! 'ಏನು ಕಾಯಿಲೇ? ಎಷ್ಟು ದಿನದಿಂದ ಹೀಗೆ?' ಎಂದು ಕೇಳಿದೆ. ಆತ 'ನಿನಗೆ ಗೊತ್ತಿಲ್ಲದ ಹಾಗೆಯೇ ಬಂದಿದೆಯೇನು ನನಗೀ ಕಾಯಿಲೆ?' ಎಂದು ಮರುನುಡಿದ! ಆತನ ಮಾತುಗಳು ಒಂದಿಷ್ಟೂ ನನಗರ್ಥವಾಗಲಿಲ್ಲ. 'ನನಗೇನೂ ತಿಳಿಯದು. ನಿಮ್ಮ ಸೋದರಳಿಯನ ಮದುವೆ ಬರುವ ಬೇಸಗೆಯ ರಜೆಯಲ್ಲಿ. ನನ್ನ ಮಾವನ ಮಗಳನ್ನೇ ಕೊಟ್ಟು ಮದುವೆ ಮಾಡುತ್ತಿರುವೆ. ಹೀಗೆಯೇ ಊರಿಗೆ ಹೋಗುತ್ತಾ ನಿಮ್ಮೊಂದಿಗೆ ತಿಳಿಸಿ ಹೋಗೋಣವೆಂದು ಬಂದೆ' ಎಂದು, ಬಾಯಿ ತಪ್ಪಿ, ತುಟಿ ಮೀರಿ ಇನ್ನೊಂದು ಮಾತೂ ಆಡಿಬಿಟ್ಟೆ. 'ಅವರಿಬ್ಬರೂ ಗುಂಟೂರಿನಲ್ಲಿರುವಾಗ ನೀವು ಮಾಡಿದ ಪ್ರಯತ್ನವೇ ಫಲಿಸಿತು!'– ಹೀಗೆಂದು, ಈ ಮಾತನ್ನೇಕೆ ಆಡಿದೆನೋ ಎಂದು ನಾಲಗೆ ಕಚ್ಚಿಕೊಂಡೆ. ಕಾಮ ಕ್ರೋಧಾದಿಗಳು ಸಹಜವಾಗಿಯೇ ಇಲ್ಲದಂತಾಗಬೇಕಾದರೂ ಎಷ್ಟು ಹತ್ತಿಕ್ಕಿಕೊಂಡರೂ ಅವು ಸೆಲೆಯೊಡೆಯುತ್ತವೆ. ಈಗ ಈ ಮಾತಾಡಬಹುದು, ಈಗ ಈ ಮಾತಾಡಕೂಡದು ಎಂಬ ಪರಿಜ್ಞಾನ–ಅವೆರಡೂ ಇದ್ದಕಡೆ ಇರುವುದಿಲ್ಲ. ಆತ ಕಾಯಿಲೆಯಿಂದಿದ್ದು ಅಂಥಾ ಸ್ಥಿತಿಯಲ್ಲಿರುವಾಗ ಅಂತಹ ಮಾತು ನನ್ನ ಬಾಯಿಂದ ಅದೇಕೆ ಬರಬೇಕಾಗಿತ್ತು? ನಾನು ಮನಸ್ಸನ್ನೇ ದೃಢಗೊಳಿಸಿಕೊಂಡಿದ್ದಲ್ಲಿ, ಅದಕ್ಕೆ ವ್ಯತಿರೇಕವಾದ ಈ ಮಾತು ಅದೇಕೆ ಬರಬೇಕಿತ್ತು? ಛಿ ! ಛಿ !

ನನ್ನ ಆ ಮಾತಿನಿಂದ ಆತನಿಗೆ ವಿಪರೀತ ಕೋಪ ಬರುತ್ತದೆಂದೂ, ನನ್ನನ್ನು ಏನೆಲ್ಲಾ ಅನ್ನುತ್ತಾನೆಂತಲೂ ಭಾವಿಸಿದೆ. ಆದರೆ ನನಗೆ ಎಲ್ಲವೂ ಬದಲಾಗಿರುವಂತೆ ತೋಚಿತು. ಈ ಮೂರು ತಿಂಗಳಿಂದ ನಾನು ಹೀಗೆ ನಡೆಯುತ್ತದೆ ಎಂದುಕೊಂಡಿದ್ದು ಯಾವುದೂ ಹಾಗೆ ನಡೆದಿಲ್ಲ. ಅಂತೆಯೇ ಸಮಾಧಾನವೂ ಬಂದಿತು. ಆತನ ಕಣ್ಣುಗಳೊಳಗೆ ಕೋಪವೇನೋ ಉಕ್ಕಿತು. ಏನೋ ಹೇಳಲು ಹೋದ. ಆದರೆ ಕೂಡಲೇ ತಲೆ ಸಿಡಿದುಹೋಗುತ್ತದೆಂದು

ಕೈಯಿಂದ ಹಿಡಿದುಕೊಂಡು, ಆ ನೋವು ಕೊಂಚ ಕಡಮೆಯಾದ ಮೇಲೆ ಹೀಗೆ ನುಡಿದ 'ನಾನು ಕೋಪಗೊಂಡು ಪ್ರಯೋಜನವೇನೂ ಇಲ್ಲ. ಆ ದಿನಗಳೇ ಹೋಗಿಬಿಟ್ಟುವು. ನಾನು ಮಾಡಿದ್ದಕ್ಕೇ ಅನುಭವಿಸಿದೆನಾಗಲಿ, ಮಾಡದೇ ಇರುವಂಥದಕ್ಕಾಗಿ ಅನುಭವಿಸಲಿಲ್ಲ. ನಾನಿನ್ನು ಬದುಕುವುದೂ ಇಲ್ಲ. ನಾನೇಕೆ ಈ ಸ್ಥಿತಿಯಲ್ಲಿರುವೆನೋ ನಿಜವಾಗಿಯೂ ನಿನಗೆ ತಿಳಿಯದೇ? ಊಹುಂ, ತಿಳಿಯದು, ತಿಳಿಯದು. ನಿಜವೇ ! ನೀನಂಥವನಲ್ಲ. ನಿನಗೆ ತಿಳಿಸದಂತೆಯೇ ಅವನು ಹೀಗೆ ಮಾಡಿದ್ದಾನೆ' ಎಂದು ಬಾಧೆಪಡುತ್ತಾ 'ನೀನು ತಿಳಿಸಯ್ಯಾ, ನಾನು ಮಾತನಾಡಲಾರೆ' ಎಂದು ಪಕ್ಕದಲ್ಲಿರುವಾತನಿಗೆ ತಿಳಿಸಿದ. ಆತ ನನ್ನನ್ನು ನೋಡಿ ಹೇಳಲಾರಂಭಿಸಿದ–

'ಅಪ್ಪಾ, ಇಂದಿಗೆ ಹತ್ತು ಹದಿನೈದು ದಿನಗಳಾದುವು. ಒಂದು ದಿನ ರಾತ್ರಿ ನಾಲ್ಕು ಜನ ಕಳ್ಳರು ಬಿದ್ದರು ಈ ಮನೆಗೆ ! ಗಂಡ ಹೆಂಡಿರನ್ನು ಕೈಕಾಲು ಕಟ್ಟಿ ಸಾಯಬೀಳ ಹೊಡೆದರು. ಆ ಹೊಡೆತಗಳಿಗೆ ಇಬ್ರೂ ಸಾಯಬೇಕಾಗಿತ್ತು. ಅವರಲ್ಲೊಬ್ಬ ಈತನ ಎದೆಯ ಮೇಲೆ ಕುಳಿತು 'ನಾನು ಹಾವಾಡಿಗರವನು. ಹಿಂದೊಮ್ಮೆ ಸ್ವಾಮಿಯ ಮಾರಾಜನಂಥಾ ಸಾಕು ಮಗನನ್ನು ನಾನು ದಕ್ಕಿಸಿಕೊಳ್ಳಬೇಕೆಂದಿದ್ದವನು! ಹಾರಿಸಿಕೊಂಡು ಹೋಗಬೇಕೆಂದು ಹಂಚಿಕೆ ಹೂಡಿದವನು ನಾನು ! ಸ್ವಾಮಿಯ ಆಸ್ತಿಯನ್ನೆಲ್ಲಾ ನುಂಗಿ ನೀರು ಕುಡಿದುಬಿಟ್ಟಿದೀಯೆ. ನಿನಗೆ ಮಕ್ಕಳು ಮರಿಗಳಿಲ್ಲ. ಆ ಕಂದಮ್ಮಗಳ ಆಸ್ತಿಯನ್ನೆಲ್ಲಾ ಸ್ವಾಹಾ ಮಾಡಿದಿಯಲ್ಲಾ ! ನಿನಗಿನ್ನೂ ಮಕ್ಕಳಾಗುತ್ತಾರೆಂಬ ಆಸೆಯಿದೆಯೇನೋ ! ನಿನ್ನ ಹೆಂಡತಿಯನ್ನು ಕೊಂದು ಹಾಕಿದೇವೆ. ನೀನಿನ್ನು ಬದುಕಲಾರೆ. ನೀನು ಒಂದು ವರ್ಷದವರೆಗೆ ಮಂಚದ ಮೇಲಿಂದ ಕದಲದ ಹಾಗೆ ನಿನ್ನ ಜಂಟಿ ಎಲುಬುಗಳನ್ನು ಮುರಿದು ಹೋಗುತ್ತೇನೆ. ನಿನಗೆ ಬುದ್ಧಿ ಇದ್ದರೆ, ನೀನು ಸಾಯುವುದರೊಳಗೆ ಸ್ವಾಮಿಯ ಮಕ್ಕಳಿಗೆ ಆಸ್ತಿಯನ್ನೆಲ್ಲಾ ಬರೆದಿಟ್ಟು ಸಾಯಿ! ಇಲ್ಲದೇ ಹೋದರೆ ಕೊರಗಿ ಸಾಯುತ್ತೀಯಾಗಲೀ ನೀನು ಬದುಕಿರುವುದು ಮಾತ್ರ ಸುಳ್ಳು' ಎಂದು ಜೋಡಿ ಪಕ್ಕೆಲುಬುಗಳನ್ನು ಮುರಿದು ಈ ದುಸ್ಥಿತಿಗೆ ತಂದಿಟ್ಟು ಹೋಗ್ಬಿಟ್ಟ. ಈತನ ಹೆಂಡತಿ ಆ ಮರುದಿನವೇ ಸತ್ತುಹೋದಳು' ಎಂದು ತಿಳಿಸಿದ. 'ಹಾಗಾದರೆ ಪೊಲೀಸರಿಗೇಕೆ ರಿಪೋರ್ಟ್ ಕೊಡಲಿಲ್ಲ?' ಎಂದು ಕೇಳಿದೆ. ನನ್ನ ತಮ್ಮಂದಿರ ಸೋದರಮಾವ ಹೀಗೆ ನುಡಿದ–

'ಯಾರ ಮೇಲೆ ಕೊಡಬೇಕೆನ್ನುತ್ತಿ? ಅವನು ಹೊರಟು ಹೊಗುತ್ತಾ, 'ನನ್ನ ಮೇಲೆ ರಿಪೋರ್ಟು ಕೊಡುವುದೇನೂ ಬೇಡ. ನಾನು ನಾಳೆಯೋ ನಾಳಿದ್ದೋ ತಿವಿದುಕೊಂಡು ಸಾಯುತ್ತೇನೆ' ಎಂದು ತಿಳಿಸಿ ಹೋದ.' 'ಅವನು ನನಗೆ ಕಾಣಿಸಿಯೇ ಕಾಣಿಸುತ್ತಾನೆ.' ಎಂದೆ ನಾನು. ಅದಕ್ಕೆ ಆತ 'ಅವನು ಕಾಣಿಸೋಲ್ಲವೋ. ಅವನೀಗಾಗಲೇ ಸತ್ತುಹೋಗಿರ್ತಾನೆ, ನನ್ನೊಂದಿಗೆ ಹೇಳಿಯೂ ಹೇಳಿದ, 'ನಾನೀ ಕೆಲಸ ಮಾಡಿದ್ದೇನೆಂದು ಆ ಮಾರಾಜನಿಗೇನಾದ್ರೂ ಗೊತ್ತಾಗಿಬಿಟ್ರೆ ನನ್ನನ್ನು ಕೊಂದೇಬಿಡ್ತಾನೆ. ಈ ಕೆಲಸ ಮಾಡಿದ ಮೇಲೆ ನಾನು ಆ ದೊರೆಗೆ ಮುಖ ತೋರಿಸಲಾರೆ. ನಾನೀ ಕೆಲಸ–ಆತನಿಗೆ ಉಪಕಾರ ಮಾಡಿದಂತಾಗುತ್ತೆಂದು

ಮಾಡಿದ್ದೇನೆ. ಉಪಕಾರವೋ, ಅಪಕಾರವೋ ಏನಾದರೂ ಸರಿಯೇ!' ಎಂದ. 'ಇದಕ್ಕಿಂತ ಮಾಡುವುದೇನೂ ಇಲ್ಲ'ವೆಂದ. ಆದರೆ ನಾನು ನಿನ್ನ ಮಾವನ ಮಗಳನ್ನು ನಿನಗಿಲ್ಲದಂತೆ ಮಾಡಿದ್ದರಿಂದ ಅವನು ನನಗೆ ಕೊಟ್ಟ ಹಿಂಸೆ ಅಷ್ಟಿಷ್ಟಲ್ಲ ಕಣಪ್ಪಾ ! ಅವನಿಗೆ ಶರೀರದ ಆಯಕಟ್ಟಿನ ಸ್ಥಳಗಳು ಅವೇನು ಗೊತ್ತಿವೆ ಅಂತ ! ಅವನು ನನ್ನನ್ನು ಎಲ್ಲೆಲ್ಲಿ ತಿವಿದನೋ, ಆ ಯಾತನೆ–ಆ ದಿನ ಹೇಗಿತ್ತೋ ಇಂದಿಗೂ ಅದೇ ರೀತಿ ಇದೆ. ಆದರೂ ನಾನು ಬಲ್ಲೆ–ನನಗೆ ಅತ್ಯಂತ ಕೋಪ ಬಂದಿತು. ಇಂದಿಗೂ ಕೋಪ ಹಾಗೆಯೇ ಇದೆ. ಆದರೆ ಸಾಯುವಾಗಲೂ ಇನ್ನೂ ಅದೆಲ್ಲಾ ಏಕೆ? ಇಗೋ, ಈ ದಿಂಬಿನ ಕೆಳಗೆ ಉಯಿಲು ಬರೆದಿಟ್ಟಿರುವೆ. ತೆಗೆದುಕೋ. ಆಸ್ತಿಯನ್ನೆಲ್ಲಾ ನಿನ್ನ ತಮ್ಮಂದಿರ ಹೆಸರಿಗೆ ಬರೆದಿರುವೆ. ಆದರೆ ನಿನ್ನ ಮೇಲೆ ನನಗೆ ಕೋಪವಿಲ್ಲ. ನೀನು ನನಗೆ ಮಾಡಿದ ಅಪಕಾರವೇನೂ ಇಲ್ಲ. ಆದರೂ ನಾನೂ ಬದುಕಿದರೆ ಮಾತ್ರ–ನಿನ್ನನ್ನು ನಾಶನ ಮಾಡಬೇಕೆಂದೇ ನೋಡ್ತೇನೆ. ನೀನು ನನ್ನನ್ನು ದುಷ್ಟನೆಂದು ಭಾವಿಸಿಕೊಳ್ಳುತ್ತಿರಬಹುದು. ಆದರೆ ನಿನ್ನ ಮೇಲೆ, ಸತ್ತರೂ ನನಗೆ ಕೋಪ ಹೋಗದು. ಕೋಪವೇಕೆ ಎನ್ನುತ್ತೀಯೋ? ನಿನ್ನಿಂದಾಗಿಯೇ ನನ್ನ ವ್ಯವಹಾರದ ಮಸಲತ್ತುಗಳೆಲ್ಲಾ ಕೆಟ್ಟುಹೋದುವು. ಇನ್ನು ನಾನು ಮಾತನಾಡಲಾರೆ. ಉಯಿಲು ತೆಗೆದುಕೊಂಡು ಹೋಗು !' ಎಂದು ಮತ್ತೆ ಯಾತನೆಪಡಲಾರಂಭಿಸಿದ.

ಆಸ್ತಿಯನ್ನೆಲ್ಲಾ ನನ್ನ ಹೆಸರಿಗೇನಾದರೂ ಆ ಉಯಿಲಿನಲ್ಲಿ ಬರೆದಿದ್ದ ಪಕ್ಷಕ್ಕೆ ಅದನ್ನು ಆತನ ಮುಖದ ಮೇಲೆಯೇ ಒಗೆದು ಬಂದುಬಿಡುತ್ತಿದ್ದೆ. ನನಗಿಷ್ಟವಿಲ್ಲದೇ ಹೋದರೂ ಆ ಉಯಿಲನ್ನು ತೆಗೆದುಕೊಳ್ಳದೇ ಇರದಾದೆ. ಉಯಿಲನ್ನು ಕೈಗೆತ್ತಿಕೊಂಡು, ಓದಿನೋಡಿ, ಎಲ್ಲಾ ಸಕ್ರಮವಾಗಿದೆ ಎಂದು ಮನಗಂಡು, ಅಂಗಿಯ ಜೇಬಿನಲ್ಲಿರಿಸಿಕೊಂಡೆ. 'ಮಾವಾ, ನಮ್ಮೂರಿಗೆ ಕರೆದುಕೊಂಡು ಹೋಗುತ್ತೇನೆ, ಬಾ. ನಿನಗೆ ವಾಸಿಯಾಗುವಂತೆ ಮಾಡುತ್ತೇನೆ. ನೀನು ಬದುಕಿದರೆ ನಿನ್ನ ದಾರಿ ಹಿಡಿದು ಹೋಗುವಿಯಂತೆ. ಬೇಕಾದರೆ ನಿನ್ನಿಷ್ಟ ಬಂದ ಹಾಗೆ ನನ್ನನ್ನು ಸಾಧಿಸು! ಬಾ, ನಮ್ಮೂರಿಗೆ ಕರೆದುಕೊಂಡು ಹೋಗುವೆ' ಎಂದೆ. ಆತ ಅತ್ತ ತಿರುಗಿ 'ಹೋಗು ಹೋಗು !' ಎಂದು ಕೈಯಾಡಿಸಿದ.

ಊರಿಗೆ ಬಂದೆ. ನನ್ನಲ್ಲಿ ತುಂಬ ಮಾರ್ಪಾಟುಂಟಾಯಿತು. ನನ್ನ ಚಿಕ್ಕಮ್ಮ, ನನ್ನ ಮಾವನ ಮಗಳು ಆಮೇಲಾಮೇಲೆ ನನ್ನನ್ನು ನೋಡಿ ತುಂಬ ಆಶ್ಚರ್ಯಪಡಲಾರಂಭಿಸಿದರು. ನನ್ನಲ್ಲಿ ಎಲ್ಲಾ ಮಾರ್ಪೇಮಾರ್ಪು. ನಾನು ಮೊದಲು ಅವಸರವಾಗಿ ನಡೆಯುತ್ತಿದ್ದೆ ; ಕೋಪವೂ ಪ್ರೇಮವೂ ಮುಖದಲ್ಲಿ ಅಚ್ಚೊತ್ತಿದಂತೆ ಕಾಣಿಸುತ್ತಿತ್ತು. ಈಗ ಅದೇನೂ ಇಲ್ಲ. ಎಮ್ಮೆಯ ಮೇಲೆ ಮಳೆ ಸುರಿದಂತೆಯೇ. ಊಟಕ್ಕೇಳು ಎಂದರೆ ಕೂಡಲೇ ಏಳುವುದಿಲ್ಲ. ಯೋಚನೆಯೂ ಇಲ್ಲ. ಏನು ಇಲ್ಲ. ಯೋಚನೆ ಮಾಡುತ್ತಿರುವಂತೆ ಸುಮ್ಮನೆ ಕುಳಿತುಕೊಳ್ಳುವುದು. ನನ್ನ ಚಿಕ್ಕಮ್ಮ 'ಇದೇನು ಮಗಾ ಹೀಗೆ ನಿಸ್ತಬ್ಧನಾಗಿಬಿಟ್ಟೆ' ಎನ್ನುತ್ತಿದ್ದಳು. ನಾನು ಹಾಗೇಕೆ ನೋಡುತ್ತೀ ಎಂದು ನಿಧಾನವಾಗಿ ಕೇಳುತ್ತಿದ್ದೆ. ಆವಳು 'ನೀನು ಹೇಗೆ ಬದಲಾಯಿಸಿಬಿಟ್ಟೆಯಲ್ಲಾ' ಎನ್ನುತ್ತಿದ್ದಳು.

ಆ ವರ್ಷ ನಮ್ಮ ಹೊಲಗಳು ಹೇಗೆ ಬೆಳೆದುವು ಅಂತ! ಸಾಲವನ್ನೆಲ್ಲಾ ತೀರಿಸಿದೆ. ಮದುವೆಗೆ ಹಣ ತೆಗೆದಿರಿಸಿದೆ. ಊರಿನಲ್ಲಿ ಎಲ್ಲರಿಂದಲೂ 'ಹತ್ತು ದಿನಗಳಲ್ಲಿ ಎಷ್ಟು ಹಿರಿಯನಾಗಿಬಿಟ್ಟ! ಮೊದಲೇ ಬುದ್ಧಿವಂತ. ಈಗ ಮತ್ತಿಷ್ಟು' ಎಂಬ ಹೆಸರು ಬಂದಿತು ನನಗೆ.

ನನ್ನ ಚಿಕ್ಕಮ್ಮ ಒಂದು ದಿನ ರಹಸ್ಯವಾಗಿ ನನಗೆ ತಿಳಿಸಿದಳು–

'ಮಗೂ, ಜಾಗ್ರತೆ ಮದುವೆ ಮಾಡಿಬಿಡಬೇಕು. ನಿನ್ನ ಮಾವನ ಮಗಳು ಈ ಸಲ ಮುಟ್ಟಾಗಲಿಲ್ಲ!'

## ೨೦

ಮರುದಿನ ಬೆಳಿಗ್ಗೆ ಏಳುತ್ತಲೇ ಪುರೋಹಿತರ ಮನೆಗೆ ಹೋಗಿ ಲಗ್ನಕ್ಕೆ ಮುಹೂರ್ತವನ್ನಿಡಿಸಿದೆ. ಹತ್ತು ದಿನಗಳ ಬಳಿಕ ಮುಹೂರ್ತವಿತ್ತು. 'ಅಷ್ಟೇನೂ ಚೆನ್ನಾಗಿಲ್ಲ. ಇದ್ದುದರ ಪೈಕಿ ಈ ಮುಹೂರ್ತ ಪರವಾಗಿಲ್ಲ. ಒಳ್ಳೆಯ ಮುಹೂರ್ತ ಬೇಕಾಗಿದ್ದರೆ ವೈಶಾಖದವರೆಗೆ ಕಾಯಬೇಕು. ಆದರೆ ನೀನು ಅವಸರಪಡುತ್ತಿರುವೆಯಾದ್ದರಿಂದ ಇದನ್ನು ನಿಶ್ಚಯಿಸಿದ್ದೇನೆ. ಈ ಮುಹೂರ್ತದಲ್ಲಿ ಲಗ್ನ ಮಾಡುವುದಕ್ಕಿಂತ ಮುಂಚೆ ಕೆಲವು ಶಾಂತಿಗಳನ್ನು ಮಾಡಿಸಿದರೆ ಒಳಿತು' ಎಂದರು ಪುರೋಹಿತರು. ನಾನು ಮದುವೆಯನ್ನು ಹೆಚ್ಚು ಖರ್ಚಿಲ್ಲದೆ ಯಾವುದೋ ಒಂದು ರೀತಿಯಲ್ಲಿ ಆಯಿತು ಎನ್ನಿಸಬೇಕೆಂದಿದ್ದೆನು. ಇದುವರೆಗಾಗಲೇ ಸಾಲ ಮಾಡುವುದೂ, ತೀರಿಸುವುದು–ಹೀಗೆ ಮೂರು ಬಾರಿಯಾಗಿದೆ. ಈ ಮಧ್ಯೆ ಸಾಲ ತೀರಿಸಿದಾಗ ನಾನು ಪಟ್ಟ ಅವಸ್ಥೆ ಅಷ್ಟಿಷ್ಟಲ್ಲ. ಆದರೂ ಇನ್ನೂರು ರೂಪಾಯಿ ಸಾಲ ಮಾಡದೆ ವಿಧಿಯಿಲ್ಲದಾಯಿತು. ಮದುವೆಗೆ ಬೇಕಾದ ಸಾಮಾನು–ಸರಂಜಾಮುಗಳನ್ನೆಲ್ಲಾ ಸಿದ್ಧಪಡಿಸಿ, ಗುಂಟೂರಿಗೆ ಹೋಗಿ, ನನ್ನ ತಮ್ಮಂದಿರನ್ನೂ, ನನ್ನ ಮಾವನ ಮಗನನ್ನೂ ಕಂಡು, ಮದುವೆ ಇಂಥಾ ದಿನವಿದೆ. ನೀವು ಆ ಹೊತ್ತಿಗೆ ಊರಿಗೆ ಬಂದುಬಿಡಿ ಎಂದು ತಿಳಿಸಿದೆ. ನನ್ನ ತಮ್ಮ 'ಹದಿನೈದು ದಿನವೆಂದರೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿಬಿಡುತ್ತೆ. ಪರೀಕ್ಷೆಗಳು ಮುಗಿದ ಮೇಲೆಯೇ ಮುಹೂರ್ತ ನಿಶ್ಚಯಿಸು' ಎಂದ. 'ಮಗು, ನಿನಗೆ ತಿಳಿಯದಪ್ಪಾ. ಈ ಮುಹೂರ್ತವಾದರೂ ಅತಿ ಕಷ್ಟದ ಮೇಲೆ ಕುದುರಿದೆ. ಇದು ಬಿಟ್ಟರೆ ಮುಂದೆ ಎರಡು ತಿಂಗಳ ತನಕ ಮುಹೂರ್ತವೇ ಇಲ್ಲವಂತೆ' ಎಂದೆ. ಅವನು 'ಎರಡು ಮೂರು ತಿಂಗಳು ಕಳೆದ ಮೇಲೆಯೇ ಮಾಡಿಕೊಳ್ಳುತ್ತೇನೆ. ಈಗಾದರೆ ನನ್ನ ಪರೀಕ್ಷೆಗೆ ತೊಂದರೆಯಾಗುತ್ತೆ' ಎಂದ. ನಾನು 'ನಿನಗೆ ತಿಳಿಯದು, ನಾನೇಕೆ ಹೇಳುತ್ತಿರುವೆನೋ ಶ್ರದ್ಧೆಯಿಟ್ಟು ಕೇಳು. ನೀನು ಕೂಡಲೇ ಮದುವೆ ಮಾಡಿಕೊಂಡುಬಿಡಬೇಕು' ಎಂದೆ. ಅವನಿಗೆ ನಾನೆಷ್ಟು ಹೇಳಿದರೂ ಅಂತರಾರ್ಥ ತಿಳಿಯದೇಹೋಯಿತು. ಕೊನೆಗೆ ಗತ್ಯಂತರವಿಲ್ಲದೆ ಇದ್ದ ವಿಷಯ ಬಾಯಿ ಬಿಡಬೇಕಾಯಿತು.

'ಈಗ ತಪ್ಪಿ ಮದುವೆ ಮಾಡಿಕೊಳ್ಳದಿದ್ದರೆ – ಮುಂದೆ ನಾವು ಮುಖವೆತ್ತಿಕೊಂಡು ತಿರುಗಾಡದಂತಾಗಿಬಿಡುತ್ತೆ ಬೇಕಾದರೆ ನೀನು ಮದುವೆ ನಾಳಿದ್ದು ಇದೆ ಎನ್ನುವಾಗ ಊರಿಗೆ ಬಾ. ಈಗ ಹೇಗಿದ್ದರೂ ರಜಾ ದಿನಗಳು ತಾನೇ. ಈಗಲೇ ಊರಿಗೆ ಬಂದು ಅಲ್ಲಿಯೇ ಓದಿಕೊಳ್ಳಬಹುದಲ್ಲಾ. ಮದುವೆಯಾದ ಮೂರನೇ ದಿನಕ್ಕೇನೇ ಪ್ರಸ್ಥ ಮುಗಿಸಿಬಿಡೋಣ. ಆ ಮರುದಿನವೇ ನಿನ್ನನ್ನೂ, ನಿನ್ನ ಹೆಂಡತಿಯನ್ನೂ ಕಳಿಸಿಕೊಡುತ್ತೇನೆ. ರಜೆ ಮುಗಿಯುತ್ತಲೇ ಇಬ್ಬರೂ ಹೊರಟು ಬಂದುಬಿಡುವಿರಂತೆ' ಎಂದೆ. ಅವನು ಒಪ್ಪಿಕೊಂಡ. ಅವರೆಲ್ಲರನ್ನೂ ಊರಿಗೆ ಕರೆದುಕೊಂಡು ಬಂದೆ. ಬರುತ್ತಾ ದಾರಿಯಲ್ಲಿ ನನ್ನ ಸಾಕುತಂದೆಯ ಊರ ಮೇಲೆ ಹಾದು ಬಂದೆ. ನನ್ನ ತಮ್ಮಂದಿರ ಸೋದರಮಾವ ಸತ್ತುಹೋದನೆಂಬ ಸುದ್ದಿ ತಿಳಿದು ಬಂದಿತು. ಆತ ನನ್ನ ತಮ್ಮಂದಿರ ತಾಯಿಯ ಚಿಕ್ಕಪ್ಪನ ಮಗನಾದ್ದರಿಂದ–ಸ್ನಾನ ಮಾಡುವ ಅಗತ್ಯವೂ ಇಲ್ಲದಾಯಿತು. ಊರು ತಲುಪಿದೆವು. ಎರಡು ಮೂರು ದಿನ ಪುರೋಹಿತರು ಶಾಂತಿ ಮಾಡಿದರು. ಹಗಲು ಲಗ್ನ. ನನ್ನ ಮಾವನ ಮಗಳು–ಮದುವೆ ಎಂದಂದಿನಿಂದ ಅದೊಂದು ತೆರಗಿನ ದಿಗಿಲಿನಿಂದಿದ್ದಳು. ತನ್ನನ್ನು ತಾನು ಅಸಹ್ಯಿಸಿಕೊಳ್ಳುತ್ತಿದ್ದಳು. ಹೊತ್ತಿಗೆ ಸರಿಯಾಗಿ ಊಟ ಮಾಡುತ್ತಿರಲಿಲ್ಲ. ನನ್ನ ತಮ್ಮನನ್ನು ಕಂಡರೆ ಮಾತು ಆಡಿಸುತ್ತಿರಲಿಲ್ಲ. ಅವನು ಮನೆಯಲ್ಲಿದ್ದಷ್ಟು ಹೊತ್ತೂ, ಅವಳು ಅವನಿದ್ದ ಸ್ಥಳಕ್ಕೇನೇ ಕಾಲಿರಿಸುತ್ತಿರಲಿಲ್ಲ. ಮದುವಣಗಿತ್ತಿಯಾದ್ದರಿಂದ ನಾಚುತ್ತಿರುವಳೆಂದು ಭಾವಿಸಿದೆವು. ಅವನ ಪಕ್ಕದಲ್ಲಿ ಕುಳಿತುಕೊಳ್ಳುವುದಕ್ಕೂ ಇಷ್ಟಪಡುತ್ತಿರಲಿಲ್ಲ. ಮದುಮಗಳನ್ನು ಮಾಡುವಾಗ 'ನನಗೆ ಬೇಕಾಗಿಲ್ಲ' ವೆಂದು ತುಂಬ ತೊಂದರೆ ಕೊಟ್ಟಳು. ಮದುವೆಯ ದಿನವಂತೂ ಅಳುತ್ತಾ ಕುಳಿತುಬಿಟ್ಟಳು. ನನ್ನ ಚಿಕ್ಕಮ್ಮ 'ಇದೇನೇ ಅಶುಭ!' ಎಂದರೆ 'ನನ್ನ ಕರ್ಮ! ನಾನು ಈ ರೀತಿ ಮದುವೆಯಾಗಬೇಕಾಗಿ ಬಂತೇ' ಎಂದು ಮರುನುಡಿದಳು. 'ನಮ್ಮ ತಾಯಿ ಸತ್ತದ್ದರಿಂದ ನನಗೆ ಎಲ್ಲಾ ವಿಧದಿಂದಲೂ ನಷ್ಟವೇ ಆಯಿತು. ನಾನು ಸರ್ವ ರೀತಿಯಿಂದಲೂ ಹಾಳಾದೆ' ಎಂದು ಗೋಳಾಡಿದಳು. ಏನಾದರೇನು ಮದುವೆಯ ಶಾಸ್ತ್ರವನ್ನೊಂದಿಷ್ಟು ಮಾಡಿ ಮುಗಿಸಿದೆವು. ಮದುಮಗನ ತಲೆಯ ಮೇಲೆ ಅಕ್ಕಿಯನ್ನು ಸುರಿಯುವಾಗ–ಮಧುಪರ್ಕವನ್ನು ಕಟ್ಟಿಕೊಳ್ಳುವಾಗ–ಹಸೆಮಣೆಯ ಮೇಲೆ ಕುಳಿತುಕೊಳ್ಳುವಾಗ ಹಟ ಮಾಡದೇ ಇರಲಿಲ್ಲ. ಮದುವೆಯ ಕಾರ್ಯಗಳು ಮುಗಿದುವು. ಅವಳಿಂದಾಗಿ ಮದುವೆಯಲ್ಲಿ ಯಾರಿಗೂ ಉತ್ಸಾಹವೇ ಇಲ್ಲದಂತಾಯಿತು. ನನ್ನ ತಂಗಿ–ತನ್ನ ತಮ್ಮನ ಮದುವೆ ನಡೆಯುತ್ತಿದೆ ಎಂದು ಒಂದಿಷ್ಟು ಉತ್ಸಾಹದಿಂದಿದ್ದಳು. ಆದರೆ ನನ್ನನ್ನು ನೋಡಿದಾಗಲೆಲ್ಲಾ, ನನ್ನ ಮಾವನ ಮಗಳನ್ನು ನೋಡಿದಾಗಲೆಲ್ಲಾ–ಅವಳ ಉತ್ಸಾಹವೆಲ್ಲಾ ಭಗ್ನಗೊಂಡುಬಿಡುತ್ತಿತ್ತು. ನಾನು ಮುಂಚಿನ ಹಾಗೆ ನಗುತ್ತ–ಕೆಲೆಯುತ್ತ ಇಲ್ಲದಿರುವುದನ್ನು ಕಂಡು ನನ್ನ ತಂಗಿಯ ಮನಸ್ಸಿಗೆ ಹೇಗೋ ಆಗುತ್ತಿತ್ತು. ನಾನು ಎಲ್ಲಿ ಕುಳಿತರೆ ಅಲ್ಲಿಯೇ ! ಏನು ಬೇಕಾಗಿ ಬಂದರೂ ಬೇಗನೆ ಏಳುತ್ತಿಲ್ಲ ; ಯಾವ ಕೆಲಸವನ್ನೂ ಬೇಗ ಮಾಡುತ್ತಿಲ್ಲ. ಯಾರಾದರು ಕರೆದರೆ ಕೂಡಲೇ ಮರುನುಡಿಯುವುದಿಲ್ಲ. ಅವಸರಪಡಬೇಕಾದ ಹೊತ್ತಿನಲ್ಲೂ ನಿಧಾನ ಮಾಡುವಂತಾದೆ. ನಾನು ಇದನ್ನೆಲ್ಲಾ

ಬುದ್ಧಿಪೂರ್ವಕವಾಗಿ ಮಾಡುತ್ತಿಲ್ಲ. ಒಂದು ತಿಂಗಳಲ್ಲಿಯೇ ನನ್ನ ಸ್ವಭಾವವೆಲ್ಲಾ ಇದ್ದಕ್ಕಿದ್ದಂತೆಯೇ ಬದಲಾಯಿಸಿಬಿಟ್ಟಿತು. ಅದು ನನಗೇ ಆಶ್ಚರ್ಯವನ್ನುಂಟುಮಾಡಿತು. ಮದುವೆ ಮುಗಿದ ಮೂರನೆಯ ದಿನವೇ ಕಂಕಣಗಳನ್ನು ಬಿಚ್ಚಿ, ಪ್ರಸ್ಥಮಾಡಿದೆವು. ಊರಿನ ಮುತ್ತೈದೆಯರು ಬಂದರು. ಆ ದಿನ ರಾತ್ರಿ ನನ್ನ ಮಾವನ ಮಗಳು ಕೋಣೆಯೊಳಗೆ ಹೋಗುವುದಿಲ್ಲವೆಂದು ಮಂಕುಪಟ್ಟು ಹಿಡಿದಳು. ಎಲ್ಲರೂ ಕೇಳಿಕೊಂಡರು. ಅಂಗಲಾಚಿದರು, ಗೋಗರೆದರು. ಯಾರು ಕೇಳಿಕೊಂಡರೂ ಹೋಗಲಿಲ್ಲ. ಕೊನೆಗೆ ನಾನು ಅಲ್ಲಿಗೆ ಹೋದೆ. ನನಗೆ ಕೋಪ ಬಂದಿತು–ನಿಜಕ್ಕೂ ಅದು ಕೋಪವಲ್ಲ. 'ಏನಮ್ಮಾ ಇದು! ಇಷ್ಟು ಮಾಡಿಬಿಟ್ಟಿರುವೆ ! ಈಗೇಕೆ ಈ ಗಲಾಟೆ?' ಎಂದೆ. ಅವಳು 'ಮಾವಯ್ಯಾ ನಾನು ಸಾಯುತ್ತೇನೆ. ನನ್ನಿಂದಾಗಿ ನಿಮ್ಮೆಲ್ಲರಿಗೂ ಇಷ್ಟೇಕೆ ಕಷ್ಟ ?' ಎಂದಳು. 'ಹಾಗೇ ಆಗಲಿ. ಆಮೇಲೆ ನನ್ನಿಷ್ಟ ಬಂದ ಹಾಗೆ ನೀನು ಮಾಡಬಹುದು. ನಿನ್ನಿಷ್ಟ ಬಂದ ಹಾಗೆ ನಾನು ಮಾಡಬಹುದು. ಆದರೆ ಅವನು ಹಸುಗೂಸಿನಂಥವನು. ಅವನ ಸುಖವನ್ನು ನೀನಾಗಲೀ, ನಾನಾಗಲೀ ಹಾಳುಮಾಡುವುದಕ್ಕೆ ಸಾಧ್ಯವಿಲ್ಲ. ಅವನು ಅಮಾಯಕ. ಅವನನ್ನು ನೀನೀ ರಂಗಕ್ಕೆಳೆದಿರುವೆ. ಅಥವಾ ಅವನೇ ನಿನ್ನನ್ನು ಎಳೆದಿರಬಹುದು. ಏನೇ ಆದರೂ, ಆ ತಪ್ಪೆಲ್ಲಾ ನಿಮ್ಮಿಬ್ಬರದಲ್ಲದಿದ್ದರೂ ಭಗವಂತನ ಇಷ್ಟ ಹೀಗಾಗಬೇಕೆಂದಿತ್ತು, ನಡೆಯಿತು. ನೀನೇನಾದರೂ ಅವನಿಗೆ ದುಃಖ ಉಂಟಾಗುವಂತೆ ನಡೆದುಕೊಂಡೆಯೋ ನಾನು ಸಹಿಸುವುದಿಲ್ಲ. ನನ್ನ ಎಲ್ಲ ಆಸೆಗಳನ್ನೂ ಅವನ ಮೇಲೆಯೇ ಇಟ್ಟುಕೊಂಡಿದ್ದೇನೆ. ಸತ್ತ ನನ್ನ ಆ ಸ್ವಾಮಿಯೂ, ಭಗವಂತನೂ ಅವನ ಬಗ್ಗೆ ಪ್ರೀತಿಯಿಂದಿದ್ದಾರೆ. ನಾನವನ ಒಳಿತು ಕೆಡುಕುಗಳನ್ನು ನೋಡಿಕೊಳ್ಳುತ್ತಿರುವೆ. ನಿನ್ನಿಂದಾಗಿ ಅವನಿಗೆ ಕಷ್ಟ ಬರದಂತೆ ನೋಡಿಕೋ. ಇನ್ನು ಕೋಣೆಗೆ ಹೋಗು. ಅವನನ್ನೇನೂ ಅನ್ನಬೇಡ. ಅವನೊಂದಿಗೆ ಇದನ್ನೆಲ್ಲಾ ಎತ್ತಬೇಡ. ನಾಳೆ ಬೆಳಿಗ್ಗೆ ಅವನ ಮುಖದಲ್ಲಿ ಒಂದಿಷ್ಟೇನಾದರೂ ಕಷ್ಟವಿದ್ದ ಹಾಗೆ ನನಗೆ ಕಂಡುಬಂತೆಂದರೆ, ಈ ತನಕ ನನ್ನ ಬಗ್ಗೆ ನೀವೆಲ್ಲಾ ಅಂದುಕೊಳ್ಳುತ್ತಿರುವುದು ನಿಜವಾಗಿಬಿಡುತ್ತದೆ' ಎಂದೆ. ಅವಳು ಪ್ರಸ್ಥದ ಕೋಣೆಯನ್ನು ಪ್ರವೇಶಿಸಿದಳು.

ಆ ರಾತ್ರಿ ನಾನು ಎತ್ತುಗಳ ಅಂಕಣದಲ್ಲಿ ಮಲಗಿಕೊಂಡೆ. ಆಲೋಚಿಸೀ, ಆಲೋಚಿಸೀ ಅದೇ ತಾನೇ ನನಗೆ ಸ್ವಲ್ಪ ನಿದ್ರೆ ಹತ್ತಿತ್ತು. ನನ್ನ ಮಾವನ ಮಗ ಬಂದು ನನ್ನ ಪಕ್ಕದಲ್ಲಿ ಮಲಗಿಕೊಂಡ. ನನಗೆ ಎಚ್ಚರವಾಗಿ ಅವನನ್ನು ಕಂಡು 'ನೀನೇಕೋ ಇಲ್ಲಿ? ಹೋಗಿ ಒಳಗೆ ಮಲಗು' ಎಂದೆ. ಅವನು 'ಭಾವಾ, ನಿನಗಿಂತಲೂ ದುರ್ಮಾರ್ಗನಿಲ್ಲ. ನೀನೆಷ್ಟು ಒಳ್ಳೆಯವನೆಂದು ಕೊಂಡಿದ್ದೆನೋ ಅಷ್ಟೂ ಕೆಟ್ಟವನು ನೀನು. ನಾನು ನಿನ್ನ ಹತ್ತಿರವೇ ಮಲಗಿಕೊಳ್ತೇನೆ' ಎಂದ. 'ನಾನೆಲ್ಲಿಗಾದರೂ ಹೋಗಿಬಿಡ್ತೀನಿ ಅಂತ ಭಯವೇನು ಕಣೋ?' ಎಂದೆ. ಅವನು ನನ್ನ ಕುತ್ತಿಗೆಗೆ ತನ್ನೆರಡೂ ಕೈಗಳನ್ನು ಸುತ್ತಿ, ನನ್ನನ್ನು ಅಪ್ಪಿಕೊಂಡು ಮಲಗಿದ. ನಾನು ಮೆಲ್ಲಗೆ ಅವನ ಕೈಗಳನ್ನು ಬಿಡಿಸಿ, ಅವನ ಮೇಲೆ ಕೈಹಾಕಿ ಅವನನ್ನು ಸಮೀಪಕ್ಕೆ ಒತ್ತಿಕೊಂಡು ಮಲಗಿಕೊಂಡೆ.

ಬೆಳಿಗ್ಗೆ ಎಚ್ಚರವಾಗುತ್ತಲೇ ನನಗೆ ತಟ್ಟಿದ ಮೊಟ್ಟಮೊದಲ ಯೋಚನೆ ಎಂದರೆ–ನನ್ನ ತಮ್ಮನನ್ನು ಕಂಡು, ಅವನ ಮುಖಭಾವದ ಮೇಲಿಂದ ಏನು ನಡೆಯಿತೋ ಮನಗಾಣಬೇಕೆಂದು. ಅವನು ಹೊತ್ತಾದ ಮೇಲೆ ಎದ್ದ. ನನ್ನ ಮಾವನ ಮಗನನ್ನು ಕರೆದು 'ನಿಮ್ಮ ಭಾವನಿಗೆ ಕಾಫಿ ಕಾಯಿಸೋ' ಎಂದೆ. ನನ್ನ ತಮ್ಮ ಕಾಲಕೃತ್ಯಾದಿಗಳನ್ನು ಮುಗಿಸುವುದರೊಳಗೆ ನನ್ನ ಮಾವನ ಮಗ ಕಾಫಿ ತೆಗೆದುಕೊಂಡು ಹೋಗಿ ಅವನಿಗೆ ಕೊಟ್ಟು ಬಂದ. ನಾನು–ಅವನೇನು ಮಾತನಾಡುತ್ತಿರುವನೋ, ಹೇಗಿರುವನೋ ಎಂದು ಗಮನಿಸುತ್ತಿದ್ದೆ. ಅವನ ಮುಖ ಅಷ್ಟಾಗಿ ಅರಳಿಲ್ಲ. ನನಗೆ ಅನುಮಾನವಾಯಿತು. ನಾನು ತಾನೇ ಮಾಡುವುದೇನಿದೆ? ನನ್ನ ಮಾವನ ಮಗಳ ಬಳಿಗೆ ಹೋಗಿ– 'ನೋಡಮ್ಮಾ, ನಿನ್ನ ಗಂಡ ಕಾಫಿ ಕುಡಿದಿದ್ದಾನೆ. ಹೋಗಿ ಎಲೆ ಅಡಿಕೆ ಕೊಟ್ಟು ಬಾ' ಎಂದೆ. ಅವಳು ಕೂಡಲೇ ಕೋಣೆಯೊಳಗೆ ಹೋಗಿ ತಾಂಬೂಲ ಕೊಟ್ಟು ಬಂದಳು. ನನ್ನ ಮನಸ್ಸು ಕೊಂಚ ಶಾಂತಿಸಿತು.

ಕುಶಲಮ್ಮ ಬಂದು ನನಗೆ ತಿಳಿಸಿದಳು 'ಅಪ್ಪಾ ಮಗೂ, ನಿನ್ನ ತಂಗಿಗೆ ಈಗ ಮೂರು ತಿಂಗಳು.' ನನಗೆ ಬ್ರಹ್ಮಾನಂದವಾಯಿತು. 'ಮತ್ತೆ ಇಷ್ಟು ದಿನ ಗೊತ್ತಾಗಲೇ ಇಲ್ಲವಲ್ಲಾ?' ಎಂದೆ. ಅದಕ್ಕೆ ಕುಶಲಮ್ಮ 'ನಿಮ್ಮ ಚಿಕ್ಕಮ್ಮ ಎರಡು ತಿಂಗಳಿಂದಲೂ ಇಲ್ಲೇ ಇದ್ದುಬಿಟ್ಟಳು. ಅವರಿಬ್ಬರಿಗೂ ತಿಳಿಯದು. ನಾನಲ್ಲಿಗೆ ಹೋದಮೇಲೆಯೇ ಗೊತ್ತಾದ್ದು' ಎಂದಳು. ಮೂರು ನಿದ್ರೆ ಮುಗಿಯುತ್ತಲೇ ಎರಡು ಗಾಡಿಗಳನ್ನು ಕಟ್ಟಿಸಿ ಎಲ್ಲರನ್ನೂ ಗುಂಟೂರಿಗೆ ಕಳಿಸಿಕೊಟ್ಟೆ ಕುಶಲಮ್ಮ, ನನ್ನ ಇಬ್ಬರು ತಮ್ಮಂದಿರು, ನನ್ನ ಮಾವನ ಮಗ ಹಾಗೂ ನನ್ನ ತಮ್ಮನ ಹೆಂಡತಿ ಎಲ್ಲರೂ ಗುಂಟೂರಿಗೆ ತೆರಳಿದರು. ನನ್ನ ತಮ್ಮನ ಹೆಂಡತಿ ನಾನು ಹೋಗಲ್ಲ ಎಂದು ಮೊದಲು ಹಟ ಮಾಡಿದಳು. ನಾನು 'ಈ ಒಂದೆರಡು ತಿಂಗಳು ಓದದೇ ಇದ್ದರೂ ಏನಂತೆ? ಇನ್ಮೇಲಿಂದ ಚೆನ್ನಾಗಿ ಓದು. ಪರೀಕ್ಷೆಯಲ್ಲಿ ಪಾಸಾದರೆ ಮುಂದಿನ ಸಲಕ್ಕೆ ಸ್ಕೂಲ್ ಫೈನಲ್ ಕೂಡಾ ಓದುವಿಯಂತೆ. ಸಾಮಾನ್ಯವಾಗಿ ಹೆಣ್ಣುಮಕ್ಕಳು ಪರೀಕ್ಷೆಯಲ್ಲಿ ಫೇಲಾಗೋಲ್ಲ' ಎಂದೆ. ಅವಳು ನನ್ನ ಒತ್ತಾಯದ ಮೇಲೆಯೇ ಗುಂಟೂರಿಗೆ ಹೋದಳು. ಅವರಿಬ್ಬರೂ ಮದುವೆಯಾದ ಹೊಸತರಲ್ಲಿ ಅಗಲಿರುವುದೇಕೆ ಎಂದು ಬಗೆದು ನಾನು ಕಳಿಸಿಕೊಟ್ಟೆ

ಅವರು ಹೋದಮೇಲೆ–ನನ್ನ ತಂಗಿಯೂ ನನ್ನ ತಂಗಿಯ ಗಂಡನೂ ಒಂದು ವಾರದ ತನಕ ಇದ್ದು ಅನಂತರ ತಮ್ಮ ಊರಿಗೆ ಹೊರಟುಹೋದರು. ನಾನಾಗ ನನ್ನ ಚಿಕ್ಕಮ್ಮನೊಂದಿಗೆ 'ಆ ಹುಡುಗಿಯೊಬ್ಬಳೇ ನಿಭಾಯಿಸಿಕೊಳ್ಳಲಾರಳು. ನೀನು ಕೂಡಾ ಜತೆಗೆ ಹೋಗಮ್ಮಾ' ಎಂದೆ. ಅದಕ್ಕೆ ನನ್ನ ಚಿಕ್ಕಮ್ಮ 'ಈಗಿನ್ನೂ ಮೂರನೆಯ ತಿಂಗಳಲ್ಲಿ ನಡೀತಾ ಇದೆ. ಐದನೆಯ ತಿಂಗಳಿಗೆ ಹೋದರಾಯಿತು. ಆವೊತ್ತಿಗೆಲ್ಲಾ ನಿನ್ನ ತಮ್ಮ, ನಿನ್ನ ತಮ್ಮನ ಹೆಂಡತಿ ರಜೆಗೆ ಇಲ್ಲಿಗೆ ಬರ್ತಾರೆ. ಅಷ್ಟರೊಳಗೇನು ಕೊಳ್ಳೆ ಹೋಗೋದಿದೆ?' ಎಂದಳು. ಆದರೆ ನನಗೆ ಸಮಾಧಾನವಾಗಲಿಲ್ಲ. ನನ್ನ ತಂಗಿಗೆ ಇಪ್ಪತ್ತೆರಡು ವರ್ಷ ತುಂಬಿತ್ತು. ನನಗೆ– ನಮ್ಮವರ ವಯಸ್ಸು, ನನ್ನ ವಯಸ್ಸು ಎಲ್ಲಾ ಅಂದಾಜಿನ ಲೆಕ್ಕವೇ ಹೊರತು, ನಿಖರವಾಗಿ ತಿಳಿಯದು. ಒಮ್ಮೊಮ್ಮೆ ಹತ್ತೊಂಬತ್ತು, ಇಪ್ಪತ್ತು, ಇಪ್ಪತ್ತೆರಡು–ಹೀಗಿರುತ್ತಿತ್ತು ನನ್ನ ಎಣಿಕೆ.

ನ್ನ ತಂಗಿಗಾದರೋ ತುಂಬ ವಯಸ್ಸಾದ ಮೇಲೆ ಮದುವೆಯಾಯಿತು. ಅವಳೀಗ ಚೊಚ್ಚಲು ಗರ್ಭಿಣಿ. ಏನೂ ರುಚಿಸದು, ಯಾವಾಗಲೂ ವಾಂತಿ. ಅವಳು ತುಂಬ ಸೊರಗಿಬಿಟ್ಟಿದ್ದಳು. ಅವಳ ಹತ್ತಿರ ಇರುವುದು ಬಿಟ್ಟು ನನ್ನ ಚಿಕ್ಕಮ್ಮ ನನ್ನ ಹತ್ತಿರವಿರುತ್ತೇನೆ ಎಂದು ತಿಳಿಸಿದ್ದನ್ನು ಕೇಳಿ ನನಗೆ ಸಮಾಧಾನವಾಗಲಿಲ್ಲ. ಈಕೆಗೆ ತನ್ನ ಸೊಸೆಗಿಂತಲೂ ಹೆಚ್ಚೇ ನಾನು? ನನ್ನ ಸಂಬಂಧಗಳೆಲ್ಲಾ ವಿಚಿತ್ರವಾಗಿಯೇ ಇವೆ. ಹಾವಾಡಿಗನಿಗೆ ನಾನು ಆವನ ಪ್ರಾಣಕ್ಕಿಂತಲೂ ಹೆಚ್ಚೇ?....ನಾನು ನನ್ನ ಚಿಕ್ಕಮ್ಮನೊಂದಿಗೆ 'ನಾಲ್ಕೈದು ದಿನಗಳಲ್ಲಿ ಎಲ್ಲಾ ಏರ್ಪಾಟು ಮಾಡಿಬಿಡುತ್ತೇನೆ. ಜೀತದಾಳಿಗೆ ಹೊಲಗಳನ್ನೆಲ್ಲಾ ಚೆನ್ನಾಗಿ ನೋಡಿಕೊಂಡಿರು ಅಂತ ತಿಳಿಸಿ, ನಾನೂ ಕೂಡಾ ಅಲ್ಲಿಗೇ ಬಂದು ಈ ಎರಡು ತಿಂಗಳು ಅಲ್ಲೇ ಇದ್ದುಬಿಡ್ತೇನೆ. ಹುಡುಗಿ ಒಬ್ಬಳೇ ಆಗಿಬಿಡ್ತಾಳೆ. ಮನೆಯಲ್ಲಿ ನೋಡಿಕೊಳ್ಳುವ ಹಿರಿಯ ದಿಕ್ಕಿಲ್ಲದೆ ತುಂಬ ತಾಪತ್ರಯಪಡಬೇಕಾಗುತ್ತೆ ಎಂದು ತಿಳಿಸಿ, ಅಳಿದುಳಿದ ಕೆಲಸಗಳನ್ನು ಮುಗಿಸಿ, ಜೀತದಾಳಿಗೆ–ಭೂಮಿ–ಕಾಣಿಗಳ ನಿಗಾವಣೆಯನ್ನು ತಿಳಿಸಿ, ಆ ಸಮಯದಲ್ಲಿ ಆ ರೀತಿ ಮಾಡು, ಇಂಥಾ ಹೊತ್ತಿನಲ್ಲಿ ಹೀಗೆ ಮಾಡು–ಮುಂತಾಗಿ ಸಲಹೆಗಳನ್ನಿತ್ತು 'ನಾನೊಂದೆರಡು ತಿಂಗಳು ಕಾಲ ನನ್ನ ಚಿಕ್ಕಮ್ಮನವರ ಊರಿನಲ್ಲಿರ್ತೇನೆ. ಆಗಾಗ ಇಲ್ಲಿಗೆ ಬಂದು ನೋಡಿಕೊಂಡು ಹೋಗ್ತಾ ಇರ್ತೇನೆ. ನೀನು ಕೊಂಚ ಹುಷಾರಾಗಿರು' ಎಂದು ತಿಳಿಸಿದೆ.

ಇಷ್ಟು ದಿನಗಳಿಂದ ನಾನೊಂದು ವಿಷಯವನ್ನು ಮರೆತುಬಿಟ್ಟಿದ್ದೆ. ಹೋಗಿ ನನ್ನ ಸಾಕುತಂದೆಯ ಹೊಲಗಳನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳ ಬೇಕು. ಯಾರ್‍ಯಾರೋ ಸೇರಿಕೊಂಡು ಏನೆಲ್ಲ ಮಾಡಿಬಿಟ್ಟಿದಾರೋ ಏನೋ! ಆಳುಕಾಳುಗಳೆಲ್ಲ ಏನು ಮಾಡುತ್ತಿದ್ದಾರೋ ಏನೋ? ಅವರಿಗೆ ಅಲ್ಲಿ ಹೇಳುವವರೂ ಕೇಳುವವರೂ ಯಾರೂ ಇಲ್ಲದಂತಾಗಿಬಿಟ್ಟಿದೆ–ಎಂಬ ವಿಷಯವನ್ನು ನಾನು ಮರೆತೇಬಿಟ್ಟಿದ್ದೆ.

ಎಲ್ಲದಕ್ಕಿಂತ ಮುಂಚೆ ಹಾವಾಡಿಗನು ಏನಾದನೋ ಕಂಡುಕೊಳ್ಳಬೇಕು. ಅವನ ಸಲುವಾಗಿ ಎರಡು ಮೂರು ದಿನ ಬಲು ತಿರುಗಿದೆ. ಎಲ್ಲೆಲ್ಲಿ ಹಾವಾಡಿಗರ ಗುಡಿಸಲುಗಳಿವೆಯೋ ಅಲ್ಲಲ್ಲಿಗೆಲ್ಲಾ ಹೋಗಿ ಹುಡುಕಿದೆ. ಅವನು ನನಗೆಲ್ಲಿಯೂ ಕಂಡುಬರಲಿಲ್ಲ. ಅವನು ನಿಜವಾಗಿಯೂ ಸತ್ತು ಹೋದನೇ? ಅವನು ನನ್ನ ತಮ್ಮಂದಿರ ಸೋದರಮಾವನನ್ನು ಹಾಗೆ ಹಣ್ಣುಗಾಯಿ–ನೀರುಗಾಯಿಯಾಗುವಂತೆ ಹೊಡೆದುದರಿಂದ ನನಗೇನೂ ಕೋಪವಿಲ್ಲವಾದರೂ ಆತನ ಹೆಂಡತಿಯನ್ನು ಕೊಂದುದಕ್ಕಾಗಿ ನನಗೆ ಅವನ ಮೇಲೆ ತುಂಬ ಕೋಪ ಬಂದಿತ್ತು. ಅವನು ಕಣ್ಣಿಗೆ ಕಾಣಿಸುತ್ತಲೇ–ಆ ದಿನ ಆ ಪಟೇಲರು ಥಳಿಸಿದ ಹಾಗೆ–ಅವನನ್ನು ಚೆನ್ನಾಗಿ ಥಳಿಸಬೇಕೆಂದು ನಿರ್ಧರಿಸಿಕೊಂಡಿದ್ದೆ. ಆ ರಾತ್ರಿ ಅವನೂ ನಾನೂ ಮಾತನಾಡಿದ ಆ ಹುಣಿಸೆಯ ತೋಪಿನಲ್ಲಿ, ರಾತ್ರಿ ಹೊತ್ತು ಕಾವಲು ಕಾದರೆ ಅವನು ಕಾಣಿಸಿಯೇ ಕಾಣಿಸುತ್ತಾನೆ ಎಂದೆನ್ನಿಸಿತು. ಅಲ್ಲಿಗೆ ಹೋಗುವಷ್ಟರಲ್ಲಿ ಕತ್ತಲು ಮುಸುಕಿತ್ತು. ಅಂದು ನಾವಿಬ್ಬರೂ ಕುಳಿತುಕೊಂಡಿದ್ದ ತಾಣದಲ್ಲಿ–ಅವನು ಬಾರದೇ ಹೋದಾನೆಯೇ? ಎಂದು ಕಾಯುತ್ತಾ ಕುಳಿತುಕೊಂಡೆ. ರಾತ್ರಿ ಒಂದು ಜಾವವಾಗುವ ತನಕ ಹಾಗೆಯೇ ಕುಳಿತಿದ್ದೆ

ಅಷ್ಟರಲ್ಲಿ ಯಾರೋ ದೂರದಲ್ಲಿ ಬರುತ್ತಿರುವುದು ಕಾಣಿಸಿತು. ನಾನು ದೊಣ್ಣೆಯನ್ನು ಕೈಗೆ ತೆಗೆದುಕೊಂಡು ಸಿದ್ಧವಾಗಿ ಕುಳಿತೆ. ಅವನು ನನ್ನನ್ನು ಸಮೀಪಿಸುತ್ತಾ 'ನೀನೇನಾ ಬುದ್ಧೀ?' ಎಂದು ಕೇಳಿದ. 'ಯಾರು ಬೇಕಾಗಿತ್ತೋ?' ಎಂದೆ. ಅವನು 'ಹಾವಾಡಿಗರವನಿದ್ದನಲ್ಲಾ, ಅವನ ಧಣಿ' ಎಂದ. 'ನಾನೇ, ಎಲ್ಲಿ ಅವನು?' ಎಂದು ಕೇಳಿದೆ. 'ಅವ ಸತ್ತು ತಿಂಗಳಾಯ್ತು. ನನ್ನ ಮಾರಾಜ ಇಲ್ಲಿಗೆ ಬರ್ತಾನೆ. ಬಂದಾಗ ಆತನಿಗೆ ಇದನ್ನು ಕೊಡು ಅಂತ ತಿಳಿಸಿದಾನೆ. ಅವನು ಕಠಾರಿಯಿಂದ ಇರಿದುಕೊಂಡು ಸತ್ತುಹೋದ. ನಿನಗೆ ಅವನ ಮೇಲೆ ಭೋ ಕೋಪವಿದೆಯಂತೆ. ನನ್ನನ್ನು ಹೊಡೆಯಲು ಬರ್ತಾನೆ ನನ್ನೊಡನೆ ಅಂತ ಅಂದ. ನನ್ನನ್ನಿಲ್ಲಿಗೆ ದಿನವೂ ಹೊತ್ತಿಗೆ ಸರಿಯಾಗಿ ಬಂದು ನಿನಗಾಗಿ ಕಾಯ್ತಾ ಇರಬೇಕು ಅಂತ ತಿಳಿಸಿದ. ಎರಡು ಮೂರು ತಿಂಗಳಲ್ಲಿ, ಯಾವೊತ್ತಾದರೂ ಒಂದು ದಿನ ನೀನಿಲ್ಲಿಗೆ ಬಂದೇ ಬರ್ತೀಯೆ ಅಂತ ತಿಳಿಸಿದ್ದ. ನಾನು ಒಂದು ತಿಂಗಳಿಂದಲೂ ದಿನವೂ ಈವೊತ್ತಿಗೆ ಸರಿಯಾಗಿ ಇಲ್ಲಿಗೆ ಬರ್ತಾ ಇದೀನಿ. ನೀನು ಈ ದಿನ ಕಾಣಿಸಿದೆ. ಇಲ್ಲಿಗೆ ಒಂದು ವೇಳೆ ನೀನೆಂದಿಗೂ ಬಾರದೇ ಹೋದರೂ, ನಾನು ಬದುಕಿರುವಷ್ಟು ದಿನ ನಿತ್ಯವೂ ಇಲ್ಲಿಗೆ ಬಂದು ನೋಡಿಕೊಂಡು ಹೋಗಬೇಕೆಂದು ಕೇಳಿಕೊಂಡಿದ್ದ' ಎಂದು ತಿಳಿಸಿದ.

ನನಗೆ ಅಳು ಬಂದಿತು. 'ಅವನು ಇನ್ನೇನು ಹೇಳಿದನೋ?' ಎಂದು ಕೇಳಿದೆ 'ಅವನನ್ನು ನೀವು ಕ್ಷಮಿಸಬೇಕಂತೆ' ಎಂದ. ನಾನು 'ಅವನು ನನಗೆ ಕೊಡು ಅಂತ ಹೇಳಿರುವುದೇನು?' ಎಂದು ಕೇಳಿದೆ. ಅವನು ನನ್ನ ಕೈಗೆ ಏನನ್ನೋ ಕೊಟ್ಟ. ಕತ್ತಲಲ್ಲಿ ಅದೊಂದು ಮಣಿಗಳ ಹಾರದಂತೆ ಕಂಡುಬಂದಿತು. ಅದು ಹಾವಾಡಿಗರ ಮಣಿಗಳೇನೋ ಎಂದೆನ್ನಿಸಿತು. 'ಇದನ್ನು ತೆಗೆದುಕೊಂಡು ನಾನೇನು ಮಾಡಬೇಕು ಅಂತ ತಿಳಿಸಿದ್ದಾನೆ?' ಎಂದು ಕೇಳಿದೆ. 'ನೀನು ಬದುಕಿರುವಷ್ಟು ದಿನವೂ ಇದನ್ನು ಕತ್ತಿನಲ್ಲಿ ಹಾಕಿಕೊಂಡೇ ಇರಬೇಕೆಂದು ಅಪೇಕ್ಷೆಪಟ್ಟಿದ್ದಾನೆ' ಎಂದು ತಿಳಿಸಿದ. ನಾನು ಆ ಹಾರವನ್ನು ಜೇಬಿನಲ್ಲಿರಿಸಿಕೊಂಡು ಅಲ್ಲಿಂದ ಹೊರಟು ಬಂದೆ. ಬೆಳಗಾದ ಮೇಲೆ ಅವು ಎಂಥ ಮಣಿಗಳೋ ಎಂದು ನೋಡಿದೆ. ಅದು ತುಳಸೀಮಣಿಗಳ ಹಾರ. ನಾನಿದನ್ನು ಎಲ್ಲಿಯೋ ಈ ಮೊದಲೇ ನೋಡಿದ ಹಾಗೆ ಜ್ಞಾಪಕ. ಎಲ್ಲಿ ನೋಡಿರುವೆನೋ? ಕಣ್ಣು ಮುಚ್ಚಿಕೊಂಡು ಯೋಚಿಸಿದೆ. ಕೊಟ್ಟಕೊನೆಗೆ ಎಲ್ಲಿ ನೋಡಿದ್ದೇನೆಂಬುದು ತಟ್ಟಿತು. ಅದನ್ನು ನನ್ನ ಸಾಕುತಂದೆ ಕೊರಳದಲ್ಲಿ ಧರಿಸುತ್ತಿದ್ದ. ನಾನದರ ವಿಷಯವನ್ನೇ ಮರೆತುಬಿಟ್ಟಿದ್ದೆ. ಹಾವಾಡಿಗನಿಗೆ ಈ ಹಾರವೆಲ್ಲಿಂದ ಬಂದಿತು? ಬಹುಶಃ ನನ್ನ ತಮ್ಮಂದಿರ ಸೋದರಮಾವನ ಮನೆಯ ಮೇಲೆ ದಾಳಿಮಾಡಿದಾಗ ಇದನ್ನೆತ್ತಿಕೊಂಡು ಹೋಗಿದ್ದಾನೆ ಎನ್ನಿಸಿತು. ಇದನ್ನು ನನಗೆ ಕೊಡಬೇಕೆಂದು ಹಾವಾಡಿಗನಿಗೆ ಅವು ಹೇಗೆ ತೋಚಿತೋ? ಅವನಿದನ್ನು ಕಳ್ಳತನ ಮಾಡಿ ಒಯ್ದಿರುವುದಲ್ಲವೆ? ಈ ಕಳ್ಳ ಪದಾರ್ಥ ನನಗೇಕೆ? ಎನ್ನಿಸಿತು. ಆದರೆ ಮರುಕ್ಷಣವೇ ಹೀಗೆನ್ನಿಸಿತು–ಇದು ನನ್ನ ಸಾಕುತಂದೆಯ ಸೊತ್ತು; ಇದನ್ನು ಬಿಟ್ಟಿರಲಾರೆ ನಾನು ; ಕೊರಳಲ್ಲಿ ಧರಿಸಿಕೊಂಡಿರುತ್ತೇನೆ.

ಊಟ ಮಾಡಿ ಮಲಗಿಕೊಂಡು ವಿಶ್ರಾಂತಿ ಪಡೆದು, ಸಾಯಂಕಾಲ ಹೊಲಕ್ಕೆ ಹೋದೆ. ದೂರದಲ್ಲಿ ಯಾರೋ ಒಬ್ಬ ವ್ಯಕ್ತಿ ಬಾ ಎನ್ನುವಂತೆ ಕೈಮಾಡಿ ಕರೆದ. ನಾನು ಆ ವ್ಯಕ್ತಿಯನ್ನು ಸಮೀಪಿಸಿದೆ. ಪರಿಕಿಸಿ ನೋಡಿದೆ. ಆಗ ಆ ವ್ಯಕ್ತಿ ನಿನ್ನೆಯ ದಿನ ರಾತ್ರಿ ಹುಣಿಸೆಯ ತೋಪಿನಲ್ಲಿ ನನ್ನೊಂದಿಗೆ ಮಾತನಾಡಿದವನೆಂದು ಗೊತ್ತಾಯಿತು. 'ಏಕೋ?' ಎಂದೆ. ಅವನು 'ಬುದ್ದೀ, ಆ ಹಾರವನ್ನು ಬಿಸಾಡಿದೆಯೋ ಅಥವಾ ಕೊರಳಲ್ಲಿ ಹಾಕ್ಕೊಂಡಿದೀಯೋ?' ಎಂದು ಕೇಳಿದ. ನಾನು 'ಏಕೆ?' ಎಂದು ಕೇಳಿದೆ. 'ನೀನದನ್ನು ಹಾವಾಡಿಗರ ಮಣಿಗಳ ಹಾರ ಅಂತ ಕತ್ತಲಲ್ಲಿ ಬಿಸಾಡಿಬಿಟ್ಟೆಯೋ ಏನೋ ? ಅದು ಹಾವಾಡಿಗರ ಮಣಿಹಾರವಲ್ಲ. ಬಿಸಾಡಿದೆಯಾ?' ಎಂದು ಕೇಳಿದ. ನಾನು ಇಲ್ಲವೆಂದೆ. 'ನಿನ್ನೆ ರಾತ್ರಿ ನಿನಗೊಂದು ವಿಷಯ ತಿಳಿಸುವುದನ್ನು ಮರೆತುಬಿಟ್ಟೆ ಆ ಹಾರ ನಿನ್ನ ಸಾಕುತಂದೆಯದಂತೆ. ಆತ ಬದುಕಿದ್ದಾಗ, ಒಂದು ಸಲ ನಮ್ಮ ಹಾವಾಡಿಗ ಆತನಿಗೇನೋ ಒಳಿತು ಮಾಡಿದ್ದರಿಂದ ಆ ಹಾರವನ್ನು ಬಹುಮಾನವಾಗಿ ಕೊಟ್ಟಿದ್ದನಂತೆ. ನೀನು ನಿನ್ನ ಸಾಕುತಂದೆಯನ್ನೂ ಅವನನ್ನು ಮರೆಯದೆ ನೆನೆಸಿಕೊಳ್ಳುತ್ತಿರಬೇಕೇಂದೂ, ಅದನ್ನು ಕೊರಳಲ್ಲಿ ಹಾಕಿಕೊಂಡಿರಬೇಕೆಂದು ಅವನು ಬಯಸಿದ್ದ ನೀನದನ್ನು ಬಿಸಾಡಿಲ್ಲ ಒಳ್ಳೆಯದಾಯಿತು. ಇಲ್ಲದೇ ಹೋಗಿದ್ದರೆ, ನಾನು ಹುಡುಕೀ ಹುಡುಕಿ, ಅದು ಎಂಥವನ ಕೈಗೇ ಸಿಕ್ಕಿರಲಿ–ಅವನನ್ನು ತಲೆಯೊಡೆದಾದರೂ ಸರಿಯೇ ಹಿಂತಿರುಗಿ ತರಬೇಕಾಗಿತ್ತು. ನಾನಿನ್ನು ಬರ್ತೀನಿ' ಎಂದ. ಆಗ ನಾನು 'ಯಾರು ನೀನು?' ಎಂದು ಕೇಳಿದೆ. ಅದಕ್ಕೆ ಅವನು 'ನಾನು ಗಸ್ತು ತಿರುಗುವವನು ; ಚುಂಡು ಜಾತಿಯವನು. ಆ ಹಾವಾಡಿಗನಿಗೂ ನನಗೂ ತುಂಬ ದೋಸ್ತಿ. ನಿನ್ನನ್ನು ನಾನು ನೋಡಿಕೊಳ್ತಾ ಇರ್ತೇನೆ. ಪರವಾಗಿಲ್ಲ' ಎಂದು ತಿಳಿಸಿ ಹೊರಟುಹೋದ.

ನನ್ನ ತಲೆಯ ಮೇಲೆ ಕುಳಿತಿದ್ದ ನನ್ನ ಸ್ವಾಮಿ ಇದೀಗ ನನ್ನ ಕೊರಳಲ್ಲಿ ತುಳಸಿ ಮಾಲೆಯಾಗಿ ಕುಳಿತುಕೊಂಡ. ಆ ಮಣಿಗಳು ನನ್ನ ದೇಹವನ್ನು ತಾಕುತ್ತಿದ್ದುವು; ನನ್ನನ್ನು ತಣ್ಣಗೆ ಸೋಂಕುತ್ತಿದ್ದವು; ನನಗೆ ಕಚಗುಳಿಯಿಡುತ್ತಿದ್ದುವು. ಕಣ್ಣು ಮುಚ್ಚಿಕೊಂಡರೆ ನನ್ನ ಮನಸ್ಸು ಅತ್ತಲಿತ್ತ ಚಲಿಸದಂತೆ ಮಾಡಿಬಿಟ್ಟವು. ಆ ದಿನ, ರಾತ್ರಿಯೆಲ್ಲಾ ಕಣ್ಣು ಮುಚ್ಚಿಕೊಂಡು, ನನ್ನ ಸಾಕುತಂದೆಯ ಮುಖ ಕಾಣಿಸುತ್ತದೇನೋ ಎಂದು ಕಾದು ನೋಡಿದೆ. ಊಹುಂ, ತುಳಸಿ ಮಾಲೆಯೇ ಕಾಣಿಸಿತು.

ನಾನು ಹಾಗೂ ನನ್ನ ಚಿಕ್ಕಮ್ಮ ಇಬ್ಬರೂ ಅವರ ಊರಿಗೆ ಹೋದೆವು. ನನ್ನ ತಂಗಿಯನ್ನು ಚಿಕ್ಕಮ್ಮ ಹೂವಿನಲ್ಲಿಟ್ಟು ಕಾಪಾಡಿಕೊಳ್ಳತೊಡಗಿದ್ದಳು. ಆ ಕಡೆ ಕಡ್ಡಿಯನ್ನು ಈ ಕಡೆಗೆ ಎತ್ತಿಡಲೂ ಬಿಡುತ್ತಿರಲಿಲ್ಲ. ದಿನವೂ ಯಾವುದಾದರೊಂದು ಸಿಹಿ ಪದಾರ್ಥವನ್ನು ಮಾಡಿ ಬಡಿಸುತ್ತಿದ್ದಳು. ಮಗನ–ಸೊಸೆಯ ಹಾಸಿಗೆಗಳನ್ನು ತಾನೇ ಚೊಕ್ಕವಾಗಿ ಹಾಸತೊಡಗಿದಳು. ನಾನು ನನ್ನ ತಂಗಿಗೊಂದು ಸೀರೆ, ಒಂದು ಖಣವನ್ನಿಟ್ಟೆ ಭಾವಮೈದುನನಿಗೆ ಹೊಸ ಬಟ್ಟೆಗಳನ್ನಿತ್ತೆ ಹತ್ತಿರದ ಊರಿನಲ್ಲಿ ಯಾರದೋ ಹಿತ್ತಲಲ್ಲಿ ಮಲ್ಲಿಗೆ ಹೂವು ಬಿಡುತ್ತವೆ ಎಂದರೆ ದಿನವೂ ಅಲ್ಲಿಗೆ ಹೋಗಿ ಆ ಹೂವುಗಳನ್ನು ತಂದು ನನ್ನ ತಂಗಿಗೆ ಕೊಡುತ್ತಿದ್ದೆ. ಒಂದು ವಾರದತನಕ ಅಲ್ಲಿದ್ದು

ಆಮೇಲೆ ನನ್ನ ಸಾಕುತಂದೆಯ ಊರಿಗೆ ಹೋದೆ. ಈ ಒಂದು ಹದಿನೈದು ದಿನ, ತಿಂಗಳಲ್ಲಿಯೇ ನನ್ನ ಸಾಕುತಂದೆಯ ಮನೆಯ ಒಂದು ಕಡೆಯ ಗೋಡೆ ಬಿದ್ದುಹೋಗಿತ್ತು. ಮನೆಯ ತಲೆಬಾಗಿಲನ್ನು ತೆರೆದು, ಆಳನ್ನಿಟ್ಟು ಕಸ ಗುಡಿಸಿ, ಸಾರಿಸಿ, ಚೊಕ್ಕಟಗೊಳಿಸಿದೆ. ಹೊಸ ಗೇಣಿದಾರರನ್ನು ನಿಯಮಿಸಿ ಹೊಲಗಳನ್ನೆಲ್ಲಾ ಸ್ವಾಧೀನಕ್ಕೆ ತೆಗೆದುಕೊಂಡೆ. ಆ ಊರ ಶಾಲಾ ಮಾಸ್ತರು ಕುಮ್ಮಾ ಕುಲದಾತ. ಆತನನ್ನು ಆ ಮನೆಯಲ್ಲಿ ವಾಸಕ್ಕಿರುವಂತೆ ಕೇಳಿಕೊಂಡೆ. ಊರಿನಲ್ಲಿ ಕೆಲವರು ಆತನಿಗೆ ಭೀತಿ ಹುಟ್ಟಿಸಿದರು. 'ಆ ಕೊಂಪೆಯಲ್ಲಿ ಎರಡು ಹೆಣ ಬಿದ್ದಿವೆ. ಸತ್ತ ಮಾರಾಯ ರಾಕ್ಷಸನಂಥೋನು ; ಹಿಡಿದು ಹಿಪ್ಪೆ ಮಾಡಿಬುಟ್ಟಾನು !' ಎಂದು ಮುಂತಾಗಿ ಬೆದರಿಸಿದರು. ಆತನ ಹೆಂಡತಿ ಬೇಡಬೇಡವೆಂದರೂ ಆ ಉಪಾಧ್ಯಾಯ ಧೈರ್ಯಮಾಡಿ ವಾಸಕ್ಕೆ ಬಂದ. ಏನೂ ಭಯವಿಲ್ಲವೆಂದು ನಾನು ತಿಳಿಸಿದೆ. ಬಿದ್ದುಹೋದ ಗೋಡೆಯನ್ನು ಮತ್ತೆ ಕಟ್ಟಿಸಿ, ದುರಸ್ತಿ ಮಾಡಿ, ಪುರೋಹಿತರನ್ನು ಕರೆಯಿಸಿ ಪುಣ್ಯಾಹವಾಚನವನ್ನು ಮಾಡಿಸಿದೆ. ಗುಂಟೂರಿಗೆ ಹೋಗಿ ಮಂತ್ರ ಶಾಸ್ತ್ರ ಬಲ್ಲಂಥಾ ಬ್ರಾಹ್ಮಣನನ್ನು ಕರೆದುಕೊಂಡು ಬಂದು ಜಂತ್ರಗಳನ್ನು ದ್ವಾರಬಂಧಗಳಿಗೆ ಹೊಡೆಯಿಸಿದೆ. ಆ ಉಪಾಧ್ಯಾಯನ ಹೆಂಡತಿಯ ಭಯ ಹೊರಟುಹೋಯಿತು. ನಾನೊಂದು ತಿಂಗಳು–ತಿಂಗಳೂವರೆ ದಿನಮಾನ ಆ ಊರಿನಲ್ಲಿಯೇ ಇದ್ದು ಹೊಲದ ಕೆಲಸ–ಕಾರ್ಯಗಳನ್ನು ಮಾಡಿಸಿದೆ.

ರಜಾ ದಿನಗಳು ಬಂದುವು. ಆದರೆ ಇನ್ನೂ ನನ್ನ ಮಾವನ ಮಗಳ ಪರೀಕ್ಷೆಗಳು ಮುಗಿದಿರಲಿಲ್ಲ; ನನ್ನ ಎರಡನೆಯ ತಮ್ಮನ ಪರೀಕ್ಷೆಗಳೂ ಮುಗಿದಿರಲಿಲ್ಲ. ಪರೀಕ್ಷೆಗಳು ಇನ್ನೂ ನಡೆಯುತ್ತಿದ್ದುವು. ನಾನು ಗುಂಟೂರಿಗೆ ಹೋದೆ. ನನ್ನ ತಮ್ಮ ಜೋಲುಮುಖದಿಂದ ಕುಳಿತಿದ್ದ. 'ಏನು ಹಾಗಿದ್ದೀಯಲ್ಲಾ?' ಎಂದು ಕೇಳಿದೆ. ಅವನು ಏನೂ ಇಲ್ಲವೆಂದ. ಒಂದು ವಾರ ಗುಂಟೂರಿನಲ್ಲಿ ಉಳಿದುಕೊಂಡೆ. ಎಲ್ಲರ ಪರೀಕ್ಷೆಗಳೂ ಮುಗಿದುವು. ಅವರೆಲ್ಲರನ್ನೂ ನನ್ನ ಸಾಕುತಂದೆಯ ಊರಿಗೆ ಕರೆದುಕೊಂಡು ಬಂದೆ. ನನ್ನ ತಮ್ಮನನ್ನ ಅವನ ಹೆಂಡತಿಯನ್ನೂ ಹಸೆಮಣೆಯ ಮೇಲೆ ಕುಳ್ಳಿರಿಸಿ, ಗೃಹಪ್ರವೇಶ ನಡೆಯಿಸಿದೆ. ಊರಿನಲ್ಲಿ ಎಲ್ಲರನ್ನು ಕರೆದೆ. ಊಟ ಹಾಕಿಸಿದೆ. ಎಲ್ಲರೂ ನನ್ನನ್ನೂ ತುಂಬ ಹೊಗಳಲಾರಂಭಿಸಿದರು. 'ಸ್ವಾಮಿಯ ಆಸ್ತಿಯನ್ನು ಸ್ವಾಮಿಯ ಮಗನಿಗೆ ಕೊಟ್ಟ. ಸ್ವಾಮಿಯ ಮಗನನ್ನು ಉದ್ಧಾರ ಮಾಡಿದ. ಒಳ್ಳೆಯತನವೆಂದರೆ ಹೀಗಿರಬೇಕು. ಈ ಆಸ್ತಿಯನ್ನೆಲ್ಲಾ ನುಂಗಿ ನೊಣೆಯಬೇಕೆಂದಿದ್ದರೆ ಹಾಗೆ ಮಾಡಬಹುದಿತ್ತಲ್ಲಾ? ಆ ಸೋದರಮಾವನ ಹಾಗೆಯೇ? ಅವನೇನು ಸುಖಪಟ್ಟ ! ಉಪ್ಪಿಲ್ಲದೆ ಉರಿದು ನೇದು ಬಿದ್ದ ! ಅನ್ಯಾಯದ ಸೊತ್ತು ಎಂದಿಗೂ ಮೈಗೆ ಅಂಟುವುದಿಲ್ಲ' ಎಂದು ಮುಂತಾಗಿ ಆಡಿದರು.

ಎರಡು ತಿಂಗಳುಗಳು ಕಳೆದುವು. ನನ್ನ ಇಬ್ಬರು ತಮ್ಮಂದಿರೂ, ನನ್ನ ಮಾವನ ಮಗಳೂ ಆ ಊರಿನಲ್ಲಿಯೇ ಇದ್ದುಬಿಟ್ಟರು. ನನ್ನ ಮಾವನ ಮಗನನ್ನು ಅವರ ಊರಿಗೆ ಕರೆದುಕೊಂಡು ಬಂದು ಹೊಲಗಳನ್ನೆಲ್ಲಾ ಅವನಿಗೆ ಒಪ್ಪಿಸಿದೆ. ನನಗಾಗ ಏನೂ ಕೆಲಸವಿರಲಿಲ್ಲ.

ಪರೀಕ್ಷೆಯ ಫಲಿತಾಂಶಗಳು ತಿಳಿದುಬಂದುವು. ನನ್ನ ತಮ್ಮ ಮೊದಲಿಗನಾಗಿ ಪಾಸಾಗಿದ್ದ ನನ್ನ ಮಾವನ ಮಗ ಫೇಲಾಗ್ತಾನೆ ಅಂತ ನನಗೆ ಮೊದಲೇ ಗೊತ್ತಿತ್ತು. 'ನನಗೇಕೆ ಓದು? ನಾನು ನನ್ನ ಹೊಲಗಳನ್ನು ನೋಡಿಕೊಂಡಿರ್ತೇನೆ' ಎಂದ. ನಾನು ಹಾಗೆಯೇ ಆಗಲಿ ಎಂದೆ. ನಾನು ನನ್ನ ಸಾಕುತಂದೆಯ ಊರಿಗೆ ಹೋಗಿ, ನನ್ನ ತಮ್ಮನ ಜೊತೆಗೆ ಇರತೊಡಗಿದೆ. ಒಂದು ವಿಷಯದ ಬಗ್ಗೆ ನನಗೆ ಅನುಮಾನವೇ ಇತ್ತು. ಆ ಅನುಮಾನ ಕ್ರಮೇಣ ನಿಜವೆಂಬುದಾಗಿ ತಿಳಿದುಬಂದಿತು. ನನ್ನ ತಮ್ಮನೂ ಅವನ ಹೆಂಡತಿಯೂ ಸಮರಸದಿಂದಿರಲಿಲ್ಲ. ಗುಂಟೂರಿನಲ್ಲಿರುವಾಗ ಇವನು ಅವಳನ್ನು ತಾಕಹೋದರೆ 'ನನ್ನ ಪರೀಕ್ಷೆಗಳು ಮುಗಿಯುವವರೆಗೂ ನನ್ನ ಹತ್ತಿರ ಬರಲೇಬೇಡ' ಎಂದು ಅವನನ್ನು ಕೊಸರುತ್ತಿದ್ದಳಂತೆ. ಗುಂಟೂರಿನಲ್ಲಿ ಎರಡು ತಿಂಗಳೂ ಇಬ್ಬರಿಗೂ ಯಾವುದೇ ಸಂಬಂಧವಿರಲಿಲ್ಲವಂತೆ. ಅಲ್ಲಿಂದ ಬಂದು ಎರಡು ತಿಂಗಳಾಗುತ್ತಾ ಬಂದಿದ್ದರೂ ಒಮ್ಮೆಯಾದರೂ ಅವಳು ಅವನೊಂದಿಗೆ ಸರಿಯಾಗಿ ಮಾತೇ ಆಡಿರಲಿಲ್ಲವಂತೆ. ಅನೇಕ ರೀತಿಯಲ್ಲಿ ಚುಚ್ಚುಮಾತುಗಳನ್ನಾಡುತ್ತಿದ್ದಳಂತೆ. ನಾನಿಲ್ಲದ ಹೊತ್ತಿನಲ್ಲಿ ಅವನೊಂದಿಗೆ 'ನಿನ್ನಿಂದಾಗಿ ಮಾವಯ್ಯನ ಸುಖವನ್ನು ಹಾಳುಮಾಡಿದೆ. ನೀನೂ, ನಿನ್ನ ಆ ಸೋದರಮಾವನೂ ಸೇರಿಕೊಂಡು, ನನಗೇನೂ ತಿಳಿಯದ ದಿನಗಳಲ್ಲಿ ನನ್ನನ್ನು ಮೋಸ ಮಾಡಿಬಿಟ್ಟಿರಿ. ನಮ್ಮ ಮಾವಯ್ಯ ಹಾಗೆ ಕೊರಡಿನಂತೆ ತಿರುಗುತ್ತಿದ್ದಾನೆ. ನಾನೂ ಕೊರಡಿನಂತೆಯೇ ಇದ್ದುಬಿಡ್ತೇನೆ. ನನಗೆ ಹೆರಿಗೆಯಾಗುತ್ತಲೇ, ಹುಟ್ಟಿದ ಆ ಮಗುವನ್ನು ನಿನ್ನ ಮುಖಕ್ಕೊಗೆದು ನಮ್ಮ ತವರುಮನೆಗೆ ಹೋಗಿಬಿಡ್ತೇನೆ. ನನ್ನ ತಮ್ಮನಿಗೆ ಮದುವೆಯಾಗಿ ಹೆಂಡತಿ ಮನೆಗೆ ಬರುವತನಕವೂ ಅವನಿಗೆ ಬೇಯಿಸಿ ಹಾಕೋರು ಯಾರಿದಾರೆ? ನಾನು ಹೊರಟುಹೋಗ್ತೇನೆ. ಮಾವಯ್ಯ ಹಾಗೆ ಪಾಡುಪಡ್ತಾ ಇದ್ದರೆ ನಾನಾವ ಮುಖವಿಟ್ಟುಕೊಂಡು ಸುಖಪಡಲಿ?' ಎಂದು ಸದಾಕಾಲ ಮುಖ ಊದಿಸಿಕೊಂಡು ಕುಳಿತುಕೊಂಡುಬಿಡುವುದು; ಅವನು ಸಮೀಪಕ್ಕೆ ಹೋದರೆ ಕೊಸರಿಹಾಕುವುದು–ಹೀಗೆಲ್ಲಾ ಮಾಡುತ್ತಿರುವಳೆಂದು ಕುಶಲಮ್ಮ ಈ ವಿಷಯಗಳನ್ನೆಲ್ಲಾ ನನಗೆ ತಿಳಿಸಿದಳು. ಏನು ಮಾಡಬೇಕೋ ನನಗೆ ತಿಳಿಯದಾಯಿತು.

ನನ್ನ ತಂಗಿಗೆ ಏಳನೆಯ ತಿಂಗಳು, ನನ್ನ ಮಾವನ ಮಗಳಿಗೆ ಐದನೆಯ ತಿಂಗಳು. ನಾನು ಇವರಿಬ್ಬರನ್ನೂ ನನ್ನ ಭಾವಮೈದುನನ ಊರಿಗೆ ಕರೆದುಕೊಂಡು ಹೋಗಿ, ಹೆರಿಗೆ ಮಾಡಿಸಿ, ನಾಮಕರಣ ಮಾಡಿಯಾದ ಮೇಲೆ ಕಳಿಸಿಕೊಡಬೇಕೆಂದಿದ್ದೆ. ನನ್ನ ಮಾವನ ಮಗಳನ್ನು ಕರೆದು "ನೀನು ಅವನೊಂದಿಗೆ ಈ ರೀತಿ ವರ್ತಿಸುವುದು ನ್ಯಾಯವಲ್ಲ. ನನಗೆ ಸುಖವಿಲ್ಲವೆಂದು ಯಾರು ಹೇಳಿದರು ನಿನಗೆ? ನಿನಗೆ, ನನ್ನ ತಂಗಿಗೆ ಮಕ್ಕಳು ಹುಟ್ಟಿದ ಮೇಲೆ ಆ ಮಕ್ಕಳನ್ನು ನೋಡಿಕೊಳ್ಳುತ್ತಾ ನಾನು ಸುಖವಾಗಿರ್ತೇನೆ. ನಿನ್ನ ತಮ್ಮ ಫೇಲಾದರೆ ನಿನ್ನ ಗಂಡ ಪಾಸಾಗಿದ್ದಾನೆ. ಅವನನ್ನು ಬಿ.ಎ.ವರೆಗೆ ಓದಿಸುತ್ತೇನೆ. ದೊಡ್ಡ ಉದ್ಯೋಗಸ್ಥನಾಗುತ್ತಾನೆ. ನನ್ನ ಸಾಕುತಂದೆಯ ಜಮೀನು ಅಣ್ಣತಮ್ಮಂದಿರಿಬ್ಬರಿಗೂ ಸಮಪಾಲಾದರೂ, ನಿನ್ನ ಇಪ್ಪತ್ತೈದು ಎಕರೆ ಜಮೀನು ಸೇರಿದರೆ ಒಳ್ಳೆ ಆಸ್ತಿಯಾಗುತ್ತೆ. ನಾಲ್ಕಾರು ವರ್ಷಗಳಿಗೆಲ್ಲಾ ಅವನಿಗೆ ಯಾವುದಾದರೂ

ದೊಡ್ಡ ಉದ್ಯೋಗ ಖಂಡಿತ ಲಭಿಸುತ್ತೆ. ಎಟುಕಿಸಿಕೊಳ್ಳಲಾಗದ ನರಿ ದ್ರಾಕ್ಷಿ ಹುಳಿ ಎಂದಿತಂತೆ! ಹಾಗೆ ಸುಮ್ಮನೆ ಹಾಳಾಗಬೇಡ. ನೀನು ಅವನೊಂದಿಗೆ ಚೆನ್ನಾಗಿರು. ಇನ್ನೊಂದು ತಿಂಗಳಿಗೆ ಅವನು ಓದಿಕೊಳ್ಳಲು ಹೊರಟುಹೋಗುತ್ತಾನೆ. ಈ ವರ್ಷ ಹೇಗೂ ನಿನ್ನನ್ನು ಅವನ ಜೊತೆ ಕಳಿಸಿಕೊಡುವಂತಿಲ್ಲ. ಮುಂದಿನ ವರ್ಷ ಅವನು ಎಫ್.ಎ. ಎರಡನೆಯ ವರ್ಷದಲ್ಲಿ ಓದುತ್ತಾ ಇರ್ತಾನೆ. ನೀನು ಹೋಗಿ ಸ್ಕೂಲ್ ಫೈನಲ್ ಓದಿಕೊಳ್ಳುವಿಯಂತೆ. ನಿಮ್ಮ ಹೊಲದ ಸಂಗತಿಯನ್ನು–ನಾನಿದ್ದೇನಲ್ಲಾ, ನೋಡಿಕೊಳ್ತಾ ಇರ್ತೇನೆ. ಹುಚ್ಚೀ, ನಾನು ಸುಖಪಡಲು ಹುಟ್ಟಿರುವೆನೆಂದುಕೊಂಡೆಯಾ? ನಾನು ನನ್ನ ಸ್ವಾಮಿಯ ಸಲುವಾಗಿ ಹುಟ್ಟಿದ್ದೇನೆ. ನಾನು ತೀರಿಸಿದ ಋಣ ಈ ಜನ್ಮದ್ದಲ್ಲ. ಇದೆಲ್ಲಾ ಹಿಂದಿನ ಜನ್ಮದ ಋಣ. ನನ್ನ ತಮ್ಮಂದಿರಿಬ್ಬರೂ ಉದ್ಧಾರವಾಗಬೇಕು, ಅವರಿಬ್ಬರೂ ಸುಖಪಡಬೇಕು, ಅವರಿಬ್ಬರೂ ಇಂಗ್ಲಿಷ್ ಓದಿ, ಉದ್ಯೋಗ ಮಾಡ್ತಾ ಇದ್ದರೆ, ನಾನು ಅವರ ಭೂಮಿ–ಕಾಣಿಗಳನ್ನು ನೋಡಿಕೊಳ್ಳುತ್ತಾ ಇರಬೇಕು–ನಾನು ಹುಟ್ಟಿದ್ದು ಇದಕ್ಕೋಸ್ಕರ. ಅವನು ಓದಿಕೊಳ್ಳಲು ಹೋಗುವವರೆಗೆ ಅವನೊಂದಿಗೆ ನೀನು ಸರಿಯಾಗಿರು. ಇದುವರೆಗೆ ನೀವಿಬ್ರೂ ಒಂದೇ ತಾಟಿನಲ್ಲಿ ಊಟ ಮಾಡುತ್ತಿದ್ದಿರಿ ; ಒಂದೇ ಕಡೆ ಕುಳಿತು ಓದುತ್ತಾ ಇದ್ದಿರಲ್ಲಾ ! ಕೋಣೆಗೆ ಹೋಗಿ ಬಾಗಿಲು ಹಾಕ್ಕೊಂಡುಬಿಡ್ತಾ ಇದ್ದಿರಲ್ಲಾ ! ಈಗಲೂ ಹಾಗೆಯೇ ಇರಬೇಕು. ನಾಳೆ ನಿನಗೆ ಹುಟ್ಟುವ ಮಗುವಿಗೆ ತಂದೆಯಲ್ಲವೇ ಅವನು? ಸುಮ್ಮನೆ ವೃಥಾ ಹಾಳುಮಾಡಿಕೊಳ್ಳಬೇಡ' ಎಂದೆ. ಈ ಮಾತುಗಳಿಂದ ಅವಳ ಮನಸ್ಸು ಬದಲಿಸಿತು. ಅನಂತರ ಅವರಿಬ್ಬರೂ ಚೆನ್ನಾಗಿರತೊಡಗಿದರು. ನನ್ನ ತಮ್ಮ ಉತ್ಸಾಹದಿಂದಿರತೊಡಗಿದ.

ನನ್ನ ತಂಗಿಯನ್ನೂ, ಕುಶಲಮ್ಮನನ್ನೂ ನಮ್ಮತ್ತೆಯವರ ಊರಿಗೆ ಕರೆದುಕೊಂಡು ಹೋದೆ. ಅಲ್ಲಿ ಎಲ್ಲರೂ ಕ್ಷೇಮವಾಗಿದ್ದರು. ಗುಂಟೂರಿನಲ್ಲಿ ಸ್ಕೂಲು ತೆರೆಯುತ್ತಾರೆ ಎಂದಾಗ ನಾನು ನನ್ನ ಸಾಕುತಂದೆಯ ಊರಿಗೆ ಹೋದೆ. ಅಲ್ಲಿ ಹತ್ತು ದಿನಗಳಿದ್ದೆ. ನನ್ನ ತಮ್ಮನಿಗೆ ಆವನ ಹೊಲಗಳನ್ನೆಲ್ಲಾ ತೋರಿಸಿ, ಪರಿಚಯ ಮಾಡಿಕೊಟ್ಟು, ಗುರುತುಹತ್ತಿಸಿ ; ಜೀತದಾಳುಗಳು, ಎತ್ತುಗಳು, ಕೊಟ್ಟಿಗೆ– 'ಇದೆಲ್ಲಾ ನಿನ್ನದೂ ನಿನ್ನ ತಮ್ಮನದೂ. ನೀನು ಓದಿಕೊಳ್ಳಲು ಹೋದಾಗ ನಾನು ಇವನ್ನೆಲ್ಲಾ ನೋಡಿಕೊಳ್ಳುವವನಷ್ಟೇ ಹೊರತು, ನೀನು ರಜಾ ದಿನಗಳಲ್ಲಿ ಇಲ್ಲಿಗೆ ಬರುತ್ತಾ ಇರಬೇಕು, ಮೇಲುಸ್ತುವಾರಿ ನೋಡಿಕೊಳ್ಳುತ್ತಿರಬೇಕು' ಎಂದು ತಿಳಿಸಿದೆ. ಅವನು ಗುಂಟೂರಿಗೆ ಹೋಗುವ ದಿನ ಬಂದಿತು. ಅವನೂ, ಅವನ ತಮ್ಮನೂ ಹೊರಟು ನಿಂತರು. ಇನ್ನು ಅವನ ಹೆಂಡತಿಯನ್ನು ಅವಳ ತವರಿಗೆ ಕರೆದುಕೊಂಡು ಹೋಗುವೆ. ಅವನು ಸ್ಕೂಲಿಗೆ ಸೇರಿಕೊಳ್ಳಲು ಬೇಕಾಗುವಷ್ಟು ಹಣವನ್ನು ಅವನಿಂದಲೇ ಪ್ರೋನೋಟು ಬರೆಯಿಸಿ ತೆಗೆಸಿದೆ. ಅವನು ಹೊರಟು ನಿಂತಾಗ ಅವಳು 'ರಜ ಕೊಡುತ್ತಲೇ ಬರುತ್ತೀಯಾ?' ಎಂದು ಕೇಳಿದಳು. ಅವನು 'ನೀನು ಬದಲಾಗದೇ ಇದ್ದರೆ ತಾನೆ ? ಅಣ್ಣಿ ಹೇಳಬೇಕು, ನೀನು ಕೇಳಬೇಕು. ನಾನು ಹೆಸರಿಗೆ ಮಾತ್ರ ಗಂಡನಷ್ಟೇ !' ಎಂದುಬಿಟ್ಟ. ಅವಳು ಮುಖ ಸಣ್ಣಗೆ ಮಾಡಿಕೊಂಡು ಒಳಗೆ ಹೋಗಿಬಿಟ್ಟಳು. 'ಅಪ್ಪಾ, ಹಾಗೆನ್ನಬಹುದೇ? ಒಳಗೆ

ಹೋಗಿ ಅವಳಿಗೆ ಸಮಾಧಾನವಾಗುವಂತೆ ಮಾತನಾಡಿ ಬಾ' ಎಂದೆ. ಒಳಗೆ ಹೋದ. ಸ್ವಲ್ಪ ಹೊತ್ತಿಗೆ ಇಬ್ಬರೂ ನಗುತ್ತಾ ಹೊರ ಬಂದರು. ನನ್ನ ಮನಸ್ಸಿಗೆ ಆನಂದವಾಯಿತು. ಆ ಆನಂದ ಬಾಧಕರವಾಗಿತ್ತೇ?

ನನ್ನ ತಮ್ಮಂದಿರು ಹೊರಟುಹೋದರು. ನಾವೆಲ್ಲರೂ ನಮ್ಮತ್ತೆಯವರ ಊರಲ್ಲಿದ್ದೆವು. ನನ್ನ ತಂಗಿಗೆ ಹೆರಿಗೆಯಾಯಿತು, ಹೆಣ್ಣು ಮಗು ಜನಿಸಿತು. ಅದು ಹುಟ್ಟುತ್ತಲೇ ಎಲ್ಲರೂ ನನ್ನ ಎರಡನೆಯ ತಮ್ಮನಿಗೆ ಹೆಂಡತಿ ಹುಟ್ಟಿದಳು ಎಂದು ನುಡಿದರು. ಆ ಹೆಣ್ಣು ಮಗು ಎಲ್ಲಾ ವಿಧದಲ್ಲೂ ನನ್ನ ಮಾವನ ಮಗಳನ್ನೇ ಹೋತಿತ್ತು. ಸೋದರಮಾವನ ಹೆಂಡತಿಯ ಹೋಲಿಕೆ ಎಂದರು. ನಮ್ಮ ಕುಶಲಮ್ಮ 'ಇದೇನು ಹೋಲಿಕೆ? ತಾಯಿಯನ್ನೂ ಹೋತಿಲ್ಲ, ತಂದೆಯನ್ನೂ ಹೋಲಿಲ್ಲ. ದೊಡ್ಡ ಮಾವನ ಹೋಲಿಕೆಯೂ ಅಲ್ಲ. ಸೋದರ ಮಾವನ ಹೆಂಡತಿಯ ಹೋಲಿಕೆ ಎಂಥದು?' ಎಂದಳು. 'ನಾನೆಂಥಾ ಸೋದರಮಾವನೋ ಅವಳು ಅಂಥಾ ಸೋದರತ್ತೆ ಖಂಡಿತ ಹೋಲಿಕೆ ಇರುತ್ತೆ ಎಂದೆ.

ನನ್ನ ತಮ್ಮಂದಿರಿಗೆ ದಸರಾ ರಜೆಗಳನ್ನು ಕೊಟ್ಟರು. ಅವರೂ ನಮ್ಮತ್ತೆಯ ಊರಿಗೇ ಬಂದರು. ಗಂಡ ಹೆಂಡತಿ ಭೇಟಿಯಾದರು. ಆ ಹೊತ್ತಿಗೆ ಅವಳಿಗೆ 'ದಿನ'ದಲ್ಲಿ ಬಿದ್ದಿತ್ತು. ಅವನು ಅವಳನ್ನು ನೋಡಿ ಅದೊಂದು ಚಮತ್ಕಾರವಾಗಿ ಆನಂದಿಸಿದ. ಅವನು ಅವನೊಂದಿಗೆ ಮಾತನಾಡಲಿಲ್ಲ. ಕುಳಿತರೆ ನಿಲ್ಲಲಾರಳು; ನಿಂತರೆ ಕುಳಿತುಕೊಳ್ಳಲಾರಳು. ಆದ್ದರಿಂದ ಹಾಗಿದಾಳೆ–ಎಂದು ಭಾವಿಸಿಕೊಂಡರು ನನ್ನ ಚಿಕ್ಕಮ್ಮ ಹಾಗು ಕುಶಲಮ್ಮ. ಅವನೊಂದು ವಾರದವರೆಗಿದ್ದ–ಸ್ಕೂಲು ಪ್ರಾರಂಭವಾಯಿತೆಂದು ಹೊರಟುಹೋದ.

ಅವನ ಹೆಂಡತಿಗೆ ಹೆರಿಗೆಯ ನೋವುಗಳು ಕಾಣಿಸಿಕೊಂಡುವು. ನಾಲ್ಕೈದು ದಿನ ತುಂಬ ನೋವು ತಿಂದಳು. ಎಲ್ಲರೂ ಗುಂಟೂರಿಗೆ ಕರೆದುಕೊಂಡು ಹೋಗೆಂದರು. ಕರೆದುಕೊಂಡು ಹೋಗದೆ ವಿಧಿಯಿಲ್ಲವೆಂದು ನನಗೂ ಅನ್ನಿಸಿತು. ಆದರೆ ಆ ಸುತ್ತಮುತ್ತಲಿರುವ ಅನುಭವಸ್ಥ ಸೂಲಗಿತ್ತಿಯರನ್ನೆಲ್ಲಾ ಕರೆತಂದೆ. ಅವರು 'ಪರವಾಗಿಲ್ಲ ಕಣಪ್ಪಾ. ಈ ಸಲಕ್ಕೇನೂ ತಾಯಿಗೆ ತೊಂದರೆಯಿಲ್ಲ. ಆದರೆ ಪುನಃ ಗರ್ಭಿಣಿಯಾಗಕೂಡದು. ಗರ್ಭಿಣಿಯಾದರೆ ಪ್ರಾಣಕ್ಕೆ ಸಂಚಕಾರ ಬಂದಂತೆಯೇ !' ಎಂದರು. 'ದಯಮಾಡಿ ಈ ಸಾರಿ ಪಾರುಗಾಣಿಸಿರಮ್ಮಾ ಮುಂದಿನದು ಮುಂದಕ್ಕೆ ದೇವರಿದ್ದಾನೆ' ಎಂದೆ ಅವರಲ್ಲೊಬ್ಬ ವೃದ್ಧಳಾದ ಸೂಲಗಿತ್ತಿಯಿದ್ದಳು. ತನ್ನ ಜೀವನದಲ್ಲಿ ಆಕೆ ಸರಿಸುಮಾರು ಸಾವಿರ ಹೆರಿಗೆಗಳನ್ನು ಮಾಡಿಸಿದ್ದಳು. ಆಕೆಯ ಕೈಚಳಕ ತುಂಬ ಹೆಸರುವಾಸಿಯಾದದ್ದು. ಆ ಧೈರ್ಯದ ಮೇಲೆ ನಾನು ಗುಂಟೂರಿಗೆ ಕರೆದುಕೊಂಡು ಹೋಗದೆ ಅಲ್ಲಿಯೇ ನಿಂತೆ. ಅದೂ ಅಲ್ಲದೆ, ಗುಂಟೂರಿಗೆ ಹೋಗಬೇಕೆಂದರೆ ಗಾಡಿಯನ್ನು ಎಲ್ಲೂ ಅರ್ಧಕ್ಷಣವಾದರು ನಿಲ್ಲಿಸದೆ ಹಾಗೆಯೇ ಏಕಧಾಟಿಯಾಗಿ ಹೊಡೆದುಕೊಂಡು ಹೋದರೂ–ಒಂದೂವರೆ ದಿನಗಳ ದಾರಿ. ಅಷ್ಟು ನೋವು ತಿನ್ನುತ್ತಿರುವವಳನ್ನು ಕರೆದೊಯ್ಯುವುದಾದರೂ ಹೇಗೆ? ಹೆಂಗಸರು ತಲೆಗೊಂದು ಮಾತನಾಡತೊಡಗಿದರು. ಒಬ್ಬಾಕೆ 'ನಮ್ಮ ಹೆಣ್ಣುಮಗಳಿಗೆ ಒಂದೇ ಸಮ ಹದಿನೈದು ದಿನ–

ಗಳಿಗೆಗೊಮ್ಮೆ ನೋವು ತಿಂದಳು ಕಂಡ್ರಮ್ಮಾ. ನಾವೆಲ್ಲಾ ಬದುಕಲ್ಲಾಂತ ಅಂದುಕೊಂಡಿದ್ದೊ. ಆದರೆ ಆ ಸೂಲಗಿತ್ತಿ ಮಾರಾಯ್ತಿಯೇ ಬದುಕಿಸಿದ್ದು. ಅವಳ ಹಸ್ತಗುಣ ಚೆಂದಾ ಕಂಡ್ರಮ್ಮಾ. ಅವಳಿದ್ದರೇನೂ ಅಪಾಯವಿಲ್ಲ' ಎಂದಳು.

ನನ್ನ ಮಾವನ ಮಗಳಿಗೆ ನೋವು ಕಡಮೆಯಾಯಿತು. ನಾನು ಬಾಗಿಲ ಹೊರಗೆ ಕುಳಿತು, ತುಂಬ ಚಡಪಡಿಸುತ್ತಿದ್ದೆ ; ಕಳವಳಕ್ಕೀಡಾಗಿದ್ದೆ. ನಮ್ಮತ್ತೆ ತನ್ನ ಮಕ್ಕಳನ್ನು ನನ್ನ ಕೈಗೊಪ್ಪಿಸಿ ಹೋದಳು. ನಾನು ಅವರನ್ನು ಉದ್ಧಾರ ಮಾಡುತ್ತೇನೆಂದುಕೊಂಡಿದ್ದೆ. ಈಗ ನನ್ನ ಮಾವನ ಮಗಳಿಗೆ ಏನಾದರೂ ಆದರೆ ನಾನೇನು ಮಾಡಲಿ? ನನ್ನ ಮಾವನ ಮಗನನ್ನು ಹೇಗೆ ಸಮಾಧಾನಪಡಿಸಲಿ? ನನ್ನ ತಮ್ಮನನ್ನು ಮತ್ತೆ ಹೇಗೆ ಸರಿಪಡಿಸುವುದು? ಏನೇನೋ ಆಲೋಚನೆಗಳು. ಅಷ್ಟರಲ್ಲಿಯೇ ನನ್ನ ಚಿಕ್ಕಮ್ಮ ಬಂದು 'ಮಗೂ, ಹೆರಿಗೆ ಆಯ್ತು ಕಣೋ. ಗಂಡು ಮಗಾ ಹುಟ್ತು!' ಎಂದಳು.

ನನ್ನ ಜೀವಕ್ಕೆ ಸಮಾಧಾನವಾಯಿತು. 'ಹೆರಿಗೆ ಆಯ್ತಾ? ಗಂಡು ಹುಡುಗ ಹುಟ್ಟಿದ್ನೇ?' ಎಂದು ಧಿಗ್ಗನೆ ಎದ್ದೆ. ಎದ್ದು ಆನಂದದಿಂದ ಕೈ ಮುಂದಕ್ಕೆ ಚಾಚಿದೆ. ಚಾಚಿದ ಆ ಕೈಯಲ್ಲಿ ಯಾರೋ ಒಂದು ಪತ್ರವನ್ನಿರಿಸಿದರು. 'ಬುದ್ಧೀ ನಿಮಗೆ ಪತ್ರ ಬಂದಿದೆ' ಎಂದು ನುಡಿದರು. ನಾನು ಬೇಸರದಿಂದ ಆ ಪತ್ರವನ್ನು ತೆರೆದು ನೋಡಿದೆ. ನನ್ನ ಹೃದಯ ಬಿರಿದುಹೋಯಿತು. ನನ್ನ ಎದೆ ಒಡೆದುಹೋಯಿತು. ನನ್ನ ಕಣ್ಣುಗಳನ್ನು ನಾನು ನಂಬಿಲಿಲ್ಲ. ನಾನು ನಿಂತವನು ನಿಂತಲ್ಲಿಯೇ ದಿಂಡುಗೆಡೆದು ಉರುಳಿ ಬಿದ್ದೆ.

ನನಗೆ ಮೈಮೇಲೆ ಎಚ್ಚರ ಬಂದಾಗ–ನನ್ನ ಮುಖಕ್ಕೆ ನೀರು ಚಿಮುಕಿಸಿರುವುದೂ, ನನ್ನ ಸುತ್ತಲೂ ಎಲ್ಲರೂ ಸೇರಿ ಅಳುತ್ತಿರುವುದೂ ಕಂಡುಬಂದಿತು. ನಾನು ಎದ್ದು ನೇರವಾಗಿ ಹೆರಿಗೆಯ ಕೋಣೆಗೆ ಹೋದೆ. ನನ್ನ ಮಾವನ ಮಗಳು ಸಣ್ಣ ಬಟ್ಟೆಯ ತುಂಡೊಂದನ್ನು ಕಟ್ಟಿಕೊಂಡು, ಹಲ್ಲಿಯ ಹಾಗೆ ಮಂಚಕ್ಕಂಟಿಕೊಂಡಿದ್ದಳು. ಅವಳು ಕಣ್ಣೆತ್ತಿ ನನ್ನನ್ನು ನೋಡಿದಳು. 'ತಾಯಿ, ನಿನ್ನ ಮನೆ ಮುಳುಗಿಸಿಬಿಟ್ಟೆ ನಿನಗೆ ತೀರದ ದ್ರೋಹ ಮಾಡಿದೆನಮ್ಮಾ. ನಿನ್ನ ತಾಯಿಗೆ ನಾನು ಹೇಳಿದ್ದೊಂದು, ಮಾಡಿದ್ದೊಂದು. ನಾನಿನ್ನು ಬದುಕಿರಲಾರೆ' ಎಂದು ಗೋಳಿಟ್ಟೆ ಅವಳೂ ಸಹ ಭೂಮ್ಯಾಕಾಶಗಳು ಒಂದಾಗುವಂತೆ ರೋದಿಸುತ್ತಿದ್ದಳು. ಕುಶಲಮ್ಮಜ್ಜಿ ಅವಳನ್ನು ಹಿಡಿದುಕೊಂಡು 'ಅಳಬೇಡಮ್ಮಾ, ಅಳಬೇಡ' ಎನ್ನುತ್ತ ತಾನೇ ಅಳುತ್ತಿದ್ದಳು. ನನ್ನ ಚಿಕ್ಕಮ್ಮ 'ಯಾರಾದರೂ ಹೋಗಿ ಅವನ್ನು ಸಮಾಧಾನಪಡಿಸಿರೊ' ಎಂದು ಹೇಳಿ, ವಿಲಿವಿಲಿ ಒದ್ದಾಡುತ್ತಿರುವ ನನ್ನ ಮಾವನ ಮಗಳನ್ನು ಹೋಗಿ ಗಟ್ಟಿಯಾಗಿ ಹಿಡಿದುಕೊಂಡಳು. ನಾನು ಮುಖವನ್ನು ಅಂಗೈಗಳಿಂದ ಮುಚ್ಚಿಕೊಂಡು 'ಅವನು ರೈಲಿನ ಕೆಳಗೆ ಹೇಗೆ ಬಿದ್ದ? ಎಷ್ಟೋ ಬುದ್ಧಿವಂತನಲ್ಲಾ ಅವನಾವುದೋ ದೊಡ್ಡ ಪರೀಕ್ಷೆ ಪಾಸು ಮಾಡಿ, ನನಗೆ ಕೀರ್ತಿ ತರ್ತಾನೆ ಅಂತ ಅಂದ್ಕೊಂಡಿದ್ದೆ. ಅವನಿಗೆ ಕೊನೆಗೆ ನನ್ನ ದ್ವೇಷವೇ ರಾಚಿತು. ಅವನನ್ನು ನಾನೇ ಕೊಂದೆ!' ಎಂದು ಅಳುವುದಕ್ಕಾರಂಭಿಸಿದೆ.

ಊರಿನ ದೊಡ್ಡವರು ಒಂದು ಹತ್ತು ಜನ ಕಲೆತು 'ಹೀಗೆ ಅತ್ತರೆ ಏನು ಲಾಭ? ಗುಂಟೂರಿಗೆ ಹೋಗುವ ಏರ್ಪಾಟು ಮಾಡಿ' ಎಂದರು. ನಾನು ಎದ್ದು ಹೋಗಿ, ಸ್ನಾನ ಮಾಡಿ, 'ಬಾಣಂತಿಯನ್ನು ಹುಷಾರಾಗಿ ಕಾಯ್ದುಕೊಳ್ಳಿ. ಮಗೂನ ಮೇಲೆ ಎಚ್ಚರಿಕೆ. ಮಗೂಗೆ ಸ್ನಾನ ಮಾಡಿಸಿ. ನಾನು ಗುಂಟೂರಿಗೆ ಹೋಗಿ ಬರ್ತೇನೆ' ಎಂದು ತಿಳಿಸಿ, ಪಯಣವಾದೆ.

ಗುಂಟೂರಿಗೆ ಹೋದೆ. ಶವಸಂಸ್ಕಾರ ಮುಗಿದುಹೋಗಿತ್ತು. ನನ್ನ ಪ್ಲೀಡರ್ ಸ್ನೇಹಿತ ಒಂದೇಸಮ ಕಣ್ಣೀರಿಟ್ಟ. 'ಅಂಥಾ ಹುಡುಗ ಮತ್ತೆ ದೊರಕುತ್ತಾನೆಯೇ? ಅವನು ಬದುಕಿದ್ದಿದ್ದರೆ ಹೈಕೋರ್ಟ್ ಜಡ್ಜಿಯಾಗುತ್ತಿದ್ದ. ನಾಟಕಕ್ಕೆ ಹೋಗಿದ್ದ. ಹಿಂತಿರುಗಿ ಬರುತ್ತಿದ್ದ. ರೈಲು ಬರ್ತಾಯಿತ್ತು. ನೋಡದೆ ಕಂಬಿ ದಾಟತೊಡಗಿದ. ಮುಂದೆ–ಏನೂಂತ ಹೇಳಲಿ? ಅರ್ಧ ರಾತ್ರಿಯಲ್ಲಿ ನಡೆಯಬಾರದ್ದು ನಡೆದುಹೋಯ್ತು. ನನಗೆ ಮರುದಿನ ಬೆಳಗ್ಗೆ ವಿಷಯ ಗೊತ್ತಾಯ್ತು. ಮಾಡುವುದೇನೂ ಇಲ್ಲ. ಅವನ ಮೇಲೆ ನನಗಿದ್ದ ಪ್ರೀತಿಗೆ ಕಟ್ಟುಬಿದ್ದು ನಾನೇ ಶವಸಂಸ್ಕಾರ ನಡೆಸಿದೆ. ನೀನು ಬರುವುದಕ್ಕೆ ನಾಲ್ಕು ದಿನ ಹಿಡಿಯುತ್ತೆ ಶವವನ್ನು ಹಾಗೆಯೇ ಉಳಿಸಿಕೊಂಡಿರಲು ಸಾಧ್ಯವಿರಲಿಲ್ಲ' ಎಂದ.

ನಾನು ನನ್ನ ಎರಡನೆಯ ತಮ್ಮನನ್ನು ಕರೆದುಕೊಂಡು, ಅವರ ಪುಸ್ತಕಗಳನ್ನು ಗಂಟು ಮೂಟೆ ಕಟ್ಟಿಕೊಂಡು, ತಲೆಯ ಮೇಲೆ ಬೆಟ್ಟದಷ್ಟು ಕತ್ತಲು ಹೊತ್ತುಕೊಂಡು–ಮರುದಿನ ಸಾಯಂಕಾಲಕ್ಕೆ ಊರಿಗೆ ಬಂದೆ.

ನಾನಿಲ್ಲದ ಈ ಮೂರು ದಿನಗಳೂ, ನನ್ನ ಮಾವನ ಮಗಳನ್ನು ಕಾಯ್ದುಕೊಂಡಿರುವುದು ತುಂಬ ಕಷ್ಟವಾಯಿತಂತೆ. ಅವಳ ಮೈಮೇಲೆ ಜ್ವರ ಬೆಂಕಿಯಂತೆ ಕಾಯುತ್ತಿತ್ತು. ಮಧ್ಯೆ ಮಧ್ಯೆ ಎಚ್ಚರ ಬಂದಾಗಲೆಲ್ಲಾ 'ಮಾವಯ್ಯ ಎಲ್ಲಿ?' ಎಂದು ಕೇಳುತ್ತಿದ್ದಳಂತೆ. ನಮ್ಮೂರಿಗೆ ಎರಡು ಗಾವುದ ದೂರದೂರಿನಲ್ಲಿ ಯಾರೋ ಒಬ್ಬಾತ ಘನವೈದ್ಯನಿದಾನೆ ಎಂದು ತಿಳಿದು, ಆ ಊರಿಗೆ ಹೋಗಿ ಆತನನ್ನು ಕರೆದುಕೊಂಡು ಬಂದೆ. ಆತ ಹಗಲೂ ರಾತ್ರಿ ಅವಳ ಬಳಿಯೇ ಕುಳಿತು ಜಾಗರಣೆ ಮಾಡಿದ. ಅವಳನ್ನು ಆ ಗಂಡಾಂತರದಿಂದ ಪಾರುಮಾಡಿದರೆ–ನಾನ್ನೂರು ರೂಪಾಯಿಗಳನ್ನು ಕೊಡುತ್ತೇನೆ ಎಂದು ತಿಳಿಸಿ, ಕೂಡಲೇ ಇನ್ನೂರು ರೂಪಾಯಿಗಳನ್ನಿತ್ತೆ. ಹತ್ತು ದಿನಗಳು ಸಂದುಹೋದುವು. ನಿಧಾನಿಧಾನವಾಗಿ ಜ್ವರ ಇಳಿಯಿತು. ಆದರೆ ಮುಚ್ಚಿದ ಕಣ್ಣು ಮುಚ್ಚಿಯೇ ಇದ್ದಳು. ಮೂರು ಹೊತ್ತೂ ನಿದ್ರೆಯೇ. 'ಏನಿದು? ಯಾವಾಗಲು ಹೀಗೆ ನಿದ್ದೆ ಮಾಡ್ತಾ ಇದಾಳಲ್ಲಾ?' ಎಂದು ಕೇಳಿದೆ. 'ಅನಂತರ ಮಾತನಾಡುತ್ತಾಳೆ. ಪರವಾಗಿಲ್ಲ!' ಎಂದ ವೈದ್ಯ. ಹದಿಮೂರನೆಯ ದಿನ ಅವಳಿಗೆ ನೀರೆರೆದರು.

* * * *

ಆಮೇಲೆ ಒಂದು ವರ್ಷ ಕಳೆಯಿತು. ನಾವೆಲ್ಲರೂ ಬದುಕಿದ ಹೆಣಗಳಂತಿದ್ದೆವು. ನನ್ನ ತಮ್ಮನ ಮಗ ಎಲ್ಲಾ ವಿಧದಲ್ಲೂ ನನ್ನ ಸಾಕುತಂದೆ ಸ್ವಾಮಿಯನ್ನೇ ಹೋಲುತ್ತಿದ್ದನು. ನಾನೀಗ ಹೊಲಕ್ಕೆ ಹೋಗುತ್ತಿಲ್ಲ. ನನ್ನ ಮಾವನ ಮಗನೇ ಹೊಲಗಳನ್ನು ನೋಡಿಕೊಳ್ಳುತ್ತಿದ್ದನು. ನಮ್ಮ ಕುಶಲಮ್ಮ ಹಾಗೂ ನನ್ನ ಎರಡನೆಯ ತಮ್ಮ ಇಬ್ಬರೂ ನನ್ನ ಸಾಕುತಂದೆಯ

ಊರಿನಲ್ಲಿದ್ದಾರೆ. ನನ್ನ ಚಿಕ್ಕಮ್ಮನ ಮಗ ಆ ಊರಿಗೆ ಹೋಗಿ ಬರುತ್ತಾ, ಅವನ ಹೊಲಗಳನ್ನೂ ಸಹ ನೋಡಿಕೊಳ್ಳುತ್ತಿರುವವನು. ನಾನು–ನಿತ್ಯ ಬೆಳಿಗ್ಗೆ ಏಳುವುದು, ಕಾಲ ಕೃತ್ಯಗಳನ್ನು ತೀರಿಸುವುದು, ಚುಟ್ಟಾ ಸೇದುತ್ತಾ ಇದ್ದುಬಿಡುವುದು. ನನ್ನ ಮಾವನ ಮಗಳು ತನ್ನ ಮಗನನ್ನೆತ್ತಿಕೊಂಡು ಬಂದು ನನ್ನ ಕೈಗೆ ಕೊಡುತ್ತಿದ್ದಳು. ನಾನು ಅವನನ್ನು ಎತ್ತಿಕೊಳ್ಳುತ್ತಿದ್ದೆ. ನನ್ನ ತೊಡೆಗಳ ಮೇಲೆ ಮಲಗಿಸಿಕೊಳ್ಳುತ್ತಿದ್ದೆ. ಅವನಿಗೆ–ನನ್ನ ಮೂಗು, ಕಿವಿ, ತಲೆಗೂದಲನ್ನೆಳೆದಾಡುವುದರ ವಿನಾ ಮತ್ತೊಂದು ಕೆಲಸವಿಲ್ಲ. ನನ್ನ ಕೊರಳಲ್ಲಿದ್ದ ತುಳಸೀ ಮಾಲೆಯನ್ನು ಅವನಿಗೆ ಕೊಡುವತನಕ ಅವನು ಅಳು ನಿಲ್ಲಿಸುತ್ತಿರಲಿಲ್ಲ. ನಾನು 'ರಾಜಾ, ಇದು ನಿನ್ನದೇ. ಮುಂದೆ ನೀನು ದೊಡ್ಡವನಾದ ಮೇಲೆ ನೀನೇ ಹಾಕಿಕೊಳ್ಳುವಿಯಂತೆ' ಎನ್ನುತ್ತಿದ್ದೆ. ಅದನ್ನು ಅವನ ಕೊರಳಿಗೆ ಹಾಕುತ್ತಿದ್ದೆ. ಅವನನ್ನು ತಲೆಯ ಮೇಲೆ ಕುಳ್ಳಿರಿಸಿಕೊಳ್ಳುತ್ತಿದ್ದೆ. ಅವನನ್ನೆತ್ತಿಕೊಂಡು ಅಂಗಳದಲ್ಲಿ ತಿರುಗಾಡುತ್ತಿದ್ದೆ. ಅವನಿಗೆ ಹಸಿದಾಗ ಅತ್ತರೆ ಅವನನ್ನು ಅವರಮ್ಮನ ಕೈಗೆ ಕೊಡುತ್ತಿದ್ದೆ.

ನನಗೆ ಈಗ ಚೆನ್ನಾಗಿ ಗೊತ್ತಿರುವ ವಿಷಯಗಳು ಎರಡೇ ಎರಡು– ಒಂದು–ನಮ್ಮ ಮಗುವಿಗೆ ಯಾವಾಗ ಏನು ಬೇಕೋ; ಅವನು ಅಳದ ಹಾಗೆ ಹೇಗೆ ನೋಡಿಕೊಳ್ಳಬೇಕೋ, ಇದೊಂದು ಚೆನ್ನಾಗಿ ಗೊತ್ತು. ಎರಡನೆಯದು–ಹೊಗೆಸೊಪ್ಪಿನ ಗುಣ. ನನಗೆ ಚೇಬ್ರೋಲು ಊರಿನ ಹೊಗೆಸೊಪ್ಪಲ್ಲದೆ ಮತ್ತೊಂದು ಕೆಲಸಕ್ಕೆ ಬಾರದು. ಚೇಬ್ರೋಲಿನ ಹೊಗೆಸೊಪ್ಪಿನಲ್ಲೊ ಎರಡನೆಯ ರಖಂ ನನಗೆ ಹಿಡಿಸದು. ಚೇಬ್ರೋಲಿನಲ್ಲಿ ಒಬ್ಬನೇ ಒಬ್ಬ ಆಸಾಮಿ ಮಾತ್ರ ಎರಡೆಕರೆ ಜಮೀನಿನಲ್ಲಿ–ಎಕರೆ ಬದಲಿಸಿ ಎಕರೆಗೆ ನಾಟುತ್ತಾನಂತೆ. ಆ ಭೂಮಿಯ ಸಾರದಿಂದಾಗಿಯೂ, ಅವರು ಹೊಗೆಸೊಪ್ಪನ್ನು ಹದಗೊಳಿಸುವ ಪದ್ಧತಿಯ ಮೇಲೂ–ಆ ಹೊಗೆಸೊಪ್ಪು ತುಂಬ ಅಚ್ಚುಕಟ್ಟಾಗಿರುತ್ತದೆ, ಕಮ್ಮಗಿರುತ್ತದೆ. ಆ ಹೊಗೆಸೊಪ್ಪಿನಲ್ಲಿ ತೇವ ಇರುವುದಿಲ್ಲ. ಅರ್ಧಾಣೆಯ ಅಗಲಕ್ಕಿಂತ ಹೆಚ್ಚಿಗೆ ಇರುವುದಿಲ್ಲ. ಎಲೆ ತೆಳ್ಳಗೆ ಚಿಗುರೆಲೆಯ ಹಾಗಿರುತ್ತದೆ. ಕಾಂಡವನ್ನೆಲ್ಲಾ ಸುತ್ತಿದರೆ ಸಣ್ಣಚುಟ್ಟಾ ಆಗುತ್ತದೆ. ಆ ಹೊಗೆಸೊಪ್ಪು ಘಾಟಾಗಿರುವುದಿಲ್ಲ. ಒಮ್ಮೆ ಅಂಟಿಸಿದರೆ ಎಷ್ಟು ಹೊತ್ತಾದರೂ ಆರುವುದಿಲ್ಲ. ಸರಿಯಾಗಿ ಗಂಟೆ ಹೊತ್ತು ಸುಡುತ್ತದೆ. ಬಲು ಕಮ್ಮಗಿರುತ್ತದೆ. ದಿನವೂ–ಬೆಳಿಗ್ಗೆ ಒಂದು, ಮಧ್ಯಾಹ್ನಕ್ಕೆ ಒಂದು, ರಾತ್ರಿಗೆ ಒಂದು ಸೇದುತ್ತೇನೆ. ನನ್ನ ಮಾವನ ಮಗ ಆ ಊರಿಗೆ ಹೋಗಿ, ಈ ಹೊಗೆ ಸೊಪ್ಪನ್ನು ವರ್ಷಕ್ಕೆರಡು ಸಲ ತರುತ್ತಿದ್ದನು. ಎಲ್ಲರೂ ಕೊಡುವ ಬೆಲೆಗಿಂತಲೂ, ನನ್ನ ಸಲುವಾಗಿ ಮಣಕ್ಕೆ ಒಂದು ರೂಪಾಯಿ ಹೆಚ್ಚಾಗಿಯೇ ಕೊಟ್ಟು ತರುತ್ತಿದ್ದನು.

ಮಗುವಿಗೆ ವರ್ಷ ತುಂಬಿ ಎರಡು ವರ್ಷಕ್ಕೆ ಬಿದ್ದಂದಿನಿಂದ ಮಾತನಾಡುವುದನ್ನು ಕಲಿತಿದ್ದನು. ನಾನು ಕಲಿಸಿಕೊಟ್ಟ ಮಾತುಗಳನ್ನೆಲ್ಲಾ ಅವನು ಆಡುತ್ತಿದ್ದನು. 'ರಾಜಾ, ಬುದ್ಧಿ ಇಲ್ಲದೋರು ಯಾರು?' ಎಂದು ಕೇಳಿದರೆ 'ನೀನೇ' ಎನ್ನುತ್ತಿದ್ದನು. ನಾನಾಗ ಅವನ ಮೇಲೆ ಕೋಪಿಸಿಕೊಂಡಂತೆ ನಟಿಸಿದರೆ–ಪುಟ್ಟ ಪುಟ್ಟ ಹೆಜ್ಜೆಯಿಕ್ಕುತ್ತ ನನ್ನನ್ನು ಸಮೀಪಿಸಿ, ನನ್ನ ಕೆನ್ನೆಗೆ ಹೊಡೆಯುತ್ತಿದ್ದನು ! 'ನಿನ್ನ ಕೊಂದುಬುತ್ತೇನೆ' ಎಂದು ತೊದಲು ನುಡಿಯುತ್ತಿದ್ದನು.

'ಕೊಂದುಬಿಡು ಕಣಾ! ನಿನ್ನ ಕೈಯಲ್ಲಾದರೂ ಅದು ನಡೆಯಲಿ' ಎನ್ನುತ್ತಿದ್ದೆ. ತುಳಸಿಯ ಮಾಲೆಯನ್ನು ತನ್ನ ಕೊರಳಿನಿಂದ ತೆಗೆಯಲು ಬಿಡುವುದಿಲ್ಲ. ಅವರಮ್ಮ 'ಲೋ ಅದನ್ನು ಹರಿದು ಹಾಕ್ತೀಯ ಕಣೋ. ತಾತಯ್ಯನಿಗೆ ಕೊಟ್ಟುಬಿಡು' ಎನ್ನುತ್ತಿದ್ದಳು. ಅವನಿಗೆ ನಾನು ತಾತಯ್ಯ. ಅವನಿಗಾಗ ದಯೆ ಬಂದರೆ. ತಪ್ಪು ತಪ್ಪು ಹೆಜ್ಜೆಯಿಕ್ಕುತ್ತ ನನ್ನ ಹತ್ತಿರಕ್ಕೆ ನಡೆದು ಬರುತ್ತಿದ್ದನು ; ನಗುನಗುತ್ತ ನನ್ನ ಕೈಗೆ ಅದನ್ನು ಕೊಡುವ ಹಾಗೆ ಪುಟ್ಟ ಕೈಯನ್ನು ಮುಂದಕ್ಕೆ ಚಾಚುತ್ತಿದ್ದನು. ಈಸಿಕೊಳ್ಳಲೆಂದು ನಾನು ಕೈ ಮುಂದಕ್ಕೆ ಚಾಚಿದರೆ, ತಟಕ್ಕನೆ ತನ್ನ ಕೈಯನ್ನು ಹಿಂದಕ್ಕೆ ಮಾಡಿಕೊಂಡು ಕಿಲಕಿಲನೆ ನಕ್ಕುಬಿಡುತ್ತಿದ್ದನು. ತಾಯಿಯ ಹತ್ತಿರ ಮೊಲೆಯುಣ್ಣುವಾಗ ಮಾತ್ರವೇ ಇರುತ್ತಿದ್ದನು. ಆಮೇಲೆ ಒಂದು ನಿಮಿಷವೂ ಅವಳ ಹತ್ತಿರವಿರುವುದಿಲ್ಲ. ಎಷ್ಟೇ ಅಳುತ್ತಿರಲಿ, ನಾನೇನಾದರೂ ಚಿಟಿಕೆ ಹಾಕಿ 'ಬಾ ರಾಜಾ !' ಎಂದು ಕೈಗಳನ್ನು ಚಾಚಿದರೆ, ಅವನು ಕೂಡಲೇ ನಕ್ಕು, ಓಡುವ ನಡಿಗೆಯಿಂದ ಬಂದು ನನ್ನ ಮೇಲೆ ಬೀಳುತ್ತಿದ್ದನು. ನನ್ನ ತೋರುಬೆರಳು ಹಿಡಿದುಕೊಂಡು, ಬೀಳುತ್ತಾ, ಏಳುತ್ತಾ, ಎಡವುತ್ತಾ ನಡೆಯುತ್ತಿದ್ದನು ; ಆಗೇನಾದರೂ ನಾನು ಎತ್ತಿಕೊಳ್ಳುತ್ತೇನೆ ಬಾ ಎಂದರೆ ಬರುತ್ತಿರಲಿಲ್ಲ. ಅವನೇ ನನಗೆ ಸ್ವರ್ಗ.

ನನ್ನ ಮಾವನ ಮಗನಿಗೆ ಮದುವೆ ಮಾಡಿದೆ. ಕೊಂಚ ದೊಡ್ಡ ಹುಡುಗಿಯನ್ನೇ ಮಾಡಿದೆ. ಆ ಹುಡುಗಿ ಸಂಸಾರಕ್ಕೆ ಬಂದಳು. ಮನೆಯಲ್ಲೀಗ ನನ್ನ ಮಾವನ ಮಗಳಿಗೂ ಮನೆಗೆಲಸದ ಭಾರ ಕೊಂಚ ಕಡಮೆಯಾಗಿದೆ. ಹುಡುಗನಿಗೆ ಮೂರು ತುಂಬಿ, ನಾಲ್ಕನೆಯ ವರ್ಷಕ್ಕೆ ಬಿದ್ದಿದೆ. ಹುಡುಗ ದಷ್ಟಪುಷ್ಟವಾಗಿ ದುಂಡಗಿದ್ದಾನೆ. ಅವನ ಕೈಗಳಿಗೆ ಬಂಗಾರದ ಕಡಗಗಳು, ಕಾಲಿಗೆ ಗೆಜ್ಜೆಗಳು, ಕತ್ತಿನಲ್ಲಿ ಹುಲಿಯುಗುರು, ಚಿನ್ನದ ಸರ ಎಲ್ಲಾ ಮಾಡಿಸಿ ಹಾಕಿದ್ದೇವೆ. ಹುಡುಗ ಮನೆ ತುಂಬ ಗಿರಗಿಟ್ಟೆಯಂತೆ ತಿರುಗುತ್ತಾನೆ. ನಾನು ಅವನನ್ನು ಎದೆಯ ಮೇಲೆ ಮಲಗಿಸಿಕೊಂಡು, ಅವನಿಗೆ ಓನಾಮಾ, 'ಅ ಆ'ಗಳನ್ನು ಹೇಳಿಕೊಡುತ್ತೇನೆ. ಅವನು ಬಂದೂ ಬಾರದ ಹಾಗೆ ಉಚ್ಚರಿಸುತ್ತಾನೆ. ಅವನಿಗೆ ಕಥೆಗಳನ್ನು ಹೇಳುತ್ತೇನೆ. ಅವನು ಅರ್ಥವಾಗುತ್ತಿದೆಯೋ ಎಂಬಂತೆ ಹೂಂಗುಟ್ಟುತ್ತಾನೆ. 'ನಾನು ಹೇಳಿದ ಕಥೆಯನ್ನು ಮತ್ತೆ ನೀನು ಹೇಳು ರಾಜಾ, ನೋಡುವ' ಎಂದರೆ 'ಒಂದೂಲಲ್ಲಿ ಒಬ್ಬ ಲಾಜ ಇದ್ದ' ಎಂದು ಪ್ರಾರಂಭಿಸುತ್ತಾನೆ. 'ಸರಿಯೇ. ಒಂದೂರಲ್ಲಿ ಒಬ್ಬ ರಾಜಾ ಇದ್ದ–ಆಮೇಲೆ?' ಎಂದರೆ, ಆಗ ಅವನು 'ಊಹುಂ, ನಂಗೊತ್ತಿಲ್ಲ. ನೀ ಏಳು' ಎನ್ನುತ್ತಾನೆ. ನಾನು ನಗುತ್ತೇನೆ. ಅವನು ನನ್ನ ಬಾಯಿಯೊಳಗೆ ತನ್ನ ಪುಟ್ಟ ಬೆರಳುಗಳನ್ನಿಟ್ಟು, ನನ್ನ ಹಲ್ಲುಗಳನ್ನು ಗಿಂಜುತ್ತಾನೆ; ಹಿಡಿದು ಅಲುಗಿಸಲೆತ್ನಿಸುತ್ತಾನೆ. ನನ್ನ ಪಕ್ಕದಲ್ಲಿ ಮಲಗಿಕೊಂಡು, ನನ್ನ ಮೇಲೆ ತನ್ನ ಮುದ್ದಾದ ಕಾಲನ್ನು ಹಾಕುತ್ತಾನೆ. ಅವನ ತಾಯಿಯೋ ಅವನ ಚಿಕ್ಕಪ್ಪನೋ 'ಲೋ! ತಾತಯ್ಯನ ಮೇಲಿಂದ ಕಾಲು ತೆಗೆಯಮ್ಮಾ' ಎಂದರೆ ಅವನು ನನ್ನ ಹೊಟ್ಟೆಯ ಮೇಲೆ ಕುಳಿತು 'ನನ್ ಕುದುಲೆ, ನನ್ ಕುದುಲೆ' ಎನ್ನುತ್ತಾನೆ. ನಾನು ಬಾಗಿ, ಮೊಣಕಾಲುಗಳನ್ನು ಅಂಗೈಗಳನ್ನು ನೆಲಕ್ಕೂರಿ ನಡೆದಾಡಿದರೆ, ಅವನು ನನ್ನ ಬೆನ್ನ ಮೇಲೆ ಕುಳಿತು 'ಚಲ್ ಚಲ್ ಗೋಡಾ! ಥೂ.....ಕುದುಲೆ ಚಂದಾಕಿಲ್ಲ. ಮೊದ್ದು ಕುದುಲೆ' ಎಂದು ನನ್ನ ತಲೆಗೂದಲು ಹಿಡಿದು ಎಳೆಯುತ್ತಾನೆ. ನಾನು

ಅವನನ್ನು ಕಂಕುಳಕ್ಕೆ ತಂದುಕೊಂಡು 'ರಾಜಾ, ಈ ಕುದುರೆ ಚೆನ್ನಾಗಿಲ್ಲ. ಇದನ್ನು ಮಾರಿಬಿಟ್ಟು ಹೊಸ ಕುದುರೆಯನ್ನು ಕೊಂಡುಕೋ' ಎನ್ನುತ್ತೇನೆ.

ಅವನು ನಕ್ಕು ನನ್ನ ತುಟಿಗಳ ಮೇಲೆ ತನ್ನ ಪುಟ್ಟ ಬಾಯಿಯನ್ನೊತ್ತುತ್ತಾನೆ.